ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

ಸಂಶೋಧನ

ಸೀತಾಲಕ್ಷ್ಮಿ ಕೆ. ವಿ.

ಮಾರ್ಗದರ್ಶನ

ಡಾ. ಮೋಹನ ಕುಂಟಾರ್

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ

೨೦೧೪

ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

ಸಂಶೋಧನೆ
ಸೀತಾಲಕ್ಷ್ಮಿ ಕೆ. ವಿ.

ಮಾರ್ಗದರ್ಶನ
ಡಾ. ಮೋಹನ ಕುಂಟಾರ್
ಪ್ರವಾಚಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ

೨೦೦೪

ದೃಢೀಕರಣ ಪತ್ರ

ಸೀತಾಲಕ್ಷ್ಮಿ ಕೆ.ವಿ. 'ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ಯಾವುದೇ ಭಾಗವನ್ನು ಈ ಮೊದಲು ಪದವಿಗಾಗಲಿ, ಪ್ರಕಟಣೆಗಾಗಲಿ ಬಳಸಿಕೊಂಡಿಲ್ಲವೆಂದು ದೃಢಪಡಿಸುತ್ತೇನೆ.

ವಿದ್ಯಾರಣ್ಯ
ದಿ. ೦೮.೦೬.೦೪

ಮೋಹನ ಕುಂಟಾರ್

ಡಾ. ಮೋಹನ ಕುಂಟಾರ್
ಪ್ರವಾಚಕರು,
ಭಾಷಾಂತರ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾನಿಲಯ
ವಿದ್ಯಾರಣ್ಯ, ಹಂಪಿ

ಪ್ರಮಾಣ ಪತ್ರ

'ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ' ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವ ವಿದ್ಯಾನಿಲಯ ಹಂಪಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದೆ. ಡಾ.ಮೋಹನ ಕುಂಟಾರ್, ಪ್ರವಾಚಕರು, ಭಾಷಾಂತರ ಅಧ್ಯಯನ ವಿಭಾಗ ಇವರು ಈ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪ್ರಕಟಣೆಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣಿಸುತ್ತೇನೆ.

ಮಂಗಳೂರು

ದಿ. ೦೨. ೦೬. ೦೮

ಸೀತಾಲಕ್ಷ್ಮಿ

ಸೀತಾಲಕ್ಷ್ಮಿ ಕೆ.ವಿ.

ಉಪಸಂಪಾದಕಿ

ವಿಜಯ ಕರ್ನಾಟಕ

ಮಂಗಳೂರು

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಪ್ರಸ್ತಾವನೆ

ಉದ್ದೇಶ

ಮಾಸ್ತಿ: ಇದುವರೆಗಿನ ಅಧ್ಯಯನಗಳು

ಸ್ವರೂಪ

ವ್ಯಾಪ್ತಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಪ್ರಸ್ತಾವನೆ

ಚರಿತ್ರೆಯುದ್ದಕ್ಕೂ ಸ್ಥಾಪಿತ ಪಿತೃಶಕ್ತಿಗಳ ಯಾಜಮಾನ್ಯಶಾಹಿಯು ಸ್ತ್ರೀಯ ಬದುಕಿಗೆ ಕೆಲವು ನಿರ್ದಿಷ್ಟ ಮೌಲ್ಯಗಳನ್ನು ಹೇರಿದ್ದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಬದ್ಧವಾಗಿಯೇ ಸ್ತ್ರೀ ಬದುಕಬೇಕಾಯಿತು. ಸ್ತ್ರೀ ಬದುಕಿದ ರೀತಿಯೇ ಅವಳನ್ನು ನಿಯಂತ್ರಿಸಿದ ಯುಗಮೌಲ್ಯವಾಗಿ ಪ್ರತಿನಿಧೀಕರಣಗೊಳ್ಳುತ್ತದೆ. ವಿಭಿನ್ನ ಸಂದರ್ಭಗಳ, ವಿಭಿನ್ನ ಸ್ತರಗಳ ಮೂಲಕ ಅದನ್ನು ಪರಿಗ್ರಹಿಸಬಹುದಾಗಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತ್ಯಂತರಗಳಿಗೆ ಸ್ತ್ರೀ ತಾನಾಗಿ ಒಳಗಾಗುವುದಿಲ್ಲ. ಗಂಡಿನ ಉದ್ದೇಶಿತ ಮಾರ್ಗಸೂಚಿಯೇ ಅವಳ ತೊಡಗಿಸಿಕೊಳ್ಳುವಿಕೆಯನ್ನು

ನಿರ್ದೇಶಿಸುತ್ತದೆ. ಎಲ್ಲವನ್ನೂ ನಿರ್ಬಂಧಿಸುವುದು ಗಂಡಿನ ಸ್ವಾರ್ಥ. ಅದಕ್ಕೆ ತಲೆಯೊಡ್ಡುವುದು ಹೆಣ್ಣಿನ ಅನಿವಾರ್ಯ. ಇದು ಚರಿತ್ರೆಯಲ್ಲಿ ಹೆಣ್ಣು ಬದುಕಿದ ರೀತಿಯಾಗಿದೆ. ಹೀಗೆ ಎಲ್ಲ ಸ್ತರಗಳಲ್ಲೂ ಹೆಣ್ಣು ಒಂದು ಯುಗ ಮೌಲ್ಯದ ಪ್ರತಿನಿಧಿಯಾಗಿ ಬರುವಂತೆ ಮತ್ತು ಅವಳು ಅದನ್ನು ಶಿರಸಾವಹಿಸಿ ನಿರ್ವಹಿಸುವಂತೆ ಮಾಡಿರುವಲ್ಲಿ ಪುರುಷ ಪ್ರಭುತ್ವದ ಸಂಚನ್ನು ಕಾಣಬಹುದು.

ಕುಟುಂಬದ ಮುನ್ನಡೆಗಾಗಿ, ಲೋಕದ ಉಳಿವಿಗಾಗಿ ಹೆಣ್ಣು ಲೈಂಗಿಕ ಕ್ರಿಯೆಗೆ ಒಳಗಾಗಬೇಕಾಗುತ್ತದೆ. ಅದು ಅವಳಿಗೆ ಇಷ್ಟದ್ದೇ, ಅಥವಾ ಅಲ್ಲದ್ದೇ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗುತ್ತದೆ. ಆದ್ದರಿಂದಲೇ ಆಕೆ ಅದನ್ನು ವಿರೋಧಿಸುವುದು ಅಪರಾಧವಾಗುತ್ತದೆ. ಏನೇ ಆಗಲಿ ಆಕೆ ತಾಯಿಯಾಗಬೇಕು. ಅನಂತರದಲ್ಲೂ ಆಕೆಯ ನಡತೆಯ ನಿರ್ವಾಹಕತ್ವ ಕೂಡಾ ಪುರುಷನ ಕೈಯಲ್ಲೇ ಇರುತ್ತದೆ. ಅಚ್ಚರಿಯೆಂದರೆ ಆತ ತಂದೆತನವನ್ನು ಮರೆತುಬಿಡುತ್ತಾನೆ. ಆದಾಗ್ಯೂ ಅವಳ ವೈಚಾರಿಕ ಪ್ರಜ್ಞೆಯನ್ನು ಕಸಿಯುತ್ತಾ, ಆಲೋಚನಾ ಸಾಮರ್ಥ್ಯಕ್ಕೆ ಮುಟ್ಟುಗೋಲು ಹಾಕುತ್ತಲೇ ಮುಂದುವರಿಯುತ್ತಾನೆ. ಹೀಗೆ ಅವಳನ್ನು ಒಂದು ಪ್ರಾಣಿಯಂತೆ, ಅಥವಾ ವಸ್ತುವಿನಂತೆ ನಿಯಂತ್ರಿಸುತ್ತಾ ಬಂದಂತೆಯೇ ಆಕೆ ಮೌನವಾಗಿ ಸ್ವೀಕರಿಸುತ್ತಲೇ ಬಂದಿರುವುದು ಹೆಣ್ಣಿನ ದುರಂತವೇ ಆಗಿದೆ. ಲೈಂಗಿಕ ತೃಷೆಯ ಈಡೇರಿಕೆಗೆ ಗಂಡು ತಂದಿರುವ ವೇಶ್ಯಾವಾಟಿಕೆ ಪದ್ಧತಿ, ಸಹಗಮನ ಪದ್ಧತಿ ಇವೆಲ್ಲವೂ ಗಂಡಿನ ವಿಕೃತ ಕಾಮನೆಗಳಿಂದ ಪ್ರಚೋದಿತವಾದವುಗಳೇ ಆಗಿವೆ. ಮತ್ತು ಸ್ತ್ರೀ ಇದನ್ನೆಲ್ಲ ಒಪ್ಪಿಕೊಳ್ಳುವುದು ಗಂಡಿನ ದಮನಕಾರಿ ಪ್ರಭುತ್ವದ ಹಿಡಿತದೊಳಗೆ ಸಿಲುಕಬೇಕಾದುದನ್ನು ಪ್ರತಿನಿಧಿಸುತ್ತದೆ.

ಇಲ್ಲಿಯೇ ಹೆಣ್ಣು ಲೈಂಗಿಕ ಸ್ವಾತಂತ್ರ್ಯವನ್ನು ವಹಿಸದ್ದರಿಂದ ಎಲ್ಲೂ ವಿಟಾವಾಟಿಕೆ ಹುಟ್ಟಿಕೊಳ್ಳಲಿಲ್ಲ ಎನ್ನುವುದನ್ನು ಗ್ರಹಿಸಬೇಕು. ಹೆಣ್ಣು ಸುಖ ಕೊಡುವವಳು, ಗಂಡು ಅದನ್ನು ಪಡೆಯುವವ, ಹೆಣ್ಣಿನ ಶರೀರವು ಗಂಡು ಅನುಭವಿಸುವುದಕ್ಕಾಗಿಯೇ ಇರುವುದು ಎನ್ನುವ ವಾಸ್ತವತೆಯನ್ನು ಹೆಣ್ಣು ಪ್ರತಿನಿಧಿಸುತ್ತಾಳೆ.

ವಿಚ್ಛೇದನದಂತಹ ಪ್ರಸಂಗಗಳು ಸಮಾಜಕ್ಕೆ ಮಾನ್ಯವಾಗದೇ ಹೋಗುವುದು ಕುಟುಂಬದ ಹೊರತಾದ ಬದುಕು ಹೆಣ್ಣಿಗೆ ಅಭದ್ರವಾದದ್ದು ಎಂಬ ಭಾವನೆ ಮೂಡಿಸಿದ್ದರಿಂದಲೇ ಆಗಿದೆ. ಗಂಡಿನ ಅಧೀನದಲ್ಲಿಯೇ ಹೆಣ್ಣು ಬದುಕಬೇಕಾದ ಅನಿವಾರ್ಯವನ್ನು ಹೇರುವ ಮೂಲಕ ಗಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾನೆ. ಅವಳ ದೇಹ ಮನಸ್ಸು ಹಾಗೂ ಬದುಕಿಗೆ ಗಂಡಿನ ಅನಿವಾರ್ಯತೆಯನ್ನು ಬದ್ಧಗೊಳಿಸುವ ಸೂಕ್ಷ್ಮವನ್ನು ಇಲ್ಲಿ ಗಮನಿಸಬೇಕು. ಗಂಡು ಎಲ್ಲೆಡೆಯೂ ತಾನೇ ಮುಂದಾಳತ್ವ ವಹಿಸಿ ಹೆಣ್ಣು ಎಲ್ಲ ರೀತಿಯಲ್ಲೂ ತನ್ನನ್ನು ಇಷ್ಟ ಪಡುವ ಹಾಗೆ ತನ್ನ

ನಡತೆಯನ್ನು ಹೊಂದಿಸಿಕೊಳ್ಳುತ್ತಾನೆ. ನಿಬಂಧನೆಗಳಿಗೆ ಬದ್ಧಳಾದ ಹೆಣ್ಣು ಸಮಾಜದ ಮಾನ್ಯತೆ ಪಡೆಯುವಲ್ಲಿ ಒಂದು ಮೌಲ್ಯದ ಪ್ರತಿಪಾದನೆ ಇದೆ. ಹಾಗೆ ಗೌರವಕ್ಕೆ ಪಕ್ಕಾಗುವ ಹೆಣ್ಣಿನ ವೈಭವೀಕರಣವೇ ಎಲ್ಲೆಲ್ಲೂ ನಡೆದಿದೆ. ಈ ವ್ಯವಸ್ಥೆಯನ್ನು ಪ್ರಶ್ನಿಸಿದ ಸ್ತ್ರೀಯರೂ ಇದ್ದರು, ಆದರೆ ಅದು ಪುರುಷನ ಅಧಿಕಾರವನ್ನು ತಿರಸ್ಕರಿಸುವ ನಡವಳಿಕೆ ಆಗುವುದರಿಂದ ಅದನ್ನು ಚರಿತ್ರೆಯಲ್ಲಿ ಪ್ರಸ್ತಾಪಿಸದೇ ಕೈ ಬಿಟ್ಟಿರುವ ಸಾಧ್ಯತೆಯೇ ಹೆಚ್ಚು.

ಹೆಣ್ಣಿನ ಕುರಿತ ತಾತ್ಸಾರ ಭಾವ, ಮೃಗೀಯ ಆಕ್ರಮಣ ಪ್ರವೃತ್ತಿ, ದಮನಿಸುವ ಮನಃಸ್ಥಿತಿ, ಸ್ಮೃತಿಗಳ ಹುಟ್ಟಿನ ಅನಂತರ ಬೃಹದಾಕಾರವಾಗಿ ಬೆಳೆಯಿತು. ಹೆಣ್ತನ, ತಾಯ್ತನಗಳೇ ಹೆಣ್ಣಿನ ಬದುಕಿನಲ್ಲಿ ಶೋಷಣೆಯ ಕೇಂದ್ರಬಿಂದುಗಳಾಗಿರುವುದು ಚರಿತ್ರೆಯಿಂದ ತಿಳಿದುಬರುತ್ತದೆ.

ಸ್ತ್ರೀ ಪ್ರತಿನಿಧೀಕರಣದ ಗುರುತಿಸುವಿಕೆ ಅಂದರೆ, ಹೆಣ್ಣು ಬದುಕಿದ ರೀತಿಯಿಂದ ಹೆಣ್ಣನ್ನು ನಡೆಯಿಸಿಕೊಂಡು ಬಂದ, ನಿಯಂತ್ರಿಸಿದ ಗಂಡಿನ ಮನಃಸ್ಥಿತಿಯ ಹುಡುಕುವಿಕೆಯೂ ಆಗುತ್ತದೆ. ಸಂಸ್ಕೃತಿಯ ಹೆಸರಿನಿಂದ ಹೆಣ್ಣಿಗೆ ಹೇರಿದ ಕಟ್ಟಳೆಗಳು, ಅದನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯನ್ನು ಶೋಧಿಸಲಾಗುತ್ತದೆ. ಅಲ್ಲದೆ ಅದನ್ನು ಮೀರ ಹೋದವರ ಅನುಭವಗಳನ್ನು ಇಲ್ಲಿ ಕೆದಕುವುದಾಗಿದೆ. ಅದ್ದರಿಂದಲೇ ಹೆಣ್ಣಿನ ಸೃಷ್ಟಿಯ ಆದಿಯಿಂದ ವೇದ ರಚನೆಯಾಗುವ ಕಾಲದವರೆಗೆ, ವೇದಗಳ ಅನಂತರ ಸ್ಮೃತಿಗಳವರೆಗೆ, ಸ್ಮೃತಿಗಳ ಅನುಸರಣೆಯಲ್ಲೇ ಪ್ರಕಟಗೊಂಡ ಕಾವ್ಯ, ಶಾಸನಗಳಲ್ಲೆಲ್ಲ ಸ್ಥಿತ್ಯಂತರದ ದಾಖಲೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣವನ್ನು ಹುಡುಕಲಾಗುತ್ತದೆ.

ಹೆಣ್ಣಿನ ಸೃಷ್ಟಿ

ಸೃಷ್ಟಿಯ ಆದಿಯಿಂದ ಹೆಣ್ಣು ದೈಹಿಕ ವ್ಯತ್ಯಾಸಗಳ ಮೂಲಕವೇ ಗುರುತಿಸಿಕೊಳ್ಳುತ್ತಿದ್ದಾಳೆ. ಪುರುಷರಿಗಿಂತ ಶೀಘ್ರವಾಗಿ ಹೆಣ್ಣಿನ ಬುದ್ಧಿ ವೃದ್ಧಿ ಹೊಂದುತ್ತದೆ, ಹೆಣ್ಣು ಶಿಶು ಗಂಡಿಗಿಂತ ಬೇಗ ಮಾತು ಕಲಿಯುತ್ತದೆ. ಸ್ತ್ರೀ ಪುರುಷನಿಗಿಂತ ಸುಂದರಿ, ಕೋಮಲವಾದ ಅಂಗಾಂಗ ಹೊಂದಿರುವವಳು, ೧೩ನೇ ವಯಸ್ಸಿನಿಂದಲೇ ಗರ್ಭ ಧರಿಸಲು ಯೋಗ್ಯಳೆಂದು ಗುರುತಿಸಿಕೊಂಡವಳು. ಆ ಗರ್ಭ ಧರಿಸುವ ಶಕ್ತಿ ಹೊಂದುವ ಹಿನ್ನೆಲೆಯಲ್ಲಿಯೇ ಗಂಡಿಗೆ ದೇಹ ಸುಖಕೊಡುವ ಮತ್ತು ಅದನ್ನು ನಿಗ್ರಹಿಸುವ ಸಾಮರ್ಥ್ಯದಿಂದ ಆಕೆ ಅವನನ್ನು ಹಿಡಿತದಲ್ಲಿಡುವ ಸಾಧ್ಯತೆ ತಂದುಕೊಂಡವಳು.

ಸ್ತ್ರೀಯರು ಪುರುಷರಷ್ಟೇ ಸ್ವತಂತ್ರರಾಗಿದ್ದರು. ಮನುಷ್ಯನ ಸೃಷ್ಟಿಯ ಆದಿಯಿಂದ ವೇದ ರಚನಾ ಕಾಲದವರೆಗಿನ ಸಂದರ್ಭವನ್ನು ತೆಗೆದುಕೊಂಡರೆ ಅಲ್ಲಿ ಹೆಣ್ಣು ಪುರುಷನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದು ಸ್ಪಷ್ಟವಾಗುತ್ತದೆ. ಸ್ತ್ರೀಯ ಮೋಹಕ ರೂಪವೊಂದಕ್ಕೆ ತನ್ನನ್ನು ಒತ್ತೆ ಇಟ್ಟುಕೊಂಡ

ಗಂಡು ಅಂಥ ಸ್ತ್ರೀ ತನ್ನನ್ನು ಬಿಟ್ಟುಹೋಗದಂತೆ ನೋಡಿಕೊಳ್ಳುವಲ್ಲೇ ಮಗ್ನನಾಗಿದ್ದುದು ಸ್ಪಷ್ಟವಾಗುತ್ತದೆ.

ಹೆಣ್ಣಿನ ಒಂದೊಂದು ಸ್ವಭಾವವನ್ನು ಗುರುತಿಸಿ ಅಂತೆಯೇ ಅವಳನ್ನು ಹೆಸರಿಸಿದ್ದೂ ಇದೆ. ಹರಟೆ ಹೊಡೆಯುವುದರಿಂದ, ಲಜ್ಜಾಶೀಲಳಾಗಿರುವುದರಿಂದ ಹೆಣ್ಣು 'ಸ್ತ್ರೀ' ಅನ್ನಿಸಿಕೊಂಡರೆ, ಸೌಂದರ್ಯವನ್ನು ಹರಡುವುದರಿಂದ, ಹೆಚ್ಚಾಗಿ ಪ್ರತಿರೋಧ ಉತ್ತರ ಕೊಡುವುದರಿಂದ 'ವಾಮಾ' ಅನ್ನಿಕೊಂಡಿದ್ದಾಳೆ. ಶಾರೀರಿಕ ಅಸಾಮರ್ಥ್ಯದ ಆಧಾರದಲ್ಲಿ 'ಅಬಲೆ' ಎಂದು ಕರೆಯಿಸಿಕೊಂಡಿದ್ದಾಳೆ. ಇಚ್ಛೆ ಅಧಿಕವಾಗಿರುವವಳಾಗಿ ಗುರುತಿಸಿ 'ಲಲನೆ' ಎಂದು ಕರೆದಿದ್ದಾರೆ. ಅಭಿಮಾನವಿರುವವಳು 'ಮಾನಿನಿ'ಯಾದರೆ, ಪೂಜನೀಯಳು 'ಮಹಿಲಾ' ಆದಳು. ಹೆತ್ತವರ ಹಿತಬಯಸುವವಳು ಎಂಬರ್ಥದಲ್ಲಿ 'ದುಹಿತ' ಎಂದು ಕರೆದರು. ಪತ್ನಿಯ ಇನ್ನೊಂದು ಹೆಸರಾಗಿ 'ಜಾಯಾ' ಅನ್ನಿಸಿಕೊಂಡಳು. ಪ್ರೀತಿಗೆ ಪಾತ್ರಳಾದವಳಾಗಿ 'ಮಾತೆ' ಆದಳು. ಮನೆಗೆ ಯಜಮಾನಿಯಾಗಿರುವುದರಿಂದ 'ಗೃಹಿಣಿ' ಎಂದು ಕರೆಯಿಸಿಕೊಂಡಳು.[೧] ಇವೆಲ್ಲ ಪದಗಳನ್ನು ಸೃಷ್ಟಿ ಮಾಡಿದವರು ಪುರುಷರೇ. ಮತ್ತು ಹೆಣ್ಣು ಹೀಗೇ ಈ ಎಲ್ಲ ಗುಣ ಸ್ವಭಾವಗಳನ್ನು ಪ್ರತಿನಿಧೀಕರಿಸುತ್ತಾಳೆ.

ವೇದಗಳಲ್ಲಿ ಸ್ತ್ರೀ

ವೇದ ದರ್ಶನದಲ್ಲಿ ಅದಿತಿ, ಘೋಷಾ, ಗೋಧಾ, ಊರ್ವಶಿ, ಇಂದ್ರಾಣಿ, ಸರಸ್ವತಿ, ವಿಶ್ವವದಾ, ಲೋಪಾಮುದ್ರಾ ಮೊದಲಾದ ೨೭ ಮಂದಿ ಋಷಿಕೆಯರು ಕಾಣಿಸಿಕೊಳ್ಳುವುದು ಆ ಕಾಲದಲ್ಲಿ ಸ್ತ್ರೀಯರು ವಿದ್ಯಾಭ್ಯಾಸಕ್ಕೆ ಒಡ್ಡಿಕೊಂಡದ್ದಕ್ಕೆ ಪುರಾವೆಯಾಗಿವೆ. ಗಾರ್ಗಿ, ಮೈತ್ರೇಯಿಯಂಥ ವಿದುಷಿಯರು ಬುದ್ಧಿವಂತಿಕೆ, ಪಾಂಡಿತ್ಯ, ಶಕ್ತಿ ಉಳ್ಳವರಾಗಿ ಮೆರೆಯುತ್ತಾರೆ. ಆ ಕಾಲಘಟ್ಟದಲ್ಲಿ ಸ್ತ್ರೀ ಉಪನಯನಕ್ಕೂ ಭಾಜನಳಾಗುತ್ತಿದ್ದುದು ಹೆಣ್ಣಿಗೂ ದ್ವಿಜಳಾಗುವ ಅವಕಾಶವಿದ್ದುದನ್ನು ನಿದರ್ಶಿಸುವುದಾಗಿದೆ. ಎಂದರೆ ಸ್ತ್ರೀಯು ಪುರುಷನಿಗೆ ಸಲ್ಲುವ ಧಾರ್ಮಿಕ ಮರ್ಯಾದೆಗಳಿಗೂ ಪಕ್ಕಾಗುತ್ತಿದ್ದಳು ಎಂಬುದು ಇಲ್ಲಿ ವೇದ್ಯವಾಗುತ್ತದೆ. ಪುರುಷರಿಗಿಂತ ಭಿನ್ನವಾಗಿ ಸ್ತ್ರೀಯನ್ನು ನೋಡಲಾಗದು. ಆಕೆ ಪುರುಷನಿಗೆ ಸಮಾನಳು, ಎಲ್ಲ ವಿಧದಿಂದಲೂ ಅರ್ಹಳು ಎಂಬುದು ವೇದಕಾಲದ ನಂಬಿಕೆಯೇ ಆಗಿದೆ. ವೇದಕಾಲವು ಸ್ತ್ರೀ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ನೋಡಿದಾಗಲಂತೂ ಸ್ವರ್ಣಯುಗವೇ ಆಗಿದೆ. ಆ ಕಾಲದಲ್ಲಿ ಅರ್ಧಾಂಗಿರಹಿತನಾದ ಪುರುಷ ಕೈಗೊಳ್ಳುವ ಶುಭಕಾರ್ಯ ಅಪೂರ್ಣ, ಅನರ್ಹ ಎಂದೇ ಪರಿಗಣಿಸಲಾಗುತ್ತಿತ್ತು.

---

೧ ಪು. ೩-೧೭ ಗರತಿ, ಆತ್ಮಾರಾಮು, ೧೯೬೦

ವೇದ - ಶ್ರುತಿ - ಸ್ಮೃತಿಗಳಲ್ಲಿ ಹೆಣ್ಣು

ಬ್ರಹ್ಮನ ಇಷ್ಟದಂತೆ ವಿರಾಟ್ ಪುರುಷನ ಶರೀರದ ಎಡಭಾಗವೇ ಸ್ತ್ರೀಯಾಗಿ ಸೃಷ್ಟಿಗೊಂಡು, ಲೋಕವಿಕಾಸ ಕಾರ್ಯಗಳಲ್ಲಿ ತೊಡಗಿಕೊಂಡದ್ದಾಗಿದೆ. ಆ ಮೂಲಕ ಆಕೆ ಜಗನ್ಮಾತೆಯಾಗಿದ್ದಾಳೆ. ಮಾತೃದೇವೋಭವ ಎಂದು ಪೂಜೆಗೆ ಪಾತ್ರಳಾಗಿದ್ದಾಳೆ. ಇಂತಹ ಗೌರವ ಪ್ರದಾನಿಸುವುದರ ಹಿಂದೆ ಲೋಕದ ಉಳಿವು, ಸಂತಾನ ಪ್ರಾಪ್ತಿ ಇವುಗಳಿಗಾಗಿಯೇ ಹೆಣ್ಣು ಅವತರಿಸಿದವಳು ಎಂಬ ಭಾವನೆಯೇ ಘನೀಭೂತವಾಗಿದೆ. ಅಂದರೆ ಲೋಕವಿಕಾಸ ಕಾರ್ಯಕ್ಕಾಗಿ ಅರ್ಥಾತ್ ಜೀವರಾಶಿಗಳನ್ನು ಹೆರುವುದಕ್ಕಾಗಿ ಮಾತ್ರವೇ ಅವಳು ನಿಯೋಜಿತಳಾಗಿದ್ದಾಳೆ. ಈ ಮೂಲಕ ಆಕೆ ಮಿತಿಗೆ ಒಳಗಾಗಿದ್ದಾಳೆ. ಜೊತೆಗೆ ಅವಳ ಹುಟ್ಟುಕೂಡ ಪುರುಷನಿಂದಲೇ ಆದದ್ದು ಎನ್ನುವ ಮೂಲಕ ಪುರುಷನ ಪ್ರಾಧಾನ್ಯವನ್ನು ಗಟ್ಟಿಗೊಳಿಸಲಾಗಿದೆ. ಅಲ್ಲದೇ ಇದರಿಂದಲೇ ನಿರ್ಧರಿಸಲಾಗಿರುವ ತ್ಯಾಗ, ಪ್ರೀತಿ, ಸಂಯಮ ಔದಾರ್ಯಗಳನ್ನು ಅವಳು ತನ್ನನ್ನು ಬಲಿಕೊಟ್ಟೇ ಉಳಿಸಿಕೊಳ್ಳಬೇಕಾಗಿದೆ. ಈ ಅಗತ್ಯ - ಅನಿವಾರ್ಯತೆ ಮತ್ತು ಒತ್ತಡಗಳಿಂದಾಗಿ ಆಕೆ ಅತ್ಯಂತ ಗೌರವ ಹಾಗೂ ಪ್ರಾಶಸ್ತ್ಯಗಳಿಗೆ ಒಳಗಾಗಿದ್ದಾಳೆ. ಸಂತಾನೋತ್ಪತ್ತಿಗೆ ಅನುಗುಣವಾದ ದೇಹ ಪ್ರಕೃತಿಯಿಂದಾಗಿ ಹೆಣ್ಣು ರಕ್ಷಿಸಿಕೊಳ್ಳಬೇಕಾದವಳಾಗುತ್ತಾಳೆ. ಗಂಡು ರಕ್ಷಿಸಲೇ ಬೇಕಾದವನಾಗುತ್ತಾನೆ. ಸ್ತ್ರೀಪುರುಷರ ಜೈವಿಕ ಗುರುತುಗಳಾಗಿರುವ ಯೋನಿ, ಶಿಶ್ನಗಳ ವಿಭಜನೆಯಲ್ಲಿ ಶಿಶ್ನದ ಚಿಹ್ನೆಯನ್ನು ಶಿವನೆಂದೂ, ಯೋನಿ ಚಿಹ್ನೆಯನ್ನು ಗೌರಿಯೆಂದು ಊಹಿಸಲಾಗಿದೆ.[೨]

ಬ್ರಹ್ಮವೈವರ್ತಕ ಪುರಾಣದಲ್ಲಿ

ಯತ್ಕಿಂಚ ತ್ರಿಷುಕೇಲೋತೇಷು ಸ್ತ್ರೀರೂಪಂದೇವಿ ದೃಶ್ಯತೇ

ತತ್ಸರ್ವಂತ್ವ ರೂಪಂಸ್ಥತಿ ಶಾಸ್ತ್ರೇಷು ನಿಶ್ಚಯಃ

(ಯಾವುದು ಸ್ತ್ರೀರೂಪದಿಂದ ಕಾಣುವುದೋ ಹೇ ದೇವಿ ಅದೆಲ್ಲಾ ನಿನ್ನ ಸ್ವರೂಪವೆಂದೂ ಶಾಸ್ತ್ರಗಳಲ್ಲಿ ನಿಶ್ಚಯವಾಗಿ ಹೇಳಿದೆ)[೩] ಎಂದಿರುವಲ್ಲಿ ಹೆಣ್ಣನ್ನು ದೇವಿಯಾಗಿಯೇ ಗುರುತಿಸುವುದನ್ನು ಅರಿಯಬಹುದು. ಅಲ್ಲದೇ ಹೆಣ್ಣನ್ನು ಪರಿಪೂರ್ಣಳೆಂದು ಕಾಣುವುದು ಪೂರ್ಣವಾದ ಇನ್ನೊಂದು ಶಿಶುವಿಗೆ ಜನ್ಮಕೊಟ್ಟಾಗಲೇ. ಈಶೋಪನಿಷದ್ ವಿವರಿಸಿದಂತೆ ಸೃಷ್ಟಿಕರ್ತನಿಂದ ಸ್ತ್ರೀ-ಪುರುಷ ಇಬ್ಬರೂ ಸೃಷ್ಟಿಗೊಂಡದ್ದು ಸಂತಾನ ಉತ್ಪತ್ತಿಗಾಗಿಯೇ. ಹೆಣ್ಣು ಗರ್ಭಧರಿಸಿ ಹೊರ ಬಂದ ಮಗುವಿನ ಮೂಲಕ ಪೂರ್ಣತ್ವ ಪಡೆಯುತ್ತಾಳೆ, ಉಳಿಸಿಕೊಳ್ಳುತ್ತಾಳೆ. ಈ ಕಾರಣಕ್ಕಾಗಿಯೇ ಅವಳನ್ನು ಪರಬ್ರಹ್ಮನಿಗೆ ಸಮಾನಗೊಳಿಸಲಾಗಿದೆ. ಅರ್ಥಾತ್ ಬ್ರಹ್ಮ ಮತ್ತು ಹೆಣ್ಣು ಒಬ್ಬರೇ

---

೨ ಪು. ೧-೧೭ ಸ್ತ್ರೀಪ್ರಪಂಚ, ಡಾ. ಎಚ್. ಎಸ್.ನಂಜುಂಡ ಸ್ವಾಮಿ ೧೯೯೩

೩. ಅದೇ ಪು. ೭

ಆಗಿದ್ದಾರೆ, ಬ್ರಹ್ಮನಿಂದ, ಹೆಣ್ಣಿನಿಂದ ಜಗತ್ತಿನ ಉಳಿವು, ಆಕೆ ಅಸಹಕರಿಸಿದ ಜಗತ್ತಿನ ಅಳಿವು. ಈ ಅಧೀರತೆಯಲ್ಲಿ ಸ್ತ್ರೀ ದೈವತ್ವಕ್ಕೇರಿಸಲ್ಪಟ್ಟಿದ್ದಾಳೆ. ಅದನ್ನೊಂದು ವಿಶಿಷ್ಟ ಪ್ರಕ್ರಿಯೆಯಾಗಿ ಕಾಣುವ ಮತ್ತು ಅದಕ್ಕೆ ಕಾರಣಳಾದ ಹೆಣ್ಣಿನ ವಿಶಿಷ್ಟ ಶಕ್ತಿಯನ್ನು ಇಲ್ಲಿ ಗ್ರಹಿಸಲಾಗಿದೆ.

ಇಲ್ಲಿ ಎಲ್ಲಿಯೂ ಸ್ತ್ರೀ-ಪುರುಷರ ಸಂಬಂಧ ದೈಹಿಕ ಕಾಮನೆಗೆ ಮಾತ್ರ ಸೀಮಿತವಾಗಿಲ್ಲ. ಹೆಣ್ಣು ಅದಕ್ಕಾಗಿ ಮಾತ್ರ ಬಳಕೆಯಾಗದಂತೆ ತೀರಾ ಎಚ್ಚರಿಕೆ ವಹಿಸಲಾಗಿದೆ. ಅದಕ್ಕಾಗಿಯೇ ಸಂತಾನ ಪ್ರಾಪ್ತಿಗಾಗಿ ಮಾತ್ರ ಸ್ತ್ರೀ-ಪುರುಷರು ಸೇರಬೇಕಾದ, ಕೈಗೊಳ್ಳಬೇಕಾದ ಕ್ರಮಗಳನ್ನು ಮುಂಡಕೋಪನಿಷತ್ತು ಹಾಗೂ ಐತರೇಯ ಉಪನಿಷತ್ತುಗಳು ಮುಂದಿಟ್ಟಿವೆ.

ದಂಪತಿಗಳು ಒಂದಾಗುವ ಸಂದರ್ಭವನ್ನು ಪವಿತ್ರವಾದ ಯಜ್ಞಕಾರ್ಯಕ್ಕೆ ಹೋಲಿಸಿವೆ. ಇಲ್ಲಿ ವೀರ್ಯವನ್ನು ಹವಿಸ್ಸು ಎಂದು ಪರಿಭಾವಿಸಲಾಗಿದೆ, ಹೋಮವೆಂದೇ ಸ್ವೀಕರಿಸಲಾಗಿದೆ. ಯೋನಿಯನ್ನು ಇಲ್ಲಿ ಕುಂಡವಾಗಿ ಕಾಣುವ ಬೆನ್ನಲ್ಲೇ ಹೆಣ್ಣನ್ನು ಕ್ಷೇತ್ರವಾಗಿ ಪರಿಗಣಿಸಿದ್ದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಆದರೆ ಸ್ತ್ರೀ-ಪುರುಷ ದೈಹಿಕ ಸಂಬಂಧದ ಕುರಿತಂತೆ ಹೀಗೆ ಇಷ್ಟು ಎತ್ತರದಲ್ಲಿಟ್ಟು ವಿವರಿಸಿರುವುದರ ಹಿಂದೆ ಒತ್ತಾಯದ ಕಾಮಕೇಳಿಯಿಂದ ನಡೆಯುವ ಶೋಷಣೆಯ ಅಪಾಯಗಳಿಂದ ಹೆಣ್ಣನ್ನು ರಕ್ಷಿಸುವ ಉದ್ದೇಶವೇ ಮುಖ್ಯವಾಗಿರುವಂತಿದೆ. ಆದ್ದರಿಂದಲೇ, ಹೆಣ್ಣು ಕೂಡಾ ಅಂತಹ ಅಪಾಯದಿಂದ ಪಾರಾಗಿದ್ದಳು ಎಂದು ಊಹಿಸಬಹುದಾಗಿದೆ. ಶ್ರುತಿ 'ಪುತ್ರಾರ್ಥೆ ಭಾರ್ಯಾ' ಎಂದು ಹೇಳಿರುವುದು ಹೆಣ್ಣನ್ನು ದೈಹಿಕ ಆಕ್ರಮಣದಿಂದ ರಕ್ಷಿಸುವುದಕ್ಕಾಗಿಯೇ ಆಗಿದೆ. ಯಜ್ಞಭಾವನೆಯಿಂದ ಲೈಂಗಿಕ ಕ್ರಿಯೆ ನಡೆದರೆ ಮಾತ್ರ ಉತ್ತಮ ಸಂತಾನ ಪ್ರಾಪ್ತವಾಗುತ್ತದೆ. ಅದರ ಹೊರತಾಗಿ ನಡೆಸುವ ದೈಹಿಕ ಸಂಬಂಧದಿಂದ ಲೋಕಕಂಟಕ ಸಂತಾನ ಒದಗುತ್ತದೆ ಎಂಬ ಭಾವನೆ ಬಿತ್ತಿರುವುದರ ಹಿಂದೆ ಹೆಣ್ಣಿನ ಬಗೆಗಿನ ಕಾಳಜಿಯನ್ನು ಗ್ರಹಿಸಬಹುದಾಗಿದೆ.

ಎಲ್ಲ ಸ್ತ್ರೀಯರೂ ತಾಯಿ ಸಮಾನರಾದಾಗ ಅವರಲ್ಲಿ ಒಬ್ಬಳನ್ನು ಪತ್ನಿಯಾಗಿ ಸ್ವೀಕರಿಸಿ ಬದುಕುವುದು ಧರ್ಮವಿರೋಧವಾಗುವುದಿಲ್ಲವೇ ಎಂಬ ಸಂದೇಹಕ್ಕೆ ಬೃಹದಾಕಾರಣ್ಯಕ ಜಾಯಾಮೇಸ್ಯಾತ್ ಅಥಪ್ರಜಾಯೇಯ ಎಂದು ಹೇಳುವ ಮೂಲಕ ಉತ್ತರ ಕೊಡುತ್ತದೆ. ಅದಕ್ಕೆ ಸಂಬಂಧಿಸಿದಂತೆ ಎಚ್.ಎಸ್. ನಂಜುಂಡಸ್ವಾಮಿಯವರು, 'ಸ್ತ್ರೀಯರ ಶರೀರದಲ್ಲಿ ಗರ್ಭಕೋಶ, ಸ್ತನ್ಯಕೋಶಗಳು ಮತ್ತು ಯೋನಿ ಈ ಮೂರೂ ಅಂಶಗಳನ್ನು ರಚಿಸುವುದರ ಉದ್ದೇಶ ಸಹ ಸಂತಾನೋತ್ಪತ್ತಿಗಾಗಿಯೇ. ಸ್ತ್ರೀ ವರ್ಗ ಮತ್ತು ಪುರುಷ ವರ್ಗಗಳನ್ನು ಪ್ರತ್ಯೇಕವಾಗಿ ಸೃಷ್ಟಿಸಿದ್ದು ಸಹ ಸಂತಾನೋತ್ಪತ್ತಿಗಾಗಿಯೇ. ಒಂದು ವೇಳೆ ಸ್ತ್ರೀಪುರುಷರು ಪರಸ್ಪರ ಕಾಮಕ್ರೀಡೆಯಲ್ಲಿ ನಿರತರಾಗಿ ಆನಂದದಿಂದ ಜೀವಿಸಲಿ ಎಂದು ಅವನು ಬಯಸಿದ್ದರೆ ಪ್ರಜೆಗಳ ಉಪಯುಕ್ತತೆಗಾಗಿ ಬೇರೆ ವ್ಯವಸ್ಥೆಯನ್ನು ಮಾಡಿ ಸ್ತ್ರೀ ದೇಹದಲ್ಲಿ ಯೋನಿಯೊಂದನ್ನೇ ರಚಿಸಿ ಕಳುಹಿಸುತ್ತಿದ್ದನು.

ಗರ್ಭಕೋಶ ಮತ್ತು ಸ್ತನ್ಯಕೋಶಗಳ ಅಗತ್ಯವೇ ಇರುತ್ತಿರಲಿಲ್ಲ. ಈ ರಹಸ್ಯವನ್ನು ಅರಿಯದೇ ಕಣ್ಣಿದ್ದೂ ಕುರುಡಾಗಿರುವ ಮಾನವರಲ್ಲಿ ಪಶುಗಳಾದ ಪುರುಷರು ಸ್ತ್ರೀಯ ಶರೀರದಲ್ಲಿ ಯೋನಿಯೊಂದನ್ನು ಕಾಣುತ್ತಿದ್ದಾರೆಯೇ ಹೊರತು ಯೋನಿಯ ಹಿಂದೆ ಯಾವ ಅರ್ಥವಿದೆ ಅದು ಏತಕ್ಕಾಗಿ ಇದೆ ಎಂದು ಯೋಚಿಸುವುದಿಲ್ಲ'[೪] ಎಂದು ಹೇಳಿರುವಲ್ಲಿ ವಿಕೃತ ಮನಸ್ಸಿನ ಕುರಿತು ವಿಷಾದ ತುಂಬಿದೆ. ಇಲ್ಲಿ ಹೆಣ್ಣು ಹಾಗೂ ಹೆಣ್ತನಗಳನ್ನು ಬಗೆದಿಟ್ಟ ರೀತಿ ಅವಳ ಒಟ್ಟು ವ್ಯಕ್ತಿತ್ವವನ್ನು, ಅವಳ ಹುಟ್ಟಿನ ಹಿಂದಿನ ಸತ್ಯವನ್ನು ಮನದಟ್ಟು ಮಾಡಿಸುತ್ತದೆ.

ಈ ಹಿನ್ನೆಲೆಯಲ್ಲಿಯೇ ಮಾತೃಪೂಜೆ ಕೂಡಾ ಪ್ರಾಧಾನ್ಯ ಪಡೆದುಕೊಂಡದ್ದನ್ನು ಚರ್ಚಿಸಬಹುದಾಗಿದೆ. ಜಗತ್ತಿನಾದ್ಯಂತ ನಡೆದು ಬಂದ ಈ ವಿಧಾನ ಸೃಷ್ಟಿಕ್ರಿಯೆಗೆ ಸಲ್ಲಿಸುವ ಅರ್ಚನೆಯಾಗಿದೆ. ಇಡೀ ಸೃಷ್ಟಿಕ್ರಿಯೆಯನ್ನು ಹೆಣ್ಣಾಗಿ ಕಾಣುವಲ್ಲಿ ಸಂತಾನವನ್ನು ಸಮೃದ್ಧವಾಗಿ ಪಡೆಯಬೇಕೆಂಬ ಉದ್ದೇಶವಿದೆ. ಮುಂದುವರಿದು ಹೆಣ್ಣನ್ನು ದೇವಿಯೆಂದೇ ಮನ್ನಿಸಲಾಯಿತು. ಆ ಕಾರಣದಿಂದಲೇ ದೇವಿಯ ವಿಗ್ರಹ ನಿರ್ಮಿಸಿ ಪೂಜಿಸುವುದು ಮೊದಲಾಯಿತು. ಪ್ರಾಕ್ತನ ಶಾಸ್ತ್ರಪ್ರಕಾರ 30 ಸಾವಿರ ವರ್ಷಗಳ ಹಿಂದಿನಿಂದಲೇ ಸ್ತ್ರೀ ವಿಗ್ರಹಾರಾಧನೆ ನಡೆದುಕೊಂಡು ಬರುತ್ತಿದ್ದುದಕ್ಕೆ ಪುರಾವೆಗಳು ಸಿಗುತ್ತವೆ. ಚಿ.ನ.ಮಂಗಳ ಅವರು 'ಪ್ರಾಚೀನ ಗ್ರೀಸ್ ಹಾಗೂ ರೋಮಿನಲ್ಲೂ ದೇವೀ ಪಂಥಗಳು ಶಕ್ತಿಯುತವಾಗಿದ್ದವು. ಐರ್ಲೆಂಡ್, ಜರ್ಮ್ಯಾನಿಕ್ ಯುರೋಪ್‌ಗಳಲ್ಲೂ ಪ್ರಾಚೀನ ಹಿಬ್ರೂಜರಲ್ಲಿ ದೇವೀಪಂಥ ಪ್ರಬಲವಾಗಿತ್ತು 'ಎಂದು ಅಭಿಪ್ರಾಯಪಡುತ್ತಾರೆ.[೫] ಈ ಹಿನ್ನೆಲೆಯಲ್ಲಿಯೇ ಮಾತೃಪೂಜೆಯನ್ನು ಗ್ರಹಿಸುತ್ತಾ, 'ಮಾತೃಪೂಜೆ ಒಂದು ರೀತಿಯ ಫರ್ಟಿಲಿಟಿ ಕಲ್ಟ್. ಲಿಂಗಪೂಜೆ ಕೂಡಾ ಒಂದು ಫರ್ಟಿಲಿಟಿ ಕಲ್ಟ್. ಸಂತಾನ ಭಾಗ್ಯಕ್ಕಾಗಿ ಆಚರಿಸುವ ವಿಧಿಯಾಗಿ ಉಳಿಯದೆ ಉನ್ನತ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಮೌಲ್ಯವನ್ನು ಪಡೆದಿದ್ದರೂ ಅದು ಸೃಷ್ಟಿಯ ಆದಿಯಲ್ಲಿ ಸಂತಾನ ಪಡೆಯುವ ವಿಧಿಯಾಗಿಯೇ ಇದ್ದಿರಬೇಕು'[೬] ಎಂದೂ ಅವರು ಅನುಮಾನಿಸುತ್ತಾರೆ. ಇಂದಿನವರು ಲಿಂಗಪೂಜೆಯಲ್ಲಿ ತೊಡಗಿಸಿಕೊಂಡಿರುವಂತೆಯೇ ಅಂದಿನವರು ಯೋನಿಪೂಜೆಯಲ್ಲೂ ಹೆಚ್ಚಾಗಿ ತೊಡಗಿಸಿಕೊಂಡಿರಬೇಕು. ಅಂದರೆ ಹೆಣ್ಣಿನ ಜನನಕೇಂದ್ರದ ಕುರಿತ ಭಕ್ತಿಯ ಪೂಜೆಯಲ್ಲಿ ಸಂತಾನ ಅಪೇಕ್ಷೆ ಕುರಿತ ತೀವ್ರತೆಯನ್ನೇ ಕಾಣುತ್ತೇವೆ. ಆ ಮೂಲಕ ಪೂಜೆಗೊಳಗಾಗುವ ಅವಳು, ಮಾತೃಪೂಜೆ - ಮಾತೃಪ್ರಧಾನತೆ - ಮಾತೃಗೌರವದ ಸಂಕೇತವೂ ಆಗಿ ನಿಲ್ಲುತ್ತಾಳೆ. ಯೋನಿ ಮತ್ತು ಸ್ತನಗಳಿಗೆ ಪ್ರಾಧಾನ್ಯಕೊಟ್ಟು ಬೆಣ್ಣೆ ಮತ್ತು ಸಿಂಧೂರ ಲೇಪಿಸಿ

---

೪ ಪು. ೧೫ ಸ್ತ್ರೀ ಪ್ರಪಂಚ, ಡಾ. ಎಚ್. ಎಸ್.ನಂಜುಂಡಸ್ವಾಮಿ ೧೯೯೩

೫ ಪು. ೧೧ ಮಾತೃಪೂಜೆ, ಚಿ.ನ. ಮಂಗಳ ೧೯೯೪

೬ ಅದೇ ಪು. ೧೨

ಪೂಜಿಸುತ್ತಿದ್ದುದು ಸೃಷ್ಟಿ ಮತ್ತು ಫಲವತ್ತತೆಯನ್ನು ಸಂಕೇತಿಸುವುದೇ ಆಗಿದೆ. ಜೊತೆಗೆ ಸೃಷ್ಟಿಕೇಂದ್ರವಾದ ಯೋನಿಗೆ ಪ್ರಧಾನ ಪೂಜೆ ಸಂದದ್ದು ತಿಳಿಯುತ್ತದೆ. ಸೃಷ್ಟಿ ಹಾಗೂ ಲೋಕದ ಉಳಿವಿಗೆ ಮಾತೃವಿಗೆ ಕೊಡುವ ಗೌರವವಾಗಿ ಕೂಡಾ ಅದನ್ನು ಗ್ರಹಿಸಬಹುದಾಗಿದೆ. ಅಲ್ಲಿ ಯೋನಿ, ಗರ್ಭಾಶಯ ಹಾಗೂ ಸ್ತನಗಳಿಗೆ ಪೂಜೆ ಸಲ್ಲಿಸುವ ಮೂಲಕ ಅವಳು ಗೌರವಕ್ಕೆ ಪಕ್ಕಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ಈಗಲೂ ನಡೆಯುವ ದೇವೀಪೂಜೆಗಳು ಪ್ರಾಮುಖ್ಯ ಪಡೆಯುತ್ತಿವೆ. ನಾಗರೀಕತೆಯ ಪ್ರತೀಕವಾಗಿ ಅಲಂಕೃತಗೊಂಡ ವಿಗ್ರಹಕ್ಕೆ ಇಂದು ಪೂಜೆ ಸಲ್ಲುತ್ತಿದೆ. ಅಂದು ಜನ ತಾವು ಬದುಕಿದ ರೀತಿಯಲ್ಲಿಯೇ ದೇವಿಯನ್ನು ನಗ್ನಳಾಗಿಯೇ ಪ್ರತಿಷ್ಠಾಪಿಸಿ ಪೂಜಿಸಿದರು. ಇಲ್ಲಿ ಈ ಪೂಜಾ ಕ್ರಿಯೆಯಲ್ಲಿ ಹೆಣ್ಣನ್ನು ಶಕ್ತಿ ಹಾಗೂ ದೇವಿಯಾಗಿ ಕಾಣುತ್ತಾ, ಬಂಧನಕ್ಕೊಳಗಾಗಿಸಿದ ಸೂಕ್ಷ್ಮತೆಯನ್ನು ಗಮನಿಸಬೇಕು. ಆದರೆ ಇಂದು ಲಿಂಗ ಪೂಜೆ ಆ ಸ್ಥಾನವನ್ನು ಆಕ್ರಮಿಸುವಲ್ಲಿ ಪುರುಷ ಪ್ರಾಧಾನ್ಯದ ಪ್ರತಿಷ್ಠಾಪನೆಯ ಕುರುಹನ್ನೇ ಕಾಣಬಹುದು.

ವೈದಿಕ ಸಿದ್ಧಾಂತದ ಪ್ರಕಾರ ರೂಪುಗೊಂಡಿರುವ ವಿವಾಹ ಸಂಸ್ಕಾರ ನಿಯಮಗಳು ಸ್ತ್ರೀ ಪುರುಷರ ನಡುವಣ ಲಿಂಗಭೇದ ತೊರೆದು ಆತ್ಮ ಒಂದೇ ಎಂದು ಸಾಧಿಸುತ್ತದೆ. ಎಲ್ಲೂ ಯಾವುದೇ ಹೇಳಿಕೆಗಳು ಗಂಡಿಗೆ ಮಾತ್ರ ಸೀಮಿತವಾಗಿಲ್ಲ. ವಿವಾಹ ಮಂಟಪದಲ್ಲಿ ಕೈಹಿಡಿದ ಪತ್ನಿಗೆ

ಅಹಂವಿಷ್ಯಾಮಿಮಯಿರೂಪಮಸ್ಯಾ ವೇದವಿತಪಶ್ಯನ್ಮನಸಃ ಕುಲಾಯಮ್

ನಸ್ತೇಯಮದ್ಮಿಮನಸೋದ ಮುಚ್ಯೇಸ್ವಯಂ ಶಥ್ನಾನೋವರುಣಸ್ಯ ಪಾಶಾನ್

'ಮನಸಾರೆ ವಂಶಾಭಿವೃದ್ಧಿಯನ್ನು ನೋಡುತ್ತಾ ಪ್ರೀತಿಯಿಂದ ನಿನ್ನ ರೂಪವನ್ನು ಹೇಗೆ ಸ್ಥಾಪಿಸುತ್ತೇನೋ ನೀನೂ ಹಾಗೇ ಮಾಡು. ಯಾವ ರೀತಿಯ ಮನಸ್ಸಿನಿಂದ ಕಳ್ಳತನದಿಂದ ಭಾವನೆಯನ್ನು ತ್ಯಜಿಸುತ್ತೇನೋ ಮತ್ತು ಕಳ್ಳತನದಿಂದ ಏನನ್ನೂ ಅನುಭವಿಸುವುದಿಲ್ಲವೋ ಹಾಗೇ ನಾನೂ ಪುರುಷಾರ್ಥಗಳಿಂದ ವಂಚಿತನಾದರೂ ವಿಘ್ನ ರೂಪಕನಾದ ದುಷ್ಟ ಪುರುಷನ ಪಾಶಗಳಿಗೆ ವಶವಾಗುವುದಿಲ್ಲವೋ ಹಾಗೆಯೇ ಈ ವಧು ಮಾಡಲಿ' ಎಂದು [೨] ಕೈ ಹಿಡಿದ ಪತ್ನಿಗೆ ಆದ್ಯತೆ ಕೊಡುವುದು ಮತ್ತು ಅದನ್ನೇ ಅವಳಿಂದ ಅಪೇಕ್ಷಿಸುವುದು ಪರಸ್ಪರ ನಿಷ್ಠೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಪರಸ್ಪರ ನಂಬಿಕೆ - ವಿಶ್ವಾಸವೇ ಬದುಕು ಎಂದು ನಿರ್ಧರಿಸಿಕೊಂಡ ವ್ಯವಸ್ಥೆಗೆ ಅಂದಿನ ಹೆಣ್ಣು ಒಳಗಾಗಿದ್ದುದನ್ನು ಕಾಣಬಹುದು.

ಋಗ್ವೇದದಲ್ಲಿ ಒಂದೆಡೆ

ಓಂ ಭೂರ್ಭುವಸ್ವಃ

---

೨ ಪು. ೭೭ ಸ್ತ್ರೀ ಪ್ರಪಂಚ, ಡಾ. ಎಚ್. ಎಸ್. ನಂಜುಂಡಸ್ವಾಮಿ ೧೯೯೩

ಅಘೋರಚಕ್ಷುರಪತಿಘ್ನ್ಯೇಧಿಶಿವಾಪಶುಭ್ಯಃಸುಮನಾಸ ವರ್ಚಾಃ
ವೀರಸೂರ್ದೇವಕಾಮಾಸ್ಯೋನಾಶನ್ನೋಭವದ್ವಿ ಪದೇಶಂಚತುಷ್ಪದೇ

'ಪತಿಗೆ ಅವಿರೋಧ ವರ್ತನೆಯುಳ್ಳ ನೀನು ಮಂಗಳದಾಯಕನಾದ ಪರಮಾತ್ಮನ ದಯದಿಂದ ಎಲ್ಲರಿಗೂ ಪ್ರಿಯದರ್ಶಿನಿಯಾಗು. ಗುಣಕರ್ಮದಿಂದ, ವಿದ್ಯೆಯಿಂದ ಪ್ರಕಾಶಿತೆಯಾಗಿ ವೀರಪುತ್ರನನ್ನು ಪಡೆಯುವವಳಾಗು, ಎರಡನೇ ವರನನ್ನು ಇಷ್ಟಪಡುವವಳೂ (ನಿಯೋಗಕ್ಕೆ ಒಪ್ಪುವವಳಾಗಿ ಸೌಖ್ಯವನ್ನು ಹೊಂದುವವಳೂ) ಆಗಿ ದ್ವಿಪಾದಿಗಳಾದ ಮಾನವನಿಗೆ ಮತ್ತು ಚತುಷ್ಪಾದಿಗಳಾದ ಗೋವು ಮೊದಲಾದವುಗಳಿಗೆ ಸುಖ ನೀಡವಂತಾಗು'[೮] (೧೦-೧೪-೪೪) ಎಂದು ಸತೀಧರ್ಮವನ್ನು ಬೋಧಿಸಲಾಗಿದೆ. ಇಲ್ಲಿ ಹೆಣ್ಣು ವಿದ್ಯೆ ಪಡೆಯುತ್ತಿದ್ದುದು ವೇದ್ಯವಾಗುತ್ತದೆ. ಅಲ್ಲದೇ ಎರಡನೆಯ ವರನನ್ನು ಇಷ್ಟಪಡುವವಳಾಗಿರಬೇಕು ಎಂದು ಉಪದೇಶಿಸಿರುವಲ್ಲಿ ವಿವಾಹವಾದ ಪತಿಯಿಂದ ಮಕ್ಕಳಾಗದೇ ಹೋದಾಗ ನಿಯೋಗಕ್ಕಾಗಿ ಇನ್ನೊಬ್ಬನನ್ನು ಆರಿಸಲು ಸ್ವಾತಂತ್ರ್ಯ ನೀಡಿದಂತಾಗಿದೆ. ಸಂತಾನಪ್ರಾಪ್ತಿ ಅಗತ್ಯವೆಂಬುದನ್ನು ಮತ್ತು ಅದರ ಆಯ್ಕೆ ಧರ್ಮವೇ ಎನ್ನುವುದನ್ನು ಪ್ರತಿಪಾದಿಸಿರುವುದು ಇಲ್ಲಿ ಗಮನಾರ್ಹವಾಗುತ್ತದೆ. ಆದರೆ ಅದು ಕೇವಲ ಸಂತಾನೋತ್ಪತ್ತಿ ಕ್ರಿಯೆ ಮಾತ್ರ ಆಗಿರಬೇಕೆಂಬ ಕಟ್ಟಳೆ ಕೂಡಾ ಇದ್ದೇ ಇದೆ.

'ನಿನ್ನ ಹೃದಯವನ್ನು ನನ್ನ ಹೃದಯಕ್ಕೆ ಅಳವಡಿಸಿಕೊಳ್ಳುತ್ತೇನೆ. ನನ್ನ ಮನಸ್ಸಿಗೆ ಅನುಕೂಲವಾಗಿ ನಿನ್ನ ಮನಸ್ಸು ಇರಲಿ. ನನ್ನ ಮಾತುಗಳನ್ನು ನೀನು ಒಂದೇ ಮನಸ್ಸಿನಿಂದ ಮನ್ನಿಸಿ ಸೇವನೆ ಮಾಡುವಂತಾಗಲಿ. ಪರಮಾತ್ಮನು ಇಂದಿನಿಂದ ನಿನ್ನನ್ನು ನನ್ನ ವಶಪಡಿಸಿದ್ದಾನೆ'[೯] ಎಂದು ವಧು ಕೂಡಾ ಹೇಳಿರುವುದು ವಧುವಿಗಿದ್ದ ಸ್ವಾತಂತ್ರ್ಯವನ್ನು ಮುಂದಿಡುವುದಾಗಿದೆ. ಇಲ್ಲಿ ಗಂಡಿಗೆ ಮಾತ್ರ ಪ್ರಾಧಾನ್ಯ ಕೊಡುವ ಏಕಮುಖೀ ಭಾವ ಇಲ್ಲ. ಕೈಹಿಡಿದ ಗಂಡನಿಗೆ ಒತ್ತಾಸೆಯಾಗಿ ಅವನ ಅಡಿಯಾಳಾಗಿರಬೇಕು ಎಂಬಂತೆ ಇಲ್ಲಿ ಹೆಣ್ಣು ರೂಪಿತಳಾಗಿಲ್ಲ. ಇದ್ದರೂ ಒಬ್ಬರಿಗೊಬ್ಬರು ಅರ್ಪಿತವಾಗುವಂತೆ ನೋಡಿಕೊಳ್ಳಲಾಗಿದೆ. ಅಂತಹ ಸಂದರ್ಭಗಳೇ ಚಾರಿತ್ರಿಕವಾಗಿ ಮಹತ್ವದ ಆಯಾಮಗಳಾಗಿವೆ.

ಋಗ್ವೇದವು ಹೆಣ್ಣಿಗೆ ಪತಿಯ ಮನೆಯಲ್ಲಿ ಪ್ರೀತಿಯಿಂದಿರುವಂತೆ ಬೋಧಿಸುತ್ತದೆ. ಅದು ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗುವ ಯಾರಿಗೇ ಆದರೂ ಹೇಳಲೇ ಬೇಕಾದ ಒಳ್ಳೆಯ ಮಾತು, ಸಲಹೆಯಾಗಿದೆ. ಇಲ್ಲಿ ಬಂದ ಎಲ್ಲ ಕಟ್ಟಳೆಗಳಿಗೂ ಸಹನೆಯ ತಲೆ ಕೊಡು ಎಂದು ಉಪದೇಶಿಸದೇ ಇರುವುದು ಮಾನವೀಯ ಅಂಶವಾಗಿದೆ.

ಪಾವಿತ್ರ್ಯದ ಕುರಿತು ಅಂದು ತಳೆಯಲಾದ ನಿಲುವಿನಲ್ಲೇ ಆಕೆಯ ಉದಾರವಾದೀ ಆಶಯಗಳಿವೆ. ಆಕೆಗೆ ವಿರುದ್ಧವಾಗಿ ನಡೆದ ದೈಹಿಕ ಆಕ್ರಮಣದಿಂದ ಆಕೆ ಅಪವಿತ್ರಳಾಗುವುದಿಲ್ಲ

---

೮ ಪು. ೬೬ ಸ್ತ್ರೀ ಪ್ರಪಂಚ, ಡಾ. ಎಚ್. ಎಸ್. ನಂಜುಂಡಸ್ವಾಮಿ ೧೯೯೩

೯ ಅದೇ ಪು. ೭೦

ಎನ್ನುವುದು ಆಕೆಯ ಬದುಕಿಗೆ ಕೊಂಚ ಧೈರ್ಯ ಕೊಟ್ಟಂತಾಗಿದೆ. ಆದರೆ ಗರ್ಭನಿಂತರೆ ಮಾತ್ರ ಅಪವಿತ್ರಳಾಗಿ ಬಿಡುವುದು, ಹಾಗೇ ಗುರುತಿಸುವುದು ಕಳವಳಕಾರಿಯಾಗಿದೆ. ಅಂದರೆ ಪಾವಿತ್ರ್ಯ ನಿಂತಿರುವುದು ಅವಳ ಗರ್ಭಕೋಶದ ಆಧಾರದಲ್ಲಿಯೇ ಎಂದಾಗುತ್ತದೆ. ಇಲ್ಲಿ ಋತುಚಕ್ರ ಹೆಣ್ಣಿನ ಪಾವಿತ್ರ್ಯವನ್ನು ನಿರ್ಧರಿಸುವ ಮಾನದಂಡವಾಗಿದೆ. ಆದಾಗ್ಯೂ ಇಲ್ಲಿ ಸ್ತ್ರೀಯನ್ನು ಅತಂತ್ರಳೆಂದು ತಿರಸ್ಕರಿಸುವವರನ್ನು ಪಾಪಿಗಳು, ಧರ್ಮದ್ರೋಹಿಗಳು ಎಂದು ಹೀಗಳೆದಿರುವುದು ಕೂಡಾ ಲಕ್ಷ್ಯಾರ್ಹವಾಗಿದೆ. ಇದು ಸ್ತ್ರೀಗೆ ಸಂದ ಮಾನ್ಯತೆಯಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ

ದುರಂತವೆಂದರೆ ವೇದ ರಚನಾಕಾರರ ಸಮಾನತೆಯ ತತ್ವಗಳೆಲ್ಲ ಮನುವಿನಂತೆ ಸ್ಮೃತಿಕಾರರ ಹುಟ್ಟಿನೊಂದಿಗೆ ಮರೆಯಾಗತೊಡಗಿದುದು. ಪುರುಷಪರ ಆಲೋಚನೆಗಳು ಸ್ತ್ರೀ ವಿರೋಧಿ ಹಂತಕ್ಕೆ ತಿರುಗಿ ಆಕೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವತ್ತ ಹರಿದುದು ಅದುವರೆಗೆ ಅವಳಿಗಿದ್ದ ವಿದ್ಯೆಯ ಅವಕಾಶವನ್ನು ಕಸಿದು, ಅವಳನ್ನು ಪ್ರಜ್ಞಾಪೂರ್ವಕವಾಗಿ ದೂರ ಇರಿಸಲಾಯಿತು. ಭಾರತೀಯ ಸಂಸ್ಕೃತಿ ಎನ್ನುವ ಚೌಕಟ್ಟಿನಲ್ಲಿ ಹೆಣ್ಣನ್ನು ಪ್ರತಿಷ್ಠಾಪಿಸುವ ಮೂಲಕ ಆಕೆ ಗಂಡನಿಗಾಗಿ ಇರುವ ವಸ್ತು ಎಂಬುದನ್ನು ಬಲವಾಗಿ ಮೂಡಿಸಲಾಯಿತು. ಲಜ್ಜೆಯನ್ನು ಅವಳಲ್ಲಿ ಪ್ರಯತ್ನಪೂರ್ವಕವಾಗಿ ತರಲಾಯಿತು. ಸದಾ ನಾಚಿಕೆಯಿಂದ ತಲೆ ತಗ್ಗಿಸಿಯೇ ಇರುವಂತೆ ಪ್ರೇರಿಸಲಾಯಿತು. ಪರಸ್ಪರ ದಿಟ್ಟಿಸಿ ನೋಡುವುದನ್ನು, ಅದರಲ್ಲೂ ಹೆಣ್ಣು ದಿಟ್ಟಿಸಿ ನೋಡುವುದನ್ನು ಆಕ್ಷೇಪಿಸಲಾಯಿತು. ಹೀಗೆಂದರೆ ಗಂಡಿನ ಹದ್ದು ಮೀರಿದ ಕಾಮಾತುರತೆಗೆ ಹೆಣ್ಣು ಬಲಿಯಾಗುವುದನ್ನು ತಪ್ಪಿಸಲು ಇಂಥ ನಿರ್ಬಂಧಗಳನ್ನೆಲ್ಲ ಹೇರಲಾಯಿತು.

ಗಂಡನ ಸುಖ-ದುಃಖಗಳಲ್ಲಿ ಸಮಭಾಗಿಯಾಗಿರುವಂತೆ, ವ್ಯರ್ಥವಾಗಿ ಯಾರಲ್ಲೂ ಹರಟದಂತೆ ಹೆಣ್ಣಿಗೆ ಹಿತೋಪದೇಶ ನೀಡುವುದರೊಂದಿಗೆ ಆಕೆ ಕೋಪಿಸಿಕೊಳ್ಳದೇ ದಬ್ಬಾಳಿಕೆ ಮಾಡದೇ, ಶಿಶುಪಾಲನೆ ಅತಿಥಿ ಸತ್ಕಾರಗಳಲ್ಲೇ ತೃಪ್ತಿಪಟ್ಟುಕೊಳ್ಳಬೇಕೆಂದು ಮೈತುಂಬ ಬಟ್ಟೆ ಹೊದ್ದು, ನಿಶ್ಯಬ್ದ ಹೆಜ್ಜೆಇಟ್ಟು, ಇತರರೊಂದಿಗೆ ಅಂತರವಿಟ್ಟುಕೊಂಡೇ ಇರಬೇಕೆಂದು ಸಂಸ್ಕೃತಿಯ ವಕ್ತಾರರು ಆದೇಶಿಸುತ್ತಾರೆ. ಅದನ್ನು ಪಾಲಿಸಿದವರು ಸಮಾಜದಲ್ಲಿ ಮಾನ್ಯರಾಗುವ, ಪಾಲಿಸದವರು ತುಚ್ಛರಾಗಿ ಕಾಣುವ ಪರಿಸರ, ಆಲೋಚನೆಗಳ ನಡುವೆ ಹೆಣ್ಣು ಸಿಕ್ಕಿ ಬಳಲುವ ವಾತಾವರಣ ನಿರ್ಮಾಣವಾದದ್ದು ಇಲ್ಲಿ ವೇದ್ಯವಾಗುತ್ತದೆ.

ಹೆಂಗಸರಿಗೆ ನೂರು ದೇವರ ಹಂಗು ಬೇಕಿಲ್ಲ. ಅವರಿಗೆ ಪತಿಯೇ ಪರದೈವ. ಆದುದರಿಂದ ಪತಿಯನ್ನು ನಂಬಿ ಅವನಿಗೆ ವಿಧೇಯಳಾಗಿ ಅವನನ್ನು ಅನುಸರಿಸುವುದೇ ಅವಳಿಗೆ ಭೂಷಣ.

ಅದರಲ್ಲೇ ಅವಳಿಗೆ ಪತಿಯ ದೈವಾನುಗ್ರಹವಾಗಿ ಬದುಕು ಸಾರ್ಥಕವಾಗುತ್ತದೆ ಎಂದು ಮನೋಗತವಾಗಿಸಲಾಯಿತು. ಹೆಣ್ಣನ್ನು ಗುಲಾಮಳಾಗಿಸಿಕೊಳ್ಳುವಲ್ಲಿ ಈ ಬಗೆಯಲ್ಲಿನ ಪುರುಷಶಾಹಿ ನಡೆಸಿದ ಕಸರತ್ತು ಅತ್ಯಂತ ಪರಿಣಾಮಕಾರಿಯೇ ಆಯಿತು. ಸ್ತ್ರೀ ತನ್ನ ಪಾಲಿನ ದೇವರಾದ ಪತಿಯ ಇಚ್ಛಾ ಪೂರೈಕೆಗಾಗಿ ತನ್ನನ್ನು ಮಾರಿಕೊಂಡಿದ್ದೂ ಆಯಿತು.

ಸ್ಕಂಧ ಪುರಾಣದ ಕಾಶೀ ಕಾಂಡದಲ್ಲಿ

ವ್ರತೋಪವಾಸ ನಿಯಮಂ ಪತಿಮುಲ್ಲಂಘ್ಯ ಮಾಚರೇತ್

ಆಯುಷ್ಯಂ ಹರತೇ ಭರ್ತ್ರುಃ ಮೃತಾನಿರಯ ಮೃಚ್ಛತಿ[೧೦],

('ಪತಿಯ ವಾಕ್ಯ ಉಲ್ಲಂಘಿಸಿ ವ್ರತೋಪವಾಸ ಪೂಜೆ ಮಾಡಿದರೆ ಗಂಡನ ಆಯುಷ್ಯ ಕ್ಷೀಣವಾಗುವುದು ಮಾತ್ರವಲ್ಲ ಸತ್ತ ಮೇಲೆ ಆಕೆ ನರಕವಾಸಿಯಾಗುತ್ತಾಳೆ') ಎಂದೂ,

ತೀರ್ಥ ಸ್ನಾನಾರ್ಥಿನೀ ನಾರಿ ಪತಿಪಾದೋದಕಂ ಪಿಬೇತ್

ಶಂಕರಾದಯ ವಿಷ್ಣೋರ್ವಾ ಪತಿರೇಕೋಂಧಿಕ ಸ್ತ್ರೀಯಾಂ[೧೧]

('ತೀರ್ಥಸ್ನಾನದಲ್ಲಿ ಇಚ್ಛೆಯಾದವಳು ಪತಿಪಾದ ತೀರ್ಥವನ್ನು ಕುಡಿಯಬೇಕು. ಏಕೆಂದರೆ ಶಿವ ವಿಷ್ಣು ಮೊದಲಾದ ಎಲ್ಲ ದೇವರಕಿಂತಲೂ ಪತಿಯೇ ಶ್ರೇಷ್ಠ') ಎಂದು ವಾದಿಸಿರುವುದು ಇಲ್ಲಿ ಉಲ್ಲೇಖನೀಯವಾಗಿದೆ. ಅದಕ್ಕವಳು ಅನಿವಾರ್ಯವಾಗಿ ಒಪ್ಪಿ ನಡೆಯಬೇಕಾಯಿತು.

ಋಷಿಗಳು ಹಾಕಿಕೊಟ್ಟ ಆರ್ಷ ವಿವಾಹ ಪದ್ಧತಿಯಿಂದ ಸಾಧಿತವಾಗುವ ಭಾವೈಕ್ಯದ ತತ್ವ ಕುಸಿಯತೊಡಗಿತು. ಪರಿಣಾಮವಾಗಿ ಹೆಣ್ಣು ಗಂಡಿಗೆ ಬೇಕಾದಂತೆ ಮಾತ್ರ ಇರುವಂತಾಯಿತು. ವಿದ್ಯಾಭ್ಯಾಸ, ವೇದಾಧ್ಯಯನಕ್ಕೆ ಬೇಕಾಗಿದ್ದ ಉಪನಯನ ಸಂಸ್ಕಾರ ಎಲ್ಲವೂ ಅವಳಿಗೆ ನಿಷಿದ್ಧವಾಯಿತು. ಗಂಡಿನ ಕುತಂತ್ರ ಅವಳ ಬದುಕನ್ನು ಅಲ್ಲೋಲ ಕಲ್ಲೋಲಗೊಳಿಸಿತು. ಸ್ತ್ರೀಯ ಸ್ವಂತಿಕೆಗೆ ಅಂಕುಶವಿಡುವ ನಿಟ್ಟಿನಲ್ಲಿ ಪತ್ನಿಯನ್ನು ಧಿಕ್ಕರಿಸಿ ಹೋಗದಂತೆ ನಿರ್ಬಂಧಿಸಲಾಯಿತು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ಕೊಟ್ಟಲ್ಲೇ ಬಿದ್ದಿರುವಂತೆ ಆಜ್ಞೆ ಮಾಡಲಾಯಿತು. ಜತೆಗೆ ಕನ್ಯಾದಾನದ ಮೂಲಕವೂ ಹೆಣ್ಣಿನ ಮಹತ್ವವನ್ನು ನಿರಾಕರಿಸಲಾಯಿತು. ದಾನಪಡೆದುಕೊಳ್ಳುವವರನ್ನು ವೈಭವೀಕರಿಸಲಾಯಿತು. ಹೀಗೆ ದಾನಕೊಳ್ಳುವುದರಿಂದಾಗಿಯೂ ಹೆಣ್ಣಿನ ಮೇಲಿರುವ ಹೆತ್ತವರ ಹಕ್ಕನ್ನು ಭಾವನೆಗಳನ್ನು ಕಸಿದುಕೊಳ್ಳಲಾಯಿತು. ಅರ್ಥಾತ್ ಹೆಣ್ಣನ್ನು ಪಡೆದುಕೊಂಡವರ ಸ್ವತ್ತನ್ನಾಗಿ ಮಾಡಿಕೊಳ್ಳಲಾಯಿತು.

ಮನುಸ್ಮೃತಿಯಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಮನು ಹೇಳಿರುವುದು ಅಂದಿನ ಪುರುಷರ ಸ್ತ್ರೀ ವಿರೋಧಿ ನಿಲುವನ್ನು ಪ್ರತಿನಿಧಿಸುತ್ತದೆ. ಕನ್ಯಾದಾನದ ಜೊತೆಗೆ ಕನ್ಯತ್ವ ಮೀರುವ

---

೧೦ ಪು.೪೬ ಪತಿವ್ರತಾ ಲಕ್ಷಣ, ಗರತಿ, ಆತ್ಮಾರಾಮ ೧೯೫೧

೧೧ ಅದೇ ಪು.೪೭

ಮೊದಲೇ ಗಂಡಿಗೆ ಒಪ್ಪಿಸಬೇಕಾದ ತುರ್ತು, ಅಲ್ಲದಿದ್ದರೆ ಬಹಿಷ್ಕಾರಕ್ಕೊಳಗಾಗಬೇಕಾದ ನಿರ್ಬಂಧ ಹೆಣ್ಣನ್ನು ಮತ್ತಷ್ಟು ಅತಂತ್ರಗೊಳಿಸಿತು. ಅಂದರೆ ತನ್ನನ್ನು ಪ್ರಶ್ನಿಸಬಾರದವಳೇ ತನಗೆ ಪತ್ನಿಯಾಗಬೇಕು, ತನ್ನ ನಿರ್ಲಜ್ಜ ವ್ಯವಹಾರಗಳು ಸರಾಗವಾಗಿ ನಡೆಯಬೇಕು ಎಂದಾದರೆ ಪತ್ನಿ ಮುಗ್ಧೆಯಾಗಿರಬೇಕು ಎಂದುಕೊಂಡ ಗಂಡಸಿನ ಸ್ವಾರ್ಥ ಇಲ್ಲಿ ವಿಜೃಂಭಣೀಯ.

ಮದುವೆ ಸಂದರ್ಭದಲ್ಲಿ ಕೊಡಲಾಗುತ್ತಿದ್ದ ತಿರ(ಕನ್ಯಾಶುಲ್ಕ)ಪದ್ಧತಿಯ ಹಿಂದೆ ಹೆಣ್ಣು ಹೆತ್ತವರಿಗೆ ಈ ಹಿಂದೆ ಕೊಡಲಾಗುತ್ತಿದ್ದ ಗೌರವವನ್ನು ಪ್ರತಿಬಿಂಬಿಸುವುದಾಗಿದೆ. ಅಲ್ಲದೇ ಹೆಣ್ಣಿನ ಸಂಖ್ಯೆ ಕಡಿಮೆ ಇದ್ದು, ಅವಳನ್ನು ಪಡೆಯುವುದಕ್ಕೆ ಅನಿವಾರ್ಯವಾಗಿ ಕೊಡುವ ಪದ್ಧತಿಯಾಗಿತ್ತು ಅದು.

ಭಾರತೀಯ ಸಂಸ್ಕೃತಿ ಎಂದು ಕರೆಸಿಕೊಳ್ಳುತ್ತಿರುವ ಬದುಕಿನ ರೀತಿಯನ್ನು ತೆಗೆದುಕೊಂಡರೆ ಅಲ್ಲಿ ಹೆಣ್ಣು ಗಂಡಿನ ಭೇದದ ತೀವ್ರತೆಯ ಅನನ್ಯ ಮುಖಗಳು ತೆರೆದುಕೊಳ್ಳುತ್ತವೆ. ಗಂಡು ಹೇಗಿದ್ದ ಎಂಬುದನ್ನು ಬದಿಗಿಟ್ಟು ಹೆಣ್ಣು ಬದುಕಿದ ರೀತಿಯ ಮೂಲಕ ಅಂದಿನ ಸಂದರ್ಭವನ್ನು ಪ್ರತಿನಿಧಿಸಿರುವುದನ್ನು ಚರ್ಚಿಸಬಹುದಾಗಿದೆ. ಹೆಣ್ಣೆಂದರೆ ಮೈಲಿಗೆಯಾಗಿ ಕಾಣ ಹೊರಡುವ ಮಂದಿಗಳ ಮಧ್ಯೆ ಆಕೆ ಹಾಗಿರಬೇಕಾದುದು ಲೈಂಗಿಕ ಬಳಕೆಯ ಹಿನ್ನಲೆಯಿಂದಲೇ. ಪುರುಷನಿಂದ ನಿಗ್ರಹಿಸಲ್ಪಡುವ ತಾನು ಲೈಂಗಿಕ ನೆಲೆಯಲ್ಲಿ ದೂರತಳ್ಳುತ್ತಿರುವುದಕ್ಕೆ ಸಾಕ್ಷಿಯಾಗುತ್ತಾಳೆ. ಮುಟ್ಟಾದಾಗ, ಹೆತ್ತಾಗ, ವಿಧವೆಯಾದಾಗ, ಅತ್ಯಾಚಾರದಿಂದಾಗಿ ಗರ್ಭ ಧರಿಸಿದಾಗ ಆಕೆಯನ್ನು ಕೆಲವು ಸಮಯ ಮನುಷ್ಯ ಸ್ಪರ್ಶದಿಂದ ಮಾನಸಿಕ ಸ್ಪರ್ಶದಿಂದ ದೂರವಿರಿಸಲಾಗುತ್ತದೆ. ಹೀಗೆ ಮಾಡಿದಾಗ ಆಕೆ ಒಂದೆಡೆ ಹೆಣ್ತನದ ಗೌರವಕ್ಕೆ ಪಕ್ಕಾಗುವ, ಮತ್ತೊಂದೆಡೆ ಅಸ್ಪೃಶ್ಯಳಾಗಿ ದೂರ ತಳ್ಳಿಸಿಕೊಳ್ಳುವ ಕ್ರಿಯೆಗೆ ಒಳಗಾಗುತ್ತಾಳೆ. ಇದೇ ಸಂದರ್ಭದಲ್ಲಿ ಅದನ್ನು ವಿರೋಧಿಸಲಾಗದ ಸಂಕಷ್ಟದ ಸ್ಥಿತಿಯು ಅವಳದ್ದಾಗಿರುತ್ತದೆ. ಅಲ್ಲದೇ ಲೈಂಗಿಕತೆ ಕುರಿತು ಅತಿಯಾದ ಗೌರವ ಕಲ್ಪನೆ, ಅದನ್ನು ಪಾಲಿಸುವುದೇ ಹೆಣ್ತನದ ಪರಮ ಧ್ಯೇಯ ಎಂಬ ಭಾವನೆ ಮೂಡಿಸಿದ ಈ ಸಂಸ್ಕೃತಿಯೊಳಗಿನ ಹೆಣ್ಣು ಅದು ಸುಳ್ಳೆಂದುಕೊಂಡು ಮೀರಿ ನಿಲ್ಲುವುದು ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಗಂಡು ಕೂಡಾ ಆ ನೆಲೆಯಲ್ಲಿ ತನ್ನ ಅಭಿಪ್ರಾಯ ನಡವಳಿಕೆ ಬದಲಾಯಿಸಿಕೊಳ್ಳುವುದು ಕಷ್ಟವೇ. ಹೆಣ್ಣಿನ ಹುಟ್ಟೇ ಲೈಂಗಿಕ ಕ್ರಿಯೆಯ ಮೂಲಕ ಸಂತಾನ ಪ್ರಾಪ್ತಿಗೆ ಎಂದಿರುವಾಗ ಹೆಣ್ಣನ್ನು ಬಿಟ್ಟಿರಲಾರದ ಗಂಡು ಅವಳನ್ನು ತಾಯಿಯಾಗಿ ಕಾಣುತ್ತಾನೆ. ಅದು ಗಂಡು ತನ್ನ ಲಯ ತಪ್ಪಿದ ಕಾಮಾತುರಕ್ಕೆ ಹಾಕಿಕೊಳ್ಳುವ ಸೋಗಿನ ಕಡಿವಾಣ. ಒಟ್ಟನಲ್ಲಿ ಹೆಣ್ಣು ಹೆಣ್ಣಾಗಿ ದಿನ ಕಳೆಯಲಾಗದೇ ಚಿಕ್ಕಂದಿನಿಂದಲೇ ಅಮ್ಮ ಎಂದು ಕರೆಯಿಸಿಕೊಳ್ಳುತ್ತಾಳೆ. ಇದರಲ್ಲಿ ಅವಳ ಮುಗ್ಧತೆ, ಖುಷಿ, ಲವಲವಿಕೆಯ ಕಸಿಯುವಿಕೆ ಇದೆ. ಇಂದಿಗೂ ಅದೇ ಪರಂಪರೆ ಬೆಳೆದು ಬಂದಿದೆ. ಭಾರತೀಯ ಹೆಣ್ಣನ್ನು ಮಗುವಿದ್ದಾಗಿನಿಂದಲೇ ಅಮ್ಮನನ್ನಾಗಿ ಗುರುತಿಸುವಲ್ಲಿ ಗಂಡು ಮಗುವಾಗುವುದನ್ನು ಗ್ರಹಿಸಬೇಕು. ಎಂದರೆ ಗಂಡು ಇಲ್ಲಿ ಮಗುವಾಗಿಬಿಡುವ

ಮೂಲಕ ಹೆಣ್ಣಿಗೆ ಜವಾಬ್ದಾರಿಯನ್ನು ಹೊರಿಸುವುದಾಗಿದೆ. ತಂದೆತನದಿಂದ ಪಾರಾಗುವ ಗಂಡಿನ ಜಾಣತನದ ಪಲಾಯನವಾದ ಈ ಮಗುವಾಗಿ ಬಿಡುವುದರಲ್ಲಿ ಇದೆ.

ಇದೇ ಸಂದರ್ಭದಲ್ಲಿ ಪಾಶ್ಚಾತ್ಯ ಬದುಕಿನಲ್ಲಿ ಹೆಣ್ಣು -ಗಂಡಿನ ಸ್ಥಾನಗಳ ಕಡೆಗೆ ಗಮನ ಹರಿಸಿದರೆ, ಅಲ್ಲಿ ಅವರು ಪರಸ್ಪರ ಸಮಾನ ಶಕ್ತಿಯ ವಿಭಿನ್ನ ಲಿಂಗಿಗಳಾಗಿ ಮಾತ್ರ ಕಾಣಿಸಿಕೊಳ್ಳುತ್ತಾರೆ. ಇಲ್ಲಿ ಹೆಣ್ಣಿನ ಬದುಕು ಸಮಾನತೆಯನ್ನು ಪ್ರತಿನಿಧಿಸಿದ ರೀತಿ ಭಾರತೀಯ ಸಂದರ್ಭಕ್ಕಿಂತ ತೀರ ಭಿನ್ನವಾದುದಾಗಿದೆ. ಪೋಲಂಕಿ ರಾಮಮೂರ್ತಿ ಅವರು , 'ಅಮ್ಮ, ಅಕ್ಕ, ತಂಗಿ ಎಂದು ಕರೆದ ಮಾತ್ರಕ್ಕೆ ಅದು ದೂರವಾಗುವುದಿಲ್ಲ. ಅಲ್ಲಿ ಅವರಲ್ಲಿ ಹೆಣ್ಣುತನವನ್ನು ಒಪ್ಪಿಕೊಳ್ಳುತ್ತದೆ. ಹೆಣ್ಣೆಂಬುದಷ್ಟೇ ಸತ್ಯ ಎಂಬ ವಾಸ್ತವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ಈ ಸಂಸ್ಕೃತಿ ಹುಟ್ಟಿನೊಂದಿಗೆ ಬೆಳೆದ ಲೈಂಗಿಕತೆ ಮನುಷ್ಯನ ಹುಟ್ಟಿನೊಂದಿಗೆ ಹುಟ್ಟಿ, ಅವನೊಂದಿಗೆ ಬೆಳೆದು, ಅವನ ಅಂತ್ಯದೊಂದಿಗೆ ಅಂತ್ಯವಾಗುತ್ತದಾದರೂ ಮಾನಸಿಕ ವಿಚಾರ ತಲೆಕೆಳಗಾಗುವುದನ್ನು ಕೂಡಾ ಅಲ್ಲಗಳೆಯಲಾಗುವುದಿಲ್ಲ'[೧೨] ಎಂಬ ವಾದ ಮಂಡಿಸಿರುವುದನ್ನು ಒಪ್ಪಬಹುದಾಗಿದೆ. ಲೈಂಗಿಕತೆ ಕುರಿತ ಚಿಂತನೆ ಎಂಥ ಅಪಾಯಕಾರಿ ಎಂಬುದನ್ನು ಅವರು ಚರ್ಚಿಸುತ್ತಾ, ತಾಯಿಯ ಶವ ಸಂಸ್ಕಾರದ ಸಂದರ್ಭದಲ್ಲಿ ಮಗನಿಂದ ಪುರೋಹಿತ ಹೇಳಿಸುವ 'ಹೇ ತಾಯೇ, ನಾನು ಶಿಶುವಾಗಿ ನಿನ್ನ ಸ್ತನ ಪಾನ ಮಾಡುತ್ತಾ, ತಿಳಿಯದೇ ನಿನ್ನ ಸ್ತನಗಳ ಮೇಲೆ ಕೈಹಾಕಿ ಮರ್ದನ ಮಾಡಿದ್ದೇನೆ. ಅರಿಯದೇ ಮಾಡಿದ ಈ ಘೋರ ಪಾಪವನ್ನು ಕ್ಷಮಿಸು ತಾಯೇ'[೧೩] ಎಂಬ ಅರ್ಥ ಬರುವ ಶ್ಲೋಕವನ್ನು ಉಲ್ಲೇಖಿಸಿರುವುದರ ಹಿಂದಿರುವ ಸೂಕ್ಷ್ಮತೆ, ತಾಯಿ ಮಗುವಿನ ಸಂಬಂಧದ ಸಂದರ್ಭದಲ್ಲಿ ಲೈಂಗಿಕ ಕ್ರಿಯೆಯನ್ನೇ ಹುಡುಕುವ ಗಂಡಿನ ಮನಃಸ್ಥಿತಿಯನ್ನು ಅರ್ಥೈಸಿಕೊಳ್ಳಬಹುದು. ನಿಷಿದ್ಧ ಲೈಂಗಿಕ ಸಂಬಂಧ ಅಥವಾ (ಮಾತೃಗಮನ) ತಾಯಿಯನ್ನು ಸೇರಿದ ಸಂದರ್ಭವನ್ನು ಪೋಲಂಕಿ ಅವರು 'ತಾಯ್ಗಂಡತನ' ಎಂದು ಕರೆಯುತ್ತಾರೆ. ಈ ಆರೋಪದ ಹಿಂದೆ ಗಂಡಿನ ಮನಃಸ್ಥಿತಿ, ತಾಯಿಯ ಜೊತೆಗಿನ ಸಂದರ್ಭದಲ್ಲೂ ಆರೋಪಿಸುವ ಲೈಂಗಿಕತೆಯ ತೀವ್ರತೆ ಅನೈಸರ್ಗಿಕ ಮತ್ತು ಅವೈಚಾರಿಕ ವಿಚಾರವೂ ಆಗಿದೆ. ಮಗು ಅಲ್ಲಿ ಹುಟ್ಟಿನೊಂದಿಗೆ ಲೈಂಗಿಕ ಕ್ರಿಯೆಗಳನ್ನು ಅರಿಯದೆ ಮಾಡುತ್ತದೆ. ಮತ್ತು ತಾಯಿ ಅದಕ್ಕೆ ಒಳಗಾಗುತ್ತಾಳೆ ಎಂಬಲ್ಲಿ ಗಂಡು ಯಾವತ್ತೂ ಮಗುವಾಗಿ, ಸುಖ ಪಡೆಯುವವ, ಹೆಣ್ಣು ಯಾವತ್ತೂ ಅದನ್ನು ಕೊಡುವವಳಾಗಿ ಕಾಣುವ ಮನಸ್ಥಿತಿ ಇದೆ. ಮತ್ತು ತಾಯಿಯ ಜೊತೆಗೆ ಲೈಂಗಿಕ ಸಂಬಂಧ ಸಾಧುವಲ್ಲ, ಅದು ಅಪರಾಧ ಕ್ರಿಯೆ ಎಂಬ ಪ್ರಜ್ಞೆಯನ್ನು ಇಲ್ಲಿ ಮೂಡಿಸಲಾಗಿದೆ.

---

೧೨ ಪು. ೧೦೮ ಸೀತಾಯಣ, ಪೋಲಂಕಿ ರಾಮಮೂರ್ತಿ ೧೯೮೪

೧೩. ಅದೇ ಪು. ೧೦೮

ಹೀಗೆ ಹೇಳಿದರೂ ಅನುಸೂಯ ಕಥೆಯ ಅನಸೂಯೆ ಬ್ರಹ್ಮ, ವಿಷ್ಣು ಮಹೇಶ್ವರರ ನಡುವೆ ಬತ್ತಲಾಗಬೇಕಾದಾಗ ಆಕೆ ಅವರನ್ನು ಶಿಶುವಾಗಿ ಪರಿವರ್ತಿಸಿ ತಾನು ಮಕ್ಕಳನ್ನು ಪಡೆದಿದ್ದಾಳೆ, ಋಗ್ವೇದದ ಯಮಿ ಅಣ್ಣನೊಂದಿಗೆ ದೈಹಿಕ ಸಂಬಂಧ ಹೊಂದಿದ್ದಾಳೆ. ಜೈನರಲ್ಲಿ ಆದಿ ತೀರ್ಥಂಕರರ ವರೆಗೆ ಅವಳಿ ಜವಳಿ ಸಹೋದರ ಸಹೋದರಿ ಒಳಗೆ ಸೃಷ್ಟಿಕ್ರಿಯೆ ನಡೆದಿದೆ, ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬ್ರಹ್ಮ ತನ್ನನ್ನು ಇಬ್ಭಾಗ ಮಾಡಿ ನಾನಾ ಪ್ರಾಣಿ, ಗಾಳಿಯೊಂದಿಗೆ ಹಾಗೂ ತನ್ನನ್ನು ತಾನೇ ಗಂಡು ಹೆಣ್ಣಾಗಿ ವಿಭಾಗಿಸಿಕೊಂಡು ಕೂಡಿದ ಮಾಹಿತಿ ಸಿಗುತ್ತದೆ. ಪುರುಷ ಸೂಕ್ತದ ವಿರಾಟ್ ಪುರುಷ ತನ್ನನ್ನೇ ಇಬ್ಭಾಗ ಮಾಡಿ ಗಂಡು ಹೆಣ್ಣನ್ನು ಸೃಷ್ಟಿಸಿ, ಸೇರಿದ್ದಾನೆ. ಮುಂದುವರಿದು ನೋಡಿದರೆ ಸತಿಪತಿಗಳ ಕೂಡುವಿಕೆಯ ಅನಿವಾರ್ಯತೆಗೆ ಧಾರ್ಮಿಕ ಔನ್ನತ್ಯವನ್ನು ಎಳೆದು ತರಲಾಗಿದೆ. ಮಾತ್ರವಲ್ಲ ಅದು ಹೆಣ್ಣಿಗೆ ಒಪ್ಪಿತವೇ, ಅಲ್ಲವೇ ಎಂಬ ಚಿಂತನೆ ಅನಗತ್ಯವಾಗಿ ಕಂಡಿದೆ. ಇದನ್ನು ಶಾಸ್ತ್ರಬದ್ಧಗೊಳಿಸುವ ಮೂಲಕ ಸೃಷ್ಟಿಕ್ರಿಯೆಯನ್ನು ನಿಷ್ಕ್ರಿಯೆಗೊಳಿಸುವ ಪಾಪದಿಂದ ವಿಮುಕ್ತಿಗೊಳಿಸುವಲ್ಲಿ ಹೆಣ್ಣನ್ನೇ ಮತ್ತೆ ನಾನಾ ರೀತಿಯ ಒತ್ತಡಗಳಿಗೆ ಬಲಿಯಾಗಿಸಿರುವುದನ್ನು ಗ್ರಹಿಸಬಹುದಾಗಿದೆ. [೧೪]

ಹೆಣ್ಣನ್ನು ನಿಯಂತ್ರಣದಲ್ಲಿಡಲು ಹೆಣ್ಣು ಹೊಸ್ತಿಲಲ್ಲಿ ನಿಲ್ಲಬಾರದು, ಸುಳ್ಳುಹೇಳಬಾರದು. ಆಕೆಗೆ ಬಹುನಗು ಸಲ್ಲದು, ಆಕೆ ಬೀಸುವ ಕುಟ್ಟುವ ಕಲ್ಲಿನ ಮೇಲೆ ಕೂಡ್ರಬಾರದು, ಒನಕೆಯನ್ನು ತುಳಿಯಬಾರದು, ದಾಟಬಾರದು, ಪಾತಿವ್ರತ್ಯ ಧರ್ಮದಾಟಿ ಹೊರಗೆ ಕಾಲಿಟ್ಟರೆ ಜಾತಿ ಧರ್ಮಗಳನ್ನು ಕಳೆದಂತಾಗುವುದು ಎಂದೆಲ್ಲ ಹೇಳಿ ನಿಯಂತ್ರಿಸಿವೆ. ಎಂದರೆ ಹೆಣ್ಣು ಇವೆಲ್ಲ ಕಟ್ಟುಪಾಡುಗಳಿಗೆ ಒಳಗಾಗಿದ್ದಾಳೆ. ಅವಳೇ ಬಾಯಿಬಿಟ್ಟು ಏನನ್ನೂ ಹೇಳಿಕೊಳ್ಳದಿದ್ದರೂ ಅವಳ ಮೇಲಿನ ನಿರ್ಬಂಧಗಳೇ ಎಲ್ಲವನ್ನೂ ಖಚಿತಪಡಿಸುತ್ತವೆ.

ಧಾರ್ಮಿಕ ಎಳೆ, ಮೋಕ್ಷದ ಕುರಿತ ಅತೀವ ಆಸೆಯನ್ನು ಹೆಣ್ಣಿನಲ್ಲಿ ಹುಟ್ಟಿಸಿ, ಸತಿಯಾಗುವ ನಿಟ್ಟಿನಲ್ಲಿ ಆಕೆ ಕಠಿಣ ಪಾತಿವ್ರತ್ಯ ವ್ರತ ಕೈಗೊಳ್ಳುವಂತೆ ಪ್ರೇರಿಸುತ್ತದೆ. ಆಕೆ ಪತಿವ್ರತೆಯಾಗುವಲ್ಲಿ ಸತಿಯಾಗುವಲ್ಲಿ, ದಿನವಿಡೀ ಯಾಂತ್ರಿಕ ದುಡಿಮೆ ಮಾಡುವಲ್ಲಿ ಶಾಸ್ತ್ರವೇ ಹಾಕಿಕೊಟ್ಟ ವೇಳಾಪಟ್ಟಿ ಆಕೆಯ ಜೀವನವನ್ನೇ ನಿರ್ಧರಿಸಿಬಿಟ್ಟಿದೆ. ಎಂದರೆ ಆ ಮೂಲಕ ಆಕೆಯನ್ನು ಅಂಕೆಯಲ್ಲಿ ಇಡಹೊರಟ ಪುರುಷನ ತಂತ್ರಗಾರಿಕೆ ಇಲ್ಲಿ ಗೆದ್ದುಕೊಂಡಿದೆ.

ಹೆಣ್ಣಿನ ಒಟ್ಟು ಸ್ವಾತಂತ್ರ್ಯವನ್ನು ತಾಯ್ತನದ ಅಡಿಯಲ್ಲಿ ಅವಿತುಕೊಳ್ಳುವಂತೆ ಮಾಡಿದ್ದು ಪರಿಸರ. ಹೆಣ್ಣನ್ನು ಕುರಿತ ಗಂಡಿನ ಕೀಳರಿಮೆ, ಅವಳ ಮೇಲ್ಮೆ ಕುರಿತ ಗಂಡಿನ ಮಾತ್ಸರ್ಯದ ನಡುವೆ ಹೆಣ್ಣು ಸಿಲುಕಿದ್ದಾಳೆ. ಗಂಡಿನ ಎಲ್ಲ ನಿರ್ಬಂಧಕ್ಕೆ ಸೀಮಿತ ವಲಯದ ಕೆಲಸಗಳಿಗೆ ನಿಗದಿಸಿಕೊಳ್ಳುವಂತಾದದ್ದು ಅಂದಿನ ಹೆಣ್ಣಿನ ಬದುಕಿನ ಪರಿಸ್ಥಿತಿಯನ್ನು ಮುಂದಿಡುತ್ತದೆ. ಅಲ್ಲಿ ಆಕೆಗೆ ಪತ್ನಿ ಹಾಗೂ ತಾಯಿಯಾಗಿ ನಿರ್ವಹಿಸುವ ಕೆಲಸವನ್ನು ನಿಗದಿಪಡಿಸಲಾಗಿದೆ.

---

೧೪ ಹೆಚ್ಚಿನ ಮಾಹಿತಿಗೆ ನೋಡಿ: ಸ್ತ್ರೀ ಪ್ರಪಂಚ ಡಾ. ಎಚ್.ಎಸ್. ನಂಜುಂಡಸ್ವಾಮಿ ೧೯೯೩

ಕೃತ, ತ್ರೇತಾ, ದ್ವಾಪರ ಯುಗಗಳು ಹಂತಹಂತವಾಗಿ ಲೈಂಗಿಕ ಬದುಕನ್ನು ಅತ್ಯಂತ ಖಾಸಗಿ ಅಥವಾ ಮುಚ್ಚುಮರೆಯ ಹಂತಕ್ಕೆ ಸರಿಸಿದ್ದರಿಂದಲೇ ವಿವಾಹ ಸಂಸ್ಥೆ ಕೂಡ ಛಿದ್ರಗೊಳ್ಳುತ್ತಾ ಹೋಯಿತು. ಈ ಮೂಲಕ ಸ್ತ್ರೀ- ಪುರುಷರ ದೈಹಿಕ ಸಂಬಂಧಕ್ಕೂ ಒಂದು ಸಾಂಸ್ಥಿಕ ರೂಪ ಕೊಡುವ ಅನಿವಾರ್ಯತೆ ಪ್ರಾಪ್ತವಾಯಿತು. ಅಂಥ ವಿವಾಹ ಸಂಸ್ಥೆಯ ಕುರಿತಂತೆ ವಿ. ಮಣಿಮಾಲಿನಿ ಅವರು, 'ವಿವಾಹವು ವ್ಯವಸ್ಥಿತ ಸಮಾಜದ ಮೂಲಭೂತ ಸಂಸ್ಥೆಗಳಲ್ಲಿ ಒಂದು. ಅದು ನೈತಿಕ ಶಾರೀರಿಕ, ಭಾವನಾತ್ಮಕ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳಲ್ಲಿ ಒಂದು. ಇದು ಶಾರೀರಿಕ ಭೇದಕ್ಕಿಂತ ಹೆಚ್ಚಾಗಿ ಸಂಸ್ಕೃತಿಯೊಂದರ ಪುರುಷ ಪಕ್ಷಪಾತಿ ಧೋರಣೆಯನ್ನು ತೋರಿಸುತ್ತದೆ'[೧೫] ಎಂದಿರುವಲ್ಲಿ ಪುರುಷನ ಏಕಮುಖ ದೃಷ್ಟಿಕೋನದ ಅಧಿಕಾರಶಾಹಿತ್ವದ ಮನಸ್ಸಿನ ಹಿನ್ನೆಲೆಯ ಗ್ರಹಿಕೆಯಿದೆ. ಹೆಣ್ಣಿನ ಗರ್ಭಧರಿಸುವ ಶಕ್ತಿಯೇ ಪಾತಿವ್ರತ್ಯ, ಶೀಲದ ಕೇಂದ್ರಬಿಂದುವಾಗಿರುವುದರಿಂದ ಪತ್ನಿಯಾದವಳು ತನಗೇ ಪರಿಪೂರ್ಣಳಾಗಿ ದಕ್ಕಬೇಕೆಂದು ಆಶಿಸುವ ಗಂಡು ಇತರ ಹೆಣ್ಣುಗಳನ್ನು ಅನುಭವಿಸುವುದಕ್ಕೆ ಪರಿಮಿತಿ ಹಾಕಿಕೊಳ್ಳುವುದಿಲ್ಲ. ಅಂಥ ಪರಿಸ್ಥಿತಿಯ ನಡುವೆಯೇ ಹೆಣ್ಣು ಶೀಲ ಕಾಪಾಡಿಕೊಳ್ಳಬೇಕಾದ ಕಟ್ಟುಪಾಡುಗಳಿಗೆ ಬಂಧಿತಳಾಗಿದ್ದಾಳೆ ಎಂದರೆ ಆಕೆಯ ಹಕ್ಕನ್ನು ಸಂಪೂರ್ಣ ಕಸಿದುಕೊಳ್ಳಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇಂಥ ಸಂದರ್ಭದ ಕುರಿತಂತೆ ವಿ. ಮಣಿಮಾಲಿನಿ ಅವರು 'ಪುರುಷ ವರ್ಗದ ಈ ಮೇಲ್ಮೆಯ ಮನೋಭಾವವು ಹೆಣ್ಣೊಬ್ಬಳ ಲೈಂಗಿಕ ಬದುಕಿನಲ್ಲಿ ಹಲವು ಮಂದಿ ಪಾಲುದಾರರನ್ನು ಸಹಿಸುವುದಿಲ್ಲ'[೧೬] ಎಂದು ವಿಶ್ಲೇಷಿಸಿದ್ದಾರೆ. ಇದು ವಸ್ತುಸ್ಥಿತಿಯನ್ನು ಪರಿಚಯಿಸುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯಲ್ಲಿ

ಜಾಗತಿಕ ಮಟ್ಟದಲ್ಲಿ ಕೂಡ ಸ್ತ್ರೀ ಹೆರುವುದಕ್ಕೆ ಸೀಮಿತಗೊಂಡಿದ್ದಾಳೆ. ಅಲ್ಲಿನ ಧರ್ಮಗ್ರಂಥಗಳಲ್ಲಿ, ಆಕೆಯನ್ನು ಅತ್ಯಂತ ಕ್ರೂರ ಮನೋಭಾವದಿಂದಲೇ ಕಾಣಲಾಗಿದೆ. ಅವಳು ಅಲ್ಲಿನವರ ಅನಾರೋಗ್ಯಕರ ಮನಃಸ್ಥಿತಿಯ ಪ್ರತಿನಿಧಿಯಾಗಿದ್ದಾಳೆ. ಪುರುಷನ ಆತ್ಯಂತಿಕ ತೀರ್ಮಾನ, ನಡವಳಿಕೆಗಳಿಗೆ ಸ್ತ್ರೀ ಬದ್ಧಳಾಗಿರಬೇಕಾಗಿತ್ತು. ಗಂಡನ ಅತಿಥಿ ಸತ್ಕಾರದ ಒಂದು ವಿಧಾನವಾಗಿ ಅವನ ಇಚ್ಛೆಯಂತೆ ಪುರುಷ ಅತಿಥಿಯ ದೈಹಿಕ ಕಾಮನೆಯನ್ನು ಪತ್ನಿಯಾದವಳು ತೀರಿಸಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಿರಿಯ ಕನ್ಯೆ ಅಥವಾ ಪತ್ನಿ ಬಲಿಯಾಗಬೇಕಾಗಿ ಬರುತ್ತಿತ್ತು. ಅಮೆರಿಕದ ಛಿನುಕ್ ಜಾತಿಯ ಜನರಲ್ಲೂ, ಏಶಿಯಾದ ಚುಕ್ಚಿ ಜನರಲ್ಲೂ ಈ ಪದ್ಧತಿ ಇದ್ದುದರ ಬಗ್ಗೆ ಪ್ರಸ್ತಾಪಿತವಾಗಿದೆ. ಕ್ಯಾಪ್ಟನ್ ಲೂಪಿಸ್, ಸರ್‌ಜಾನ್ ಲ್ಯೂಬಿಕ್ ಕೂಡ ಎಕ್ಸಿಮೋ ಜಾತಿ

---

೧೫ ಪು. ೩೬ ದ್ರೌಪದೀ ಸಮೀಕ್ಷೆ, ವಿ.ಕೆ. ಮಣಿಮಾಲಿನಿ ೧೯೯೬

೧೬ ಅದೇ ಪು. ೩೭

ಹಾಗೂ ಕಮುಸ್ಕಟಿಕಾ ನಿವಾಸಿಗಳವರೂ ಈ ಪದ್ಧತಿ ಪಾಲಿಸಿಕೊಂಡು ಬಂದದ್ದನ್ನು ನಮೂದಿಸಿದ್ದಾರೆ.[೧೭] ಇಲ್ಲಿ ಅತಿಥಿಗಳನ್ನು ಸಂತೃಪ್ತಿಗೊಳಿಸುವ ಹಿನ್ನೆಲೆಯಲ್ಲಿ ಹೆಣ್ಣಿನ ಬೇಕು, ಬೇಡಗಳ ಯೋಚನೆ ಇಲ್ಲ. ಅವಳು ಅದನ್ನು ಧರ್ಮದ ನೆಲೆಯಲ್ಲಿಯೇ ಒಪ್ಪಿಕೊಳ್ಳಬೇಕಾಯಿತು. ಧರ್ಮದ ಹೆಸರಿನಲ್ಲಿ ಪುರುಷ ಹೇರುವ ನಿಯಮಗಳಿಗೆ ಹೆಣ್ಣು ತನ್ನ ಮನಸ್ಸಿನ ಹೊರತಾದ ದೇಹವನ್ನು ಒಡ್ಡಿಕೊಳ್ಳುವಂತಾಯಿತು.

ಜಗತ್ತಿನ ವಿವಿಧೆಡೆಗಳ ಧರ್ಮ ಬೋಧಕರು, ಸಂತರು ಹೆಣ್ಣನ್ನು ವ್ಯಕ್ತಿಯಾಗಿ ಕಾಣಲಿಲ್ಲ. ಮಾನವೀಯ ನೆಲೆಯನ್ನೇ ಮೀರಿ ನಿಂತ ಅವರು ಅವಳನ್ನು ರೋಗಗ್ರಸ್ತ ಕಣ್ಣಿನಿಂದಲೇ ಕಂಡಿದ್ದಾರೆ. ಶಂಕರಾಚಾರ್ಯರು 'ಹೆಣ್ಣು ನರಕಕ್ಕೆ ದಾರಿ' ಎಂದು ಹೇಳಿದ್ದಾರೆ. ಸಂತ ಆ್ಯಂಡ್ರೋಜ್, 'ಸ್ತ್ರೀಯನ್ನು ನಿರ್ಮಿಸುವುದಕ್ಕೆಂದು ದೇವರು ಪುರುಷನ ಪಕ್ಕಡಿಯ ಒಂದು ಭಾಗವನ್ನು ತೆಗೆದುಕೊಂಡನೇ ಹೊರತು ಅವನು ಆತ್ಮದ ಅಂಶವನ್ನು ತೆಗೆದುಕೊಳ್ಳಲಿಲ್ಲ' ಎಂದು, ಲ್ಯಾಟಿನ್ ಧರ್ಮಬೋಧಕ ಟ್ಯಾರಾಟ್ಯುಲಿಯನ್, 'ಅವಳು ಸೈತಾನನ ಬಾಗಿಲು, ದೈವೀ ನಿಯಮ ಅಥವಾ ಧರ್ಮವನ್ನು ಪರಿತ್ಯಜಿಸುವ ಮೊಟ್ಟ ಮೊದಲ ವ್ಯಕ್ತಿ' ಎಂದು ಹೇಳಿದ್ದಾರೆ. ಸಂತ ಅಗಸ್ಟಿನ್, 'ಹೆಣ್ಣು ಇಲ್ಲಿಗೆ ತಾಯಿಯೇ ಆಗಿರಲಿ ಅಥವಾ ಸಹೋದರಿಯೇ ಆಗಿರಲಿ ಅವಳಲ್ಲಿ ಅಡಗಿರುವ ಅವಳ ಮೂಲ ರೂಪದಿಂದ ಯಾವಾಗಲೂ ಎಚ್ಚರದಿಂರಬೇಕು' ಎಂದು ಹೇಳಿದ್ದಾನೆ. ಹೆಣ್ಣು ಇಂಥ ಮನಃಸ್ಥಿತಿ ಉಳ್ಳವರ ನಡುವೆ ಹೇಗೆ ನಲುಗಿರಬಹುದು ಎಂದು ಯೋಚಿಸಿದರೆ ಅವಳ ಖೇದನೀಯ ಸ್ಥಿತಿ, ದುರಂತ ಬದುಕು ಗ್ರಾಹ್ಯವಾಗುತ್ತದೆ. ಅಂಥ ಅಮಾನವೀಯ ಧರ್ಮಬೋಧಕರ ಒತ್ತಾಸೆಯಿಂದಾಗಿ ಹೆತ್ತ ಮಗನೇ ತಾಯಿಯನ್ನು ನಿನ್ನಿಂದ ನನಗೆ ಪ್ರಯೋಜನವಾದರೂ ಏನು? ನಿನ್ನಿಂದ ಪಾಪ ಮತ್ತು ದುಃಖದ ಹೊರತು ನನಗೆ ದೊರೆತದ್ದಾದರೂ ಏನು ಎಂದು ಸೇಂಟ್ ಬರ್ನಾಡ್‌ನಂಥ ಪುತ್ರರೇ ಪ್ರಶ್ನಿಸುವಂತಾಯಿತು.[೧೮] ಈಗ ಮುಂದುವರಿದಿರುವ ಯುರೋಪ್ ರಾಷ್ಟ್ರಗಳೇ ೧೫ ನೂರು ವರ್ಷಗಳ ಹಿಂದೆ ಹೆಣ್ಣನ್ನು ಕಂಡುಕೊಂಡ ಬಗೆ ಇದಾಗಿದೆ. ಇಂಥ ಅವಿವೇಕಿಗಳ ಜಗತ್ತಿನಲ್ಲಿ ದಿನಕಳೆದ ಹೆಣ್ಣು ಇಂದು ಎಲ್ಲ ಅಂಥ ಸಂಕುಚಿತ ಪರಿಧಿಗಳನ್ನು ಮೀರಿ ನಿಲ್ಲುವಲ್ಲಿ ಬಹುಮಟ್ಟಿಗೆ ಗೆದ್ದಿದ್ದಾಳೆ.

ಸ್ತ್ರೀಗೆ ಜ್ಞಾನವನ್ನು ನಿರಾಕರಿಸುವ ಯುರೋಪಿನ ಪ್ರಾಚೀನ ಧರ್ಮಬೋಧಕ 'ಸ್ತ್ರೀಯರು ತತ್ವಶಾಸ್ತ್ರವನ್ನು ಅಭ್ಯಸಿಸಬಾರದು, ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ' ಎಂದರೆ, ತಾನು ಬುದ್ಧಿವಂತಳಾಗಬೇಕೆಂದು ಆಶಿಸಿದರೆ ಅದು ಸ್ತ್ರೀಯ ಮಹಾದುರ್ಗುಣ

---

೧೭ ಹೆಚ್ಚಿನ ಮಾಹಿತಿಗೆ ನೋಡಿ: ಹೆಣ್ಣಿನ ಸ್ಥಾನಮಾನ, ಶರಚ್ಚಂದ್ರ ಚಟ್ಟೋಪಾಧ್ಯಾಯ
ಅನು: ಸಿದಲಿಂಗ ಪಟ್ಟಣ ಶೆಟ್ಟಿ,

೧೮ ಅದೇ

ಎಂದು ಮಾರ್ಟಿನ್ ಲೂಥರ್ ಷರಾ ಬರೆಯುತ್ತಾನೆ. 'ಜ್ಞಾನ ಪುರುಷನ ಗೌರವ ಹೆಚ್ಚಿಸಿದರೆ, ಅಜ್ಞಾನ ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು' ಎಂಬುದು ಚೀನಾ ದೇಶದ ಗಾದೆ ಮಾತು. 'ಧರ್ಮದ ಬಗೆಗೆ ಸ್ತ್ರೀಯರು ಪುರುಷರಂತೆ ಏನನ್ನೂ ಪ್ರಶ್ನಿಸಬಾರದು' ಎಂದು, 'ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು, ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು. ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರಿಗೆ ಮುಕ್ತಿಯೇ ಇಲ್ಲ, ಅವರು ಗರ್ಭಧಾರಣೆ ಮಾಡಿದರೆ ಮಾತ್ರ ಅವರಿಗೆ ಸದ್ಗತಿಯು ಸಿಕ್ಕರೂ ಸಿಗಬಹುದು' ಎಂದು ಸೇಂಟ್ ಪೌಲ್ ಹೇಳಿರುವಲ್ಲಿ ಹೆಣ್ಣು ಹೆರಲೇಬೇಕೆಂಬುದನ್ನು ಒತ್ತಾಯ ಪೂರ್ವಕ ಹೇರಿ ಹೆಣ್ಣಿನ ಸ್ವಾತಂತ್ರ್ಯಕ್ಕೆ ಗಂಡು ಕಡಿವಾಣ ಹಾಕಿರುವುದು ಸ್ಪಷ್ಟವಾಗುತ್ತದೆ. ಈ ಎಲ್ಲ ಉಲ್ಲೇಖಗಳಿಂದ ಹೆಣ್ಣು ಸಂಪೂರ್ಣ ನೇಪಥ್ಯಕ್ಕೆ ಸರಿದು ಅವಮಾನಗಳನ್ನೆಲ್ಲ ನುಂಗುತ್ತ ಉಸಿರಾಡುವಂತಾದದ್ದು ಇಲ್ಲಿ ವೇದ್ಯವಾಗುತ್ತದೆ.[೧೯]

ಆರು ಸಾವಿರ ವರ್ಷಗಳ ಹಿಂದಿನ ಈಜಿಪ್ತಿನ ಪ್ರಾಚೀನ ಸಂಸ್ಕೃತಿ ಮಾತ್ರ ಭಾರತದ ವೇದಕಾಲದ ಸಂದರ್ಭಕ್ಕೆ ಕೊಂಚ ಹತ್ತಿರವಾಗಿ ನಿಲ್ಲುತ್ತದೆ. ಅಲ್ಲಿ ಹೆಣ್ಣು ಭಾರತಕ್ಕಿಂತ ಹೆಚ್ಚು ಎತ್ತರದಲ್ಲಿದ್ದಳು ಎಂದೂ ವಿವರಿಸಿಕೊಳ್ಳಬಹುದು. ಪತಿ-ಪತ್ನಿಯರ ನಡುವಿನ ಸಮಾನತೆ, ಆಸ್ತಿಯಲ್ಲಿ ಸಮಪಾಲು, ಮನೆಯ ಒಡತಿಯಾಗಿ, ಕಾನೂನು ಪ್ರಕಾರ ಸಮಾನ ಅಧಿಕಾರ ಪಡೆದಿರುವ ಸ್ತ್ರೀ ಅಂದಿನ ಸಮಾಜದ ಉದಾರ ಮನಸ್ಥಿತಿಯನ್ನು ಪ್ರತಿನಿಧಿಸುತ್ತಾಳೆ.

ಪತಿಯನ್ನು ತ್ಯಜಿಸುವ ಪತ್ನಿಯ ಕುರಿತಂತೆ ಗಂಡ, ಹೆಂಡತಿಯನ್ನು ತ್ಯಜಿಸಬಹುದಾದಂಥ ಪದ್ಧತಿಯು ನಮ್ಮಲ್ಲಿದ್ದಾಗ ಈ ತ್ಯಜಿಸುವ ಪದ್ಧತಿಯು ಸ್ತ್ರೀ ಮತ್ತು ಪುರುಷ ಇಬ್ಬರಿಗೂ ಸಮಾನವಾಗಬಾರದೇಕೆ? ಸ್ತ್ರೀಯೂ ತನ್ನ ಗಂಡನನ್ನು ತ್ಯಜಿಸಬಾರದೇಕೆ? ಎಂದು ಶರಶ್ಚಂದ್ರ ಚಟ್ಟೋಪಾಧ್ಯಾಯ ಅವರು ಮುಂದಿಡುವ ಪ್ರಶ್ನೆ ಯಥಾರ್ಥವೇ ಆಗಿದೆ.ಅಲ್ಲದೇ ತನ್ನಂತೆ ತ್ಯಜಿಸುವ ಈ ಧೈರ್ಯ ತನ್ನ ಹೆಂಡತಿಯಲ್ಲಿ ಇರಬೇಕು ಎಂದು ಗಂಡನು ಎಂದೂ ಬಯಸುವುದಿಲ್ಲ. ಆದರೆ ಈ ಧೈರ್ಯ ಏಕಿರಬಾರದು? ಬೇರೆ ದೇಶದಲ್ಲಿಯ ಸ್ತ್ರೀಯರಿಗಿದ್ದಂತೆ ಇಲ್ಲಿ ಆ ಅಧಿಕಾರವನ್ನು ಕೊಡ ಬಾರದೇಕೆ? ಎಂಬ ಬಗ್ಗೆ ಅವನು ಯಾವುದೇ ಯೋಗ್ಯ ಕಾರಣವನ್ನು ಕೊಡಲಾರ. ತೀರಾ ನೊಂದುಕೊಂಡು 'ಇದೆಂಥ ಮಾತು? ಎಂದು ಹೇಳಿಬಿಡಬಲ್ಲ ಅಷ್ಟೇ'[೨೦] ಎಂದಿರುವುದು ಸಾರ್ವಕಾಲಿಕ ಸಾರ್ವತ್ರಿಕ ತರ್ಕಬದ್ಧ ವಿಷಯವಾಗಿದೆ. ಅಲ್ಲಿಯೇ ನಮ್ಮ ಜಡ್ಡುಗಟ್ಟಿದ ಸಂಪ್ರದಾಯದ ಕುರಿತು ವಿಷಾದದ ಉತ್ತರ ಕೂಡ ಅಡಗಿದೆ. ಒಂದೆಡೆಯಲ್ಲಿ ಸಂಪತ್ತಾಗಿ ಗುರುತಿಸಿಕೊಳ್ಳುವ ಹೆಣ್ಣು, ಮತ್ತೊಂದೆಡೆಯಿಂದ ಸಂದೇಹಗ್ರಸ್ತ ಮನಸ್ಸಿನ ಆಳುವ ದರ್ಪಕ್ಕೆ

---

೧೯ ಹೆಚ್ಚಿನ ಮಾಹಿತಿಗೆ ನೋಡಿ: ಹೆಣ್ಣಿನ ಸ್ಥಾನಮಾನ, ಶರಶ್ಚಂದ್ರ ಚಟ್ಟೋಪಾಧ್ಯಾಯ ಅನು: ಸಿದಲಿಂಗ ಪಟ್ಟಣ ಶೆಟ್ಟಿ

೨೦ ಅದೇ ಪು. ೪೫

ಒಳಗಾಗಿದ್ದಳು. ಅವಳ ಇಷ್ಟ, ಬಯಕೆಗಳಿಗೆ ಕಿವಿಗೊಡಲಾಗದ ಸಂದರ್ಭಗಳಲ್ಲೆಲ್ಲ ಅವಳು ದುರ್ಭರ ಬಾಳನ್ನು ಅನುಭವಿಸುತ್ತ ಮೂಕಿಯಾದುದೇ ಹೆಚ್ಚು. ಕೆಲವೊಮ್ಮೆ ಆಕೆ ತನ್ನ ಆಯ್ಕೆಯ ಬದುಕು ಸ್ವೀಕರಿಸುವ ಸ್ವಾತಂತ್ರ್ಯ ಪಡೆದಿದ್ದರೂ ಅವಳು ಅನಾಗರಿಕಳೆಂದೇ ಕರೆಸಿಕೊಳ್ಳಬೇಕಾಗಿತ್ತು. ಅಂದರೆ ಸ್ತ್ರೀಗೆ ಸಿಗಲೇಬೇಕಾಗಿದ್ದ ಸ್ವಾತಂತ್ರ್ಯ ಹಾಗೂ ಗೌರವ ಸಿಕ್ಕಿಲ್ಲ. ಹಿಂಸೆಯನ್ನು ಅನುಭವಿಸುತ್ತ ಬಂದ ಅವಳಿಗೆ ನ್ಯಾಯಯುತ ಸ್ಥಾನ ಎಲ್ಲೂ ಸಿಕ್ಕಿಲ್ಲ, ಭಾಗಶಃ ಇಡೀ ಪ್ರಪಂಚದಲ್ಲಿ ಹೆಣ್ಣು ಎರಡನೇ ಸ್ಥಾನದಲ್ಲಿದ್ದು ಉಪಚಾರಕ್ಕೊಳಗಾಗಿದ್ದಾಳೆ.

ಶಾಸನಗಳಲ್ಲಿ

ಶಾಸನಗಳ ಅಧ್ಯಯನದಲ್ಲಿ ಧಾರ್ಮಿಕ , ರಾಜಕೀಯ, ಸಾಮಾಜಿಕ ಸಂದರ್ಭಗಳಲ್ಲಿ ಸ್ತ್ರೀ ಪ್ರತಿನಿಧಿಸಿದ ಮೌಲ್ಯಗಳನ್ನು ಅಂದಿನ ಪರಿಸ್ಥಿತಿಗಳ ಮೂಲಕವೇ ಚರ್ಚಿಸಬೇಕು. ಜೈನ ಧರ್ಮದ ಪ್ರಗತಿ, ಉಳಿವಿನ ನೆಲೆಗೆ ಸ್ತ್ರೀ ತನ್ನನ್ನು ತೆರೆದುಕೊಳ್ಳುವಂತಾದ್ದನ್ನು ಶಾಸನಗಳು ಉಲ್ಲೇಖಿಸಿವೆ. ವೈದಿಕ ಸಂಪ್ರದಾಯವನ್ನು ಮೀರಿ ಬೆಳೆಯ ಹೊರಟ ಜೈನಧರ್ಮ ಹೆಣ್ಣಿಗೆ ಮೋಕ್ಷ ರಹಿತ ಬದುಕಿನ ಸ್ವಾತಂತ್ರ್ಯ ನೀಡಿದೆ. ಜಾತಿ ವ್ಯವಸ್ಥೆಯ ಕಟ್ಟುಪಾಡುಗಳಿಗೆ ಒಳಗಾಗದೇ ಹೋದ ಅವರು ಕೇವಲ ಕುಟುಂಬದ ಪರಿಧಿಯೊಳಗೇ ಸುತ್ತುವಂತಾಗಲಿಲ್ಲ. ಆದರೆ ಹೆಣ್ಣು, ಗಂಡಿಗೆ ಜೊತೆಯಾಗಿ ವಿದ್ಯೆ ಕೊಡಲಾಗಿದೆ. ಮಡಿವಂತಿಕೆಯನ್ನು ಅವರಿಗೆ ದಾಟಲಾಗಲಿಲ್ಲ. ಧರ್ಮದ ಮಿತಿಯಲ್ಲಿ ಕಲಿಕೆಯ ದಾಹದ ಇಂಗಿಸುವಿಕೆಗೆ ಮನೆಯಲ್ಲೇ ಕಲಿಯುವ ಅವಕಾಶ ಪಡೆದುಕೊಂಡರು. ಆದುದರಿಂದಲೇ ಅಲ್ಲಿನ ಹೆಣ್ಣು ತನ್ನೊಳಗಿದ್ದ ಸೃಜನಶೀಲತೆಯನ್ನು ಸಾಹಿತ್ಯದ ಮೂಲಕ ಹೊರಗೆಡಹಲು ಸಾಧ್ಯವಾಯಿತು ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಆದರೆ ಆ ಅವಕಾಶಗಳೂ ಪ್ರಾಪ್ತವಾದದ್ದು ಉನ್ನತ ವರ್ಗದ ಹೆಣ್ಣಿಗೆ ಮಾತ್ರ ಎಂಬುದನ್ನು ಕೂಡ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಜೈನಧರ್ಮಕ್ಕೆ ಬದ್ಧರಾಗಿರುವವರಲ್ಲಿ ಧರ್ಮಶ್ರದ್ಧೆ ಹಾಗೂ ಧರ್ಮಪ್ರಚಾರದ ದೀಕ್ಷೆ ತೊಟ್ಟ ಸ್ತ್ರೀಯರು ಇದ್ದರು. ಶ್ರಾವಕಿಯರು ಸಂಸಾರದಲ್ಲಿರಬಾರದೆಂಬ ಕಟ್ಟುಪಾಡುಗಳಿಗೆ ಒಳಗಾಗದೇ ಬೇಡವೆನಿಸಿದಾಗ ಸಂಸಾರದಿಂದ ಹೊರಬರುವ ಸ್ವಾತಂತ್ರ್ಯ ಪಡೆದಿದ್ದರು. ಧರ್ಮಪ್ರಚಾರಕ್ಕಾಗಿ ಸನ್ಯಾಸಿ-ಸನ್ಯಾಸಿನಿಯರು ಜೊತೆಯಾಗಿಯೇ ಬಸದಿಗಳಲ್ಲಿದ್ದು ಕೈಂಕರ್ಯ ಮಾಡುವ ಅವಕಾಶ ಪಡೆದಿದ್ದರು. ಇದು ಧಾರ್ಮಿಕ ದೃಷ್ಟಿಕೋನದಿಂದಾಗಿ ಹೆಣ್ಣು - ಗಂಡಿನ ನಡುವಿನ ಅವಿಭಾಜಕತೆಯನ್ನೂ ಕಳಚಿಕೊಂಡುದಕ್ಕೆ ದೃಷ್ಟಾಂತವಾಗಿದೆ.

ಲಕ್ಕುಂಡಿ ಶಾಸನ [೨೧] ವೊಂದರಿಂದಲೇ ಅತ್ತಿಮಬ್ಬೆಯಂಥ ವಿಶೇಷ ವಿಶಿಷ್ಟ ವ್ಯಕ್ತಿಯ ಪರಿಚಯವಾಗುತ್ತದೆ. ಅದರ ಬೆನ್ನಲ್ಲೇ ಆಕೆ ಜೈನ ವರ್ಗದ ದಾನಕಾರ್ಯದ ಪ್ರತಿನಿಧಿಯಾಗಿ

---

೨೧ ಶಾಸನಸಂಗ್ರಹ, ಸಂ. ಅಣ್ಣಿಗೇರಿ ಎಂ., ಶೇಷಶಾಸ್ತ್ರಿ ಆರ್. ೧೯೮೩

ನಿಲ್ಲುವುದು ಶಾಸ್ತ್ರದಾನ ಮಾಡುವ ಮೂಲಕ ಶ್ರೇಷ್ಠ ದಾನದ ಕ್ರಿಯೆಗೆ ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾಳೆ. ಜೊತೆಗೆ ಧರ್ಮಶ್ರದ್ಧೆಯ ಪ್ರತಿನಿಧಿಯೂ ಆಗಿ ಆಕೆ ದುಡಿದಿದ್ದಾಳೆ. ಅಂದಿನ ಧಾರ್ಮಿಕ ಪ್ರಜ್ಞೆಯ ಉನ್ನತಿಗಾಗಿ ಹೆಣ್ಣು ಗಂಡು ಇಬ್ಬರೂ ಶ್ರಮಿಸುವ ಅನಿವಾರ್ಯತೆ ಇತ್ತು. ವಿಧವೆಯನ್ನು ವೈದಿಕ ಧರ್ಮ ಕಂಡಂತೆ ಜೈನಧರ್ಮ ಕಾಣಲಿಲ್ಲ. ಮನುಷ್ಯ ಧರ್ಮದ ನೆಲೆಯಲ್ಲಿ ಅವಳಿಗೆ ಬಾಳಲು ಬಿಟ್ಟದ್ದರಿಂದ ಅವರೆಲ್ಲ ಖ್ಯಾತಿ ಪಡೆಯುವಂತಾಯಿತು. ಈ ನಿಟ್ಟಿನಲ್ಲಿ ಇನ್ನೊಂದು ನೆಲೆಯಲ್ಲಿ ಹೊಯ್ಸಳ ರಾಣಿ ಶಾಂತಲೆ ಕೂಡ ಕಲೆಗೆ ನೀಡುತ್ತಿದ್ದ ಪ್ರೋತ್ಸಾಹವನ್ನು ನೆನಪಿಸಿಕೊಳ್ಳಬಹುದು. ಆಕೆ ರಾಜಕುಟುಂಬಕ್ಕೆ ಸೇರಿದ್ದು ಅವಳ ಬೆಳವಣಿಗೆಗೆ ಸಹಕಾರಿಯಾಯಿತು. ಅಲ್ಲದೆ ಕಲೆಗೆ ನೀಡಿದ ಪ್ರೋತ್ಸಾಹದ ಪ್ರಯೋಜನ ಪಡೆದು ನಾಟ್ಯರಾಣಿಯಾಗಿ ಮೆರೆದಳು. ಇಂಥ ಪ್ರತಿಭಾನ್ವಿತ ಮಹಿಳೆ ಇನ್ನೊಂದೆಡೆಯಿಂದ ಧರ್ಮದ ಬೆಳವಣಿಗೆಗೆ ಕೂಡ ಪೂರಕವಾಗಿ ದುಡಿದಿದ್ದಾಳೆ.

ಶೈವಧರ್ಮವನ್ನು ಗಮನಿಸಿದರೆ,ಹೆಚ್ಚತ್ತೊಡಗಿದ್ದ ದೇವಸ್ಥಾನಗಳ ರಚನೆಯಲ್ಲಿ ಉನ್ನತ ವರ್ಗದ ಮಹಿಳೆ ತೊಡಗಿಕೊಂಡಿದ್ದುದು, ಇನ್ನು ಕೆಲವರು ಕೆರೆ, ಬಾವಿ, ಅನ್ನಛತ್ರ, ಅರವಟ್ಟಿಗೆಗಳನ್ನು ನಿರ್ಮಿಸಿ ಜನಹಿತ ಕಾರ್ಯ ಮಾಡಿದ್ದು, ವೆಣ್ಣಿಲಸೆಟ್ಟಿಕವ್ವ, ಬಣಂಜುಧರ್ಮ ರಕ್ಷಿಸಿ, ಸಾತೇನಹಳ್ಳಿಯಲ್ಲಿ ಹರಿಹರೇಶ್ವರರನ್ನು ಪ್ರತಿಷ್ಠಾಪಿಸಿದ್ದು ಆ ನೆಲೆಯಲ್ಲಿ ಹೆಣ್ಣು ಕೊಂಚ ಮಟ್ಟಿಗಿನ ಸ್ವಾತಂತ್ರ್ಯ ಪಡೆದದ್ದನ್ನು ಪರಿಚಯಿಸುತ್ತದೆ. ಆದರೆ ಇಲ್ಲಿ ಗಂಡು ತನ್ನ ತೆಕ್ಕೆಯೊಳಗಿಟ್ಟುಕೊಂಡಿರುವ ಹೆಣ್ಣಿನ ಸ್ವಾತಂತ್ರ್ಯವನ್ನು ಸಂಪೂರ್ಣ ಬಿಟ್ಟುಕೊಡದೇ ತನಗೆ ಪೂರಕವಾಗಿ, ತನ್ನ ಸೇವಕಿಯಾಗಿಯೇ ಕೀರ್ತಿ ಪಡೆಯುವಂತೆ ನೋಡಿಕೊಳ್ಳುತ್ತಾನೆ.

ರಾಜಕೀಯ ರಂಗದಲ್ಲಿ ಹೆಣ್ಣು ಧಾರಾಳ ಅವಕಾಶ ಪಡೆದು ಕೊಂಡಿರಲಿಲ್ಲ. ಆ ಕ್ಷೇತ್ರಕ್ಕೆ ಮುನ್ನುಗ್ಗಲು ಆಕೆಯ ದೈಹಿಕ ಶಕ್ತಿಯ ಪರಿಮಿತಿ ಹಾಗೂ ಕಾಲದ ಪ್ರಶ್ನೆ ಅಡ್ಡಿಯಾದವು. ಗಂಡಿನ ಹತೋಟಿಯನ್ನು ಏಕಾಏಕಿ ಮೀರುವುದು ದುಸ್ಸಾಧ್ಯವಾದಾಗ ಅವಳು ಆ ಸಾಹಸಕ್ಕೆ ಕೈ ಹಾಕದೆ ತೆಪ್ಪಗುಳಿಯಬೇಕಾಯಿತು. ಆದರೂ ರಣಭೈರವಿ ಅಕ್ಕಾದೇವಿ, ಹೊಯ್ಸಳ ಬಮ್ಮಲಾದೇವಿ, ಉಮಾದೇವಿ, ಸಾವಿಯಬ್ಬೆ, ವೆಣ್ಣಿಲಸೆಟ್ಟಿಕವ್ವೆ, ಚೋಳಮಹಾದೇವಿ, ಜಾಗಲದೇವಿ, ಲಕ್ಕಮ್ಮಗವುಂಡಿ ಹರಿಯಕ್ಕ ಮೊದಲಾದವರು ಪುರುಷ ಶಕ್ತಿಯನ್ನು ಮೈಗೂಡಿಸಿಕೊಂಡು ಹೋರಾಡುವ ಧೈರ್ಯ ತೋರಿದ್ದು ಮುಖ್ಯವಾಗುತ್ತದೆ. ರಾಜರುಗಳು ತಮ್ಮ ಪತ್ನಿಯರನ್ನು ಸಮಾಧಾನ ಪಡಿಸುವುದಕ್ಕೆ ಅವರಲ್ಲಿನ ವೈಮನಸ್ಸುಗಳನ್ನು ತಿಳಿಗೊಳಿಸುವುದಕ್ಕೆ ಒಬ್ಬೊಬ್ಬರಿಗೆ ತನ್ನ ಆಡಳಿತದ ಪ್ರದೇಶಗಳ ಬೇರೆ ಬೇರೆ ರಾಜ್ಯಗಳನ್ನು ಆಳಲು ವಹಿಸಿಕೊಡುತ್ತಾರಷ್ಟೆ. ಆದರೆ ಅಲ್ಲಿ ಮುಂದಾಳತ್ವ ಮಾತ್ರ ಅವರದ್ದೇ. ತನ್ನ ವ್ಯಕ್ತಿತ್ವವನ್ನು, ಸ್ವಂತಿಕೆಯನ್ನು ಮರೆತು ಬಿಟ್ಟಿರುವ ಅಂದಿನ ಸ್ತ್ರೀ ಅದನ್ನು ಒಪ್ಪಿ ಅನುಸರಿಸುವುದನ್ನೇ ತನ್ನ

ಕರ್ಮವಾಗಿಸಿಕೊಂಡಿದ್ದನ್ನು ಪ್ರತಿಬಿಂಬಿಸುತ್ತಿದ್ದಾಳೆ. ಶಾಸನಗಳ ಮೂಲಕ ತಿಳಿದು ಬರುವ ಸಾಮಾಜಿಕ ಜೀವನದಲ್ಲಿ ಕೂಡ ಹೆಣ್ಣಿನ ಯಾಂತ್ರಿಕ ಬದುಕಿನ ವಿವರ ಇದೆ. ರಾಜಸತ್ತೆಯ ವಿರುಪರ್ವದ ಕಾಲದಲ್ಲೇ ಅವರ ಆಡಳಿತ ವೈಖರಿಯ ಕೀರ್ತಿ ಶಾಶ್ವತಗೊಳಿಸುವ ಸಲುವಾಗಿ ಜನ್ಮತಳೆದ ಶಾಸನ ರಚನಾಕಾರರೂ ಪುರುಷರೇ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸ್ತ್ರೀಯ ಬದುಕನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಸಾಮಾಜಿಕ ಬದುಕಿನ ರೀತಿಗಳ ಅನಿವಾರ್ಯತೆಗೆ ಒಳಗಾಗಿ ಬೆಳೆದ ಹೆಣ್ಣಿನ ಬದುಕಿನ ಚಿತ್ರಣದಲ್ಲಿ ಅವಳ ಬದುಕು, ಸಂದರ್ಭಗಳು ಮಾತ್ರ ಬಿತ್ತರಗೊಂಡಿವೆಯೇ ಹೊರತು ಅಲ್ಲಿನ ಯಾತನೆಯಾಗಲೀ ಅವಳ ದುರ್ಭರತೆಯಾಗಲೀ ಚರ್ಚಿತವಾಗಿಲ್ಲ. ಅದು ಅಂದಿಗೆ ಪ್ರಶ್ನಾರ್ಹ ಕೂಡ ಆಗಿರಲಿಲ್ಲ. ಅಥವಾ ಗಂಡಿನ ಹಂಗಿನರಮನೆಯ ತುತ್ತು ತಿಂದ ಹೆಣ್ಣು ಅದನ್ನು ಪ್ರಶ್ನಿಸಿದರೆ ಅವಳು ನೆಲೆಯಿಲ್ಲದೇ ಇರಬೇಕಾದ ಸನ್ನಿವೇಶವೇ ಅವಳ ಬಾಯ್ಮುಚ್ಚಿಸಿದೆ.

ಶಾಸನಗಳು ಬೆಳಕು ಚೆಲ್ಲುವ ದೇವದಾಸಿ ಅಥವಾ ಸೂಳೆಯರ ವ್ಯಕ್ತಿತ್ವ ಅವು ರಚನೆಗೊಂಡ ಕಾಲದ ಸಾಮಾನ್ಯ ಹೆಣ್ಣಿನ ಬದುಕನ್ನು ಪರಿಚಯಿಸುತ್ತದೆ. ಇಡಿಯಾಗಿ ಶೋಷಣೆಗೆ ಒಳಗಾದ ಅವಳೂ ಮಾನವಜೀವಿಯೆಂಬುದನ್ನು ಇಲ್ಲಿ ಮರೆಯಲಾಗಿದೆ. ಪ್ರಾತಿವ್ರತ್ಯ ಧರ್ಮದ ಪಾಲನೆಯನ್ನು ಒಂದೆಡೆಯಿಂದ ಹೇರುವ ಗಂಡು ಮತ್ತೊಂದೆಡೆಯಿಂದ ತನ್ನ ಕಾಮನೆ ತೀರಿಸಿಕೊಳ್ಳಲು ಅವಳನ್ನೇ ಮಾರಿಕೊಳ್ಳುವಂತೆ ಮಾಡಿದ ಎಂಬುದು ಖೇದದ ವಿಚಾರವಾಗಿದೆ. ಕಲೆ ಹಾಗೂ ಧರ್ಮದ ಹೆಸರಿನಲ್ಲಿ ಪ್ರೋತ್ಸಾಹ ನೀಡುವಂತೆ ಅವಳ ಪ್ರತಿಭೆಗೆ ನೀರೆರೆದ ಗಂಡು ಅವಳ ಬದುಕನ್ನು ದೇವದಾಸಿಯ ಹೆಸರಿನಲ್ಲಿ ಚಿವುಟಿ ಹಾಕುತ್ತಾನೆ. ತನಗೆ ಬೇಕಾದಂತೆ ಹೆಣ್ಣನ್ನು ಬಳಸಿಕೊಳ್ಳುವ, ದೂಷಿಸುವ ರೀತಿಗೆ ಇವರು ಸಾಕ್ಷಿಯಾಗುತ್ತಾರೆ. ಈ ಕ್ರಿಯೆಯನ್ನು ಧಾರ್ಮಿಕ ನೆಲೆಗೆ ಹತ್ತಿರಗೊಳಿಸುತ್ತ ಅವರು ಅದನ್ನು ಒಪ್ಪಲೇಬೇಕಾದ ಸಂಕಷ್ಟಸ್ಥಿತಿಗೆ ತಂದಿದ್ದಾರೆ. ವಂಶಪಾರಂಪರ್ಯ ಸೂಳೆಗಾರಿಕೆ ತುಸು ಗೌರವಕ್ಕೆ ಪಕ್ಕಾದರೆ, ಬದುಕಿನ ಅನಿವಾರ್ಯತೆಗೆ ಹೊಂದಿಸಿಕೊಂಡ ಸೂಳೆಗಾರಿಕೆ ಅಗೌರವಕ್ಕೆ ಗುರಿಯಾಗಿದೆ.

ಗಂಡು ಅನುಸರಿಸಿದ್ದ ಬಹುಪತ್ನಿತ್ವ ಗಂಡಿನ ವಿಲಾಸೀ ಭೋಗದ ಜೀವನವನ್ನು ಪ್ರತಿನಿಧಿಸುತ್ತದೆ. ಅದು ಪ್ರಭುವರ್ಗದ, ಅಧಿಕಾರಿಯ ಪ್ರತಿಷ್ಠೆಯ ಕುರುಹೂ ಆಗಿತ್ತು. ಗಂಡಿನ ಪ್ರತಿಷ್ಠೆಯ ದಾಹಕ್ಕೆ, ಸ್ವಾರ್ಥಕ್ಕೆ ಲಾಲಸೆಗೆ ಕೂಡ ಬಲಿಯಾಗಿದ್ದುದು ಹೆಣ್ಣೇ. ಚೆನ್ನಕ್ಕ ಈ ಕುರಿತು 'ಅತ್ಯಂತ ಹೀನವಾದ ಸಾಧಕತೆಯ ಸಾರ್ಥಕ ಫಲವಂತೆ ಪಿರಿಯರಸಿ, ಪಟ್ಟ ಮಹಾದೇವಿ, ವಿಶಾಲವಕ್ಷಸ್ಥಳ ವಿಲಾಸೀ ಮುಂತಾದ ಹೆಸರುಗಳಿಂದ ಕರೆದುದು ಪ್ರಭುವರ್ಗದ

ಒಟ್ಟೊ ವ್ಯವಸ್ಥಿತ, ಸಮಯ ಸಾಧಕ ಪ್ರವೃತ್ತಿಯನ್ನು ಸೂಚಿಸುತ್ತದೆ'[೨೨] ಎಂದು ಪ್ರತಿಕ್ರಿಯಿಸಿದ್ದಾರೆ.

ತಾನು ಹೇಗೆಬೇಕೆಂದರೆ ಹಾಗೆ ಹೆಣ್ಣು ದೇಹವನ್ನು ಪಡೆಯುವ ಸರ್ವಾಧಿಕಾರತ್ವ ಪಡೆದಿದ್ದ ಗಂಡು, ಪತ್ನಿ ತನ್ನ ಹೊರತಾಗಿ ಬೇರೊಬ್ಬನಲ್ಲಿ ಆಕರ್ಷಿತಳಾಗುವುದನ್ನು ಸಹಿಸುವುದಿಲ್ಲ. ಗಂಡನಿಗೆ ಎದುರಾಡುವ, ಅವನ ನಡತೆಯನ್ನು ಪ್ರಶ್ನಿಸುವ, ತಿರಸ್ಕರಿಸುವ ಅವಳ ಸ್ವಭಾವಗಳು ಗಂಡಿನ ಸಮ್ಮತಿ ಪಡೆಯುವುದಿಲ್ಲ. ಸಮಾಜ ಒಪ್ಪದ ಈ ನಡೆಯಿಂದಾಗಿ ಅವಳು ಅಮಾನ್ಯಳಾಗುತ್ತಾಳೆ. ಜನರ ಇಂಥ ಕುತ್ಸಿತ ಮನಸ್ಥಿತಿಗೆ ಒಡ್ಡಿದ ಸವಾಲನ್ನು ಈ ಮಾತುಗಳ ಮೂಲಕ ತಡೆಹಿಡಿಯಲಾಗುತ್ತದೆ ಮತ್ತು ಆಕೆ ಎಂದಿಗೂ ಗಂಡನನ್ನೇ ಧ್ಯಾನಿಸುವ ಪತಿವ್ರತೆಯಾಗಿರುವಂತೆಯೇ ಕಟ್ಟುನಿಟ್ಟಾಗಿ ನೋಡಿಕೊಳ್ಳಲಾಗುತ್ತದೆ. ಅಂದರೆ ಒಂದು ಸಿದ್ಧ ಮೌಲ್ಯ (ಜೀವನ)ದ ರೀತಿಯನ್ನು ಹೆಣ್ಣು ಮುರಿಯದಂತೆ ವಹಿಸುವ ಎಚ್ಚರಿಕೆ ಇದಾಗಿದೆ. ಹಾಗೆಯೇ ಆಕೆಯ ಭಾವನೆಗಳೆಲ್ಲವನ್ನೂ ನಗಣ್ಯಗೊಳಿಸುವುದಾಗಿದೆ.

ಹೆಣ್ಣಿನ ಬದುಕಿನ ದಾರುಣತೆಯಲ್ಲಿ ಒಂದಾದ ವೈಧವ್ಯಪಟ್ಟ ಗಂಡಿನ ಬಳುವಳಿಯೇ ಆಗಿದೆ. ವಿಧವೆಗೆ ಎಲ್ಲರಂತೆ ಬಾಳುವ ಅವಕಾಶವಿಲ್ಲದೇ ಹೋದರೂ ಮೂಲದಲ್ಲಿ ಆಕೆಯ ಜೀವಿಸುವ ಹಕ್ಕನ್ನು ಕಸಿದುಕೊಂಡಿರಲಿಲ್ಲ. ಆದರೆ ಕ್ರಮೇಣ ವಿಕೃತ ಪುರುಷನ ಮನಸ್ಸು ಸಹಿಸಲಾಗದೆ, ರಾಜರ ಆಕ್ರಮಣದ ಸನ್ನಿವೇಶಗಳಿಗೆ ಸ್ತ್ರೀ ಒಳಗಾಗಲಾರದೆ ಸಜೀವದಹನ ಸಹಗಮನ, ಅನುಗಮನ ಅನುಸರಿಸಿದ್ದು ಈಗಾಗಲೇ ವಿಮರ್ಶಕರಿಂದ ಚರ್ಚಿತವಾದ ವಿಷಯವೇ. ಈ ಆಯ್ಕೆ ಆಕೆಯ ಸ್ವ ಆಯ್ಕೆ ಎಂದು ಖಂಡಿತವಾಗಿ ಹೇಳಲಾಗುವುದಿಲ್ಲ. ತನ್ನ ಬದುಕಿನ ದುರ್ಭರತೆ, ನಿತ್ಯದ ಹಿಂಸೆಯ ಪರಮಾವಧಿ ಅದನ್ನು ಆರಿಸಿಕೊಳ್ಳುವಂತೆ ಮಾಡಿತ್ತು. ಗಂಡನ ಸಾವಿನ ಬಳಿಕ ಅವನ ಹೆಂಡತಿಯ ಸಾವಿನ ಆಯ್ಕೆಗೆ ಅಂದಿನ ಸಮಾಜ ನೀಡಿದ ಮನ್ನಣೆ, ಗೌರವ, ಅದನ್ನು ಒಪ್ಪಿಕೊಳ್ಳದವಳ ಕುರಿತ ತಿರಸ್ಕಾರದ ದೃಷ್ಟಿ, ಅಪಚಾರ ಅವಳಿಗೆ ಅದನ್ನು ಅನಿವಾರ್ಯವಾಗಿಸಿಕೊಳ್ಳುವಂತೆ ಮಾಡಿತ್ತು. ಅಲ್ಲಿ ಗಂಡನ ಮೇಲಿನ ಅತೀವ ಪ್ರೀತಿ, ಪತಿನಿಷ್ಠೆಯನ್ನು ತೋರ್ಪಡಿಸಿಕೊಳ್ಳುವುದೂ ಆಕೆಗೆ ಅನಿವಾರ್ಯವಾಗಿದ್ದುದರಿಂದ ಅವಳಾಗಿಯೇ ಸತಿ ಹೋಗುವಂತೆ ಮಾಡಲಾಗಿದೆ. ಅದಕ್ಕೆ ಸಾಕ್ಷಿಯಾಗಿ ಎಷ್ಟೇ ಬೇಡಬೇಡವೆಂದು ಭಿನ್ನವಿಸಿದರೂ

ನುಗುನಾಡ ಅಧಿಪತಿ ರವಿಗನ

ಮಗಳಾಗಿಯುವಂತೆ ನವಿಲೆ ನಾಡಾಧಿಪತಿಗಾಂ

ನೆಗಳೆ ಸತಿಯಾಗಿ ಬಾಳ್ವುದು

---

೨೨ ಪು. ೪೪ ಶಾಸನಗಳಲ್ಲಿ ಸ್ತ್ರೀ ಸ್ಥಾನಮಾನ ಮತ್ತು ಸಾಮಾಜಿಕ ಸಂಬಂಧ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ೧೯೯೩

ಬಗೆದಿರ್ಪನೆ ಕೊಟ್ಟುಕೊಂಡ ಮನೆಯಶಮನಳಿಯನ್ [೨೩] ಕ್ರಿ.ಶ. ೧೦೫೭ ರ ದೇಕಬ್ಬೆ ಶಾಸನದಲ್ಲಿ ಹಿರಿಯರು ಸತಿ ಪದ್ಧತಿಯನ್ನು ತಡೆಯಲು ಪ್ರಯತ್ನಿಸಿದರೂ ಆಕೆ ತೆಗೆದುಕೊಂಡ ನಿರ್ಧಾರದಲ್ಲಿ ಆ ಆಯ್ಕೆಗೆ ಇದ್ದ ಗೌರವ ಪ್ರತಿನಿಧಿತವಾಗಿದೆ. ಅಲ್ಲದೆ ಹಾಗೆ ಸತಿ ಹೋದವರನ್ನು 'ನೆರೆದೆಲ್ಲಂ ಬೇಡ ಮಾಣೆಂದಡೆ ನುಡಿಯದಂ ಸೋಗಿನಾಂ ಮಾಣೆನೆಂದಾ॥ ದರದಿಂದಂ ಭೂಮಿ ಪೆಣ್ಪೆನ್ ಪೆಟ್ಟಿಗೆ ಪಶುಧನಮುಂ ಧನಮುಂ ನೀಡುತುಂ. ದೇವರದೇವ ಗಳ್ತಿಯಿಂ ಕಯ್ಮುಗಿದುರಿಮರಿಯಂ ಪೊಕ್ಕು ದೇಕಟ್ಟಿ ತನ್ನಂ। ಧರೆಯೆಲ್ಲಂ ಮೆಚ್ಚಿ ನಿಟ್ಟಂ ಪೂಗಳೆ ನೆಗಳುತುಂ ದೇವಲೋಕಕ್ಕೆ ವೋದಳ್।' ಎಂದು ಬಣ್ಣಿಸಿರುವಲ್ಲಿ ಅಂದಿನವರ ಮನಃಸ್ಥಿತಿ ಸ್ಪಷ್ಟವಾಗುತ್ತದೆ. ಇಲ್ಲಿ ಅಲೌಕಿಕದ ನೆಪವೊಡ್ಡಿ ಒತ್ತಡ ಹೇರುವುದರ ಹಿಂದೆ ದೇವಲೋಕ ಸೇರಬೇಕೆಂಬ ಸ್ವಾರ್ಥವೇ ಇದೆ. ಅಲ್ಲದೆ ಆಕೆ ರವಿಗನ ಕುಲದೀಪಕ, ಕುಲಪುತ್ರ ಎಂದೂ ಕರೆದಿರುವುದು ಸಹಗಮನದ ಅನಿವಾರ್ಯತೆಯನ್ನೇ ಪ್ರೇರಿಸಿದ್ದಾಗಿದೆ. ಅದಕ್ಕಾಗಿ ಶಿಲಾಸ್ತಂಭ ಸ್ಥಾಪಿಸಲಾಗಿತ್ತು ಎಂಬುದೂ ಇಲ್ಲಿ ಮನನೀಯವಾಗಿದೆ. ಪತಿಯ ಅನಂತರ ಪತ್ನಿ ಬಾಳಬಾರದೆಂಬ ಸ್ವಾರ್ಥವು ಗಂಡನೊಂದಿಗೆ ಆತನ ಪ್ರಿಯ ಮಡದಿಯನ್ನು ಕಳುಹಿಸುವ ಪಾರಲೌಕಿಕತೆಯನ್ನು ಇಲ್ಲಿಗೂ ಅನ್ವಯಿಸಿ ಅನಿವಾರ್ಯವಾಗಿಸಿದೆ. ಮತ್ತು ಅದಕ್ಕಾಗಿಯೇ ಮಹಾಸತಿ ಕಲ್ಲುಗಳೂ ಪ್ರತಿಷ್ಠಾಪನೆಗೊಂಡು ಪೂಜೆಗೊಳ್ಳುತ್ತವೆ. ಇದು ಅಂದಿನ ಯುಗಮೌಲ್ಯವನ್ನೇ ಸಾರುತ್ತವೆ. ತೋರ್ಪಡಿಕೆಯ ಮಾನವೀಯ ನೆಲೆಯ ಪ್ರಕಾರ ಬಾಣಂತಿಯರನ್ನು, ಮುದುಕಿಯರನ್ನು ಆ ಪರಂಪರೆಗೆ ತಳ್ಳದೇ ಮಧ್ಯವಯಸ್ಸಿನ ಮಹಿಳೆಯರನ್ನು ದೂಡುವ ಪ್ರಕ್ರಿಯೆಯ ಹಿಂದೆ ಆಕೆ ಇನ್ನೊಬ್ಬರ ವಶವಾಗಬಾರದೆಂಬ ಉದ್ದೇಶವೇ ಸ್ಪಷ್ಟವಾಗಿದೆ.

ತಾಯ್ತನವೂ ಕೂಡ ಆಕೆಯ ಮೇಲೆ ಹೇರಲಾದ ಒತ್ತಾಯದ ಮೌಲ್ಯವೇ ಆಗಿದೆ. ಅದನ್ನು ಯಾವುದೇ ಕಾರಣಕ್ಕೂ ಸ್ತ್ರೀ ನಿರಾಕರಿಸಬಾರದೆಂಬುದನ್ನೇ ಶಾಸನಗಳ ಮೂಲಕ ಒತ್ತಾಯಿಸಲಾಗಿದೆ. ಮತ್ತು ಆ ಕುರಿತಂತೆ ಹೆಣ್ಣಿಗಿರುವ ಗೌರವ ಸ್ಥಾನ - ಮಾನ ಹಾರೈಕೆಗಳನ್ನು ವಿವರಿಸುತ್ತ ಅದನ್ನು ನಿರಾಕರಿಸದಂತೆ ಒತ್ತಾಯಿಸುವಲ್ಲಿನ ಪುರುಷ ಹಿತಾಸಕ್ತಿಗೆ ಹೆಣ್ಣು ತಾಯ್ತನ ತಿರಸ್ಕರಿಸಿದ ಸಂದರ್ಭವೂ ಕಾರಣವಾಗಿದ್ದೀತು ಎಂದೂ ಸಂದೇಹಿಸಲವಕಾಶವಿದೆ.

೧೩ನೇ ಶತಮಾನದ ಸಾತೇನ ಹಳ್ಳಿಯ ಶಾಸನದ ವೆಣ್ಣೆಲವ್ವೆ ಪರಾಕ್ರಮದ ಅನನ್ಯತೆ ಪಡೆದುಕೊಂಡವಳು. ಗೃಹಿಣಿಯಾಗಿ, ಊರನ್ನು ಕಳ್ಳರಿಂದ ಪಾರು ಮಾಡಿದ ಬಣಂಜುಧರ್ಮ ಉಳಿಸಿದ್ದರ ಪ್ರತೀಕವಾಗಿ 'ಕೋಣವೆತ್ತಿಗಧಿಷೋತ್ತಮೆ' ಎಂದು ಬಿರುದು ಪಡೆದಿದ್ದಾಳೆ. ಸೆಟ್ಟಿಕವ್ವೆ ಅಡುಗೆ ಮನೆಯ ಎಲ್ಲ ಬಂಧನಗಳನ್ನು ಕಳಚಿಕೊಂಡು ಹೊರ ಪ್ರವೇಶ ಮಾಡುವ ಹೆಣ್ಣಿನ

---

೨೩ ದೇಕಬ್ಬೆ ಶಾಸನ, ಶಾಸನ ಸಂಗ್ರಹ, ಸಂ. ಅಣ್ಣಿಗೇರಿ ಎಂ. ಎಂ., ಶೇಷಶಾಸ್ತ್ರಿ ಎ.ಆರ್. ೧೯೮೨

ಸಾಮರ್ಥ್ಯ ಹಾಗೂ ಶಕ್ತಿಯ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.[೨೪] ಆ ಸಾಧ್ಯತೆಗಳನ್ನು ಸಾಧ್ಯವಾಗಿಸಿಕೊಳ್ಳಬೇಕಾದ ತುರ್ತನ್ನು ಇಲ್ಲಿ ಹೆಣ್ಣಿನ ಮುಂದಿಡಲಾಗಿದೆ. ಆ ಮೂಲಕ ಕಟ್ಟಲಾಗಿದ್ದ ಒಂದು ಮೌಲ್ಯವನ್ನು ಒಡೆದು ಇನ್ನೊಂದು ಮೌಲ್ಯವನ್ನು ಸ್ಥಾಪಿಸುವ ಸಾಧ್ಯತೆಯನ್ನು ಗುರುತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಾತೃಪ್ರಧಾನ ಸಂಸ್ಕೃತಿಯನ್ನು ಪ್ರನಿಧಿಸುವ ಅಪರೂಪದ ಶಾಸನ ಕ್ರಿ.ಶ. ಸುಮಾರು ೧೦ನೇ ಶತಮಾನದ ಜಯಸಿಂಹನ ತಳಂಗರೆ ಶಾಸನ. ಅಲ್ಲಿ ಉಲ್ಲೇಖಿಸಲಾಗಿರುವ ಕನ್ಯಾದಾನ (ಭೂಮಿದಾನ) ತುಳುನಾಡಿನಮಾತೃಪ್ರಧಾನ ಸಂಸ್ಕೃತಿಯನ್ನು ಹೆಣ್ಣಿಗೇ ಬಳುವಳಿಯಾಗಿ ದೊರೆವ ಆಸ್ತಿ ಹಕ್ಕಿನ ಪದ್ಧತಿಯಾಗಿದೆ. ಇದು ೧೦ನೇ ಶತಮಾನದಿಂದಲೂ ನಡೆಯುತ್ತ ಬಂದದ್ದನ್ನು ಕಾಣಬಹುದಾಗಿದೆ. ಕನ್ಯಾದಾನವಾಗಿ ಬಂದ ಭೂಮಿಯ [illegible]ನ್ನು ಸಂಪೂರ್ಣವಾಗಿ ಪುರುಷನಿಂದ ಕಸಿದುಕೊಳ್ಳಲಾಗಿದೆ. ಹಾಗಂತ ಆಕಸ್ಮಿಕವಾಗಿ, ಶತ್ರುವೇ ಆಗಿದ್ದರೂ ಹಸಿದು ಬಂದಿದ್ದರೆ ಇಲ್ಲಿ ಉಪಚಾರಕ್ಕೆ ಅಡ್ಡಿ ಇಲ್ಲ. ಅಲ್ಲದೆ 'ಊರ್ಮೆ ಜೋಗವ್ವೆಯ ವಶದೊಳ್ಪಣ್ಣೂಸುಗಳಿಲ್ಲದೊಡೆ ಗಣ್ಡು ಮಕ್ಕಳ್ಗೆ ಸಲ್ಗುಂ'[೨೫] ಎಂದಿರುವುದು ಹೆಣ್ಣು ಮಕ್ಕಳೇ ಆಸ್ತಿ ಹಕ್ಕನ್ನು ಉಳಿಸಿಕೊಂಡ್ದನ್ನು ಸಮರ್ಥಿಸುತ್ತದೆ. ಮಾತ್ರವಲ್ಲ, ಗಂಡಿನ ದಬ್ಬಾಳಿಕೆಗೆ ಹಾಕುವ ಅಂಕುಶವಾಗಿಯೂ ಈ ಮಾತೃಮೂಲೀಯ ಕುಟುಂಬ ಕೆಲಸ ನಿರ್ವಹಿಸುತ್ತದೆ.

ಶಾಸನದ ಸ್ತ್ರೀಯರು ಆಯಾಯ ಕಾಲಘಟ್ಟಕ್ಕೆ ತಮ್ಮ ಬದುಕನ್ನು ಹೊಂದಿಸಿಕೊಳ್ಳಬೇಕಾಗಿ ಬಂದುದನ್ನು ಪ್ರತಿನಿಧಿಸುತ್ತಾರೆ. ಅವರು ಯಾವುದೇ ಸ್ವಾತಂತ್ರ್ಯವನ್ನು ಪಡೆದಿಲ್ಲದಿರುವುದನ್ನೂ ತೋರಿಸಿಕೊಡುತ್ತಾರೆ. ಸಮಾಜಕ್ಕೆ ಒಪ್ಪಿತವಾದ ಮೌಲ್ಯವನ್ನು ಹೆಣ್ಣಿನ ಮೇಲೆ ಹೇರುವ ಕ್ರಿಯೆಯಿಂದ ಆಕೆ ಜರ್ಝರಿತಳಾದರೂ ಸ್ವಾರ್ಥವನ್ನೇ ಹೊತ್ತ ಗಂಡುಕೋಟಿಗೆ ಅದು ಮೌಲ್ಯವಾಗದೇ ಹೋಗುವುದನ್ನು ಅವರು ಪ್ರತಿಪಾದಿಸುತ್ತಾರೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ

ಪ್ರಾಚೀನ ಕನ್ನಡ ಕಾವ್ಯಗಳಲ್ಲಿನ ಸ್ತ್ರೀಯರು ಪ್ರತಿನಿಧಿಸಿದ ಮೌಲ್ಯಗಳನ್ನು ಅವಲೋಕಿಸುವಾಗ ಕಾವ್ಯಗಳು ರಚನೆಯಾದ ಸಂದರ್ಭದಲ್ಲಿದ್ದ ರಾಜಕೀಯ, ಧಾರ್ಮಿಕ ಒತ್ತಡಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈಗಾಗಲೇ ಸಾಹಿತ್ಯ ಚರಿತ್ರೆಯು ಅದನ್ನು ಗುರುತಿಸಿದೆ. ಹಳಗನ್ನಡ, ನಡಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಮಾತ್ರ ಅಲ್ಲದೇ ರಾಜಸತ್ತೆಯ ವೈಭವದ, ವಿಘಟನೆಯ ಮತ್ತು ರಾಜಸತ್ತೆಯ ಅವನತಿಯ ಕಾಲಘಟ್ಟಗಳಲ್ಲಿ ಹೆಣ್ಣುಗಳನ್ನು ಅಂದಿನ ಸಾಮಾಜಿಕ

---

೨೪ ದೇಕಬ್ಬೆ ಶಾಸನ, ಶಾಸನ ಸಂಗ್ರಹ, ಸಂ. ಅಣ್ಣಿಗೇರಿ ಎಂ.ಎಂ., ಶೇಷಶಾಸ್ತ್ರಿ ಎ.ಆರ್. ೧೯೮೭

೨೫ ತಳಂಗರೆ ಶಾಸನ ಶಾಸನ ಸಂಗ್ರಹ, ಸಂ.ಅಣ್ಣಿಗೇರಿ ಎಂ.ಎಂ., ಶೇಷಶಾಸ್ತ್ರಿ ಎ.ಆರ್. ೧೯೮೭

ಪ್ರವೇಶ ಪಡೆದ ಸ್ಥಿತಿಗತಿಗಳಿಗೆ ಹೋಲಿಸಿಕೊಳ್ಳಬಹುದಾಗಿದೆ. ವಿವಿಧ ಮತಧರ್ಮಗಳ ಹೋರಾಟದ ಕಾಲಗಳ ನಡುವೆ ಭಾರತೀಯ ಸಂಸ್ಕೃತಿಯನ್ನು ಒಪ್ಪಿಕೊಂಡದ್ದು ಪಂಪಯುಗದ ಕಾವ್ಯಗಳುದ್ದಕ್ಕೂ ಕಾಣಬಹುದು. ಇಲ್ಲಿನ ಸ್ತ್ರೀ ಸಂಸ್ಕೃತಿಯ ಒಳಗಡೆ ನಿಯಂತ್ರಿತಗೊಂಡಿದ್ದಾಳೆ.

ಹೆಣ್ಣಿನ ವಿವಾಹದ ಹಿನ್ನೆಲೆಯಲ್ಲಿ ಆಕೆಗಿದ್ದ ಸ್ವಾತಂತ್ರ್ಯವನ್ನು ಕಾವ್ಯಗಳಲ್ಲಿ ತೆರೆದುಕೊಂಡ ಸ್ವಯಂವರ ವಿವಾಹ ಪದ್ಧತಿ ಸಾಬೀತು ಪಡಿಸುತ್ತದೆ. ಆದರೆ ಅದು ರಾಜವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಕೆಳವರ್ಗದ ಸುಂದರ ಸ್ತ್ರೀಯರಿಗೆ ಆ ಸ್ವಾತಂತ್ರ್ಯವಿರಲಿಲ್ಲ (ಆ ಸ್ವಾತಂತ್ರ್ಯದಿಂದ ವಂಚಿತರಾಗಿದ್ದರು.) ಆದರೆ ಅವರ ಇಚ್ಛೆ ಮೀರಿ ವಿವಾಹವಾಗುತ್ತಿದ್ದ ಪ್ರಭುವರ್ಗದ ಪ್ರವೃತ್ತಿ ಒಂದು ರೀತಿಯಲ್ಲಿ ಬಲಾತ್ಕಾರದ್ದೇ ಆಗಿತ್ತು. ಇದು ಹೆಣ್ಣನ್ನು ಆಸ್ತಿಯಾಗಿ ಕಂಡು ಅನುಭೋಗಿಸುವ ಮಿತಿ ಮೀರಿದ ಭೋಗಲಾಲಸೆಯ ಪುರುಷನನ್ನೇ ನಿರ್ದೇಶಿಸುವುದಾಗಿದೆ. ಎಂದರೆ ಹೆಣ್ಣು ಜೀವಿಯಾಗದೇನೇ ಒಂದು ವಸ್ತುವಾಗಿ ಸಂಪತ್ತಾಗಿ ಮಾತ್ರ ಪರಿಗಣಿತಳಾಗಿದ್ದಾಳೆ.

ಗಂಡಸು ಹೆಣ್ಣಿನ ಮೊಲೆಗಳಿಗೆ ಬರೆ ಇಡುವುದು [೨೬] ತಾವು ಪಂದ್ಯ ಗೆದ್ದುದಕ್ಕಾಗಿ ತಮಗಿಷ್ಟ ಬಂದ ಹೆಣ್ಣಿನೊಂದಿಗೆ ಸುಖಿಸುವುದು ಇವೆಲ್ಲ ಯಾಜಮಾನ್ಯ ಸಂಸ್ಕೃತಿಯ ವರ್ತನೆಗಳೇ, ಕ್ರೌರ್ಯಗಳೇ ಆಗಿವೆ. ಮತ್ತು ಇವೆಲ್ಲ ಯಾಜಮಾನ್ಯಶಾಹಿಗೆ ಗೌರವ ತರುವವುಗಳು ಎಂದು ಬಗೆಯಲಾಗಿದೆ. ಇಲ್ಲಿ ಎಲ್ಲೂ ಅದರ ನಿರಾಕರಣೆಯ ಯಾವುದೇ ಸೂಚನೆ ಕಾಣುವುದಿಲ್ಲ. ಕಾರ್ತಿಕ ಋಷಿಯ ಕತೆಯಲ್ಲಿ ಮಗಳು ಕೃತ್ತಿಕೆಯನ್ನೇ ಭೋಗಿಸ ಹೊರಟ ಅರಸು ತಂದೆಯ ಹದ್ದು ಮೀರಿದ ಅಹಂನ ಲಂಪಟತನಕ್ಕೆ ಅವಳು ತೋರುವ ಶೂನ್ಯ ಪತಿಕ್ರಿಯೆ[೨೭] ಹೆಣ್ಣಿನ ಮನಸ್ಸು ಅಭಿಪ್ರಾಯಗಳಿಗೆ ಅಂದು ಮಾನ್ಯತೆ ಇಲ್ಲದೇ ಇದ್ದುದನ್ನು ಸೂಚಿಸುತ್ತದೆ.

ಈ ಮಧ್ಯೆ ಪರರ ಹೆಂಡಿರನ್ನು ಕೂಡಿದರೆ ದುರ್ಗತಿ ಲಭಿಸುವುದೆಂಬ ಭಯವನ್ನು ತುಂಬಿದ ಸಂದರ್ಭಗಳೂ ಇದ್ದವು. ಇವು ಸ್ತ್ರೀಯರ ಕುರಿತ ಗೌರವದಿಂದ ಪ್ರೇರಿತವಾದದ್ದಲ್ಲ. ಬದಲಾಗಿ ಸ್ವಾರ್ಥಕ್ಕಾಗಿಯೇ ಪುರುಷ ಹಾಗೆ ಭಯ ಬಿತ್ತಿದ್ದಾಗಿದೆ. ಕೆಲವು ಹೆಣ್ಣು ಮಕ್ಕಳು ಪ್ರಾಣೆಜನ್ಮ ಪಡೆದು ಪ್ರತೀಕಾರ ಸಾಧಿಸುತ್ತಾರೆ. ಇದು ಹೆಣ್ಣು ಜನ್ಮದ ಅಸಹಾಯಕತೆಯ ಪರಿಣಾಮವೇ ಆಗಿದೆ. ಕೃತಿ ಪ್ರಕಟಗೊಂಡ ಸಂದರ್ಭದ ಧಾರ್ಮಿಕ ಹಿನ್ನೆಲೆಯನ್ನು ಗಣಿಸಿದರೆ ಅಲ್ಲಿನ ಧರ್ಮದ ಕಟ್ಟುಪಾಡು - ತಾರತಮ್ಯ ಸ್ತ್ರೀಯರನ್ನು ಸಂಪೂರ್ಣ ಮರೆಗೆ ಸರಿಸಿದ ಸಂದರ್ಭಗಳೂ ಇ ದ್ದುದು ಕಂಡು ಬರುತ್ತವೆ. ಮೋಕ್ಷಕ್ಕೆ ಗಂಡಾಗಿಯೇ ಜನಿಸಬೇಕೆಂಬ ಜೈನ ತತ್ವ ಹೆಣ್ಣನ್ನು ಕಾಣುತ್ತಿದ್ದ ದೃಷ್ಟಿಕೋನಕ್ಕೆ ಪುರಾವೆಯಾಗಿದೆ. ಗಂಡಿನಿಂದಲೇ ಹೆಣ್ಣನ್ನು ಗುರುತಿಸುವ ಪರಂಪರೆಯನ್ನು ಒಪ್ಪಿಕೊಂಡ ಹೆಣ್ಣು ಇಲ್ಲಿ ಪತಿಯೇ ಪರದೈವ ಎಂಬ ಆದರ್ಶದ ಬೆನ್ನು ಹಿಡಿಯುವುದು

---

೨೬ ವಡ್ಡಾರಾಧನೆಯಲ್ಲಿ ಸ್ತ್ರೀ - ಒಂದು ಸಾಂಸ್ಕೃತಿಕ ಅಧ್ಯಯನ, ಅಂಕಣ ಮಾರ್ಚ್ ೧೯೮೧

೨೭ ಪು. ೧೦೭ ವಡ್ಡಾರಾಧನೆ, ಸಂ. ಕೇಶವ ಭಟ್ಟ ಟಿ. ೧೯೭೭

ಅನಿವಾರ್ಯವಾಗಿತ್ತು. ಆದರೂ ಪತಿಯ ನಡವಳಿಕೆಗಳಿಗೆ ರೋಸಿ, ಸೆಟೆದು ನಿಲ್ಲುವುದನ್ನು ಇಲ್ಲಿ ತೋರಿಸಿಕೊಡಲಾಗಿದೆ.[೨೮]

ಭಾರತೀಯ ಪರಂಪರೆಯಲ್ಲಿ ಸ್ಥಿರೀಕೃತಗೊಂಡಿರುವ ಹೆಣ್ಣಿನ ಬದುಕಿನ ಕುರಿತ ನಿಲುವುಗಳು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಎಡೆಪಡೆಯುತ್ತವೆ. ಹೆರುವವಳು, ಪಾಲಿಸುವವಳು, ಸಹನೆಯಿರುವವಳು, ಕುಟುಂಬ ನಡೆಸುವವಳು ಎಂದೆಲ್ಲ ಆಗಿ ಕಾವ್ಯ ಪರಂಪರೆಯಲ್ಲಿ ಸ್ತ್ರೀ ಕಾಣಿಸಿಕೊಂಡಿದ್ದಾಳೆ.

'ವಡ್ಡಾರಾಧನೆ'ಯ ಪಂದ್ಯಾವಳಿ ಗಾಂಧರ್ವ ವಿವಾಹಕ್ಕೆ ಒಪ್ಪಿಗೆ ನೀಡಿದ್ದರೆ[೨೯], 'ವಿಕ್ರಮಾರ್ಜುನ ವಿಜಯ',[೩೦] ಆದಿಪುರಾಣ, ನೇಮಿಚಂದ್ರನ ಲೀಲಾವತಿ ಪ್ರಬಂಧ, ದೇವಕವಿಯ ಕುಸುಮಾವಳಿಗಳಲ್ಲಿ ವಿವಾಹಕ್ಕೆ ಹೆಣ್ಣಿನ ಒಪ್ಪಿಗೆಯೇ ಪ್ರಧಾನವಾಗಿರುವುದು ಲಕ್ಷ್ಯಾರ್ಹವಾಗಿದೆ. ಈ ಪದ್ಧತಿ ಸಮಾಜದ ಮಾನ್ಯತೆ ಪಡೆದರೆ ಅಕ್ರಮ ರೀತಿಯಲ್ಲಿ, ಅಪಹರಿಸಿ ಆಗುವ ವಿವಾಹಗಳು ಅಮಾನ್ಯವಾಗುತ್ತವೆ. ಸ್ವಯಂವರ ಪದ್ಧತಿಯನ್ನು ಹಾಗೂ ಕನ್ಯಾಶುಲ್ಕದ ಬೆಂಬಲವನ್ನು ಹೆಣ್ಣಿಗೆ ಕೊಟ್ಟ ಗೌರವದ ಪ್ರತೀಕವಾಗಿ ಭಾವಿಸಬಹುದಾಗಿದೆ. ಇಂದಿನವರೆಗೂ ನಡೆದುಕೊಂಡು ಬರುತ್ತಿರುವ ವಿವಾಹ ಕುರಿತ ನಿರ್ಬಂಧಗಳನ್ನು, ಕಾವ್ಯದಲ್ಲಿ ಕಟ್ಟುನಿಟ್ಟಾಗಿ ಪರಿಪಾಲಿಸುವಂತೆ ವಹಿಸಿದ ಎಚ್ಚರವನ್ನು ವೈಜ್ಞಾನಿಕ ಕಾಳಜಿಯಾಗಿ ಕೂಡ ಗ್ರಹಿಸಬಹುದಾಗಿದೆ. ಲೈಂಗಿಕ ಸಂಬಂಧಕ್ಕೆ ಸಮಾಜ ಮಾನ್ಯತೆಯ ನಿರ್ಬಂಧ ಹಾಕಿರುವುದು ಎಂದರೆ ಸ್ವೇಚ್ಛಾಚಾರಕ್ಕೆ ಹಾಕಲಾದ ಕಡಿವಾಣವಾಗಿ ಅರ್ಥೈಸಿಕೊಳ್ಳಬೇಕು. ಆದರೆ ನಡುಗನ್ನಡ ಕಾಲದ 'ಮೋಹನ ತರಂಗಿಣಿ'[೩೧] ಗಂಡ ವಯಸ್ಸಿನಲ್ಲಿ ಹಿರಿಯವನಾಗಿರಬೇಕು ಎಂಬ ನಿಲುವನ್ನು ಒಡೆದಿದೆ. ಜಾತೀಯತೆಯ ಮಡಿವಂತಿಕೆಯನ್ನು ಈ ಕಾಲದ ಹರಿಹರನ 'ಹೇರೂರ ಹೆಣ್ಣಿನ ರಗಳೆ',[೩೨] ಹಾಗೂ ರಾಘವಾಂಕನ 'ಸೋಮನಾಥ ಚರಿತೆ'[೩೩] ಪ್ರತಿನಿಧಿಸುತ್ತದೆ. ಈ ಸಂದರ್ಭದಲ್ಲಿ ೧೨ನೇ ಶತಮಾನದ ವಚನ ಸಾಹಿತ್ಯದ ವೈಚಾರಿಕ ನಿಲುವನ್ನು ಮರೆಯುವಂತಿಲ್ಲ.

---

೨೮ ಪು. ೧೧ ವಡ್ಡಾರಾಧನೆಯಲ್ಲಿ ಸ್ತ್ರೀ - ಒಂದು ಸಾಂಸ್ಕೃತಿಕ ಅಧ್ಯಯನ, ಅಂಕಣ ಮಾರ್ಚ್ ೧೯೮೧

೨೯ ವಡ್ಡಾರಾಧನೆ, ಸಂ. ಕೇಶವ ಭಟ್ಟ ಟಿ. ೧೯೭೬

೩೦ ಪಂಪಭಾರತ ಎಂಬ ವಿಕ್ರಮಾರ್ಜುನ ವಿಜಯಂ, ಸಂ. ಪುಟ್ಟಪ್ಪ ಕೆ.ವಿ. ೧೯೭೭

೩೧ ಮೋಹನ ತರಂಗಿಣಿ, ಸಂ. ಕೋತಿನ ಎಂ. ಎಸ್. ೧೯೭೭

೩೨ ಸಕಲಪುರಾತನರ ವಚನಗಳು, ಸಂಪುಟ .೩, ಸಂ. ಸುಂಕಾಪುರ ಎಂ.ಎಸ್. ೧೯೭೮, ಹರಿಹರನ ರಗಳೆಗಳು, ಸಂ.ಮಲ್ಲಾರು ವಿ.ವಿ. ೧೯೬೮

೩೩ ಸೋಮನಾಥ ಚರಿತೆ,ಸಂ.ಹಿರೇಮಠ ಆರ್.ಸಿ. ಮತ್ತು ಸುಂಕಾಪುರ ಎಂ.ಎಸ್. ೧೯೭೭

ವಿವಾಹೇತರ ಲೈಂಗಿಕ ಸಂಬಂಧಗಳನ್ನು ಕಾವ್ಯಗಳು ಸಂಪೂರ್ಣವಾಗಿ ಸಮ್ಮತಿಸುವುದಿಲ್ಲ. ಆದರ್ಶದ, ಧರ್ಮದ ಪರವಾದ ನಿಲುವಿನ ಹಿನ್ನೆಲೆಯಲ್ಲಿ ಅದನ್ನು ಅನೈತಿಕವಾಗಿಯೇ ಕಂಡು ತಿರಸ್ಕರಿಸಲಾಗಿದೆ. ಕುಟುಂಬವೇ ನಾಶವಾಗುತ್ತದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಅನೈತಿಕ ಲೈಂಗಿಕ ಸಂಬಂಧಕ್ಕೆ ಕಡಿವಾಣ ಹಾಕಲಾಗಿದೆ. ಸಮಾಜ ಮಾನ್ಯ ಮಾಡಿದ ರೀತಿಗೆ ವಿರುದ್ಧವಾಗಿ ವಿವಾಹವಾದ ಗಂಡು-ಹೆಣ್ಣು ಇಬ್ಬರಿಗೂ ಶಿಕ್ಷೆ ವಿಧಿಸಲಾಗಿದೆ. ಅಂಥ ನಡವಳಿಕೆಗಳನ್ನು ವ್ಯಭಿಚಾರ[೩೪], ಅಪರಾಧ, ವಿವಾಹಬಾಹಿರ [೩೫] ವಿವಾಹೇತರ ಲೈಂಗಿಕ ಸಂಬಂಧ [೩೬] ಎಂದೆಲ್ಲ ಹೀಗಳೆಯಲಾಗಿದೆ. ಆದರೆ ಇಲ್ಲೆಲ್ಲ ಅಪರಾಧ ಪಟ್ಟಿಯನ್ನು ಹೆಣ್ಣಿಗೇ ಅಂಟಿಸಲಾಗುತ್ತಿತ್ತು. ನೇಮಿಚಂದ್ರನ 'ಲೀಲಾವತಿ ಪ್ರಬಂಧ'[೩೭] ವಿದ್ಯಾಧರನ ಹೆಂಡತಿ ತಾನು ಬಯಸಿದ ಇತರ ಗಂಡಿನ ಜೊತೆಗಿನ ಲೈಂಗಿಕ ಸಂಬಂಧಕ್ಕೆ ಆತ ತೋರಿದ ವಿರೋಧಕ್ಕೆ ಸ್ವತಃ ಪ್ರತಿಭಟಿಸುವುದು, ಹೇರಿದ ಕಟ್ಟುಪಾಡುಗಳನ್ನು ಮೀರುವುದರ ಮೂಲಕ ಸ್ವತಂತ್ರ ಆಲೋಚನೆ ಬೆಳೆಸಿಕೊಂಡಿದ್ದಾಳೆ. ಆ ಮೂಲಕ ಅಂದಿನ ಸಂದರ್ಭದ ಜೀವನ ಮೌಲ್ಯವನ್ನು ಪ್ರತಿನಿಧಿಸಿದ್ದಾಳೆ. ಜನ್ನನ ಯಶೋಧರ ಚರಿತೆಯ ಅಮೃತಮತಿಯ ಒಟ್ಟೂ ವ್ಯಕ್ತಿತ್ವ - ನಡವಳಿಕೆಯ ಚಿತ್ರಣದಲ್ಲಿ ನೈತಿಕತೆಯ ಪ್ರತಿಷ್ಠಾಪನೆ ಇದೆ.

ಚಾವುಂಡರಾಯನ 'ದಶಕುಮಾರ ಚರಿತೆ'[೩೮]ಯಲ್ಲಿ ಹೆಣ್ಣು ಗಂಡನನ್ನು ವಂಚಿಸಿ ಬೇರೊಬ್ಬನನ್ನು ಕೂಡಿದ್ದು ಅಂದಿನ ಸಾಮಾಜಿಕ ಸಂದರ್ಭವನ್ನು ಪ್ರತಿನಿಧಿಸುತ್ತದೆ. ಇಲ್ಲೆಲ್ಲ ಈಗಾಗಲೇ ಒಪ್ಪಿಕೊಂಡಿರುವ ನಿಲುವಿನ ವಿರೋಧವಿದೆ. ಭಾರತೀಯ ವೈದಿಕ ಪರಂಪರೆಯಲ್ಲಿನ ವಿವಾಹೇತರ ಲೈಂಗಿಕ ಸಂಬಂಧದ ನಿಲುವನ್ನು ಒಪ್ಪಿಕೊಂಡೇ ಕಾವ್ಯಗಳು ಬೆಳೆದಿವೆ. ಈ ನಿಷೇಧಿತ ಧೋರಣೆಯಲ್ಲಿ ಪುರುಷರ ಆಲೋಚನೆಯ ಪ್ರತಿಧ್ವನಿಯಿದೆ. ಅದೇ ನೆಲೆಯಲ್ಲೇ ನೀತಿಯನ್ನು ಪ್ರತಿಪಾದಿಸಲಾಗಿದೆ.

ಸತಿಪದ್ಧತಿ - ವೈಧವ್ಯದ ದಾರುಣ ಬದುಕಿಗೆ ಒಳಗಾದ ಕಾವ್ಯದ ಹೆಣ್ಣು ಅಂದಿನ ವ್ಯವಸ್ಥೆಯನ್ನು ಪ್ರತಿನಿಧಿಸಿದ್ದಾಳೆ. ಕ್ರಿ.ಶ. ೫೦೦ರ ತನಕ ಇರದಿದ್ದ ಸತಿ ಪದ್ಧತಿಯ ಒತ್ತಡ ಅನಂತರ ತೀವ್ರಗೊಂಡದ್ದನ್ನು ಇತಿಹಾಸ ಹೇಳುತ್ತದೆ. ಕಾವ್ಯಗಳೂ ಅದನ್ನೇ ದಾಖಲಿಸಿವೆ. ವಡ್ಡಾರಾಧನೆ, ಆದಿಪುರಾಣಗಳಲ್ಲಿ ಸತಿಪದ್ಧತಿಯ ಕುರಿತ ಯಾವುದೇ ಉಲ್ಲೇಖಗಳಿಲ್ಲ. ಅಲ್ಲಿ ಬರುವ ವೈಧವ್ಯದ,

---

೩೪ ಚಾವುಂಡರಾಯ ಪುರಾಣ, ಸಂ.ಕಮಲ ಹಂಪನಾ ೧೯೮೩

೩೫ ಕರ್ಣಪಾರ್ಯನ ನೇಮಿನಾಥ ಪುರಾಣ ಅನು: ನಾಗರಾಜಯ್ಯ ಹಂಪ. ಮತ್ತು ಕುಲಕರ್ಣಿ ಆರ್.ಬಿ. ಸಂಪುಟ ೧-೨, ೧೯೮೫

೩೬ ನಯಸೇನನ ಧರ್ಮಾಮೃತ ಅನು: ವೆಂಕಟರಾಮಪ್ಪ ಕೆ. ೧೯೭೭

೩೭ ಲೀಲಾವತಿ ಪ್ರಬಂಧ, ಸಂ.ವೆಂಕಟರಾಮಪ್ಪ ಕೆ., ಜವರೇಗೌಡ ದೇ. ೧೯೬೬

೩೮ ದಶಕುಮಾರ ಚರಿತೆ, ಅನು: ಶ್ರೀನಿವಾಸ ಅಯ್ಯಂಗಾರ ೧೯೭೭

ದುಃಖದ ಆಶ್ರಿತ ಬದುಕಿನ ವಿವರಗಳು ಸತಿಪದ್ಧತಿ ಹರಿತವಾಗಿದ್ದ ದಿನಗಳನ್ನು ಮುಂದಿಡುತ್ತವೆ. ಕಾವ್ಯಗಳೂ ಅದನ್ನೇ ಒಪ್ಪಿಕೊಂಡಿವೆ. 'ಪಂಪನ ವಿಕ್ರಮಾರ್ಜುನ ವಿಜಯ'ದಲ್ಲಿ ಸತಿ ಪದ್ಧತಿಯ ವಿಜೃಂಭಣೆ ಇಲ್ಲ. ಪಾಂಡು ಅಳಿದ ಮೇಲೆ ಮಾದ್ರಿ ಅವನನ್ನು ಅನುಸರಿಸಿದ ಬಳಿಕ ಕುಂತಿ ಮಕ್ಕಳ ರಕ್ಷಣೆಗಾಗಿ ವಿಧವೆಯಾದರೂ ಬಾಳ್ವೆನಡೆಸಿರುವಲ್ಲಿ ಮಕ್ಕಳ ರಕ್ಷಣೆಗಾಗಿ ಬಾಳುವ ಸ್ವಾತಂತ್ರ್ಯ ಪಡೆದಿದ್ದುದನ್ನು ಕಾಣಬಹುದು. 'ಅಜಿತ ತೀರ್ಥಂಕರ ಪುರಾಣ ತಿಲಕ'ದ[೩೯] ಅತ್ತಿಮಬ್ಬೆ ವೈಧವ್ಯದ ಬದುಕು ಕಾಣುತ್ತಲೇ ಮಾಡಿದ ಸಾಧನೆ ಕೂಡ ಸತೀ ಪದ್ಧತಿ ಅನುಸರಿಸಲೇಬೇಕಾದ ಒತ್ತಡವಿಲ್ಲದ ಸಮಾಜದ ಸಂದರ್ಭವನ್ನು ಪ್ರತಿನಿಧಿಸಿದ್ದಾಗಿದೆ. ಪಂಪನ ವಿಕ್ರಮಾರ್ಜುನ ವಿಜಯದ[೪೦] ಸೇನೆಯ ಆಳುಗಳ ಪತ್ನಿಯರು ಪತಿಯಂದಿರು ಯುದ್ಧಕ್ಕೆ ಸನ್ನದ್ಧರಾದ ಸಂದರ್ಭದಲ್ಲಿ ದೇವಲೋಕದಲ್ಲಿ ಇದಿರುಗೊಳ್ಳುವ ಆಕಾಂಕ್ಷೆ ವ್ಯಕ್ತಪಡಿಸಿದ್ದು, ಸತಿಪದ್ಧತಿಯ ಅನುಸರಣೆ ಪಾರಲೌಕಿಕತೆಯ ಸಂಕೇತವಾಗಿ ನಿಂತಿದೆ. ಅಂದರೆ ವಿಧವೆ ಪಾರಲೌಕಿಕ ಚಿಂತನೆಯಲ್ಲೇ ಮುಳುಗಿರುವಂತೆ ಸೌಂದರ್ಯರಹಿತಳಾಗಿ ಪರಪುರುಷನನ್ನು ಆಕರ್ಷಿಸದಂತೆ ಎಷ್ಟು ಸಾಧ್ಯವೋ ಅಷ್ಟು ವಿಕಾರವಾಗಿ ಇರುವಂತೆ ಪುರುಷನ ಸ್ವಾರ್ಥ ಮನಸ್ಸು ನಿರ್ದೇಶಿಸಿದ್ದು ಸ್ಪಷ್ಟವಾಗುತ್ತದೆ. 'ರಾಜಕೀಯ ವ್ಯವಸ್ಥೆ ನಂಬಿದ ನೈತಿಕ ಮೌಲ್ಯಗಳ ಪರಿಣಾಮವೆಂದರೆ ಸತಿಪದ್ಧತಿ' ಎಂದೂ ಕೇಶವ ಶರ್ಮ ಈ ಸಂದರ್ಭದ ಕುರಿತು ಚರ್ಚಿಸಿದ್ದಾರೆ.[೪೧]

ಚಾವುಂಡರಾಯನ ದಶಕುಮಾರ ಚರಿತೆಯಲ್ಲಿ[೪೨] ಮೇಲುವರ್ಗ ಹಾಗೂ ಕೆಳವರ್ಗದ ವಿಧವಾ ಸ್ತ್ರೀಯರು ಎದುರಾಗುತ್ತಾರೆ. ಅಲ್ಲಿ ಮೇಲ್ವರ್ಗದ ಹೆಣ್ಣು ಸಹಗಮನ ಪದ್ಧತಿ ಅನುಸರಿಸಿದರೆ ಕೆಳವರ್ಗದ ಹೆಣ್ಣು ಅದನ್ನು ಅನುಸರಿಸುವುದಿಲ್ಲ. ಕೆಳವರ್ಗದ ವಿಧವೆ ನೈತಿಕತೆಯ ಗಾಢಬಂಧನ ಕಳಚಿಕೊಂಡದ್ದನ್ನು ಇಲ್ಲಿ ಗುರುತಿಸಬಹುದು. ಇಲ್ಲಿ ವಿಧವೆ ಬೇರೆ ಪುರುಷನನ್ನು ಕೂಡುವುದು ನಿಷೇಧಿತವಾಗಿಲ್ಲ.

ವಚನ ಸಾಹಿತ್ಯದ ಹೊರತಾಗಿ ಉಳಿದೆಲ್ಲ ಸಂದರ್ಭಗಳಲ್ಲಿ ಮೇಲ್ವರ್ಗದ ಸಂಪ್ರದಾಯಬದ್ಧ ಮೌಲ್ಯಗಳೇ ಪ್ರತಿಬಿಂಬಿತವಾಗಿವೆ. ಆದ್ದರಿಂದಲೇ ಸಹಗಮನದಂಥ ಆಚರಣೆಗಳು ಹಲವೆಡೆ ಸಮ್ಮತವಾಗಿವೆ. ವೈಧವ್ಯದ ಕಟ್ಟುಪಾಡುಗಳು ಹಾಗೆಯೇ ಮುಂದುವರಿಯುವಂತೆ ಬೆಂಬಲಿಸಿವೆ. ಪ್ರಾಚೀನ ಕಾವ್ಯಗಳು ಎಲ್ಲಿಯೂ ಕುಟುಂಬದ ಹೊರತಾಗಿನ ಹೆಣ್ಣನ್ನು ಚಿತ್ರಿಸದಿರುವುದು ಅದನ್ನು

---

೩೯ ಅಜಿತ ತೀರ್ಥಂಕರ ಪುರಾಣತಿಲಕ, ಸಂ.ದೇವೀರಪ್ಪ, ಜವರೇಗೌಡ ದೇ. ೧೯೫೫

೪೦ ಪಂಪಭಾರತ ಎಂಬ ವಿಕ್ರಮಾರ್ಜುನ ವಿಜಯಂ, ಪ್ರ.ಸಂ. ಪುಟ್ಟಪ್ಪ ಕೆ.ವಿ. ೧೯೭೭

೪೧ ಪ್ರಚೀನ ಕನ್ನಡ ಕಾವ್ಯಗಳಲ್ಲಿ ಹೆಣ್ಣಿನ ಪರಿಕಲ್ಪನೆ ಅಪ್ರಕಟಿತ ಸಂಶೋಧನ ಪ್ರಬಂಧ, ಕೆ. ಕೇಶವ ಶರ್ಮ ೧೯೮೮

೪೨ ದಶಕುಮಾರ ಚರಿತೆ, ಅನು: ಶ್ರೀನಿವಾಸ ಅಯ್ಯಂಗಾರ್ ಜಿ.ಆರ್. ೧೯೭೭

ಒಪ್ಪಿಕೊಳ್ಳದಿದ್ದುದಕ್ಕೆ ಸಾಕ್ಷಿಯಾಗಿದೆ. ಅಂದರೆ ಕುಟುಂಬದ ಮುಂದುವರಿಕೆಗೆ ಹೆಣ್ಣಿನ ಅನಿವಾರ್ಯತೆಯನ್ನು ಒಪ್ಪಿಕೊಳ್ಳಲಾಗಿದೆ. ಹೆಣ್ಣನ್ನು ಗಂಡೇ ನಿರ್ದೇಶಿಸುತ್ತ ಅಧಿಕಾರ ಚಲಾಯಿಸುತ್ತ ಅದಕ್ಕೆ ಅವಳು ಒಳಗಾಗಿ ನೊಂದು - ಬೆಂದು ಹಣ್ಣಾಗಿ ಹೋಗುವಂತೆ ಮಾಡಿರುವುದು ಅಂದಿನ ಕುಟುಂಬ ವ್ಯವಸ್ಥೆಯ ಸ್ಥಾಪಿತ ನಿಲುವಾಗಿದೆ. ಜೊತೆಗೆ ಅದು ಸಾರ್ವಕಾಲಿಕ ನಡವಳಿಕೆಯೂ ಆಗಿರಬೇಕು ಎಂಬುದನ್ನು ಸಾರಿವೆ. ಆದರೆ ವಚನ ಸಾಹಿತ್ಯ ಅದಕ್ಕೆ ತದ್ವಿರುದ್ಧವಾದ ಕುಟುಂಬ ವ್ಯವಸ್ಥೆಯನ್ನು ಕಟ್ಟುತ್ತದೆ. ಪತಿ-ಸತಿಗಳ ನಡುವೆ ಭೇದರಹಿತ ಸಂಬಂಧ ಸಾರಿದೆ. ಅಲ್ಲಿ ಸಮಾನತೆ ತರುವುದರೊಂದಿಗೆ ಈ ಸಂಬಂಧದ ನಡುವೆ ಗೌರವ ಹೆಚ್ಚಿಸಲಾಗಿದೆ. ಹಾಗೆ ಅವರು 'ಲಿಂಗಪತಿ, ಶರಣಸತಿ' ಎಂಬ ತತ್ವ ಅನುಸರಿಸಿ ದಬ್ಬಾಳಿಕೆಗೆ ವಿರೋಧ ತೋರುತ್ತಾರೆ. ಇವರಲ್ಲಿ ಹೆಣ್ಣಿನ ವೇದನೆಯ ಬದುಕಿನ ವಿರುದ್ಧ ಪ್ರತಿಭಟನೆ ಇದೆ. ವೈಚಾರಿಕತೆಯ ಪ್ರತಿಬಿಂಬಿಸುವಿಕೆ ಇದೆ. ಈ ನಿಟ್ಟಿನಲ್ಲಿ ವಚನಗಳು ಕೆಲಸ ಮಾಡಿವೆ. ಇಡೀ ಕುಟುಂಬ ವ್ಯವಸ್ಥೆಯನ್ನೇ ಒಡೆದು ಧಾರ್ಮಿಕ ಚೌಕಟ್ಟನ್ನು ಅನುಸರಿಸಿ ಲೌಕಿಕದ ನೆಲೆಯಲ್ಲಿ ಮನುಷ್ಯ ಸಂಬಂಧವೇ ಮುಖ್ಯವಾಗಬೇಕಾದದ್ದನ್ನು ವಚನ ಸಾಹಿತ್ಯ ಪ್ರತಿನಿಧಿಸಿದೆ.

ಕಾವ್ಯಗಳಲ್ಲಿ ಅಲ್ಲಲ್ಲಿ ಸಾಮಾನ್ಯ ಸ್ತ್ರೀಯರು ಕಾಣಸಿಕೊಳ್ಳುತ್ತಾರಾದರೂ ಅವರು ಹೆಚ್ಚಾಗಿ ಕಾವ್ಯರಚನೆಯ ಸಂದರ್ಭದ ಕಾಲದ ಸಾಮಾಜಿಕ ಸಂಸ್ಕೃತಿಯಲ್ಲಿ ಚಾಲ್ತಿಯಲ್ಲಿದ್ದ ಬೆಲೆವೆಣ್ಣು ಅಥವಾ ವೇಶ್ಯಾಪದ್ಧತಿಯನ್ನೂ ಪ್ರತಿನಿಧಿಸುತ್ತಾರೆ. ರಾಣಿಯೊಂದಿಗೆ ದಾಸಿಯಾಗಿ, ಗಂಡನಿಗೆ ವಿಧೇಯ ಪತ್ನಿಯಾಗಿ ಬದುಕಬೇಕಾಗಿದ್ದ ಹೆಣ್ಣು ಗಂಡಿನ ಚೌಕಟ್ಟಿನಲ್ಲಿ ಬಾಳ್ವೆ ನಡೆಸಬೇಕಾಗಿದ್ದ ಅನಿವಾರ್ಯ ಸಂದರ್ಭಗಳನ್ನು ಪ್ರತಿನಿಧಿಸಿದ್ದಾಳೆ. ತಾನು ಬದುಕಬೇಕಾದ ಅನಿವಾರ್ಯತೆ ಇದ್ದುದರಿಂದ ಆಕೆ ವೇಶ್ಯಾವಾಟಿಕೆಗೆ ಒಪ್ಪಿಕೊಂಡಿದ್ದಳು. ಆದ್ದರಿಂದ ಇಲ್ಲೆಲ್ಲ ಅದು ಅಧರ್ಮವಾಗಲಿಲ್ಲ.

ಹತ್ತನೇ ಶತಮಾನದ ಕಾವ್ಯಗಳಲ್ಲಿ ಸಾಮಾನ್ಯ ಸ್ತ್ರೀಗಿಂತ ಕೊಂಚ ಭಿನ್ನ ಸ್ಥಿತಿಯಲ್ಲಿ ಮಧ್ಯಕಾಲೀನ ಕಾವ್ಯಗಳು ಹೆಣ್ಣನ್ನು ಚಿತ್ರಿಸಿವೆ. ಇಲ್ಲಿ ಸೂಳೆಗಾರಿಕೆ ಇದೆ. ಆದರೆ ಅದು ರಾಜಪ್ರಭುತ್ವದ ನಿರಾಕರಣೆಯ ಹಂತದಲ್ಲಿಯೇ ನಡೆಯುವಂಥದ್ದು. ಇದಕ್ಕಿಂತ ಭಿನ್ನವಾಗಿರುವ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಹೊಲತಿಯರು ಪ್ರತಿಭಾನ್ವಿತೆಯರು, ಛಲಗಾತಿಯರು. ಅವರು ಆ ಕಾಲದ ಸಾಮಾಜಿಕ ಸ್ಥಿತ್ಯಂತರದ ಸೂಕ್ಷ್ಮಗಳನ್ನು ಮುಂದಿಟ್ಟಿದ್ದಾರೆ. ವೀರಶೈವ ಧರ್ಮದ ವಚನ ಚಳವಳಿಯ ಮಾನವತಾವಾದದ ಪ್ರತೀಕವಾಗಿಯೂ ಹೊಲತಿಯರು ಕಾವ್ಯಗಳಲ್ಲಿ ಎಡೆಪಡೆದಿದ್ದಾರೆ.

೧೨ನೇ ಶತಮಾನದ ವಚನ ಚಳವಳಿ, ವೀರಶೈವ ಧರ್ಮದ ಬಿರುಸಿನ ಪ್ರತಿಪಾದಕತೆಯ ನಡುವೆ ಬೆಳೆದ ಹೆಣ್ಣೇ ಭಿನ್ನಳಾಗಿ ಕಾಣಿಸಿಕೊಳ್ಳುತ್ತಾಳೆ. ಪ್ರಖರ ವೈಚಾರಿಕತೆಯ, ಜಾತಿ-ಪಂಥ ಮೀರಿ ನಿಂತು ಮಾನವತಾವಾದ ಪ್ರತಿಪಾದಿಸಿದ ವಚನಯುಗ ಹೆಣ್ಣನ್ನು ಕಂಡದ್ದೇ ವ್ಯಕ್ತಿಯಾಗಿ.

'ಮೊಲೆಮೂಡಿ ಬಂದರೆ ಹೆಣ್ಣೆಂಬರು, ಗಡ್ಡಮೀಸೆ ಬಂದರೆ ಗಂಡೆಂಬರು। ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥ॥' [೪೩] ಎಂಬ ವಚನದ ಲಿಂಗಭೇದವನ್ನು ಆತ್ಮದ ಏಕತೆಯ ಮೂಲಕ ಕಳಚಿ ಅಭೇದ ಕಲ್ಪಿಸಿ ಮನುಷ್ಯ ಸಂಬಂಧ ಸ್ಥಾಪಿಸುತ್ತದೆ. ಇಲ್ಲಿ ಸಮಾನತೆಯ ಪ್ರತಿಪಾದನೆಯಿದೆ. ಆ ನೆಲೆಯಲ್ಲಿಯೇ ಅಲ್ಲಿ ಮುಖ್ಯಳಾದವಳು ಅಕ್ಕಮಹಾದೇವಿ. ಅವಳ ಬದುಕಿನ ರೀತಿಯೇ ವಚನವಾಗಿ ಹೊಮ್ಮುವಲ್ಲಿ ಇದುತನಕ ಒಪ್ಪಿತವಾದ ವಿವಾಹ ಸಂಸ್ಥೆಯನ್ನು ಭಂಜಿಸಿ ವ್ಯವಸ್ಥೆಯನ್ನೇ ಅಲ್ಲೋಲ ಕಲ್ಲೋಲ ಮಾಡಿದೆ. ಇಲ್ಲಿ ಹೆಣ್ಣು ಇದ್ದ ಎಲ್ಲ ಅಸ್ಪೃಶ್ಯತೆಯನ್ನೂ ದೂರಮಾಡಿ ಸ್ಪೃಶ್ಯಳಾಗುತ್ತಾಳೆ. ಅದೇ ವಿಚಾರಕ್ರಾಂತಿಯ ಪರಿಣಾಮವಾಗಿ ಅಲ್ಲಿ ಕೆಳವರ್ಗದ ಹೆಣ್ಣು ಮಾತನಾಡುವ ಅವಕಾಶ ಪಡೆದದ್ದು ಸ್ಪಷ್ಟವಾಗುತ್ತದೆ. ಶೂದ್ರ ಸೂಳೆ ವರ್ಗದ ಹೆಣ್ಣು ಇಲ್ಲಿ ವ್ಯಕ್ತಿಯೇ. ಅವರನ್ನು ಸಮಾಜ ಮಾನ್ಯ ಮಾಡುವಂತೆ ಮನಃ ಪರಿವರ್ತನೆ ಮಾಡಲಾಗಿದೆ. ಆ ನೆಲೆಯಲ್ಲಿ ಹಡಪದ ಲಿಂಗವ್ವ, ಕಾಳವ್ವ, ಸತ್ಯಕ್ಕ, ಗೊಗ್ಗವ್ವೆ, ಕದಿರರೆಮ್ಮವ್ವ ಮೊದಲಾದ ಶೂದ್ರ ಸ್ತ್ರೀಯರು ಕಾವ್ಯ ರಚಿಸಿ ಪರಿಸ್ಥಿತಿಗೆ ಸ್ಪಂದಿಸತೊಡಗಿದ್ದು ಅವರು ಆ ಮಟ್ಟಕ್ಕೆ ಏರುವಂತಾದ ಕಾಲದ ಬದಲಾವಣೆಯೂ ಪರಿಸರ, ಕಾಲಮಾನದ ಪ್ರತಿನಿಧಿಯಾಗಿದೆ. ಅಲ್ಲಿನ ಪ್ರಗತಿಪರತೆ ಅವರನ್ನು ವಿದ್ಯೆ ಕಲಿಯುವಂತೆ ಮಾಡಿತು. ವಿದ್ವತ್ತು ಪಡೆವಂತೆ, ವೈಚಾರಿಕತೆ ಬೆಳೆಸಿಕೊಳ್ಳುವಂತೆ ಪ್ರೇರಿಸಿತು. ಆ ನೆಲೆಯಲ್ಲಿ ಅಕ್ಕಮಹಾದೇವಿ ಪ್ರತಿಭಟನೆಯನ್ನೂ ಮಾಡಿದ್ದಾಳೆ. ಅವಳು ತೋರಿದ ಪತಿಯ ನಿರಾಕರಣೆ ಪ್ರಭುತ್ವದ ನಿರಾಕರಣೆಯೂ ಆಗಿದೆ. ಬದುಕಲಸಾಧ್ಯವಾದ ವೇದನೆಗೆ ಕತ್ತು ಕೊಡುವ ಸಹನೆಯ ಬಾಳ್ವೆ ಮಾಡುವುದನ್ನು ಅರ್ಥಹೀನವೆಂದು ವಿರೋಧಿಸುತ್ತಾಳೆ.ಈ ಮೂಲಕ ಅಕ್ಕಮಹಾದೇವಿ ದಾಂಪತ್ಯವನ್ನು ಮೀರುವುದು ಹೆಣ್ಣನ್ನು ಕಟ್ಟಿಹಾಕುವ, ಸದೆಬಡಿವ, ಹಿಂಡಿಹಿಪ್ಪೆ ಮಾಡುವ ಅಸ್ತ್ರವನ್ನು ಮುರಿಯುತ್ತಾಳೆ. ಆಕೆಯ ಧಾರ್ಮಿಕ ನಿಷ್ಠೆ ಹೆಣ್ಣಿಗೂ ಆಧ್ಯಾತ್ಮಿಕದೆಡೆಗೆ ಒಲವು ತೋರುವಂತೆ ಪ್ರೇರಿಸಿದ್ದರಿಂದಾಗಿ ಸ್ಮೃತಿಕಾಲದ ಬಳಿಕ ಕಳೆದುಕೊಂಡಿದ್ದ ಹೆಣ್ಣಿನ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಈ ಯುಗದ ಹೆಣ್ಣು ಮರಳಿ ಪಡೆಯುವಂತಾಗುತ್ತದೆ. ಈ ಚಳವಳಿಯ ಪ್ರಭಾವದಿಂದಾಗಿಯೇ ಭಾರತೀಯ ಕುಟುಂಬ ಪದ್ಧತಿಯನ್ನು ಪ್ರಶ್ನಿಸಲಾಗಿದೆ. ಈವರೆಗೆ ಇದ್ದ ವ್ಯವಸ್ಥೆ ಮುರಿದು ಹೊಸತೇ ಆದ ಬದುಕು ಕಾಣುವ ಕನಸು ಕಟ್ಟಲಾಗಿದೆ. ಹೆಣ್ಣಿನ ಬದುಕಿನ ತಿರುವಿಗೆ ಈ ಚಳವಳಿ ಬಹುದೊಡ್ಡ ಕಾಣ್ಕೆಯಾಗಿದೆ. ಈ ಚಳವಳಿಯ ಬಳಿಕ ಬೆಳೆದು ಬಂದ ರಾಘವಾಂಕ, ಹರಿಹರ, ಚಾಮರಸ, ರತ್ನಾಕರವರ್ಣಿ, ಲಕ್ಷ್ಮೀಶ ಅವರ ಕಾವ್ಯಗಳಲ್ಲಿನ ಸ್ತ್ರೀಯರು ಪ್ರಾಚೀನ ಕಾವ್ಯಗಳಿಗಿಂತ ಹೆಚ್ಚಿನ ಸ್ಥಾನವನ್ನು ಪಡೆದಿದ್ದಾರೆ. ಆದರೆ ಅವೆಲ್ಲ ಪುರುಷ ಪ್ರಾಧಾನ್ಯ ವ್ಯವಸ್ಥೆ ಒಪ್ಪಿಕೊಂಡ ಹೆಣ್ಣಿನ ಮಾದರಿಯನ್ನೇ

---

೪೩ ಪು.೩ ದಾಸಿಮಯ್ಯ ಜೇಡರ ದಾಸಿಮಯ್ಯನ ವಚನಗಳು, ನಡುಗನ್ನಡ ಕಾವ್ಯ ಸಂಕಲನ ಪ್ರ.ಸಂ. ಡಾ. ಬಿ.ಎ.ವಿವೇಕ ರೈ, ೧೯೯೩

ಆದರ್ಶೀಕರಿಸುತ್ತಾರೆ. ವಚನ ಚಳವಳಿಯ ತೀವ್ರತೆಯ ಸಂದರ್ಭದಲ್ಲಿ ಈ ಮನೋಧರ್ಮ ಅದನ್ನು ಒಪ್ಪಿಕೊಳ್ಳುವ ಹೆಣ್ಣಿಗೆ ಗೌರವ ಕೊಟ್ಟಿದೆಯಾದರೂ ಪುರುಷನ ಹಿಡಿತ ತಪ್ಪಿಸಿ ಸ್ವಾತಂತ್ರ್ಯ ಕೊಡುವುದನ್ನು ಒಪ್ಪುವುದಿಲ್ಲ. ಹೆಣ್ಣು ಹೆಣ್ಣಾಗಿಯೇ ಇರುವಂತೆ ಅವರು ಎಚ್ಚರವಹಿಸುತ್ತಾರೆ. ಹಾಗೆ ನೋಡಿದರೆ ಸ್ತ್ರೀ ಸಂವೇದನೆಯ ಇನ್ನೊಂದು ಮುಖವಾಗಿ ತುಡಿದ ಸಂಚಿಯ ಹೊನ್ನಮ್ಮ ಹದಿಬದೆಯ ಧರ್ಮದಲ್ಲಿ ಹೆಣ್ಣನ್ನು ತಿರಸ್ಕರಿಸುವವರಿಗೆ 'ಕಣ್ಣು ಕಾಣದ ಗಾವಿಲರು' [೪೪] ಎಂದು ಲೇವಡಿ ಮಾಡುತ್ತಾಳೆ. ಹೆಣ್ಣನ್ನು ಕಾಣಬೇಕಾದ ರೀತಿಯನ್ನು ನಿರ್ದೇಶಿಸಿರುವಲ್ಲಿ ಗೃಹಿಣಿಯರಿಗಿರಬೇಕಾದ ಗುಣಗಳನ್ನು ಪಾಲಿಸುವಂತೆ ಹೇಳಿರುವಲ್ಲಿ ಆಕೆ ಮತ್ತೆ ಪಾತಿವ್ರತ್ಯ ಪೋಷಕಳೇ ಆಗುತ್ತಾಳೆ. ವಚನದ ವೈಚಾರಿಕತೆ ಇಲ್ಲಿಗೆ ತಟ್ಟಲಿಲ್ಲ. ಕುಟುಂಬ ಗೃಹಿಣಿತ್ವದ ಪ್ರತಿಪಾದನೆಯಲ್ಲಿ ಇದೆ. ಗಂಡಿನ ಮೇಲ್ಮೈಯನ್ನು ಒಪ್ಪಿಕೊಳ್ಳುವ ಮೂಲ ವ್ಯವಸ್ಥಿತ ಮನೋಭಾವ ಬದಲಾಗದಿರುವುದು ಇಲ್ಲಿ ಸೂಚಿತವಾಗುತ್ತದೆ. ಮತ್ತು ಅದು ಹಾಗೇ ಉಳಿಯಬೇಕು, ಬಾಳಬೇಕು ಎಂಬ ಆಶಯವನ್ನೂ ಬಿತ್ತುತ್ತದೆ. ಒಂದೆಡೆ ವೈಚಾರಿಕೆಯ ಮೊಳಗುವಿಕೆ, ತೊಡಗಿಸಿಕೊಳ್ಳುವಿಕೆ, ಮತ್ತೊಂದೆಡೆ ಪಾರಂಪರಿಕ ಸಾಂಸ್ಥಿಕ ವ್ಯವಸ್ಥೆ ಉಳಿಯಬೇಕೆಂಬ ನಿಷ್ಠೆ ಇದೆ. ಹೆಣ್ಣನ್ನು ಮುಕ್ತಗೊಳಿಸಲು ಬಿಡದ ಅಪಾಯಕಾರಿ ಎಚ್ಚರಿಕೆ ಇಲ್ಲಿದೆ. ಆದರೂ ಹೆಣ್ಣಿಗೆ ಗೌರವ ತೋರುವ, ಪ್ರಾಧಾನ್ಯ ನೀಡುವ ಮಟ್ಟಿಗೆ ಇಲ್ಲಿ ಬೆಳವಣಿಗೆ ಆದದ್ದು ಕಾಣಬಹುದು.

ಈ ಎಲ್ಲಾ ಹಿನ್ನೆಲೆಗಳ ನಡುವೆಯೇ ಸ್ತ್ರೀ ವಾದದ ಹುಟ್ಟು ಬೆಳವಣಿಗೆ, ಸದ್ಯದ ಸ್ಥಿತಿಗತಿಗಳ ಕಡಗೆ ಗಮನ ಹರಿಸುವುದು ಉಚಿತವಾಗುತ್ತದೆ. ಹುಟ್ಟಿನೊಂದಿಗೇ ಹೆಣ್ಣು ಅನುಭವಿಸಿದ ಯಾತನೆಗಳಿಗೆಲ್ಲ ಉತ್ತರ ಕಂಡುಕೊಳ್ಳುವ ನೆಲೆಗಳಲ್ಲಿ ಸ್ತ್ರೀವಾದ ಹುಟ್ಟಿಕೊಂಡಿತು. ಪುರುಷ ಪ್ರಾಧಾನ್ಯ ವ್ಯವಸ್ಥೆ, ಅಧಿಕಾರಶಾಹಿತ್ವದ ಬಿಗಿ ಮುಷ್ಠಿಯಿಂದ ಜಾರಿಕೊಳ್ಳುವ, ಹೆಣ್ಣಿನ ಹುಟ್ಟು ಪಡೆದ ಲಿಂಗಭೇದ, ಹುಟ್ಟಿನ ಅನಿವಾರ್ಯತೆ, ಅದಕ್ಕೆ ಒಳಪಡಿಸಿದ ರೀತಿಯ ಹಿಂದೆ ಒಂದು ಸಿದ್ಧಯುಗ ಮೌಲ್ಯದ ಪ್ರತಿನಿಧೀಕರಣವಿದೆ. ಸ್ತ್ರೀ ಅನುಭವಿಸುತ್ತ ಬಂದಿರುವ ಬದುಕನ್ನು ಕಟ್ಟಿಕೊಡುವಲ್ಲಿಯೇ ಪರಿಸ್ಥಿತಿಗೆ ಆಕೆ ಹೊಂದಿಕೊಳ್ಳಬೇಕಾಗಿದ್ದ ಸಂದರ್ಭಗಳನ್ನು ಅರಸುವುದರಲ್ಲಿಯೇ ಅವಳು ಆ ಸಮಾಜವನ್ನು ಪ್ರತಿನಿಧಿಸುತ್ತಿರುವ ಮೌಲ್ಯವನ್ನು ಕಂಡುಕೊಳ್ಳಬಹುದಾಗಿದೆ. ಅಲ್ಲಿ ಬರುವ ಹೆಣ್ಣು ತಾನು ಬದುಕುತ್ತಿದ್ದ ಕಾಲವನ್ನು ಪ್ರತಿನಿಧಿಸುತ್ತಾಳೆ.

ಈ ಹಿನ್ನೆಲೆಯಲ್ಲಿಯೇ ಸ್ತ್ರೀ ಪ್ರತಿನಿಧೀಕರಣ ಮತ್ತು ಸ್ತ್ರೀವಾದ ಎರಡೂ ಒಂದೇ ಅಲ್ಲ. ಅವೆರಡೂ ಬೇರೆ ಬೇರೆ ಎಂದು ಖಚಿತ ಪಡಿಸಿಕೊಳ್ಳಬಹುದಾಗಿದೆ. ಸ್ತ್ರೀ ಪ್ರತಿನಿಧೀಕರಣ ಎಂದರೆ ಒಂದು ವ್ಯವಸ್ಥೆ ಹೆಣ್ಣನ್ನು ನಿಯಂತ್ರಿಸುತ್ತ ಬಂದರೂ ಅದರಿಂದ ಅವಳು ಅನುಭವಿಸಿದ ಬದುಕನ್ನು

೪೪. ಪು.೧೨೦. ನಡುಗನ್ನಡ ಕಾವ್ಯ ಸಂಕಲನ. ಪ್ರ.ಸಂ., ಡಾ. ಬಿ.ಎ.ವಿವೇಕ ರೈ. [illegible]

ಪ್ರತಿನಿಧಿಸುವುದಾಗಿದೆ. ಹೆಣ್ಣು ಬದುಕಿದ ರೀತಿಯನ್ನು ಅವಳ ಕಾಲದ ಸಂಸ್ಕೃತಿ, ನಂಬಿಕೆಗಳ ಹಿನ್ನೆಲೆಯಲ್ಲಿ ನೋಡುವುದಾಗಿದೆ. ಅವಳ ಆಲೋಚನೆ, ಬದುಕಿನ ರೀತಿಯಲ್ಲೇ ಅವಳಿದ್ದ ಸಮಾಜ, ಸಂಸ್ಕೃತಿ ಹಾಗೂ ಆಳುವ ವರ್ಗ ಅವಳನ್ನು ನಡೆಯಿಸಿಕೊಂಡ ಬಗೆಯನ್ನು ಹುಡುಕುವುದಾಗಿದೆ. ಸ್ತ್ರೀವಾದ ಗಂಡು-ಹೆಣ್ಣಿನ ವ್ಯಕ್ತಿತ್ವವನ್ನು, ಸ್ವಭಾವವನ್ನು ಪ್ರತ್ಯೇಕವಾಗಿ ವಿಭಜಿಸಿ ಹೀಗೇ ಬದುಕಬೇಕೆಂಬುದನ್ನು ಹೇರುವ ಪ್ರಕ್ರಿಯೆಯನ್ನು ಪ್ರಶ್ನಿಸುತ್ತದೆ ಮತ್ತು ವಿರೋಧಿಸುತ್ತದೆ. ಅದಕ್ಕೆ ನೆಪವಾದ ಸಂಸ್ಕೃತಿಯನ್ನು ಬೆಟ್ಟು ಮಾಡಿ ಅಂಥ ಪರಿಕಲ್ಪನೆಯನ್ನು ಮೀರಿ ಹೆಣ್ಣು ಗಂಡು ಸಮನಾಗಿ ಬಾಳುವ ತತ್ವವನ್ನು ಸಾರುವುದು ಸ್ತ್ರೀವಾದದ ಮುಖ್ಯ ಧೋರಣೆಯೇ ಆಗಿ ಕೆಲಸ ಮಾಡುತ್ತದೆ.

ಗಂಡಸಿನ ನಿರ್ಧಾರದಂತೆ ರೂಪುಗೊಳ್ಳುವ ಸ್ತ್ರೀಯರು ಅವರ ಬೇಕು ಬೇಡಗಳಿಗೆ ಸ್ಪಂದಿಸದ ಯಾಜಮಾನ್ಯ ಹೇರಿಕೆಯನ್ನು ಪಾಲಿಸುವವರಾಗಬೇಕು. ಅಂಥವರೇ ಪುರುಷ ಕೇಂದ್ರಿತ ಸಮಾಜಕ್ಕೆ ಆದರ್ಶಪ್ರಾಯರಾಗಿ ಮಾನ್ಯರಾಗಿ ಬಿಡುತ್ತಾರೆ. ಅಲ್ಲಿ ಸ್ತ್ರೀಗೆ ತಾನು ಏನು ಮಾಡಿಕೊಳ್ಳಬೇಕು ಎಂಬುದನ್ನು ಪ್ರಶ್ನಿಸುವ ಅವಕಾಶವೇ ಇಲ್ಲವಾಗಿದೆ. ಅವಳಿಂದ ಗಂಡುವರ್ಗ ಸುಖ ಕಾಣುತ್ತದೆ, ಖುಷಿ ಪಡುತ್ತದೆ ಎಂಬ ಸಂತಸವನ್ನು ಅವಳಲ್ಲಿ ತುಂಬಿ ಅದರಲ್ಲೇ ಧನ್ಯತೆ ಪಡೆಯುವುದಕ್ಕೆ ಸೀಮಿತರಾಗಿರುವಂತೆ ನೋಡಿಕೊಳ್ಳಲಾಗಿದೆ. ಆ ಭ್ರಮೆಯಿಂದಾಗಿ ನಿತ್ಯ ಅವನನ್ನು ಖುಷಿಯಲ್ಲಿಡುವ ಕಡೆಗೇ ಅವಳು ತುಡಿಯುವಂತೆ ಮಾಡಲಾಗಿದೆ. ರೂಪ-ವಯಸ್ಸಿನಲ್ಲಿರಬಹುದು, ಲೈಂಗಿಕ ವಿಷಯದಲ್ಲಿರಬಹುದು ಆಕೆ ಅವನ ಸುಖಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವವಳೂ ಆಗುತ್ತಾಳೆ ಮತ್ತು ಅಲ್ಲಿ ಆಕೆ ತಾಯಿಯಾಗುವಲ್ಲಿ ಹಂಬಲಿಸುವುದೂ ಕೂಡ ತನ್ನ ಗಂಡನನ್ನು ಮೆಚ್ಚಿಸಲಿಕ್ಕಾಗಿಯೇ ಎಂಬುದು ನಿರ್ವಿವಾದವಾಗಿದೆ. ಯಾಕೆಂದರೆ ಮಗುವಾಗದೇ ಹೋದರೆ ಗಂಡ ಸಂದೇಹಿಸಬಹುದು ಎಂದು, ಬಂಜೆ ಎಂಬ ಪಟ್ಟದಿಂದ ದೂರವಾಗಬೇಕು ಎಂಬ ನಿರ್ಧಾರದಿಂದ, ಸಮಾಜದಲ್ಲಿ ತಾನೂ ತಾಯಿಯಾಗಿ ಗುರುತಿಸಿಕೊಳ್ಳಲು ಹಾತೊರೆಯುತ್ತಾರೆ. ತಾಯಿಯಾಗಿ ಮಾನ್ಯತೆ ಪಡೆಯುವ ಮೂಲಕ ಬದುಕಿನ ಸಾರ್ಥಕತೆಯನ್ನು ಕಾಣುವುದೇ ಅವರ ಉದ್ದೇಶವೆಂಬಂತೆ ಅವರನ್ನು ಸಿದ್ಧಗೊಳಿಸಲಾಗಿದೆ. ಮಕ್ಕಳ ಲಾಲನೆ-ಪಾಲನೆಯಲ್ಲೇ ಬದುಕಿನ ಕ್ಷಣಗಳನ್ನು ಕಳೆಯುತ್ತ ಉಸಿರು ನಿಲ್ಲಿಸಬೇಕಾದ ಹೇರಿಕೆಯನ್ನು ಸ್ತ್ರೀ 'ಕರ್ತವ್ಯ'ವಾಗಿ ಇಂದಿಗೂ ಮುಂದುವರಿಸಿಕೊಂಡು ಬಂದಿರುವುದು ಸತ್ಯ. ಆದರೆ ಹಿಂದೆ ಹೆಣ್ಣನ್ನು ಮನೆಯಿಂದ ಹೊರಗಿಳಿಯಲು ಬಿಡದ ಅಧಿಕಾರ ವರ್ಗ ಇಂದು ಬಹುತೇಕ ಬದಲಾಗಿದೆ. ಹೊಸ್ತಿಲಿಂದಾಚೆಗೆ ಕಳುಹಿಸುವಲ್ಲಿ ಒಪ್ಪಿದರೂ ಮನೆಯೊಳಗೆ ಗಂಡನಿಗೆ ಹೆಂಡತಿಯೇ ಆಗಿ, ಸೇವಕಿಯೇ ಆಗಿ ದುಡಿಯುವ, ಉಪಚರಿಸುವ ಕರ್ಮಕ್ಕೆ ಇಂದಿಗೂ ಬದ್ಧಳಾಗಿರಬೇಕಾಗಿದೆ. ಆದರೆ ಹೊರಗೆ ಕೂಡ ನಾನಾ ವಿಧದ ಸಮಸ್ಯೆಗಳನ್ನು ಎದುರಿಸುವ ಮಹಿಳೆ ತನ್ನನ್ನು ಶೋಷಿಸುವ

ಮನಃಸ್ಥಿತಿಯ ಕಡೆಗೆ ವ್ಯಗ್ರವಾಗುವುದೂ ಇದೆ. ಮನೆಯೊಳಗೆ ಒಂದು, ಹೊರಗೊಂದು ಶೋಷಣೆ ಹೆಣ್ಣಿನ ಬದುಕನ್ನು ನಲುಗಿಸುತ್ತದೆ. ಆದರೆ ಮನೆ ಹೊರಗಿನ ಕೆಲಸ ಆರ್ಥಿಕ ಸ್ವಾವಲಂಬನೆಯನ್ನು ಕೊಡುತ್ತದೆ ಎಂಬ ಧೈರ್ಯ ನೀಡುತ್ತದೆ. ಇಲ್ಲಿ ಕೊಂಚಮಟ್ಟಿಗೆ ತಾನೆಂಬ ಅಹಂನಿಂದ ಬೀಗುವ ಗಂಡನ್ನು ಬಗ್ಗಿಸುವ ಧೈರ್ಯವಾದರೂ ಉತ್ಪತ್ತಿಯಾಗುತ್ತದೆ. ಆದರೆ ಬದುಕು, ಮನೆ, ಸಮಾಜದ ಸ್ವಾಸ್ಥ್ಯದ ಕಡೆಗೇ ಚಿಂತಿತರಾಗಿ ಮರ್ಯಾದೆಯ ಕುಟುಂಬ ನಡೆಸಬೇಕೆಂಬ ನೆಪದಿಂದ ಎಲ್ಲವನ್ನೂ ಸಹಿಸುವ ಹೆಣ್ಣು ಮೇಲೇಳಬಾರದಂತೆ ಅಸ್ವಸ್ಥಳಾಗುತ್ತಾಳೆ.

ದೈಹಿಕ ಅಸಮಾನತೆಯ ಹಿನ್ನೆಲೆಯಿಂದ ಸ್ತ್ರೀಯನ್ನು ಪುರುಷನಿಂದ ಪ್ರತ್ಯೇಕವಾಗಿಟ್ಟ ಸಂದರ್ಭಗಳು ಅವಳ ಆತ್ಮಬಲವನ್ನು ಕುಗ್ಗಿಸುವ ನಿಟ್ಟಿನಲ್ಲಿ ನೀಡಿದ ಕೊಡುಗೆಗಳಾಗಿ ಕಾಣುತ್ತವೆ. ಆ ಕಾರಣವೇ ಅವಳು ವಿಚಾರವಾದಿಯಾಗುವ ಬದಲು ಭಾವುಕಳಾಗುವಂತೆ ಮಾಡಿತು ಎಂಬುದನ್ನು ಸ್ತ್ರೀವಾದ ಶೋಧಿಸುತ್ತದೆ. ಮತ್ತು ಆ ನೆಲೆಯಲ್ಲಿ ಹೆಣ್ಣನ್ನು ಬೆಳೆಸದೆ ಲಿಂಗ ಸಮಾನತೆ ಸ್ಥಾಪಿಸಲು ಹೆಣ್ಣು-ಗಂಡನ್ನು ಗುರುತಿಸಿ ಬಾಳಿಸಬೇಕಾದ ಕಾಳಜಿಯನ್ನು ಅದು ಮುಂದಿಡುತ್ತದೆ. ಸ್ತ್ರೀ ಸಂಕುಲವನ್ನು ಪೂರ್ವಾಗ್ರಹಪೀಡಿತ ಭಾವನೆಯಿಂದ ತಪ್ಪಾಗಿ ಕಾಣುವ ಪ್ರವೃತ್ತಿಯನ್ನು ಮೀರಿ ನಿಲ್ಲುವ ಕಡೆಗೆ ತುಡಿಯಬೇಕೆಂಬುದನ್ನೂ ಪ್ರೇರೇಪಿಸುತ್ತದೆ. ಇಡೀ ಸಮಾಜ ಸಂಸ್ಕೃತಿಯ ಹೆಸರಿನಲ್ಲಿ ಹೆಣ್ಣನ್ನು ಹೀನವಾಗಿ ಕಾಣುವುದು ಮತ್ತು ಎಲ್ಲ ಸವಲತ್ತು-ಸೌಲಭ್ಯಗಳಿಂದ ವಂಚಿತಗೊಳಿಸಿ ಕೂಡಿಹಾಕುವುದು ಆ ಸಂದರ್ಭದ ಸಮಾಜದ ಧೋರಣೆಯನ್ನು ಪ್ರತಿನಿಧಿಸುತ್ತದೆ. ಈ ಪ್ರಕ್ರಿಯೆಗಳನ್ನು ಸ್ತ್ರೀವಾದ ವಿರೋಧಿಸುತ್ತದೆ ಮತ್ತು ಅದನ್ನು ತಡೆಯುವುದಕ್ಕೆ ಪರ್ಯಾಯ ಮಾರ್ಗದ ಶೊಧನೆಗೆ ತೊಡಗುತ್ತದೆ. ಈ ಪ್ರಶ್ನೆ, ವಿಮರ್ಶೆ ಹೋರಾಟಗಳು ಆರಂಭವಾದದ್ದೇ ಜಾಗತಿಕ ನೆಲೆಯಲ್ಲಿ. ಸ್ತ್ರೀ ಶೊಷಣೆಯ ಕುರಿತ ಚಿಂತನೆ ಮತ್ತು ಪ್ರತಿಭಟನಾ ನಿಲುವಿಗೆ ಹಾದಿತೆರೆದಿಟ್ಟವರು ವಿದೇಶೀ ಲೇಖಕಿಯರು. ಅವರ ಚಿಂತನಶೀಲತೆ ಭಾರತೀಯರನ್ನು ತಟ್ಟಿತು. ಭಾರತದಲ್ಲಿಯೇ ಹೆಣ್ಣನ್ನು ಹೆಣ್ಣಾಗಿ ಕಾಣದ ಸಂಪ್ರದಾಯದ ಅಂತ್ಯಕ್ಕೆ ಅಲ್ಲಿನ ವಿಚಾರಗಳನ್ನು ಅಭ್ಯಸಿಸಲಾಯಿತು. ಅದರ ತತ್ವದ ಆಧಾರದೊಂದಿಗೇನೇ ಭಾರತದ ಸಾಂಸ್ಕೃತಿಕ ಬದುಕಿನೊಳಗೆ ಹೆಣ್ಣು ನಲುಗುವ ಮತ್ತು ಅದಕ್ಕೆ ಕಾರಣವಾದ ಮಾರ್ಗವನ್ನು ಮಟ್ಟ ಹಾಕುವ ಕಡೆಗೆ ಒಲವು ತೋರಲಾಯಿತು. ಆ ಒಲವಿನ ಪರಿಣಾಮವಾಗಿಯೇ ಅಸಮಾನತೆಯನ್ನು ಕಾಯ್ದುಕೊಳ್ಳುವ ಅಂಧರನ್ನು ಪ್ರಶ್ನಿಸಲಾಯಿತು. ಪುರುಷತ್ವದ ಆಧಿಕ್ಯ ಪ್ರಶ್ನಿಸುವ ಹೊಸ ವಿಚಾರಧಾರೆ ಫ್ರೆಂಚ್‌ನಲ್ಲಿ ಆರಂಭವಾಗಿ, ಅಮೆರಿಕ ಹಾಗೂ ಪ್ರಪಂಚದ ಇತರೆಡೆಗಳಿಗೆ ಸಂಚರಿಸಿ ಹೋರಾಟಕ್ಕಿಳಿದದ್ದರ ಪ್ರಭಾವ ಇಂದಿನ ಹೆಣ್ಣಿನ ಬದುಕಿನ ಸ್ಥಿತ್ಯಂತರದಲ್ಲಿ ಆದ ಬದಲಾವಣೆಯ ಮೂಲಕ ಗುರುತಿಸಬಹುದಾಗಿದೆ.

ಭಾರತೀಯ ಸಂದರ್ಭಕ್ಕೆ ಕೂಡ ಪಾಶ್ಚಾತ್ಯರ ಧೋರಣೆಯೇ ಪ್ರೇರಣೆ ನೀಡಿದ್ದಾಗಿದೆ. ಅದರ ಪರಿಣಾಮವಾಗಿಯೇ ಇಲ್ಲಿ ಹೋರಾಟಕ್ಕೆ ತೊಡಗಿ ಸ್ತ್ರೀ-ಪುರುಷರ ನಡುವಿರುವ ತರತಮ್ಯವನ್ನು ಸರಿಪಡಿಸುವ ನಿಟ್ಟಿನಲ್ಲಿ ವಿಚಾರವಾದಿ ಮಹಿಳೆಯರು ಹೋರಾಟ ಮಾಡಿದ್ದು ಮುಖ್ಯವಾಗುತ್ತದೆ. ಮತ್ತು ಸಮಾನತೆಯನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ತೊಡಗಿಸಿಕೊಂಡದ್ದು ಸ್ಪಷ್ಟವಾಗುತ್ತದೆ. ಮಹಿಳೆಯರ ನಿರಂತರ ಹೋರಾಟದಿಂದಾಗಿ ಹೆಣ್ಣು ತನ್ನ ಹಕ್ಕುಗಳನ್ನು ಮಂಡಿಸುವುದಕ್ಕೆ ಸಾಧ್ಯವಾಯಿತು ಎಂಬುದು ಐತಿಹಾಸಿಕ ಸತ್ಯವಾಗಿದೆ.

ಈ ಎಲ್ಲ ಬೆಳವಣಿಗೆಗಳನ್ನು ಸಾಹಿತ್ಯದಲ್ಲಿ ಅಡಕಗೊಳಿಸುವ ಹೊತ್ತಿಗೇನೇ ಅದರ ಓದು ಹಾಗೂ ಬರವಣಿಗೆ ಸ್ತ್ರೀವಾದೀ ವಿಮರ್ಶೆಯನ್ನು ಬಯಸುತ್ತದೆ. ಸ್ತ್ರೀವಾದ ಪ್ರಶ್ನಿಸಿದ, ಚರ್ಚಿಸಿದ ವಿಷಯಗಳೆಲ್ಲವನ್ನೂ ಸ್ತ್ರೀವಾದಿ ವಿಮರ್ಶೆ ವಿಮರ್ಶಿಸುತ್ತದೆ. ಅದು ತಾನಿದ್ದ ಸಾಮಾಜಿಕ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಚರ್ಚಿಸುತ್ತದೆ.

ಸ್ತ್ರೀವಾದ ಹೆಣ್ಣು ಇದುತನಕ ಇದ್ದ, ಈಗ ಇರುವ ಸ್ಥಿತಿಯನ್ನು ಮುಂದಿಡುತ್ತ ಅದಕ್ಕೆ ಕಾರಣವಾದ ಮನಸ್ಥಿತಿಯನ್ನು ಚರ್ಚಿಸುತ್ತದೆ. ಅಲ್ಲದೆ ಹೆಣ್ಣಿನ ಬದುಕು ಇರಬೇಕಾಗಿದ್ದ ರೀತಿಯನ್ನು ಸ್ಪಷ್ಟಪಡಿಸಿ ಕಳೆದು ಹೋಗಿರುವ ತನ್ನ ವ್ಯಕ್ತಿತ್ವದ ಕುರಿತು ನೇರವಾಗಿ ವಾದಿಸುತ್ತದೆ. ಲಿಂಗ ಭಿನ್ನತೆಯಿಂದಾಗಿ ತೋರುವ ತಾರತಮ್ಯವನ್ನು ಸ್ತ್ರೀವಾದ ಖಡಾಖಂಡಿತವಾಗಿ ವಿರೋಧಿಸುತ್ತದೆ. ಗಂಡು ಯಜಮಾನಶಾಹಿ, ಹೆಣ್ಣು ಊಳಿಗಮಾನ್ಯಕ್ಕೆ ಬದ್ಧಳಾದವಳು ಎಂಬ ನಂಬಿಕೆಯನ್ನು ಚೂರುಚೂರುಗೊಳಿಸುತ್ತದೆ. ಜೊತೆಗೆ ಗಂಡು ಹಾಗೂ ಹೆಣ್ಣು ಇಬ್ಬರಲ್ಲಿ ಇರುವ ಆಲೋಚನೆ, ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ಸಾಧಾರವಾಗಿ ವಿವರಿಸಿ ಸಮಾನತೆ ಸಾಧಿಸಹೊರಡುತ್ತದೆ. ಸಮಾಜ ಮತ್ತು ಹೆಣ್ಣನ್ನು ಜೊತೆಜೊತೆಗೇ ಅಭ್ಯಸಿಸುತ್ತ ಅವಳನ್ನು ಸಮಾಜವೇ ಸಿದ್ಧಗೊಳಿಸಿದ್ದರಲ್ಲಿ ಅವಳು ತನ್ನತನವನ್ನು ಕಳಕೊಳ್ಳುವಂತಾಗಿದೆ ಎಂಬುದನ್ನು ಮನಮುಟ್ಟಿಸುತ್ತದೆ. ಗಂಡಿನ ಉನ್ನತೀಕರಣ, ಅವನ ದರ್ಪ - ಆಳುವಿಕೆಗೆ ಇಂಬುಕೊಟ್ಟು ಹೆಣ್ಣನ್ನು ಸಂಯಮಿಯಾಗಿ ತಲೆತಗ್ಗಿಸಿಯೇ ಇರುವಂತೆ ಮಾಡಿದ ಪ್ರಕ್ರಿಯೆಗಳನ್ನು ಪ್ರಸ್ತಾವಿಸುತ್ತ ವಿರೋಧಿಸುತ್ತದೆ. ಅವಳಲ್ಲಿ ಸುಪ್ತವಾಗಿರುವ ವೈಚಾರಿಕತೆಯನ್ನು, ಲಿಂಗತಾರತಮ್ಯದ ಹಿನ್ನೆಲೆಯಲ್ಲಿ ಹೊರಗೆಡಹಲು ಬಿಡದಿರುವುದರ ಕುರಿತ ಹುನ್ನಾರವನ್ನು ಪ್ರಶ್ನಿಸಿ ಬಯಲಿಗೆಳೆಯುವುದರ ಜೊತೆಜೊತೆಗೇನೇ ಹೆಣ್ಣನ್ನು ಪ್ರಕೃತಿಯ ಸಂಕೇತ ಹಾಗೂ ಪ್ರತಿಮೆಯಾಗಿ ಕಾಣುತ್ತ ಸಮಾಜದ ಸ್ಥಿರೀಕೃತ ವರ್ಗದ ಗಂಡು ರೂಪಿಸಿದ ಮೌಲ್ಯಗಳಿಗೇ ಭಾಜಕಳಾಗಿರುವಂತೆ ಮಾಡಿದ್ದನ್ನು ಪ್ರಶ್ನಿಸುತ್ತದೆ. ಹೆಣ್ಣು ಲೈಂಗಿಕ ತೃಪ್ತಿ ಕೊಡುವವಳಾಗಿ, ತಾಯ್ತನದ ಅಪ್ರತಿಮ ಸುಖ ನೀಡುವವಳಾಗಿ , ಸತೀ ಸಾಧ್ವೀಮಣಿಯಾಗಿ ಗಂಡು ಖುಷಿ ಪಡುವ ಹಾಗೆ ಬದ್ಧಗೊಳಿಸಿದ ಸ್ಥಾಪಿತ ಪಿತಾಸಕ್ತಿಗಳ ಉದ್ದೇಶವನ್ನು ಪ್ರಶ್ನಿಸುತ್ತದೆ. ಜೊತೆಗೆ ಅದರಾಚೆಗೂ ಬೆಳೆದಿರುವ ಆಕೆಯ ಶಕ್ತಿಯ ಅನನ್ಯತೆಯನ್ನು ಪರಿಚಯಿಸುತ್ತದೆ. ಅವಳ ಮನಸ್ಸಿನ ಪಕ್ವತೆ,

ಪ್ರಬುದ್ಧತೆ ದೈಹಿಕ ಶಕ್ತಿಯ ಪ್ರತಿಪಾದನೆಯಲ್ಲಿ ಪುರುಷನಿಗೆ ಯಾವುದರಲ್ಲೂ ಕಡಿಮೆ ಅಲ್ಲದ ಸಾಧ್ಯಾಸಾಧ್ಯತೆಗಳ ಕುರಿತೂ ವಿಶ್ಲೇಷಿಸುತ್ತದೆ. ಈ ನಿಟ್ಟಿನಲ್ಲಿ ಸ್ತ್ರೀವಾದ ಪುರುಷನ ದೈಹಿಕ - ಲಿಂಗಭೇದವನ್ನು ಸೃಷ್ಟಿಯ ಭಿನ್ನತೆಯಾಗಿ ಒಪ್ಪಿಕೊಳ್ಳುತ್ತ ಅದನ್ನು ಮೀರುವುದು ಮಾತ್ರವಲ್ಲ, ಮಾನವೀಯ ಸಂಬಂಧಗಳನ್ನು ಸಾಧ್ಯವಾಗಿಸಲು ಪ್ರಯತ್ನಿಸುತ್ತದೆ. ಆದರೆ ಗಂಡಿನ ದಬ್ಬಾಳಿಕೆಯನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಹೆಣ್ಣಿಗೆ ಧೈರ್ಯ ತುಂಬುತ್ತದೆ. ಅದನ್ನು ಯಾವುದೇ ನೆಲೆಯಲ್ಲಿಯೂ ಒಪ್ಪಿಕೊಳ್ಳದಂತೆ ತಡೆದು ಹೆಣ್ಣಿಗೂ ಅವಳದೇ ಆದ ಶಕ್ತಿ ಇರುವುದನ್ನು ನೆನಪಿಸುತ್ತದೆ. ಆಕೆ ಎಂದಿಗೂ ತಗ್ಗಿ ನಡೆಯದಂತೆ ಎಚ್ಚರಿಕೆ ಮೂಡಿಸುವಲ್ಲಿ ಅವಳಲ್ಲಿನ ವ್ಯಕ್ತಿತ್ವದ ಕುರಿತು ಜಾಗೃತಿ ಮೂಡಿಸುತ್ತದೆ ಎಂದು ಸ್ತ್ರೀವಾದವನ್ನು ಸ್ಥೂಲವಾಗಿ ನಿರೂಪಿಸಬಹುದು.

ಚಲನಶೀಲ ಸಮಾಜದ ಸಂದರ್ಭಗಳಲ್ಲಿ ಪರಿವರ್ತಿತಗೊಂಡ ಹೆಣ್ಣಿನ ಬದುಕು ಪಡೆದುಕೊಳ್ಳುವ ತಿರುವು ಸ್ತ್ರೀವಾದದ ಗತಿಶೀಲತೆಗೂ ಕಾರಣವಾಗಿದೆ. ಸ್ತ್ರೀವಾದದ ಅಧ್ಯಯನಕಾರರು ಜಾಗತಿಕ ಮಟ್ಟದಲ್ಲಿಯೇ ಸ್ತ್ರೀವಾದದ ಹುಟ್ಟು ಹಾಗೂ ಬೆಳವಣಿಗೆಗಳನ್ನು ಗುರುತು ಹಾಕಿಕೊಳ್ಳುವುದರೊಂದಿಗೆ ಭಾರತದ ಹೆಣ್ಣಿನ ಬದುಕಿಗೂ ಅದನ್ನು ಅಭ್ಯಸಿಸಿ ನೋಡುವ ಕೆಲಸ ನಿರ್ವಹಿಸಿರುವುದನ್ನು 'ಅಮೆರಿಕ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಮೊದಲು ಕಾಣಿಸಿಕೊಂಡು ಕ್ರಮೇಣ ಸರ್ವವ್ಯಾಪಿಯಾದ ಸ್ತ್ರೀ ಸ್ವಾತಂತ್ರ್ಯ, ಚಳವಳಿಯ ಫಲವಾಗಿ ಸಾಹಿತ್ಯದಲ್ಲಿ ಸ್ತ್ರೀವಾದವು ತಲೆಎತ್ತಿತ್ತು. ಒಟ್ಟು ಸ್ತ್ರೀವಾದಿ ಚಳುವಳಿಯ ಮೂಲವನ್ನು ನಾವು ಫ್ರೆಂಚ್ ವಿಪ್ಲವದ ಆದರ್ಶದಲ್ಲಿ ನೋಡಬಹುದು' [೪೫] ಎಂದು ಹೇಳಿರುವಲ್ಲಿ ಸ್ಪಷ್ಟವಾಗಿದೆ.

' ಸ್ತ್ರೀತ್ವ, ಸ್ತ್ರೀಯಾತ್ಮಕತೆ, ಸ್ತ್ರೀಪುರುಷರ ಸಂಬಂಧಗಳ ಸೂತ್ರ ವ್ಯಾಖ್ಯಾನಗಳೆಲ್ಲ ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಹುಟ್ಟುವುದರಿಂದ ತನ್ನದೇ ಆದ ಪರಂಪರೆಯ ಹಿನ್ನೆಲೆಯನ್ನು ಹೊಂದಿರುವ ಭಾರತದ ಸಂದರ್ಭವನ್ನು ಇಲ್ಲಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿಯೇ ತಿಳಿಯಬೇಕು' ಎಂದು ವಿಜಯಾ ದಬ್ಬೆ ವಿಶ್ಲೇಷಿಸಿರುವುದು [೪೬] ಹೆಚ್ಚು ಒಪ್ಪಿತವಾದದ್ದೇ ಆಗಿದೆ. ಭಾರತದ ಬದುಕಿನ ನೆಲೆಯಲ್ಲಿಯೇ ಅದನ್ನು ಹುಡುಕಬೇಕಾದದ್ದನ್ನು ಅವರು ಸಂಗತಗೊಳಿಸಿದ್ದಾರೆ. ಆ ನೆಲೆಯಲ್ಲಿಯೇ ಅಲ್ಲಿನ ಹೆಣ್ಣಿನ ಬದುಕನ್ನು ಅನುಭವಕ್ಕೆ ತಂದುಕೊಳ್ಳಬೇಕಾಗಿದೆ.

ಆದರೆ ಭಾರತದ ಸಂದರ್ಭದಲ್ಲಿ ಸ್ತ್ರೀವಾದದ ಎಲ್ಲ ಹೊಳಹುಗಳನ್ನು ಶಕ್ತವಾಗಿ ಪ್ರತಿನಿಧಿಸಿದ್ದು ಜನಪದ ಸಾಹಿತ್ಯವೇ. ಎಲ್ಲ ಸಾಮಾಜಿಕ ಸ್ಥಿತ್ಯಂತರದ ಬದುಕಿಗೂ ಸ್ಪಂದಿಸಿದ ಸೃಜನಶೀಲ ಜನಪದರು ಅಭಿವ್ಯಕ್ತಿಸಿದ ನಿರ್ಭಿಡೆಯ ನಿಸ್ಸಂಕೋಚದ ಪ್ರತಿಕ್ರಿಯೆ, ಪ್ರತಿಭಟನೆಯಲ್ಲಿ ಸ್ತ್ರೀವಾದ ಅಡಕವಾಗಿದೆ. ಅಲ್ಲಿನ ಸ್ತ್ರೀ ಸಂವೇದನೆ ಹೆಣ್ಣಿನ ಬದುಕಿಗೆ ಸ್ಪಂದಿಸಿದ ನೆಲೆಯಿಂದಲೇ ಜನಪದ ಸಾಹಿತ್ಯದಲ್ಲಿನ ಈ ತೆರನಾದ ವಿಚಾರಗಳು ಪ್ರಾಮುಖ್ಯ ಪಡೆಯುತ್ತವೆ.

---

೪೫ ಪು.೨ ಇದು ಮಾನುಷಿಯ ಓದು, ಡಾ.ಯು. ಮಹೇಶ್ವರಿ ೨೦೦೧

೪೬ ಪು.೧೫೨ ನಾರಿ: ದಾರಿ - ದಿಗಂತ, ಡಾ.ವಿಜಯಾ ದಬ್ಬೆ ೧೯೭೭

ಆದುದರಿಂದಲೇ 'ನೆರೆಮನೆ ಸಿರಿದೇವಿ ನೀನಾಗು', 'ತುಂಬಿದ ಮನೆ ಒಡೀಬೇಡ', 'ಹೆಣ್ಣಿಗೆ ಓಡಿ ಬಂದರೆ ಸುಖವಿಲ್ಲ', 'ಮನಿಯಾಗ ಭೇದಬಗೀಬೇಡ', 'ತವರೀಗೆ ಮಾತ ತಂದೋಳು ಮಗಳಲ್ಲ', 'ಬಾಳುವೆಗೆಟ್ಟು ಮತಿಗೆಟ್ಟು ಬಾಳಿದರೆ ಹೆತ್ತವರ ಕುಲಕೆ ಹಗೆಯಾದೆ', 'ಅತ್ತೆ ಮಾವರಿಗಂಜಿ, ಸುತ್ತೇಳು ನೆರೆಗಂಜಿ, ಮತ್ತೆ ಆಳುವ ದೊರೆಗಂಜಿ ಅತ್ತಿ ಮನಿಯಾಗ ಬಾಳ್ವೆ', 'ಹೆಣ್ಣಿನ ಮನವು ಎರಡಾಗಿ ದಾಳಿಂಬ್ರ ಹಣ್ಣಾದರೇನು ಫಲವಿಲ್ಲ' ಮೊದಲಾದ ಉಪದೇಶಗಳ ಪಾಲಕಳಾಗಿಯೇ ಬಹುತೇಕ ಹೆಣ್ಣು ಮಕ್ಕಳು ಬದುಕಬೇಕಾಯಿತು.[೪೭]

ಇಡೀ ವ್ಯವಸ್ಥೆಯ ಪಾಲಕಳಾಗಿಯೇ ಬಂದ ಜನಪದ ಹೆಣ್ಣು ಅಲ್ಲಲ್ಲಿ ಅದನ್ನು ಪ್ರತಿಭಟಿಸಿದ್ದೂ ಇದೆ. ಗಂಡನಲ್ಲಿ ನೈತಿಕತೆಯೇ ಇಲ್ಲವಾದಾಗ ಆ ಬಗೆಯವರನ್ನೂ

'ಗಂಡಿನ ಗುಣವನು ಕಂಡುಬಂದಳು ಜಾಣೆ
ಮುಂಡಕೀಯ ಮೇವ ಬಸವನ ಗುಣವನು
ಕಂಡು ಬಂದಳು ಜಾಣೆ' ಎಂದು,
'ಗಂಡಿನ ಗುಣವೇನೇ ಹಿಂಡಿನ ತಂಪೇನೇ
ಕಡೆದ ಮಜ್ಜಿಗೆಯ ರುಚಿಯೇನೇ; ನನ್ನಮ್ಮ ಗಂಡನ ಗುಣವೇ ಅವಗುಣ'

ಎಂದೂ ಲೇವಡಿ ಮಾಡಿದ್ದಾರೆ. ಆತನ ಎಲ್ಲ ಸಣ್ಣತನ, ದುಷ್ಟತನಗಳನ್ನು ತರತಮದ ಹಂತಗಳನ್ನು ಅಂಜದೇನೇ ತಿಳಿಸಿದ್ದಾರೆ.

'ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡುವುದಿಲ್ಲ, ಅಂಕೆಯಲ್ಲಿದ್ದ ಹೆಣ್ಣು ಕೆಡುವುದಿಲ್ಲ' ಮುರಿದ ಚಿನ್ನ ಅಕ್ಕಸಾಲಿಗೆ ಕಳಿಸು, ಸೊಕ್ಕಿದ ಹೆಣ್ಣನ್ನು ತವರಿಗೆ ಕಳಿಸು, ಎಂದೆಲ್ಲ ಹದ್ದು ಬಸ್ತಿನಲ್ಲಿಡ ಹೊರಟ ಸಮಾಜ, ವ್ಯವಸ್ಥೆಯ ನಡುವೆಯೇ ಮುಕ್ತ ಲೈಂಗಿಕತೆಗೆ ತನ್ನನ್ನು ಒಪ್ಪಿಸಿಕೊಂಡಿದ್ದ ಗಂಡಿಗೇ ಸವಾಲೆಸೆದ ಹೆಣ್ಣು ಅದಕ್ಕೆ ಸಹಜ ಪ್ರತಿಕ್ರಿಯೆಯಾಗಿ ತನ್ನನ್ನೂ ಒಪ್ಪಿಸಿಕೊಂಡದ್ದನ್ನು ಮುಲಾಜಿಲ್ಲದೆ ಸಾರುತ್ತಾಳೆ. ತನ್ನಿಷ್ಟದವನೊಂದಿಗೆ ಸೇರುವ ಅವಳ ನಿಲುವಿನಲ್ಲಿ ಗಂಡಿಗೆ ಕೊಟ್ಟ ತಿರುಗೇಟು ಇದೆ.

ದಂಡಿಗೆ ಹೋಗಿ ಏಳುವರ್ಷ ಕಳೆದು ಮನೆಗೆ ಬರುವ ಪತಿಗೆ ತನ್ನ ಪತ್ನಿ ಅನ್ಯನೊಂದಿಗೆ ಇರಿಸಿಕೊಂಡ ಲೈಂಗಿಕ ಸಂಬಂಧದ ಕುರಿತು ಕೇಳುವ ಸಂದೇಹದ ಪ್ರಶ್ನೆಗೆ ಜನಪದ ಹಾಡಿನಲ್ಲಿ ಹೆಣ್ಣೊಬ್ಬಳು -

'ನೆಟ್ಟ ಮಲ್ಲಿಗಿ ಸೋಮಿ ನೆಟ್ಟಂಗಿರುವುದೇನ
ಚಪ್ಪರ ತುಂಬೀ ಅಲ್ವಾದ
ಚಪ್ಪರ ತುಂಬೀ ಅಲ್ವೇ ಹೋಂಗಾಗ್ವಾಗೆ
ನಿಮ್ಮಂಥಾ ಜಾಣ ಮುಡ್ವೋದ' ಎಂದು ಕಿಂಚಿತ್ತೂ ಅಳುಕದೆ, ತಡವರಿಸದೆ ನೇರ ಉತ್ತರ

---

೪೭ ಮದುವೆ ಮತ್ತು ಶೋಷಣೆ- ಇನ್ನಷ್ಟು ವಿಶ್ಲೇಷಣೆ, ಒರೆಗಲ್ಲು, ವಿ.ಗ.ನಾಯಕ್-೧೯೯೮

ಕೊಡುತ್ತಾಳೆ, ಮತ್ತೊಂದು ಸಂದರ್ಭದಲ್ಲಿ ಪಡೆದ ಮಕ್ಕಳ ಹೆಸರನ್ನೆಲ್ಲ ಕರೆದು 'ಅಪ್ಪನಿಗೆ ಸರಣೆನ್ನಿ' ಎಂದು ಹೇಳುವ ಮೂಲಕ ಅದನ್ನು ಸಹಜವಾಗಿಸಿದ್ದಾಳೆ. ಗಂಡಿಗೆ ಅನ್ಯ ಹೆಣ್ಣಿನ ಸಂಬಂಧ ಒಪ್ಪಿತವಾದರೆ ಹೆಣ್ಣಿಗೂ ಆಗಬಾರದೇಕೆ ಎಂಬುದನ್ನೇ ವ್ಯಂಗ್ಯವಾಗಿ ತೋರಿಸಿದ್ದಾಗಿದೆ.

ಗಂಡಿನ ಲೈಂಗಿಕ ಸ್ವೇಚ್ಛಾಚಾರ, ಸೂಳೆಯೊಂದಿಗಿನ ಸಂಬಂಧದ ಕುರಿತಂತೆ ಇನ್ನೊಬ್ಬಳು-

'ಹೆಣ್ಣಂತರೆದ್ದವ್ನೆ ಕಾಯಡಕಿ ಮೆಲ್ವಂಗೆ

ಹೆಂಡಿರಿದ್ದವ್ನೆ ನೆರುಮನ್ಗೆ ಹೋಗುವಂಗೆ

ನೆಡುಪುಯ್ಲಲ್ ಸಡ್ಲು ಆರಗಾಲಿ' ಎಂದು ಶಪಿಸುವಲ್ಲಿನ ಅವಳ ತಿರಸ್ಕಾರ, ಪ್ರತಿಭಟನೆಯ ಧೈರ್ಯ ಗಮನಾರ್ಹ ಬೆಳವಣಿಗೆಯಾಗಿದೆ. ಕುಟುಂಬದ ನೆಮ್ಮದಿ ಕದಡಿ ಅಲ್ಲೋಲಕಲ್ಲೋಲ ವಾದಾಗ ಹೆಣ್ಣು ಗಂಡಸ ಲೈಂಗಿಕ ಮುಕ್ತತೆಯನ್ನು ನಿರ್ದಾಕ್ಷಿಣ್ಯವಾಗಿ ತಡೆಯಹೊರಡುತ್ತಾಳೆ.[೪೮]

ಪರಮಪತಿವ್ರತೆಯಾದ ಆತುಮೋವಿಯ ಪಾತಿವ್ರತ್ಯವನ್ನು ಸಂದೇಹಿಸಿದ ಗಂಡ ಅದನ್ನು ಪ್ರಮಾಣೀಕರಿಸುವುದಕ್ಕೆ ಹಲವಾರು ಸವಾಲುಗಳನ್ನೇ ಒಡ್ಡುತ್ತಾನೆ. ಅವಳು ಅದನ್ನೆಲ್ಲವನ್ನೂ ಗೆಲ್ಲುತ್ತ ಬರುತ್ತಾಳೆ. ಆದರೂ ಸೋಲೊಪ್ಪದ ಗಂಡನ ದುರಹಂಕಾರಕ್ಕೆ, ಮದಕ್ಕೆ ಹೇಸಿ ಅವನಿಂದ ದೂರ ಹೋಗುತ್ತಾಳೆ. ಅರ್ಥಾತ್ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಂದೇಹಗ್ರಸ್ತ ಮತ್ತು ಕುಬ್ಜ ವ್ಯಕ್ತಿಯೊಂದಿಗಿನ ಬಾಳ್ವೆ ಅವಳಿಗೆ ಸಹ್ಯವೆನ್ನಿಸುವುದಿಲ್ಲ. ಆತನನ್ನು ಮಾವಿನ ಮರವಾಗುವಂತೆ, ತಾನು ಅದರಲ್ಲಿನ ಹಣ್ಣಾಗುವಂತೆ ಶಪಿಸುವುದು ಪುರುಷ ಪ್ರಧಾನ ವ್ಯವಸ್ಥೆಗೆ ತೋರಿದ ಪ್ರತಿಭಟನೆಯಾಗಿದೆ.[೪೯]

ಅದೇ ನೆಲೆಯಲ್ಲಿ ತುಳು ಜನಪದ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡ ಸಿರಿಯೂ ತನ್ನ ಗಂಡ ಸೂಳೆಯೊಂದಿಗೆ ಇರಿಸಿಕೊಂಡ ಸಂಬಂಧಕ್ಕೆ ಅವನನ್ನು ತೊರೆದು ಮಾಡಿದ ಪ್ರತಿಭಟನೆ ಮುಖ್ಯವಾಗುತ್ತದೆ. ಅವನನ್ನೇ ಧಿಕ್ಕರಿಸಿ ಹೊರಬರುವ ವಿಶಿಷ್ಟ ಶಕ್ತಿ ಹೊಂದಿದ್ದ ಆಕೆ ಎರಡನೇ ವಿವಾಹವಾಗುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಳು. ಮಾತೃಪ್ರಧಾನ ಕುಟುಂಬದ ಸಿರಿ ಪುರುಷ ಶಾಹಿ ಹಿಡಿತದ ಎಲ್ಲ ವರ್ತನೆಗಳನ್ನು ಸಹಿಸಿಕೊಳ್ಳಲಿಲ್ಲ. ಅದು ಅವಳಿಗೆ ಅಗತ್ಯವೂ ಇರಲಿಲ್ಲ. ತನ್ನತನವನ್ನು ಕಾಯ್ದಿಟ್ಟು ಕೊಂಡು ಬಂದ ಅಪರೂಪದ ಹೆಣ್ಣಾಗಿ ಕಾರಣಿಕ ಸ್ಥಾನ ಪಡೆದು ಪೂಜೆ ಕೈಗೊಳ್ಳುವಂತೆ ಮಾಡಿದ್ದರಲ್ಲಿ ಹೆಣ್ಣಿನ ಹೆಚ್ಚುಗಾರಿಕೆ ಇದೆ.[೫೦]

---

೪೮ ಇಲ್ಲಿ ಬಳಸಿಕೊಳ್ಳಲಾಗಿರುವ ಜನಪದ ಹಾಡುಗಳನ್ನು ವಿವಿಧ ಜನಪದ ಹಾಡುಗಳ ಸಂಕಲನಗಳಿಂದ ಆಯ್ದುಕೊಳ್ಳಲಾಗಿದೆ.

೪೯ ಪು.೧೧೭-೧೨೩ ಆತುಮೋವಿ, ಪಾಠಾಂತರ ಕಥನ ಕವನಗಳು, ಎನ್.ಆರ್.ನಾಯಕ್, ೧೯೯೭

೫೦ ಪು.೧೫೩-೨೧೬ ಸತ್ಯನಾಪುರತ್ತ ಸಿರಿ, ತುಳುಪಾಡ್ದನ ಸಂಪುಟ, ಅಮೃತ ಸೋಮೇಶ್ವರ (ಸಂ.) -೧೯೯೭

ಧೈರ್ಯಸ್ಥೆ ಎನಿಸಿಕೊಂಡ ಜನಪದ ಸಾಹಿತ್ಯದ ಇನ್ನೊಬ್ಬಳು ಸ್ತ್ರೀ ಉತ್ತರೆ. ಅವಳ ಛಾತಿ ಇನ್ನೊಂದು ತೆರನಾದದ್ದು. ಸೊಸೆಯಾಗಿರುವ ಅವಳು ಅತ್ತೆಯ ಸಂದೇಹದ ಪ್ರಶ್ನೆಗೆ ಅತ್ತೆ ಎಂಬ ಕಾರಣಕ್ಕಾಗಿ ಮೌನ ತಾಳುವುದಿಲ್ಲ. 'ನೀರಿಗೆ ಹೋದ ಸೊಸಿಯೇ ಇಟ್ಹೊತ್ತು ಹೆಂಗಾಯ್ತು.. ಯಾರಲ್ಲಿ ನಿನ್ನ ತಡದೀರು' ಎಂಬ ಸಿಡಿಲ ಪ್ರಶ್ನೆಗೆ, ಈ ಅನುಮಾನದ ಹಿಂದೆ ಸ್ವಂತ ಅನುಭವವೇ ಕೆಲಸ ಮಾಡುತ್ತಿದೆಯೇ ಎಂಬರ್ಥದಲ್ಲಿ 'ನಿಮ್ಮಂಗಿರುವಂಗೆ ನೀವೆ ನೀರಿಗೋಗ್ವಂಗೆ ನಿಮ್ಮ ಯಾರಲ್ಲಿ ತಡದೀರು ಅತ್ತಮ್ಮ', ಎಂದು ಮರುಪ್ರಶ್ನೆ ಹಾಕುತ್ತಾಳೆ, ಇದು ತನ್ನ ಮೇಲಿನ ಸಂದೇಹಕ್ಕೆ ಆದ ಅವಮಾನದಿಂದ ಅತ್ತೆಗೆ ಕೊಟ್ಟ ಛಾಟಿ ಏಟು. ಅಪ್ರತಿಮ ಧೈರ್ಯದ ಹೆಣ್ಣಾಗಿ, ಶೋಷಣೆಯನ್ನು ಸಹಿಸದ ಹೆಣ್ಣಾಗಿ ದಿಟ್ಟತನವನ್ನು ಕಾಯ್ದುಕೊಂಡೇ ಬಂದ ಉತ್ತರೆ ಅತ್ತೆ ಮನೆಯಿಂದ ದೂರವಾಗುತ್ತಾಳೆ. ಹೆತ್ತ ಮನೆಯಲ್ಲೂ ಪ್ರವೇಶ ಪಡೆಯುವುದಿಲ್ಲ. ವ್ಯವಸ್ಥೆಯ ಪೋಷಕಳಾದ ಅತ್ತೆಗೆ ಮರುಪ್ರಶ್ನೆ ಹಾಕುವ ಮೂಲಕ ವ್ಯವಸ್ಥೆಯನ್ನು ಪ್ರಶ್ನಿಸಿದ ಉತ್ತರೆ ಇಡೀ ವ್ಯವಸ್ಥೆಯಿಂದ ಹೊರ ಬರುತ್ತಾಳೆ.

ವಿ.ಗ. ನಾಯಕ್ ಅವರು ವಿಶ್ಲೇಷಿಸಿದ ಜನಪದ ಕಥೆ 'ಯಾರ್ಗೆಚ್ಚು?'ವಿನಲ್ಲಿ ಉದ್ಯೋಗಸ್ಥ ಗಂಡ ಹೆಂಡತಿಯರ ನಡುವೆ ಹೆಂಡತಿ ಗಂಡನಿಗೆ ಕೆಲಸ ಮಾಡಿಕೊಳ್ಳುವಂತೆ ನಿರ್ದೇಶಿಸಿಸುತ್ತಾಳೆ. ಅದು ಪುರುಷ ಕುಲಕ್ಕೆ ಕಳಂಕವೆಂದು ಭಾವಿಸಿ ಗಂಡ ಅವಳನ್ನು ಸೋಲಿಸಲು ಹಾಕಿದ ಎಲ್ಲ ಅಸಾಮಾನ್ಯ ಶರತ್ತುಗಳನ್ನು ಅವಳು ಜಯಿಸುತ್ತಾ ಬರುತ್ತಾಳೆ. ಕೊನೆಗೆ ಸ್ನೇಹಿತ ಹೂಡುವ ಉಪಾಯ ಇದು: 'ಆಗಿಂವ ಇಬ್ರ್ಗೂ ಒಂದೇ ಜೈಲಿನಲ್ಲಿ ಆಚೆಈಚೆ ನಿಲ್ಸದ. ಇಬ್ರ ಕೈಲೂ ನಿತ್ತಲ್ಲಿಂದೇ ಮೂತ್ರಬಟ್ಟು ಓಂ ಬರಿಸಬೇಕು ಅಂದ. ಆದರಂಗಡ ಕೂಡ್ಲೇ ಉಚ್ಚೆ ಹಾರ್ಸಿ ಓಂ ಅಂತ ಬರೆದಿಟ್ಟ. ಕೂತ್ಕಂಡವರೆಲ್ಲ ನೋಡದ್ರೇನಪ್ಪ ಅಂತ ಕೇಳ್ದ ಗೆಣೆಗಾರ. ಹೌದು ಹೌದು ಹೇಳ್ದ್ರು ಎಲ್ಲಾ. ಆಗ ಹೆಂಗ್ಸೂ ಕೈಲಿ ಓಂ ಬರಿ ಹೇಳಿದ್ರು, ಆಗ್ ಅದು ಆಗುದೆಲ್ಲ ಅಂತು. ಆಗ ಗೆಣೆಗಾರ ಕೇಳ್ದ - ಸೋತವರ್ಯ್ಯಾರು ಕೇಳ್ದ. ನಾನೇಯ ಅಂತು. ಕೊನೆಗವರಿಬ್ರೂ ಪ್ರೀತಿಯಿಂದ ಇದ್ಕಂಡಿ ಗೆಣೆಗಾರ್ಗೆ ಊಟ ಆಸ್ರ ಮಾಡಿ ಕಳಸ್ ಕೊಟ್ರು' ಎಂಬಲ್ಲಿಗೆ ಕತೆ ಮುಕ್ತಾಯವಾಗುತ್ತದೆ. ಗಂಡಿನ ಲಜ್ಜೆರಹಿತವಾದ ಶರತ್ತು ಹೆಣ್ಣಿನ ಲಜ್ಜೆಯ ಸ್ವಭಾವದಿಂದಾಗಿ ಗೆಲ್ಲುತ್ತದೆನ್ನುವ ಪೂರ್ವ ನಿರ್ಧರಿತ ಸಂಚು ಗಂಡನ್ನು ಗೆಲ್ಲಿಸುವುದಿಲ್ಲ.ಅವನ ನಿಕೃಷ್ಟ ಆಲೋಚನೆಯ ಎದುರು ಹೆಣ್ಣು ಸೋತೆ ಎಂದರೂ ಅದು ಸೋಲು ಆಗುವುದಿಲ್ಲ.

ಈ ಕುರಿತು 'ವಾಸ್ತವವಾಗಿ ಈ ಕಥೆಯು ಪುರುಷರಿಂದಲೇ ನಡೆದಿರುವ ಪುರುಷ ಪ್ರತಿಷ್ಠೆಯ ಲೇವಡಿಯೇ ಆಗಿದೆ. ಅರ್ಥಾತ್ ಮುಖಹೀನ ಪುರುಷ ಸಂಸ್ಕೃತಿಯು ಇಲ್ಲಿ ಮುಖಾಬಿಲೆಯಾಗುತ್ತದೆ, ಪುರುಷರನ್ನು ಮೀರಿಸಿದ ಸಾಹಸ, ಛಲದೊಟ್ಟಿಗೆ ಪುರಷರಲ್ಲಿಲ್ಲದ ಲಜ್ಜೆಯ ಸ್ವಭಾವದಿಂದಾಗಿ ಇಲ್ಲಿನ ಸ್ತ್ರೀ ವಿಜೃಂಭಿಸುತ್ತಾಳೆ' ಎಂದು ನಾಯಕ್ ಕಂಡರಿಸಿದ್ದಾರೆ.[೫೧]

---

೫೧ ಯಾರ್ಗೆಚ್ಚು?:ಒಂದು ವಿಶ್ಲೇಷಣೆ, ಪ್ರತಿಸ್ಪಂದನ, ವಿ.ಗ.ನಾಯಕ ೧೯೯೭

ಇಂಗ್ಲೀಷರ ಆಡಳಿತದಿಂದಾಗಿ ಒದಗಿಸಿದ ಸ್ತ್ರೀವಿದ್ಯೆ ಹಾಗೂ ಸರಕಾರಿ ಉದ್ಯೋಗವಕಾಶ ಇವುಗಳನ್ನು ಈ ಕತೆ ದಾಖಲಿಸುತ್ತದೆ. ಮತ್ತು ಸ್ತ್ರೀಯರಲ್ಲಿನ ಸ್ವಾತಂತ್ರ್ಯಾಪೇಕ್ಷೆ ಹಾಗೂ ಸ್ವಾಭಿಮಾನ ಪ್ರವೃತ್ತಿಗಳನ್ನು ಕತೆ ಕೂಗಿ ಹೇಳುತ್ತದೆ. ಆದರೆ ಇಂಥ ಒಂದು ಬಂಡಾಯವನ್ನೂ ಆ ಕೂಡಲೇ ವ್ಯವಸ್ಥೆಯೊಂದು ಅರಗಿಸಿಕೊಳ್ಳಲಾಗದ ಸಂದರ್ಭದಲ್ಲಿ ದುಡಿಯುವ ಮನೋವಿಕಾರವನ್ನೇ ಈ ಕತೆ ಮುಂದಿಡುತ್ತದೆ.

ಜನಪದ ಸಾಹಿತ್ಯದಲ್ಲಿ ಹೆಣ್ಣಿನ ಬದುಕಿನ ಎರಡು ಮುಖಗಳು ಪರಿಚಿತವಾಗುತ್ತವೆ. ವೇದಗಳ ಅನಂತರ ಬೆಳೆದು ಬಂದ ಪುರುಷ ಪ್ರಧಾನ ಸಂಸ್ಕೃತಿಯ ನಡುವೆ ಅದಕ್ಕೆ ಶರಣಾದ, ಅದನ್ನೇ ಒಪ್ಪಿ ನಿಷ್ಠೆಯಿಂದ ಅನುಸರಿಸಿ ಸಿದ್ಧ ಬದುಕನ್ನು ಒಪ್ಪಿಕೊಂಡದ್ದು ಒಂದು ಮುಖ, ಅಂಥ ಎಲ್ಲ ಪುರುಷ ಪ್ರಧಾನ ವ್ಯವಸ್ಥೆಗಳನ್ನು ಪ್ರತಿಭಟಿಸಿದ ಹೆಣ್ಣಿನ ಇನ್ನೊಂದು ಮುಖವಿದೆ. ವ್ಯವಸ್ಥೆಯ ಪರ ಹಾಗೂ ವಿರೋಧವಾಗಿಯೂ ಅದನ್ನು ಕಂಡುಕೊಳ್ಳಬಹುದು.

ಜನಪದ ಮಹಿಳೆಯರು ತೋರಿದ ಪ್ರತಿಭಟನೆ, ಧೈರ್ಯ ನಿಲುವುಗಳೇ ಸ್ತ್ರೀವಾದದ ಹುಟ್ಟಿಗೆ ಪ್ರೇರಣೆಯನ್ನೊದಗಿಸಿದೆ. ಫಲವಾಗಿಯೇ ವ್ಯವಸ್ಥೆಯನ್ನು ಪ್ರಶ್ನಿಸುವ, ಅವಳನ್ನು ವ್ಯಕ್ತಿಯಾಗಿ ರೂಪಿಸಿಕೊಳ್ಳುವ ಸ್ವಾತಂತ್ರ್ಯ ಪಡೆದುಕೊಳ್ಳುವ ಆಲೋಚನೆಗಳು ಹುಟ್ಟಿಕೊಳ್ಳುತ್ತವೆ.

ವಿವಿಧ ಹಂತಗಳನ್ನು ಪ್ರತಿನಿಧಿಸಿದ ಸ್ತ್ರೀಯರ ಬದುಕನ್ನು ಪರಿಶೀಲಿಸಿದರೆ ಮಾಸ್ತಿಯವರ ಕತೆಗಳಲ್ಲಿ ಸನಾತನ ವೈದಿಕ ಪರಂಪರೆಯ ಮೌಲ್ಯಗಳಲ್ಲಿನ ಆದರ್ಶದ, ಪುರುಷ ಪ್ರಧಾನ ಸಂಸ್ಕೃತಿ ಪ್ರತಿಷ್ಠಾಪಿಸಿದ ಸಿದ್ಧ ಮೌಲ್ಯದ ಸ್ವೀಕಾರ ಮತ್ತು ಮರು ಪ್ರತಿಷ್ಠಾಪನೆ ನಡೆದಿದೆ ಎನ್ನುವುದರ ಅರಿವಾಗುತ್ತದೆ. ಜನಪದರ ನೇರವಾದ, ಸ್ವಾಭಿಮಾನದ ಮತ್ತು ಉದಾರವಾದ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತ - ಸಂಸ್ಕೃತಿ ನಿಷ್ಠವಾಗಿಯೇ ಇರಬೇಕೆಂಬುದನ್ನು ಪ್ರತಿಪಾದಿಸಿದ್ದು ಸ್ಪಷ್ಟವಾಗುತ್ತದೆ. ಹೆಣ್ಣಿಗೆ ಅತ್ಯಂತ ಗೌರವದ - ಉನ್ನತ ಸ್ಥಾನ - ಮಾನವನ್ನು ಮಾಸ್ತಿ ಕೊಟ್ಟಿದ್ದಾರೆ. ಹೀಗೆಂದರೆ ಕೆಲವು ಸಂದರ್ಭಗಳಲ್ಲಿ ಅವರಿಗೆ ಗಂಡ ದೇವರಲ್ಲ. ಹೆಣ್ಣು ಲೈಂಗಿಕ ತೃಪ್ತಿಕೊಡುವ ಭೋಗದ ವಸ್ತು ಅಲ್ಲ. ಸಹನಶೀಲಳೂ ಅಲ್ಲ ಎಂದೂ ತೋರಿಸಿಕೊಡುತ್ತಾರೆ. ಜನಪದದ ಹೆಣ್ಣು ತೋರುವ ಧೈರ್ಯ ಆಕೆ ಪಡೆದ ಲೈಂಗಿಕ ಸ್ವಾತಂತ್ರ್ಯ, ಗಂಡನನ್ನು ತೊರೆದು ಬದುಕುವ ಅವಕಾಶವನ್ನು ಮಾಸ್ತಿಯವರು ಸ್ತ್ರೀಗೆ ಕೊಡುತ್ತಾರೆ. ಆದರೆ ಅದನ್ನು ಪುರುಷ ಪ್ರಧಾನ ಸಂಸ್ಕೃತಿಯ ಮೂಲಧ್ಯೇಯಗಳನ್ನು ಅವರು ಪ್ರಶ್ನಿಸಿ ಮೀರುವುದನ್ನು ತೋರಿಸುತ್ತಾರೆ. ಕೊನೆಗೆ ಆ ನಿಲುವುಗಳ ಪರಿಣಾಮವಾಗಿ ಸ್ತ್ರೀ ಅನುಭವಿಸಬೇಕಾಗಿ ಬರುವ ಸಂಕಷ್ಟಗಳಿಂದಾಗಿ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ. ಆದುದರಿಂದ ಆಕೆ ಮತ್ತೆ ಪುರುಷನಿಗೇ ಅಧೀನಳಾಗಿಯೇ ಇರಬೇಕೆಂಬುದನ್ನು ಒಪ್ಪಿತಗೊಳಿಸುವುದಕ್ಕಾಗಿಯೇ ಸ್ತ್ರೀ ಪುರುಷನಿಗೇ ಶರಣಾಗುವಂತೆ ಮಾಡುತ್ತಾರೆ. ಆ ಹಿನ್ನೆಲೆಯಲ್ಲಿ ಪಿತೃಪ್ರಧಾನ ಮೌಲ್ಯಗಳನ್ನು ಒಪ್ಪಿಕೊಂಡು ಬದುಕುವ, ಪಿತೃ ಪ್ರಧಾನ ಮೌಲ್ಯಗಳನ್ನು ಪ್ರಶ್ನಿಸುತ್ತ

ಸೋತು ಬಿಡುವ ಹಾಗೂ ಮರಳಿ ಅದೇ ಮೌಲ್ಯವನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಬಂದೊದಗುವುನ್ನು ನೋಡಬಹುದಾಗಿದೆ. ಅಂದರೆ ಅದನ್ನು ಮೀರಬಾರದಂತೆ ತಡೆಯುವುದಾಗುತ್ತದೆ. ಕೆಲವಡೆ ಪ್ರತಿಭಟನೆಯ ಅವಕಾಶ ಕೊಡುವುದು ಮಿತಿಮೀರಿದ ಹಿಂಸೆ ಇದ್ದಾಗ ಮಾತ್ರ. ಆದರೆ ಇಂಥ ಪ್ರತಿಭಟನೆಗಳೆಲ್ಲ ಬದುಕಿಗೆ ಪ್ರಯೋಜನವಾಗುವುದಿಲ್ಲ. ಅದು ಬದುಕು ಆಗುವುದಿಲ್ಲ ಎಂದು ನಂಬಿದ್ದಾರೆ. ಬಧುಕು ಸಿದ್ಧ ಮಾದರಿಯಲ್ಲಿ ಸುಂದರವಾಗಿ ಸಾಗಬೇಕಾದರೆ ಹೆಣ್ಣು ಇಂಥ ನಿರ್ಧಾರಗಳನ್ನು ತಳೆಯಬಾರದು ಎಂಬುದನ್ನು ಬೋಧಿಸುತ್ತಾರೆ. ಈ ಮೂಲಕ ಹೆಣ್ಣಾದವಳು ಗಂಡು ನಿರ್ಧರಿಸಿದ ಸಂಸ್ಕೃತಿಯೊಳಗೇ ಬದುಕು ಸಾಗಿಸಬೇಕೆಂಬುದನ್ನು ಪ್ರತಿಪಾದಿಸುತ್ತಾರೆ. ಅದು ಮಾಸ್ತಿಯವರು ನಂಬಿದ ಮೌಲ್ಯಯುತ ಬದುಕಾಗಿದೆ. ಆ ನಂಬಿಕೆ ನಿಲುವುಗಳನ್ನೇ ಮಾಸ್ತಿ ಕತೆಗಳ ಸ್ತ್ರೀಯರು ಪ್ರತಿನಿಧಿಸುತ್ತಾರೆ.

ಹೆಣ್ಣು ಕುಟುಂಬದ ಹೊರತಾಗಿಲ್ಲ ಎಂದು ಬಲವಾಗಿ ನಂಬಿರುವ ಮಾಸ್ತಿ ವೈದಿಕ ಹಾಗೂ ಅವೈದಿಕ ಮಹಿಳೆಯರನ್ನು ಅದರೊಳಗಿಟ್ಟೇ ನೋಡುತ್ತಾರೆ. ಪುರುಷನಿಷ್ಠ ಬದುಕಿನ ಮೌಲ್ಯವನ್ನು ಕೇವಲ ಭಾರತ, ಕನ್ನಡದ ನೆಲೆಗಷ್ಟೇ ಅಲ್ಲ, ವಿಶ್ವಕ್ಕೂ ವಿಸ್ತರಿಸಿ ಅಲ್ಲೂ ಅದನ್ನೇ ಒಪ್ಪಿತವಾಗುವಂತೆ ಮಾಡುತ್ತಾರೆ. ಅಂದರೆ ಬದುಕು ಎನ್ನುವ ವಾಸ್ತವ ಅದು ಎಲ್ಲೆಡೆಯೂ ಒಂದೇ ತೆರನಾದದ್ದು. ಸಂಬಂಧ ಒಂದೇ. ಮನುಷ್ಯ ಬಾಳಬೇಕಾದುದೇ ಹೀಗೇ ಎಂದು ಅವರು ತೋರಿಸಿಕೊಡುತ್ತಾರೆ. ಮಾಸ್ತಿ ಬದುಕು ಸಾಗಬೇಕಾದುದನ್ನು ಆದರ್ಶದ ಹಿನ್ನಲೆಯಲ್ಲಿ ಪರಿಚಯಿಸುವುದಕ್ಕೇ ಹೆಚ್ಚು ಒತ್ತುಕೊಡುವುದರಿಂದ ಆ ನೆಲೆಯಲ್ಲಿಯೇ ಸ್ತ್ರೀಯರು ಸಾಗಬೇಕಾದ ಹಾದಿಯನ್ನು ಪರಿಚಯಿಸುತ್ತಾರೆ.

ಉದ್ದೇಶ

ಸ್ತ್ರೀಯು ಪುರುಷ ಹೇರಿದ ಎಲ್ಲ ಕಟ್ಟಳೆಗಳನ್ನು ಪಾಲಿಸುತ್ತ ಬಂದಿದ್ದಾಳೆ. ಹೆಣ್ಣನ್ನು ಅಂಕೆಯಲ್ಲಿಟ್ಟುಕೊಂಡ ಗಂಡಸು ಅವಳು ಬದುಕಬೇಕಾದ ರೀತಿಯನ್ನು ಕೂಡ ತಾನೇ ರೂಪಿಸಿದ. ಅದನ್ನು ಅನುಭವಿಸುತ್ತ ಬದುಕಿದ ಸ್ತ್ರೀಯು ಒಂದು ಯುಗದ ಮೌಲ್ಯವನ್ನು ಪ್ರತಿನಿಧಿಸುತ್ತಾಳೆ.

ಇಡೀ ಸಮಾಜ ಸ್ತ್ರೀಯನ್ನು ಕಾಣುತ್ತ ಬಂದದ್ದೇ ಅಬಲೆಯೆಂಬುದಾಗಿ. ದೈಹಿಕ ಹಾಗೂ ಮಾನಸಿಕವಾಗಿ ಸಬಲಳಲ್ಲದ ಆಕೆಗೆ ಸ್ವಾತಂತ್ರ್ಯವೆಂಬುದು ತರನಲ್ಲ ಎಂದು ಭಾವಿಸಿತು. ಅತಂತ್ರ ಭಾವನೆಯನ್ನೇ ಆಕೆಯಲ್ಲಿ ತುಂಬಿ ಅವಳನ್ನು ಹೇಗೆಬೇಕೆಂದರೆ ಹಾಗೆ ಬಳಸಿಕೊಳ್ಳುವ ಹೊಂಚಿನಿಂದಲೇ ಅವಳನ್ನು ಪೂಜ್ಯ ಸ್ಥಾನದಲ್ಲಿಟ್ಟು ಗೌರವಿಸಲಾಗಿದೆ. ದೇವಿಯಾಗಿ, ತಾಯಿಯಾಗಿ ಪೂಜಿಸಿ ಹಿಡಿತದಲ್ಲಿಟ್ಟುಕೊಳ್ಳಲಾಗಿದೆ. ಆ ಮೂಲಕ ಆಕೆಯ ಸರ್ವ ಶಕ್ತಿಯನ್ನು ಕಸಿದುಕೊಳ್ಳಲಾಗಿದೆ. ಆಕೆಯ ಸ್ವಂತಿಕೆಯನ್ನು, ವೈಚಾರಿಕತೆಯನ್ನು ಕಸಿದುಕೊಂಡದ್ದರಿಂದಾಗಿ ಮನೆಯೊಳಗೇನೇ

ಇದ್ದುಮೂರು ಹೊತ್ತು ಬೇಯಿಸಿ ಹಾಕುವ ಕಾಯಕಕ್ಕೆ ಮಾತ್ರ ಆಕೆ ಸೀಮಿತಳಾಗುವಂತಾಯಿತು. ಹೆಣ್ಣಿನ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲ. ಹೆಣ್ಣು ಎಷ್ಟೆಂದರೂ ಹೆಣ್ಣೇ. ಅವಳು ಗಂಡಾಗಲು ಹೋದರೆ ಅದು ಆದೀತೇ? ಎಂದೆಲ್ಲ ಪ್ರಶ್ನಿಸಿ, ಎಲ್ಲ ರೀತಿಯಿಂದಲೂ ಅವಳನ್ನು ದೂರವಿಡಲಾಯಿತು. ಇವೆಲ್ಲ ಪುರುಷ ಪ್ರಾಧಾನ್ಯ ವ್ಯವಸ್ಥೆ ಹೆಣ್ಣಿಗೆ ಮಾಡಿದ ಲೇವಡಿಗಳಾಗಿವೆ, ಪ್ರಜ್ಞಾಪೂರ್ವಕವಾದ ದೂರುಗಳಾಗಿವೆ. ಹೆಣ್ಣು ಯಾವೊತ್ತೂ ತನ್ನ ಕೈಗೊಂಬೆಯಾಗಬೇಕೆಂಬುದೇ ಪುರುಷನ ಆಂತರ್ಯವಾಗಿದೆ. ಆದ್ದರಿಂದಲೇ ಆಕೆ ಪುರುಷನ ಆಲೋಚನಾ ನೆಲೆಯ ಹೊರತಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲ. ಅದು ರಾಜಕೀಯ, ಸಾಮಾಜಿಕ, ಕೌಟುಂಬಿಕ, ಆರ್ಥಿಕ-ಯಾವುದೇ ವಿಚಾರಗಳಲ್ಲಿ ಇರಬಹುದು, ಆಕೆ ಎಲ್ಲಿಯೂ ಸಮರ್ಥಳಲ್ಲ ಎಂದೇ ಅವಳನ್ನು ಹಿಂದಕ್ಕೆ ಸರಿಸಲಾಗಿದೆ. ಕುಟುಂಬ ನಿರ್ವಹಣೆಯಲ್ಲಿ ಆಕೆ ಕೊಡುವ ಸಲಹೆಗೆ ನೀನು ಹೆಣ್ಣೆಂಗ್ಸು, ನಿನಗೇನು ಗೊತ್ತು ಅದರ ಕಷ್ಟ. ನೀ ಬಾಯ್ಮುಚ್ಚು ಎಂದು ಎದುರಾಡಿ ಆಕೆಯನ್ನು ತೆಪ್ಪಗೆ ಕೂರಿಸಲಾಗುತ್ತದೆ. ಅದು ಆಕೆ ಯಾವತ್ತೂ ಗಂಡಸಿಗೆ ತಲೆ ಬಾಗುತ್ತಲೇ ಇರಬೇಕು ಎಂಬುದನ್ನು ಸೂಚಿಸುತ್ತದೆ. ಹೀಗೆಂದರೆ ಗಂಡನನ್ನು ಕೇಳದೇ ಏನನ್ನೂ ಮಾಡುವಂತಿಲ್ಲದ ಇಕ್ಕಟ್ಟಿನೊಳಗೇ ಆಕೆ ಬಂಧಿತಳಾಗಿರುವುದಾಗಿದೆ.

ಪುರುಷ ಕೇಂದ್ರಿತ ಸಮಾಜ, ಹೆಣ್ಣು ತನಗೊಬ್ಬನಿಗೇ ಬದ್ಧಳಾಗಿರಬೇಕೆಂಬ ಸ್ವಾರ್ಥದಿಂದ ಪಾತಿವ್ರತ್ಯವೇ ಹೆಣ್ಣಿಗೆ ಭೂಷಣ ಎಂದು ಘೋಷಿಸಿದೆ. ಆದರೆ ಲಂಗುಲಗಾಮಿಲ್ಲದ ತನ್ನ ಕಾಮುಕತನಕ್ಕೆ ಸ್ತ್ರೀಯಾದವಳು ಕಡಿವಾಣ ಹಾಕಿದಾಗ ತನ್ನವಳನ್ನು ಮಾತ್ರ ಯಾರೂ ಮುಟ್ಟಬಾರದು ಎಂದು ನಿರ್ಬಂಧ ಹೇರಿ ಅಲ್ಲಿ ಮಡಿವಂತಿಕೆಯನ್ನು ಉಳಿಸಿಕೊಳ್ಳುವ ಎಚ್ಚರಿಕೆ ಹೊಂದಿದ್ದನ್ನು ಕಾಣುತ್ತೇವೆ. ರಾಮಾಯಣದ ಸೀತೆಯನ್ನು ಪತಿವ್ರತಾ ಧರ್ಮವನ್ನು ಪಾಲಿಸಿದ ಕಾರಣಕ್ಕಾಗಿ ಮಾನ್ಯ ಮಾಡಿ ವೈಭವೀಕರಿಸಿದ್ದನ್ನು ಗಮನಿಸಿದರೆ ಸಮಾಜ ಅದನ್ನು ಪ್ರತಿಯೊಬ್ಬ ಹೆಣ್ಣೂ ಪಾಲಿಸಬೇಕೆಂಬುದನ್ನು ತಿಳಿಸಿರುವುದರ ಅರಿವಾಗುತ್ತದೆ.

ಹೆಣ್ಣು ಪವಿತ್ರಳಾಗಿರಬೇಕೆಂಬ ಕಾರಣಕ್ಕೇ ಅವಳಲ್ಲಿ ಲಜ್ಜೆಯನ್ನು ತುಂಬಲಾಗಿದೆ. ಕೊಂಚ ತಲೆ ಎತ್ತಿ ನಡೆದರೆ, ಗಟ್ಟಿಯಾಗಿ ಮಾತನಾಡಿದರೆ, ಪರಪುರುಷನನ್ನು ದಿಟ್ಟಿಸಿದರೆ ಲಜ್ಜೆಗೇಡಿಯಾಗಿ ಗುರುತಿಸಿ ಗಂಡುಬೀರಿಯೆಂಬ ಹಣೆಪಟ್ಟಿ ಅಂಟಿಸಲಾಗುತ್ತದೆ. ಹೆಣ್ಣು ಮೆಲುದನಿಯಲ್ಲಿ ಮಿತವಾಗಿ ಮಾತನಾಡಬೇಕು. ಅದೇ ಅವಳಿಗೆ ಭೂಷಣವಾಗಿದೆ. ಆದುದರಿಂದಲೇ ಆಕೆ ಹಾಗೇ ನಿಲ್ಲಬೇಕು, ಕುಳಿತುಕೊಳ್ಳಬೇಕು, ನೋಡಬೇಕು, ವ್ಯವಹರಿಸಬೇಕು ಕೂಡ. ಇದಕ್ಕೆ ವ್ಯತಿರಿಕ್ತವಾಗಿ ನಡೆದವಳಿಗೆ, 'ಏ, ನೀ ಗಂಡಲ್ಲ, ಹೆಣ್ಣು ನೆನಪಿಡು' ಎಂದು ಎಚ್ಚರಿಸುವುದು ಸ್ತ್ರೀಯನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳುವ ತಂತ್ರವೇ ಆಗಿದೆ. ಇಲ್ಲಿ ಹೆಣ್ಣು ಗಂಡಸರ ಅಡಿಯಾಳಾಗಿಯೇ ಇರಬೇಕು ಎಂಬ ಕಾರಣಕ್ಕೆ ಹೆಣ್ಣಿಗೆ ವಿನಯ, ಸಹನೆ ಇತ್ಯಾದಿ ಅಲಂಕಾರಗಳು, ಭೂಷಣಗಳು ಎಂದು ಹೇರಲಾಗಿದೆ.

ಸ್ತ್ರೀ ತನ್ನ ದುಃಖ, ದುಗುಡಗಳನ್ನು ತೋರ್ಪಡಿಸಬಾರದು. ಸಿಟ್ಟು, ತಾಪಗಳೆಲ್ಲ ಆಕೆಯ ಬಳಿಯಲ್ಲಿ ಸುಳಿಯಬಾರದು. ಏಕೆಂದರೆ ಅದು ಹೆಣ್ಣಾದವಳಿಗೆ ಹೇಳಿದ್ದಲ್ಲ. ಅವಳು ಸಹನಾಮಯಿ. ಅದಕ್ಕಾಗಿಯೇ ಅವಳನ್ನು ಭೂಮಿಗೆ ಹೋಲಿಸಲಾಗಿದೆ. ಭೂದೇವಿಯ ತಾಳ್ಮೆ ಅವಳದ್ದಾಗಬೇಕೆಂದು ಅಪೇಕ್ಷಿಸಲಾಗಿದೆ. ಹೆಣ್ಣು ಮಗಳೆಂದಾದ ಮೇಲೆ ಅವಳು ಮದುವೆಯಾಗಲೇ ಬೇಕು. ಅವಳು ಅಬಲೆ, ಅವಳಿಗೆ ಆಶ್ರಯ ಬೇಕೇ ಬೇಕು. ಲತೆಗೆ ಮರವೇ ಆಸರೆ ತಾನೇ? ಮರವಿಲ್ಲದೆ ಲತೆಯುಂಟೇ? ಹೆಣ್ಣನ್ನು ಲತಾಂಗಿ ಎಂದು ಕರೆದುದು ಅದಕ್ಕೇ. ಹೆಣ್ಣಿಗೆ ಇಷ್ಟ ಇದೆಯೇ ಇಲ್ಲವೇ ಎಂದು ವಿಚಾರಿಸದೇ ಅವಳನ್ನು ಮದುವೆಯ ಬಂಧನಕ್ಕೆ ದೂಡುವುದು ನಡೆದೇ ಇದೆ. ಇಲ್ಲಿ ಗಂಡನ್ನು ಆಯ್ದುಕೊಳ್ಳುವ ಸ್ವಾಂತಂತ್ರ್ಯ ಕೂಡ ಆಕೆಗಿಲ್ಲವಾಗಿದೆ. ಪುರುಷ ಆಯ್ಕೆಯೇ ಇಲ್ಲಿ ಅಂತಿಮವಾಗುತ್ತದೆ.

ಮದುವೆಯ ಅನಂತರ ಹೆಣ್ಣು ಭೋಗ ಸಾಮಗ್ರಿಯಾಗಿ ಬಳಕೆಯಾಗುವುದು ಇನ್ನೊಂದು ವೈಪರೀತ್ಯ. ಅವಳ ಇಷ್ಟಾನಿಷ್ಟ ಕೇಳದೇ, ತನಗೆ ಬೇಕಾದಾಗೆಲ್ಲ ಅವಳನ್ನು ಭೋಗಕ್ಕೆ ಬಳಸಿಕೊಳ್ಳುವುದು ಆಕ್ರಮಣವಲ್ಲದೇ ಇನ್ನೇನಲ್ಲ. ಆದರೆ ಹೆಣ್ಣನ್ನು ಭೋಗದ ವಸ್ತು ಎಂದು ನಂಬಿಕೊಂಡ ಪುರುಷ ವರ್ಗಕ್ಕೆ ಅದು ತಪ್ಪು ಎಂದು ಅನ್ನಿಸದೇ ಇರುವುದು ಇನ್ನೊಂದು ಅತಿರೇಕವಾಗಿದೆ. *

ಹಾಗೆ ವೈವಾಹಿಕವಾಗಿ ಗಂಡನ್ನು ತೃಪ್ತಿ ಪಡಿಸುವವಳಾಗಿ ಕಾಣಿಸಿಕೊಳ್ಳುವ ಹೆಣ್ಣು ಗಂಡನಾದವನಿಗೆ ಯಾವತ್ತೂ ತಲೆಬಾಗಿಯೇ ಇರುವಂತೆ ನೋಡಿಕೊಳ್ಳಲಾಯಿತು. ಈ ರೀತಿಯಲ್ಲಿ ಪ್ರತಿಭಟಿಸುವ ಸ್ವಾತಂತ್ರ್ಯವನ್ನು ಹೆಣ್ಣಿನಿಂದ ಗಂಡು ಸಂಪೂರ್ಣ ಕಸಿದುಕೊಂಡದ್ದು ಹೆಣ್ಣು ತನ್ನನ್ನು ತನ್ನ ಅಪರಾಧಗಳನ್ನು, ದೌರ್ಬಲ್ಯಗಳನ್ನು ಕಸಿದುಕೊಳ್ಳಬಾರದು, ಪ್ರಶ್ನಿಸಬಾರದು ಎಂಬ ಕಾರಣಕ್ಕೇ ಆಗಿದೆ. ಹೆಣ್ಣನ್ನು ವಿದ್ಯೆಯಿಂದ ದೂರವಿಟ್ಟಿದ್ದೂ ಇದೇ ಉದ್ದೇಶದಿಂದಲೇ ಆಗಿದೆ. ಇದಕ್ಕಾಗಿಯೇ ಗಂಡ ದೇವರ ಕುರಿತು ಅಪಾರ ಭಕ್ತಿ, ಮಕ್ಕಳ ನಿರ್ವಹಣೆಯಲ್ಲಿ ತಾದಾತ್ಮ್ಯ ವಹಿಸುವುದೇ ಹೆಣ್ಣಿಗೆ ಭೂಷಣಪ್ರಾಯವಾದುದು ಎಂದು ಮನ ನಾಟಿಸುತ್ತ ಬರಲಾಗಿದೆ.

ಶೀಲ ಎಂಬುದನ್ನೂ ಪುರುಷ ಪ್ರಭುತ್ವ ಹೆಣ್ಣಿಗಷ್ಟೇ ಸೀಮಿತಗೊಳಿಸಿತು. ಅಥವಾ ಹೇರಿತು. ಚಾರಿತ್ರ್ಯ ಕೆಟ್ಟ ಹೆಣ್ಣು ಹೆಣ್ಣಲ್ಲ. ಹಾದರಗಿತ್ತಿ ಎಂದು ಹಂಗಿಸಿತು, ಛೀ ಎಂದು ಹೇಳಿತು.

ಹೆಣ್ಣು ಮಣ್ಣಿನ ಮಡಿಕೆ, ಗಂಡು ತಾಮ್ರ ಎಂಬ ಜನಪದ ಉಕ್ತಿ ಪುರುಷ ಅಹಂನ ಉದ್ಘೋಷವಾಗಿದೆ. ಗಂಡು ತಾಮ್ರ ಎಂಬಲ್ಲಿ ಗಂಡು ಏನಾದರೂ ಕೆಡದವನು, ಅವನು ಸುಭದ್ರ ಎಂಬ ಆಶಯವಿದೆ. ಹೆಣ್ಣು ಮಡಿಕೆ ಎಂಬಲ್ಲಿ ಅವಳನ್ನು ಹೀನೈಸಿದ್ದು ಸ್ಪಷ್ಟವಾಗಿದೆ. ಮಡಿಕೆ ಒಡೆದರೆ ಹೋಯಿತು, ಶೀಲಗೆಟ್ಟ ಹೆಣ್ಣ ಬಾಳು ಮುಗಿಯಿತು ಎಂಬುದು ಇಲ್ಲಿನ ಇಂಗಿತವಾಗಿದೆ. ಹೆಣ್ಣನ್ನು ಹೀಗೆ ಅವಮಾನಿಸಲಾಗಿದೆ. ಗಂಡು ಏನೂ ಮಾಡಬಹುದು. ಮಾಡಿಯೂ

ದಕ್ಕಿಸಿಕೊಳ್ಳಬಹುದಾಗಿದೆ ಎಂಬುದು ಪುರುಷ ಪ್ರಭುತ್ವದ ಅಹಂಕಾರವಾಗಿದೆ. ಪುರುಷ ವರ್ಗಕ್ಕೆ ತಾವೇ ಆರೋಪಿಸಿಕೊಳ್ಳುವ ಮರ್ಯಾದೆ ಆಗಿದೆ. ಹೆಣ್ಣು ಶೀಲವನ್ನು ಕಾಪಾಡಿಕೊಳ್ಳುವುದಕ್ಕಾಗಿಯೇ ತನ್ನ ಅಮೂಲ್ಯ ಸಮಯವನ್ನು ವ್ಯಯಿಸಬೇಕಾಗಿದೆ. ಕ್ಷಣಕ್ಷಣವೂ ಅವಳು ಎಚ್ಚರದಿಂದಿರಬೇಕಾಗಿದೆ. ಆದರೆ ಅವಳ ಶೀಲ, ಚಾರಿತ್ರ್ಯ ಕೆಡುವುದು ಅವಳಿಂದಾಗಿ ಅಲ್ಲ, ಪುರುಷರಿಂದಾಗಿ ಎಂಬುವುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ. ಪುರುಷನ ಪ್ರವೇಶವೇ ಸ್ತ್ರೀಯ ಶೀಲಾಪಹರಣಕ್ಕೆ ಕಾರಣವಾಗುತ್ತದೆ. ಆದರೆ ಇಲ್ಲಿ ಅದು ನಗಣ್ಯವಾಗುತ್ತದೆ. ಪುರುಷನಿಗೆ ಶೀಲವೆಂಬುದು ಕಾಡುವುದೇ ಇಲ್ಲ ಎನ್ನುವುದು ಒಂದು ಚೋದ್ಯವಾಗಿದೆ. ಪುರುಷ ಯಾವತ್ತೂ ಶೀಲಕೆಟ್ಟವನಾಗಿ ಪರಿಗಣಿತನಾಗುವುದೇ ಇಲ್ಲ ಎಂಬುದು ಒಂದು ವಿರೋಧಾಭಾಸ. ಎಂದರೆ ತನ್ನ ಹೆಂಡತಿ ಮಾತ್ರ ಪರಿಶುದ್ಧಳಾಗಿರಬೇಕು ಎಂಬ ಸ್ವಾರ್ಥದಿಂದ ಪ್ರೇರಿತವಾದ ಕಟ್ಟುಕಟ್ಟಳೆ ಇದು.

ತಾಯಿಯಂತೆ ಶೀಲ ಎಂಬಲ್ಲಿಯೂ ಮುಂದಿನ ಜನಾಂಗವನ್ನು ಬೆಳೆಸುವ ಜವಾಬ್ದಾರಿ ಹೆಣ್ಣಿನದ್ದೇ ಎಂಬ ಧ್ವನಿ ಹುದುಗಿದೆ. ಆದರೆ ಗಂಡು ಇಂಥ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡದ್ದು ಇಲ್ಲಿ ಮುಖ್ಯವಾಗುವುದೇ ಇಲ್ಲ. ಏನೇ ಆದರೂ ನಾನು ಶೀಲವತಿ, ಸುಶೀಲೆ ಆಗಿದ್ದೇನಲ್ಲ, ಇಷ್ಟೇ ಸಾಕು ಎಂದು ಸಂತೃಪ್ತಿ ಪಡುವಂತೆ ಮಾಡಿದ್ದು ಗಂಡು ಸಮಾಜ. ಹೆಣ್ಣಿಗೆ ಹಾಕಿದ ಈ ಚೌಕಟ್ಟು ಅವಳನ್ನು ಒಂದು ರೀತಿಯಲ್ಲಿ ಬಂಧನದಲ್ಲಿಡುವ ಹುನ್ನಾರವಾಗಿದೆ. ಆದರೆ ಇದನ್ನೆಲ್ಲ ಅರಿಯದ ಹೆಣ್ಣು ಮಗಳು ಮುಗ್ಧೆಯಾಗಿ, ನಾಚುಗೆ ಪ್ರವೃತ್ತಿಯವಳಾಗಿಯೇ ಮುಂದುವರಿದಿದ್ದಾಳೆ. ಹೆಣ್ಣಿನ ಮುಗ್ಧತೆ ಹಾಗೂ ಲಜ್ಜೆಯ ವೈಭವೀಕರಣಗಳಿಂದಾಗಿ ಗಂಡಿನ ಎಲ್ಲ ವಿಪರೀತಗಳು ರಾಜಾರೋಷವಾಗಿ ನಿರ್ವಹಿಸಲು ಸಾಧ್ಯವಾಗಿದೆ. ಹಾಗಾಗಬೇಕೆಂಬುದೇ ಪುರುಷ ಪ್ರಭುತ್ವದ ಆಕಾಂಕ್ಷೆಯಾಗಿದೆ.

ಸಂಸ್ಕೃತಿಯ ಉನ್ನತೀಕರಣದ ಉದ್ದೇಶಕ್ಕೆ ಹೆಣ್ಣನ್ನೇ ಬಳಸಿಕೊಳ್ಳುವುದು ಮಾಸ್ತಿ ಕತೆಗಳಿಂದ ವಿಧಿತವಾಗುವ ವಿಚಾರವಾಗಿದೆ. ಗಂಡು ಪ್ರಧಾನವಾದ ಸಂಸ್ಕೃತಿಯನ್ನು ಮಹಿಳೆಯರಿಂದಲೇ ಒಪ್ಪಿತಗೊಳಿಸುವ ಧ್ಯೇಯ ಮಾಸ್ತಿಯದ್ದಾಗಿದೆ. ಇಲ್ಲಿ ಲಿಂಗ ತರತಮತೆಯನ್ನು ಮೀರಿದಂತೆ ಭ್ರಮೆ ಹುಟ್ಟಿಸುತ್ತ ಅದನ್ನು ಮೀರದ ಪ್ರಕ್ರಿಯೆ ಪರಿಚಿತಗೊಳ್ಳುವುದು ಪರಂಪರೆಯನ್ನು ಮೀರಲು ಪ್ರಯತ್ನಿಸಿ ಸೋಲುವಲ್ಲಿ ಸ್ಪಷ್ಟವಾಗುತ್ತದೆ.

ಮಾಸ್ತಿ ಮನುಷ್ಯ ಸಂಬಂಧವನ್ನು ಪ್ರೀತಿಯ ನೆಲೆಗಟ್ಟಿನಿಂದ ಭದ್ರಗೊಳಿಸುವವರು, ಈ ಮೂಲಕ ಸಂಸ್ಕೃತಿಯೆನ್ನುವ ಪರಿಕಲ್ಪನೆಯನ್ನು ಕೆಡದಂತೆ ಉಳಿಸುವ ಕಾಳಜಿ ಉಳ್ಳವರು ಎಂಬುದು ನಿರ್ವಿವಾದ. ಆದರೆ ಸಂಸ್ಕೃತಿಯನ್ನು ಬಾಳಿಸುವ ನೆಪದಿಂದ ಹೆಣ್ಣು ಎಷ್ಟುಕಾಲ ಆಲೋಚನಾ ಶಕ್ತಿಯನ್ನು ಮೈಗೂಡಿಸಿಕೊಳ್ಳದೇ, ತನ್ನತನ ಬೆಳೆಸಿಕೊಳ್ಳದೇ ಬಾಳಬೇಕು ಎಂಬುದು ಇಂದಿಗೂ ಬಗೆಹರಿಯದ ಪ್ರಶ್ನೆಯಾಗಿಯೇ ಉಳಿದುಕೊಂಡಿರುವುದು ವಾಸ್ತವ ಸತ್ಯವಾಗಿದೆ. ಆದರೆ ಈ ಕುರಿತು ಚಿಂತಿಸದ ಮಾಸ್ತಿ ಸ್ತ್ರೀ ಬದುಕನ್ನು ರೂಪಿಸುವ ನಿಟ್ಟಿನಿಂದ ಬಹುಮುಖ್ಯಪಾತ್ರ ವಹಿಸುತ್ತಾಳೆ ಎಂದು ಬಲವಾಗಿ ನಂಬಿ ಪ್ರತಿಪಾದಿಸಿದ್ದಾರೆ.

ಸಂಸ್ಕೃತಿ ಹಾಗೂ ಸಾಮಾಜಿಕತೆಗಳ ಹಿನ್ನೆಲೆಯಿಂದಲೇ ರಚಿತವಾಗಿರುವ ಕತೆಗಳೊಳಗೆ ಪ್ರಧಾನವಾಗಿ ವಿಜೃಂಭಿಸುವ ಮೌಲ್ಯಗಳನ್ನು ಸ್ತ್ರೀ ಸಂವೇದನೆ ಮತ್ತು ಸ್ತ್ರೀವಾದಿ ಓದಿನ ಹಿನ್ನೆಲೆಯಿಂದಲೇ ಶೋಧಿಸಿದಾಗ ಅಲ್ಲಿನ ಸೂಕ್ಷ್ಮವಾದ ನಂಬಿಕೆ-ಧೋರಣೆಗಳು ಸ್ಪಷ್ಟವಾಗುತ್ತವೆ. ಪುರುಷಪ್ರಧಾನವಾದ ಆಲೋಚನೆಗಳನ್ನು ಪ್ರತಿಪಾದಿಸುವ ಮಹಿಳೆಯರನ್ನೂ ಇಲ್ಲಿ ಕಾಣುತ್ತೇವೆ. ಅವರ ಜತೆಗೆ. ಪಿತೃ ಪ್ರಧಾನ ಮೌಲ್ಯಗಳನ್ನು ಪ್ರಶ್ನಿಸದಂತೆ ಮಾಡಿ, ಅದರಿಂದಾಗುವ ತೊಂದರೆಗಳನ್ನು ಪರಿಚಯಿಸುವ ಮೂಲಕ ಸಾಂಪ್ರದಾಯಿಕ ಬದುಕನ್ನು ಮೀರದಂತೆ ಉಪದೇಶಿಸುವುದೂ ಅರಿವಿಗೆ ಬರುತ್ತದೆ.

ಮಾಸ್ತಿಯವರ ಕತೆಗಳಲ್ಲಿ ವೈದಿಕ ಹಾಗೂ ಅವೈದಿಕ ಸ್ತ್ರೀಯರು ಎದುರಾಗುತ್ತಾರೆ. ಇವರು ಮೇಲು ಹಾಗೂ ಕೆಳ ಸ್ತರದವರ ಬದುಕುಗಳನ್ನು ಪ್ರತಿನಿಧೀಕರಿಸಿದ್ದಾರೆ. ವೈದಿಕ ಪರಂಪರೆ ಅನುಸರಿಸಿದ ಮೇಲ್ವರ್ಗದ ಸ್ತ್ರೀಯರು ಆ ಸಂಸ್ಕೃತಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳುವವರು. ಪುರುಷನ ಎಲ್ಲ ಕಟ್ಟಳೆಗಳನ್ನು ಶಿರಸಾವಹಿಸಿ ಪಾಲಿಸುವವರು. ಸಾಂಸಾರಿಕ ಹಾಗೂ ಸಾಂಪ್ರದಾಯಿಕ ನಡವಳಿಕೆಗೆ ಬದ್ಧರಾಗುವವರು ಮತ್ತು ಅದು ಹಾಗೇ ಇರಬೇಕು ಎಂದು ಸ್ವತಃ ತಾವು ಹಾಗೆ ಬದುಕುವ ಮೂಲಕ ಪ್ರತಿಪಾದಿಸುವವರು. ಪುರಾಣದ ಸ್ತ್ರೀಯರೂ ಮೇಲುವರ್ಗದ ಮೌಲ್ಯಗಳನ್ನೇ ಅನುಸರಿಸುವವರಾಗಿ, ಸಾರುವವರಾಗಿ ಕಾಣಿಸಿಕೊಳ್ಳುತ್ತಾರೆ. ಐತಿಹಾಸಿಕ ಸ್ತ್ರೀಯರು ಕೂಡ ಮೇಲ್ವರ್ಗದ ಪ್ರತಿನಿಧಿಗಳೇ ಆಗಿದ್ದಾರೆ. ಪಾಶ್ಚಾತ್ಯ ಮೂಲದ ಸ್ತ್ರೀ ತೆಗೆದುಕೊಳ್ಳುವ ನಿರ್ಧಾರ, ಬದುಕುವ ರೀತಿಯನ್ನು ಪರಿಚಯಿಸುತ್ತಲೇ ಅಲ್ಲಿಯೂ ಭಾರತೀಯ ಸನಾತನ ರೀತಿಯನ್ನು ಆರೋಪಿಸಿ, ಅವರೂ ಅಂತೆಯೇ ಬದುಕುವಂತೆ ಎಚ್ಚರವಹಿಸಲಾಗಿದೆ. ಅಲ್ಲಿನ ಬದುಕಿನ ಒಳಿತನ್ನು ಸ್ವೀಕರಿಸುತ್ತಲೇ ಅಸ್ವೀಕಾರಾರ್ಹವಾದ ಸ್ವಚ್ಛಂದ ಬದುಕಿಗೆ ಕಡಿವಾಣ ಹಾಕಿ ಸಂಯಮದಲ್ಲಿ ಬದುಕು ಕಾಣುವವರಾಗಿದ್ದಾರೆ. ಒಂದು ಸಂಸ್ಕೃತಿಯನ್ನು ಉಳಿಸುವ ನೆಲೆಯಲ್ಲಿ ಭಾರತೀಯ ಸ್ತ್ರೀ ಪ್ರಧಾನ ಪಾತ್ರವಹಿಸುವಂತೆ ಮಾಸ್ತಿ ನೋಡಿಕೊಂಡಿದ್ದಾರೆ.

ಸ್ತ್ರೀ ಸನಾತನ ವೈದಿಕ ಪರಂಪರೆಯನ್ನು, ಅದು ಹಾಕಿಕೊಟ್ಟ ಮಾರ್ಗವನ್ನು ಚಾಚೂ ತಪ್ಪದೆ ಪಾಲಿಸುವಂತೆ ಮಾಸ್ತಿ ಎಚ್ಚರದಿಂದ ಚಿತ್ರಿಸಿದ್ದಾರೆ.

ನವೋದಯ ಕಾಲಘಟ್ಟದ ತಾತ್ವಿಕತೆಯ ಹಿನ್ನೆಲೆಯಲ್ಲಿಯೂ ಅದನ್ನು ಬದುಕಿನ ಆಧಾರದಲ್ಲಿ ಆ ನೆಲೆಯ ಕತೆ, ಆದರ್ಶದ ತಾತ್ವಿಕತೆ ಇಲ್ಲಿ ಅಭಿವ್ಯಕ್ತಗೊಂಡಿದೆ.

ಮಾಸ್ತಿಯವರ ಕತೆಗಳ ಅವೈದಿಕ ಅಥವಾ ಕೆಳಸ್ತರದಲ್ಲಿದ್ದು ಜೀವನ ಸಾಗಿಸುವ ಸ್ತ್ರೀಯರು ಒಂದು ಹಂತದಲ್ಲಿ ಸಂಪ್ರದಾಯದ ಬದುಕನ್ನು ಮೀರುತ್ತಾರೆ. ಆ ಮೂಲಕ ಸ್ವತಂತ್ರ ಆಲೋಚನೆ, ನಿಲುವು ತಳೆದದ್ದನ್ನು ತೋರಿಸುತ್ತಾರೆ. ಅರ್ಥಾತ್ ಎಲ್ಲ ನಿರ್ಬಂಧಗಳನ್ನು ಕೂಡ ಮುರಿದು ಬಾಳುವ ಕಡೆಗೆ ಮುಖಮಾಡುತ್ತಾರೆ. ಇವರೆಲ್ಲರೂ ಸಹಜವೆಂಬಂತೆ ಬದುಕಲು ಹೊರಡುತ್ತಾರೆ.

ಆದರೆ ಅದರಿಂದಾಗಿ ಬದುಕಿನಲ್ಲಿ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದದ್ದರಿಂದ ಮರಳಿ ಸಂಪ್ರದಾಯದ ಬದುಕನ್ನೇ ಅನಿವಾರ್ಯವಾಗಿ ಸ್ವೀಕರಿಸುತ್ತಾರೆ. ಪಾಶ್ಚಾತ್ಯರು ಕೂಡ ಭಾರತೀಯ ಸನಾತನ ಪರಂಪರೆಯ ಮೌಲ್ಯವನ್ನು ಒಪ್ಪಿಕೊಳ್ಳುವುದನ್ನು ಮಾಸ್ತಿ ಕಥಾ ಪಾತ್ರಗಳು ಪ್ರತಿನಿಧಿಸುತ್ತವೆ.

ಮಾಸ್ತಿ ಅವರ ಕತೆಗಳಲ್ಲಿನ ಸ್ತ್ರೀ ಪ್ರತಿನಿಧೀಕರಣವನ್ನು ವಿಶ್ಲೇಷಿಸಬೇಕಾದುದೇ ವೈದಿಕ ಹಾಗೂ ಅವೈದಿಕ ಸಂಸ್ಕೃತಿಗಳ ನಲೆಯಲ್ಲಿ. ಕತೆಗಳುದ್ದಕ್ಕೂ ಬರುವ ಬಹುತೇಕ ಸ್ತ್ರೀಯರು ವೈದಿಕ ಪರಂಪರೆಯನ್ನು ಪ್ರತಿಪಾದಿಸುವ, ಜೊತೆಗೆ ಪುನಃಸ್ಥಾಪಿಸುವ ಕೆಲಸವನ್ನೇ ಮಾಡುತ್ತಾರೆ. ಅದನ್ನವರು ತಾವು ಬಾಳಿ ಬದುಕಿದ ರೀತಿಯಿಂದಲೇ ತೋರಿಸಿಕೊಡುತ್ತಾರೆ. ವೈದಿಕ ಪರಂಪರೆಯ ಮೌಲ್ಯ ಇಲ್ಲಿ ಪೂರ್ವದ, ಅಧಿಕೃತತರ ಸಂಸ್ಕೃತಿಯಾಗಿ ಸಾರ್ವತ್ರಿಕಗೊಳ್ಳುತ್ತದೆ. ಅದುವೇ ಯಜಮಾನಿಕೆ ವಹಿಸುವುದನ್ನು ಇಲ್ಲಿ ಕಾಣುತ್ತೇವೆ. ಸಂಪ್ರದಾಯ ಹಾಗೂ ಪರಂಪರೆಯೆಂದು ಕರೆಯಿಸಿಕೊಳ್ಳುವ ಈ ವೈದಿಕ ಸಂಸ್ಕೃತಿಯ ಬದುಕಿನ ರೀತಿಯೇ ಹೆಚ್ಚು ಗೌರವಯುತವಾದ್ದಾಗಿ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಸ್ತ್ರೀಯರು ಉತ್ಕೃಷ್ಟ ಸಂಸ್ಕೃತಿಯ ನಿರ್ವಾಹಕರು ಹಾಗೂ ಪೋಷಕರೂ ಆಗುತ್ತಾರೆ.

ಅಂದರೆ ಮಾಸ್ತಿ ಕತೆಗಳಲ್ಲಿ ವೈದಿಕ ನಿಷ್ಠೆಯನ್ನು ಇದ್ದಂತೆಯೇ ಸ್ವೀಕರಿಸಿ ಪ್ರತಿಪಾದಿಸುವವರು ಮೇಲ್ವರ್ಗದವರು, ವೈದಿಕರು. ಅವರು ಸಂಸ್ಕೃತಿ, ಕಟ್ಟಳೆ ಮೀರಿ ನಡೆಯಲಾರರು. ಮಾಸ್ತಿ ಕೂಡ ಅಂಥ ಮೀರುವಿಕೆಯನ್ನು ಒಪ್ಪಿಕೊಳ್ಳಲಾರರು.

ಮಾಸ್ತಿ ಅವರ ಕತೆಗಳ ಸ್ತ್ರೀ ಪ್ರತಿನಿಧೀಕರಣವನ್ನು ಚರ್ಚಿಸುವ ಸಂದರ್ಭದಲ್ಲಿ ವರ್ಣ, ವರ್ಗ ವ್ಯವಸ್ಥೆಯನ್ನು ಎಚ್ಚರಿಕೆಯಿಂದ ಕಾಯ್ದುಕೊಳ್ಳುವುದು, ಉನ್ನತ ವರ್ಗವೊಂದು ಕೆಳವರ್ಗದೊಂದಿಗೆ ವೈವಾಹಿಕ ಸಂಬಂಧ ನಡೆಸದಂತೆ ಅಲ್ಲಿನ ಸ್ತ್ರೀಯರೇ ಕಟ್ಟೆಚ್ಚರ ವಹಿಸುವುದು ಕಾಣುತ್ತೇವೆ.

ಸಂಘರ್ಷರಾಹಿತ್ಯ ಅಲ್ಲಿದ್ದಂತೆ ಕಂಡರೂ ಕತೆಯೊಳಗೇ ಪರಂಪರೆ ಹಾಗೂ ಆಧುನಿಕತೆ ಮಧ್ಯೆ ತಣ್ಣನೆಯ ಸಂಘರ್ಷ ನಡೆಯುತ್ತಿರುತ್ತದೆ. ಅವೆರಡು ಎಂದಿಗೂ ,ಒಂದಾಗದೇ ಹೋಗುತ್ತದೆ. ಆದರೂ ಸಹನಾಮಯಿಗಳಾಗಿರುವ ಇಲ್ಲಿನ ಸ್ತ್ರೀಯರು ಇಲ್ಲಿ ಯಾವುದಕ್ಕೂ ವ್ಯಥಿಸುವುದಿಲ್ಲ. ಸಂಪ್ರದಾಯ ನಿಷ್ಠೆ ಅವರಿಗೆ ಧರ್ಮಪಾಲನೆಯಾಗಿ ಕಾಣುತ್ತದೆ. !

ಕನ್ನಡದ ನೆಲೆಗಟ್ಟಿನ ವೈದಿಕ, ಅವೈದಿಕ ಬದುಕು ಪ್ರತಿಪಾದಿತವಾದಂತೆ ಹೆಣ್ಣು ಇರಬೇಕಾದ ರೀತಿಯನ್ನು ಭಾರತದ ನೆಲೆಯಿಂದಲೂ ಗ್ರಹಿಸಲಾಗಿದೆ. ಮತ್ತು ವಿಶ್ವದ ನೆಲೆಗೂ ಭಾರತೀಯ ಬದುಕಿನ ಮೌಲ್ಯವನ್ನು ಅನ್ವಯಿಸಲಾಗಿದೆ. ಅದನ್ನು ಅಲ್ಲಿ ಒಪ್ಪಿಕೊಳ್ಳುವಂತೆ ಮಾಡಿದ್ದು ಭಾರತೀಯ ಸಂಸ್ಕೃತಿಯಾಗಿದೆ.

ಪುರುಷನ ಉದಾರವಾದಿ ಮಾನವತಾವಾದದ ಅಡಿಯಲ್ಲಿ ಬದುಕು ಪಡೆದವರನ್ನು ಮಾಸ್ತಿ ಕತೆಗಳ ಸ್ತ್ರೀಯರು ಅಭಿವ್ಯಕ್ತಿಸಿದ್ದಾರೆ. ಅಲ್ಲದೇ ಸ್ವತಃ ಉದಾರವಾದಿಗಳಾದ ಸ್ತ್ರೀಯರೂ ಅಲ್ಲಿ ಮುಖಾಮುಖಿಯಾಗುತ್ತಾರೆ.

ನೈತಿಕ ಹಾಗೂ ಅನೈತಿಕ ಪ್ರಜ್ಞೆಯಿಂದ ಲೈಂಗಿಕ ಸಂಬಂಧ ಬೆಳೆಸುವ ಹಾಗೂ ವಿರೋಧಿಸುವ ಪ್ರಕ್ರಿಯೆಯನ್ನು ವೈದಿಕ ಹಾಗೂ ಅವೈದಿಕ ಪರಂಪರೆಯ ಮಂದಿಗಳ ನಡುವೆ ನಡೆಯುವ ಭಿನ್ನ ನೆಲೆ, ಸಂದರ್ಭಗಳ ಹಿನ್ನೆಲೆಯಲ್ಲಿ ಅಭ್ಯಸಿಸಲಾಗುವುದು. ಈ ಎಲ್ಲ ವಿಚಾರಗಳನ್ನು ವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ ಪ್ರತಿನಿಧೀಕರಣ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅವೈದಿಕ ವರ್ಗದವರು ಕೆಳವರ್ಗದವರು. ಈ ವರ್ಗದ ಸ್ತ್ರೀಯರು ಬದುಕುವ ರೀತಿ ಮಾಸ್ತಿಯವರಿಂದ ಮೂಗು ಮುರಿಯಿಸಿಕೊಳ್ಳುವುದಿಲ್ಲ. ಇವರ ತೀರ್ಮಾನ, ನಿರ್ಧಾರ ಬದುಕಿಗೆ ಸಹಜವಾಗಿದೆ, ಪ್ರಾಮಾಣಿಕವಾಗಿದೆ ಎಂದು ತೋರಿಸಿದರೂ ಆ ಬದುಕು ಸರಿಯಲ್ಲ ಎಂಬುದನ್ನುಅವರು ಅನುಭವಿಸಬೇಕಾಗಿ ಬರುವ ಬಿಕ್ಕಟ್ಟಿನ ಸಂದರ್ಭಗಳನ್ನು ತೋರಿಸಿಕೊಡುವ ಮೂಲಕ ಪ್ರತಿಪಾದಿಸುವುದನ್ನು ಅವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ *ಪ್ರತಿನಿಧೀಕರಣ ಅಧ್ಯಾಯದಲ್ಲಿ ಅಭ್ಯಸಿಸಲಾಗಿದೆ. ಇಲ್ಲಿಯೇ* ವೇಶ್ಯೆಯ ಬದುಕು ಮತ್ತು ಅದಕ್ಕೆ ಒಳಗಾಗಬೇಕಾದ ಅನಿವಾರ್ಯತೆಗಳನ್ನು ತೆರೆದಿಡುವುದು, ಬದುಕಿನ ಸಹಜ ನೆಲೆಗಳನ್ನು ಮೀರಿ ನಡೆಯಬೇಕಾದ, ಆದರೆ ನಡೆಯಲಾಗದೇ ಸೋತು ಹೋಗುವ ಸ್ತ್ರೀಯರನ್ನೂ ಅಧ್ಯಯನ ಮಾಡಲಾಗಿದೆ.

'ಮಾಸ್ತಿ ಮತ್ತು ಸಮಕಾಲೀನರಲ್ಲಿ ಸ್ತ್ರೀ ಪ್ರತಿನಿಧೀಕರಣ' ಅಧ್ಯಾಯದಲ್ಲಿ ಮಾಸ್ತಿಯವರನ್ನು ಸಮಕಾಲೀನರ ನಡುವೆ ಇಟ್ಟು ಕೂಡ ಅಧ್ಯಯನ ಮಾಡಲಾಗುವುದು. ಈ ಸಂದರ್ಭ ಮಾಸ್ತಿ ಸ್ತ್ರೀಯನ್ನು ಚಿತ್ರಿಸಿದ ರೀತಿ ಹಾಗೂ ಸಮಕಾಲೀನ ಬರಗಾರರು ಚಿತ್ರಿಸಿರುವ ರೀತಿಯಲ್ಲಿ ಭಿನ್ನತೆಯನ್ನು ಅರಸಲಾಗುತ್ತದೆ. ಇಲ್ಲಿ ಪಂಥಗಳ ಧೋರಣೆಗಳ ಆಧಾರದಲ್ಲಿ ಕತೆಗಳನ್ನು, ಕತೆಗಾರರನ್ನು ವಿಶ್ಲೇಷಿಸದೆ ಮಾಸ್ತಿ ಕತೆಗಳ ಸ್ತ್ರೀಯರು ಮೌಲ್ಯಗಳ ಆಶಯದ ಹಿನ್ನೆಲೆಯಲ್ಲಿ ಇತರ ಕತೆಗಾರರ ಕತೆಗಳ ಸ್ತ್ರೀಯರನ್ನು ಅಭ್ಯಸಿಸಿ ಮಾಸ್ತಿ ಭಿನ್ನರಾಗುವ ಬಗೆಯನ್ನು ಅಭ್ಯಸಿಸಲಾಗುತ್ತದೆ. ಮಾಸ್ತಿ ಸ್ತ್ರೀಯರ ಕುರಿತು ತಳೆದ ಮೃದು ಧೋರಣೆ, ಸಂಯಮ, ತಾಳ್ಮೆ ಹಾಗೂ ಗೌರವ ಭಾವ ಇತ್ಯಾದಿಯನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಮಾಸ್ತಿಯವರಲ್ಲಿನ ಸ್ತ್ರೀ ಸಂವೇದನೆ ಹಾಗೂ ಅನುಭವ ದ್ರವ್ಯವನ್ನು ಲೇಖಕಿಯರ ಕತೆಗಳ ಸ್ತ್ರೀಯರು ಪ್ರತಿನಿಧಿಸಿದ ಮೌಲ್ಯಗಳ ಮೂಲಕ ಹುಡುಕಬೇಕಾಗುತ್ತದೆ. ಆ ಮೂಲಕ ಮಾಸ್ತಿಯ ಹೆಣ್ತನವನ್ನು ಸ್ವತಃ ಹೆಣ್ಣಾಗಿಯೂ ವಿಮರ್ಶಿಸುವುದು ಅಧ್ಯಯನದ ಗುರಿಯಾಗಿದೆ. ಸದ್ಯದ ವೈದೇಹಿವರೆಗಿನ ಕತೆಗಾರ್ತಿಯರ ಕತೆಗಳ ಹಾಗೂ ಮಾಸ್ತಿ ಕತೆಗಳಲ್ಲಿನ ಸ್ತ್ರೀ ಪ್ರತಿನಿಧೀಕರಣದ ವಿಭಿನ್ನತೆಗಳನ್ನು ನಿರ್ವಚಿಸುವುದೂ ಮುಖ್ಯವಾಗಿದೆ.

ಮಾಸ್ತಿ ಕತೆಗಳಲ್ಲಿ ಸ್ತ್ರೀ ಪ್ರತಿನೀಧೀಕರಣ ಎಂಬ ಶೀರ್ಷಿಕೆಯ ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀಯ ನಡವಳಿಕೆಯ ರೀತಿ-ನೀತಿಗಳನ್ನು ಅಭ್ಯಸಿಸುತ್ತ ಅವರು ಪ್ರತಿನಿಧಿಸಿ ಮೌಲ್ಯಗಳನ್ನು ಚರ್ಚಿಸಲಾಗುತ್ತದೆ. ಆದರೆ ಪ್ರತಿನಿಧೀಕರಣದ ಅರ್ಥ ವ್ಯಾಪ್ತಿ ಯುಗಮೌಲ್ಯದ ಪ್ರತಿನಿಧಿಸುವಿಕೆಯಾಗಿ ಅನನ್ಯತೆ ಪಡೆಯುತ್ತದೆ. ಅಂದರೆ ಅಲ್ಲಿ ಸ್ತ್ರೀಯೊಬ್ಬಳು ಬದುಕುವ ರೀತಿ,

ಕಾರಣವಾದ ಸಮಾಜ, ಎದುರಿಸುವ ಪರಿಸ್ಥಿತಿ, ಅದರೊಳಗೇ ಇರುವ ಕಟ್ಟುಪಾಡುಗಳೆಲ್ಲ ಪುರುಷನ ಪೌರುಷದ ಆಡಳಿತದ ಫಲವಾಗಿದೆ. ಇಲ್ಲಿಯೇ ಗಂಡನ ಜೊತೆಗೇ ಹೆಣ್ಣು ಪಡೆಯುವ ಸ್ವಾತಂತ್ರ್ಯ, ಸುಖೀ ಬದುಕಿನ ಹಿನ್ನೆಲೆಗೆ ಕಾರಣವಾಗುವ ಗಂಡಿನ ದೊಡ್ಡತನಗಳೂ ಕೂಡ ದಾಖಲಾಗಿವೆ. ಅಷ್ಟೇ ಅಲ್ಲ, ಆ ಮೂಲಕ ಅಂಥ ಮನಸ್ಸು ನಿರ್ಮಿಸಿದ ಸಮಾಜ, ಪರಿಸರ, ಸಂಸ್ಕಾರ, ಸಂಸ್ಕೃತಿಯೂ ಆ ಮೂಲಕ ಪ್ರಾತಿನಿಧ್ಯವಹಿಸಿದೆ.

ಸ್ತ್ರೀಗೆ ಸಮಾಜದಲ್ಲಿ ನಿರ್ದಿಷ್ಟ ಆರೋಪಿತ ಗುಣಗಳಿರುತ್ತವೆ. ಇತಿಹಾಸದ ಎಲ್ಲಾ ಕಾಲಘಟ್ಟದಲ್ಲೂ ಆಯಾ ಕಾಲದ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಇದು ರೂಪುಗೊಂಡಿರುವುದನ್ನು ಕಾಣಬಹುದು. ಮಾಸ್ತಿಯವರು ಬದುಕಿ ಬಾಳಿದ ಕಾಲಘಟ್ಟದಲ್ಲಿ ಸ್ತ್ರೀಯರಿಗೆ ಇದ್ದ ಸ್ಥಾನ ನೂನಗಳನ್ನು ಗಣಿಸದೇಯೇ ನಿರ್ದಿಷ್ಟ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ತ್ರೀಯರನ್ನು ಚಿತ್ರಿಸಿರುವುದು ಕಾಣುತ್ತದೆ.

ಸ್ತ್ರೀ ಪ್ರತಿನಿಧಿಸುವ ನಿರ್ದಿಷ್ಟ ಮೌಲ್ಯಗಳನ್ನು ದಾಖಲಿಸುವಲ್ಲಿ ಮಾಸ್ತಿ ಸ್ಥಾಪಿತ ಹಿತಾಸಕ್ತಿಗಳ ಪರವಾಗಿರುವುದನ್ನು ಕಾಣುತ್ತೇವೆ. ಮಾಸ್ತಿ ನೆಲೆಯಲ್ಲಿ ಇದು ಆರೋಗ್ಯಕರ ಪರಿಸ್ಥಿತಿಯೇ ಆಗಿದೆ. ಆದರೆ ಸಮಕಾಲೀನ ವಿಚಾರದಾರೆಗಳ ನಡುವೆ ಮಾಸ್ತಿ ಆವರು ಪ್ರತ್ಯೇಕರಾಗುಳಿಯುವುದಕ್ಕೆ ಮುಖ್ಯ ಕಾರಣಗಳನ್ನು ಈ ಅಧ್ಯಯನದಲ್ಲಿ ಶೋಧಿಸಲಾಗುವುದು.

ಆದ್ದರಿಂದಲೇ ಇಲ್ಲಿನ ವಿಭಿನ್ನ ಸ್ತ್ರೀ ವ್ಯಕ್ತಿತ್ವಗಳು ಪ್ರತಿನಿಧಿಸುವ ಮೌಲ್ಯಗಳನ್ನು ಅಧ್ಯಯನ ನಡೆಸುವುದು ಹೆಚ್ಚು ಅಗತ್ಯದ್ದಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಮಾಸ್ತಿ ಕತೆಗಳಲ್ಲಿನ ಸ್ತ್ರೀಯರಿಂದ ಪ್ರತಿನಿಧೀಕರಣಗೊಂಡ ಮೌಲ್ಯವನ್ನು ಶೋಧಿಸಲು ಪ್ರಯತ್ನಿಸಲಾಗಿದೆ.

ಮಾಸ್ತಿಯವರು ಬರೆಯತೊಡಗಿದಂದಿನಿಂದ ಸುಮಾರು ಎಂಟು ದಶಕಗಳವರೆಗೆ ಕತೆಗಳನ್ನು ಬರೆದವರು. ಈ ಸಂದರ್ಭದಲ್ಲಿ ಅನೇಕ ಸಾಹಿತ್ಯ ಪಂಥಗಳು, ಸಾಮಾಜಿಕ ಹಾಗೂ ಸ್ವಾತಂತ್ರ್ಯ ಚಳವಳಿಗಳು, ಹೋರಾಟಗಳು ಬಂದು ಹೋಗಿವೆ. ಈ ಸಂದರ್ಭದಲ್ಲಿ ಮಾಸ್ತಿಯವರಿಂದ ರಚಿತವಾದ ಕತೆಗಳು ಬಹುಮುಖ್ಯ ಸಾಹಿತ್ಯ ತುಣುಕುಗಳಾಗಿ ಮೌಲ್ಯ ಪಡೆದುಕೊಂಡಿವೆ. ಈ ಕಾಲಘಟದ್ಪದಲ್ಲಿನ ಧ್ಯೇಯ-ಧೋರಣೆ ನೋಡಿದರೆ, ಪಂಥಗಳ ಚರ್ಚೆಯನ್ನು ಗಮನಿಸಿದರೆ ಮಾಸ್ತಿ ಅವುಗಳ ನಡುವೆ ಮಾತ್ರ ನಿರ್ಲಿಪ್ತರಾಗಿ ಮೌಲ್ಯಯುತ ಬದುಕಿನ ಕುರಿತು ಬರೆಯುತ್ತಿದ್ದುದರ ಉದ್ದೇಶವೇನು? ಅದನ್ನು ಸ್ತ್ರೀಯರಿಂದಲೇ ಪ್ರತಿಪಾದಿಸುವುದಕ್ಕೆ ಹೆಚ್ಚಿನ ಒತ್ತು ಕೊಟ್ಟದ್ದರ ಉದ್ದೇಶ ಏನು? ಎಂದು ಅಭ್ಯಸಿಸುವುದು ಅಧ್ಯಯನದ ಉದ್ದೇಶವಾಗಿದೆ.

ಈ ಸಂದರ್ಭವೇ ಸಮಕಾಲೀನ ಧೋರಣೆ ಹಾಗೂ ಮಾಸ್ತಿ ನಿಲುವನ್ನು ಅಧ್ಯಯನ ಮಾಡುವುದೂ ಮುಖ್ಯದ್ದಾಗಿದೆ. ಸಣ್ಣಕತೆ ಸಂದರ್ಭ ಮಾಸ್ತಿಯವರನ್ನು ಬಿಟ್ಟು ಮಾತನಾಡುವಂತಿಲ್ಲ. ಅವರ ಕತೆಗಳು ಮೌಲ್ಯಯುತ ಹಾಗೂ ಅಧ್ಯಯನ ಯೋಗ್ಯ ಸಾಹಿತ್ಯವಾಗಿವೆ. ಸಮಕಾಲೀನ

ಸಂದರ್ಭದಲ್ಲಿದ್ದ ಹೆಣ್ಣಿನ ಸ್ಥಾನ-ಮಾನ ಏನು? ಹೆಣ್ಣು ಯಾವ ಮೌಲ್ಯಗಳನ್ನು ಸ್ವೀಕರಿಸಿ ಬದುಕಬೇಕು ಮತ್ತು ಏನನ್ನು ಪ್ರತಿಪಾದಿಸಬೇಕೆಂಬುದನ್ನು ಮಾಸ್ತಿ ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ಅಭ್ಯಸಿಸುವುದು ಕೂಡ ಅಧ್ಯಯನದ ಉದ್ದೇಶವಾಗಿದೆ. ಇದೇ ಸಂದರ್ಭದಲ್ಲಿ ಇದು ತನಕ ಮಾಸ್ತಿ ಕತೆಗಳ ಅಧ್ಯಯನಗಳನ್ನು ಗಮನಿಸುವುದು ಪ್ರಸ್ತುತ ಪ್ರಬಂಧದ ಭಿನ್ನತೆಯನ್ನು , ಉದ್ದೇಶವನ್ನು ಅರಿತುಕೊಳ್ಳುವ ದೃಷ್ಟಿಯಿಂದ ಮುಖ್ಯವಾಗುತ್ತದೆ.

ಮಾಸ್ತಿ: ಇದುವರೆಗಿನ ಅಧ್ಯಯನಗಳು

ಸತ್ಯನಾರಾಯಣ ಮಲ್ಲಿಪಟ್ಟಣ ಅವರು ಮಾಸ್ತಿ ಅವರ ಸಮಗ್ರ ಕಥಾ ಸಾಹಿತ್ಯದ ಕುರಿತಾಗಿ ಶ್ರೀನಿವಾಸರ ಕಥಾ ಸಾಹಿತ್ಯ: ಒಂದು ಅಧ್ಯಯನ ಸಂಶೋಧನ ಪ್ರಬಂಧ ರಚಿಸಿದ್ದಾರೆ.[೫೨] ಮಾಸ್ತಿಯವರ ಒಟ್ಟೂ ಒಲವು ನಿಲುವುಗಳ ಅವಲೋಕನದ ಮೂಲಕವೇ ಮಾಸ್ತಿ ಅವರ ಕತೆಗಳನ್ನು ಹಾಗೂ ಕಾದಂಬರಿಗಳನ್ನುಸಮಗ್ರ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಮಾಸ್ತಿ ಅವರ ಕತೆಗಳ ಅಧ್ಯಯನದಲ್ಲಿ ಪ್ರಧಾನವಾಗಿ ವ್ಯಕ್ತಿ ಸಮಾಜದೊಂದಿಗೆ, ಕುಟುಂಬದೊಂದಿಗೆ, ಹೆಣ್ಣಿನೊಂದಿಗೆ ಹೊಂದಿದ ಸಂಬಂಧವನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಗುಪಡಿಸಿದ್ದಾರೆ. ಪಾಶ್ಚಾತ್ಯ ಪ್ರಭಾವದಿಂದ ಪ್ರೇರಿತವಾದ ಕತೆಗಳು ಹಾಗೂ ಭಾರತೀಯ, ವಿದೇಶೀ ಚರಿತ್ರೆಯ ಕತೆಗಳೆಂದು ವಿಂಗಡಿಸಿ ಜೀವನ ಮೌಲ್ಯಗಳನ್ನು ಮಾಸ್ತಿ ತೆರೆದಿಟ್ಟ ಬಗೆಯನ್ನು, ನೀಡಿದ ಸಂದೇಶವನ್ನು ವಿಸ್ತಾರವಾಗಿ ಅಭ್ಯಸಿಸಿ ಸಂಗ್ರಹಿಸಿಕೊಟ್ಟಿದ್ದಾರೆ! ಮಾಸ್ತಿ ನಿಲುವುಗಳನ್ನು ಸಮರ್ಥವಾಗಿ ಶೋಧಿಸಿದ ಅಮೂಲ್ಯ ಸಂಶೋಧನ ಗ್ರಂಥವಾಗಿ ದಾಖಲಾರ್ಹವಾಗುತ್ತದೆ. ಮಾಸ್ತಿ ಬದುಕನ್ನು ಪರಿಚಯಿಸಿಕೊಳ್ಳುವಲ್ಲಿ ಈ ಗ್ರಂಥ ನೆರವಾಗುವುದಲ್ಲದೆ ಮಾಸ್ತಿ ಕತೆಗಳ ವೈವಿಧ್ಯವನ್ನು ಮೊಗೆಮೊಗೆದು ಕೊಡುತ್ತದೆ. ಮಾಸ್ತಿ ಕತೆಗಳ ರಚನಾ ವಿಧಾನವನ್ನು, ಭಾಷೆಯನ್ನು ಸಣ್ಣ ಕತೆ, ಕಾದಂಬರಿ ಪ್ರಕಾರಗಳು ಬೆಳೆದು ಬಂದ ಹಿನ್ನೆಲೆಯಲ್ಲೇ ಅಧ್ಯಯನಕ್ಕೆ ತೊಡಗಿಸಿಕೊಂಡ ಸಂಶೋಧಕರು ಕನ್ನಡ ಕಥಾ ಸಾಹಿತ್ಯದಲ್ಲಿ ಮಾಸ್ತಿ ಪಡೆದುಕೊಳ್ಳುವ ಸ್ಥಾನವನ್ನು ಕೂಡ ಶೋಧಿಸಿದ್ದಾರೆ. ಮಲ್ಲಿಪಟ್ಣ ಅವರ ಸಂಶೋಧನ ಪ್ರಬಂಧ ಮಾಸ್ತಿಯವರ ಕಥಾ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುವ ಅಪೂರ್ವ ಸಂಪ್ರಬಂಧವಾಗಿದೆ. ಪುರಾತನ ಸಾಹಿತ್ಯ ಕುರಿತ ಮಾಸ್ತಿಯವರ ಧೋರಣೆಯ ಹಿನ್ನೆಲೆಯಲ್ಲಿಯೂ ಹೆಣ್ಣು ಗಂಡಿನ ಸಂಬಂಧವನ್ನು ಪರಿಚಯಿಸಿದ ಸತ್ಯನಾರಾಯಣ ಮಲ್ಲಿಪಟ್ಣ ಅವರು ಕತೆಗಳ ಮೂಲವನ್ನು ಸೂಕ್ಷ್ಮವಾಗಿ ಅಭ್ಯಸಿಸಿದ್ದಾರೆ.

---

೫೨ ೧೯೭೭ರಿಂದ ೧೯೮೧ರ ಅವಧಿಯಲ್ಲಿ ಸಿದ್ಧಪಡಿಸಿ ಮೈಸೂರು ವಿವಿಗೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ

ಮಾಸ್ತಿಯವರ ಕತೆಗಳ ಕುರಿತು ಎ.ಎನ್.ಮೂರ್ತಿರಾವ್ ಅವರು 'ಶ್ರೀ ಮಾಸ್ತಿಯವರ ಕಥೆಗಳು'(೧೯೯೯) ಎಂಬ ವಿಮರ್ಶಾ ಕೃತಿಯನ್ನು ಪ್ರಕಟಿಸಿದ್ದಾರೆ. ಮಾಸ್ತಿ ಅವರ ಸಮಗ್ರ ಕತೆಗಳನ್ನು ಸ್ಥೂಲವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಮಾಸ್ತಿಯವರ ಸಂಪ್ರದಾಯಬದ್ಧ ಧೋರಣೆಯ ಕತೆಗಳನ್ನು ವಿಶ್ಲೇಷಿಸದ ಮೂರ್ತಿರಾಯರು ಬದುಕಿನ ವಾಸ್ತವವನ್ನು ಕಟ್ಟಿಕೊಡುವ ಕತೆಗಳ ಕುರಿತು ಹೆಚ್ಚು ಮುತುವರ್ಜಿ ತೋರಿದ್ದಾರೆ. ಸಾಂಪ್ರದಾಯಿಕ ಹಿನ್ನೆಲೆ ಮತ್ತು ಆದರ್ಶೀಕರಣದ ಹಿನ್ನೆಲೆಯಿಂದ ಮಾಸ್ತಿ ಕತೆಗಳನ್ನು ಓದುವುದನ್ನು, ಅಭ್ಯಸಿಸುವುದನ್ನು ಅವರು ಸಮ್ಮತಿಸುವುದಿಲ್ಲ. ಬದುಕಿನಲ್ಲಿ ಹೆಣ್ಣು-ಗಂಡಿನ ಸಂಬಂಧ, ಅವರ ಮನಸ್ಥಿತಿ , ಅವರು ತಳೆಯುವ ನಿಲುವುಗಳನ್ನು ವಾಸ್ತವದ ತಳಹದಿಯ ಮೂಲಕವೇ ಚರ್ಚಿಸುತ್ತಾರೆ. ಆದರೆ ಅದೇ ವಾಸ್ತವದಲ್ಲಿ ಇದ್ದ ಹೆಣ್ಣು-ಗಂಡಿನ ತರತಮಗಳನ್ನು, ಹೆಣ್ಣಿನ ಅಧೀನತೆಯನ್ನಾಗಲೀ ಅವರು ಪ್ರಶ್ನಿಸುವುದಿಲ್ಲ. ಪುರಾಣ ಹಾಗೂ ಇತಿಹಾಸದ ವ್ಯಕ್ತಿಗಳನ್ನಾಧರಿಸಿ ರಚಿಸಲಾದ ಕತೆಗಳನ್ನು ಆ ಕಾಲದ ಸಮಾಜದ ಹಿನ್ನೆಲೆಯಲ್ಲಿಯೇ ಪರಿಚಿತಗೊಳಿಸಿದ್ದಾರೆ. ಮಾನವ ವರ್ತನೆಯ ಹಿನ್ನೆಲೆಯಲ್ಲಿಯೇ ಗಂಡು-ಹೆಣ್ಣಿನ ನಡುವಿನ ಸಮಸ್ಯೆಗಳನ್ನು ಕತೆಗಳಲ್ಲಿ ಪರಿಚಯಿಸಿದ್ದಾರೆ ಎಂಬುದನ್ನೇ ಒತ್ತಿ ಹೇಳುವ ಮೂರ್ತಿರಾಯರು 'ಇದನ್ನೆಲ್ಲ ಗಮನಿಸುತ್ತಾರೆ ಸರಿ. ಆದರೂ ಈ ಗಂಡು ಹೆಣ್ಣಿನ ಸಂಬಂಧದಲ್ಲಿ ಅವರ ದೃಷ್ಟಿ ಸಂಪ್ರದಾಯ ಬದ್ಧ, ಸಂಕುಚಿತ ಎಂದು ಕೆಲವರು ಅಭಿಪ್ರಾಯ ಪಟ್ಟದ್ದುಂಟು. ಮಾಸ್ತಿಯವರ ಸಾಹಿತ್ಯವನ್ನು ಓದಿದವರಿಗೆ ಇವರು ಸ್ವಾಚ್ಛಂದ್ಯವನ್ನು ಒಪ್ಪುವುದಿಲ್ಲ ಎನ್ನಿಸುವುದು ನಿಜ. ಏತಕ್ಕೆ ಒಪ್ಪಬೇಕು'[೫೩] ಎಂದು ಪ್ರಶ್ನಿಸುವಲ್ಲಿಯೇ ಮೂರ್ತಿರಾಯರ ವಿಮರ್ಶೆಯ ಹಿಂದಿನ ಧೋರಣೆಯನ್ನುಅರ್ಥೈಸಿಕೊಳ್ಳಬಹುದಾಗಿದೆ. ಮಾಸ್ತಿಕತೆಗಳನ್ನುಸ್ಥೂಲವಾಗಿ ಪರಿಚಯಿಸುವ ಹೊತ್ತಗೆಯಾಗಿ ಈ ಕೃತಿ ಮುಖ್ಯವಾಗುತ್ತದೆ.

ಮಾಸ್ತಿ ಕತೆಗಳ ಕುರಿತಂತೆ ಹಲವಾರು ಲೇಖಕರು ವಿಮರ್ಶಾ ಲೇಖನ ಸಿದ್ಧಪಡಿಸಿದ್ದಾರೆ. ಡಿ.ಆರ್.ನಾಗರಾಜ್ ಅವರು ಮಾಸ್ತಿಯವರ ತಾತ್ವಿಕತೆಯನ್ನು ಸಂಪ್ರದಾಯದ ನಂಬಿಕೆಗೆ ಬದ್ಧವಾಗುವ ಮಾಸ್ತಿತನ ನೈತಿಕ ಚೌಕಟ್ಟನ್ನು ಕಟ್ಟಿಕೊಡುವುದಾಗಿ ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಅವರ ಕತೆಗಳನ್ನು ಸ್ಥೂಲವಾಗಿ ಚರ್ಚಿಸಿದ್ದಾರೆ. ಇಂಗ್ಲಿಷ್ ಒಲವನ್ನು ಅಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿರುವ ಮಾಸ್ತಿ ಅನುಭವದ ನೆಲೆಗಿಂತ ಭಿನ್ನವಾಗಿ ಸಂಸ್ಕೃತಿಯ ಪ್ರತಿಪಾದನೆ ಮಾಡುವ ವಕ್ತಾರಿಕೆಯನ್ನು ಕತೆಗಳ ಮೂಲಕ ಮಾಡುತ್ತಾರೆ ಎಂದು ವಿಮರ್ಶಿಸಿದ್ದಾರೆ.[೫೪]

---

೫೩ ಪು.೭೯ ಶ್ರೀ ಮಾಸ್ತಿಯವರ ಕಥೆಗಳು ಎ.ಎನ್.ಮೂರ್ತಿರಾವ್ ೧೯೯೯

೫೪ ಪು.೭೭-೮೩, ಮಾಸ್ತಿಯವರ ತಾತ್ವಿಕ ನಿಲುವುಗಳು, ಅಮೃತ ಮತ್ತು ಗರುಡ, ಡಿ.ಆರ್.ನಾಗರಾಜ್ ೧೯೮೩

ಮಾಸ್ತಿ ಅವರ ಸಾಂಪ್ರದಾಯಿಕ ಪ್ರಜ್ಞೆ, ಧಾರ್ಮಿಕ ನಂಬುಗೆಯನ್ನು ಹರಿಹರಪ್ರಿಯ ಅವರೂ ಚರ್ಚಿಸಿದ್ದಾರೆ.[೫೫]

ಸಂಘರ್ಷದಿಂದ ದೂರವಾಗಿ ಅಂಥ ಪರಿಸ್ಥಿತಿಗಳನ್ನು ತಪ್ಪಿಸುವ ಮಾಸ್ತಿ ಧೋರಣೆಯ ಹಿಂದೆ ಬದುಕು ಇರಬೇಕಾದ ಪರಿಯನ್ನು ಸಾರುವ ಸಂದೇಶವಿರುವುದನ್ನು ಜಿ.ಎಚ್.ನಾಯಕ್ ಅವರು 'ಮೌಲ್ಯದ ಕಟ್ಟು ಹಾಗೂ ವ್ಯಕ್ತಿಗಳ ನಿರ್ದಿಷ್ಟ ಜೀವನ ಸಂದರ್ಭದ ಬಿಕ್ಕಟ್ಟು ಇವುಗಳ ಒಳಗೇ ಮನುಷ್ಯನ ನಡೆ, ನುಡಿ ಎಷ್ಟು ಮಾನವೀಯವಾಗಬಹುದು, ಎಷ್ಟು ಆದರ್ಶವಾಗಬಹುದು ಎಂಬುದನ್ನು ಕಾಣಿಸುವುದರ ಮೂಲಕ ಉದಾತ್ತವಾಗಿ ಬದುಕುವ ದಾರಿಯನ್ನು ನಿರ್ದೇಶಿಸುವ ಆಶಯ ಪ್ರಧಾನವಾದ ದೃಷ್ಟಿ ಮಾಸ್ತಿಯವರದಾಗಿದೆ' ಎಂಬ ನೆಲೆಯಲ್ಲಿ ಶೋಧಿಸಿದ್ದಾರೆ.[೫೬] ಡಿ. ರಘುನಾಥ್ ರಾವ್ ಅವರು ಮಾಸ್ತಿ ಕತೆಗಳನ್ನು ಅವರ ಪಾರಂಪರಿಕ ನಂಬಿಕೆ ಮತ್ತು ತಿಳಿವಳಿಕೆಯ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. 'ಪಾಶ್ಚಾತ್ಯ ಸಂಸ್ಕೃತಿ-ಕೃತಿಗಳ ಸಂಪರ್ಕದಿಂದ ಸಿಕ್ಕ ತಿಳಿವಳಿಕೆಯ ಹಿನ್ನೆಲೆಯಲ್ಲಿ, ಮಾಸ್ತಿಯವರು ಭಾರತೀಯ ಪರಂಪರಾಗತ ಮೌಲ್ಯಗಳನ್ನು ಇಂದಿನ ಸಂದರ್ಭಕ್ಕೆ ಪ್ರಸ್ತುತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ' ಎಂದೇ ಗುರುತಿಸುವ ಮೂಲಕ ಕತೆಗಳನ್ನು ವಿಮರ್ಶಿಸಿದ್ದಾರೆ.[೫೭], ರಾಜೇಂದ್ರ ಚೆನ್ನಿ ಅವರೂ ಮಾಸ್ತಿ ಅವರ ಸಾಂಪ್ರದಾಯಿಕ ಧೋರಣೆಯ ಹಿನ್ನೆಲೆಯ ಆಧಾರದಲ್ಲಿಯೇ ಕತೆಗಳ ಅಧ್ಯಯನ ನಡೆಸಿದ್ದಾರೆ.[೫೮] ಎಚ್.ಜೆ.ಲಕ್ಕಪ್ಪ ಗೌಡ ಅವರು ಮಾಸ್ತಿ ಕತೆಗಳಲ್ಲಿನ ವೈವಿಧ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಮಾಸ್ತಿಕತೆಗಳನ್ನು ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಕಲ್ಪನಾತ್ಮಕ, ಭಾವನಾತ್ಮಕ ಕತೆಗಳೆಂದು ವಿಂಗಡಿಸಿ ಅಭ್ಯಸಿಸಿದ್ದಾರೆ. ಸಂಸ್ಕೃತಿಯ ಕುರಿತು ಗೌರವ ಬಿಂಬಿಸುವ, ಪ್ರೇಮ-ಪ್ರೀತಿಗಳನ್ನು ಬಾಳಿಸುವ, ಮೂಢನಂಬಿಕೆಯನ್ನು ವಿಡಂಬಿಸುವ, ಮನೋವಿಶ್ಲೇಷಣಾತ್ಮಕ, ಕತೆ ಶೋಕಪೂರ್ಣ ಬದುಕು, ವ್ಯಕ್ತಿಚಿತ್ರ ಹೆಣ್ಣಿನ ತ್ಯಾಗ, ಉದಾತ್ತತೆಗಳನ್ನು ಪ್ರತಿಪಾದಿಸುವ ಕತೆಗಳಾಗಿ ವಿಂಗಡಿಸಿಯೂ ಅವರು ಚರ್ಚಿಸಿದ್ದಾರೆ. [೫೯], ಕನ್ನಡ ಕಥಾ ಪರಂಪರೆಯ ಜತೆಜತೆಗೆ ಬೆಳೆದು ಬಂದ ಮಾಸ್ತಿ ಕತೆಗಳ ವಸ್ತು,

---

೫೫ ಪು. ೨೦-೩೮ ಮಾಸ್ತಿ ಸಂವೇದನೆ ಎಷ್ಟು ಗಟ್ಟಿ ಎಷ್ಟು ಟೊಳ್ಳು, ಪುನರ್ ಮೌಲ್ಯೀಕರಣ - ಹರಿಹರಪ್ರಿಯ ೧೯೯೮

೫೬ ಪು.೧೭೩, ಮಾಸ್ತಿಯವರ ಸಣ್ಣಕತೆಗಳಲ್ಲಿನ ಸಂಘರ್ಷಗಳ ಸ್ವರೂಪ, ನಿಜದನಿ, ಜಿ.ಎಚ್. ನಾಯಕ ೧೯೮೮

೫೭ ಪು. ೪೫ ಮಾಸ್ತಿ ಕತೆಗಳ ಹಿಂದಿರುವ ತಿಳುವಳಿಕೆ, ಸಮ್ಮುಖ, ಡಿ. ರಘುನಾಥ ರಾವ್ ೧೯೯೭

೫೮ ಪು. ೩೪-೪೪, ಮಾಸ್ತಿಯವರ ಸಣ್ಣಕತೆಗಳು, ಅಧ್ಯಯನ, ರಾಜೇಂದ್ರ ಚೆನ್ನಿ

೫೯ ಪು.೮೮-೧೧೫ ಶ್ರೀನಿವಾಸ ಸಾಹಿತ್ಯ ಸಮೀಕ್ಷೆ, ಸಂ. ಡಾ. ಹಾ.ಮಾ.ನಾ. ೧೯೭೮

ವೈವಿಧ್ಯ, ರಚನ ವಿಧಾನ, ತಂತ್ರಗಳನ್ನು ಪರಿಚಯಿಸುವ ಗಿರಡ್ಡಿ ಗೋವಿಂದ ರಾಜ ಅವರ 'ಕನ್ನಡ ಕಥಾ ಪರಂಪರೆ ಮತ್ತು ಮಾಸ್ತಿ' ಬರೆಹವೂ ಮಾಸ್ತಿ ಕತೆಗಳನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ನೆರವಾಗುತ್ತದೆ.[೬೦] ಈ ಎಲ್ಲ ಬರಹಗಳಿಗಿಂತ ಕೊಂಚ ಭಿನ್ನ ನೆಲೆಯ ಓದು ಹಾಗೂ ಸಮೀಕ್ಷೆಯನ್ನು ಮಾಸ್ತಿಮೂವತ್ತು ಕತೆಗಳು ಕೃತಿಯ ಪ್ರಸ್ತಾವನೆಯಲ್ಲಿ ತೆರೆದಿಡುವ ಪ್ರಯತ್ನ ಮಾಡಿರುವುದು ಉಲ್ಲೇಖಾರ್ಹವಾಗುತ್ತದೆ.[೬೧] ಯು. ಆರ್. ಅನಂತಮೂರ್ತಿ ಅವರು 'ಮಾಸ್ತಿಯವರ ಕಥೆಗಳಲ್ಲಿ ಸಂಸ್ಕೃತಿ ಮತ್ತು ಪ್ರವೃತ್ತಿ' ಲೇಖನ [೬೨], ಹ. ಪುರುಷೋತ್ತಮ ಬಿಳಿಮಲೆ ಅವರು 'ಮಾಸ್ತಿ ಕತೆಗಳಲ್ಲಿ ಜನಪದ ಪ್ರಜ್ಞೆ' ಎಂಬ ಲೇಖನ ಬರೆದಿದ್ದಾರೆ. [೬೩]

ಈ ಎಲ್ಲ ವಿಶ್ಲೇಷಣೆಗಳಿಗಿಂತ ಭಿನ್ನವಾಗಿ ಲೇಖಕಿಯರೂ ಸ್ತ್ರೀವಾದೀ ಓದಿನ ಹಿನ್ನೆಲೆಯಲ್ಲಿ ಮಾಸ್ತಿ ಕತೆಗಳ ಅಧ್ಯಯನ ಮಾಡಿದ್ದಾರೆ. ಸ್ತ್ರೀಯರ ಬದುಕಿನ ಚಿತ್ರಣ, ವೈಭವೀಕರಣದ ಹಿಂದಿನ ಸಂಪ್ರದಾಯ ಬದ್ಧತೆ, ಪುರುಷ ಪ್ರಧಾನ ಸಂಸ್ಕೃತಿಯ ಪಾಲನೆಯ ಹಿನ್ನೆಲೆಯನ್ನು ಶೋಧಿಸಿದ್ದಾರೆ. ಅಧ್ಯಯನಕ್ಕೆ ಪೂರಕವೆನಿಸಿದ ನಿಟ್ಟಿನಲ್ಲಿ ಪ್ರಮುಖವೆನಿಸಿದ ಎರಡು ಆಯ್ದ ಲೇಖನಗಳನ್ನು ಅವಲೋಕಿಸಲಾಗಿದೆ.

ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ ಸಂಕಲನ ವಿವಿಧ ಲೇಖಕರು ಮಾಸ್ತಿಯವರ ವಿವಿಧ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸಿ, ಸಮೀಕ್ಷಿಸಿದ ಬರೆಹಗಳ ಸಂಗ್ರಹವಾಗಿದೆ. ಕತೆಗಳ ಕುರಿತಾಗಿಯೂ ಆರು ಪ್ರತ್ಯೇಕ ಲೇಖನಗಳಿವೆ. ಅವುಗಳಲ್ಲಿ ಮಾಸ್ತಿ ಕತೆಗಳ ಸ್ತ್ರೀಯರ ಕುರಿತು ಪರಾಮರ್ಶಿಸಿದ ಬಿ.ಎನ್.ಸುಮಿತ್ರಾಬಾಯಿ ಅಲ್ಲಿ ಮೂಲಭೂತವಾದ ಮಾತೃಗುಣವನ್ನು ಕಂಡಿದ್ದಾರೆ. ಅಷ್ಟೇ ಅಲ್ಲ ಗೃಹಿಣಿ, ಪತ್ನಿಯಾಗಿರುವ ಅಲ್ಲಿನ ಸ್ತ್ರೀಯರ ಸ್ತ್ರೀ ಸತ್ವವನ್ನು ಸಾಂಪ್ರದಾಯಿಕ ಮೌಲ್ಯದ ಸ್ವೀಕಾರದ ಪ್ರತೀಕವಾಗಿ ಚಿತ್ರಿಸಿರುವುದನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ. ರೂಢಿಗತ ಸ್ತ್ರೀತ್ವದ ಮಾದರಿಗಳೇ ಮಾಸ್ತಿಯವರ ಕಥೆಗಳಲ್ಲಿ ಬಹುವಾಗಿ ವಿಜೃಂಭಿಸುವುದು[೬೪] ಎಂದು ಮಾಸ್ತಿ ಕತೆಗಳ ಸ್ತ್ರೀಯರ ಕುರಿತು ವ್ಯಾಖ್ಯಾನಿಸಿದ್ದಾರೆ. ವಿವಾಹ ಸಂಸ್ಥೆಯ ನೈತಿಕ ನಿಯಮಾವಳಿಗಳ ಒಳಗೆ ಅವರು ಬದ್ಧರಾಗಿರುವುದನ್ನು ಮತ್ತು ಪರಂಪರಾಗತ ಮೌಲ್ಯವನ್ನು ಎಲ್ಲ ರೀತಿಯಿಂದಲೂ ಪಾಲಿಸುವುದನ್ನು ಲೇಖಕಿ ಗುರುತಿಸಿದ್ದಾರೆ.

---

೬೦ ರುಜುವಾತು ಸಂ.ಯು.ಆರ್.ಅನಂತಮೂರ್ತಿ ಸಂಚಿಕೆ ೨೪,ಅಕ್ಟೋಬರ್ - ಡಿಸೆಂಬರ್೧೯೮೬

೬೧ ಮಾಸ್ತಿ ಮೂವತ್ತು ಕತೆಗಳು, ಪ್ರಸ್ತಾವನೆ, ಸಂ. ಯಶವಂತ ಚಿತ್ತಾಲ ೧೯೯೯

೬೨ ಪು.೧೫೦-೧೫೩ ಸಮಕ್ಷಮ, ಯು.ಆರ್.ಅನಂತಮೂರ್ತಿ ೧೯೯೨

೬೩ ಪು.೧೭-೨೮, ಶಿಷ್ಟ ಪರಿಶಿಷ್ಟ, ಪುರುಷೋತ್ತಮ ಬಿಳಿಮಲೆ ೧೯೯೨

೬೪ ಪು. ೧೩೧ ಮಾಸ್ತಿಕತೆಗಳ ಸ್ತ್ರೀ ಪಾತ್ರಗಳು, ಮಾಸ್ತಿಸಾಹಿತ್ಯ ಸಮಗ್ರ ದರ್ಶನ, ಸಂ. ಡಿ.ಎಸ್.ನಾಗಭೂಷಣ, ರಾಘವೇಂದ್ರ ಪಾಟೀಲ, ಸ.ಉಷಾ ೧೯೯೨

ಇದೇ ರೀತಿಯ ಅಭಿಪ್ರಾಯವನ್ನು ಎನ್. ಗಾಯತ್ರಿ ಅವರೂ ಮಂಡಿಸಿದ್ದಾರೆ. ಪರಂಪರಾಗತ ಸ್ತ್ರೀ ಮಾದರಿಗಳನ್ನೇ ಆದರ್ಶ ಮಾದರಿಗಳನ್ನಾಗಿ ಪರಿಭಾವಿಸಿರುವ ಮಾಸ್ತಿಯವರ ಕತೆಗಳ ವೈಚಾರಿಕತೆ ವಸ್ತುಸ್ಥಿತಿ ವಾದದ ನೆಲೆಯಲ್ಲಿಯೇ ಸಮಾಜದ ಹಿತವನ್ನು ಬಯಸುವಂತಹುದು ಎಂದೂ, ಮಾಸ್ತಿಯವರು ಸ್ತ್ರೀ ಸ್ವಭಾವವೆಂದು ಗುರುತಿಸಿ, ವೈಭವಿಸುವ ಸಾಧ್ವಿತನ ಪರಂಪರಾಗತ ಸ್ತ್ರೀ ಮೌಲ್ಯವೇ ಆಗಿದೆ. ಪಾತಿವ್ರತ್ಯ ಮಾಸ್ತಿಯವರ ಕತೆಗಳಲ್ಲಿ ಬಹುಮುಖ್ಯ ಮೌಲ್ಯವಾಗಿ ಬರುತ್ತದೆ. ಮಾಸ್ತಿ ಗ್ರಹಿಸುವ ಆದರ್ಶ ಸ್ತ್ರೀಯ ಸ್ತ್ರೀಸತ್ವವಿರುವುದೇ ಇಂತಹ ಗುಣಗಳಿಂದಾಗಿ' ಎಂದೂ ಅವರು ವಿಮರ್ಶಿಸಿದ್ದಾರೆ. [೬೫] ಸಬಿಹಾ ಅವರು ಹೇಮಕೂಟದಿಂದ ಬಂದ ಮೇಲೆ ಕತೆಯ ಕುರಿತು ಮಾಡಿರುವ ವಿಶ್ಲೇಷಣೆ ಮಾಸ್ತಿ ಕತೆಗಳ ಒಟ್ಟೂ ಸ್ತ್ರೀಯರ ಕುರಿತು ಮಾಡಿರುವ ವಿಮರ್ಶೆಯಾಗಿ ಪ್ರಾಮುಖ್ಯ ಪಡೆದಿದೆ. ಶಕುಂತಲೆಯನ್ನು ಉದಾತ್ತೀಕರಿಸಿ ಚಿತ್ರಿಸಿರುವುದನ್ನು ಹೊನ್ನಶೂಲವೆಂದು ತಿಳಿದಿದ್ದಾರೆ. ಶಕುಂತಲೆಯ ಸ್ವಭಾವವನ್ನು, ಉದಾತ್ತತೆಯನ್ನು ವೈಭವೀಕರಿಸುವ ಮೂಲಕ ಪಿತೃ ಪ್ರಧಾನ ಮೌಲ್ಯವನ್ನು ಅವಳು ಪಾಲಿಸಬೇಕಾದ ನೀತಿ ಹೇಳುವುದಾಗಿ ವಿಮರ್ಶಿಸಿದ್ದಾರೆ.

ಸಬಿಹಾ ಅವರ ಸ್ತ್ರೀವಾದಿ ಚಿಂತನೆ, ವೈಚಾರಿಕತೆ, ಓದು ಕತೆಯನ್ನುವಿಭಿನ್ನ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿಶ್ಲೇಷಿಸುತ್ತದೆ. 'ಶಕುಂತಲೆಯನ್ನು ಕೀರ್ತಿಸುವ ಭರದಲ್ಲಿ ಮಾಸ್ತಿಯವರು ಪ್ರತಿಷ್ಠಾಪಿಸುವುದು ಮತ್ತೆ ಸಾಂಪ್ರದಾಯಿಕ ಮಹಿಳೆಯನ್ನೇ ಆಗಿದೆ. ಕ್ಷಮೆಯ ಮೂರ್ತಿಯಾಗಿ, ಸಹನೆಯ ಆಗರವಾಗಿ, ಗಂಡ-ಬಂಧು-ಬಳಗದ ಪರಿಚಾರಕಳಾಗಿ ಒಟ್ಟಿನಲ್ಲಿ ಪುರುಷನಿಗೆ ಪ್ರಿಯವಾದ ಗೃಹಿಣಿಯ ಮಾದರಿಯನ್ನೇ ಹೊರತು, ಸ್ವಂತ ವ್ಯಕ್ತಿತ್ವವೊಂದು ಇರುವ ಮಹಿಳೆಯನ್ನಲ್ಲ' [೬೬] ಎಂದು ಅವರು ಮಾಡಿದ ವಿಮರ್ಶೆ ಮಾಸ್ತಿ ಕತೆಗಳ ಎಲ್ಲ ಸ್ತ್ರೀಯರ ನಡವಳಿಕೆಗಳಿಗೂ ಅನ್ವಯವಾಗುತ್ತದೆ. ಸಬಿಹಾ ಅವರ ಈ ಓದು, ಚಿಂತನೆ ಇದುವರೆಗೆ ಪ್ರಕಟವಾದ ಮಾಸ್ತಿ ಕತೆಗಳ ಕುರಿತ ಓದಿಗಿಂತ, ಮಂಡಿಸಿದ ವಿಚಾರಕ್ಕಿಂತ ಸಂಪೂರ್ಣ ಭಿನ್ನವಾಗಿದೆ. ಆ ಕಾರಣಕ್ಕಾಗಿಯೇ ಪ್ರಸ್ತುತ ಲೇಖನ ಪ್ರಾಧಾನ್ಯ ಪಡೆಯುತ್ತದೆ. ಮಾಸ್ತಿ ಕತೆಗಳ ಸ್ತ್ರೀಯರು ಸ್ತ್ರೀ ಪರ ಕಾಳಜಿಯ ಹಿನ್ನೆಲೆಯಿಂದ ಪರಿಚಿತಗೊಂಡ ಮಹಿಳೆಯರೆಂಬಂತೆ ಕಂಡರೂ ನಿಜದಲ್ಲಿ ಆ ನೆಲೆಯಿಂದ ಅವರು ಬದುಕು ಪಡೆದವರಲ್ಲ. ಸಾಂಪ್ರದಾಯಿಕತೆಯ ನಂಬಿಕೆಗೇ ಬದ್ಧರಾಗಿ ಉಸಿರಾಡುವವರು ಎಂಬುದನ್ನು ಅವರು ಬಲವಾಗಿ ಪ್ರತಿಪಾದಿಸಿದ್ದಾರೆ. ಸಬಿಹಾ ಅವರು ಮುಖ್ಯರಾಗುವುದು ಇಲ್ಲಿನ ಸ್ತ್ರೀಯರು ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತಾರೆ ಎಂದಷ್ಟೇ ಹೇಳಿ ಬಿಡದೆ

---

೬೫ ಪು. ೧೨೫ ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ವಿವಿಧ ಲೇಖಕರು ೧೯೯೩

೬೬ ಪು. ೧೦೫-೧೦೮ ಶಕುಂತಲೆಗೆ ಹೊನ್ನಶೂಲ, ಬಗೆ, ಸಬಿಹಾ ಭೂಮಿಗೌಡ ೨೦೦೧

ಪ್ರಗತಿಪರತೆಗೆ ಮುಖ ಮಾಡಿದಂತೆ ಕಾಣಿಸಿಕೊಳ್ಳುವ ಸ್ತ್ರೀಯರು ಆಂತರ್ಯದಲ್ಲಿ ಸಾಂಪ್ರದಾಯಿಕತೆಯ ಕಡೆಗೇ ಒಲವುಳ್ಳವರಾಗಿದ್ದುಅದಕ್ಕೇ ಬದ್ಧರಾಗುವ ಸೂಕ್ಷ್ಮಗಳನ್ನು ಗ್ರಹಿಸಿ ಚರ್ಚಿಸಿರುವುದರಿಂದ.

ಮಾಸ್ತಿ ಕತೆಗಳಲ್ಲಿನ ಸ್ತ್ರೀಯರು ಪ್ರತಿನಿಧೀಕರಿಸಿದ ಬದುಕು ವೈದಿಕ ಕುಟುಂಬದಲ್ಲೇ ಒಂದು ರೀತಿಯದ್ದಾದರೆ, ಅವೈದಿಕರಲ್ಲಿ ಇನ್ನೊಂದು ತೆರನಾದದ್ದು. ವೈದಿಕ ಮಹಿಳೆಗೊದಗುವ ಹಿಂಸೆ, ಅವೈದಿಕ ಮಹಿಳೆಯ ಪಾಲಿಗೆ ಇರುವುದಿಲ್ಲ. ಆಕೆ ಎದುರಿಸಿದ ಸಮಸ್ಯೆ ಭಿನ್ನ ರೀತಿಯದ್ದಾಗಿರುತ್ತದೆ. ವೈದಿಕ ಮಹಿಳೆ ಅಡ್ಡಿಗಳನ್ನು ವಿರೋಧಿಸುವುದಿಲ್ಲ. ಅವೈದಿಕ ಮಹಿಳೆಯರು ಮಾತ್ರ ಪ್ರತಿಭಟನೆಯ ಹಾದಿ ತುಳಿಯುತ್ತಾರೆ. ಆದರೆ ಅವರು ಅಂತ್ಯದಲ್ಲಿ ಸುಖ ಕಾಣುವುದಿಲ್ಲ. ಅದುವರೆಗೆ ಮಾಡಿದ್ದು ತಪ್ಪು ಎಂಬ ಪಶ್ಚಾತ್ತಾಪ ಪಡುತ್ತಾರೆ. ಮತ್ತೆ ಕೆಲವರು ತಪ್ಪಿನ ಪ್ರತಿಫಲವೋ ಎಂಬಂತೆ ಬಹುಬೇಗ ಸಾವನ್ನಪ್ಪುತ್ತಾರೆ. ಹೀಗೆ ಪರಂಪರೆ ಹಾಕಿಕೊಟ್ಟ ಮೌಲ್ಯಗಳ ಪುಷ್ಟೀಕರಿಸುವಲ್ಲಿ ಮಾಸ್ತಿಯವರ ಧೋರಣೆಗಳೇ ಪ್ರತಿಫಲಿಸುತ್ತವೆ.

ಆದರೆ ಇತರರ ಕತೆಗಳಲ್ಲಿ ಈ ತೆರನಾದ ಮೌಲ್ಯಗಳ ಪ್ರತಿಪಾದನೆಗಳಾಗಿಲ್ಲ. ಕೆಲವು ಕತೆಗಳು ಸಂಪ್ರದಾಯ ಪರವಾಗಿದ್ದರೆ ಮತ್ತೆ ಕೆಲವು ಅಂಥ ರೂಢಿಗತ ಸಂಪ್ರದಾಯಗಳನ್ನು ಮುರಿದುಕೊಳ್ಳುವ ಪ್ರಯತ್ನಗಳಾಗಿವೆ. ಅಲ್ಲದೆ ಹಾಗೆ ಪ್ರತಿಭಟಿಸಿಯೂ ಗೆಲ್ಲುವ ಸಂದರ್ಭಗಳನ್ನು, ಸಂಸಾರಗಳನ್ನು ಅನೇಕ ಕತೆಗಳು ಮುಖಾಬಿಲೆಯಾಗಿಸಿವೆ. ಎಂದರೆ ಪುರುಷನ ಸ್ತ್ರೀ ವಿರೋಧೀ ನಿಲುವುಗಳನ್ನು ಪ್ರತಿಭಟಿಸುವ ಮೂಲಕ ತಮ್ಮತನ ಸಾಬೀತುಪಡಿಸುವ ವೈಚಾರಿಕತೆಯನ್ನು ಮಹಿಳೆಯರಲ್ಲಿ ಬಿಂಬಿಸುವಲ್ಲಿ ಅನೇಕ ಕತೆಗಳು ಯಶಸ್ವಿಯಾಗುತ್ತವೆ. ಮಾಸ್ತಿಯವರ ಸಮಕಾಲೀನರು ಈ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಈ ಕಾರಣಕ್ಕಾಗಿಯೇ ಮಾಸ್ತಿಯವರ ಸ್ತ್ರೀ ಪ್ರತಿನಿಧೀಕರಣದ ಕುರಿತ ಆಧ್ಯಯನಕ್ಕೆ ಪ್ರಸ್ತುತತೆಯಿದೆ ಎಂದು ಭಾವಿಸಲಾಗಿದೆ.

ಸ್ವರೂಪ

ಅಧ್ಯಯನದ ಮಿತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಸ್ತುತ ಸ್ವರೂಪವನ್ನು ನಿರ್ಣಯಿಸಲಾಗಿದೆ. ಸ್ತ್ರೀ ಪ್ರತಿನಿಧೀಕರಣವನ್ನು ಅರಿತುಕೊಳ್ಳಬೇಕಾದರೆ ಸ್ತ್ರೀ ಬೆಳೆದು ಬಂದ ಬಗೆಯನ್ನು ಅರಿತು ಕೊಳ್ಳುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸುದೀರ್ಘವಾದ ಪ್ರಸ್ತಾವನೆಯನ್ನು ಜೋಡಿಸಲಾಗಿದೆ.

ಸ್ತ್ರೀ ಪ್ರತಿನಿಧೀಕರಣದ ಸಂದರ್ಭದಲ್ಲಿ ಮಾಸ್ತಿಯವರು ತಳೆದ ನಿಲುವನ್ನು ತಿಳಿದುಕೊಳ್ಳುವ ಸಂದರ್ಭದಲ್ಲಿ ವೈಯಕ್ತಿಕವಾಗಿ ಮಾಸ್ತಿಯವರ ಸಾಹಿತ್ಯದ ಬಗೆಗಿನ ನಂಬಿಕೆ ಹಾಗೂ ನಿಲುವನ್ನು ಕ್ರೋಡೀಕರಿಸುವುದು ಮುಖ್ಯವಾಗಿದೆ. ಈ ಕಾರಣಕ್ಕಾಗಿ ಮಾಸ್ತಿಯವರ ನಂಬಿಕೆ ಮತ್ತು ನಿಲುವು

ಎಂಬ ಅಧ್ಯಾಯವನ್ನು ಸಿದ್ಧಪಡಿಸಲಾಗಿದೆ. ಸಂಪ್ರದಾಯ ಶರಣತೆ ಎಂಬುದು ವೈದಿಕ ನೆಲೆಯಲ್ಲಿ ಮಾಸ್ತಿಯವರು ಚಿತ್ರಿಸಿದ ಸ್ತ್ರೀ ಪಾತ್ರಗಳ ಬಹು ಮುಖ್ಯ ಗುಣ. ಅಂದರೆ ಅಲ್ಲಿನ ಸ್ತ್ರೀಯರು ಪುರುಷ ಪ್ರಧಾನ ಮೌಲ್ಯವನ್ನು ಇದ್ದಂತೆಯೇ ಒಪ್ಪಿಕೊಂಡು ಅದನ್ನೇ ಮರು ಪ್ರತಿಷ್ಠಾಪನೆ ಮಾಡುವುದಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಪರಂಪರೆ ಹಾಕಿಕೊಟ್ಟ ಸಿದ್ಧ ಮೌಲ್ಯದ ನಂಬಿಕೆಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಅಲ್ಲದೆ ಇತರ ಸ್ತ್ರೀಯರೂ ಹಾಗೆಯೇ ಬಾಳಬೇಕಾದ ನೀತಿಯನ್ನೂ ಹಾಕಿಕೊಡುತ್ತಾರೆ. ವಿಸ್ತಾರವಾಗಿ ಬರುವ ಈ ಸ್ವಭಾವವನ್ನು ಚರ್ಚಿಸಲು ಪ್ರತ್ಯೇಕವಾದ ಒಂದು ಅಧ್ಯಾಯವನ್ನೇ ಬರೆಯಲಾಗಿದೆ.

ಸಂಪ್ರದಾಯವನ್ನು ವಿರೋಧಿಸುವ ಸಂದರ್ಭದಲ್ಲಿ ಮಾಸ್ತಿಯವರು ಅವೈದಿಕ ನೆಲೆಯ ಕೆಲವು ಸ್ತ್ರೀ ಪಾತ್ರಗಳನ್ನು ಚಿತ್ರಿಸಿರುವುದು ಗಮನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ಸಂಪ್ರದಾಯವನ್ನು ವಿರೋಧಿಸಲು ತೊಡಗಿ ನೆಮ್ಮದಿಯನ್ನು ಕಳೆದುಕೊಳ್ಳುವ ಪರಿಣಾಮ ಅನುಭವಿಸಬೇಕಾಗಿ ಬರುವ ಪರಿಸ್ಥಿತಿಗಳಿಂದಾಗಿ ಮತ್ತೆ ಅದಕ್ಕೇ ಶರಣಾಗುವ ಅವೈದಿಕ ನೆಲೆಯ ಸ್ತ್ರೀ ಪಾತ್ರಗಳನ್ನು ಪ್ರತ್ಯೇಕವಾದ ಅಧ್ಯಾಯದಲ್ಲಿಯೇ ಚರ್ಚಿಸಲಾಗಿದೆ.

ಪ್ರತಿಭಟನೆಯ ಮೂಲಕ ಅನ್ಯಾಯಕ್ಕೆ ಉತ್ತರ ಕೊಟ್ಟು, ಸ್ವತಂತ್ರ ಬದುಕು ಕಟ್ಟಿಕೊಂಡ ಸ್ತ್ರೀಯರ ಕುರಿತೂ ಚರ್ಚಿಸಲಾಗಿದೆ. ಅಂದರೆ ಪುರುಷಾಧಿಕ್ಯದ ಸಂಸ್ಕೃತಿ ನಿಯಮಿಸಿದ ಹೇರಿಕೆಗಳನ್ನು ಸಹನೆಯ ಮಿತಿ ಮೀರಿದಾಗ ಪ್ರತಿಭಟಿಸಿ ಸ್ವಂತ ನೆಲೆ ಕಂಡುಕೊಳ್ಳುವ ಸ್ತ್ರೀಯರನ್ನೂ ಅಧ್ಯಯನದ ಸಂದರ್ಭದಲ್ಲಿ ಚರ್ಚಿಸಲಾಗಿದೆ.

ಮಾಸ್ತಿಯವರ ಕಥೆಗಳ ಅನನ್ಯತೆ ಮನನವಾಗಬೇಕಾದರೆ ಸಮಕಾಲೀನರ ಕತೆಗಳೊಂದಿಗೆ ಅವರ ಸಾಹಿತ್ಯವನ್ನು ಶೋಧಿಸುವ ಅಗತ್ಯವಿದೆ. ಈ ಕಾರಣಕ್ಕಾಗಿ ಮಾಸ್ತಿಯವರ ಸಮಕಾಲೀನರಲ್ಲಿ ಪ್ರಮುಖರಾದ ಪಂಜೆ, ಕುವೆಂಪು, ಶಿವರಾಮ ಕಾರಂತ, ಎಂ. ಎನ್.ಕಾಮತ್, ಬೆಟಗೇರಿ ಕೃಷ್ಣ ಶರ್ಮ, ಆನಂದ, ಆನಂದಕಂದ, ಅನಕೃ, ತರಾಸು, ಚದುರಂಗ, ವ್ಯಾಸರಾಯ ಬಲ್ಲಾಳ, ನಿರಂಜನ, ಯು.ಆರ್.ಅನಂತಮೂರ್ತಿ, ಲಂಕೇಶ್, ಜಿ.ಟಿ.ರಾಘವ, ಸದಾಶಿವ, ತೇಜಸ್ವಿ ಮೊದಲಾದವರ ಪ್ರಾತಿನಿಧಿಕ ಕಥೆಗಳನ್ನು ಅಧ್ಯಯನದ ಸಂದರ್ಭದಲ್ಲಿ ಪರಿಗಣಿಸಲಾಗಿದೆ.

ಜೊತೆಗೆ ಕಥೆಗಾರ್ತಿಯರು ಸ್ತ್ರೀ ಸಂವೇದನೆಯನ್ನು ಕಂಡರಿಸಿದ ರೀತಿಯೂ ಕೂಡ ಅಧ್ಯಯನಕ್ಕೆ ಯೋಗ್ಯವೆಂದು ಭಾವಿಸಲಾಗಿದೆ. ಈ ಕಾರಣಕ್ಕಾಗಿ ಪ್ರಮುಖರಾದ ಆರ್.ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಶ್ಯಾಮಲ, ತ್ರಿವೇಣಿ, ವಾಣಿ, ಅನುಪಮಾ ನಿರಂಜನ, ಇತ್ತೀಚಿನ ಬರೆಹಗಾರ್ತಿ ವೈದೇಹಿ ಅವರ ಆಯ್ದ ಕೆಲವು ಕತೆಗಳನ್ನು ಅಧ್ಯಯನ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕೊನೆಯ ಅಧ್ಯಾಯವು ಒಟ್ಟು ಅಧ್ಯಯನ ಸಂದರ್ಭದಲ್ಲಿ ಕಂಡುಕೊಂಡ ಫಲಿತಾಂಶವನ್ನು ದಾಖಲಿಸುತ್ತದೆ. ಮಾಸ್ತಿಯವರ ಸ್ತ್ರೀ ಪ್ರತಿನಿಧೀಕರಣದ ಸ್ವರೂಪವನ್ನು ಅದರ ವೈಶಿಷ್ಟವನ್ನು ಸಮಾರೋಪ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ವ್ಯಾಪ್ತಿ

ಮಾಸ್ತಿಯವರು ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲೆಲ್ಲ ಗಮನಾರ್ಹರಾಗಿದ್ದಾರೆ. ಆದರೆ ಪ್ರಸ್ತುತ ಪ್ರಬಂಧದಲ್ಲಿ ಮಾಸ್ತಿಯವರ ಆಯ್ದ ಸಣ್ಣ ಕತೆಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಯಾಕೆಂದರೆ ಮಾಸ್ತಿಯವರಿಗೂ ಸಣ್ಣ ಕತೆಗೂ ಇರಬಹುದಾದ ಅವಿನಾಭಾವ ಸಂಬಂಧ ಇದಕ್ಕೆ ಬಹುಮುಖ್ಯ ಕಾರಣ. ಅಲ್ಲದೆ ಮಾಸ್ತಿಯವರು ತಮ್ಮ ಧೋರಣೆಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಲು ಆಯ್ದುಕೊಂಡ ಪ್ರಕಾರವೂ ಸಣ್ಣಕತೆಯೇ. ಆ ಕಾರಣಕ್ಕಾಗಿ ಹಾಗೂ ಪ್ರಬಂಧಕ್ಕೊಂದು ಚೌಕಟ್ಟನ್ನು ಕೊಡುವ ದೃಷ್ಟಿಯಿಂದ ಅವರ ಕಾದಂಬರಿಯನ್ನು ನಾಟಕ ಮೊದಲಾದ ಪ್ರಕಾರಗಳನ್ನು ಇಲ್ಲಿ ಗಮನಿಸಿಲ್ಲ. ಹಾಗೆ ಗಮನಿಸುವುದಾದರೆ ಅದು ಪ್ರತ್ಯೇಕ ಅಧ್ಯಯನ ವಿಷಯವೇ ಆಗಿದೆ. ಜೊತೆಗೆ ಮಾಸ್ತಿಯವರ ಅನನ್ಯತೆ ಕಂಡುಕೊಳ್ಳುವ ಸಲುವಾಗಿ ಸಮಕಾಲೀನರ ಕೆಲವು ಕೃತಿಗಳನ್ನು ಹಾಗೂ ಅಧ್ಯಯಗಳನ್ನು ಪ್ರಬಂಧದ ವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ - ೨

ಸ್ತ್ರೀ ಪ್ರತಿನಿಧೀಕರಣ: ಮಾಸ್ತಿಯವರ ನಂಬಿಕೆ ಮತ್ತು ನಿಲುವು

ವೈದಿಕ ಸಂಸ್ಕೃತಿಯ ಹಿನ್ನೆಲೆ

ಜನಪದ ಸಂಸ್ಕೃತಿಯ ಪ್ರೇರಣೆ

ಗಾಂಧೀಜಿ ವಿಚಾರಧಾರೆಯ ಒತ್ತಾಸೆ

ನವೋದಯ ಧೋರಣೆಗಳ ಸಹಯೋಗ

ಹೆಂಗರುಳಿನ ಸಂವೇದನೆ

ಹೆಂಗರುಳಿನ ಸಂವೇದನೆ

ಅಧ್ಯಾಯ - ೨

ಸ್ತ್ರೀ ಪ್ರತಿನಿಧೀಕರಣ: ಮಾಸ್ತಿಯವರ ನಂಬಿಕೆ ಮತ್ತು ನಿಲುವು

ಶ್ರೀನಿವಾಸ ಕಾವ್ಯನಾಮದ ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರು, ಕನ್ನಡ ಸಣ್ಣಕತೆ ಪ್ರಕಾರದಲ್ಲಿ ವಿಶೇಷ ಆಸ್ಥೆ ವಹಿಸಿದವರು. ಸಣ್ಣ ಕತೆಯ ಸ್ವರೂಪಕ್ಕೆ ಒಂದು ಆಯಾಮವನ್ನು ತೆರೆದುಕೊಟ್ಟ ಮಾಸ್ತಿ ಅದಕ್ಕೊಂದು ಭದ್ರ ನೆಲೆಗಟ್ಟನ್ನೂ ಹಾಕಿಕೊಟ್ಟರು. ಇತರರೂ ಅದನ್ನು ಅನುಸರಿಸುತ್ತ ಬಂದರು.

ಮಾಸ್ತಿಯವರು ಬರವಣಿಗೆಗೆ ತೊಡಗಿಕೊಂಡದ್ದು ೧೯೧೧ರಲ್ಲಿ. ಅಂದರೆ ಅವರ ೨೦ನೇ ವಯಸ್ಸಿನಲ್ಲಿ. ಕನ್ನಡಕ್ಕೆ ಆಗಷ್ಟೇ ಕಾಲಿರಿಸುತ್ತಿದ್ದ ಆಧುನಿಕ ಸಾಹಿತ್ಯ ಪ್ರಕಾರವಾದ ಸಣ್ಣಕತೆ ಪ್ರಕಾರ ಅವರನ್ನು ಬಹಳವಾಗಿ ತಟ್ಟಿತು. ಭಾವನೆಗಳನ್ನು, ವಿಚಾರಗಳನ್ನು ಸರಳವಾಗಿ

ಹಂಚಿಕೊಳ್ಳುವುದಕ್ಕೆ, ಸಂಸ್ಕೃತಿಯನ್ನು ಕಳೆದು ಹೋಗದಂತೆ ತಡೆಯುವುದಕ್ಕೆ ಈ ಪ್ರಕಾರವನ್ನು ಮಾಸ್ತಿಯವರು ಬಳಸಿಕೊಂಡರು.

ಸಂದರ್ಭ ಸನ್ನಿವೇಶ, ಪರಿಣಾಮಗಳನ್ನು ಅನುಭವವೇದ್ಯವಾಗುವಂತೆ ಹೇಳಲು ಬಳಕೆಯಾದ ಮಾರ್ಗ ಸಣ್ಣಕತೆ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಸಣ್ಣಕಥಾ ಪ್ರಕಾರ ಪ್ರಚಲಿತಕ್ಕೆ ಬಂದದ್ದನ್ನು ಗುರುತಿಸಲಾಗುತ್ತದೆ. ಸಣ್ಣಕತೆ ಪ್ರಕಾರ ಮರಾಠಿ ಹಾಗೂ ಬಂಗಾಲಿ ಸಾಹಿತ್ಯಕ್ಷೇತ್ರವನ್ನು ಮೊದಲು ಪ್ರವೇಶಿಸಿತು. ಬಳಿಕ ಕನ್ನಡದತ್ತ ಸರಿಯಿತು. ಪಂಜೆಯವರು ೧೯೦೦ರಿಂದಲೇ ನನ್ನ ಚಿಕ್ಕತಾಯಿ, ನನ್ನ ಚಿಕ್ಕತಂದೆ, ಉಯಿಲು ಮೊದಲಾದ ಸಣ್ಣಕತೆಗಳನ್ನು ಬರೆದು ಮೊದಲ ಸಣ್ಣಕಥಾ ರಚನೆಕಾರರಾಗಿ ಗಮನಾರ್ಹರಾಗಿದ್ದಾರೆ. ಈ ಮೂಲಕ ಪಂಜೆಯವರು ಕಥಾ ಸಾಹಿತ್ಯವನ್ನು ಬೆಳೆಯುವುದಕ್ಕೆ ಹಾದಿ ತೆರೆದಿಟ್ಟರು. ಮಾಸ್ತಿಯವರು ಬಳಿಕ ಕತೆ ರಚನ ವಿಧಾನದಲ್ಲಿ ಹಾಗೂ ವಸ್ತುಗಳ ಆಯ್ಕೆಯಲ್ಲಿ ಹೊಸ ಪ್ರಯೋಗವನ್ನೇ ಹುಟ್ಟು ಹಾಕಿ ಬೆಳೆಸುತ್ತ ಬಂದರು. ಸಣ್ಣ ಕತೆಯ ರಚನೆಗೆ ಇಂಗ್ಲಿಷ್ ಸಣ್ಣಕತೆಯ ವಿಧಾನವೇ ಪ್ರೇರಣೆಯಾಗಿದೆ.

ಮಾಸ್ತಿಯವರು ಬರೆಯತೊಡಗಿದ್ದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ. ಆ ಸಂದರ್ಭದಲ್ಲಿ ಭಾರತೀಯರ ಬದುಕಿನಲ್ಲಾದ ತಲ್ಲಣಗಳ ನಡುವೆ ಅವರು ಬರೆಯುತ್ತ ಬಂದರು. ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಭಾವದಿಂದಾಗಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ದೇಶದ ಒಟ್ಟೂ ಕ್ರಿಯಾತ್ಮಕ ಚಟುವಟಿಕೆಗಳ ಮೇಲೆ ಆದ ಬದಲಾವಣೆಗಳನ್ನು ಅವರು ಅರ್ಥ ಮಾಡಿಕೊಂಡಿದ್ದರು.

ಭಾರತೀಯ ಸಂಸ್ಕೃತಿಯನ್ನು ವೈಭವಿಸುವ ನಿಟ್ಟಿನಲ್ಲಿ ಮಾಸ್ತಿ ಆಸಕ್ತರಾಗಿದ್ದಾರೆ. ಅವರ ಮನಸ್ಸು ತುಡಿದದ್ದು ಭಾರತೀಯ ಸನಾತನ ಧರ್ಮದ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಡೆಗೇ. ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹಿಡಿದಿಡುವ ಪ್ರಯತ್ನವನ್ನು ಕತೆಗಳ ಮೂಲಕ ಅವರು ಸಾಧಿಸಿದ್ದಾರೆ. ದೇಶೀ ಸಂಸ್ಕೃತಿಯನ್ನು ಮೌಲ್ಯಯುತವಾದದ್ದಾಗಿ ಕಂಡು ಅದನ್ನು ಪಾಲಿಸುವಂತೆ ಪ್ರೇರಿಸಿದ್ದಾರೆ. ಆಯಾಯ ದೇಶಗಳ ಪುರಾತನ ಧರ್ಮಗಳ ತಳಹದಿಯ ನೆಲೆಯಲ್ಲಿ ಇಂದಿನ ಬದುಕು ಸಾಗಬೇಕಾದುದನ್ನು ಮಾಸ್ತಿ ಪ್ರತಿಪಾದಿಸುತ್ತಾರೆ.

ಸಂಪ್ರದಾಯ ಎನ್ನುವುದು ಎಲ್ಲ ಕಾಲದಲ್ಲಿಯೂ ಒಂದೇ ಆಗಿದ್ದಿರುವ ಶಾಸನಗಳ ಕಟ್ಟಲ್ಲ. ಕಾಲ ಹರಿದಂತೆ, ಸಂದರ್ಭ ಬೇರೆ ಆದಂತೆ, ಸಮಾಜದ ನಾಯಕರು ಹೊಸಬರು ಬಂದಂತೆ, ಸಂಪ್ರದಾಯವೂ ಕಾಲದಿಂದ ಕಾಲಕ್ಕೆ ಮಾರ್ಪಟ್ಟು ಬೇರೆಯಾಗಿ ಬೆಳೆದು ಬಂದಿದೆ, ಈಗ ಬೆಳೆಯುತ್ತಿದೆ, ಮುಂದಕ್ಕೆ ಬೆಳೆಯುತ್ತದೆ, ಉಪಸ್ಸಿನಂತೆ, ಸಾಹಿತ್ಯದಂತೆ, ಸಂಪ್ರದಾಯ ಪುನಃ ಪುನಃ ಜಾಯಾಮಾನಾ ಪುರಾಣೀ. ಆಯಾಯ ಕಾಲದಲ್ಲಿ ಹೊಸ ಸಂದರ್ಭಕ್ಕೆ ತಕ್ಕಂತೆ ಅದನ್ನು ಅವಶ್ಯಕವಾದಷ್ಟು ಮಾರ್ಪಡಿಸುವುದು ಜಾಣ ಜನರ ಕೆಲಸ. ತಕ್ಕಷ್ಟು ಶಕ್ತಿ ಉಳ್ಳ ಯಾರೂ ಸಾಹಿತ್ಯದಲ್ಲಿ ಇದನ್ನು ಮಾಡಬಹುದು. ಹೀಗೆ ಮಾಡಿದಾಗ ಅವರು ಸಂಪ್ರದಾಯವನ್ನು ಬಿಟ್ಟರು

ಎನ್ನುವುದಕ್ಕಿಂತ ಬೆಳೆಸಿದರು ಎನ್ನುವುದೇ ಸರಿಯಾದ ಮಾತು ಹಿಂದಿನಿಂದ ಬಂದ ಕಟ್ಟಳೆಗಳನ್ನು ಮುರಿಯುವುದು ದೊಡ್ಡ ಗುರಿಯಾಗಬಾರದು. ಹೇಳುವ ಸಂಗತಿ ಹಳೆಯ ರೀತಿಯಲ್ಲಿ ಆಗುತ್ತಿದ್ದದಕ್ಕಿಂತ ಹೊಸ ರೀತಿಯಲ್ಲಿ ಹೆಚ್ಚು ಪರಿಣಾಮಕಾರಿ ಆಗುತ್ತದೆ ಎನ್ನುವುದು ಕಾಣಬೇಕು ಎಂದು ಹೇಳಿರುವಲ್ಲಿಯೇ ಮಾಸ್ತಿಯವರ ನಿಲುವು ಧೋರಣೆಗಳು ಸ್ಪಷ್ಟವಾಗುತ್ತವೆ.[೧]

ಸನಾತನ ಧರ್ಮದಲ್ಲಿ ನಂಬಿಕೆ, ಶ್ರದ್ಧೆ ಇರಿಸಿದ್ದ ಮಾಸ್ತಿಗೆ ಅದು ಸಾರುವ ಧಾರ್ಮಿಕ ನಂಬಿಕೆಯ ಜತೆಗೆ ಬದುಕಿನ ವಿವಿಧ ಮಗ್ಗುಲುಗಳನ್ನು ಪರಿಚಯಿಸುವುದು ಮುಖ್ಯವಾಗಿ ಕಂಡಿದೆ. ಅಲ್ಲಿ ತಂದೆ, ತಾಯಿ, ಆಚಾರ್ಯರನ್ನು, ಅತಿಥಿಗಳನ್ನು ದೇವರಾಗಿ ಕಂಡು ಗೌರವಿಸುವ ಆಚಾರ ಬಹಳವಾಗಿ ಅವರನ್ನು ತಟ್ಟಿತು. ದಾನದ ಮಹತ್ವವನ್ನು ಸಾರುತ್ತ ಕನ್ಯಾದಾನವನ್ನು ಶ್ರೇಷ್ಠದಾನವನ್ನಾಗಿ ಅದು ಪ್ರತಿಪಾದಿಸುತ್ತದೆ. ಇದು ತಂದೆಯಾದವ ಸಮಾಜಕ್ಕೆ ಮಕ್ಕಳ ಸಂತಾನವನ್ನು ನೀಡಿದಂತಾಗುತ್ತದೆ ಎಂಬ ನಿಲುವು ತಳೆಯುವಂತೆ ಮಾಡಿದೆ. ಇಲ್ಲಿ ಮದುವೆ ಮತ್ತು ಮಕ್ಕಳನ್ನು ಪಡೆಯುವ ಪ್ರಕ್ರಿಯೆ ಪಿತೃ ಋಣವನ್ನು ತೀರಿಸುವುದಕ್ಕಾಗಿರುತ್ತದೆ. ಆದುದರಿಂದ ಋಣವನ್ನು ತೀರಿಸುವ ನೆಲೆಯಿಂದ ಹೆಣ್ಣು ಹೆರಲೇಬೇಕಾದ ಒತ್ತಡವನ್ನು ಹೇರಿದೆ. ಇಲ್ಲಿ ಪಿತೃವರ್ಗದ ಮೇಲ್ಮೆಯನ್ನು ಕಾಣಬಹುದಾಗಿದೆ. ತಾಯಿ ಇಲ್ಲಿ ಮರೆಯಾಗುತ್ತಾಳೆ. ಕನ್ಯಾದಾನ ಮಾಡುವ ತಂದೆ ಅಲ್ಲಿ ಮಗಳಿಂದ ಸಂತಾನ ಬಯಸುತ್ತಾನೆ. ಈ ಸಂದರ್ಭವೇ ಅವಳ ಪಾತಿವ್ರತ್ಯ ಮತ್ತು ಶೀಲದ ಪಾಲನೆಗೆ ಒತ್ತಾಯಿಸುತ್ತದೆ. ಇಲ್ಲಿ ಪಿತೃ ಪ್ರಧಾನವಾದ ಸಂಸ್ಕೃತಿಯನ್ನೇ ಮೆರೆಯುತ್ತ ಹೆಣ್ಣಿನ ಸಾಮರ್ಥ್ಯವನ್ನು ಹಿಂದಕ್ಕೆ ತಳ್ಳಿದ್ದು ಸ್ಪಷ್ಟವಾಗುತ್ತದೆ. ಶೀಲವನ್ನು ಕಾಯ್ದುಕೊಳ್ಳುವಂತೆ ಗಂಡು ಹೆಣ್ಣು ಇಬ್ಬರಿಗೂ ಹೇಳಲಾಗಿದ್ದರೂ ಹೆಚ್ಚು ಪ್ರಾಧಾನ್ಯ ಕೊಟ್ಟದ್ದು ಹೆಣ್ಣಿನ ಶೀಲ ರಕ್ಷಣೆಯ ಕುರಿತೇ.

ವಾಸ್ತವದಲ್ಲಿ ನಿಂತು ಬದುಕನ್ನು ಕಾಣ ಹೊರಟ ಮಾಸ್ತಿ ಸಮಸ್ಯೆಯನ್ನು ವಿಶ್ವದ ನೆಲೆಯಿಂದ ಶೋಧಿಸುತ್ತಾರೆ. ಧರ್ಮ ದೇವರ ಮೇಲೆ ಶ್ರದ್ಧೆ ಕಡಿಮೆ ಆಗುತ್ತಿರುವುದೇ ಅದಕ್ಕೆಲ್ಲ ಕಾರಣವಾಗಿದೆ ಎಂಬ ತೀರ್ಮಾನಕ್ಕೆ ಅವರು ಬರುತ್ತಾರೆ. ಸಮಾಜ ಸುಸ್ಥಿತಿಗೆ ಬರಬೇಕಾದರೆ ಸನಾತನ ಧರ್ಮವನ್ನು ಪರಿಶೀಲಿಸುವ ಕಡೆಗೆ ಮನಸ್ಸು ಮಾಡಬೇಕಾದ ಅನಿವಾರ್ಯತೆಯನ್ನು ಅವರು ಪ್ರತಿಪಾದಿಸುತ್ತಾರೆ. ಇದು ಸನಾತನ ಧರ್ಮವನ್ನು ಪುನರುತ್ಥಾನಗೊಳಿಸುವ ಉದ್ದೇಶವನ್ನೊಳಗೊಂಡಿದೆ. ಈ ಸಂದರ್ಭ ಸನಾತನ ಧರ್ಮದ ನವೀಕರಣ ಮಾಡುವ ಕುರಿತು ಯೋಚಿಸುವ ಮಾಸ್ತಿ ಜಾತೀಯತೆಯನ್ನು ದೂರಮಾಡುವ ಕಡೆಗೆ ಚಿಂತಿಸುತ್ತಾರೆ. ಹಿಂದುಗಳನ್ನೆಲ್ಲ ಒಂದುಗೂಡಿಸುವ ಕುರಿತು ಕೂಡ ಅವರು ಯೋಚಿಸುತ್ತಾರೆ. ಅದೂ ವೇದೋಕ್ತ ನೆಲೆಯಿಂದಲೇ. ಕಾಲದ ಸಂದರ್ಭಕ್ಕೆ

---

೧ ಪು.೬೬ ನಮ್ಮ ಹೊಸ ಸಾಹಿತ್ಯದ ಆರಂಭ, ಆರಂಭದ ಆಂಗ್ಲ ಸಾಹಿತ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ -೧೯೭೯

ಅನುಸಾರವಾಗಿ ಧರ್ಮವನ್ನು ಪರಿಶೀಲನೆಗೆ ಒಳಪಡಿಸಿ ಪರಿಷ್ಕಾರಕ್ಕೆ ಒಳಪಡಿಸಬಹುದೆನ್ನುವ ಮಾಸ್ತಿ ಎಲ್ಲ ಧರ್ಮಗಳ ಉದ್ದೇಶವನ್ನು ಒಂದೇ ಆಗಿ ಕಂಡಿದ್ದಾರೆ. ಅದು ಮನುಷ್ಯನನ್ನು ಮನುಷ್ಯನನ್ನಾಗಿ ರೂಪಿಸುವ ಧ್ಯೇಯವನ್ನು ಒಳಗೊಂಡಿದೆ ಎಂಬುದಾಗಿ ಗುರುತಿಸಿದ್ದಾರೆ. ಅಲ್ಲದೆ ಮನುಜ ಕುಲವೆಲ್ಲ ಒಂದೇ ಕುಟುಂಬ ಎಂಬ ಭಾವನೆ ತಳೆಯುವಂತೆ ಧರ್ಮವನ್ನು ಪರಿಷ್ಕರಿಸಬೇಕಾದ ಅನಿವಾರ್ಯತೆಯನ್ನು ಆಂತರ್ಯದಲ್ಲಿ ಅರ್ಥೈಸಿಕೊಂಡಿದ್ದಾರೆ.

ಮಾಸ್ತಿ ಮನುಷ್ಯ ಸಂಬಂಧಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಅದು ಗಟ್ಟಿಗೊಳ್ಳುವುದು ಕೂಡ ಒಂದು ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಎಂಬುದೇ ಅವರ ದೃಢವಾದ ನಂಬಿಕೆ. ಆ ಸಂಬಂಧವನ್ನು, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸ್ತ್ರೀಯ ಪಾತ್ರ ಬಹಳ ದೊಡ್ಡದು ಎಂದು ಮಾಸ್ತಿ ಪ್ರತಿಪಾದಿಸುತ್ತಾರೆ. ಆದರೆ ಪುರುಷ ಪ್ರಧಾನ ಆಲೋಚನೆಯ ಹಿನ್ನೆಲೆಯಿಂದ ರೂಪಿತವಾಗುವ ಸಂಸ್ಕೃತಿಗೆ ಅವಳು ಅಧೀನಳಾಗಿರುವಂತೆ ಮತ್ತು ಅದನ್ನು ಬಾಳಿಸುವುದಕ್ಕೆ ಅವಳು ಬದ್ಧಳಾಗಿರುವಂತೆ ಪ್ರೇರಿಸುತ್ತಾರೆ. ಅಂದರೆ ಸಂಸ್ಕೃತಿಯನ್ನು ಕಟ್ಟುವ ಕ್ರಿಯೆ ಹೆಣ್ಣಿನ ಜವಾಬ್ದಾರಿಯಾಗಿದೆ ಎಂದು ತೋರಿಸಿಕೊಡುತ್ತಾರೆ.

ಮಾಸ್ತಿಯವರ ಒಟ್ಟೂ ಬರವಣಿಗೆಯನ್ನು ನೋಡಬೇಕಾದದ್ದು ಅವರ ಕಾಲದ ಸಾಮಾಜಿಕ ವಾತಾವರಣ, ಸ್ಥಿತಿಗತಿಯ ಹಿನ್ನೆಲೆಯಲ್ಲಿ. ಕತೆಗಳಲ್ಲಿನ ಒಟ್ಟೂ ಸಂಬಂಧ ಹಾಗೂ ಘಟನೆಗಳಲ್ಲಿ ಮಾಸ್ತಿ ಹಾಗೂ ಅವರ ಸಮಕಾಲೀನ ಸಮಾಜದ ಅನ್ಯೋನ್ಯತೆಯ ಅರಿವಾಗುತ್ತದೆ. ಆದರೆ ಅದೇ ಅನ್ಯೋನ್ಯತೆ ಮಾತ್ರ ಮಾಸ್ತಿಗೆ ಮುಖ್ಯವಾಯಿತೇ? ಅದಕ್ಕಿಂತ ಆಚೆಗೆ ಬದುಕು ತೆರೆದುಕೊಳ್ಳುವುದಿಲ್ಲವೇ? ಅಂಥ ಸಾಧ್ಯತೆಗಳನ್ನು ಮಾಸ್ತಿ ಅವರು ಯಾಕೆ ಸೃಷ್ಟಿಸುವುದಿಲ್ಲ ಮತ್ತು ಒಪ್ಪಿಕೊಳ್ಳುವುದಿಲ್ಲ ಎಂಬ ಪ್ರಶ್ನೆಗಳು ಹುಟ್ಟುತ್ತವೆ.

ಮಾಸ್ತಿ ತಾವು ಬದುಕಿದ, ಉಸಿರಾಡಿದ, ಅನುಭವಿಸಿದ ಸಂಸ್ಕೃತಿಯೇ ಉದಾತ್ತ ಹಾಗೂ ಹಾಗೂ ಶ್ರೇಷ್ಠ ಎಂಬ ಹಿನ್ನೆಲೆಯಲ್ಲಿ ಕತೆಗಳನ್ನು ಸೃಜಿಸಿದ್ದಾರೆ. ಸನಾತನ ಸಂಸ್ಕೃತಿಯ ಮೂಲ ಧ್ಯೇಯದ ಪ್ರಕಾರವೇ ಹೆಣ್ಣು- ಗಂಡು ಬಾಳಬೇಕಾದದ್ದರ ಕಡೆಗೆ ಮಾಸ್ತಿ ಒತ್ತು ಕೊಡುತ್ತಾರೆ. ಹೆಣ್ಣನ್ನು ಪೂಜ್ಯಳಾಗಿಯೇ ಕಾಣುವ ಮನೋಭಾವವನ್ನು ಒಪ್ಪಿಕೊಂಡು ಅಂತೆಯೇ ಬಾಳಬೇಕಾದ ತತ್ವವನ್ನು ಮುಂದಿಡುತ್ತಾರೆ. ಬದಲಾಗಿ ಆಧುನಿಕತೆಯ ಸೋಗಿಗೆ ಮರುಳಾಗಿ ಅದನ್ನು ಸ್ವೀಕರಿಸಿದರೆ ಅವರ ಬಾಳು ಹದಗೆಡುತ್ತದೆ. ಆದುದರಿಂದ ಮರಳಿ ಮೂಲ ಸಂಸ್ಕೃತಿಗೇ ಬದ್ಧಳಾಗಬೇಕು ಎಂದು ಬುದ್ಧಿ ಹೇಳುವ ಕೆಲಸವನ್ನೂ ಮಾಸ್ತಿ ನಿರ್ವಹಿಸುತ್ತಾರೆ.

ಯಾವುದೇ ಮೌಲ್ಯವನ್ನು ಮುಂದಿಡುವಲ್ಲಿ ಮಾಸ್ತಿ ಅವರು ಅಬ್ಬರಿಸುವುದಿಲ್ಲ. ಸಿಟ್ಟು, ಅಸಹನೆ, ದ್ವೇಷ ತೋರ್ಪಡಿಸಿಕೊಳ್ಳುವುದಿಲ್ಲ. ಯಾರು ಎಷ್ಟೇ ತಪ್ಪಿನಡೆದರೂ ಅವರನ್ನು ಪ್ರೀತಿಯಿಂದ ಕಾಣುವ, ಉಪಚರಿಸುವ ಮನಸ್ಸು ಅವರದು. ಆದ್ದರಿಂದಲೇ ಅವರ ಕತೆಗಳಲ್ಲಿ ಕ್ಷಮೆ ಧಾರಾಳವಾಗಿ

ಹರಿಯುತ್ತಿರುತ್ತದೆ. ಈ ಕ್ಷಮೆಯ ಹಿಂದಿರುವ ಉದಾರ ಮನಸ್ಸು ಎಲ್ಲ ಅಹಿತಕರ ಘಟನೆಗಳನ್ನು ತಡೆಯುತ್ತದೆ. ಆದ್ದರಿಂದಲೇ ಅವರ ಕತೆಗಳಲ್ಲಿ ಎಲ್ಲೂ ತಿಕ್ಕಾಟಗಳು, ಅನಾರೋಗ್ಯಕರ ಜಗಳ ಎಡೆಪಡೆಯುವುದಿಲ್ಲ. ಎದ್ದಿರುವ ವಿವಾದಗಳು, ಅಸಮಾಧಾನದ ಎಳೆಗಳು ಉದಾರವಾದೀ ಧೋರಣೆಯಿಂದ ಅಲ್ಲಿಗೇ ತಟಸ್ಥಗೊಳ್ಳುವಂತೆ ಮಾಸ್ತಿ ಕಾಳಜಿ ವಹಿಸುತ್ತಾರೆ. ಅದು ತಾಯ್ತನದ ಗುಣವಾಗಿ ಇಲ್ಲಿ ಮೆರೆಯುತ್ತದೆ. ಧರ್ಮದ ಹಿನ್ನೆಲೆಯ ಒಂದು ಮೌಲ್ಯದ ಸ್ಥಾಪನೆಗೆ ತನ್ನತನವನ್ನು ಕಳೆದುಕೊಳ್ಳುವುದರ ಕಡೆಗೂ ಯೋಚಿಸುವುದಿಲ್ಲ.

ಮಾಸ್ತಿ ಅವರಿಗೆ ಬದುಕನ್ನು ಸನಾತನ ವೈದಿಕ ಧರ್ಮ ಬೋಧಿಸಿದ ರೀತಿಯಲ್ಲೇ ಸಾಗಿಸಬೇಕಾದ ಹಂಬಲವಿದೆ. ಅಲ್ಲಿಯೇ ಶಾಂತಿ, ನೆಮ್ಮದಿಗಳನ್ನು ಸ್ಥಾಪಿಸುವುದು ಮಾಸ್ತಿಯವರ ಸಹನೆಯ ಹಿಂದಿನ ಉದ್ದೇಶವಾಗಿದೆ. ಸಮಾಜದ ಹಿತ ಬಯಸುವ ಈ ದೃಷ್ಟಿಕೋನ ಸಮಾಜದ ಒಂದು ಮಗ್ಗುಲನ್ನು ಕಂಡದ್ದು ಸ್ಪಷ್ಟವಾಗುತ್ತದೆ. ಸಾಂಸ್ಕೃತಿಕ ಮೌಲ್ಯದ ಶ್ರೀಮಂತಿಕೆಯನ್ನು ಬಾಳಿಸುವ ಮನೋಧರ್ಮ ಅವರದಾಗಿದೆ. ಅದರ ಉಳಿವಿಗೆ ಅದನ್ನು ಪ್ರಶ್ನೆ ಮಾಡುವುದಾಗಲೀ, ಮೀರುವುದಾಗಲೀ ಸಲ್ಲದು ಎಂಬುದು ಅವರ ನಿಲುವಾಗಿದೆ. ಇಲ್ಲಿ ಹಿಂಸೆ ಸಹಿಸುವ ಹೆಣ್ಣಿನ ಗುಣ, ಹೆಣ್ಣಿನ ತಪ್ಪನ್ನು ಕ್ಷಮಿಸುವ ಗಂಡಿನ ಉದಾರಗುಣ ಸ್ವಭಾವವನ್ನು ಹೇಳುವ ಮೂಲಕ ಮಾಸ್ತಿ ಹೆಣ್ಣಾದವಳು ಸಂಪ್ರದಾಯವನ್ನು ಮೀರಬಾರದ್ದನ್ನು ಪ್ರತೀ ಹಂತದಲ್ಲಿ ಬೋಧಿಸುತ್ತ ಬರುತ್ತಾರೆ.

ಮಾಸ್ತಿ ತೆರೆದಿಡುವ ಸ್ತ್ರೀಲೋಕದೊಳಗೆ ತಾಯಿ, ಹೆಂಡತಿ, ಅತ್ತೆ , ಸೊಸೆ, ಚಿಕ್ಕಮ್ಮ, ಮಗಳು ಬರುತ್ತಾರೆ. ಅವರೆಲ್ಲರೂ ಸ್ತ್ರೀಯ ಮಹತ್ವವನ್ನು ತಮ್ಮ ತಮ್ಮ ಬದುಕಿನ ಮೂಲಕವೇ ತೋರಿಸಿಕೊಡುವವರಾಗಿ ಕಾಣಿಸಿಕೊಳ್ಳುತ್ತಾರೆ. ಮಾಸ್ತಿ ಪ್ರಕಾರ ಪತ್ನಿಯೊಬ್ಬಳು ದೇವಿ ಹಾಗೂ ಲೋಕಮಾತೆಯಾಗುತ್ತಾಳೆ. ಗಂಡನನ್ನು ದೇವರೆಂದೇ ಗೌರವಿಸುವ ಪತಿವ್ರತೆಯರು ಮಾಸ್ತಿಯವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ವೈವಾಹಿಕ ಬದುಕಿನೊಳಗೆ ಅನಿವಾರ್ಯವಾಗಿ ಹೆಣ್ಣು ತನ್ನನ್ನು ತೊಡಗಿಸಿಕೊಳ್ಳಬೇಕಾದ ತತ್ತ್ವವನ್ನು ಮಾಸ್ತಿ ಪ್ರತಿಪಾದಿಸುತ್ತಾರೆ. ಸಾಂಸಾರಿಕ ಸುಖಕ್ಕೆ ಹೆಣ್ಣು ರೂಢಿಸಿಕೊಳ್ಳಬೇಕಾದ ಹೊಂದಾಣಿಕೆಯ ಸ್ವಭಾವವನ್ನು ಹೇರುವ ಮಾಸ್ತಿ ಬೇಜವಾಬ್ದಾರಿಯುತ ಗಂಡಂದಿರ ನಡುವೆಯೂ ಸಂಸಾರದ ನೊಗ ಹೊತ್ತು ಜೀವನ ಸಾಗಿಸುವ ಸ್ತ್ರೀಯರನ್ನು ಪರಿಚಯಿಸುವಲ್ಲಿ ಅವರಲ್ಲಿನ ತಾಯ್ತನಕ್ಕೆ ಪ್ರಾಧಾನ್ಯ ನೀಡುತ್ತಾರೆ. ಅಂದರೆ ಸಹನೆ-ಹೊಂದಾಣಿಕೆಯನ್ನು ಹೆಣ್ಣಿಗೆ ಬದಗೊಳಿಸುವ ಮನಸ್ಸನ್ನು ಮಾಸ್ತಿಯವರಲ್ಲಿ ಕಾಣಬಹುದಾಗಿದೆ.

ಮಾಸ್ತಿ ಅವರು ಸಂಸ್ಕೃತಿಯ ಉನ್ನತೀಕರಣಕ್ಕೆ ಹೆಣ್ಣನ್ನೇ ಪ್ರಧಾನವಾಗಿ ಬಳಸಿಕೊಳ್ಳುತ್ತಾರೆ. ಪುರುಷ ಪ್ರಧಾನ ಸಂಸ್ಕೃತಿಯನ್ನು ಮಹಿಳೆಯರ ಮೂಲಕವೇ ಪ್ರತಿಪಾದಿಸುತ್ತಾರೆ. ಲಿಂಗ

ತಾರತಮ್ಯವನ್ನು ಕಾಯ್ದುಕೊಳ್ಳುವ ಕಡೆಗೇ ಮಾಸ್ತಿ ಹೆಚ್ಚು ಜಾಗೃತರಾಗಿರುತ್ತಾರೆ. ಹೆಣ್ಣೊಬ್ಬಳು ಗಂಡನ್ನು ತೃಪ್ತಿಗೊಳಿಸುವುದರ ಕಡೆಗೇ ಯೋಚಿಸುತ್ತಿರಬೇಕು. ಅವನ ಉಪಚಾರದಲ್ಲಿ ಕಿಂಚಿತ್ತೂ ಲೋಪ ಉಂಟಾಗದಂತೆ ಎಚ್ಚರ ವಹಿಸಬೇಕು. ಗಂಡನ ಹೊರತಾಗಿ ಅನ್ಯಗಂಡಿನೊಂದಿಗೆ ಸಲುಗೆ ಬೆಳೆಸುವಂತೆಯೇ ಇಲ್ಲ. ಆಧುನಿಕತೆಯ ಶೋಕಿಗೆ ಮರುಳಾಗಬಾರದು. ಅದನ್ನು ಮೀರಿದರೆ ಆಕೆಯ ಬದುಕಿಗೇ ತೊಂದರೆಯಾಗುತ್ತದೆ. ಅದಕ್ಕಾಗಿ ಅವಳು ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ನಂಬಿಸಿ ಹಾಗೆ ಹೋಗದಂತೆ ಎಚ್ಚರಿಕೆ ಕೊಡುತ್ತಾರೆ. ಹೆಣ್ಣಿಗೆ ಒದಗುವ ಸೋಲಿನಿಂದಾಗಿ ಹೆಣ್ತನದ ಚೌಕಟ್ಟನ್ನು ಮೀರಬಾರದೆಂಬುದನ್ನೇ ಹೇಳುತ್ತಾರೆ. ಇಲ್ಲಿ ಮಾಸ್ತಿಯವರ ಸೀಮಿತ ನಿಲುವು ಪ್ರತಿಬಿಂಬಿತವಾಗುತ್ತದೆ.

ಸನಾತನ ಸಂಸ್ಕೃತಿಯನ್ನು ಉಳಿಸಿ ಬಾಳಿಸುವ ನೆಪದಿಂದ ಹೆಣ್ಣು ಎಷ್ಟು ಕಾಲ ತನ್ನ ಆಲೋಚನ ಶಕ್ತಿಯನ್ನು ಮೈಗೂಡಿಸಿಕೊಳ್ಳದೇ, ತನ್ನತನ ಬೆಳೆಸಿಕೊಳ್ಳದೇ ಬಾಳಬೇಕು ಎಂಬುದು ಇಂದಿಗೂ ಬಗೆಹರಿಯದ ಪ್ರಶ್ನೆಯಾಗಿಯೇ ಉಳಿದುಕೊಳ್ಳುತ್ತದೆ. ಆದರೆ ಮಾಸ್ತಿಯವರಿಗೆ ಸ್ತ್ರೀ ಪ್ರತಿಪಾದಿಸುವ ಮೌಲ್ಯಗಳು ಬದುಕನ್ನು ಸಿದ್ಧಗೊಳಿಸುವ, ರೂಪಿಸುವ ನಿಟ್ಟಿನಿಂದ ಬಹುಮುಖ್ಯ ಎಂಬ ನಂಬಿಕೆ ಇದೆ.

ಹೀಗೆ ಸನಾತನ ಧರ್ಮದ ತಳಹದಿಯಲ್ಲಿಯೇ ಸ್ತ್ರೀ ಬದುಕಬೇಕೆಂಬುದನ್ನು ಪ್ರತಿಪಾದಿಸುವ ಮಾಸ್ತಿಯವರಿಗೆ ಜಾಗತಿಕ, ದೇಶ, ಹಾಗೂ ಕನ್ನಡದ ನೆಲೆಯಲ್ಲಿ ಮಹಿಳಾ ಚಳವಳಿಗಳು, ಕ್ರಾಂತಿಗಳು ಹೋರಾಟಗಳು ನಡೆದದ್ದನ್ನು, ಸಂಘಟನೆಗಳು ತಲೆ ಎತ್ತಿದ್ದನ್ನು ಕಂಡ ಮಾಸ್ತಿಯವರಿಗೆ ಆತಂಕ ಕಾಡಿರಬಹುದು. ಇದೇ

ಸ್ತ್ರೀಪರ ಕಾಳಜಿಯಿಂದಲೇ ಪ್ರಕಟವಾಗುತ್ತಿದ್ದ ಕಾದಂಬರಿಗಳೂ ಮಾಸ್ತಿಯವರನ್ನು ವಿಚಲಿತರನ್ನಾಗಿಸಿರಬೇಕು. ಕನ್ನಡದ ಮೇಲೆ ಬಹಳ ಪ್ರಭಾವ ಬೀರಿದ ಬಂಗಾಳಿ, ಮರಾಠಿ, ತೆಲುಗು ಹಾಗೂ ಕನ್ನಡದಲ್ಲಿ ಕಾದಂಬರಿಗಳ ಸ್ತ್ರೀ ಸುಧಾರಣೆ ಅನ್ನುವುದು ಹೆಣ್ಣಿನ ಬದುಕಿನ ಗತಿಯನ್ನು ತಿರುಗಿಸುತ್ತದೆ. ಪರಿಣಾಮವಾಗಿ ಹೆಣ್ಣು ಹೆಣ್ತನವನ್ನು ಕಳೆದುಕೊಳ್ಳುತ್ತಾಳೆ, ಕುಟುಂಬದಿಂದ ದೂರ ಹೋಗುತ್ತಾಳೆ ಅನ್ನುವ ಆತಂಕ ಬಹಳವಾಗಿಯೇ ಮಾಸ್ತಿಯವರನ್ನು ಕಾಡಿದೆ. ಆ ಸುಧಾರಣೆಯ ಕಡೆಗೆ ಮನಸ್ಸು ವಾಲಿಸದೆ ಹೆಣ್ಣು ಸನಾತನ ಧರ್ಮದ ತತ್ವಕ್ಕೆ ತನ್ನ ಇರವನ್ನು ಸೀಮಿತಗೊಳಿಸಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತ ಹೋಗುತ್ತಾರೆ. ಈ ಪ್ರತಿಪಾದನೆಯನ್ನು ಪ್ರಮುಖ ಅನುವಾದಿತ ಕಾದಂಬರಿಗಳ ಮೂಲ ಆಶಯವನ್ನು ದಾಖಲಿಸಿ ಅರ್ಥೈಸಿಕೊಳ್ಳಬಹುದಾಗಿದೆ. ಅಲ್ಲಿಯೂ ಸುಧಾರಣೆಯ ಪರ ಹಾಗೂ ವಿರೋಧ ಅಭಿಪ್ರಾಯಗಳು ಎಡೆಪಡೆದಿವೆ.

ಬಂಗಾಳ ಸಾಹಿತ್ಯ ಸಮಾಜ ಸುಧಾರಣೆಗೆ, ಮಹಿಳಾ ಪ್ರಗತಿಗೆ ವಿಶೇಷ ಪ್ರೇರಣೆ ನೀಡಿತ್ತು. ಕಾದಂಬರಿ ಹುಟ್ಟಿಕೊಂಡದ್ದೂ ಬಂಗಾಳಿ ಭಾಷೆಯಲ್ಲಿ. ಆದುದರಿಂದ ಅಂಶಗಳು ಸಹಜವಾಗಿಯೇ

ಕಾದಂಬರಿಗಳಲ್ಲಿ ಎಡೆಪಡೆದಿವೆ. ಸ್ತ್ರೀ ಪ್ರಧಾನವಾದ ಬಂಗಾಳಿ ಕಾದಂಬರಿಗಳಲ್ಲಿ ದುರ್ಗೇಶನಂದಿನಿ, ರಜನಿ, ಇಂದಿರಾ, ದೇವಿ ಚೌಧುರಾಣಿಯನ್ನು ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಮೂಲಕವೇ ಸ್ತ್ರೀ ಸುಧಾರಣಾ ಪರ ಹಾಗೂ ವಿರೋಧದ ಆಶಯಗಳು ಬಿತ್ತರಗೊಂಡ ಬಗೆಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಬಂಕಿಮಚಂದ್ರರು ರಚಿಸಿದ 'ವಿಷವೃಕ್ಷ' ಕಾದಂಬರಿ ವೆಂಕಟಾಚಾರ್ಯರಿಂದ ಅನುವಾದಗೊಂಡು ೧೯೨೧ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಕಾದಂಬರಿ ಸನಾತನ ಧರ್ಮದ ಮೌಲ್ಯಗಳನ್ನೇ ಪ್ರತಿಪಾದಿಸುತ್ತದೆ. ವಿಧವೆ ಕುಮುದನಂದಿನಿಯ ಮರುವಿವಾಹ ಸೋಲು ಕಾಣುವಂತೆ ಚಿತ್ರಿಸಿರುವಲ್ಲಿ ವಿಧವಾ ವಿವಾಹವನ್ನು ತಡೆಯುವ ಕುರಿತು ಸಮರ್ಥನೆ ಇದೆ. ಸೂರ್ಯಮುಖಿ ಅತಿಯಾದ ಪಾತಿವ್ರತ್ಯ ಪಾಲಿಸುವುದನ್ನು ತೋರಿಸುವಲ್ಲಿ ಆ ಕುರಿತ ಪ್ರತಿಪಾದನೆ ಇದೆ. ಆದುದರಿಂದಲೇ ಅವರು ಸುಧಾರಣೆಯ ಪ್ರತಿಪಾದಕತೆಯನ್ನು ಆಂತರಿಕವಾಗಿ ಒಪ್ಪುವುದಿಲ್ಲ. ಸನಾತನ ಧರ್ಮದ ನಡವಳಿಕೆಗಳೇ ಹೆಣ್ಣಿಗೆ ಭೂಷಣ, ಅದನ್ನು ಅನುಸರಿಸುವುದೇ ಅವಳ ಬಾಳಿನ ಧರ್ಮ ಎನ್ನುವುದು ಅವರ ದೃಢ ನಂಬಿಕೆಯಾಗಿದೆ. ಈ ದೃಷ್ಟಿಕೋನವೇ ಕೆಲವು ಕಾದಂಬರಿಕಾರರಿಗೂ ಪ್ರೇರಣೆ ನೀಡಿದೆ. ಅಂತೆಯೇ ಮಾಸ್ತಿಯವರ ನಿಲುವಿಗೂ ಒತ್ತಾಸೆ ನೀಡಿದೆ ಎನ್ನಬಹುದು. ಬಂಗಾಳಿ ಲೇಖಕರಾದ ಯೋಗೀಂದ್ರನಾಥ ಚಟ್ಟೋಪಾಧ್ಯಾಯ ಅವರು ಬರೆದ 'ವಿಯೋಗಿನಿ'ಯನ್ನು ವಿದ್ವಾನ್ ಬಾಲಸರಸ್ವತಿ ೧೯೪೯ರಲ್ಲಿ ಅನುವಾದಿಸಿದ್ದಾರೆ. ಪ್ರಭಾತ, 'ಭಾರತಾಂಗನೆಯರಲ್ಲಿ ಲಜ್ಜೆಯೇ ಮುಖ್ಯ ಭೂಷಣವಾಗಿ ಕಂಗೊಳಿಸುವುದು. ಲಜ್ಜೆಯೇ ಸಂಪತ್ತು. ಲಜ್ಜೆಯೇ ಪತಿಭಕ್ತಿ' [೨] ಎನ್ನುವಲ್ಲಿ, ವಿಯೋಗಿನಿ, ನಾನು ಆ ಸನ್ಯಾಸಿಗೆ ಸಹಧರ್ಮಿಣಿ. ಹಾಗೆ ಸನ್ಯಾಸಿಯಾಗದಿದ್ದರೆ ಪಾತಿವ್ರತ್ಯಕ್ಕೆ ಕುಂದು.[೩], ಕಿಶೋರನಿಂದ ಶಿಷ್ಯೆಯಾಗಿ ಸ್ವೀಕರಿಸಿಕೊಳ್ಳದೇ ಆತ್ಮಾಹುತಿ ಮಾಡಿಕೊಳ್ಳುವುದು ಪುರುಷಪ್ರಭುತ್ವ ವ್ಯವಸ್ಥೆ ಹೆಣ್ಣನ್ನು ಲಜ್ಜೆ, ಪಾತಿವ್ರತ್ಯದ ನೆಪದಲ್ಲಿ ಬಂಧಿಸುವುದನ್ನು ಒಪ್ಪಿತಗೊಳಿಸುವುದೇ ಕಾದಂಬರಿಯ ಹಾಗೂ ಲೇಖಕರ ಉದ್ದೇಶವಾಗಿದೆ.

ಬಂಗಾಳಿ ಭಾಷೆಯ ಬಳಿಕ ಮರಾಠಿ ಮೂಲದ ಕಾದಂಬರಿಗಳು ಅನುವಾದಿತಗೊಂಡವು. ಮರಾಠಿ ಕಾದಂಬರಿಗಳನ್ನು ಅನುವಾದಿಸುವಲ್ಲಿ ಪ್ರಮುಖವಾಗಿ ತೊಡಗಿಕೊಂಡವರು ಗಳಗನಾಥರು. ಸ್ತ್ರೀಯ ನಡತೆ, ಗುಣ ಸ್ವಭಾವಗಳನ್ನು ನಿರ್ದೇಶಿಸುವ ಅವರು ಸ್ತ್ರೀ ಶಿಕ್ಷಣದ ಕುರಿತು ಅವಳ ಸ್ವಾತಂತ್ರ್ಯದ ಬಗೆಗೂ ಬಹಳವಾಗಿ ಚರ್ಚಿಸಿದ್ದಾರೆ. ಸ್ತ್ರೀ ಧರ್ಮವನ್ನು ಎತ್ತಿಹಿಡಿಯುವ ದೃಷ್ಟಿಯುಳ್ಳ ಗಳಗನಾಥರು ಅಂಥ ಸಂದೇಶ ನೀಡುವ ಮರಾಠಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

---

೨ ಪು.೧೭ ವಿಯೋಗಿನಿ ಅನು: ವಿದ್ವಾನ್ ಬಾಲಸರಸ್ವತಿ ೧೯೪೯

೩ ಪು.೩೧ ಅದೇ

ವೀರ ಮಹಿಳೆಯರನ್ನು ಅವರು ಪರಿಚಯಿಸಿದರೂ ಕೂಡ ಪಾತಿವ್ರತ್ಯವನ್ನು ಪಾಲಿಸುವ ಸ್ತ್ರೀಯರನ್ನೇ ಗೌರವದಿಂದ ಕಾಣುತ್ತಾರೆ. ಅಂದರೆ ಗಳಗನಾಥರ ಚಿಂತನೆ ಸುಧಾರಣೆಯನ್ನು ಅಷ್ಟಾಗಿ ಒಪ್ಪಿಕೊಳ್ಳುವುದಿಲ್ಲ. ಅದು ಕಮಲಕುಮಾರಿ ಕಾದಂಬರಿಯಲ್ಲಿ 'ಕಮಲ ಕುಮಾರಿಯು ಹೆಂಗಸಾದರೂ ಧರ್ಮ ಶ್ರದ್ಧೆಯ ಮೂಲಕ ಆಕೆಯು ವಿಷಯ ಸುಖಗಳನ್ನೆಲ್ಲ ತಿರಸ್ಕರಿಸಿ, ಮನಸ್ಸಿನ ಚಾಂಚಲ್ಯಕ್ಕೆ ಒಳಗಾಗದೆ. ಭಕ್ತಿಯಿಂದ ಸಹಗಮನ ಮಾಡಿದ್ದನ್ನು ನೋಡಿದರೆ ನಿಜವಾದ ಧರ್ಮ ಶ್ರದ್ಧೆಯಿಂದಲೇ ಮನುಷ್ಯನು ಸಂಕಟವನ್ನು ತಾಳಿಕೊಳ್ಳುವುದು, ಸಹನ ಶೀಲನೂ ಆಗುವನೆಂಬುದು ಗೊತ್ತಾಗುತ್ತದೆ' ಎಂದಿರುವಲ್ಲಿ ಸ್ಪಷ್ಟವಾಗುತ್ತದೆ. [೪] 'ಕಮಲ ಕುಮಾರಿ' ಕಾದಂಬರಿಯನ್ನು ಅನುವಾದಿಸಿರುವುದರ ಉದ್ದೇಶವೇ ನಾರೀ ಧರ್ಮವನ್ನು ಪ್ರಸ್ತುತ ಪಡಿಸುವುದಾಗಿದೆ. ಅಂದರೆ ಸ್ತ್ರೀ ಸುಧಾರಣೆಯನ್ನು ಒಪ್ಪದಿರುವ ಅವರ ಮನಸ್ಥಿತಿ ಇಲ್ಲಿ ಸುಸ್ಪಷ್ಟವಾಗುತ್ತದೆ.

ಸ್ತ್ರೀ ಪರ ಚಿಂತನೆಯ ಕುರಿತ ಪರ ಹಾಗೂ ವಿರೋಧ ವಿಚಾರಗಳನ್ನು ಸಾದರ ಪಡಿಸುವ ಮರಾಠಿ ಕಾದಂಬರಿ ವಾಮನ ರಾಯರ 'ರಾಗಿಣಿ'ಯನ್ನು ೧೯೩೩ರಲ್ಲಿ ನಾರಾಯಣ ಶರ್ಮ ಕನ್ನಡದ ಸಂದರ್ಭದ ಸ್ತ್ರೀ ಸುಧಾರಣೆ ಕುರಿತು ನಡೆಯುತ್ತಿದ್ದ ಚಳವಳಿಗಳ ಆಧಾರದಲ್ಲಿ ಭಾವಾನುವಾದಗೊಳಿಸಿದ್ದಾರೆ.

ಸ್ತ್ರೀ ಸುಧಾರಣೆಯ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡ ಕಾದಂಬರಿಗಳೆಂದರೆ ತೆಲುಗು ಮೂಲದವೇ. ವಿಧವಾ ವಿವಾಹವನ್ನು ಸ್ವತಃ ನಡೆಸಿಕೊಟ್ಟ ಈಶ್ವರಚಂದ್ರ ವಿದ್ಯಾಸಾಗರರು ವೀರೇಶಲಿಂಗಂ ಪಂತುಲು ಹೆಸರಿನ ತೆಲುಗಿನ ಪ್ರಮುಖ ಬರಹಗಾರರು. ನೂರಕ್ಕಿಂತ ಹೆಚ್ಚು ಕೃತಿಗಳನ್ನು ಬರೆದಿರುವ ಪಂತುಲು ಸ್ತ್ರೀ ಪರ ಕಾಳಜಿಯನ್ನು ಹೊಂದಿದವರು. ಅವರ ತುಡಿತವಿದ್ದುದೇ ಸ್ತ್ರೀ ಶಿಕ್ಷಣ ಮತ್ತು ಅವರ ಪ್ರಗತಿಯ ಅನಿವಾರ್ಯತೆಯನ್ನು ತಿಳಿಸುವಲ್ಲಿ. ಆ ನಿಟ್ಟಿನಲ್ಲಿ ಸ್ವತಃ ಕೆಲಸ ಕಾರ್ಯಗಳನ್ನು ಮಾಡಿರುವ ಅವರು ಕೃತಿಗಳಲ್ಲಿ ಅದೇ ಆಶಯವನ್ನು ಪ್ರತಿಫಲಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಮುಖವಾದ ಕೃತಿಯೆಂದರೆ ನ. ಶ್ರೀ ಕಂಠ ಶಾಸ್ತ್ರೀ ಅವರು ೧೯೧೦ರಲ್ಲಿ ಅನುವಾದಿಸಿದ ಸ್ತ್ರೀ ಶಿಕ್ಷಣವನ್ನು ಪ್ರತಿಪಾದಿಸುವ 'ಚಂಬ್ರಮತಿ' ಕಾದಂಬರಿ. ಬಾಲ್ಯ ವಿವಾಹವನ್ನು ಛೇಡಿಸುವ, ಸ್ತ್ರೀ ಶಿಕ್ಷಣಕ್ಕೆ ವಿರೋಧವಿದ್ದರೂ ಗುಟ್ಟಾಗಿ ಕಥಾನಾಯಕಿ ಸತ್ಯವತಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಕೊಡಿಸುವ, ಸಹಗಮನವನ್ನು ಅತ್ಯಂತ ಹೇಯಕರ ಪದ್ಧತಿ ಎಂಬುದನ್ನು ಚಿತ್ರಿಸುವ ನಿಟ್ಟಿನಲ್ಲಿ 'ಸತ್ಯವತಿ ಚರಿತ್ರೆ' [೫] ಪ್ರಮುಖ ಕಾದಂಬರಿಯಾಗಿದೆ.

---

೪ ಪ್ರಸ್ತಾವನೆ, 'ಕಮಲ ಕುಮಾರಿ' ಹರಿನಾರಾಯಣ ಆಪ್ಟೆ, ಅನು: ಗಳಗನಾಥರು ೧೯೧೦

೫ 'ಸತ್ಯವತಿ ಚರಿತ್ರೆ, ಅನು: ಅನಂತ ನಾರಾಯಣ ೧೮೯೭

ಪಂತುಲು ಅವರ ಸ್ತ್ರೀ ಪರ ಕಾಳಜಿ, ವೈಚಾರಿಕತೆ ಕನ್ನಡ ಕಾದಂಬರಿ ಹುಟ್ಟಿಗೂ ಪ್ರೇರಣೆ ನೀಡಿವೆ. ಪರಿಣಾಮವಾಗಿಯೇ ಗುಲ್ವಾಡಿ ವೆಂಕಟರಾವ್‌ರಂಥ ಕಾದಂಬರಿಕಾರರು, ಇಂದಿರಾಬಾಯಿಯಂಥ ಸ್ತ್ರೀ ಪ್ರಧಾನವಾದ ಕಾದಂಬರಿಗಳು ಜನ್ಮಿಸಿವೆ. ಇಂದಿರೆಯ ಚರಿತ್ರೆಯನ್ನು ಹೇಳುವ ಪ್ರಸ್ತುತ ಕಾದಂಬರಿ ಇಂದಿರೆಯನ್ನು ಸುಶಿಕ್ಷಿತೆಯಾಗುವಂತೆ ಮಾಡುವಲ್ಲಿ ಸ್ತ್ರೀ ಪರ ಕಾಳಜಿ ಬಿಂಬಿಸುತ್ತವೆ. ಆದರೆ ಕೊನೆಗೂ ಅಲ್ಲಿ ಇಂದಿರೆ ಶಿಕ್ಷಣ ಪಡೆಯುವ ಗೃಹಿಣಿಯಾಗಿ ಮಾತ್ರ ಉಳಿಯುವಲ್ಲಿಗೆ ಆದರ್ಶಳಾಗುತ್ತಾಳೆ. ವರದಕ್ಷಿಣೆಯ ಸಮಸ್ಯೆಯ ಕುರಿತು ಅತ್ಯಂತ ಕಾಳಜಿಯಿಂದ ಚಿತ್ರಿಸುವ ಕಾದಂಬರಿ ಹಣಮಂತ ವೆಂಕಟೇಶ ಸವಣೂರ ೧೯೧೯ರಲ್ಲಿ ಬರೆದ 'ಭೀಷಣ ಚಿತ್ರ' ಪ್ರಮುಖವಾದದ್ದಾಗಿದೆ.

ತಿರುಮಲಾಂಬ ೧೨ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಸನಾತನ ನಾರಿಯನ್ನು ಪರಿಚಯಿಸುವುದು ಅಂತೆಯೇ ಬಾಳಬೇಕಾದುದನ್ನು ಸಮರ್ಥಿಸುವ ಕೆಲಸವನ್ನು ತಿರುಮಲಾಂಬ ಕಾದಬಂರಿಯ ಮೂಲಕ ನಿರ್ವಹಿಸುತ್ತಾರೆ. ಸ್ತ್ರೀ ವಿದ್ಯೆಯ ಬಗೆಗೆ, ಶೋಷಣೆಯ ಬಗೆಗೆ ಕಾಳಜಿಯುಳ್ಳ ತಿರುಮಲಾಂಬ ಸನಾತನ ಧರ್ಮ ಪರಿಚಯಿಸಿದ ಸ್ತ್ರೀ ಧರ್ಮವನ್ನು ಮೀರಬಾರದಂತೆ ಕಟ್ಟೆಚ್ಚರ ವಹಿಸುತ್ತಾರೆ.

ಅವರ ನಭಾ [೬] ಕಾದಂಬರಿಯು ಅಕಾಲ ವೈಧವ್ಯಕ್ಕೆ ಒಳಗಾದ ಹೆಣ್ಣು ಶೀಲ ಉಳಿಸಿಕೊಳ್ಳುವ ಪರಿಯನ್ನು ಪರಿಚಯಿಸುತ್ತದೆ. ವಿಧವೆಯ ಸಮಸ್ಯೆಯ ಕುರಿತು ಯೋಚಿಸದ ಲೇಖಿಕೆ ಅವಳ ಮರು ಮದುವೆಯ ಕುರಿತು ಚಿಂತಿಸುವುದಕ್ಕೂ ಅವಕಾಶ ಕೊಡುವುದಿಲ್ಲ. ಇಲ್ಲಿ ನಭಾ ತನ್ನನ್ನು ಮದುವೆ ಯಾಗಲು ಹೊರಟವನನ್ನೇ ತಿರಸ್ಕರಿಸುವುದು, ಮತ್ತು ಆ ಕುರಿತು ಕಿಂಚಿತ್ತೂ ವಿಚಲಿತಳಾಗದಿ ರುವುದನ್ನು ಪರಿಚಯಿಸುವ ಮೂಲಕ ವಿಧವೆಯ ಮರುಮದುವೆ ಮಾಡಬಾರದ ಸಾಂಪ್ರದಾಯಿಕ ನಿಲುವನ್ನೇ ಪ್ರತಿಪಾದಿಸಿರುವುದನ್ನು ಗಮನಿಸಬಹುದಾಗಿದೆ. ಇದೇ ಆಶಯ ಬಿಂಬಿಸುವ ಇನ್ನೊಂದು ಕಾದಂಬರಿ ವಿರಾಗಿಣಿ(೧೯೧೫). ಮಾತೃನಂದಿನಿ(೧೯೧೬) ಕೊಂಚ ಪ್ರಗತಿಪರ ಆಲೋಚನೆಗಳನ್ನು ದೃಢ ಮಾತುಗಳಲ್ಲಿಯೇ ಪ್ರತಿಪಾದಿಸುತ್ತದೆ. ಬಾಲ್ಯವಿವಾಹದ ಬಗೆಗೆ, ವರದಕ್ಷಿಣೆಯ ವಿರುದ್ಧ ಪ್ರತಿಭಟನೆ ಇದೆ. ಸ್ತ್ರೀ ವಿದ್ಯಾಭ್ಯಾಸದ ಕುರಿತು ಸಮರ್ಥನೆ ಇದೆ. ಅಲ್ಲಿ ಈ ಕುರಿತು ಹೋರಾಟ ನಡೆಸುವ ನಂದಿನಿ ಮತ್ತು ನಾಗೇಶರಾಯ ಇಬ್ಬರೂ ಬಹಿಷ್ಕಾರ ಹಾಕಿಸಿ ಕೊಂಡರೂ ತಮ್ಮ ನಿಲುವುಗಳಿಂದ ಹಿಂಜರಿಯುವುದಿಲ್ಲ ಎನ್ನುವುದು ಅತ್ಯಂತ ಮುಖ್ಯವಾಗಿದೆ.

ಆರ್.ಕಲ್ಯಾಣಮ್ಮ ತಿರುಮಲಾಂಬಾ ಅವರಿಗಿಂತ ಭಿನ್ನ ಚಿಂತನೆಯನ್ನು ಒಳಗೊಂಡವ ರಾಗಿದ್ದರು. ಸಾಮಾಜಿಕ ಅನಿಷ್ಟಗಳನ್ನು ವಿರೋಧಿಸಿದ ಅವರು ಪ್ರಗತಿಪರ ಆಶಯಗಳನ್ನು

---

೬ ಹಿತೈಷಿಣಿಯ ಹೆಜ್ಜೆಗಳು, ಸಂ. ವಿಜಯಾ ದಬ್ಬೆ ೧೯೯೨

ಮಂಡಿಸಿದರು. ವರದಕ್ಷಿಣೆಯ ಕಷ್ಟಗಳ ಕುರಿತು ಪ್ರಿಯಂವದಾ ಕಾದಂಬರಿಯ(೧೯೨೦) ಮೂಲಕ ಮಾರ್ಮಿಕವಾಗಿ ಹೇಳಿದರೆ, ನಿರ್ಭಾಗ್ಯವನಿತೆ(೧೯೨೧) ಅಥವಾ ಇಂದಿರಾ ಕಾದಂಬರಿಯ ಮೂಲಕ ಬಾಲ್ಯವಿವಾಹವನ್ನು ವಿರೋಧಿಸಿದರು, ವಿಧವೆಯರ ಬಾಳಿನ ಗೋಳನ್ನು ಪರಿಣಾಮಕಾರಿಯಾಗಿ ಪರಿಚಯಿಸಿದ್ದಾರೆ. ಅವರ ಉದ್ಧಾರದ ಬಗೆಗೆ ಅತ್ಯಂತ ಕಾಳಜಿ ವಹಿಸಿದ್ದ ಅವರು, 'ಪ್ರತಿಯೊಂದು ಗೃಹದಲ್ಲಿಯೂ ಕನಿಷ್ಠ ಪಕ್ಷ ಇಬ್ಬರು ಮೂವರು ವಿಧವೆಯರಿರುವರು. ಇವರನ್ನುದ್ಧರಿಸಲು ಸರ್ವರೂ ಪ್ರಯತ್ನಿಸಬೇಕಾಗಿದೆ'[೭] ಎಂದು ಅವರು ಈ ಮೂಲಕ ಕರೆಕೊಟ್ಟಿದ್ದಾರೆ. ಸುಖಲತೆಯ(೧೯೨೭)ಮೂಲಕ ಹೆಣ್ಣಿನ ಕೆಡುಕು ಹಾಗೂ ಒಳಿತಿಗೆ ಕಾರಣಳಾಗಿರುವವಳು ಹೆಣ್ಣು ಎಂಬುದನ್ನು ತೋರಿಸುತ್ತ ಬದುಕಿನಲ್ಲಿ ಅನುಭವಿಸುವ ವಿವಿಧ ಸಮಸ್ಯೆಗಳನ್ನು ತೆರೆದಿಟ್ಟಿದ್ದಾರೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ ಅವರು ಬರೆಯುತ್ತಿದ್ದ ಕಾಲದಲ್ಲಿ ಆದ ಆಧುನಿಕತೆಯ ಪ್ರವೇಶ, ಇಂಗ್ಲೀಷರ ಆಡಳಿತದ ಪರಿಣಾಮ, ಮಹಿಳಾ ಚಳವಳಿಗಳು ಹಕ್ಕು ಸ್ಥಾಪನೆಗಾಗಿ ಮಾಡುತ್ತಿದ್ದ ಒತ್ತಾಯದ ಪರಿಣಾಮವಾಗಿ ಇಡೀ ಭಾರತೀಯ ಸಂಸ್ಕೃತಿಯ ನೆಲೆಗಟ್ಟು ಬದಲಾಗಬಹುದೇ ಎಂಬ ಸಂದೇಹ ಪ್ರಬಲವಾಗಿ ಅವರನ್ನು ಕಾಡತೊಡಗಿತು.

ಆದ್ದರಿಂದಲೇ ಸಂಸ್ಕೃತಿಯನ್ನು ಹೆಣ್ಣಿನಿಂದಲೇ ಉಳಿಸಿ ಬಾಳಿಸುವ ಕಡೆಗೆ ಪ್ರೇರಿತರಾದರು. ಆಧುನಿಕತೆಯ ಶೋಕಿಗೆ ಮಹಿಳೆ ಒಳಗಾಗದಂತೆ ತಡೆಯುವಲ್ಲಿ ಮಾಸ್ತಿ ಸದಾ ಜಾಗೃತರಾಗಿರುತ್ತಾರೆ. ಸಂಸ್ಕೃತಿಯ ಬದಲಾವಣೆಯನ್ನು, ಹೊಸತರ ಆಗಮನವನ್ನು ದೂರದಿಂದಲೇ ತಡೆಯಬೇಕೆಂಬುದನ್ನು ಮಾಸ್ತಿ ಬೋಧಿಸುತ್ತಾರೆ.

ಈ ನಿಟ್ಟಿನಲ್ಲಿ ಮಾಸ್ತಿ ಅವರ ನಿಲುವಿನ ಹಿಂದಿನ ಪ್ರೇರಣೆ ಪರಿಸ್ಥಿತಿಯ ಪ್ರಭಾವವನ್ನು ಮುಂದೆ ಚರ್ಚಿಸಬಹುದು.[೮]

---

೭ ಪು.೩೪೬ ನಿರ್ಭಾಗ್ಯವನಿತೆ, ಆರ್. ಕಲ್ಯಾಣಮ್ಮ ೧೯೨೧

೮ ಪ್ರಸ್ತುತ ಅಧ್ಯಾಯಕ್ಕೆ ಸಂಬಂಧಿಸಿ ಮಾಸ್ತಿಯವರ ಮೇಲೆ ಬೀರಿದ ಪ್ರೇರಣೆ-ಪ್ರಭಾವಗಳನ್ನು ಅರಿತುಕೊಳ್ಳುವಲ್ಲಿ ಅವರ ಆತ್ಮಕಥನ ಭಾವ ೧ ೧೯೬೮, ಭಾವ ೨ ೧೯೬೯, ಭಾವ ೩ ೧೯೬೯, ಮಾಸ್ತಿ ಅವರ ಬರಹಗಳ ಸಂಕಲನವಾದ ಅಂತರಗಂಗೆ ೨೦೦೦ ಮರುಮುದ್ರಣ, ಆರಂಭದ ಆಂಗ್ಲ ಸಾಹಿತ್ಯ, ನಮ್ಮ ಹೊಸ ಸಾಹಿತ್ಯದ ಆರಂಭ ೧೯೭೯ ಕೃತಿ, ಕರ್ನಾಟಕ ಜನತೆಯ ಸಂಸ್ಕೃತಿ ೧೯೩೧, ಕರ್ನಾಟಕ ಜನಪದ ಸಾಹಿತ್ಯ ೧೯೫೬ ಕೃತಿಗಳು ವಿಶೇಷವಾಗಿ ನೆರವಾಗಿವೆ.

ವೈದಿಕ ಸಂಸ್ಕೃತಿಯ ಹಿನ್ನೆಲೆ

ಮಾಸ್ತಿ ಬದುಕಿದ ಪರಿಸರ ಹಾಗೂ ಅದರಿಂದ ಪ್ರೇರಿತರಾಗಿ ತಳೆದ ಆಲೋಚನೆಯನ್ನು ಇಲ್ಲಿ ವಿಸ್ತರಿಸಬಹುದು. ಆ ಮೂಲಕ ಹೆಣ್ಣಿನ ಬದುಕನ್ನು ನಿರ್ದೇಶಿಸುವ ಅವರ ನಿಲುವನ್ನು ಪರಿಚಯಿಸಿಕೊಳ್ಳಬಹುದು. ಮಾಸ್ತಿಯಲ್ಲಿ 'ಪೆರಿಯಾತ್ತ್' ಹೆಸರಿನ ಹಿರಿದಾದ ಕುಟುಂಬದಲ್ಲಿ ಜನಿಸಿದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಆರ್ಥಿಕವಾಗಿ ಶ್ರೀಮಂತ ಬದುಕನ್ನು ಅನುಭವಿಸಿದವರಲ್ಲ. ವಿದ್ಯಾಭ್ಯಾಸವನ್ನು ಕಷ್ಟದಿಂದಲೇ ಪೂರೈಸಿದವರು. ವಾರಾನ್ನ ಉಂಡು ವಿದ್ಯಾರ್ಥಿ ಜೀವನವನ್ನು ಕಳೆದವರು. ಆದರೆ ಹಿರಿಯ ಮನೆತನ ತನ್ನ ದೊಡ್ಡದಾದ ಸಾಂಸ್ಕೃತಿಕ ಬದುಕನ್ನು ಅವರಿಗೆ ಪರಿಚಯಿಸಿತ್ತು.[1] ಅವರು ಜನಿಸಿದ ವೈದಿಕ ಪರಂಪರೆಯ ವಿಚಾರಗಳು ಅವರ ಮೇಲೆ ಬಹಳ ಪ್ರಭಾವ ಬೀರಿದೆ. ತಾವು ಉಸಿರಾಡಿ ಬೆಳೆದ ಸಂಸ್ಕೃತಿಯೊಂದರ ಮೇಲೆ ಮಾಸ್ತಿಗಿದ್ದ ಪೂಜ್ಯ ಭಾವನೆ ಅವರು ಪುರಾಣ ಸಾಹಿತ್ಯವನ್ನು ಅಭ್ಯಸಿಸುತ್ತಿದ್ದಂತೆ ದಟ್ಟವಾಗುತ್ತಾ ಹೋಯಿತು. ಸನಾತನವಾದ ವೈದಿಕ ಪರಂಪರೆಯ ಸ್ತ್ರೀಯರನ್ನೇ ಮಾದರಿಯಾಗಿ ಕಣ್ಣು ಮುಚ್ಚಿ ಸ್ವೀಕರಿಸುತ್ತಾರೆ. ಮತ್ತು ಅದನ್ನೇ ಸಂಪೂರ್ಣವಾಗಿ ಒಪ್ಪಿ ಅದೇ ಮಾರ್ಗದಲ್ಲಿ ಹೆಣ್ಣು ಬಾಳಬೇಕೆಂಬುದನ್ನು ಪ್ರೇರಿಸುತ್ತಾರೆ. ವೈಷ್ಣವ ಪಂಥ ಲಕ್ಷ್ಮೀಯನ್ನು ಕಾಣುವುದೇ ಗೌರವ ಭಾವದಿಂದ ಅಲ್ಲಿ ಅವಳನ್ನು ಪೂಜಿಸುವ, ಗೌರವಿಸುವ ನೆಲೆಯಿಂದ ಹೆಣ್ಣನ್ನು ಅವರು ಗೌರವದಿಂದ ಕಾಣುವಂತೆ ಪ್ರೇರಣೆಯನ್ನು ಪಡೆದಿದ್ದಾರೆ. ಅದೇ ರೀತಿಯ ಭಾವನೆಯಿಂದಲೇ ವೈದಿಕ ಸಂಸ್ಕೃತಿ ಹೆಣ್ಣನ್ನು ಕಾಣುತ್ತಿತ್ತು. ಪರಿಣಾಮವಾಗಿಯೇ ಮಾಸ್ತಿ ಅವರಿಗೆ ವೈದಿಕ ಪರಂಪರೆಯ ಹೆಣ್ಣು ಬಾಳಿದ ರೀತಿ ಆದರ್ಶವಾಗಿ ಕಂಡಿತು. ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತು. ಅವರು ಬಾಳಿದ ಪರಿಸರದಲ್ಲಿ ಬೆಳೆದ ಹೆಣ್ಣು ಮಕ್ಕಳ ಬದುಕಿನ ರೀತಿಯೂ ಪ್ರಭಾವ ಬೀರಿದ್ದು ಅದಕ್ಕೆ ಮುಖ್ಯ ಕಾರಣವಾಗಿದೆ. ಚಿಕ್ಕಂದಿನಿಂದಲೇ ರಾಮಾಯಣದ ಪಾರಾಯಣವನ್ನು ಆಲಿಸುತ್ತಿದ್ದುದರಿಂದ ಮಾಸ್ತಿ ಅವರು ಅಲ್ಲಿನ ಪ್ರಭಾವದಿಂದಲೇ ಹೆಣ್ಣು ಮಕ್ಕಳ ಬದುಕಿನ ಉದ್ದೇಶ ರೀತಿ ನೀತಿಗಳನ್ನು ಅರಿಯುತ್ತಾ ಬಂದರು. ಮತ್ತು ಅದನ್ನೇ ಪ್ರತಿಷ್ಠಾಪಿಸಿ ಬಾಳಿಸುವ ಕಡೆಗೂ ಮಹತ್ವ ಕೊಟ್ಟರು. ಅಂದರೆ ಸಂಸ್ಕೃತಿಯ ಶ್ರೀಮಂತಿಕೆಯ ಹೆಸರಿನಲ್ಲಿ ಹೆಣ್ಣನ್ನು ಅದರ ಪಾಲಕಿಯಾಗಿ ಕಾಪಾಡುತ್ತಾ ಬರುವಂತೆ ಮುತುವರ್ಜಿ ವಹಿಸಿದರು.[1]

ಮಾಸ್ತಿ ಹೆಣ್ಣನ್ನು ಪೂಜನೀಯ ಭಾವದಿಂದಲೇ ಕಾಣುತ್ತಾರೆ. ಅದನ್ನು ಸನಾತನ ಧರ್ಮದ ತತ್ವದಿಂದಲೇ ಸ್ವೀಕರಿಸಿಕೊಂಡಿದ್ದಾರೆ. ಈ ಪೂಜ್ಯ ಭಾವನೆಯ ಹಿಂದೆಯೇ ಅವಳನ್ನು ಮನೆ ಮತ್ತು ಕುಟುಂಬದೊಳಗೆ ಬಂಧಿಸುವ ಕೆಲಸವೂ ನಡೆದು ಬಿಟ್ಟಿದೆ. ಇದು ಪ್ರಜ್ಞಾಪೂರ್ವಕವೇ? ಅಪ್ರಜ್ಞಾಪೂರ್ವಕ ನಿರ್ಧಾರವೇ? ಎಂಬ ಪ್ರಶ್ನೆ ಮಾಸ್ತಿ ಅವರ ನಿಲುವನ್ನು ಅಭ್ಯಸಿಸುವ ಸಂದರ್ಭ ಎದುರಾಗುತ್ತದೆ. ಒಂದೆಡೆ ಮನುಷ್ಯ ಸಂಬಂಧ ಬೆಸೆಯಬೇಕು, ಹಿಂಸೆ-ತಾಕಲಾಟಗಳು

ಮನುಷ್ಯ ಸಂಬಂಧದ ನಡುವೆ ನಡೆಯಬಾರದು ಎಂದು ಸಲಹೆ ನೀಡುತ್ತಾರೆ. ಅದಕ್ಕೆ ಹೆಣ್ಣೇ ಹೆಚ್ಚು ಹೊಂದಿಕೊಂಡು ನಡೆಯಬೇಕೆಂದು ಎಲ್ಲಾ ಕಟ್ಟುಪಾಡುಗಳನ್ನು ನಯವಾಗಿ, ಅದನ್ನು ಮೀರಲು ಮನಸ್ಸು ಮಾಡದಷ್ಟು ಮೆಲುವಾಗಿ ಹೇರುವುದು ನೋಡಿದಾಗ ಅವರು ಹೆಣ್ಣನ್ನು, ಹೆಣ್ಣಿನ ಬದುಕನ್ನು ಪ್ರಜ್ಞಾಪೂರ್ವಕವಾಗಿಯೇ ಪುರುಷ ಪ್ರಧಾನ ಸಂಸ್ಕೃತಿಯ ಬೆಳವಣಿಗೆಗೆ ಒತ್ತೆ ಇಟ್ಟಿದ್ದಾರೆ ಎಂಬುದು ಖಚಿತವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹೆಣ್ಣಿನಲ್ಲಿ ತುಂಬುವ ಧೈರ್ಯ, ಛಾತಿ, ಪ್ರತಿಭಟನಾ ಶಕ್ತಿ ಹೆಣ್ಣನ್ನು ಕೆಣಕುವ, ಹಿಂಸಿಸುವ ಪ್ರವೃತ್ತಿಗೆ ಆಕೆ ಒಳಗಾಗಬಾರದು ಎಂದು, ಅದನ್ನು ಆಕೆ ತಡೆಯಬೇಕು ಎಂದು ಹೇಳುತ್ತಾರೆ.

ಅನಾರೋಗ್ಯಕರ ಸಮಾಜ ಒಂದು ನಿರ್ಮಾಣವಾಗದಂತೆ ತಡೆಯಬೇಕಾದ ಜವಾಬ್ದಾರಿಯನ್ನು ಹೆಣ್ಣಿನ ಮೇಲೆಯೇ ಹೊರಿಸುವಲ್ಲಿ ಹೆಣ್ಣನ್ನು ನಿಗ್ರಹಿಸುವ ಮನಸ್ಥಿತಿಯನ್ನು ಕಾಣಬಹುದು. ಆ ಜವಾಬ್ದಾರಿಯನ್ನು ಗಂಡಿಗೆ ನೇರವಾಗಿ ಹೇರಿಲ್ಲವಾದರೂ ಆತನೂ ಅದರಲ್ಲಿ ಭಾಗಿ ಎಂಬುದನ್ನು ಮಾಸ್ತಿ ಪರೋಕ್ಷವಾಗಿ ಹೇಳುತ್ತಾರೆ. ಆದರೆ ಹೆಣ್ಣು ಮಾತ್ರ ಪುರುಷ ಪ್ರಧಾನ ಆಲೋಚನೆಯ ನಿಯಮಗಳನ್ನು ಮೀರದಂತೆ ನಿಗ್ರಹಿಸುತ್ತಾರೆ. ಅಂದರೆ ಇಲ್ಲಿ ಹೆಣ್ಣು ಪುರುಷನಿಂದಲೇ ನಿರ್ಧಾರಿತವಾದ ಸಂಸ್ಕೃತಿ ಮತ್ತು ಸಮಾಜದೊಳಗೆ ಅಲ್ಲಿನ ಎಲ್ಲಾ ನಿರ್ಬಂಧಗಳನ್ನು ಮೌಲ್ಯವೆಂದು ಸ್ವೀಕರಿಸಿ ಅದನ್ನು ಪ್ರತಿಷ್ಠಾಪಿಸುತ್ತಾರೆ. ಈ ಚೌಕಟ್ಟನ್ನು ಪ್ರಶ್ನಿಸದ ಸ್ತ್ರೀಯರು ಅದನ್ನೇ ನಂಬಿ ತಾವು ಗಂಡು ಮಾಡುವ ಪೂಜೆಗೆ ಒಳಗಾದವರು ಎಂದು ಭ್ರಮಿಸುತ್ತಾರೆ. ಆ ಭ್ರಮಾತ್ಮಕ ಜಗತ್ತಿನಿಂದಾಗಿ ತನ್ನ ಸ್ವಾತಂತ್ರ್ಯ ಪಡೆಯುವ ಹಕ್ಕನ್ನು ಅವಳು ಕಳೆದುಕೊಳ್ಳಬೇಕಾಗಿ ಬರುವಂತಾದದ್ದು ಇಲ್ಲಿಂದ ಅರ್ಥೈಸಿಕೊಳ್ಳಬಹುದಾಗಿದೆ.

ಸನಾತನ ಧರ್ಮದ ಸಾರವೆಂದರೆ ಕುಟುಂಬವನ್ನು ಪೋಷಿಸುವುದು, ವಿವಾಹ ಸಂಸ್ಥೆಯನ್ನು ಕಾಯ್ದುಕೊಳ್ಳುವುದು. ಈ ನೆಲೆಯಿಂದಲೇ ಲೋಕದ ಉಳಿವಿಗಾಗಿ ಆಗಬೇಕಾದ ವಂಶೋದ್ಧಾರ ಹಾಗೂ ಕುಟುಂಬ ವೃದ್ಧಿಯ ನಂಬಿಕೆಯ ನೆಲೆಗಟ್ಟನ್ನು ವಿರೋಧಿಸಬಾರದೆಂಬುದನ್ನು ಮಾಸ್ತಿ ಹೆಣ್ಣಿನಿಂದಲೇ ಹೇಳಿಸುತ್ತಾರೆ. ಅದನ್ನು ಸ್ಥಿರೀಕರಿಸುದಕ್ಕೆ ಮಾಸ್ತಿಯವರು ವಿವಾಹವನ್ನಾಗಲಿ, ಕುಟುಂಬವನ್ನಾಗಲಿ ಪ್ರಶ್ನಿಸುವುದಕ್ಕೆ ಯಾರಿಗೂ ಅವಕಾಶಕೊಡುವುದಿಲ್ಲ. ಇದು ಕುಟುಂಬ ವೃದ್ಧಿಯ ಅನಿವಾರ್ಯತೆಯೊಳಗೆ ಹೆಣ್ಣು ಬದ್ಧಳಾಗಬೇಕೆಂಬ ತತ್ತ್ವವನ್ನು ಮುಂದಿಡುವುದಾಗಿದೆ. ಇದು ಪ್ರಕೃತಿ ಸಹಜ ನಿಯಮವೆನ್ನುವುದು ನಿಜವಾದರೂ ಅದನ್ನು ಸ್ವೀಕರಿಸುವ ಅಥವಾ ಬಿಡುವ ಸ್ವಾತಂತ್ರ್ಯವನ್ನು ಹೆಣ್ಣಿಗೆ ಕೊಡದ ಮನಃಸ್ಥಿತಿಯನ್ನು ಇಲ್ಲಿ ಪ್ರಶ್ನಿಸುವಂತೆ ಮಾಡುತ್ತದೆ. ಕುಟುಂಬವನ್ನು ಬಿಟ್ಟು ಬಂದಿದ್ದ ಹೆಣ್ಣು ಕೂಡಾ ಕುಟುಂಬಕ್ಕೆ ಬದ್ಧಳಾಗಬೇಕಾದ ಅನಿವಾರ್ಯತೆ ಕೂಡಾ ಮಾಸ್ತಿ ಅವರು ತಮ್ಮ ಕತೆಗಳ ಸ್ತ್ರೀಯರ ಮೂಲಕ ಪ್ರತಿಪಾದಿಸುತ್ತಾರೆ. ಕುಟುಂಬದ ಆಶ್ರಯಕ್ಕೇ ಹೆಣ್ಣು ಬದ್ಧಳಾಗಬೇಕಾಗುವಂತೆ ಮಾಡುವ ಸಂದರ್ಭವನ್ನು ಸೃಷ್ಟಿಸುವುದರ ಹಿಂದೆ

ತನ್ನ ಹಿಡಿತದಲ್ಲೇ ಹೆಣ್ಣನ್ನು ಇರಿಸಿಕೊಳ್ಳುವುದಕ್ಕೆ ಮಾಡಿಕೊಂಡ ಗಂಡಿನ ಉಪಾಯವನ್ನು ಗ್ರಹಿಸಬಹುದಾಗಿದೆ. ಗಂಡಿನ ಆಸರೆ ಇಲ್ಲದೆ ಮರ್ಯಾದಿತ ಜೀವನ ಸಾಗಿಸುದಕ್ಕೆ ಸಾಧ್ಯವಿಲ್ಲ ಎಂಬ ಧೋರಣೆಯೇ ಇಲ್ಲಿ ಪುನರ್ ಪ್ರತಿಷ್ಠಾಪನೆಗೊಳ್ಳುತ್ತದೆ. ಅದು ಅಲ್ಲಿನ ಹೆಣ್ಣು ಹಳಹಳಿಸುವಲ್ಲಿಯೇ ವ್ಯಕ್ತವಾಗುತ್ತದೆ. ಆದರೆ ಆ ಭಾವನೆಗಳು ಸಂಸ್ಕೃತಿಯನ್ನು ಗಟ್ಟಿಗೊಳಿಸುವ ಮನಃಸ್ಥಿತಿಗೆ ಅರ್ಥವಾಗುವುದಿಲ್ಲ. ಹೆಣ್ಣು ಗಂಡನೊಂದಿಗೆ ಅವನಿಗೆ ಬೇಕಾದ ಹಾಗೆ ಇರಬೇಕಾದದ್ದನ್ನು, ಅವನನ್ನು ನಿರ್ಲಕ್ಷ್ಯದಿಂದ ಕಾಣಬಾರದ್ದನ್ನು, ಚೆನ್ನಾಗಿ ಉಪಚರಿಸಬೇಕಾದದ್ದನ್ನು ಬೋಧಿಸುವ ಮಾಸ್ತಿ ಗಂಡು ಹೆಣ್ಣಿನ ಮನ ಅರಿತು ನಡೆಯಬೇಕಾದ ಕುರಿತು ಹಿತ ವಚನ ಹೇಳುವುದಿಲ್ಲ. ಇದು ಮಾಸ್ತಿ ಅವರ ಮಾನವೀಯತೆ ಮತ್ತು ಸಮಾನತಾ ವಾದವನ್ನು ಪ್ರಶ್ನಿಸುವುದಕ್ಕೆ ಆಸ್ಪದ ಮಾಡಿಕೊಡುತ್ತದೆ.

ಸ್ತ್ರೀ ಪಾಲಿಸಬೇಕಾದ ಗೃಹಿಣೀ ಧರ್ಮದ ಕುರಿತಂತೆ ಸನಾತನ ಧರ್ಮ ಹಾಕಿಕೊಟ್ಟ ಮಾರ್ಗವನ್ನು ಕೊಂಚವೂ ಪ್ರಶ್ನಿಸದ ಮಾಸ್ತಿ ಅದನ್ನೇ ಒಂದು ಮೌಲ್ಯವಾಗಿ ಪರಿಭಾವಿಸುತ್ತಾರೆ. ಆ ಸಾರವನ್ನೇ ಮೈಗೂಡಿಸಿಕೊಂಡು ಬಾಳಿದ ತಮ್ಮ ತಾಯಿಯ ಕುರಿತು ಹೇಳುತ್ತಾ 'ಮನೆಯನ್ನು ನೋಡಿಕೊಳ್ಳುವುದೆನ್ನುವುದು ಮನೆಯ ಹೆಂಗಸಿನ ಕೆಲಸ. ಮನೆಯ ಕೆಲಸ ಹತ್ತು ವಿವರವನ್ನು ಸರಿಯಾಗಿ ನಡೆಸುತ್ತಾ ಗಂಡನನ್ನು, ಮಕ್ಕಳನ್ನು, ಮನೆಯ ಜನರನ್ನು ಪೋಷಿಸುವುದು ಗೃಹಿಣಿಯ ಕರ್ತವ್ಯ, ಧರ್ಮ ಎನ್ನುವ ಸಂಪ್ರದಾಯದ ನಂಬಿಕೆ ಇವರಿಗೆ ವೇದದಂತೆ ಮಾನ್ಯ. ಹೆಂಗಸು ದುಡಿಯುವುದಕ್ಕೆ ದಣಿಯುವುದಕ್ಕೆ ಹಿಂತೆಗೆಯಬಾರದು. ಅವಳ ಮೈ ಇರುವುದು ಗಂಡನಿಗಾಗಿ, ಮಕ್ಕಳಿಗಾಗಿ. ನಾವು ಸಂಸಾರ ಹೂಡಿದ ಮೇಲೆ ಹತ್ತು ವರ್ಷ ಇವರು ಬಾಯಲ್ಲಿ ಹೇಳದೇ ಸೊಸೆಗೆ ಮನೆಕೆಲಸವನ್ನು ಒಂದೊಂದಾಗಿ ಕಲಿಸಿ ಹತ್ತು ವರ್ಷದ ನಂತರ ಆಕೆಗೆ 'ಇನ್ನು ನಾನು ನಾನೇ ಇದ್ದು ಮನೆ ನಡೆಸಬೇಕು ಎನ್ನುವುದು ಇಲ್ಲ; ನೀನು ನಿನ್ನ ಗಂಡನ್ನ ಚೆನ್ನಾಗಿ ನೋಡಿಕೊಳ್ಳಬಲ್ಲೆ. ಮನೆ ಕೆಲಸ ನೋಡಿಕೊಳ್ಳಬಲ್ಲೆ; ನೋಡಿಕೋ, ನೋಡಿಕೋ ಎಂದರು. ಮನೆಗೆಲಸದ ಹೊಣೆಯನ್ನು ಆಮೇಲೆ ಸೊಸೆಗೆ ಬಿಟ್ಟರು. ತಾವು ಕಲಿತಿದ್ದ ಹಾಡು, ರಂಗವಲ್ಲಿಯನ್ನೂ ಅದೇ ಕೆಲಸವಾಗಿ ಕುಳಿತು ಮೊಮ್ಮಕ್ಕಳಿಗೆ ಕಲಿಸಿದರು ಎಂದು ವಿವರಿಸಿದ್ದಾರೆ.[೯] ಇಲ್ಲಿ ತಾಯಿಯ ಈ ನಡವಳಿಕೆಗಳು ತಮ್ಮ ಮೇಲೆ ಅಪಾರ ಪ್ರಭಾವ ಬೀರಿದ್ದಾಗಿ ತಿಳಿಸುವಲ್ಲಿ ಹೆಣ್ಣಿನ ಬದುಕನ್ನು ಗೃಹಿಣೀ ಧರ್ಮದ ಪಾಲನೆಗೆ ಸೀಮಿತಗೊಳಿಸಿದ್ದು ಸ್ಪಷ್ಟವಾಗುತ್ತದೆ. ಅದರಾಚೆಗೆ ಹೆಣ್ಣು ಕಣ್ಣು ಹಾಯಿಸಬಾರದಂತೆ ಕೂಡಾ ಅವಳನ್ನು ನಿಯಂತ್ರಿಸಿರುವುದನ್ನು ಒಂದು ಮೌಲ್ಯವಾಗಿ ಕಂಡು ಅಂತೆಯೇ ಬಾಳುತ್ತಿರುವವರ ಬಗ್ಗೆ ಖುಷಿ ಪಡುತ್ತಾರೆ. ಆ ಮೂಲಕ ಮುಂದೆಯೂ ಹಾಗೆಯೇ ಸ್ತ್ರೀ ಆದವಳು ಬಾಳಬೇಕೆಂಬುದನ್ನು ಪ್ರತಿಪಾದಿಸುತ್ತಾರೆ.

---

೯ ಪು. ೪೬೬ ಭಾವ ೩, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ೧೯೯೦

ಕುಟುಂಬ ಹಾಗೂ ತಾಯ್ತನದ ಮೌಲ್ಯಗಳನ್ನು ಭಾರತೀಯ ಸನಾತನ ಧರ್ಮದ ಆಧಾರದಲ್ಲೇ ಒಪ್ಪಿಕೊಳ್ಳುವ ಮಾಸ್ತಿ ಅದನ್ನು ವಿಶ್ವವ್ಯಾಪಿಯಾಗಿಸುವ ನೆಲೆಯಲ್ಲಿ ಪರಿಚಯಿಸುತ್ತಾರೆ. ಮತ್ತು ಇಂಥ ಸಂಬಂಧ ಬದುಕಿನ ಚೌಕಟ್ಟು ಸ್ವರೂಪಗಳು ಕಾಲ ದೇಶವನ್ನು ಮೀರುತ್ತವೆ. ಇವೆಲ್ಲ ನಿಯಮಗಳು ವಿಶ್ವಾದ್ಯಂತ ಒಂದೇ ತೆರನಾಗಿರುತ್ತವೆ ಎಂಬುದನ್ನು ಮಾಸ್ತಿಯವರು ಕತೆಗಳಲ್ಲಿ ಬರುವ ದೇಶವಿದೇಶಗಳ ಸ್ತ್ರೀಯರಿಂದಲೇ ತೋರಿಸಿಕೊಡುತ್ತಾರೆ.

ತಾಯ್ತನವೂ ಒಂದು ಮೌಲ್ಯ. ಅದನ್ನು ಪ್ರತಿಯೊಬ್ಬ ಹೆಣ್ಣು ಕೂಡಾ ಪಾಲಿಸಬೇಕಾದ ಮತ್ತು ಅನುಭವಿಸಬೇಕಾದ ಅನಿವಾರ್ಯತೆಯನ್ನು ಮಾಸ್ತಿಯವರು ನಂಬಿದ್ದಾರೆ. ಆದ್ದರಿಂದಲೇ ಕತೆಗಳಲ್ಲಿನ ಸ್ತ್ರೀಯರು ಇಷ್ಟವಿರಲಿ ಇಲ್ಲದಿರಲಿ ತಾಯ್ತನವನ್ನು ಒಪ್ಪಿಕೊಳ್ಳುವ ಪರಿಸ್ಥಿತಿಯನ್ನು ಮುಖಾಮುಖಿಯಾಗಿಸುತ್ತಾರೆ. 'ತಾಯಿಗೆ ತನ್ನ ಜಗತ್ತಿನಲ್ಲಿ ತನ್ನ ಮಗುವಿನ ಮೇಲೆ ಅತಿಯಾದ ಪ್ರೀತಿ; ಮಗುವಿಗೂ ಪ್ರೀತಿಯ ಜೀವ ತಾಯಿಯೇ' ಎಂಬ ನಿಲುವನ್ನೇ ಪ್ರತಿಪಾದಿಸುತ್ತಾರೆ. ಇಲ್ಲಿ ತಾಯ್ತನದ ಕುರಿತ ಅತಿಯಾದ ಆಪ್ತತೆಯನ್ನು ಇರಿಸಿಕೊಳ್ಳಬೇಕಾದ ಮತ್ತು ಅದನ್ನು ಹೆಣ್ಣು ಪಾಲಿಸಬೇಕಾದ ಒತ್ತಾಯವಿದೆ. ಇದು ಸ್ತ್ರೀಯನ್ನು ಪ್ರತಿಬಂಧಿಸುವ ನಿಲುವಾಗಿದೆ.

ತಾಯ್ತನದ ನೆಲೆ ನಿಲ್ಲುವುದೇ ಮಗುವಿನ ಮೇಲಿನ ಅತಿಯಾದ ಪ್ರೀತಿಯಿಂದ ಮತ್ತು ಅವಳು ಮಕ್ಕಳನ್ನು ಸಲಹುವ ರೀತಿಯಿಂದ. ಇದರಿಂದಾಗಿ ಸಮಾಜ ಸುಸ್ಥಿತಿಯಲ್ಲಿರುತ್ತದೆ ಎಂಬ ನಿಲುವು ಅವಳಿಗೆ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಹೊಣೆ ಹೊರಿಸುತ್ತದೆ. ಅದು ಅವಳಿಗೊಡ್ಡಿದ ಸತ್ವ ಪರೀಕ್ಷೆಯೂ ಆಗುತ್ತದೆ. ಮನುಷ್ಯ ವರ್ಗವನ್ನು ತಿದ್ದುವ, ಮನುಷ್ಯರನ್ನಾಗಿ ರೂಪಿಸುವ ಹೊಣೆಯನ್ನು ಹೆಣ್ಣಿಗೆ ಹೇರುವ ಮೂಲಕ ಪುರುಷ ವರ್ಗ ಆ ಜವಾಬ್ದಾರಿಯಿಂದ ಜಾರಿಕೊಳ್ಳುತ್ತವೆ. ಈ ಜವಾಬ್ದಾರಿ ಹೊರಿಸುವ ಹಿಂದೆ ಇದೇ ಪುರುಷ ವರ್ಗ ಆಕೆ ಆ ಕರ್ತವ್ಯದಾಚೆಗೆ ಬೇರೆಡೆಗೆ ಮನಸ್ಸು ಹಾಯಿಸದಂತೆ ಕಟ್ಟೆಚ್ಚರ ವಹಿಸುವುದೂ ಆಗಿದೆ. ಅಂದರೆ ಅವಳ ಗಮನವಿಡೀ ಸಂತಾನವನ್ನು ಸಲಹುವ, ಕುಟುಂಬವನ್ನು ಪೋಷಿಸುವ ಪೋಷಕಳಾಗಿ ಸನಾತನ ಧರ್ಮದಲ್ಲಿ ಕಾಣಿಸಿಕೊಂಡ ಮಾದರಿ ಹೆಣ್ಣಿನ ಕಷ್ಟನಷ್ಟಗಳ ಕಡೆಗೆ, ಅವಳ ಮನಸ್ಸಿನ ದುಗುಡಗಳಿಗೆ ಅಲ್ಲಿ ಬೆಲೆ ಸಿಗದೇ ಹೋಗುವುದರ ಕಡೆಗೆ ಮಾಸ್ತಿಯವರು ಗಮನ ಹರಿಸುವುದಿಲ್ಲ. ಅವರೂ ಸ್ಥಿರೀಕೃತ ಮೌಲ್ಯಗಳನ್ನು ನಿಷ್ಠೆಯಿಂದಲೇ ಸ್ವೀಕರಿಸಿ ಹೆಣ್ಣಿಗೆ ಹೇರುತ್ತಾರೆ. ಇಲ್ಲಿ ಹೆಣ್ಣಿನ ಎಲ್ಲ ಯೋಚನೆಗಳನ್ನು ತಮ್ಮ ತಹಬದಿಗೆ ತೆಗೆದುಕೊಂಡಿರುವ ಪುರುಷ ವರ್ಗದ ನಂಬಿಕೆ, ನಿಲುವುಗಳ ಪ್ರತಿಪಾದಕರಾಗಿಯೇ ಮಾಸ್ತಿ ತಮ್ಮ ಕತೆಗಳ ಸ್ತ್ರೀಯರನ್ನು ಪರಿಚಯಿಸಿದ ನೆಲೆಯಿಂದಲೇ ಕಾಣಿಸಿಕೊಳ್ಳುತ್ತಾರೆ. ಅವರ ಪ್ರಕಾರ ತಾಯ್ತನ, ವಿವಾಹ ಸಂಸ್ಥೆ ಕಳೆದು ಹೋಗದಂತೆ ಎಚ್ಚರಿಕೆ ವಹಿಸಬೇಕು. ಅದು ಅವಳ ಪಾಲಿನ ಪರಮ ಕರ್ತವ್ಯವಾಗಿದೆ. ತಾನು ಮದುವೆಯಾಗಬೇಕಾದ ಅನಿವಾರ್ಯತೆಗೆ ಒಳಗಾಗುವ ಹೆಣ್ಣು ತನ್ನ ಮಕ್ಕಳು ಅದನ್ನು ಮೀರಲು ಪ್ರಯತ್ನಿಸಿದಾಗ ಹಟ

ಮಾಡಿಯಾದರೂ ಮದುವೆಗೆ ಅವರನ್ನು ಒಪ್ಪಿಸುವುದು ವಿವಾಹ ಸಂಸ್ಥೆಯನ್ನು ಕಟ್ಟೆಚ್ಚರದಿಂದ ಕಾಯುವ ಮತ್ತು ಬಾಳಿಸುವ ಯಾಂತ್ರಿಕ ಮನಸ್ಥಿತಿಯಿಂದಲೇ. ತನ್ನ ಪರಿಸರದೊಳಗೆ ನಡೆದು ಕೊಂಡು ಬರುವ ಆಚಾರ ವಿಚಾರಗಳಿಗೆ ಬದಲಾಗಬೇಕಾಗುವುದು ಪ್ರತಿ ಹೆಣ್ಣಿಗೂ ಅನಿವಾರ್ಯ ದ್ದಾಗುತ್ತದೆ ಎಂಬುದನ್ನು ಮಾಸ್ತಿ ಅವರು ಒಪ್ಪಿಕೊಂಡಿದ್ದಾರೆ. ಹೆಣ್ಣು ತಾಯಿಯಾಗಲೇಬೇಕು. ಆ ಮೂಲಕ ಆಕೆ ಲೋಕವನ್ನು ಮುನ್ನಡೆಸಬೇಕು ಎಂಬುದು ಮಾಸ್ತಿ ಅವರ ನಿಲುವಾಗಿದೆ.

ಬದುಕು ಸಾಗುವುದೇ ಹೆಣ್ಣು ಗಂಡಿನ ಸಂಬಂಧದ ನೆಲೆಗಟ್ಟಿನಲ್ಲಿ ಎಂದು ಮಾಸ್ತಿ ನಂಬಿದ್ದಾರೆ. ವಿಶ್ವದ ಹೆಣ್ಣು ಗಂಡಿನ ನಡುವಿನ ಸಂಬಂಧದ ನೆಲೆಗಟ್ಟನ್ನು ಪರಿಚಯಿಸುತ್ತಲೂ ಅದನ್ನು ಪ್ರತಿಷ್ಠಾಪಿಸುವ ಪ್ರಯತ್ನ ಮಾಡುತ್ತಾರೆ. ಮನುಷ್ಯ ಸಂಬಂಧಗಳೆಲ್ಲವೂ ವಿಶ್ವಾದ್ಯಂತ ಒಂದೇ ನೆಲೆಯಲ್ಲಿ ಸಾಗುತ್ತದೆ ಎಂಬ ತತ್ತ್ವಕ್ಕೆ ಬದ್ಧರಾಗಿ ಕತೆ ಬರೆಯುವ ಸಂದರ್ಭದಲ್ಲೂ ಮಾಸ್ತಿ ಹೆಣ್ಣಿನ ಮನಸ್ಸಿಗೆ ಬೆಲೆ ಕೊಡುವುದು ಕಡಿಮೆಯೇ.

ವಿವಾಹ ಸಂಸ್ಥೆಯನ್ನು ಕಟ್ಟುವುದರಲ್ಲಿಯೇ ಆಸಕ್ತರಾಗಿರುವ ಮಾಸ್ತಿಗೆ ವೈಧವ್ಯದ ಬದುಕು ಅಷ್ಟಾಗಿ ಕಾಡುವುದಿಲ್ಲ. ಆ ಕುರಿತು ಮಾಸ್ತಿ ಚಿಂತಿಸುವುದೇ ಇಲ್ಲ. ಅವರು ಯೋಚಿಸುವುದು ವಿಧವೆಗೆ ಇತರರಿಂದ ಒದಗಬಹುದಾದ ತೊಂದರೆಯನ್ನು ಮಾತ್ರ. ಆದರೆ ವಿಧವೆಗೆ ಮರುಮದುವೆ ಮಾಡುವ ಕಡೆಗೆ ಅವರು ಮನಸ್ಸು ಮಾಡುವುದಿಲ್ಲ. ಆಕೆಗೆ ಧೈರ್ಯ ಕೊಡುವ ಕೆಲಸವನ್ನೂ ನಿರ್ವಹಿಸುವುದಿಲ್ಲ. ಹೊರತಾಗಿ ಅಂಥ ಸಂಕಷ್ಟ ಎದುರಿಸುವ ಬದಲು ಜೀವವನ್ನೇ ತೆಗೆದುಕೊಳ್ಳುವುದು ಲೇಸು ಎಂಬ ನಿರ್ಧಾರಕ್ಕೆ ಬರುವುದನ್ನು ಅವರು ತಡೆಯುವುದಿಲ್ಲ. ರಾಜಾರಾಂ ಮೋಹನ ರಾಯರು ವಿಧವಾ ವಿವಾಹದ ಕುರಿತು ಮಾಡಿದ ಚಳವಳಿಯನ್ನು ಮಾಸ್ತಿ ಒಪ್ಪುವುದಿಲ್ಲ. ಸಾಮಾಜಿಕ ವಾತಾವರಣ ಕೆಟ್ಟಿದ್ದು, ವಿಧವೆಗೆ ಮರ್ಯಾದೆಯಿಂದ ಬದುಕಲು ಕಷ್ಟವಿದೆ ಎಂಬ ಕಾರಣದಿಂದಲೂ ಮರು ಮದುವೆಯಿಂದ ಸಮಸ್ಯೆ ಪರಿಹಾರವಾಗುತ್ತದೆ ಎಂಬ ನಂಬಿಕೆ ಅವರಿಗೆ ಇಲ್ಲ. ಇದರಿಂದ ಗಂಡನ ಮೇಲೆ ಇದ್ದ ಪ್ರೀತಿ ಮರೆಯಾಗುವುದಿಲ್ಲ ಎಂಬ ದೃಢ ನಂಬಿಕೆಯನ್ನು ಹೊಂದಿರುವ ಮಾಸ್ತಿ ಅದಕ್ಕೆ ಅವಕಾಶ ಕೊಡುವುದಿಲ್ಲ. ಇದು ಹಿಂದೂ ಪರಿಕಲ್ಪನೆಯಲ್ಲಿ ಒಂದಾಗಿರುವ ಮುತ್ತೈದೆತನವನ್ನು ವೈಭವೀಕರಿಸಿದ್ದಾಗಿದೆ. ಈ ವೈಭವದ ಕುರಿತ ಭಾವನಾತ್ಮಕ ನಿಲುವು ಅದರಿಂದ ಮುಕ್ತವಾದ ಬದುಕಿಗೆ ಒಡ್ಡಿಕೊಳ್ಳದಿರುವುದನ್ನೂ ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ. [೧೦]

ವಾಸ್ತವ ಪ್ರಜ್ಞೆಯೊಂದಿಗೆ ಸ್ತ್ರೀಯ ಬದುಕಿನ ದುರಂತದ ಕಡೆಗೆ ದೃಷ್ಟಿ ಹಾಯಿಸದೇ ಉಳಿಯುವ ಮಾಸ್ತಿಗೆ ಹೆಣ್ಣಿನ ಕಷ್ಟನಷ್ಟ, ಮನಸ್ಸು-ಭಾವನೆಗಳು ಯಾವುವೂ ತಟ್ಟುವುದಿಲ್ಲ. ಇದರ ಅರ್ಥ

---

೧೦ ಈ ಕುರಿತ ನಿಲುವನ್ನು ಸ್ಪಷ್ಟವಾಗಿ ಮಾಸ್ತಿ ಪ್ರತಿಪಾದಿಸಿರುವುದರ ಕುರಿತು ಪ್ರಬಂಧದ ಅಧ್ಯಾಯ ೩ರಲ್ಲಿ ಚರ್ಚಿಸಲಾಗಿದೆ.

ಹೆಣ್ಣಿನ ಸ್ಥಿತಿಗೆ ಮಾಸ್ತಿ ಅನುಕಂಪ ತೋರಬೇಕಿತ್ತು ಎಂದಲ್ಲ. ಆ ಕುರಿತ ಸಮಸ್ಯೆಗಳನ್ನು ತಡೆಯುವ ನಿಟ್ಟಿನಿಂದಲಾದರೂ ಸಾಹಿತ್ಯ ಶಕ್ತಿಯನ್ನು ಮಾಸ್ತಿ ಬಳಸಿಕೊಳ್ಳಬಹುದಿತ್ತು. ಆದರೆ ಅವರು ಅವರನ್ನು ರೂಪಿಸಿದ ಪುರುಷಪರ ಆಲೋಚನೆಯ ಸಮಾಜ ಮತ್ತು ಸಂಸ್ಕೃತಿಯ ಒಳಗೆ ಬದುಕುತ್ತಿರುವುದರಿಂದ, ಅದನ್ನೇ ಅವರು ಒಪ್ಪಿಕೊಂಡಿರುವುದರಿಂದ ಅದರಿಂದ ಹೊರಗೆ ನಿಂತು ಯೋಚಿಸುವುದು ಅವರಿಗೆ ಕಷ್ಟವಾಗುತ್ತದೆ.

ಪಾತಿವ್ರತ್ಯ ಪಾಲನೆಯ ಕುರಿತು ಕೂಡಾ ಮಾಸ್ತಿಗೆ ಅಪಾರ ನಂಬಿಕೆ ಇದೆ. ಪರಸ್ಪರ ಗಂಡ ಹೆಂಡಿರ ನಡುವೆ ಇರಬೇಕಾದ ಆದರ-ಪ್ರೀತಿ ವಿಶ್ವಾಸಗಳನ್ನು ಹೇಳುವುದಕ್ಕಿಂತ ಹೆಚ್ಚಾಗಿ ಹೆಣ್ಣು ತನ್ನ ಗಂಡನ ಮೇಲೆ ಗೌರವ ಭಕ್ತಿ ಇಡಬೇಕಾದುದನ್ನು ಪ್ರೇರೇಪಿಸುತ್ತಾರೆ. ಅದು ಸನಾತನ ವೈದಿಕ ಧರ್ಮದ ಮೂಲ ನೆಲೆಯಾಗಿದ್ದು ಅದನ್ನೇ ಮತ್ತೆ ಸ್ಥಾಪಿಸಿ ಅದನ್ನೊಂದು ಮೌಲ್ಯವಾಗಿ ಕಂಡು ಬಾಳಿಸುತ್ತಾರೆ.

ಶೀಲದ ಪ್ರಜ್ಞೆ ಮಾಸ್ತಿಯವರಲ್ಲಿ ಢಾಳಾಗಿ ವಿಜೃಂಭಿಸುತ್ತದೆ. ಶೀಲ ಹೆಣ್ಣಿನ ಬಹುದೊಡ್ಡ ಸೊತ್ತು. ಅದನ್ನು ಕಳೆದುಕೊಳ್ಳುವುದು ಎಂದರೆ ಅವಳನ್ನು ಅವಳೇ ಕೊಂದುಕೊಂಡಂತೆ ಎಂಬ ಸನಾತನ ಧರ್ಮ ಅನುಸರಿಸಿದ ಸಮಾಜದ ನಂಬಿಕೆಯನ್ನು ಹಾಗೇ ಒಪ್ಪಿಸಿಕೊಂಡಿದ್ದಾರೆ. ಮತ್ತು ಅದನ್ನೇ ಮರು ಸ್ಥಾಪನೆ ಮಾಡುವಲ್ಲಿ ಪ್ರಯತ್ನಿಸಿದ್ದಾರೆ. ಶೀಲ ರಕ್ಷಣೆ ಮಾಡಿಕೊಳ್ಳುವುದು ಅಸಾಧ್ಯವಾದಾಗ ಜೀವವನ್ನೇ ತೆಗೆದುಕೊಳ್ಳಬೇಕಾದದ್ದು ಆ ಕಾಲದ ಮೌಲ್ಯವಾಗಿ ಸ್ವೀಕಾರವಾಗಿತ್ತು. ಅದಕ್ಕೆ ಹೆಣ್ಣು ಕಿಂಚಿತ್ತೂ ವಿಚಲಿತಳಾಗದೇ ಒಳಗಾಗುತ್ತಿದ್ದುದನ್ನು ಮಾಸ್ತಿಯವರೂ ಮಾನ್ಯ ಮಾಡಿದ್ದಾರೆ. ಪುರುಷ ಪ್ರಾಧಾನ್ಯ ವ್ಯವಸ್ಥೆ ಈ ಶೀಲಕ್ಕಾಗಿ ಪ್ರಾಣ ತ್ಯಾಗ ಮಾಡಬೇಕಾದ ಅನಿವಾರ್ಯತೆಯನ್ನು ಹೇರಿದ್ದು ಹೆಣ್ಣಿನ ಪರಿಶುದ್ಧತೆಯ ಪ್ರಜ್ಞೆಯಿಂದ. ಈ ಪ್ರಜ್ಞೆಯ ಹಿಂದಿನ ಜೀವ ವಿರೋಧಿ ಪ್ರಕ್ರಿಯೆಯನ್ನು ಮಾಸ್ತಿ ಕಿಂಚಿತ್ತೂ ವಿಮರ್ಶಿಸದೆ ಹಾಗೆ ಹಾಗೆಯೇ ಒಪ್ಪಿಕೊಂಡು ಅಧನ್ನು ಪಾಲಿಸುವಂತೆ ಒತ್ತಾಸೆ ನೀಡುತ್ತಾರೆ. ಈ ಅಮಾನವೀಯತೆಯನ್ನು ಪರಂಪರೆಯ ಮೌಲ್ಯವಾಗಿ ಸ್ವೀಕರಿಸಿ ನಿರ್ವಿವಾದವೆಂಬಂತೆ ಪ್ರತಿಷ್ಠಾಪಿಸುತ್ತಾರೆ. ಬದುಕನ್ನು ಅಷ್ಟೂ ಪ್ರೀತಿಸುವ ಮಾಸ್ತಿ ಹೆಣ್ಣಿನ ಬದುಕನ್ನು ಶೀಲದ ರಕ್ಷಣೆಯ ನೆಪದಲ್ಲಿ ಕೊನೆಗಾಣಿಸುವಲ್ಲಿ ಉತ್ಸುಕರಾಗುವುದು ಪ್ರಶ್ನಾರ್ಹವಾಗುತ್ತದೆ. ಶೀಲದ ಪ್ರಶ್ನೆ ಕಾಡುವುದು ಹೆಣ್ಣಿಗೆ ಮಾತ್ರ! ಅದಕ್ಕಾಗಿ ಆಕೆ ತನ್ನನ್ನು ತಾನು ಕೊಂದುಕೊಳ್ಳುತ್ತಾಳೆ. ಗಂಡಿಗೆ ಆ ಪರಿಧಿಯೇ ಇಲ್ಲದಿರುವ ಅಸಮತೋಲನವನ್ನು ಮಾಸ್ತಿ ಎಲ್ಲೂ ಚರ್ಚಿಸುವುದಿಲ್ಲ. ಮತ್ತು ಇಲ್ಲಿ ಶೀಲ ಗಂಡಿಗೆ ಅನ್ವಯಾಗುವುದೂ ಇಲ್ಲ . ಶೀಲವನ್ನು ಕಳೆದುಕೊಳ್ಳಬಾರದ ಮೌಲ್ಯವನ್ನೇ ಪ್ರತಿಷ್ಠಾಪಿಸುವುದಕ್ಕೆ ಮಾಸ್ತಿ ಸ್ತ್ರೀಯರು ಮನೆಬಿಟ್ಟು ಹೊರಗೆ ಹೋಗದಂತೆ ತಡೆಯುತ್ತಾರೆ. ಹೊರಗೆ ದುಡಿಯುವುದರಿಂದ ಸ್ತ್ರೀ ದೈಹಿಕವಾಗಿ ಹಾಗೂ ಮಾನಸಿಕವಾಗಿ ಆಘಾತಕ್ಕೀಡಾಗಬೇಕಾಗುತ್ತದೆ ಎಂದೇ ಭಾವಿಸಿ ವಾದಿಸುತ್ತಾರೆ. ಅದಕ್ಕೆ ಅವರು

ವಿನಾಕಾರಣ ತಮ್ಮನ್ನುಒಡ್ಡಿಕೊಳ್ಳಬಾರದಂತೆ ತಡೆಯಲು ಪ್ರಯತ್ನಿಸುತ್ತಾರೆ. ಇದರಿಂದ ಆಕೆಗೆ ಅಭದ್ರ ಸ್ಥಿತಿ ಒದಗುತ್ತದೆ ಎಂದು ಪರಿಚಯಿಸುವ ಮಾಸ್ತಿಗೆ ಸ್ತ್ರೀಯರಿಗೆ ದಕ್ಕಬೇಕಾದ ಆರ್ಥಿಕ ಸ್ವಾವಲಂಬನೆಯಲ್ಲಾಗಲೀ, ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆಯಾಗಲೀ ವಿಶ್ವಾಸವಿಲ್ಲ. ಅದು ಕೇವಲ ಗಂಡಸಿನ ಜವಾಬ್ದಾರಿ. ಈ ಹೊಣೆಗಾರಿಕೆಯಿಂದ ಆತ ಹೆಂಡತಿಯನ್ನು ಸಲಹಬೇಕು ಎಂಬುದನ್ನೇ ಬಲವಾಗಿ ಮಾಸ್ತಿ ನಂಬಿದ್ದಾರೆ. ಅದಕ್ಕೆ ಅವರು ಕೊಡುವ ಸಮಜಾಯಿಷಿ ಇದು: 'ಮೊದಲ ಕೆಲಸ ಏನು ಸ್ವಾಮಿ? ಅನ್ನ ಅಲ್ಲವೋ? ಆ ಮೇಲೆ ಯಾರು ಬೇಕಂತ ಅಂದರು? ಹೆಂಗಸು ಹೊರಗೆ ಹೋಗೋದು ಬೇಡ ಅಂತ ಅಂದರು, ಯಾಕೆ? ಇವತ್ತು ಕೆಲಸಕ್ಕೆ ಹೋಗತಾ ಇರೋ ಹೆಂಗಸಿನ ಗತಿ ಏನಾಗಿದೆ? ಬಲ್ಲಿರಾ? ಅಥವಾ ಕಾಣಿರೋ? ಕಂಡಿದ್ದರೆ ಇದೇ ಅವಸ್ಥೆ ಮುಂದುವರಿಯಲಿ ಅಂತೀರೋ? ನನಗೆ ಇಷ್ಟ ಇಲ್ಲ. ನನ್ನ ಮಕ್ಕಳು ಹೊರಗೆ ಹೋಗಿ ಯಾರ ಹತ್ತಿರಾನೂ ನಿಂತುಕೊಂಡು, ಕೆಲಸಾ ಕೊಡಿ ಸಾರ್ ಅಂತಂದು ಅವನು ಹೇಳಿದ ಮಾತನ್ನು ಬರಕೊಂಡು ಕಾಸು ತಗೊಂಡು ಬರೋದು ನನಗೆ ಇಷ್ಟ ಇಲ್ಲ ಅಂತ ಹೇಳತೇನೆ. ನನ್ನ ಹೆಣ್ಣು ಮಕ್ಕಳ ವಿಷಯಕ್ಕೆ ತುಂಬ ಕನಿಕರದಿಂದ ವಿಶ್ವಾಸದಿಂದ ಹೇಳತೇನೆ ನಾನು. ಮದುವೆ ಆದ ಗಂಡಂದಿರು ಸಂಪಾದನೆ ಮಾಡಿ ನೋಡಿಕೊಳ್ಳಬೇಕು ಅವರನ್ನು.

ಹೆಣ್ಣಿನ ಪಾಡು ಏನೂ ಅಂತ ಅಂದರೆ, ಗಂಡನಾದವನಿಗೆ ಯಾರೂ ಬಲವಂತ ಮಾಡಿ ಏನೂ ಮಾಡೂಕಾಗಲ್ಲ. ಹೆಣ್ಣು ಹಾಗಲ್ಲ. ಮುಟ್ಠಾಳನಾದವನು ಆಕೆಯನ್ನು ಕೆಡಿಸುತ್ತಾನೆ. ಅಶುದ್ಧವಾದ ಕಣ್ಣುಗಳಿಂದ ನೋಡುತ್ತಾನೆ. ಇಷ್ಟವೇ ನಿಮಗೆ ಅದು?[೧೧] ಎಂದು ಪ್ರಶ್ನಿಸುವಲ್ಲಿ ಪುರುಷ ಸ್ತ್ರೀಯನ್ನು ನೋಡುವ ದೃಷ್ಟಿಕೋನದ ಕುರಿತು ಅಸಹನೆ ಇದೆ. ಆದರೆ ಆ ವಾತಾವರಣವನ್ನು ತಡೆಯುವಲ್ಲಿ, ಮನಃ ಪರಿವರ್ತನೆ ಮಾಡುವಲ್ಲಿ ವಿಚಾರ ಮಾಡದ ಮಾಸ್ತಿ ಅಂಥ ಪರಿಸ್ಥಿತಿಗೆ ಎದುರಾಗದಂತೆ ಅಡಗಿಕೊಳ್ಳುವಂತೆ ಪ್ರೇರಿಸುತ್ತಾರೆ. ಸಮಸ್ಯೆಯೊಂದಿಗೆ ಮುಖಾಮುಖಿಯಾಗಿ, ಹೋರಾಡಿ ಗೆಲ್ಲುವಂತೆ ಕೂಡಾ ಧೈರ್ಯ ತುಂಬುವ ಬದಲು ಅಧೀರತೆಯನ್ನು ತುಂಬಿ ಹಿಂಜರಿಯುವಂತೆ ಮಾಡಿದ್ದಾರೆ. ಇದು ಸ್ತ್ರೀ ತನ್ನ ಶೀಲ ಕಾಪಾಡಿಕೊಳ್ಳುವಲ್ಲಿ ಸದಾ ಜಾಗೃತಳಾಗಿರಬೇಕು ಎಂಬುದನ್ನು ಹೇಳುವುದರೊಂದಿಗೆ ಪುರುಷನಿಗೆ ಅಧೀನವಾಗಿ ಮನೆಯೊಳಗೆ ಮನೆಯ ಕರ್ತವ್ಯಗಳನ್ನು ಪೂರೈಸುತ್ತ ಉಸಿರಾಡಬೇಕಾದದ್ದನ್ನು ಸ್ತ್ರೀಯೇ ಒಪ್ಪಿಕೊಳ್ಳುವಂತೆ ಮಾಸ್ತಿ ಪ್ರೇರಿಸುತ್ತಾರೆ.

ವಿಶ್ವದ ನೆಲೆಯಿಂದಲೇ ಮನುಷ್ಯ ಸಂಬಂಧ ಉತ್ತಮ ರೀತಿಯಲ್ಲಿ ಬೆಳೆದು ಬರಬೇಕೆಂದು ನಂಬಿದ್ದ ಮಾಸ್ತಿಗೆ ಜಾತಿಯ ಕಟ್ಟಳೆಗಳನ್ನು ಮೀರುವುದಕ್ಕೆ ಕತೆ ಬರೆಯುವ ಸಂದರ್ಭದಲ್ಲಿ

---

೧೧ ಪು.೫೭ ಅಂಕಣ ಸಂ.೩ ಮಾರ್ಚ್ ೧೯೮೫ ಪತ್ರಿಕೆ ಮಾಸ್ತಿಯವರೊಂದಿಗೆ ನಡೆಸಿದ ಸಂದರ್ಶನದಲ್ಲಿ

ಸಾಧ್ಯವಾಗಿಲ್ಲ. ಅದು ಆ ಕಾಲದ ಸಾಮಾಜಿಕ ಕಟ್ಟುಪಾಡು, ನಂಜಿಕೆಯನ್ನು ಪ್ರತಿನಿಧಿಸುತ್ತದೆ ಎನ್ನುವುದು ನಿಜ. ವಾಸ್ತವದಲ್ಲಿನ ಅಸಮಾನತೆಯನ್ನು ಮೀರಬೇಕಾದ ಕಾಳಜಿಯನ್ನು ಮಾಸ್ತಿ ತೋರಿಲ್ಲ. ಅಲ್ಲಿ ಸಂಸ್ಕೃತಿಯ ಕಟ್ಟುಪಾಡುಗಳು ಒಂದುಗೂಡಿಸುವುದಕ್ಕೆ ಅಡ್ಡಿಯಾಗುತ್ತದೆ. ಒಂದು ಸಂಸ್ಕೃತಿಯೊಂದಿಗೆ ಇನ್ನೊಂದು ಸಂಸ್ಕೃತಿಯನ್ನು ಮಿಳಿತಗೊಳಿಸುವುದನ್ನು ಅವರು ಒಪ್ಪುವುದಿಲ್ಲ. ಅದನ್ನು ಒಟ್ಟುಗೂಡಿಸಬೇಕಾದಲ್ಲಿ ತಮ್ಮ ತಮ್ಮಷ್ಟಕ್ಕೇ ಬದಲಾವಣೆ ತರುವುದಲ್ಲ. ರಾಷ್ಟ್ರ ರಾಷ್ಟ್ರಗಳ ನಾಯಕರು ಜೊತೆಯಾಗಿ ಚರ್ಚಿಸಿ ನಿರ್ಧಾರಕ್ಕೆ ಬರಬೇಕೆಂಬುದೇ ಮಾಸ್ತಿಯವರ ನಿಲುವು. ಆಗ ವೈದಿಕ ಧರ್ಮದ ಹಾದಿ ವಿಶ್ವಾದ್ಯಂತವೂ ಪಾಲಿತವಾಗಬೇಕು ಎಂಬ ಕಳಕಳಿಯೂ ಇದೆ. ಆ ಹಿನ್ನೆಲೆಯಲ್ಲಿಯೇ ಮನುಷ್ಯ ಸಂಬಂಧ ಬೆಳೆಯಬೇಕೆಂದೂ ಹೇಳುತ್ತಾರೆ.

ಜನಪದ ಸಂಸ್ಕೃತಿಯ ಪ್ರೇರಣೆ

ಮಾಸ್ತಿ ಅವರ ಮೇಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನಪದರ ಬದುಕಿನ ಮಾದರಿಗಳು ಬಹಳ ಪ್ರಭಾವ ಬೀರಿವೆ. ಇವರು ಅವೈದಿಕರು ಅಥವಾ ಕೆಳವರ್ಗದವರೆಂದು ಕರೆಯಿಸಿಕೊಳ್ಳುವವರು. ಬದುಕಿನ ಕುರಿತು ಯಾವುದೇ ಭ್ರಮೆಗಳನ್ನು ಹೊಂದಿರದ ಜನಪದರು ಬೆಲೆ ಕೊಡುವುದು ಸ್ವಾತಂತ್ರ್ಯ, ಸ್ವಾಭಿಮಾನವನ್ನು ಉಳಿಸಿಕೊಳ್ಳುವ ಬದುಕನ್ನು. ಅಲ್ಲಿನ ಸ್ತ್ರೀಯರು ತಮಗಾಗುವ ಎಲ್ಲ ಅನ್ಯಾಯಗಳನ್ನು ಪ್ರತಿಭಟಿಸುತ್ತಾರೆ. ಪುರುಷ ತನ್ನ ಸ್ವಾಭಿಮಾನಕ್ಕೆ ಧಕ್ಕೆ ತಂದಾಗ ಆತನನ್ನೇ ತೊರೆದು ಹೋಗುವ ಧೈರ್ಯ ತೋರುತ್ತಾರೆ. ಲೈಂಗಿಕ ಸ್ವಾತಂತ್ರ್ಯವನ್ನೂ ಅವರು ಹೊಂದಿದ್ದರು. ಒಂದು ನೆಲೆಯಲ್ಲಿ ಅವರು ತೆಗೆದುಕೊಳ್ಳುವ ಇಂಥ ನಿರ್ಧಾರಗಳು ಶೋಷಿಸುವ ವರ್ಗಕ್ಕೆ ಹೊಡೆಯುವ ಸಡ್ಡಾಗಿ ಕೂಡ ಕಾಣಬಹುದಾಗಿದೆ. ಆದರೆ ಮಾಸ್ತಿ ಆ ಬದುಕನ್ನು, ಪ್ರತಿಭಟನೆಯನ್ನು ಒಂದು ಮೌಲ್ಯವಾಗಿ ಕಾಣುವುದಿಲ್ಲ. ಸಾಮಾನ್ಯವಾಗಿ ಜನಪದರ ಬದುಕು ಸಾಗುವುದೇ ಹೀಗೆ ಎಂದು ಗುರುತಿಸುವುದನ್ನು ಅವರು ಅಲ್ಲಗಳೆಯುತ್ತಾರೆ. ಅವರ ನೆಲೆಯಲ್ಲಿ ಪ್ರತಿಭಟನೆ ಯೇನಿದ್ದರೂ ಹಿಂಸೆಯ ಪರಮಾವಧಿಗೇರಿದಾಗ ಮಾತ್ರ ನಡೆಯಬೇಕು. ಆಗ ಅದು ಒಪ್ಪಿತವಾಗುತ್ತದೆ. ಹೆಣ್ಣು ಸರಿ ಅನ್ನಿಸಿಕೊಳ್ಳುತ್ತಾಳೆ. ಅಲ್ಲದೇ ಹೋದರೆ, ಗಂಡ, ಕುಟುಂಬ ಯಾವುದೇ ರೀತಿಯ ಹಿಂಸೆಯನ್ನು ಆಕೆಗೆ ಕೊಡದೇ ಇದ್ದ ಸಂದರ್ಭದಲ್ಲಿ, ಗಂಡನಾದವ ಹೆಂಡತಿಯನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾಗಲೂ ಅಲ್ಲಿಂದ ಆಕೆ ಹೊರಬರುವುದು ಒಪ್ಪಿತವಾಗುವುದಿಲ್ಲ. ಈ ಪ್ರೀತಿ ಉಪಚಾರಗಳೆಲ್ಲವೂ ಸರಿಯೇ. ಆದರೆ ಅದು ಹೆಣ್ಣಿಗೆ ಸಹ್ಯವಾಗುವುದಿಲ್ಲ. ಮನಸ್ಸನ್ನು ಅವನಿಗೆ ಕೊಡಲೊಪ್ಪುವುದಿಲ್ಲ. ಇನ್ನೊಂದೆಡೆಗೆ ಅಥವಾ ಇನ್ನೊಬ್ಬನೆಡೆಗೆ ಅದು ಆಕರ್ಷಿತವಾಗಿ ಹರಿಯುತ್ತದೆ. ಅದು ವ್ಯಕ್ತಿ ಸ್ವಾತಂತ್ರ್ಯದ ನೆಲೆಯಲ್ಲಿ

ಸರಿಯೆಂದೇ ಸಮರ್ಥಿಸಿಕೊಳ್ಳಬಹುದು. ಆದರೆ ಮಾಸ್ತಿಯವರು ಇಂಥ ನಡವಳಿಕೆಗಳನ್ನು ಸ್ವೀಕರಿಸುವುದಿಲ್ಲ. ಇವು ಸಮಾಜವನ್ನು, ಕುಟುಂಬವನನ್ನು, ಆರೋಗ್ಯಕರ ಸಂಬಂಧವನ್ನು ವಿಘಟಿಸುತ್ತದೆ. ಹೆಣ್ಣಿರುವುದೇ ಸಂಬಂಧವನ್ನು, ಸಮಾಜವನ್ನು ವಿಕಸಿಸುವುದಕ್ಕೆ . ಅವಳೇ ಇಂಥ ಸ್ವಭಾವವನ್ನು ಮರೆದರೆ ಬದುಕು ತನ್ನ ಅರ್ಥ ಕಳೆದುಕೊಳ್ಳುತ್ತದೆ ಎಂದು ಆತಂಕಗೊಳ್ಳುತ್ತಾರೆ. ಆದುದರಿಂದಲೇ ಅವರು ಕತೆಗಳ ಸಂದರ್ಭದಲ್ಲಿ ತಮ್ಮಿಷ್ಟಾನುಸಾರವಾಗಿ, ಗಂಡನನ್ನು ನೋಯಿಸಿಯೂ ತೆಗೆದುಕೊಳ್ಳುವ ತೀರ್ಮಾನಗಳು ಸೋಲುಣ್ಣುವಂತೆ ಮಾಡುತ್ತವೆ. ಕೊನೆಗೆ ತನ್ನದೇ ತಪ್ಪು ಎಂದು ಮರುಗಿ, ಪಶ್ಚಾತ್ತಾಪಪಟ್ಟು ಪುರುಷನಿಗೆ ಅಂದರೆ ಪುರುಷ ಪ್ರಭುತ್ವಕ್ಕೆ ಶರಣಾಗುವಂತೆ ಮಾಡುತ್ತಾರೆ. ಇದು ಸನಾತನ ವೈದಿಕ ಪರಂಪರೆಯ ನಂಬಿಕೆಯೊಳಗೇ ಹೆಣ್ಣನ್ನು ಬದ್ಧಳಾಗಿರುವಂತೆ ಮಾಡಿದ್ದಾಗಿದೆ. ಈ ಮೌಲ್ಯವನ್ನು ಪ್ರತಿಪಾದಿಸುವುದಕ್ಕಾಗಿಯೇ ಗಂಡು 'ಸರಿ' ಯಾಗಿರುತ್ತಾನೆ. ಹೆಣ್ಣು ತಪ್ಪು ಮಾಡುವವಳಾಗುತ್ತಾಳೆ. ಹೆಣ್ಣು ಮಾಡುವ ತಪ್ಪುಗಳೆಂದರೆ ಗಂಡಿಗೆ ಬಗ್ಗದಿರುವುದು, ಅವನನ್ನೇ ಎದುರಿಸಿ ಅವನ ಆಳ್ವಿಕೆಗೆ ಸಿಗದಂತೆ ಹೋಗುವುದು. ಇಲ್ಲಿಯ ಹೆಣ್ಣು 'ಗಂಡ' ಎಂಬ ವ್ಯಕ್ತಿಯನ್ನು ವೈಭವೀಕರಿಸುವುದಿಲ್ಲ. ಅವರವರ ಸರಿ, ತಪ್ಪುಗಳಿಗೆ ಅವರು ಬದ್ಧರಾಗಿರುವಂತೆ ಬಾಳುತ್ತಾರೆ. ಆದರೆ ಆ ಎಲ್ಲ ನಡವಳಿಕೆಗಳನ್ನು ಒಪ್ಪಿಕೊಳ್ಳಬಾರದು ಮತ್ತು ಅದನ್ನು ಬದಲಾಯಿಸುವ ಕಾರ್ಯವೂ ನಡೆಯಬೇಕೆಂದು ಮಾಸ್ತಿ ಅವರ ಮನಸ್ಸು ತುಡಿಯುತ್ತದೆ. ಅದಕ್ಕಾಗಿಯೇ ಅವರು ಅಲ್ಲಿನ ಹೆಣ್ಣಿನ ಸ್ವಾತಂತ್ರ್ಯವನ್ನು ಗಂಡಿನ ಒಳ್ಳೆಯತನವನ್ನು ಆಪತ್ತಾಗುವಂತೆ ಪರಿಚಯಿಸುತ್ತ ಗಂಡನನ್ನು ತೊರೆಯುವುದು ಅವನಿಗೆ ಮಾಡುವ ಅನ್ಯಾಯವಾಗಿ ಕಾಣುತ್ತಾರೆ. ಅವನಿಗೇ ಬದ್ಧಳಾಗಿರಬೇಕಾದಂತೆ ಮಾಡಬೇಕಾದರೆ ಅವಳನ್ನು ತಿದ್ದುವ ಮತ್ತು ಕ್ಷಮಿಸುವ ನೆಲೆಯಿಂದಲೇ ಸಾಧ್ಯವಾಗಬೇಕು ಎಂದು ತೀರ್ಮಾನಿಸಿದ್ದಾರೆ. ಅದಕ್ಕಾಗಿಯೇ ಗಂಡು, ತಪ್ಪು ಮಾಡಿದವಳನ್ನೂ ಕ್ಷಮಿಸಿ ಸ್ವೀಕರಿಸಿ ತಿದ್ದುತ್ತಾನೆ. ಇದು ಹಿರಿದಾದ ವೈದಿಕ ಪರಂಪರೆಯ ದೊಡ್ಡಗುಣದ ಪ್ರತೀಕವೂ ಆಗಿರುವಂತೆ ತೋರಿಸಿದ್ದಾರೆ. ಸರಿ ತಪ್ಪುಗಳನ್ನು ನಿರ್ಧರಿಸುವಲ್ಲಿ ಪ್ರವೇಶ ಪಡೆಯುವುದು ಸನಾತನ ವೈದಿಕ ಧರ್ಮವೇ. ಇದು ಒಂದು ರೀತಿಯಲ್ಲಿ ಸನಾತನ ವೈದಿಕ ಧರ್ಮದ ನಿಲುವುಗಳು, ಬದುಕಿನ ರೀತಿಗಳನ್ನು ಅವೈದಿಕರ ಬದುಕಿಗೂ ತಿಳಸಿಕೊಡುವ ನಿಟ್ಟಿನಲ್ಲಿ ತುಡಿಯುವುದಾಗಿದೆ. ತಿಳಿದವರು ತಿಳಿಯದವರಿಗೆ ತಿಳಿಸಿಕೊಡಬೇಕಾದ ತತ್ವವನ್ನು ಹೇಳುವ ಮಾಸ್ತಿ ಆ ಧೋರಣೆಯನ್ನೇ ಇಲ್ಲಿ ತಳೆದಿದ್ದಾರೆ. ಇಲ್ಲಿ ವೈದಿಕರು ಎಲ್ಲವನ್ನೂ ಬಲ್ಲವರು, ಅವೈದಿಕರು ಆ ತಿಳಿವಳಿಕೆಯಿಂದ ದೂರ ಇರುವವರು ಎಂದು ಊಹಿಸಿ ಅವರಿಗೆ ವೈದಿಕ ಧರ್ಮದ ರೀತಿ-ನೀತಿ-ರಿವಾಜುಗಳನ್ನು ತಿಳಿಸಿ ಹೇಳಿ ಅಳವಡಿಸಿಕೊಳ್ಳುವಂತೆ ಪ್ರೇರಿಪಿಸುತ್ತಾರೆ. ಅಂದರೆ ಸನಾತನ ವೈದಿಕ ಧರ್ಮ ಜನಪದರ ಚಲನಶೀಲತೆ ಪಡೆದ ಬದುಕನ್ನು ತನ್ನ ಸ್ಥಿರೀಕೃತ ಸಂಸ್ಕೃತಿಯ ಚೌಕಟ್ಟಿನೊಳಗೆ ಪ್ರಜ್ಞಾಪೂರ್ವಕವಾಗಿಯೇ ಬಂಧಿಸುತ್ತದೆ. ಯಾರದೇ

ಬದುಕು ರೂಪುಗೊಳ್ಳುವುದು, ಬಾಳುವುದು ಸಿದ್ಧ ಹಾಗೂ ಮೂಲ ಸಂಸ್ಕೃತಿಯ ಸ್ವೀಕಾರದಿಂದಲೇ ಎಂಬುದನ್ನು ಮಾಸ್ತಿ ದೃಢವಾಗಿ ಪ್ರತಿಪಾದಿಸುತ್ತಾರೆ. [೧೨]

ಜನಪದರ ಬದುಕು ಅವರ ಅನಿವಾರ್ಯ ಪರಿಸ್ಥಿತಿಗೆ ತಕ್ಕಂತೆ ರೂಪುಗೊಂಡದ್ದು. ವ್ಯವಸ್ಥೆಯನ್ನು ಪ್ರಶ್ನಿಸುವ, ವಿರೋಧಿಸುವ ಸ್ವಾತಂತ್ರ್ಯವನ್ನು ಉಳಿಸಿಕೊಂಡದ್ದು ಹೆಣ್ಣು ತಾನು ಬದುಕಬೇಕಾದ ಅನಿವಾರ್ಯತೆಯಿಂದ. ಇಲ್ಲಿ ಅವರು ಅಧೀನತೆಯನ್ನು ಬಯಸುವುದು ಕಡಿಮೆ. ಆದರೆ ಮಾಸ್ತಿ ಅವರಿಗೆ ಈ ಸ್ವಾತಂತ್ರ್ಯ ಮುಖ್ಯವಾಗುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆ ಸ್ಥಾಪಿಸಿದ ಸಂಸ್ಕೃತಿ ಹಾಗೂ ಬದುಕಿನ ಸಿದ್ಧ ಮಾದರಿಗೇ ಅವರು ಬದ್ಧರಾಗಿರಬೇಕೆಂದು ಸಾಧಿಸುತ್ತಾರೆ.

ಜನಪದರ ಜೀವನ ಮಾಸ್ತಿಯವರ ಮೇಲೆ ಪ್ರಭಾವ ಬೀರಿರುವುದನ್ನು ಅವರ ಸಾಹಿತ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಕಂಡುಕೊಂಡಿದ್ದರೂ ಪುರುಷೋತ್ತಮ ಬಿಳಿಮಲೆ ಅವರು ಮಾಸ್ತಿ ಕತೆಗಳಲ್ಲಿ ಜನಪದ ಪ್ರಜ್ಞೆಯನ್ನು ಕುರಿತಂತೆ 'ನವೋದಯದ ಸಂದರ್ಭದಲ್ಲಿ ಮಾಸ್ತಿ ಮತ್ತು ಗೊರೂರರು ಇವರಿಬ್ಬರೂ ಜನಪದವನ್ನು ತುಂಬ ಗಂಭೀರವಾಗಿ ಅಭ್ಯಾಸ ಮಾಡಿದವರು. ಈ ವಿಷಯವನ್ನು ವಿಮರ್ಶಕರು ಅಷ್ಟಾಗಿ ಗಮನಿಸದೇ ಹೋದರೂ ನನಗಿಲ್ಲಿ ಅದೇ ಮುಖ್ಯ ವಿಚಾರವಾಗಿ ತೋರುತ್ತದೆ' ಎಂದಿರುವುದು ಈ ನೆಲೆಯ ಹುಡುಕುವಿಕೆಗೆ ಇನ್ನಷ್ಟು ಪ್ರೇರಣೆ ನೀಡಿತು.[೧೩]

ಪಾಶ್ಚಾತ್ಯ ಓದಿನ ಪ್ರಭಾವ

ಪಾಶ್ಚಾತ್ಯರ ಆಗಮನ ಹಾಗೂ ಆಡಳಿತವು ದೇಶದ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಕ್ರಾಂತಿಯನ್ನೇ ಮಾಡಿತು. ಪರಿಣಾಮವಾಗಿ ವೈಚಾರಿಕತೆಯನ್ನೂ ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಕೈಗಾರಿಕೀಕರಣದ ಪ್ರವೇಶದಿಂದ ದೇಶ ಯಂತ್ರಗಳನ್ನು ಕಾಣುವಂತಾಯಿತು. ಬ್ರಿಟಿಷರು ದೇಶಕ್ಕೆ ತಂದಿತ್ತ ಸೌಲಭ್ಯಗಳೆಲ್ಲ ಅವರ ಅನುಕೂಲಕ್ಕೆ ಮಾಡಿಕೊಂಡವು. ಅವರಿಗೆ ಭಾರತವನ್ನು ಉದ್ಧಾರ ಮಾಡುವ ದೃಷ್ಟಿಕೋನವಿರಲಿಲ್ಲ. ಅವರಿಗಿದ್ದುದು ಕ್ರಿಶ್ಚಿಯನ್ ಧರ್ಮ ಪ್ರಸಾರ ಮಾಡುತ್ತ ಮತಾಂತರಕ್ಕೆ ಮನ ಒಲಿಸುವ ಉದ್ದೇಶ. ಈ ಕುರಿತ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದ ಕ್ರೈಸ್ತ ಮಿಶನರಿಗಳು ಭಾರತವನ್ನು ಧಾರ್ಮಿಕವಾಗಿ ಆಕ್ರಮಿಸಿ ಅದರ ಅಸ್ತಿತ್ವವನ್ನೇ ಕಸಿದುಕೊಳ್ಳುವುದಕ್ಕೆ

---

೧೨ ಮಾಸ್ತಿಯವರ ಆತ್ಮಕಥನ ಭಾವ ೧, ಭಾವ ೨, ಭಾವ ೩ ಹಾಗೂ ಆರಂಭದ ಆಂಗ್ಲ ಸಾಹಿತ್ಯ ಕೃತಿಯಲ್ಲಿ ನಮ್ಮ ಹೊಸ ಸಾಹಿತ್ಯದ ಆರಂಭ ಬರಹದಲ್ಲಿ ಮಂಡಿಸಿದ ವಿಚಾರಗಳು ಹಾಗೂ ಕತೆಗಳಲ್ಲಿ ಮಾಡಿದ ಪ್ರತಿಪಾದನೆಯ ಆಧಾರದಲ್ಲಿ ಚರ್ಚಿಸಲಾಗಿದೆ.

೧೩ ಪು.೧೯ ಮಾಸ್ತಿ: ಕತೆಗಳಲ್ಲಿ ಜನಪದ ಪ್ರಜ್ಞೆ, ಶಿಷ್ಟ ಪರಿಶಿಷ್ಟ, ಪುರುಷೋತ್ತಮ ಬಿಳಿಮಲೆ- ೧೯೯೨

ಯೋಜಿತರಾಗಿದ್ದರು. ಇದರ ಪರಿಣಾಮವಾಗಿ ಸ್ವದೇಶದ ಅಭಿಮಾನಿಗಳು ಹಾಗೂ ವೈದಿಕ ಧರ್ಮದ ಆರಾಧಕರು ಸಂಸ್ಕೃತಿಯ ಮೇಲಿನ ಗೌರವದಿಂದ ಪ್ರಶ್ನಿಸತೊಡಗಿದರು.

ಆದರೆ ಆಂಗ್ಲರು ಒದಗಿಸಿದ ಶಿಕ್ಷಣ ಸೌಲಭ್ಯದಿಂದ ಭಾರತೀಯರಿಗೆ ಹೆಚ್ಚಿನ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಾಯಿತು. ಜೊತೆಗೆ ವೈಚಾರಿಕತೆ, ಚಿಂತನಶೀಲ ಪ್ರವೃತ್ತಿಯನ್ನು ಬಳಸಿಕೊಳ್ಳುವುದಕ್ಕೂ ಸಾಧ್ಯವಾಯಿತು. ಶಿಕ್ಷಣದ ಪರಿಣಾಮವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕೂಡ ನವೀನ ಪ್ರಯೋಗ ಮಾಡುವುದೂ ಸಾಧ್ಯವಾಯಿತು. ಅಂದರೆ ಈ ಮೂಲಕ ಕ್ರಿಯಾಶೀಲತೆ ಮತ್ತು ಆಲೋಚನಾ ಶಕ್ತಿ, ಬರವಣಿಗೆ ಶಕ್ತಿಯನ್ನು ಪಡೆದುಕೊಂಡು ಅನ್ನಿಸಿದ್ದನ್ನು ಅಭಿವ್ಯಕ್ತಿಸುವುದಕ್ಕೆ ಅವಕಾಶ ಪಡೆದುಕೊಳ್ಳಲಾಯಿತು. ಈ ಕಾಲದ ಪ್ರಯೋಗ ನವೋದಯ ಪೂರ್ವದ ಸಾಹಿತ್ಯವಾಗಿ ಹೆಸರಿಸಿಕೊಂಡಿದೆ.

ಈ ಸಂದರ್ಭದಲ್ಲಿ ಸಾಹಿತ್ಯ ರಚಿಸುತ್ತಿದ್ದ ಮಾಸ್ತಿ ಅವರ ಮೇಲೂ ಪಾಶ್ಚಾತ್ಯ ಸಾಹಿತ್ಯದ ದಟ್ಟ ಪ್ರಭಾವ ಬೀರಿತ್ತು. ಇಂಗ್ಲೀಷ್ ಸಾಹಿತ್ಯವನ್ನು ಧಾರಾಳವಾಗಿ ಓದಿಕೊಂಡಿದ್ದ ಮಾಸ್ತಿ ಅವರನ್ನು ಅಲ್ಲಿನ ಚಾರಿತ್ರಿಕ ಹಾಗೂ ಸಾಮಾಜಿಕ ಬದುಕು ಬಹಳವಾಗಿ ಕಾಡಿತ್ತು. ಪಾಶ್ಚಾತ್ಯರ ಸರಕಾರದಲ್ಲೇ ನೌಕರಿ ನಿರ್ವಹಿಸುತ್ತಿದ್ದುದಿಂದ ಮಾಸ್ತಿ ಅವರಿಗೆ ಅವರ ಒಡನಾಟದಿಂದ ಪಾಶ್ಚಾತ್ಯ ಬದುಕು, ಆಲೋಚನೆಗಳನ್ನು ಅವರೊಂದಿಗಿದ್ದೇ ಅರ್ಥ ಮಾಡಿಕೊಳ್ಳುವುದಕ್ಕೂ ಸಾಧ್ಯವಾಯಿತು.

ಆಂಗ್ಲ ಸಾಹಿತ್ಯ ವಿಶೇಷವಾಗಿ ಪ್ರಭಾವ ಬೀರಿದ್ದರಿಂದಲೇ ಮಾಸ್ತಿ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಆಂಗ್ಲ ಸಾಹಿತ್ಯದ ಓದಿನ ಹಿನ್ನೆಲೆಯಲ್ಲಿ ತಿಳಿದುಕೊಂಡ ಪಾಶ್ಚಾತ್ಯರ ಬದುಕನ್ನು ಭಾರತದ ವಾಸ್ತವ ಬದುಕಿನೊಂದಿಗೆ ಒರೆಗೆ ಹೆಚ್ಚುತ್ತಾರೆ. ಅಲ್ಲಿನ ಸಂಸ್ಕೃತಿ ಮೌಲ್ಯವನ್ನು ಭಾರತೀಯ ಜೀವನ ರೀತಿಗೆ ಅಳವಡಿಸಿ ಸಾಂಸ್ಕೃತಿಕ ನೆಲೆಗಟ್ಟನ್ನು ಅಲುಗಾಡಿಸ ಹೊರಡುವುದಕ್ಕೆ ಪ್ರತಿರೋಧವಾಗಿಯೇ ಮಾಸ್ತಿ ಅಲ್ಲಿನ ಸಂಸ್ಕೃತಿ ಅಲ್ಲಿಗೆ ಇಲ್ಲಿನ ಸಂಸ್ಕೃತಿ ಇಲ್ಲಿಗೆ ಮೌಲ್ಯಯುತವಾದದ್ದಾಗಬೇಕು ಎಂದು ವಾದಿಸುತ್ತಾರೆ. ಆಯಾಯ ದೇಶಗಳ ಮೂಲ ಸಂಸ್ಕೃತಿಗೆ ಬದ್ಧರಾಗಿ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಮಾಡುವಂತೆ ಪ್ರೇರಿಸುತ್ತಾರೆ. ಕೆಲವೊಮ್ಮೆ ಭಾರತೀಯ ಜೀವನ ವಿಧಾನದ ಮೌಲ್ಯವನ್ನು ಮಾನ್ಯ ಮಾಡುವಂತೆ ವಿಶ್ವಕ್ಕೆ ಸಲಹೆ ಕೊಡುತ್ತಾರೆ. ಪಾಶ್ಚಾತ್ಯರ ಬಾಳಿನ ರೀತಿ ಕಿಂಚಿತ್ತೂ ಎಡೆ ಪಡೆಯದಂತೆ ಎಚ್ಚರ ವಹಿಸುವ ಮಾಸ್ತಿ ಅದನ್ನು ನಯವಾಗಿಯೇ ತಡೆಯುತ್ತಾರೆ. ವಿದೇಶಿಯರು ತಮ್ಮ ದೇಶ ಬಿಟ್ಟು ಭಾರತಕ್ಕೆ ಬಂದು ಸಂಸ್ಕೃತಿಯನ್ನು ಅಭ್ಯಸಿಸುವುದಕ್ಕೆ ಆಸ್ಪದ ಕೊಡುವ ಮಾಸ್ತಿ ಅವರು ಇಲ್ಲಿಯೇ ನೆಲೆ ನಿಲ್ಲುವುದಕ್ಕೆ ಆಸ್ಪದ ಕೊಡುವುದಿಲ್ಲ. ಭಾರತೀಯರೂ ವಿದೇಶಕ್ಕೆ ಹೋಗಿ ನೆಲೆಸುವುದನ್ನು ವಿರೋಧಿಸುತ್ತಾರೆ. ಆದರೆ ಆಯಾ ದೇಶಗಳ ಸಂಸ್ಕೃತಿಯನ್ನು ಅರಿತುಕೊಳ್ಳುವುದನ್ನು ಮತ್ತು ಅದರಲ್ಲಿ ವಿಶ್ವಕ್ಕೆ ಒಪ್ಪಿತವಾಗುವ ಮೌಲ್ಯವನ್ನು ಗೌರವಿಸುತ್ತಾರೆ.

ಬದುಕು ಸುಸೂತ್ರವಾಗಿ ಸಾಗಬೇಕಾದರೆ ಪ್ರತಿಯೊಂದು ದೇಶದಲ್ಲೂ ಅಲ್ಲಿನ ಪುರಾತನ ಧರ್ಮದ ಮೌಲ್ಯವನ್ನು ಸ್ವೀಕರಿಸಿದ ಜೀವನ ಪದ್ಧತಿಯನ್ನೇ ಅನುಸರಿಸಬೇಕಾಗುತ್ತದೆ. ಈ ತತ್ವವನ್ನು ಪಾಶ್ಚಾತ್ಯ ಮೂಲದ ಸ್ತ್ರೀಯರ ಬದುಕು, ನಿರ್ಧಾರ, ಸೋಲು - ಪಶ್ಚಾತ್ತಾಪ ಪಡುವುದರ ಮೂಲಕವೇ ಕತೆಗಳಲ್ಲಿ ಪ್ರತಿಪಾದಿಸುತ್ತಾರೆ.

ವಿವಾಹ ಸಂದರ್ಭದಲ್ಲಿ ಹೆಣ್ಣಿಗೆ ಆಯ್ಕೆಯ ಸ್ವಾತಂತ್ರ್ಯ ಕೊಡಬೇಕಾದ ಕುರಿತು ಹೇಳುವಲ್ಲಿ ಮಾಸ್ತಿ ಆಧುನಿಕ ವಿಚಾರಶೀಲತೆಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಆದರೆ ಅದು ವಿವಾಹ ಸಂಸ್ಥೆಗೆ ಹೆಣ್ಣನ್ನು ಒಪ್ಪಿಸುವುದಕ್ಕಾಗಿ ಮಾತ್ರ ಕೊಡುವ ಸ್ವಾತಂತ್ರ್ಯ ಎಂಬುದು ಅವರು ಸಂಸ್ಕೃತಿಯ ಪಾಲನೆಗೆ ತೊಡಗುವಲ್ಲಿನ ವಿಶೇಷ ಆಸ್ಥೆಯಿಂದ ತಿಳಿದುಬರುತ್ತದೆ.

ಸ್ವೇಚ್ಛೆಯನ್ನು ಬಯಸುವ ವಿದೇಶೀ ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯ ಅನಾರೋಗ್ಯಕರ ಸಮಾಜದ ಬೆಳವಣಿಗೆಗ ಕಾರಣವಾಗುತ್ತದೆ ಎಂದು ಅದನ್ನು ತಡೆಯಲು ಪ್ರಯತ್ನಿಸುತ್ತಾರೆ. ಅದರಿಂದ ಸಮಾಜ ಮಾತ್ರ ಅಲ್ಲ ತಾನೂ ಕೆಡಬೇಕಾಗುತ್ತದೆ. ತನ್ನ ನೆಮ್ಮದಿಯೇ ಕಳೆದುಕೊಳ್ಳಬೇಕಾಗಿ ಬರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ. ಅಂಥ ಪರಿಸ್ಥಿತಿಗಳಿಗೆ ಒಳಗಾಗಬಾರದಂತೆ ಭಾರತೀಯ ಸಂಸ್ಕೃತಿ ಪ್ರತಿಷ್ಠಾಪಿಸಿದ ಮೌಲ್ಯಗಳಿಗೇ ಬದ್ಧರಾಗಿ ಬದುಕಬೇಕಾದದ್ದನ್ನು ಮಾಸ್ತಿ ಪ್ರತಿಪಾದಿಸುತ್ತಾರೆ. ಹೆಣ್ಣಿನ ಬದುಕನ್ನು ಹೀಗೆ ಕತೆ ರಚನಾ ಸಂದರ್ಭಗಳಲ್ಲಿ ಬದುಕನ್ನು ಸನಾತನ ಸಂಸ್ಕೃತಿಯ ನೆಲೆಗಟ್ಟಿನಲ್ಲಿಯೇ ನಿಗ್ರಹಿಸುತ್ತಾ ಬಂದ ಮಾಸ್ತಿ ಆತ್ಮ ಚರಿತ್ರೆ ಬರೆಯುವ ಕಾಲಕ್ಕೆ ಬದಲಾದದ್ದು ಸ್ಪಷ್ಟವಾಗುತ್ತದೆ. ಅದಕ್ಕೆ ಕಾರಣ ಅವರು ಎಲ್ಲ ಧರ್ಮಗಳ ಸಾರವನ್ನು ಓದಿ ತಿಳಿದುಕೊಳ್ಳುವ ಪ್ರಯತ್ನಪಟ್ಟಿರುವುದು. ಅವರು ಬಹುಭಾಗ ಓದಿದ್ದು ಇಂಗ್ಲೀಷ್ ಗ್ರಂಥಗಳನ್ನೇ. ಓದಿನ ಹಿನ್ನೆಲೆಯಲ್ಲಿ ಅವರೊಂದು ನಿಶ್ಚಯಕ್ಕೆ ಬರುವುದು ಹೀಗೆ. ಪ್ರಚಾರದಲ್ಲಿರುವ ಧರ್ಮ, ಮತ, ಎಲ್ಲವೂ ಮನುಜ ಕುಲ ರೂಪಿಸಿಕೊಳ್ಳುತ್ತಿರುವ ಒಂದು ಧರ್ಮದ ಶಾಖೆಗಳು. ಸ್ಥಳ, ಸಂದರ್ಭ, ಮನುಷ್ಯರು ಬೇರೆ ಬೇರೆ ಎಂಬ ಕಾರಣದಿಂದ ಯೋಚನೆ ಬೇರೆಯಾಗಿ ನಂಬಿಕೆ ಬೇರೆ ಬೇರೆ ರೂಪದಲ್ಲಿ ಕಾಣುತ್ತದೆ. ಆದರೆ ಈ ಪ್ರಯತ್ನದ ಉದ್ದೇಶ ಒಂದೇ. ಮನುಷ್ಯನ ಜೀವನ ಚೆನ್ನ ಆಗಬೇಕು. ಆ ಚೆನ್ನ ಆದ ಜೀವನದಲ್ಲಿ ಮನುಜ ಕುಲ ಸುಖ ಕಾಣಬೇಕು. ಸುಖವನ್ನು ಕಾಣಲಿಲ್ಲ, ಕಷ್ಟವನ್ನೇ ಪಟ್ಟೆನು ಎನ್ನುವುದಾದರೆ, ಈ ಕಷ್ಟದಿಂದ ಕಳೆದುಕೊಂಡ ಸುಖದ ಹತ್ತರಷ್ಟು ಸುಖ ಈ ತ್ಯಾಗದಿಂದ ಮುಂದೆ ದೊರೆಯುತ್ತದೆ ಎಂಬ ನಂಬಿಕೆ ಇರಬೇಕು. ಕ್ರಮ, ಮಾರ್ಗ ಬೇರೆ ಎಂದು ಕಂಡರೂ ಗುರಿ ಒಂದೇ ಆದದ್ದರಿಂದ, ಮನುಜ ಕುಲದ ಕ್ಷೇಮವನ್ನು ಬಯಸುವವರು ಈಗ ಬಳಕೆಯಲ್ಲಿರುವ ಎಲ್ಲ ಧರ್ಮ ಮತಗಳನ್ನು ಸಮನ್ವಯಗೊಳಿಸಿ ಮನುಜ ಕುಲದ ಧರ್ಮ ಒಂದೇ, ಅದರ ಯಾವ ಶಾಖೆಯನ್ನು ಅನುಸರಿಸಿದರೂ ಕುಲವೆಲ್ಲ ತಮ್ಮ ಒಂದೇ ಧರ್ಮದ ಅನುಯಾಯಿ ಎಂಬ ಭಾವವನ್ನು ತಮ್ಮ ಮನಸ್ಸಿಗೆ ನಿಜಮಾಡಿಕೊಂಡು

ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ ಅದನ್ನು ಪ್ರಸಾರ ಮಾಡಲು ಯತ್ನಿಸಬೇಕು. ಒಟ್ಟಿನಲ್ಲಿ ಇದು ಹೊರಗಿನ ಜನ ಹಿಂದೂ ಎಂದು ಕರೆದ ಧರ್ಮದ ನಿಲುವು [೧೪] ಎಂದು. ಅಂದರೆ ಮಾಸ್ತಿ ಧರ್ಮವನ್ನು ಬಿಟ್ಟು ಬದುಕನ್ನು ನೋಡದಿರುವುದು ಖಚಿತವಾಗುತ್ತದೆ. ಮನುಜ ಕುಲದ ಒಗ್ಗೂಡಿಸುವಿಕೆಯ ಕುರಿತು ಮಾತನಾಡುತ್ತಲೇ ಮತ್ತೆ ಆ ಕುಲವನ್ನು ಹಿಂದೂ ಧರ್ಮದ ತತ್ವದಡಿಯಲ್ಲಿ ಬಂಧಿಸುವುದನ್ನು ಪ್ರಶ್ನಿಸುವಂತೆ ಮಾಡುತ್ತದೆ. ಅಲ್ಲಿ ಮತ್ತೆ ಭಾರತೀಯ ಪರಂಪರೆಯ ಸಂಸ್ಕೃತಿಯನ್ನೇ ಒಪ್ಪಿತಗೊಳಿಸುವುದಕ್ಕೆ ತೊಡಗಿಕೊಂಡದ್ದು ಅಲ್ಲಿಂದ ಮನುಷ್ಯ ಹೊರಬಂದು ಬಾಳುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಪ್ರತಿಷ್ಠಾಪಿಸುವ ಧ್ಯೇಯದಿಂದಲೇ ಆಗಿದೆ. ಆದರೆ ಈ ಧ್ಯೇಯ ಇಷ್ಟ ಬಂದಂತೆ ನಡೆಯುವ ಪ್ರವೃತಿಯನ್ನು ಸಂಪೂರ್ಣ ಹಿಡಿತದಲ್ಲಿಡುತ್ತದೆ. ಇದು ವ್ಯಕ್ತಿತ್ವವನ್ನು ತನಗೆ ಬೇಕಾದಂತೆ ರೂಪಿಸಿಕೊಳ್ಳಲು ಬಿಡದೆ ಸಂಸ್ಕೃತಿ, ಪರಂಪರೆ, ಸಮಾಜ ಅದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾದುದನ್ನು ಪ್ರೇರಿಸುತ್ತದೆ, ಜೊತೆಗೆ ಒತ್ತಾಯಿಸುತ್ತದೆ. ಈ ಒತ್ತಾಯಿಸುವಿಕೆಯಲ್ಲಿಯೇ ಸ್ತ್ರೀ ಕೂಡ ತನ್ನ ಅಸ್ತಿತ್ವವನ್ನು ಸಂಸ್ಕೃತಿಗೆ ಬದ್ಧವಾಗಿಸಬೇಕಾಯಿತು. ಆಕೆ ತನ್ನ ವೈಯುಕ್ತಿಕ ಬದುಕನ್ನು ಕಟ್ಟಿಕೊಳ್ಳುವುದಕ್ಕೂ ಕೂಡ ಈ ಸಂಸ್ಕೃತಿ ನಿರ್ಬಂಧ ಹೇರುತ್ತದೆ. ಏನಿದ್ದರೂ ತನ್ನ ಉಳಿವು ಮುಖ್ಯದ್ದು. ಅದಕ್ಕಾಗಿ ಆಕೆ ತಪ್ಪಬಾರದಂತೆ ನಿಗ್ರಹಿಸಲಾಗುತ್ತದೆ. ಹಿಂದೂ ಧರ್ಮದ ಸಾರದ ನೆಲೆಯಲ್ಲಿ ವಿಶ್ವವನ್ನು ಕಟ್ಟಲು ಹೊರಡುವ ಮನಸ್ಸು ಹೆಣ್ಣಿನ ಬದುಕನ್ನೂ ನಿರ್ಬಂಧಿಸಿರುವುದು ಇಲ್ಲಿ ಸ್ಪಷ್ಟಗೊಳ್ಳುತ್ತದೆ. ಇದೂ ಒಂದು `ಉದಾತ್ತ ಬದುಕು' ಆಗುವುದಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಕಾಡುವುದರೊಂದಿಗೆ ಈ ಪರಿಕಲ್ಪನೆಯ ಹಿಡಿತದಿಂದ ಹೊರಬರಲು ಪ್ರಯತ್ನಿಸಿದರಷ್ಟೇ ಹೆಣ್ಣು ಸ್ವತಂತ್ರಳಾಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಮಾಸ್ತಿ ಅದಕ್ಕೆ ಆಸ್ಪದ ಕೊಡದೇ ಧರ್ಮದ ಪ್ರತಿಷ್ಠಾಪನೆಗೆ ಹೆಣ್ಣಿನಿಂದಲೇ ಪ್ರೇರಣೆ ಕೊಡಿಸುವ ಕೆಲಸವನ್ನು ಮಾಡುವುದು ಒಂದು ರೀತಿಯಲ್ಲಿ ಪ್ರಗತಿ ವಿರೋಧಿ, ಸ್ತ್ರೀ ವಿರೋಧಿ ಧೋರಣೆಯೇ ಆಗಿ ಕಾಣಿಸಿಕೊಳ್ಳುತ್ತದೆ.

ಗಾಂಧೀಜಿ ವಿಚಾರಧಾರೆಯ ಒತ್ತಾಸೆ

ಮಾಸ್ತಿ ಕಥೆಗಳನ್ನು ಬರೆಯುತ್ತಿದ್ದ ಕಾಲದಲ್ಲಿ ಸ್ತ್ರೀಯ ಕುರಿತು ಗಾಂಧಿ ಹರಿಜನ ಹಾಗೂ ಯಂಗ್ ಇಂಡಿಯಾ ಪತ್ರಿಕೆಗಳಲ್ಲಿ ಹಾಗೂ ಭಾಷಣಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಭಾರತೀಯ ಸ್ತ್ರೀಯರ ಕುರಿತು ಅವರ ಸಮಸ್ಯೆಗಳ ಕುರಿತು ಗಾಂಧಿ ಪ್ರಕಟಪಡಿಸಿದ ವಿಚಾರಗಳು ಬಹುತೇಕವಾಗಿ ಮಾಸ್ತಿಯವರ ಮೇಲೂ ಪ್ರಭಾವ ಬೀರಿವೆ. ಇಬ್ಬರೂ ಸನಾತನ ಧರ್ಮ ಸ್ತ್ರೀಯನ್ನು ಕಂಡ ನೆಲೆಯನ್ನೇ ನೆಚ್ಚಿಕೊಂಡಿರುವರು. ಆ ಕುರಿತು ಅವರಿಗೆ ಗೌರವವಿದೆ. ಗಾಂಧೀಜಿ

೧೪ ಪ್ರ.ಕಿ.ಟಿ.ಟಿ ಭಾವ ೩, ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧೯೬೦

ಸನಾತನ ವೈದಿಕ ಧರ್ಮಸ್ತ್ರೀಯನ್ನು ಗೌರವದಿಂದ ಕಂಡ ಬಗೆಯನ್ನು ಹಾಗೆಯೇ ಸ್ವೀಕರಿಸಿಕೊಂಡು ಅಂತೆಯೇ ಬಾಳಬೇಕೆಂದು ಹಂಬಲಿಸುತ್ತಾರೆ. ನಂತರ ಅವಳನ್ನು ನಡೆಸಿಕೊಳ್ಳುವಲ್ಲಿಯೇ ಸಮಾಜ ಯಾವಾಗ ಬದಲಾಯಿಸಿಕೊಂಡಿತೋ ಎಂದು ಅಸಮಾಧಾನವನ್ನು ಸೂಚಿಸುತ್ತಾರೆ. ಆದರೆ ಗಾಂಧಿ ಅನಂತರ ಅವಳನ್ನು ನಡೆಸಿಕೊಳ್ಳುವ ಪುರುಷ ವರ್ಗ ನಿಯಂತ್ರಿತ ಸಮಾಜದ ಬಗೆಗೆ ಪ್ರಶ್ನೆ ಮಾಡುವುದಿಲ್ಲ, ಮುಂದೆಯೇ ಸನಾತನ ಧರ್ಮ ಮಾದರಿಯಲ್ಲೇ ಹೆಣ್ಣನ್ನು ನಡೆಯಿಸಿಕೊಳ್ಳಬೇಕೆಂಬುದನ್ನೇ ಪ್ರತಿಪಾದಿಸುತ್ತಾರೆ. ಗಾಂಧಿ ಸ್ತ್ರೀ ಹಿಂಸೆಯನ್ನು ವಿರೋಧಿಸಿ ಬಾಳುವ ಕುರಿತು ಹೇಳಿದರೆ ಮಾಸ್ತಿ ಅಂಥ ಸಂದರ್ಭದ ಕಡೆಗೆ ಗಮನ ಹರಿಸದೇ ಮೌನ ತಾಳುತ್ತಾರೆ.

ಪುರುಷ ಪ್ರಧಾನ ಸಂಸ್ಕೃತಿ ನೀಡುವ ಹಿಂಸೆಗಳಿಗೆ ಹೆಣ್ಣು ಬಲಿಯಾಗಬಾರದಂತೆ ಹೆಣ್ಣಿಗೆ ಧೈರ್ಯ ತುಂಬುವ ಗಾಂಧೀಜಿ ಗಂಡನ ಹಿಂಸೆಗೆ ವಿಚ್ಛೇದನ ಪಡೆಯುವುದನ್ನು ಸಮ್ಮತಿಸುವುದಿಲ್ಲ. ಅವನನ್ನು ಬಿಟ್ಟು ಬಂದು ಪ್ರತ್ಯೇಕವಾಗಿ ಅವಿವಾಹಿತೆಯಂತೆ ಉಳಿಯಲು ಅನುಮತಿ ಕೊಡುತ್ತಾರೆ. ಹೊರತು ವಿವಾಹ ಧರ್ಮ ಬಂಧನ ಶ್ರೇಷ್ಠವಾದ್ದರಿಂದ ಅದನ್ನು ತೊಡೆಯುವುದಕ್ಕೆ ಒಪ್ಪಿಗೆ ಕೊಡುವುದಿಲ್ಲ. ವಿವಾಹ ಸಂಸ್ಥೆಯೇ ಕಳೆದುಹೋಗಬಹುದೆಂಬ ಕಾಳಜಿಯಿಂದ ಸ್ತ್ರೀಯನ್ನು ನಿಗ್ರಹಿಸಲಾಗಿದೆ.

ಸನಾತನ ವೈದಿಕ ಧರ್ಮ ಕಟ್ಟಿಕೊಡುವ ಆದರ್ಶ ದಾಂಪತ್ಯವನ್ನು ಗಾಂಧೀಜಿ ಪ್ರೀತಿಯಿಂದ ಸ್ವೀಕರಿಸಿದ್ದಾರೆ. ಪರಸ್ಪರರಲ್ಲಿರುವ ಪ್ರೀತಿ ಬಂಧನದ ಕಲ್ಪನೆಯನ್ನು ಹುಟ್ಟುವುದಕ್ಕೆ ಆಸ್ಪದ ಕೊಡುವುದಿಲ್ಲ. ಅವರು ರಾಮ - ಸೀತೆಯರ ದಾಂಪತ್ಯವನ್ನು ಆದರ್ಶವಾಗಿ ಕಾಣಿಸುತ್ತಾರೆ. ಅಲ್ಲಿ ಅವರಿಬ್ಬರ ಪ್ರೀತಿಯ ನಡುವೆ ದಾಸ್ಯ ಎನ್ನುವುದಿಲ್ಲ. ಅಂಥ ದಾಂಪತ್ಯವನ್ನು ಎಲ್ಲರೂ ಅನುಭವಿಸಬೇಕು ಎಂದು ಅದನ್ನು ಸಾರ್ವತ್ರಿಕಗೊಳಿಸುತ್ತಾರೆ. ಆದರೆ ಮರ್ಯಾದಾ ಪುರುಷೋತ್ತಮ ಸೀತೆಯನ್ನು ಶಂಕಿಸಿದ ರೀತಿಯ ಗಾಂಧೀಜಿ ಚಕಾರ ಎತ್ತದಿರುವುದು ರಾಮ - ಸೀತೆಯರ ದಾಂಪತ್ಯದ ಒಂದು ಮುಖವನ್ನಷ್ಟೇ ತೋರಿಸಿಕೊಡುತ್ತದೆ. ಅಂದರೆ ಸೀತೆ - ರಾಮನ ಪ್ರೀತಿಯ ಜೀವನದಂತೆ ಗಂಡ - ಹೆಂಡತಿ ಬಾಳಬೇಕು. ಅಂತಾದರೆ ರಾಮ - ಸೀತೆಯನ್ನು ಸಂದೇಹಿಸಿ ಅಗ್ನಿ ಸಾಕ್ಷಿಗೊಡ್ಡುವುದು ಪ್ರೀತಿಯ ಹಿಂದಿರುವ ಹಿಂಸೆಯ ಇನ್ನೊಂದು ಮುಖವಾಗುತ್ತದೆ. ಆಗ ಹೆಣ್ಣು ಏನು ಮಾಡಬೇಕು ? ಸೀತೆಯಂತೆ ಭೂಮಿಯೊಳಗೆ ಐಕ್ಯ ಆಗಬೇಕೇ ? ಈ ಕುರಿತು ಮೌನ ವಹಿಸಿರುವುದು ಗಂಡಿನ ಸರ್ವಾಧಿಕಾರಿ ಧೋರಣೆಯನ್ನು ಹೀಗೆ ತಾಳ್ಮೆ ವಹಿಸುತ್ತಲೆ ಕೊನೆಗೊಮ್ಮೆ ಮೀರಬೇಕೆಂಬುದನ್ನು ಒಪ್ಪಿಕೊಳ್ಳುವುದಾಗಿದೆ.

ವೈದಿಕ ಧರ್ಮ ಗಂಡ ಹೆಂಡಿರ ನಡುವೆ ಸಮಾನತೆ ಸಾರಿದ್ದನ್ನು ಪ್ರತಿಪಾದಿಸುತ್ತ ಈಗ ಆ ಮೌಲ್ಯವನ್ನು ಬದಲಾಯಿಸಿಕೊಂಡ ಬಗ್ಗೆ ಅವರು ಅಚ್ಚರಿ ವ್ಯಕ್ತಪಡಿಸುತ್ತಾರೆ. ವಿವಾಹ

ಸಂಸ್ಥೆಯನ್ನು ಒಂದು ವ್ಯವಸ್ಥೆಯಾಗಿ ಗುರುತಿಸುವ ಗಾಂಧೀಜಿ `ಜೀವನವೆಂದರೆ ಒಂದು ಕರ್ತವ್ಯ, ಒಂದು ಪರೀಕ್ಷೆ, ಇಹ ಪರಗಳೆರಡರಲ್ಲಿಯೂ ಪರಸ್ಪರ ಹಿತ ಬಯಸುವುದೇ ದಾಂಪತ್ಯ ಜೀವನದ ಯಥಾರ್ಥ ಉದ್ದೇಶ'ವಾಗಿ ಅದನ್ನು ಕಾಣುತ್ತಾರೆ.[೧೫]

ಕುಟುಂಬದ ಪೋಷಣೆಯ ಬಹುಪಾಲನ್ನು ಹೆಣ್ಣಿಗೇ ಹೇರುವುದನ್ನು ತಪ್ಪು ಎಂದು ಹೇಳುವ ಗಾಂಧಿ ಮನು ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ' ಎಂದಿರುವುದನ್ನು ಕಡಾ ಖಂಡಿತವಾಗಿ ವಿರೋಧಿಸುತ್ತಾರೆ. ಇಂಥ ಮನೋಧರ್ಮ ಹೆಣ್ಣನ್ನು ಕೀಳಾಗಿ ಕಾಣುವುದರ ಕುರಿತು ಅವರು ವಿಷಾದಿಸುತ್ತಾರೆ.

ಹೆಣ್ಣಿನ ಶಕ್ತಿಯ ಕುರಿತೂ ಗಾಂಧಿಗೆ ಅಪಾರ ಗೌರವ ಹಾಗೂ ನಂಬಿಕೆ ಇದೆ. ಈ ಗೌರವ ಪುರುಷ ಪ್ರಭುತ್ವ ರೂಪಿಸಿದ ಸಿದ್ಧ ಬದುಕನ್ನು ಆಕೆ ದಾಟದೆ ನಡೆಯುವ ಸಂದರ್ಭ ಮಾತ್ರ ಅರ್ಪಿತವಾಗುತ್ತದೆ. ಹಾಗೇ ಆಕೆ ಬದುಕುವಂತೆ ಪ್ರೇರಿಸುವ ಕೆಲಸವನ್ನು ಗಾಂಧಿ ಕೂಡ ಅಚ್ಚುಕಟ್ಟಾಗಿಯೇ ಮಾಡುತ್ತಾರೆ. ಆ ಬಂಧಿತ ಚೌಕಟ್ಟಿನೊಳಗೆ ಗಂಡಿಗಿಂತ ಯಾವ ವಿಷಯದಲ್ಲೂ ಅವಳು ಕೀಳಿಲ್ಲವೆಂದೇ ಪ್ರತಿಪಾದನೆ ಮಾಡುತ್ತಾರೆ. ಸರ್ವ ಶಕ್ತಿಯೂ ಆಕೆಯಲ್ಲಿ ಅಡಕವಾಗಿದೆ ಎಂದು ವಾದಿಸುತ್ತಾರೆ. ಹಾಗಾಗಿ ಹೆಣ್ಣು ಗಂಡಿಗೆ ಸಮಾನ ಹಕ್ಕುಗಳು ದಕ್ಕಬೇಕಾದ ಕಡೆಗೆ ನ್ಯಾಯೋಚಿತವಾಗಿ ವಾದ ಮಂಡಿಸುತ್ತಾರೆ. ಹೆಣ್ಣನ್ನು, ಅವಳ ಶಕ್ತಿಯನ್ನು ಕುಂದಿಸುವ, ಅವಜ್ಞೆಗೈಯ್ಯುವುದನ್ನು ಸಮ್ಮತಿಸದ ಗಾಂಧಿ ಸಮಾನ ದೃಷ್ಟಿಕೋನದಿಂದ ಹೆಣ್ಣು - ಗಂಡನ್ನು ನೋಡಬೇಕಾದುದನ್ನು ಅರ್ಥೈಸುವ ಪ್ರಯತ್ನ ಮಾಡುತ್ತಾರೆ. ಸ್ತ್ರೀಗೂ ಶಿಕ್ಷಣ ಕೊಡಬೇಕಾದ ತುರ್ತನ್ನೂ ಪ್ರತಿಪಾದಿಸುತ್ತಾರೆ. ಈ ಮೂಲಕ ತಾನು ಪಡೆಯುವ ವಿದ್ಯೆ ಜ್ಞಾನದ ಬಲದಿಂದ ಆಕೆ ತನಗಾಗುವ ಅನ್ಯಾಯಗಳನ್ನು ಎದುರಿಸಿ ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುತ್ತದೆ ಎಂಬುದನ್ನು ಮನವರಿಕೆ ಮಾಡುವಲ್ಲಿ ಮುಂದಾಗಿದ್ದಾರೆ. ಹಾಗೆ ಅಸಮಾನತೆಯನ್ನು ದೂರ ಮಾಡುವಲ್ಲಿ ಸ್ವತಃ ಹೋರಾಡಬೇಕು ಎಂದು ಭಾರತೀಯ ಸ್ತ್ರೀಯರಿಗೆ ಗಾಂಧಿ ಎಚ್ಚರಿಕೆ ನೀಡಿ ಜಾಗೃತಿ ಮೂಡಿಸುವಲ್ಲಿ ಮುಂದಾಗಿದ್ದಾರೆ.

`ಹೆಣ್ಣು ಹೊಟ್ಟೆಗಾಗಿ ದುಡಿಯುವುದಾಗಲಿ, ಉದ್ಯೋಗ ಕ್ಷೇತ್ರದ ಸಾಹಸಗಳಲ್ಲಿ ಕೈ ಹಾಕುವುದಾಗಲಿ ನನಗೆ ಸಮ್ಮತವಿಲ್ಲ. ಇಂಗ್ಲೀಷ್ ಶಿಕ್ಷಣ ಬೇಕೆನ್ನುವ, ಕಲಿಯಲಿಚ್ಛಿಸುವ ಕೆಲ ಹೆಣ್ಣು ಮಕ್ಕಳು ಗಂಡು ಮಕ್ಕಳ ಸಾಲೆ ಸೇರಿ ತಮ್ಮಿಚ್ಛೆ ಪೂರೈಸಿಕೊಳ್ಳಬಹುದು' [೧೬]ಎನ್ನುವ ಗಾಂಧಿ ಶಿಕ್ಷಣ ಹೆಣ್ಣಿನ ಬೆಳವಣಿಗೆಯ ದೃಷ್ಟಿಯಿಂದ ಅನಿವಾರ್ಯ ಎಂದು ಒಪ್ಪಿಕೊಳ್ಳುತ್ತಾರಾದರೂ

---

೧೫ ಪು.೯ ಗೆಳತಿಯೊಬ್ಬಳು ಕೇಳಿದ ಪ್ರಶ್ನೆ ಸ್ತ್ರೀಯರ ಸಮಸ್ಯೆಗಳು ಗಾಂಧೀಜಿ ಕನ್ನಡಾನುವಾದ. ಪ್ರಹ್ಲಾದ ನರೆಗಲ್ಲ, ವೆಂಕಟೇಶ ಮಳಿಯೆ ೧೯೭೪ ಪ್ರಸ್ತುತ ಲೇಖನ ೧೯೨೬ರಲ್ಲಿ ಅಕ್ಟೋಬರ್ ೨೧ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.

೧೬ ಪು.೨೨ ಗಾಂಧೀಜಿಯ ಭಾಷಣಗಳು ಮತ್ತು ಲೇಖನಗಳಿಂದ ಆಯ್ದು ಭಾಷಣ ಕೃತಿ ಸ್ತ್ರೀಯರ ಸಮಸ್ಯೆಗಳು ಲೇ. ಗಾಂಧೀಜಿ ಕನ್ನಡಾನುವಾದ ಪ್ರಹ್ಲಾದ ನರೆಗಲ್ಲ, ವೆಂಕಟೇಶ ಮಳಿಯೆ

ಮನೆಯಿಂದ ಹೊರಗೆ ಹೋಗಿ ದುಡಿಯುವುದನ್ನು ಸಮ್ಮತಿಸುವುದಿಲ್ಲ. ಆರ್ಥಿಕ ಸ್ವಾತಂತ್ರ್ಯದ ಜೊತೆಗೆ ವ್ಯಕ್ತಿತ್ವ ಬೆಳೆಸಿಕೊಳ್ಳುವುದಕ್ಕೆ ದಾರಿ ಮಾಡಿಕೊಡುವ ಉದ್ಯೋಗದಿಂದಾಗಿ ಸ್ತ್ರೀ ಕುಟುಂಬವನ್ನು ನಿರ್ಲಕ್ಷಿಸಿಯಾಳು ಎಂಬ ಸಂದೇಹ ಅವಳ ಮಾನ ರಕ್ಷಣೆಯ ನೆಪ ಒತ್ತಿ ಅದನ್ನು ತಡೆಯುವುದಾಗಿದೆ. ಈ ನಿಟ್ಟಿನಲ್ಲಿ ಇದೇ ನಿಲುವನ್ನು ಮಾಸ್ತಿ ಕೂಡ ತಳೆಯುತ್ತಾರೆ. ಹೆಣ್ಣನ್ನು ಗೌರವಿಸುತ್ತಾರೆ. ಆದರೆ ಹೊರಗೆ ಕಳುಹಿಸುವಲ್ಲಿ ತಟಸ್ಥರಾಗುತ್ತಾರೆ. ಸ್ತ್ರೀ ಸಮಾನತೆ, ಸ್ತ್ರೀ ಸಬಲೀಕರಣ, ಸ್ತ್ರೀ ವಿದ್ಯಾಭ್ಯಾಸದ ಕುರಿತು ಮಾತನಾಡುವ ಗಾಂಧಿ ಕೊಂಚ ಪ್ರಗತಿ ಪರರಂತೆ ಕಾಣಿಸಿಕೊಳ್ಳುತ್ತಾರೆ. ಆದರೆ ಭಾರತದಲ್ಲಿ ಪ್ರತಿಷ್ಠಾಪಿತವಾಗಿದ್ದ ಬಾಲ್ಯ ವಿವಾಹವನ್ನು ಸಮರ್ಥಿಸುವಲ್ಲಿ ಪ್ರಗತಿ ವಿರೋಧಿಯೇ ಆಗಿ ಕಾಣುತ್ತಾರೆ. ಬಾಲ್ಯ ವಿವಾಹದ ದುಷ್ಪರಿಣಾಮದ ಪರಿಣಾಮವಾಗಿ ಹೆಣ್ಣು ಮಗಳು ಜೀವನವನ್ನೇ ಕಳೆದುಕೊಳ್ಳಬೇಕಾದ ಪ್ರಸಂಗಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ ಗಾಂಧೀಜಿ ಅದನ್ನು ಪುಷ್ಟೀಕರಿಸುತ್ತಾರೆ. ಸಮರ್ಥನೆಗೆ ಗಾಂಧಿ ಕೊಡುವ ಕಾರಣಗಳು:

೧. ಅಸಂಖ್ಯ ಬಾಲ್ಯ ವಿವಾಹಗಳು ಇದುವರೆಗೆ ನಡೆದಿದ್ದರೂ ಕೆಟ್ಟ ಅನುಭವಕ್ಕೆ ಒಳಗಾಗಿ ಜೀವ ತೆತ್ತವರ ವಿವರ ದಕ್ಕಿಲ್ಲ.

೨. ಆಯ್ಕೆಯ ತಿಳುವಳಿಕೆ ಬರುವ ಮೊದಲೇ ಹೆಣ್ಣನ್ನು ವಿವಾಹ ಮಾಡಿ ಬಿಟ್ಟಿರುವುದರಿಂದ ಪ್ರೀತಿಸಿ ಅನುರಕ್ತಳಾಗುವುದನ್ನು ತಪ್ಪಿಸಬಹುದು.

೩. ಮನ ಒಪ್ಪುವ ಹುಡುಗನನ್ನೇ ಮದುವೆಯಾಗುವ ಕುರಿತು ಬೆಳೆದ ಹೆಣ್ಣು ಮಕ್ಕಳು ಯೋಚಿಸುವುದರಿಂದ ಆಯ್ಕೆ ವಿಳಂಬವಾಗುತ್ತದೆ.

೪. ಹೆತ್ತವರ ಹೊರೆಯೂ ಬಹುಬೇಗ ಇಳಿಯುತ್ತದೆ ಎಂಬುದು.[೧೭]

ಹೀಗೆ ಗಾಂಧಿ ಬಾಲ್ಯ ವಿವಾಹಕ್ಕೆ ಸಮ್ಮತಿಸುವುದೇ ಪ್ರಗತಿವಿರೋಧಿ ಧೋರಣೆಯಾಗುತ್ತದೆ. ಆದರೆ ಅದನ್ನು ಪ್ರತಿಪಾದಿಸಲು ನೀಡುವ ಪ್ರಸ್ತುತ ಕಾರಣಗಳು ತೀರಾ ಅವೈಜ್ಞಾನಿಕ ಹಾಗೂ ಅವೈಚಾರಿಕಗಳಾಗಿವೆ. ಅಂದಿನ ಕಾಲದ ಸಾಮಾಜಿಕ ಕಾರಣಗಳಿಗಾಗಿ ಇದನ್ನು ಬದ್ಧಗೊಳಿಸಿರಬಹುದಾದರೂ ಅದರ ಸಾಧಕ ಬಾಧಕಗಳ ಕುರಿತು ಗಾಂಧಿ ಕಿಂಚಿತ್ತೂ ಯೋಚಿಸಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅದನ್ನು ತಡೆಯುವಲ್ಲಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿ ಓರ್ವ ಮುಖಂಡನಾಗಿದ್ದು ಅದನ್ನು ತಡೆಯಬೇಕಾದದ್ದು ಗಾಂಧೀಜಿಯವರ ಮಾನವೀಯ ನೆಲೆಯ ಕರ್ತವ್ಯವಾಗಿತ್ತು. ವಿವಾಹ ಸಂಸ್ಥೆಯ ಸ್ಥಿರೀಕರಣದ ಭರದಲ್ಲಿ ಮುಗ್ಧ ಬದುಕನ್ನು ಬಂಧಿಸುವ ಪ್ರಜ್ಞೆಯೇ ಪ್ರಗತಿವಿರೋಧದ್ದಾಗಿ ಕಾಣಿಸಿಕೊಳ್ಳುತ್ತದೆ.

---

೧೭ ಪು.೫೪-೬೦ ಬಾಲ್ಯ ವಿವಾಹದ ಸಮರ್ಥನೆ, ಸ್ತ್ರೀಯರ ಸಮಸ್ಯೆಗಳು ಗಾಂಧೀಜಿ ಕನ್ನಡಾನುವಾದ. ಪ್ರಹ್ಲಾದ ನರೆಗಲ್ಲಿ, ವೆಂಕಟೇಶ ಮಳಿಯ ೧೯೨೪ ಪ್ರಸ್ತುತ ಲೇಖನ ೧೯೨೬ರಲ್ಲಿ ಸೆಪ್ಟೆಂಬರ್ ೨೧ರ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.

ಅದನ್ನು ವಿರೋಧಿಸುವವರ ದನಿಗೆ ಬೆಲೆ ಕೊಡುವ ಬದಲಿಗೆ ಸಮರ್ಥನೆಗೆ ತೊಡಗಿದ್ದು ಅಮಾನುಷತೆಯ ತೀರ್ಮಾನವಾಗುತ್ತದೆ.

ಆದರೆ ಬಾಲ ವಿಧವೆಯ ವಿವಾಹಕ್ಕೆ ಗಾಂಧಿ ಸಹಮತ ಸೂಚಿಸುತ್ತಾರೆ. ಏನೂ ಅರಿಯದ ಕಂದಮ್ಮಗಳಿಗೆ ಮಾಡಿದ ಮದುವೆ ಮದುವೆ ಅಲ್ಲ. ಗಂಡನೆನ್ನಿಸಿಕೊಂಡವ ತೀರಿಕೊಂಡರೆ ಆಕೆ ವಿಧವೆಯಾಗುವುದಿಲ್ಲ. ಅವಳನ್ನು ಆಗ ಅವರು ಕುಮಾರಿ ವಿಧವೆಯಾಗಿ ಕರೆಯಬೇಕೆನ್ನುವ ಒತ್ತಾಯಕ್ಕೆ ಒಪ್ಪುತ್ತಾರೆ. ಅಂಥ ಸಂದರ್ಭದಲ್ಲಿ ಅವಳಿಗೆ ಇನ್ನೊಂದು ಮದುವೆ ಮಾಡಿದರೂ ಅದು ಅವರ ಪ್ರಕಾರ ಮರು ಮದುವೆ ಅನ್ನಿಸಿಕೊಳ್ಳುವುದಿಲ್ಲ. ಅಲ್ಲದೆ ತರುಣರಿಗೆ ಬಾಲ ವಿಧವೆಯರನ್ನೇ ಮದುವೆಯಾಗಲು ಕಟಬದ್ಧರಾಗುವಂತೆ ಕೂಡ ಕರೆಕೊಟ್ಟಿದ್ದಾರೆ. ಗಾಂಧಿಯ ಇಂಥ ನಿಲುವುಗಳು ಚರ್ಚೆಯನ್ನು ಬಯಸುತ್ತವೆ. ಒಮ್ಮೆ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಸ್ತ್ರೀಯನ್ನು ಬಂಧಿಸುತ್ತಾರೆ. ಮತ್ತೊಮ್ಮೆ ನಿರ್ಬಂಧಗಳನ್ನು ಮೀರುವ ಶಕ್ತಿ ತುಂಬುತ್ತಾರೆ. ಅಂದರೆ ಗಾಂಧಿಗೆ ಸ್ತ್ರೀಯ ಬದುಕನ್ನು ನೋಡುವಲ್ಲಿ ಮತ್ತು ನಿರ್ದೇಶಿಸುವಲ್ಲಿ ಇಬ್ಬಗೆಯ ಮನಸ್ಸು ಮಾತನಾಡುತ್ತಿರುತ್ತದೆ. ಒಮ್ಮೆ ಸಂಸ್ಕೃತಿಯ ಅಧೀನದಲ್ಲೇ ಹೆಣ್ಣು ಇರಬೇಕಾದುದನ್ನು ಸರಿ ಅಂದುಕಂಡರೆ ಮತ್ತೊಮ್ಮೆ ಅಲ್ಲಿನ ಅಸಮಾನತೆ, ಹಿಂಸೆಯಿಂದ ಹೊರಬರಬೇಕೆಂದೂ ಅರಿಯುತ್ತಾರೆ. ಆದರೆ ಸಂಸ್ಕೃತಿಯನ್ನು ಮೀರುವ ಧೈರ್ಯವನ್ನು ಕೊಡುವುದಿಲ್ಲ. ಆ ಮೌಲ್ಯವನ್ನು ಅವಳು ಬಾಳಿಸುವವಳೆನ್ನುವುದನ್ನೂ ಅವರು ದೃಢವಾಗಿ ನಂಬಿದ್ದಾರೆ. ಮಾಸ್ತಿ ಬಾಲ್ಯ ವಿವಾಹವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಬಾಲ ವಿಧವೆಯ ಮರು ಮದುವೆಗೆ ಒಪ್ಪುವುದಿಲ್ಲ.

`ಸತಿ'ಯ ಕುರಿತಂತೆಯೂ ಪುರಾತನ ಧರ್ಮದ ನಂಬಿಕೆಗಳನ್ನೇ ಒಪ್ಪಿಕೊಂಡವರು. ಗಾಂಧಿ ಅದನ್ನೊಂದು ಆದರ್ಶವಾಗಿ ಕಂಡವರು. ಅಂದರೆ ಹೆಣ್ಣಿನ ಪಾವಿತ್ರ್ಯವನ್ನು, ಪತಿ ಭಕ್ತಿಯನ್ನು ಪಾಲಿಸಬೇಕೆಂಬುದನ್ನು ಪ್ರತಿಪಾದಿಸುವ ಧರ್ಮ ಸಾರವನ್ನು ಗಾಂಧಿ ಸ್ವೀಕರಿಸಿದ್ದಾರೆ. ಅದನ್ನು ಸರ್ವಕಾಲಿಕ ಸತ್ಯವಾಗಿ ಪ್ರತಿಷ್ಠಾಪಿಸುತ್ತಾರೆ. ಆದರೆ ಸತೀ ಪದ್ಧತಿ ಅಥವಾ ಸತೀ ಸಹಗಮನ ಪದ್ಧತಿಯನ್ನು ವಿರೋಧಿಸುತ್ತಾರೆ. ಅದನ್ನು ಗಂಡಸಿನ ಸ್ವಾರ್ಥ ಮನಸ್ಸಿನ ಅಜ್ಞಾನದ ಪ್ರತೀಕವಾಗಿ ಕಾಣುತ್ತಾರೆ ಮತ್ತು ಅದರ ಪ್ರತಿಷ್ಠಾಪನೆಯನ್ನು ಅಲ್ಲಗಳೆಯುತ್ತಾರೆ. ಬದುಕುವ ಹಕ್ಕನ್ನು ಕೊಡುತ್ತಾರೆ. ಆದರೆ ಮಾಸ್ತಿ ಈ ನೆಲೆಯಲ್ಲಿ ಭಿನ್ನರಾಗುತ್ತಾರೆ. ಬಾಲ ವಿಧವೆಗೆ ಬದುಕುವ ಹಕ್ಕನ್ನು ಕೊಡುವುದಿಲ್ಲ. ಗಂಡನ ಮೇಲಿನ ಪ್ರೀತಿಯನ್ನು ಅದಕ್ಕೆ ಕಾರಣವಾಗಿ ಕೊಡುತ್ತಾರೆ. ಪ್ರೀತಿಯ ಹೆಸರಿನಲ್ಲಿ ಜೀವ ಕಳೆದುಕೊಳ್ಳುವಂತೆ ಮಾಡುತ್ತಾರೆ. ಇನ್ನೊಂದು ಜೀವದಿಂದ ಮೊದಲಿನ ಜೀವದ ಪ್ರೀತಿ ಸಿಗಲಾರದು ಎಂಬುದು ಅವರ ಧೋರಣೆಯಾಗಿದೆ.

ನೈತಿಕತೆಯ ಪ್ರತಿಷ್ಠಾಪನೆಗೆ ಹೆಣ್ಣನ್ನು ಪ್ರೇರೇಪಿಸುವ ಗಾಂಧಿಗೆ ವೇಶ್ಯೆಯ ಸ್ಥಿತಿಗತಿಯರ ಕುರಿತು ಚಿಂತಿಸಿ ಅವರನ್ನು ಆ ವೃತ್ತಿಯಿಂದ ಬಿಡುಗಡೆ ಮಾಡುವ ನಿಟ್ಟಿನಲ್ಲಿ ಯೋಚಿಸುತ್ತಾರೆ. ಅವರ

ಜೀವನೋಪಾಯಕ್ಕೆ ಕೂಲಿಯನ್ನು ನಿಗದಿಪಡಿಸುವ ಅನಿವಾರ್ಯತೆಯನ್ನು ಮುಂದಿಡುತ್ತ ಪುರುಷರ ಎಲ್ಲೆ ಮೀರುವ ಕಾಮವನ್ನು ನಿಗ್ರಹಿಸಬೇಕು ಎಂದೂ ಎಚ್ಚರಿಕೆ ನೀಡುತ್ತಾರೆ.

ಮಾಸ್ತಿ ವೇಶ್ಯೆಯ ಕುರಿತು ಅಷ್ಟಾಗಿ ಕಾಳಜಿ ತೋರುವುದು ಕಾಣುವುದಿಲ್ಲ. ವೇಶ್ಯೆಯ ಮನಃ ಪರಿವರ್ತನೆಗೆ ಗಾಂಧಿ ತೊಡಗಿಕೊಂಡಿದ್ದು ಕಂಡಿದ್ದರೂ ಆ ಕುರಿತ ಚಟುವಟಿಕೆಗಳು ನಡೆಯುತ್ತಿದ್ದರೂ ಮಾಸ್ತಿಗೆ ಅದು ಪ್ರಯೋಜನಕಾರಿಯಾಗುತ್ತದೆ ಎಂಬ ನಂಬಿಕೆ ಹುಟ್ಟಲಿಲ್ಲ. ವೇಶ್ಯೆ ವೇಶ್ಯೆಯಾಗಿಯೇ ಇರುತ್ತಾಳೆ. ಹೊರತು ಆಕೆ ಆ ವೃತ್ತಿಯನ್ನು ತೊರೆದು ಎಲ್ಲರಂತೆ ಬಾಳುವುದನ್ನು ಇಷ್ಟ ಪಡುವುದಿಲ್ಲ. ಹೊರಬಂದರೂ ಮರುಕ್ಷಣವೇ ಅಲ್ಲಿಗೇ ತೆರಳುವವರಾಗುತ್ತಾರೆ ಎಂಬಂತೆ ಯೋಚಿಸಿ ಅವರ ಮನಃ ಪರಿವರ್ತನೆಗೆ ಕೂಡ ಪ್ರಯತ್ನಿಸಿಲ್ಲ. ವಾಸ್ತವದಲ್ಲಿ ಅವರ ಬದಲಾವಣೆ ಅಸಾಧ್ಯವೆಂದೇ ಅವರು ನಂಬಿದ್ದಾರೆ. ಪ್ರಗತಿಪರತೆಯ ಯೋಚನೆಯೂ ಅವರ ಬಳಿ ಸುಳಿಯುವುದಿಲ್ಲ.

ಕಾಮವನ್ನು ಮೀರಿದ ಸತಿಪತಿಗಳ ಸಂಬಂಧಗಳನ್ನು ಉನ್ನತೀಕರಿಸಿದ ಹಾಗೂ ಸ್ವೈರ ಪ್ರೇಮವನ್ನು ವಿರೋಧಿಸಿದ ಗಾಂಧಿಯವರ ತತ್ವವನ್ನೇ ಮಾಸ್ತಿ ಕೂಡ ಒಪ್ಪಿಕೊಂಡಿದ್ದಾರೆ. ಈ ಧೋರಣೆಗೆ ಸನಾತನ ವೈದಿಕ ಧರ್ಮ ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಇಬ್ಬರೂ ನಿರ್ವಹಿಸುವ ಕಾರ್ಯ ಸಂಸ್ಕೃತಿಯ ಪಾಲನೆಗೆ ಸ್ತ್ರೀಯನ್ನು ಬದ್ಧಗೊಳಿಸುವುದು.

ನವೋದಯ ಧೋರಣೆಗಳ ಸಹಯೋಗ

ಮಾಸ್ತಿಗೆ ಸಾಹಿತ್ಯವನ್ನು ನವೋದಯ ಪ್ರಗತಿಶೀಲ, ನವ್ಯ, ದಲಿತ ಎಂದು ವಿಭಾಗಿಸುವುದು ಸಮ್ಮತವೆನ್ನಿಸುವುದಿಲ್ಲ. ಸಾಹಿತ್ಯ ಎಂದಿಗೂ `ನವ' ಹಾಗೂ `ನವ್ಯ'ವೇ ಆಗಿರುತ್ತದೆ ಎಂದು ನಂಬಿದ್ದರು. ಸಾಹಿತ್ಯ ಪುರಾತನದ ತಳಹದಿಯಲ್ಲಿ ನವೀನತೆಯನ್ನು ಪಡೆಯುತ್ತದೆ ಎಂದೂ ನಂಬಿದ್ದರು. ಹಳೆಯದರ ಜಾಡಿನಲ್ಲೇ ಹೊಸತರ ನೆಲೆಯನ್ನು ಶೋಧಿಸುವಲ್ಲಿ ಬರಹಗಾರ ತೊಡಗಿಕೊಂಡಿರುತ್ತಾನೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿಯೇ ಅವರು ಸಾಹಿತ್ಯ ಯಾವತ್ತಿಗೂ ನವವಾಗಿ, ನವ್ಯವಾಗಿ ಇರುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಅಂದರೆ ಸನಾತನ ವೈದಿಕ ಧರ್ಮ ರೂಪಿಸಿದ ಬದುಕಿನ ಮೂಲತತ್ವವನ್ನು ಮೀರಿ ಬದುಕಲಾಗದ್ದನ್ನು ಅವರು ತೆರೆದಿಟ್ಟಿದ್ದಾರೆ.

ಸಾಹಿತ್ಯವನ್ನು ಬದುಕಿನಲ್ಲಿರುವ ಲೋಪ ದೋಷಗಳನ್ನು ಎತ್ತಿ ತೋರಿಸುವುದಕ್ಕೆ ಮತ್ತು ಅದಕ್ಕೆ ವಿರೋಧ ವ್ಯಕ್ತಪಡಿಸುವುದಕ್ಕೆ ಮಾತ್ರ ಬಳಸಿಕೊಳ್ಳದೆ ಅದನ್ನು ತಿದ್ದುವ ಸುಧಾರಿಸುವ ಬಗೆಗೆ ಯೋಚಿಸುವುದು ಸಾಹಿತ್ಯದ ಕೆಲಸವಾಗಬೇಕೆಂದು ಮಾಸ್ತಿ ನಂಬಿದ್ದರು.[೧೮]

---

೧೮ ಪು.೫೯-೬೦, ನಮ್ಮ ಹೊಸ ಸಾಹಿತ್ಯದ ಆರಂಭ, ಆರಂಭದ ಆಂಗ್ಲ ಸಾಹಿತ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ೧೯೭೯

ಸನಾತನ ವೈದಿಕ ಧರ್ಮವನ್ನು ಪುನರುತ್ಥಾನಗೊಳಿಸಬೇಕಾದ ಅನಿವಾರ್ಯತೆ ಹೇಳುವಲ್ಲಿ ಮಾನವತಾವಾದ ಪ್ರತಿಷ್ಠಾಪಿಸುವಲ್ಲಿ ತಾಯಿಯೇ ಪ್ರಧಾನ ಪಾತ್ರ ವಹಿಸುತ್ತಾಳೆ ಎಂದು ನಂಬಿದ ಮಾಸ್ತಿ ಆ ನೆಲೆಯಲ್ಲಿ ಸಾಹಿತ್ಯವನ್ನೂ ಕೂಡ ತಾಯಿಯ ಫಲವಾಗಿ ಕಾಣುತ್ತಾರೆ. ಈ ನಂಬಿಕೆಯ ಹಿನ್ನೆಲೆಯಲ್ಲೇ ಸಮಾಜ ಹಾಗೂ ಮನುಷ್ಯ ಸಂಬಂಧವನ್ನು ಬೆಸೆಯುವ ಕೆಲಸಕ್ಕೆ ತೊಡಗುತ್ತಾರೆ. ಅದೇ ಉತ್ತಮ ಸಾಹಿತ್ಯದ ತತ್ವವಾಗಿ ಅವರು ಗುರುತಿಸುತ್ತಾರೆ.

ಮಾಸ್ತಿ ಕತೆಗಳಲ್ಲಿನ ಸ್ತ್ರೀ ಪ್ರತಿನಿಧೀಕರಣವನ್ನು ಸೋಸುವ ಸಂದರ್ಭದಲ್ಲಿ ಅಲ್ಲಿ ವ್ಯಕ್ತವಾಗುವ ಅಥವಾ ಸಂಸ್ಕೃತಿಯ ಮೌಲ್ಯವನ್ನು ಘೋಷಿಸುವುದರ ಹಿಂದೆ ಮಾಸ್ತಿಯವರ ಮೇಲಾದ ಪ್ರಭಾವವೇನು? ಈ ಸಂದರ್ಭದಲ್ಲಿ ಮಾಸ್ತಿ ಕತೆಗಳು ಸ್ತ್ರೀ ಪುರುಷರ ಸಂಬಂಧವು ಇರಬೇಕಾದ ರೀತಿಯನ್ನು ದಾಖಲಿಸುವ ಕೆಲಸ ಮಾಡುವುದು ಸ್ಪಷ್ಟವಾಗುತ್ತದೆ. ಇಲ್ಲಿ ತೆರೆದುಕೊಳ್ಳುವ ಒಂದೊಂದು ಮೌಲ್ಯಕ್ಕೂ ಮಾಸ್ತಿ ಅವರು ಬೆಲೆ ಕೊಡುತ್ತಾರೆ.

ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತವು ಭಾರತದಲ್ಲಿ ತಲೆ ಎತ್ತುತ್ತಿದ್ದಂತೆಯೇ ದೇಶೀ ಮೂಲದ ಪುರುಷ ಪ್ರಧಾನ ಮನಸ್ಸು ಅವಳ ರಕ್ಷಣೆಯ ನೆಪದಲ್ಲಿ ಶ್ರಮಿಕ ವರ್ಗದಿಂದ ಹೊರಗಿಟ್ಟು ಸಮಾಜದೊಳಗೆ ಎಲ್ಲರಂತೆ ಬಾಳಗೊಡದಂತೆ ಕಟ್ಟುಪಾಡು ಹಾಕಿತ್ತು. ಹೆಣ್ಣನ್ನು ಕುಟುಂಬದೊಳಗೆ ಭದ್ರವಾಗಿ ಕೂಡಿ ಹಾಕಿ ಅದನ್ನು ಪ್ರಶ್ನಿಸದೇ ಇರುವಂತೆ ನೋಡಿಕೊಳ್ಳಲಾಯಿತು. ಆಕೆ ಸಮಾಜದಿಂದ ಪ್ರತ್ಯೇಕಗೊಳ್ಳುವ ಪರಿಸ್ಥಿತಿಯನ್ನು ಇದರಿಂದಾಗಿ ಎದುರಿಸುವಂತಾಯಿತು ಮತ್ತು ಅದು ಅವಳ ಪಾಲಿಗೆ ಕತ್ತಲಿನ ಪರಿಸರವಾಯಿತು. ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಯ ಹೇರಿಕೆಯ ಸಂದರ್ಭವನ್ನೂ ಕೂಡ ಎದುರಿಸುವಂತಾಯಿತು. ಮಾಸ್ತಿ ಈ ಸಂದರ್ಭದ ಹೆಣ್ಣೊಬ್ಬಳ ಒಳತೋಟಿಯನ್ನು ಅರ್ಥಮಾಡಿಕೊಳ್ಳಲಿಲ್ಲವೇ? ಅಥವಾ ಉದ್ದೇಶ ಪೂರ್ವಕ ಮಾಡಿದ್ದಾರೆಯೋ ಎಂಬ ಪ್ರಶ್ನೆ ಹಾಕಿಕೊಂಡಾಗ ಮಾಸ್ತಿ ಆಕೆ ಇರುವ ಪರಿಸ್ಥಿತಿಯ ನೆಲೆಯಲ್ಲಿ ಬದುಕು ಮತ್ತೂ ದುಸ್ತರವಾಗಬಾರದ ಕಾಳಜಿಯಿಂದ ಅಂಥ ಸಂಸ್ಕೃತಿ ಸ್ವೀಕರಿಸಬಾರದ ಸಲಹೆ ನೀಡುವ ನೀತಿ ಹೇಳುವ ಕೆಲಸ ಮಾಡುವುದು ಸ್ಪಷ್ಟವಾಗುತ್ತದೆ.

ಮಾಸ್ತಿ ಕತೆಗಳ ಸ್ತ್ರೀ ಪ್ರತಿನಿಧೀಕರಣದ ನಿಲುವುಗಳನ್ನು ನವೋದಯದ ಕಾಳಜಿಗಳ ಜೊತೆಗೆ ತಳುಕು ಹಾಕುವುದು ಸಮಂಜಸವಾಗುತ್ತದೆ. ವಸಾಹತುಶಾಹಿಯ ಆಗಮನದೊಂದಿಗೆ ಪ್ರವೇಶಿಸಿದ ಆಧುನಿಕತೆಯನ್ನು ದೇಶ ಹಾಗೂ ನಾಡಿನ ಆದರ್ಶದ ಬದುಕಿನ ನೆಲೆಗಟ್ಟಿನಲ್ಲಿ ನೋಡುವುದು ಇಲ್ಲಿನ ಪ್ರಮುಖ ಅಂಶವಾಗಿ ಗುರುತಿಸಬಹುದು. ಅಂಥ ಆದರ್ಶದ ಬದುಕನ್ನೇ ಅನುಸರಿಸುವಂತೆ ನೀತಿ ಹೇಳುವುದನ್ನು ಗುರುತಿಸಬಹುದು. ಈ ನೀತಿಯೇ ಸನಾತನ ಧರ್ಮದ ಸಾರದಂತೆ ಹೆಣ್ಣು ತನ್ನ ಇರವನ್ನು ಇತರರಿಗೆ ಆದರ್ಶ ಪ್ರಾಯವಾಗುವಂತೆ ಸ್ಥಾಪಿತಗೊಳಿಸಬೇಕಾದುದನ್ನು ಪ್ರೇರಿಸುತ್ತದೆ. ಸಮಾಜದ ಎಲ್ಲ ಸ್ಥಿತ್ಯಂತರಗಳಿಗೂ ಹೆಣ್ಣು ಅನಾದಿ ಕಾಲದ ನಂಬಿಕೆಗಳನ್ನೇ ಮೈವೆತ್ತಿಕೊಂಡು

ಬಾಳಿ ಅದನ್ನೇ ಪ್ರತಿಷ್ಠಾಪಿಸಬೇಕಾದ ಉತ್ತರ ಕೊಡುವಂತೆ ಬುದ್ಧಿ ಹೇಳುತ್ತದೆ. ಸಂಯಮ ಸಹನೆಗಳನ್ನು ಮೈವೆತ್ತಿಕೊಂಡು ಹೊಂದಾಣಿಕೆಯ ಬಾಳನ್ನು ಸ್ಥಾಪಿಸಬೇಕಾದ ಕಾಳಜಿಯನ್ನು ಈ ನೆಲೆಗಟ್ಟು ಹೊಂದಿರುವುದನ್ನು ಕಾಣಬಹುದಾಗಿದೆ. ಅದನ್ನು ಹೆಣ್ಣು ಹಾಗೂ ಗಂಡು ಇಬ್ಬರಿಗೂ ಸಮಾನವಾಗಿ ಆರೋಪಿಸುವುದು ಇಲ್ಲಿನ ಉದಾರ ಮನಃಸ್ಥಿತಿಯಾಗಿದೆ. ಆದರೆ ಬಹುತೇಕವಾಗಿ ಪುರುಷನ ಆಲೋಚನೆಗೆ ಬದ್ಧವಾಗಿಯೇ ಇದ್ದುಕೊಂಡು ಕುಟುಂಬವನ್ನು ಮುನ್ನಡೆಸುವುದು ಹೆಣ್ಣಿನ ಕರ್ತವ್ಯವಾಗಿರುವ ಮೌಲ್ಯಗಳನ್ನು ನವೋದಯ ಸಾಹಿತ್ಯ ಪ್ರತಿಪಾದಿಸುತ್ತದೆ.

ಪುರೋಹಿತ ಶಾಹಿಯ ಆಲೋಚನೆ ಹಾಗೂ ನಿಯಂತ್ರಣಗಳನ್ನು ಪ್ರಶ್ನಿಸುವ ಮನಃಸ್ಥಿತಿ ವಸಾಹತುಶಾಹಿಯ ಆಕ್ರಮಣದಿಂದ ಎದುರಾಯಿತು. ಮೂಲದ ಸಂಸ್ಕೃತಿಯ ಉಳಿವಿಗೆ ಅಂದರೆ ಪುರಾತನ ಧರ್ಮದ ಉಳಿವಿಗೆ ಸ್ತ್ರೀಯನ್ನೇ ಬಳಸಿಕೊಳ್ಳಲಾಯಿತು. ಇಲ್ಲಿ ಅವಳ ಇಚ್ಛೆಯನ್ನು, ಮನಸ್ಸನ್ನು ಮಾನ್ಯ ಮಾಡದೇ ಅವಳ ಬದುಕನ್ನು ನಿರ್ದೇಶಿಸಲಾಯಿತು. ಅಂದರೆ ಇಲ್ಲಿ ಸಂಸ್ಕೃತಿಯ ಮರು ಪ್ರತಿಷ್ಠಾಪನೆಗೆ ಸ್ತ್ರೀಯನ್ನೇ ತಾಯಿಯಾಗಿ, ದೇವಿಯಾಗಿ ಆರಾಧಿಸುತ್ತ ತೊಡಗಿಸಿಕೊಳ್ಳಲಾಗಿದೆ. ಅಲ್ಲದೆ ದೇಶದ, ನಾಡಿನ ಎಲ್ಲ ಜಾತಿ - ಮತಗಳರೆಲ್ಲರೂ ಒಂದಾಗಲೇಬೇಕಾಗಿದ್ದ ಸಂದರ್ಭವೂ ಅದಾಗಿದ್ದುದರಿಂದ ಸ್ತ್ರೀಯರಲ್ಲಿ ಜಾಗೃತಿ ಮೂಡಿಸುವುದಕ್ಕೆ ಸಂಸ್ಕೃತಿಯನ್ನು ಬಿಟ್ಟು ಹೋಗದಂತೆ ಎಚ್ಚರ ಮೂಡಿಸುವುದಕ್ಕೆ ಅವಳನ್ನು ಬಳಸಿಕೊಳ್ಳಲಾಯಿತು. ಅದಕ್ಕಾಗಿಯೇ ಪೌರಾಣಿಕ ಹಾಗೂ ಐತಿಹಾಸಿಕ ಸ್ತ್ರೀಯರ ಬದುಕನ್ನು ಉದಾತ್ತವಾದುದಾಗಿ ಮೌಲ್ಯಯುತವಾದುದಾಗಿ ಚಿತ್ರಿಸಲಾಗಿದೆ.

ಹೊಸ ವಿಚಾರಧಾರೆಯ ಪ್ರಭಾವವಾಗಿ, ಸ್ತ್ರೀ ಶಿಕ್ಷಣ, ಸುಧಾರಣೆಯ ಪರಿಣಾಮದಿಂದಾಗಿ ಸ್ತ್ರೀ ಸಮೂಹ ಆ ಹರಿವಿನಲ್ಲಿ ಕೊಚ್ಚಿ ಹೋದರೆ ಭಾರತೀಯ ಸಿದ್ಧ ಮಾದರಿಯ ಬದುಕನ್ನು ಮುನ್ನಡೆಸುವ ಶಕ್ತಿಯೇ ಇಲ್ಲವಾಗಬಹುದೆಂಬ ಆತಂಕದ ಹಿನ್ನೆಲೆಯಲ್ಲಿ ಈ ಕಾಳಜಿ ಪ್ರಕಟಗೊಂಡಿದೆ. ಆದುದರಿಂದಲೇ ಪುರುಷನ ಆಲೋಚನೆಯನ್ನು ಒಪ್ಪಿಕೊಂಡು, ಕುಟುಂಬ ಹಾಗೂ ತಾಯ್ತನವನ್ನು ಪೋಷಿಸಲಾಗಿದೆ. ಈ ನೆಲೆಯಲ್ಲಿಯೇ ಇತಿಹಾಸ, ಪುರಾಣದ ಸ್ತ್ರೀಯರ ಹಾಗೂ ಗೃಹಿಣಿಯರ ಜವಾಬ್ದಾರಿಯನ್ನು ಈ ಸಂದರ್ಭ ನಿರ್ದೇಶಿಸಲಾಗಿದೆ. ಈ ಧೋರಣೆಗಳನ್ನು ಮಾಸ್ತಿ ಅವರ ಕತೆಗಳಲ್ಲಿನ ಸ್ತ್ರೀಯರೂ ಒಪ್ಪಿಕೊಂಡು ಪ್ರತಿಪಾದಿಸಿದ್ದು ವೇದ್ಯವಾಗುತ್ತದೆ.

ನವೋದಯ ಸಾಹಿತ್ಯ ಸ್ತ್ರೀಯನ್ನು ಒಂದು ಶಕ್ತಿಯಾಗಿ ಕಂಡಿದೆ. ಸ್ತ್ರೀ ಪುರುಷರನ್ನು ದೈವಿಕ ನೆಲೆಯಲ್ಲಿ ಮತ್ತು ಪ್ರಕೃತಿ - ಪುರುಷರ ನೆಲೆಯಲ್ಲಿ ಕಂಡರಿಸುತ್ತ ವಿವಾಹ ಹಾಗೂ ದಾಂಪತ್ಯವನ್ನು ಅನಿವಾರ್ಯಗೊಳಿಸುತ್ತದೆ. ಅದು ಮಾನವ ಲೋಕದ ಉಳಿವಿಗೆ ಅಗತ್ಯವಾದ ಹಾಗೂ ಸಹಜವಾದ ಸಂಬಂಧವಾಗಿ ಪ್ರತಿಪಾದಿಸುತ್ತದೆ. ಅಲ್ಲಿ ಸ್ತ್ರೀಯ ವ್ಯಕ್ತಿತ್ವಕ್ಕಾಗಲೀ, ಮನಸ್ಸಿಗಾಗಲೀ ಬೆಲೆ ದಕ್ಕುವುದಿಲ್ಲ. ನವೋದಯ ಸಾಹಿತ್ಯ ಲೈಂಗಿಕ ಸಂಬಂಧವನ್ನು ಬಹಿರಂಗಗೊಳಿಸುವುದಿಲ್ಲ.

ಅದನ್ನು ಗೌಪ್ಯವಾಗಿಡುತ್ತದೆ. ಆದರೆ ಸ್ತ್ರೀ ಪುರುಷರ ನಡುವಿನ ಪ್ರೀತಿ - ಪ್ರೇಮವನ್ನು ಆದರ್ಶವಾಗಿ ಕಾಣುತ್ತದೆ. ಪ್ರೀತಿಯ ನೆಲೆಗಟ್ಟೇ ಬದುಕನ್ನು ಗಟ್ಟಿಗೊಳಿಸುತ್ತದೆ ಎಂಬ ಆಶಯವನ್ನು ಅದು ವ್ಯಕ್ತಪಡಿಸುತ್ತದೆ. ಆದುದರಿಂದಲೇ ಇಲ್ಲಿ ಸ್ತ್ರೀಯನ್ನು ಕಾಮದ ಗೊಂಬೆಯಾಗಿ ಕಾಣುವುದನ್ನು ತಡೆಯಲಾಗಿದೆ. ಅಲ್ಲದೆ ಮುಕ್ತ ಲೈಂಗಿಕ ಸ್ವಾತಂತ್ರ್ಯವನ್ನು ವಿರೋಧಿಸಲಾಗಿದೆ. ಆದರೆ ಇಲ್ಲಿ ಪರಸ್ಪರ ಪ್ರೀತಿಸಿದವರ ನಡುವೆ ನಡೆಯಬಹುದಾದ ಲೈಂಗಿಕ ಸಂಬಂಧ ತೀರಾ ತಿರಸ್ಕೃತಗೊಳ್ಳುವುದಿಲ್ಲ. ಪ್ರೀತಿ - ಪ್ರೇಮದ ಪ್ರತೀಕವಾಗಿ ಅದನ್ನು ಗ್ರಹಿಸಲಾಗುತ್ತದೆ. ಆದರೂ ವಿವಾಹಾನಂತರದ ದೈಹಿಕ ಸಂಬಂಧವೇ ಹೆಚ್ಚು ಗೌರವಯುತವಾದದ್ದು ಎಂಬ ನಂಬಿಕೆಯನ್ನೇ ಇಲ್ಲಿ ಬಲವಾಗಿ ಪ್ರತಿಪಾದಿಸಲಾಗಿದೆ.

ನವೋದಯ ಸಾಹಿತ್ಯ ಶೀಲದ ಕುರಿತು ಸ್ತ್ರೀ ಸದಾ ಜಾಗೃತಳಾಗಿರುವಂತೆ ನೀತಿ ಹೇಳುತ್ತದೆ. ಅದನ್ನು ಪಾಲಿಸುವುದಕ್ಕೆ ಜೀವ ತ್ಯಾಗ ಮಾಡಬೇಕಾದುದನ್ನು ಒಂದು ಮೌಲ್ಯಯುತ ನಂಬಿಕೆಯಾಗಿ ಕಟ್ಟಿಕೊಟ್ಟಿದೆ. ಅಂಥ ಒಂದು `ಮೌಲ್ಯ'ಯುತ ಬದುಕು ಕಟ್ಟುವುದಕ್ಕೆ ಮುಂದಿನ ಪೀಳಿಕೆಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಸ್ತ್ರೀ ಆದರ್ಶ ಶಕ್ತಿಯಾಗಿ ಗುರುತಿಸಿಕೊಂಡಳು. ಜೀವದ ಹಂಗೂ ತೊರೆದು ಶೀಲ ಕಾಪಾಡಿಕೊಳ್ಳುವ ಮತ್ತು ತ್ಯಾಗದ ಬಾಳ್ವೆಯನ್ನು ಮಾಡುವುದೇ ಅವಳ ಮುಂದಿದ್ದ ಸವಾಲಾಗಿತ್ತು.

ನವೋದಯ ಸಾಹಿತ್ಯ ಸ್ತ್ರೀಯನ್ನು ಕಂಡರಿಸಿದ ಮಾದರಿಯನ್ನೇ ಮಾಸ್ತಿ ಕತೆಗಳಲ್ಲೂ ಕಾಣುತ್ತೇವೆ. ನವೋದಯವು ಸ್ತ್ರೀಯನ್ನು ಆದರ್ಶ ಸ್ಥಾಪನೆಗೆ ಬಳಸಿಕೊಂಡರೆ ಮಾಸ್ತಿ ಸನಾತನ ಧರ್ಮದ ಪ್ರತಿಷ್ಠಾಪನೆಗೆ ಬಳಸಿಕೊಂಡಿದ್ದಾರೆ. ಒಟ್ಟಿನಲ್ಲಿ ಸ್ತ್ರೀ ಪುರುಷ ನಿರ್ಧರಿತ ಮೌಲ್ಯಗಳ ಹಾದಿಯಲ್ಲೇ ಬದುಕು ಕಟ್ಟಿಕೊಳ್ಳುವುದನ್ನೇ ಅನಿವಾರ್ಯವಾಗಿ ಒಪ್ಪಿಸುತ್ತಾರೆ ಮತ್ತು ಆ ಮೂಲಕ ಇತರರಿಗೂ ಅದನ್ನು ಅನುಸರಿಸುವಂತೆ ಪ್ರೇರಿಸುತ್ತಾರೆ.

ಹೆಂಗರುಳಿನ ಸಂವೇದನೆ

ಕತೆಗಳನ್ನು ಬರೆಯುವ ಸಂದರ್ಭ, ನೀತಿ ಹೇಳುವ ಸಂದರ್ಭ ಹೆಣ್ಣೇ ಆಗಿ ಬಿಡುವ ಮಾಸ್ತಿ ಹೆಣ್ತನದ ಸಿದ್ಧ ಮಾದರಿಗಳನ್ನು ಒಪ್ಪಿಕೊಂಡೇ ` ಬದುಕನ್ನು ಮರುಸ್ಥಾಪಿಸಿ ಅದೇ ನೆಲೆಯಲ್ಲಿ ಆಕೆ ಬಾಳಬೇಕಾದದ್ದನ್ನು ಸ್ವೀಕಾರಾರ್ಹಗೊಳಿಸುವಂತೆ ಪ್ರೇರಣೆ ನೀಡುತ್ತಾರೆ. ಪುರುಷ ಪ್ರಧಾನ ಮೌಲ್ಯವನ್ನು ಒಪ್ಪಿಕೊಂಡು ಮನಸ್ಸು ಹೇಳಿದಂತೆ ಬದುಕ ಹೊರಟರೆ ಪುರುಷ ವ್ಯವಸ್ಥೆ ಅವಳನ್ನು ತಿರಸ್ಕರಿಸುತ್ತದೆ. ಆಗ ಆತ್ಮ ಶೋಧನೆಗೆ ತೊಡಗಿಕೊಳ್ಳುವ ಹೆಣ್ಣು ಪಶ್ಚಾತ್ತಾಪ ಪಡುತ್ತಾಳೆ. ಮರಳಿ ಅದೇ ಪರಂಪರೆಯೇ ಮೌಲ್ಯಯುತವಾದದ್ದೆಂದು ನಂಬಿದ ಸನಾತನ ವೈದಿಕ ಧರ್ಮದೊಳಗೇ ತಿರುಗಿ ಬರುತ್ತಾಳೆ. ಒಂಟಿಬಾಳು ಸಹ್ಯವಾಗದ ನೆಲೆಯಲ್ಲಿ ಅದನ್ನು

ಸ್ಥಿರೀಕರಿಸುವುದಾಗುತ್ತದೆ. ಬದುಕಿನ ನೆಲೆಯಲ್ಲಿ ಸಹ ಜೀವನ, ಸ್ತ್ರೀ - ಪುರುಷ ಸಂಬಂಧ ಪ್ರಾಕೃತಿಕ ಸಹಜವಾದದ್ದು, ಆದರೆ ಅದು ಸಮಾನತೆಯ ನೆಲೆಯಲ್ಲಿ ಸಾಗಿದಾಗ ಪ್ರಶ್ನಾರ್ಹವಾಗುವುದಿಲ್ಲ. ಆದರೆ ಗಂಡಿನ ಅಧೀನತೆಯಲ್ಲಿ ಹೆಣ್ಣು ಬದುಕಬೇಕೆನ್ನುವ ಸಂಬಂಧ ಚರ್ಚೆಗೊಳಗಾಗುತ್ತದೆ.

ಎಲ್ಲೂ ಸಿಟ್ಟುಗೊಳ್ಳದ ಆವೇಶ ಪಡೆದ ಸಹನೆಯ ಸ್ವಭಾವವನ್ನು ಮಾಸ್ತಿ ಸ್ವತಃ ತಾವೇ ಆವಾಹಿಸಿಕೊಳ್ಳುತ್ತಾರೆ. ಸಾಂಸ್ಕೃತಿಕ ಸಂಘರ್ಷದ ನಡುವೆ ಸ್ಥಳೀಯ ಸಂಸ್ಕೃತಿಯನ್ನು ಅಲ್ಲಾಡಿಸಬಾರದ್ದನ್ನು ಉದ್ವೇಗ ರಹಿತ ಭಾವದಿಂದಲೇ ಅರ್ಥೈಸಲು ಪ್ರಯತ್ನಿಸಿದ್ದಾರೆ. ಇದೇ ಸಹನೆಯ ಸ್ವಭಾವದ ಸ್ತ್ರೀ - ಪುರುಷರಿಗೂ ಅನುಕರಣೀಯಬೇಕಾದ ನೀತಿಯನ್ನು ಈ ಮೂಲಕ ತಿಳಿಸಲಾಗಿದೆ. ಸಂಸ್ಕೃತಿ ರೂಪಿಸಿದ ಹೆಣ್ತನದ ಸ್ವರೂಪವನ್ನು ಈ ಸ್ವಭಾವವೇ ತೆರೆದಿಡುತ್ತದೆ.

ತಾಯಿಯಂತೆ ತನ್ನ ಸಂಕಟ, ನೋವುಗಳನ್ನು ಮರೆತು ಎಲ್ಲರನ್ನೂ ಸುಖದಿಂದಿರುವಂತೆ ಹರಸುವ ಮತ್ತು ಸಲಹುವ ಹೊಣೆಗಾರಿಕೆಯನ್ನು ಹೆಣ್ಣು ಹೊರಬೇಕಾದುದನ್ನು ಮಾಸ್ತಿಯ ಹೆಣ್ತನ ಪ್ರತಿಪಾದಿಸುತ್ತದೆ. ಪುರುಷನ ಆಧಿಕ್ಯ, ಅಬ್ಬರ, ಶೋಷಣೆಯ ಅಟ್ಟಹಾಸಕ್ಕೆ ಸ್ತ್ರೀ ಒಳಗಾಗುವ ಸಂದರ್ಭವನ್ನು ಅದು ಗಣಿಸುವುದಿಲ್ಲ. ಆದರೆ ಹೆಣ್ಣಿಗೇ ಹೊಂದಾಣಿಗೆಯ ಮೂಲಕ ದಾಂಪತ್ಯವನ್ನು ಸರಿದೂಗಿಸಬೇಕೆಂಬುದನ್ನೂ ತಿಳಿಸುತ್ತದೆ. ಇಂಥ ಸಂದರ್ಭಗಳಲ್ಲಿ ಸ್ತ್ರೀ ತಾಯಿಯಂತೆ ತಿಳಿ ಹೇಳಬೇಕೆಂಬುದನ್ನು ಸೂಚಿಸುತ್ತದೆ. ಈ ಮೂಲಕ ಪುರುಷನಿಗೂ ರೋಷ - ದ್ವೇಷಗಳನ್ನು ತೊರೆಯುವಂತೆ, ಪ್ರೀತಿಯ ಸಂಬಂಧ ಬೆಸೆಯುವಂತೆ ಮಾಡಬೇಕೆಂಬ ಸದಾಶಯ ವ್ಯಕ್ತಪಡಿಸುತ್ತದೆ. ಹೆಣ್ಣಿನಿಂದಾಗಿ ನೊಂದ ಪುರುಷ ಕಳವಳಪಡುವ ಸಂದರ್ಭದಲ್ಲಿ ತಾನು ಮಾಡಿದ್ದು ತಪ್ಪು ಎಂದು ಪಶ್ಚಾತ್ತಾಪ ಪಡುವ ಹೆಣ್ಣು ಮನಸ್ಸು ತನ್ನ ನೋವು - ಸಂಕಟಗಳನ್ನೆಲ್ಲ ಮರೆತು, ಅವನನ್ನು ಸಂತೈಸುತ್ತದೆ. ಇಂತಹ ಸಂದರ್ಭಗಳಲ್ಲಿ ತನ್ನ ಕಷ್ಟ ಕಷ್ಟವೇ ಅಲ್ಲ ಎಂದು ಅವಳ ಮನಸ್ಸು ನಿರ್ಧರಿಸುತ್ತದೆ. ತನ್ನನ್ನು ನಿಯಂತ್ರಿಸುತ್ತ, ಬಂದ ಪರುಷ ಶಕ್ತಿಯನ್ನು ಎಲ್ಲೂ ಅನುಮಾನಿಸದೆ ತಾನು ಅದನ್ನು ಶಿರಸಾ ಪಾಲಿಸಬೇಕಾದುದು ತನ್ನ ಕರ್ತವ್ಯ ಎಂದು ಭ್ರಮಿಸುತ್ತದೆ. ತನಗೆ ಸಮ್ಮತವೆನಿಸುವ ಸನಾತನ ಧರ್ಮದ ಉಳಿವು ಆಕೆಗೆ ಮುಖ್ಯವಾಗುತ್ತದೆ. ಅದನ್ನು ತನ್ನ ಮಕ್ಕಳೂ ಮುಂದುವರಿಸಿಕೊಂಡು ಹೋಗಬೇಕಾದ ಕಾಳಜಿ ತಾಯ್ತನದಲ್ಲಿದೆ. ಇಲ್ಲಿ ಮಾಸ್ತಿಯ ಹೆಣ್ತನದ ಸಂವೇದನೆ ಪುರುಷಪ್ರಧಾನ್ಯ ಸಂಸ್ಕೃತಿ ಹೇರಿದ ಮೌಲ್ಯಗಳನ್ನೇ ಉಸಿರಾಡುತ್ತ ಬದುಕಿ ತನ್ನತನ ಕಳೆದುಕೊಳ್ಳುವುದರ ಕುರಿತು ಯೋಚಿಸುವುದಿಲ್ಲ. ಅದನ್ನು ಪಾಲಿಸುವುದೇ ಬದುಕಿನ ಕರ್ತವ್ಯವಾಗಿ ನಂಬಿ ಪಾಲಿಸುತ್ತದೆ. ಅಲ್ಲಿ ತನ್ನತನ, ಅಸ್ತಿತ್ವದ ಪ್ರಶ್ನೆಗಳ್ಯಾವುವೂ ಮುಖ್ಯವಾಗುವುದಿಲ್ಲ.

ಆದುದರಿಂದಲೇ ಸನಾತನ ವೈದಿಕ ಧರ್ಮದ ಪ್ರತಿಷ್ಠಾಪನೆಯ ನೆಪದಲ್ಲಿ ಪುರುಷ ಪ್ರಾಧಾನ್ಯ ಸಂಸ್ಕೃತಿಗೆ ಹೆಣ್ತನ ಅಧೀನವಾಗಿ ಅದನ್ನು ಪಾಲಿಸುವಂತೆ ಸ್ತ್ರೀಯರನ್ನು ಪ್ರೇರಿಸುತ್ತದೆ. ಪುರುಷ

ಪ್ರಾಧಾನ್ಯದ ಹೆಣ್ಣನ್ನು ಕಡೆಗಣಿಸಿದ್ದನ್ನು, ತಾರತಮ್ಯ ತೋರಿದ್ದನ್ನು ಅನ್ಯಾಯ ಮಾಡಿದ್ದನ್ನು ಪ್ರಶ್ನಿಸಿದರೆ ಹೆಣ್ಣೇ ನೋವು ತಿನ್ನುವ, ಪಶ್ಚಾತ್ತಾಪ ಪಡುವ ಸ್ಥಿತಿಗೆ ಬರಬೇಕಾಗುತ್ತದೆ. ಆದುದರಿಂದ ಮರಳಿ ಪುರುಷ ಪ್ರಾಧ್ಯಾನ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಾಸ್ತಿಯವರ ಸ್ತ್ರೀಪ್ರತಿನಿಧೀಕರಣದ ಪ್ರಮುಖ ನೆಲೆಗಳನ್ನು ಹಾಗೂ ಮಾಸ್ತಿ ನಿಲುವುಗಳನ್ನು ಇದುವರೆಗೆ ಗಮನಿಸಿದ್ದಾಯಿತು. ಮುಂದಿನ ಅಧ್ಯಾಯಗಳಲ್ಲಿ ಕತೆಗಳಲ್ಲಿ ಮಾಸ್ತಿ ಆದನ್ನು ಆಗುಗೊಳಿಸಿದ ಬಗೆಗಳನ್ನು ವಿಶ್ಲೇಷಿಸಬಹುದು.

ಅಧ್ಯಾಯ - ೩

ವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ ಪ್ರತಿನಿಧೀಕರಣ

ವೈವಾಹಿಕ ನಿರ್ಬಂಧಗಳ ನಡುವೆ

ಜಾತೀಯ ಕಟ್ಟುಪಾಡುಗಳೊಳಗೆ

ಧರ್ಮದ ಚೌಕಟ್ಟಿನ ವ್ಯಾಪ್ತಿಯಲ್ಲಿ

ಮರು ಮದುವೆ -ವಿಧವಾ ವಿವಾಹ ಸಮಸ್ಯೆಗಳ ಸುಳಿಯಲ್ಲಿ

ತಾಯ್ತನದ ಕರ್ತವ್ಯ ನಿರ್ವಹಣೆಯಲ್ಲಿ

ಔದಾರ್ಯದ ಉರುಳಲ್ಲಿ

ಸಹನೆ, ತಾಳ್ಮೆಗಳ ಪ್ರತಿಮೂರ್ತಿಯಾಗಿ

ಕುಟುಂಬ ಪಾಲನೆಯ ಹೊಣೆಗಾರಿಕೆಯಲ್ಲಿ

ಪತಿವ್ರತಾಧರ್ಮ ಪರಿಪಾಲನೆಯಲ್ಲಿ

ಶೀಲ ಸಂರಕ್ಷಣೆಯಲ್ಲಿ

ನೈತಿಕತೆ ಪ್ರತಿಪಾದಕರಾಗಿ

ಅಧ್ಯಾಯ - ೩

ವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ ಪ್ರತಿನಿಧೀಕರಣ

ಮಾಸ್ತಿ ನಂಬಿದ್ದು ಭಾರತೀಯ ಸನಾತನ ವೈದಿಕ ಪರಂಪರೆಯನ್ನು. ಅಲ್ಲಿನ ನಡಾವಳಿಗಳನ್ನು ಮೌಲ್ಯಯುತವಾದದ್ದೆಂದು ನಂಬಿ ಪ್ರತಿಷ್ಠಾಪಿಸುವ ನೆಲೆಗೆ ಅವರು ಬದ್ಧರಾಗಿದ್ದಾರೆ. ಅದನ್ನು ಸಾರ್ವತ್ರಿಕಗೊಳಿಸುವುದು ಮಾಸ್ತಿಯವರ ಧ್ಯೇಯವೂ ಹೌದು. ಪುರುಷ ಹೇರಿದ ಮೌಲ್ಯಗಳನ್ನೇ ನಂಬಿ ಬಾಳುವುದರಲ್ಲಿ ಮಾಸ್ತಿಯವರಿಗೆ ಅಧಿಕ ಒಲವು. ಪ್ರಸ್ತುತ ಅಧ್ಯಾಯದಲ್ಲಿ ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನು ಒಪ್ಪಿಕೊಂಡು ಬಾಳಬೇಕಾದ ಮಾಸ್ತಿ ಕತೆಗಳ ಸ್ತ್ರೀಯರನ್ನು ಅಭ್ಯಸಿಸಲಾಗುತ್ತದೆ. ಆ ಮೂಲಕ ಮಾಸ್ತಿ ಅವರ ಧೋರಣೆಯನ್ನೂ ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಒಂದು ನೆಲೆಯಲ್ಲಿ ವೈದಿಕ ಮೌಲ್ಯಗಳನ್ನು ಸ್ತ್ರೀಯರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ತತ್ವವನ್ನು ಭಾರತೀಯ ಪುರಾಣದ ಸ್ತ್ರೀಯರು ಹಾಗೂ ಇತಿಹಾಸದ ಸ್ತ್ರೀಯರು ಬದುಕಿದ ರೀತಿಯನ್ನು ವಿವರಿಸಿ ಹಾಗೆಯೇ ಬಾಳಬೇಕೆಂಬುದನ್ನು ತಿಳಿಸಿದ್ದಾರೆ. ಇದೇ

ಮೌಲ್ಯಯುತವಾದ ಬದುಕು. ಅದನ್ನು ಎಲ್ಲರೂ ಅನುಸರಿಸಬೇಕೆಂಬುದನ್ನು ಹೇಳಿಸಿದ್ದಾರೆ. ಹಾಗೂ ಭಾರತೀಯ ಬದುಕಿನ ನೆಲೆಯನ್ನು ವಿಶ್ವಮಾನ್ಯವಾಗಿಸುವ ಕಾಳಜಿಯನ್ನು ಅವರು ಹೊಂದಿದ್ದಾರೆ. ತಮ್ಮ ಅನುಭವದ ಮೂಲಕವೇ ಮಾಸ್ತಿ ಅವರು ಬದುಕಿನ ರೀತಿಯನ್ನು ತೋರಿದ್ದಾರೆ. ವೈದಿಕ ಮನೆತನದ ಸ್ತ್ರೀಯರು ಸನಾತನ ಧರ್ಮವನ್ನು ಪ್ರಶ್ನಿಸುವುದೇ ಇಲ್ಲ. ಅದು ಹೇಗೆ ಬದುಕಬೇಕೆಂಬುದನ್ನು ಹೇಳಿದೆಯೋ ಅಂತೆಯೇ ಬದುಕುವುದಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಪುರುಷನನ್ನು ದೇವರಾಗಿ ಕಾಣುವ ಪರಂಪರೆಯನ್ನೂ ಕೂಡ ಕಣ್ಮುಚ್ಚಿ ಸ್ವೀಕರಿಸಿಕೊಂಡಿದ್ದಾರೆ. ಪುರುಷನಿಗೆ ಅಧೀನವಾಗಿಯೇ ಇರುವ ಇಲ್ಲಿನ ಸ್ತ್ರೀಯರು ಒಂದರ್ಥದಲ್ಲಿ ಸೇವಕಿಯರೂ ಹೌದು. ಆದರೆ ಆ ಕುರಿತ ಕೀಳರಿಮೆ ಅವರಿಗಿಲ್ಲ. ಹೆಣ್ಣು ಜನ್ಮವಿರುವುದೇ ಪುರುಷನ ಸೇವೆ ಮಾಡುವುದಕ್ಕೆ ಎಂದು ನಂಬಿರುವ ಅವರು ಪಾತಿವ್ರತ್ಯದ ಪಾಲನೆಗೆ ತಮ್ಮನ್ನು ಬದ್ಧಗೊಳಿಸಿಕೊಂಡಿದ್ದಾರೆ. ಅವರು ಅದನ್ನು ಪ್ರಶ್ನಿಸುವುದೇ ಮಹಾ ಪಾಪವೆಂಬ ಭ್ರಮೆಗೊಳಗಾದವರು. ಅಷ್ಟಕ್ಕೇ ತಮ್ಮ ಜೀವನವನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಒಂದೊಮ್ಮೆ ಅವರು ಗಂಡನನ್ನು ಪ್ರಶ್ನಿಸಿದರೆ, ತಿರಸ್ಕರಿಸಿದರೆ ಗಂಡನೇ ಅವರಿಂದ ದೂರವಾಗಿ ಬಿಡುವ ಸಂದರ್ಭ ಬಂದೊದಗುತ್ತದೆ. ಅದರಿಂದಾಗಿ ಪತಿಯಿಲ್ಲದ ಏಕಾಂತ ಬದುಕು ಪಡಬಾರದ ಕಷ್ಟ ಪಡುತ್ತದೆ. ಆದ್ದರಿಂದ ಸತಿಪತಿಯರೊಂದಾಗಿ ಬಾಳಿದರೆ ಹೆಣ್ಣಿಗೆ ಗೌರವವೆಂಬ ಭಾವನೆ ಹೇರಲಾಗಿದೆ. ಇದರಿಂದ ಆಕೆ ನಿತ್ಯ ಕುಗ್ಗಿಹೋಗುವಂತಾಗುತ್ತದೆ. ಹಾಗಾಗಿ ಸ್ವತಂತ್ರ ಆಲೋಚನೆಗಳನ್ನು ಮೈಗೂಡಿಸಿಕೊಳ್ಳುವುದಕ್ಕೂ ಆಕೆಗೆ ಅವಕಾಶವಿಲ್ಲವಾಗಿದೆ. ಆದರೆ ತನಗೆ ಹೇರಿದ ಎಲ್ಲ ಕಟ್ಟಳೆಗಳನ್ನೂ ಕೂಡ ವೈದಿಕ ಹೆಣ್ಣು ಶಿರಸಾ ಪಾಲಿಸುತ್ತಾಳೆ. ಆ ಮೂಲಕ ಇತರರಿಗೂ ಮಾದರಿಯಾಗಿ ಬಾಳುವಂತೆ ಪ್ರೇರಣೆ ನೀಡುತ್ತಾಳೆ. ಪುರಾಣವನ್ನೂ ಕೂಡ ಬದುಕಿನ ಮಾರ್ಗ ಕಂಡುಕೊಳ್ಳುವ ನೆಲೆಯಲ್ಲಿ ಸ್ವೀಕರಿಸಿರುವುದರಿಂದ ಅಲ್ಲಿನ ಸ್ತ್ರೀಯರೂ ಮಾದರಿಯೆನಿಸುವಂತೆಯೇ ಪುರುಷ ನಿರ್ದೇಶಿತ ಮಾರ್ಗದಲ್ಲಿಯೇ ಸಾಗುವವರಾಗುತ್ತಾರೆ. ರಾಣಿಯರನ್ನೂ ಪ್ರಜೆಗಳು ಅನುಸರಿಸುವುದರಿಂದ ಸಾಂಪ್ರದಾಯಕ ಬದುಕನ್ನು ಸ್ಥಿರಗೊಳಿಸುವುದಕ್ಕೆ ತಮ್ಮನ್ನು ಅರ್ಪಿಸಿಕೊಂಡು ಹಾಗೆಯೇ ಬಾಳುವಂತೆ ಪ್ರೇರಣೆ ನೀಡುತ್ತಾರೆ. ಈ ಮೂಲಕ ಪುರುಷ ಪ್ರಧಾನವಾದ ಮೌಲ್ಯಗಳನ್ನು ಪುನರ್‌ಪ್ರತಿಷ್ಠಾಪಿಸುವ ಕೆಲಸವನ್ನು ನಿಷ್ಠೆಯಿಂದ ಪೂರೈಸುತ್ತಾರೆ.

ವೈದಿಕ ಹಾಗೂ ಅವೈದಿಕ ವರ್ಗದ ಸ್ತ್ರೀಯರು ಅನುಭವಿಸುವ ಬದುಕಿನ ರೀತಿ ಭಿನ್ನಭಿನ್ನವಾದುದು. ಆದರೆ ಅವರು ಅನುಸರಿಸಬೇಕಾದ ಬದುಕಿನ ತತ್ವ ಒಂದೇ ಆಗಿರಬೇಕು ಎಂಬುದು ಮಾಸ್ತಿ ನಿಲುವು. ಹೆಣ್ಣೊಬ್ಬಳು ಮದುವೆಯಾಗುವ, ಕುಟುಂಬದ ಪೋಷಕಳಾಗುವ ಹಾಗೂ ತಾಯ್ತನವನ್ನು ಪಾಲಿಸುವ, ಉದಾರವಾದಿಯಾಗುವ, ಸಹನೆ, ತಾಳ್ಮೆಯನ್ನು

ಮೈಗೂಡಿಸಿಕೊಳ್ಳಬೇಕಾದ, ಪಾತಿವ್ರತ್ಯ, ಶೀಲ ಹಾಗೂ ನೈತಿಕತೆಯನ್ನು ಕಾಯ್ದುಕೊಳ್ಳಬೇಕಾದ ನಿಯಮಗಳಿಗೆ ಹೆಣ್ಣು ಅವಳಾಗಿಯೇ ಒಪ್ಪಿಕೊಂಡು ಬದಲಾಗುತ್ತಾಳೆ ಎಂಬುದನ್ನು ಹೆಣ್ಣಿನ ಮೂಲಕವೇ ತೋರಿಸಿಕೊಡುತ್ತಾರೆ.

ವೈವಾಹಿಕ ನಿರ್ಬಂಧಗಳ ನಡುವೆ

ಸನಾತನ ವೈದಿಕ ಪರಂಪರೆ ವಿವಾಹದ ಹೊರತಾಗಿನ ಬದುಕನ್ನು ಒಪ್ಪಿಕೊಳ್ಳಲಿಲ್ಲ. ವಿವಾಹವನ್ನು ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಗುರುತಿಸಿ ಬೆಳೆಸುತ್ತ ಬಂತು. ಆ ಸಂಬಂಧವನ್ನು ಭದ್ರಗೊಳಿಸುತ್ತಲೇ ಬಂತು. ಇದರ ಹೊರತಾಗಿ ಮಾಸ್ತಿ ಯೋಚಿಸುವುದಿಲ್ಲ. ಕತೆಗಳಲ್ಲಿನ ಸ್ತ್ರೀಯರ ಮೂಲಕ ಅದನ್ನು ಬಲವಾಗಿ ಪ್ರತಿಷ್ಠಾಪಿಸುತ್ತಾರೆ. ವಿವಾಹರಹಿತ ಸ್ತ್ರೀಯರು ಮಾಸ್ತಿ ಕತೆಗಳಲ್ಲಿ ಕಾಣಸಿಗುವುದಿಲ್ಲ. ವಿವಾಹದ ನಂತರದ ಸಂಬಂಧ, ಬದುಕು ಹೇಗಿತ್ತು ಹೇಗಿದೆ? ಎಂಬುದು ಇಲ್ಲಿ ಚರ್ಚಾರ್ಹವಾಗುವುದಿಲ್ಲ. ಆದರೆ ವಿವಾಹವಾಗಿ ಜೀವಿಸುವುದನ್ನೇ ಆದರ್ಶ ಬದುಕಾಗಿ ಕಾಣುತ್ತಾರೆ. ಈ ಹಿನ್ನೆಲೆಯಲ್ಲಿಯೇ ವೈವಾಹಿಕ ಬದುಕನ್ನು ಇಲ್ಲಿನ ಸ್ತ್ರೀಯರು ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವುದನ್ನು ಕಂಡಾಗ ಪರಂಪರಾಗತ ನಂಬಿಕೆಗಳನ್ನು ಪುನರ್ ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ ಮಾಸ್ತಿ ತೊಡಗಿಸಿಕೊಂಡದ್ದು ಸ್ಪಷ್ಟವಾಗುತ್ತದೆ. ವಿವಾಹದಿಂದಾಗಿ ಆದ ಅಲ್ಲೋಲ ಕಲ್ಲೋಲಗಳನ್ನು ಲಕ್ಷ್ಯ ಮಾಡಿ ಅದರಲ್ಲಿ ಏಗುವ ಪ್ರತಿಯೊಬ್ಬ ಸ್ತ್ರೀಯೂ ಅದೇ ಸಂಸ್ಥೆಯನ್ನು ತನ್ನ ಮಕ್ಕಳ ಬದುಕಿನಲ್ಲಿ ಕೂಡ ಮುಂದುವರಿಸುತ್ತ ಹೋಗಬೇಕು ಎಂಬುದನ್ನು ಅವರಿಂದ ಮಾನ್ಯ ಮಾಡಿಸುತ್ತಾರೆ. ವೈವಾಹಿಕ ಸಂಸ್ಥೆ ಯ ಮುಂದುವರಿಕೆಗೆ ಕೇವಲ ಮನುಷ್ಯ ಸಮಾಜದ ಬೆಳವಣಿಗೆ, ಅಭಿವೃದ್ಧಿ ಮಾತ್ರ ಉದ್ದೇಶವಲ್ಲ. ಅದನ್ನು ಪ್ರಕೃತಿ ಸಹಜ ಕಾಮದಾಹದ ತೀರಿಕೆಗೆ ಹಾಕಿಕೊಳ್ಳುವ ನೈತಿಕ ಮಾರ್ಗವಾಗಿ ಕೂಡ ಅನಿವಾರ್ಯವಾಗಿದೆ. ಬೇಕಾಬಿಟ್ಟಿಯಾಗಿ ದೈಹಿಕ ಸಂಬಂಧ ಹೊಂದುವ ಪರಿ ಭಾರತೀಯ ಸಂದರ್ಭಕ್ಕೆ ಒಪ್ಪಿತವಾಗದೇ ಹೋಗುವುದರಿಂದ ಕಾಮ ದಾಹಕ್ಕಾಗಿ ಅಡ್ಡದಾರಿ ಹಿಡಿಯದಂತೆ ಮಾಡುವುದಕ್ಕೇ ಒಂದು ಹೆಣ್ಣಿಗೆ ಒಂದು ಗಂಡು ನಿರ್ಧರಿತವಾಗಬೇಕು. ಅದೂ ಕಾಲಕ್ಕೆ ಸರಿಯಾಗಿಯೇ ಜೊತೆಯಾಗಬೇಕೆಂಬ ಮಾಸ್ತಿ ಅವರ ಎಚ್ಚರಿಕೆಯನ್ನು ಒಪ್ಪಿಕೊಂಡು ಅದನ್ನು ಪಾಲಿಸುವಂತೆ ಮಾಸ್ತಿಯವರ ಕತೆಗಳಲ್ಲಿ ಸ್ತ್ರೀಯರು ಚಿತ್ರಣಗೊಂಡಿದ್ದಾರೆ. ಕತೆಗಳಲ್ಲಿ ಸ್ತ್ರೀಯರ ವಿವಾಹದ ಬದುಕನ್ನೇ ವೈಭವೀಕರಿಸಲಾಗಿದೆ. ವಿವಾಹವಾಗದೇ ಉಳಿದವರ ಬದುಕಿನಲ್ಲಿ ಸಂಭವಿಸಿದ ಘಟನೆಗಳ ಮೂಲಕ ವಿವಾಹವನ್ನು ಪ್ರತಿಯೊಬ್ಬರಿಗೂ ಅನಿವಾರ್ಯಗೊಳಿಸುವ ಪ್ರಯತ್ನ ಮಾಡಲಾಗಿದೆ. ದೈಹಿಕ ಕಾಮನೆಗಳ ನಿಗ್ರಹ ಅಪರಾಧ ಎಂಬ ಹಿನ್ನೆಲೆಯಲ್ಲಿ ಕೂಡ ವಿವಾಹವನ್ನು ಕಡ್ಡಾಯಗೊಳಿಸಲಾಗಿದೆ. ವೈದಿಕ ಪರಂಪರೆ ಹಾಗೂ ಸಮಾಜದ

ಸಾಂಪ್ರದಾಯಕ ಕಟ್ಟುಪಾಡುಗಳ ಪಾಲನೆಗೆ ಸ್ತ್ರೀ ಬದ್ಧಳಾಗಬೇಕೆನ್ನುವ ಮೌಲ್ಯವನ್ನು ಅವರು ಸ್ಥಿರೀಕರಿಸಿದ್ದಾರೆ.

ಅನೈತಿಕ ಸಂಬಂಧಗಳ ಕಡಿವಾಣವಾಗಿ ಕೂಡ ವಿವಾಹವನ್ನು ಇಲ್ಲಿ ಕಾಯ್ದುಕೊಳ್ಳುವಂತೆ ಮಾಸ್ತಿ ಎಚ್ಚರ ವಹಿಸುತ್ತಾರೆ. ಅದನ್ನು ಹೆಣ್ಣಿನ ಮೂಲಕವೇ ಹೇಳಿಸಿ ಒಪ್ಪಿಸುವ ಕೆಲಸವನ್ನುಪೂರೈಸುವಲ್ಲಿ 'ಗೌತಮಿ ಹೇಳಿದ ಕತೆ'ಯ ಗೌತಮಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾಳೆ. ಮಾಸ್ತಿ ಕತೆಗಳ ಸ್ತ್ರೀಯರನ್ನು ಮದುವೆಗೆ ಒಪ್ಪಿಸುವಂತೆ ಮಾಡುವ ಪ್ರಮುಖ ಸ್ತ್ರೀಯಾಗಿ ಗೌತಮಿ ಕಾಣಿಸಿಕೊಳ್ಳುತ್ತಾಳೆ. ಆಕೆ ತನ್ನ ಬದುಕಿನ ಘಟನಾವಳಿಗಳನ್ನು ತೆರೆದಿಡುವಲ್ಲಿಯೇ ಅವಿವಾಹಿತ ಬದುಕಿನ ದುರಂತ ಪ್ರತಿನಿಧಿತವಾಗಿದೆ. ಇದು ಸ್ತ್ರೀಗೆ ವಿವಾಹದ ಬದುಕೇ ಭದ್ರತೆಯನ್ನು ಕೊಡುತ್ತದೆ ಎಂಬುದನ್ನು ಸಾರುತ್ತದೆ.

ಗೌತಮಿ ತಿಳಿಸುವ ವಿವಾಹದ ಕುರಿತ ಅನಿವಾರ್ಯತೆಯನ್ನು, ಪ್ರತಿಷ್ಠಾಪಿತಗೊಂಡ ಮೌಲ್ಯವನ್ನು ಅನಸೂಯೆ, ಪ್ರಿಯಂವದೆಯರು ಒಪ್ಪಿಕೊಳ್ಳವುದು ಅಂದರೆ ಗೌತಮಿಯ ಅನಂತರದ ಪೀಳಿಗೆಯೂ ಅದನ್ನು ಒಪ್ಪಿಕೊಳ್ಳವುದೂ ಆಗುತ್ತದೆ. ಇದರ ಉದ್ದೇಶವೇ ಒಂದು ಮೌಲ್ಯ ಬಾಳಬೇಕೆಂಬುದನ್ನು ಸಾರುವ ಪುರಾಣದ ಆಶಯವನ್ನು ಒಪ್ಪಿಕೊಳ್ಳುವಂತೆ ಮಾಡುವುದಾಗಿದೆ. ಅದನ್ನು ಮಾಸ್ತಿ ಗೌತಮಿಯಂಥ ಹೆಣ್ಣಿನ ಮೂಲಕ ಮಾಡಿಸುತ್ತಾರೆ ಎನ್ನುವುದು ಇನ್ನಷ್ಟು ಮುಖ್ಯವಾಗುತ್ತದೆ. ಗೌತಮಿ ಹೆಣ್ಣು. ಅದನ್ನು ಬೋಧಿಸುವುದಕ್ಕೆ ಅವಳನ್ನೇ ಬಳಸಿಕೊಳ್ಳುವ ಮೂಲಕ ಶಕುಂತಲೆಯ ಜೀವನದಲ್ಲಾದ ದುರಂತವನ್ನು ಹಾಗೂ ಅದಕ್ಕೆ ಪೂರಕವಾಗಿ ತನ್ನ ಜೀವನದ ಅಲ್ಲೋಲ ಕಲ್ಲೋಲಗಳನ್ನು ತಿಳಿಸಿ ವಿವಾಹದ ಅನಿವಾರ್ಯತೆಯನ್ನು ಸೂಚಿಸುತ್ತಾಳೆ.

।ಪ್ರಾಪ್ತವಯಸ್ಸಿನಲ್ಲಿ ವಿವಾಹ ಮಾಡಬೇಕಾದ ಅನಿವಾರ್ಯತೆಯನ್ನು ಮುಂದಿಡುವ ಮಾಸ್ತಿ ಆ ಮೂಲಕ ಒಂದು ಸಾಂಸಾರಿಕ ಜೀವನಕ್ಕೆ ಬದ್ಧಳಾಗಿರಬೇಕಾದ ಅನಿವಾರ್ಯತೆಯನ್ನು ಪರಿಚಯಿಸಿದ್ದಾರೆ. ಅಲ್ಲದೆ ಕುಟುಂಬದ ಪ್ರತಿಷ್ಠಾಪನೆಯ ಅಗತ್ಯವನ್ನು ಒಪ್ಪುವಂತೆಯೂ ಮಾಡಿದ್ದಾರೆ. ಈ ಮೂಲಕ ಸನಾತನ ವೈದಿಕ ಪರಂಪರೆಯನ್ನು ಪ್ರತಿಷ್ಠಾಪಿಸುವ ಸ್ತ್ರೀಯರನ್ನು ಪರಿಚಯಿಸಿದ್ದಾರೆ.

ಕಾಮನೆಗಳ ನಿಗ್ರಹ ಅಸಾಧ್ಯವಾದಾಗ ಗೌತಮಿ ವಿವಾಹ ಪೂರ್ವದಲ್ಲೇ ಗಂಡಿನ ಸಾಮೀಪ್ಯವನ್ನು ಬಯಸಿ ಭಾರಧ್ವಾಜನೊಂದಿಗೆ ಕೂಡಿದ್ದು ತಪ್ಪೆನ್ನಿಸುವುದಿಲ್ಲ. ಆದರೆ ಆಕೆ ಅವನ ಅಂತ್ಯದ ನಂತರ ಮತ್ತೆ ಅವನ ಸಹೋದರ ದತ್ತನಲ್ಲಿ ಒಂದಾಗ ಬಯಸುತ್ತಾಳೆ. ಆತ ಅದರಿಂದ ಹಿಂಜರಿಯುತ್ತಾನೆ. ದತ್ತ ಹಂತ ಹಂತವಾಗಿ ಗೌತಮಿಯನ್ನು ಬದಲಾಯಿಸುತ್ತಾ ಹೋಗುವಲ್ಲಿ ಕಾಮದ ಸಂಬಂಧಕ್ಕೆ ಎಲ್ಲೆಯನ್ನು ಹಾಕುವುದನ್ನೂ ಗ್ರಹಿಸಬಹುದಾಗಿದೆ.।

ಕಾಮ ಎಂಥವರನ್ನೂ ವಿಚಲಿತರನ್ನಾಗಿಸುತ್ತದೆ ಎಂಬುದನ್ನು ಗೌತಮಿ ತನ್ನ ಬದುಕನ್ನೇ ಉದಾಹರಿಸಿ ಸ್ಪಷ್ಟಪಡಿಸುತ್ತಾಳೆ. ಅದನ್ನು ತೀರಿಸಿಕೊಳ್ಳುವುದನ್ನು ತಡೆಯಲಾಗುವುದಿಲ್ಲ. ಆದರೆ ಅದು ಸ್ವೇಚ್ಛಾಪ್ರವೃತ್ತಿ ತನಕ ಹೋಗಬಾರದೆಂದೇ ವಿವಾಹದ ಚೌಕಟ್ಟನ್ನು ಹಾಕಿಕೊಳ್ಳುವಂತೆ ಸ್ತ್ರೀಯರನ್ನು ಸ್ತ್ರೀಯರಿಂದಲೇ ಪ್ರೇರಿಸುವ ಕೆಲಸವನ್ನು ಸೂಕ್ಷ್ಮವಾಗಿ ಕತೆಗಾರರು ನಿರ್ವಹಿಸಿದ್ದಾರೆ. ಇಲ್ಲಿ ವಿವಾಹವೇ ಬದುಕಿನ ಗುರಿ ಎಂಬ ಧಾಟಿಯಲ್ಲಿ ಅದನ್ನು ಹೇರುವುದಿಲ್ಲ. ಅದೇ ಸ್ತ್ರೀಗಿರುವ ಬದುಕಿನ ಮಾರ್ಗ ಎಂತಲೂ ನೇರವಾಗಿ ಹೇಳುವುದಿಲ್ಲ. ಆದರೆ ಪ್ರಕೃತಿ ಸಹಜ ಸ್ವಭಾವದ ನೆಲೆಗಟ್ಟಿನಲ್ಲಿ ಸ್ತ್ರೀಗೆ ವಿವಾಹ ಅನಿವಾರ್ಯ ಎಂದು ತಿಳಿ ಹೇಳಿ ಅದನ್ನು ಹೆಣ್ಣು ಮಕ್ಕಳು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಗೌತಮಿಯನ್ನು ಬಳಸಿಕೊಂಡಿದ್ದಾರೆ.

ತನ್ನ ಬದುಕಿನ ಅನುಭವದ ಹಿನ್ನೆಲೆಯಲ್ಲಿಯೇ ಗೌತಮಿ - ಪ್ರಿಯಂವದೆ ಅನಸೂಯೆಯರಿಗೆ ಬೇಗ ವಿವಾಹ ಮಾಡಿಸುವ ನಿರ್ಧಾರಕ್ಕೆ ಬಂದದ್ದರಲ್ಲಿ ಲೈಂಗಿಕ ಸುಖಕ್ಕಾಗಿ ನೈತಿಕ ಮಾರ್ಗ್‌ಕ್ಕಿಳಿಯಬಾರದು ಎಂಬ ಎಚ್ಚರಿಕೆ ಕಾಣುತ್ತದೆ. 'ನೀವು ಚಿಕ್ಕವರು, ನಿಮಗೆ ಈ ಮಾತೆಲ್ಲ ತಿಳಿಯುವುದಿಲ್ಲ. ಬ್ರಹ್ಮಚರ್ಯೆಯಲ್ಲಿ ಇರುವ ಮಕ್ಕಳಿಗಾದರೂ ಶಕುಂತಲೆಗೆ ಬಂದೊದಗಿದ ಮನೋಧರ್ಮ ಬಂದೊದಗಬಹುದು. 'ನನ್ನ ಚಿಕ್ಕಂದು ಒಬ್ಬ ತರುಣಿಗೆ ಆದ ಅನುಭವವನ್ನು ನಾನು ಬಲ್ಲೆನು. ಅದನ್ನು ಹೇಳುತ್ತೇನೆ ಕೇಳಿ, ಅದನ್ನು ಕೇಳಿದ ಮೇಲೆ ನಾನು ನಿಮ್ಮನ್ನು ಕುರಿತು ನಾನು ಭಯಪಟ್ಟಿದ್ದು ಸರಿಯೆಂಬುದು ಒಪ್ಪುವಿರಿ' ಎನ್ನುವಲ್ಲಿ ಏಕಾಂತದ ಜೀವನದಿಂದ ವ್ಯಥೆಯೂ ಮೂಡುತ್ತದೆ. ವಿವಾಹಕ್ಕೆ ಹೆಣ್ಣು ಒಳಗಾಗಬೇಕಾದ ಅನಿವಾರ್ಯತೆಯನ್ನು ಸೌಮ್ಯವಾಗಿ ಪ್ರತಿಪಾದಿಸುವಲ್ಲಿ ಇದರ ಹಿಂದೆ ವೈವಾಹಿಕ ಜೀವನದಿಂದ ಸ್ತ್ರೀ ದೂರಸರಿಯಬಾರದೆಂಬ ಉದ್ದೇಶವಿದೆ. ಅದನ್ನು ಸ್ತ್ರೀಯೇ ಹೇಳಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂಬುದು ಮಾಸ್ತಿಯವರ ನಿಲುವಾಗಿದೆ. ಒಬ್ಬಂಟಿ ಜೀವನದ ಸೊರಗುವಿಕೆಯಿಂದ ಬಾಳಿನಲ್ಲಿ ಜೊತೆಗಾರನನ್ನು ಸಹಜವಾಗಿ ಬಯಸುವ ಬಯಕೆಯನ್ನು ಆಕೆ ಒಪ್ಪಿಕೊಳ್ಳುವುದನ್ನು ತಿಳಿಸಿ ಸಾರ್ವತ್ರಿಕಗೊಳಿಸಿದ್ದಾರೆ. ಬಾಳಿನಲ್ಲಿ ಆಗಿ ಹೋದ ಭಾರಧ್ವಾಜನ ನೆನಪೇ ಕ್ಷಣ ಕ್ಷಣ ನೆನಪಿಸಿಕೊಳ್ಳುವ ಗೌತಮಿ, ' ಹೆಣ್ಣು ಕಿವಿಗೆ ಗಂಡದನಿ ಎಂದಾದರೂ ಸವಿಯೆ ಸರಿ. ಆದರೆ ಅದರಲ್ಲಿ ಒಲುಮೆ ಬೆರೆತಾಗ ಆ ಸವಿಗೆ ಹೊಸ ಒಂದು ಪಾಕ ಬರುತ್ತದೆ. ಅಂದಿನ ಅವನ ಮಾತಿನ ಆ ಪಾಕವನ್ನು ಅವಳು ನೆನೆದಳು' ಎನ್ನುವಲ್ಲಿ ಅದು ಸ್ಪಷ್ಟವಾಗುತ್ತದೆ.

ದತ್ತನಲ್ಲಿ ತನ್ನನ್ನು ವಿವಾಹವಾಗುವಂತೆ ಗೋಗರೆದ ಮಾಲಿನಿ (ತನ್ನದೇ ಕತೆಯನ್ನು ಹೇಳುವ ಸಂದರ್ಭದಲ್ಲಿ ಗೌತಮಿ ತನ್ನ ಹೆಸರನ್ನು ಮಾಲಿನಿಯಾಗಿ ಬದಲಾಯಿಸಿ ವಿವರಿಸುತ್ತಾಳೆ.) ದತ್ತನ ಅಚಲ ಸನ್ಯಾಸತ್ವದಿಂದ ಆ ಆಸೆಯನ್ನು ತೊರೆದು ಏಕಾಂತವಾಗಿ ಬಾಳಬೇಕಾಗಿ ಬಂದದ್ದರ ಅಸಹನೀಯತೆಯಿಂದಲೇ ಅವಳು, 'ದತ್ತನ ತಪಸ್ಸಿನಂತೆ ಮಾಲಿನಿಯ ಪುಣ್ಯವೂ ದೊಡ್ಡದು.

ಅಷ್ಟು ಪುಣ್ಯವಿಲ್ಲದ ಹುಡುಗಿ ಅಂಥ ಆಸೆಯ ಸುಳಿಯಲ್ಲಿ ಸಿಕ್ಕಿ ಏನಾಗಬೇಕು? ಇದಕ್ಕಾಗಿಯೇ ನಾನು ಹುಡುಗಿಯರಿಗೆ ಬಹು ವಯಸ್ಸಾಗುವ ಮುನ್ನ ಮದುವೆ ಆಗಲಿ ಎನ್ನುವುದು. ಎಲ್ಲರೂ ಮಾಲಿನಿಯಲ್ಲ, ಎಲ್ಲರಿಗೂ ಅವಳಲ್ಲಿ ಹುಟ್ಟಿದಂತೆ ಮದುವೆಯ ಆಸೆ ಹುಟ್ಟುವುದಿಲ್ಲ. ಹುಟ್ಟಿ ತಪ್ಪುವುದಿಲ್ಲ. ಆಸೆ ಮೂಡಿ ಒಬ್ಬಂಟಿಯಾಗಿ ಅಲೆಯುವ ಗತಿ ಬರುವುದಿಲ್ಲ. ಆದರೂ ವಯಸ್ಸು ವಯಸ್ಸೇ. ಎಳೆತನದಿಂದ ತಪವನ್ನೇ ಬಯಸಿ ನಡೆದವರ ಮಾತು ಬೇರೆ. ನಮ್ಮಂತೆ ಮದುವೆ ಆದರೂ ಆಗಬಹುದು ಎನ್ನುವ ಹೆಣ್ಣು ಸರಿಯಾದ ಕಾಲದಲ್ಲಿ ಜೊತೆಯನ್ನು ಸೇರಬೇಕು' ಪಡೆಯದೇ ಇದ್ದುದರಿಂದಲೇ ಶಕುಂತಲೆ ಮಗು, ನೀನು ನನ್ನ ಮಾತಿಗೆ ಬೇಸರಪಡಬೇಡ, ಅರಸನನ್ನು ಕಂಡೊಡನೆ ಮನಸೋತಳು. ನೀವಿಬ್ಬರೂ ಕೂಡ ಅವಳು ಅವನ ಇಚ್ಛೆಯಂತೆ ನಡೆಯಲು ಒಪ್ಪಿದಿರಿ. ಸಾಕಿದ ನನ್ನನ್ನು ಹೆರವಳಂತೆ ಕಂಡು ಹೊರಗಿನಿಂದ ಬಂದವರನ್ನು ನಿಮ್ಮವರೆಂದಿ. ಅದಕ್ಕೆ ತಾಯಿ, ನಾನು ಆ ಸಲ ನಿಮ್ಮಿಬ್ಬರಿಗೂ ಮದುವೆಯಾಗದ ಹೊರತು ನನಗೆ ಸಮಾಧಾನವಿಲ್ಲ ಎಂದೆನು' ಎನ್ನುವಲ್ಲಿ, ಶಕುಂತಲೆಯ ಬದುಕಿನ ಘಟನೆಯನ್ನು ಪ್ರಸ್ತಾಪಿಸುವಲ್ಲಿ ವಯಸ್ಸಿಗೆ ಬರುವ ಮೊದಲೇ, ಕಾಮನೆಗಳು ಹುಟ್ಟುವ ಹೊತ್ತಿಗೆ ಹೆಣ್ಣಿಗೆ ಮದುವೆ ಆಗಿಬಿಡಬೇಕು ಎಂದು ಅನುಭವದ ದೃಢ ನಿಲುವನ್ನು ಹೇಳುತ್ತಾಳೆ. ಮತ್ತು ಅದನ್ನು ಇತರರೂ ಒಪ್ಪಿ ಅನುಸರಿಸಬೇಕೆಂಬ ಕಾಳಜಿ ಅವಳಿಗಿದೆ. ಅವಳು ಪಡುವ ಆತಂಕದ ಹಿಂದೆ ಸಾಂಪ್ರದಾಯಿಕ ಮನಸ್ಸಿನ ಚಡಪಡಿಕೆ ಇದೆ. ಅದುವೇ ಸ್ತ್ರೀಗೇ ನಿರ್ಬಂಧಗಳನ್ನು ಹಾಕಿಸುತ್ತದೆ. 'ಆದರೆ ಹೆಣ್ಣಿಗೆ ಅದೇ ಎಲ್ಲವೂ ಅಲ್ಲ. ಛಲದ ಹೆಣ್ಣಿಗೆ ಸಾಧನೆಯ ಬಳಿಕವೇ ಆಗಬಹುದು, ಆಗದೆಯೂ ಇರಬಹುದು. ಆಗಬೇಕೆನ್ನುವವರು ಬೇಗ ಮದುವೆ ಆಗಿ ಬಿಡಬೇಕು. ಮನಸ್ಸು ಹೇಗೆ ಯಾವಾಗ ಬದಲಾಗುತ್ತದೆಯೋ ಹೇಳಬರುವುದಿಲ್ಲ. ತುಂಬು ಹೊಳೆದಾಟಿ ಬಂದವಳು ಅವಳಾದುದರಿಂದ ಕಾಮ ಯದ್ವಾತದ್ವಾ ಹರಿಯಬಾರದೆಂದು ಅದಕ್ಕೆ ಗೌತಮಿಯ ಮೂಲಕ ತಡೆಯೊಡ್ಡುತ್ತಾಳೆ. ಹೇಗೆ ಹೇಗೋ ಹೋಗಿ ಏನೇನೆಲ್ಲ ಆಗಲಿರುವ ಮೊದಲೇ ಹೆಣ್ಣುಮಕ್ಕಳು ವಿವಾಹ ಆಗಿಬಿಡಬೇಕು ಎಂದು ಹೇಳುವಲ್ಲಿ ವಿವಾಹ ಸಂಬಂಧಕ್ಕೆ ಒಂದುನಿಯತ್ತನ್ನು ಈ ಮೂಲಕ ಗೌತಮಿಯಿಂದ ಕೊಡಿಸುವ ಪ್ರಯತ್ನವನ್ನು ಮಾಸ್ತಿ ಮಾಡಿದ್ದಾರೆ. ಇಲ್ಲಿ ಮದುವೆ ಕುರಿತ ಆಯ್ಕೆಗೆ ಅವಕಾಶ ಕೊಟ್ಟಂತೆ ಅನ್ನಿಸುತ್ತದೆ. ಆದರೆ ಮದುವೆ ಆಗದೇ ಹೋದರೆ ಘಟಿಸುವ ದೈಹಿಕ ಸಂಬಂಧ, ಅನಾಹುತಗಳ ಚಿತ್ರಣದ ಮೂಲಕ ಆಗಲೇಬೇಕೆಂಬ ಒತ್ತಡವನ್ನು ಹೇರಿದ್ದಾರೆ.

ಭಾರತೀಯ ಸಂದರ್ಭದಲ್ಲಿ ಮಾಸ್ತಿಯವರ ನಿಲುವನ್ನುಗ್ರಹಿಸಬೇಕಾಗುತ್ತದೆ. ಅವರಿಗೆ ಸ್ತ್ರೀಯರು ವಿವಾಹಕ್ಕೂ ಮೊದಲು ಹಾದಿ ತಪ್ಪಿಬಿಡುವುದು ಸಮ್ಮತವಾಗುವುದಿಲ್ಲ. ಅದಕ್ಕೆ ಶಕುಂತಲೆಯನ್ನೇ ಉದಾಹರಿಸಿದ್ದಾರೆ. ಮತ್ತು ಹಾಗಾಗದಂತೆ ಪಡೆಯುವ ಕಾಳಜಿಯಿಂದಲೇ ಪ್ರಿಯಂವದೆ, ಅನುಸೂಯೆಯರಿಗೆ ಬೇಗ ವಿವಾಹಕ್ಕೆ ಒಪ್ಪುವಂತೆ ಗೌತಮಿಯನ್ನು ಬಳಸಿಕೊಳ್ಳುತ್ತಾರೆ. ಅವಳೂ

ಕಾಮನೆಗಳನ್ನು ತುಂಬಿಕೊಂಡ ಮನುಷ್ಯಳೇ ಆಗಿ ಕಾಣಿಸಿಕೊಳ್ಳುತ್ತಾಳೆ. ವಸಂತ ಬಂದಾಗ ಅವಳಿಗೂ ಆಸೆಗಳ ಮೊಳಕೆಯೊಡೆಯುತ್ತದೆ. 'ಸಾಯಬೇಕೆಂದಿದ್ದವಳನ್ನು ಉಳಿಸಿ ತಂದಿದ್ದವನು. ಉಳಿಸಿದ ಜೀವವನ್ನು ಸಾಕಲೊಲ್ಲನೇಕೆ?' ಎಂಬ ಅವಳ ಪ್ರಶ್ನೆ, ಮನುಷ್ಯರು ಆಸೆ ಮಾಡುವುದಿಲ್ಲ. ಹೊಳೆಯ ನೀರು ಹೊತ್ತು ತರುವ ಕಾಯಿ, ಕಸಕಾಷ್ಠ ಇಲ್ಲಿ ಅಲ್ಲಿ ಹೋಗುತ್ತವೆಂದು ತಾನು ಬಯಸುತ್ತದೆಯೇ? ಅಥವಾ ಬಯಸಿತು, ಆ ಬಯಸಿದಲ್ಲಿಗೆ ಹೋಗುತ್ತದೆಯೇ? ಜೀವನ ಪ್ರವಾಹದಲ್ಲಿ ಮನುಷ್ಯರು ಬಹುಭಾಗ ಹೊಳೆಗೆ ಸಿಕ್ಕಿದ ಕಾಯಿ ಕಡ್ಡಿಯಂತೆ ನಿಸ್ಸತ್ವ ವಸ್ತುಗಳು. ಸಾವಿರಕ್ಕೊಬ್ಬರು ನಾಯಿ - ನರಿಯ ಜನರಂತೆ ಜೀವಂತ ವಸ್ತುವಾದರೂ ಹೊಳೆಯ ಎದುರಿಗೆ ಸತ್ವಯುತ ಆಗಲಾರವು. ಭಾರಧ್ವಾಜನಿಗಿಂತ ಸತ್ವವಿರುವವರುಂಟೆ? ಅವನನ್ನು ಹೊಳೆ ನುಂಗಿತು. ಆಸೆ ಹೊಳೆಯೇರಿದರೆ ನುಂಗಬಾರದ ಜೀವ ಉಂಟೇ? ಅದು ಹೊಳೆ ಏರುವುದೂ ಮನುಷ್ಯರನ್ನು ನೋಡಿ ಅಲ್ಲ. ತಡೆಯಬಲ್ಲವರಿಗೆ ಬಹಳ ಆಸೆ ಏರುವುದಿಲ್ಲ. ತಡೆಯಲಾರದವರನ್ನೇ ಹುಡುಕಿಕೊಳ್ಳುತ್ತದೆ. ಬಲವಾದ ಮರ ಒಮ್ಮೆ ಹೇಗೋ ಹಾಯ್ದು ದಡ ಕಾಣುತ್ತದೆ. ಬಲವೇ ಇಲ್ಲದ ಹುಲ್ಲುಕಡ್ಡಿ ನಡುಹೊಳೆಯಲ್ಲಿ ಹಾಯ್ದು ಹೋಗುತ್ತದೆ. ಆ ಸಲ ಆಸೆಯ ಹೊಳೆ ಮಾಲಿನಿಯನ್ನು ಕೊಚ್ಚಿ ಕೆಡಪಿತು. ಅವಳನ್ನು ನಿರ್ದಯದಿಂದ ಒಯ್ದಿತು' ಎಂದು ವಿವರಿಸುವಲ್ಲಿಯೇ ಮಾಲಿನಿಯ ಕಾಮಪ್ರವಾಹ ಅವಳನ್ನು ಕೊಚ್ಚಿಕೊಂಡು ಹೋದ ಧ್ವನಿ ಇದೆ. ಕಾಮವನ್ನು ಪ್ರಕೃತಿ ಸಹಜವಾದ ಪ್ರವಾಹವಾಗಿಯೇ ಕಂಡುಕೊಳ್ಳುವ ಮಾಸ್ತಿ ಅದನ್ನು ನಿಗ್ರಹಿಸುವ ಶಕ್ತಿಯ ಕುರಿತು ಪರಾಮರ್ಶೆಯನ್ನು ಅವಳಿಂದಲೇ ಮಾಡಿಸಿದ್ದಾರೆ. ಅದರ ಪರಿಣಾಮವಾಗಿಯೇ ದಾಹದ ನಿಗ್ರಹ ಮಾಡಿಕೊಳ್ಳಲಾಗದ ಗೌತಮಿ ದತ್ತನಲ್ಲಿಗೆ ತೆರಳಿ, 'ನಿನ್ನಲ್ಲಿ ಬರಬೇಕೆನಿಸಿತು, ಆದುದರಿಂದ ಬಂದೆ, ಮದುವೆ ಇಲ್ಲದಿದ್ದರೆ ಜೊತೆಯಾಗಿರೋಣ, ನಿನ್ನ ಅಕ್ಕನಿಗೆ ಬೆಂಕಿಯಿಡು. ನಾನು ಏನೋ ಕೇಳಿದರೆ ನೀನು ಏನೋ ಹೇಳುತ್ತಿಯೇ, ನನಗೋ ಬದುಕುವುದು ಕಷ್ಟವಾಗಿದೆ. ಒಂದು ಸಲ ನಿನ್ನನ್ನು ಕೊಡು. ಒಂದೇ ಸಲ. ಇನ್ನೊಂದು ಸಲ ಬೇಡ. ಅದೂ ಆಗದಿದ್ದರೆ ನಾನು ಹೊಳೆಯಲ್ಲಿ ಹೋಗಿ ಮುಳುಗುತ್ತೇನೆ' ಎಂಬ ನಿರ್ಧಾರಕ್ಕೆ ಬರುವಲ್ಲಿ ಗಂಡಿನ ಸಾಮಿಪ್ಯವನ್ನು ಬಯಸುವ ಹೆಣ್ಣಿನ ಮನಸ್ಥಿತಿಯನ್ನು ಗೌತಮಿಯ ಜೀವನದ ಮೂಲಕ ಸಾರ್ವತ್ರಿಕ ಪಡಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಲೈಂಗಿಕ ಸುಖ ಪಡೆಯುವ ರೀತಿ ಅಸಹಜವೆಂದು ಹೇಳುವುದು ಇಲ್ಲಿ ಮಾಸ್ತಿಯವರ ಉದ್ದೇಶವಲ್ಲ. ಆದರೆ ಪರಂಪರೆ ಹಾಕಿಕೊಟ್ಟ ವಿವಾಹ ಸಂಸ್ಥೆಯೊಳಗೆ ಅದು ನಡೆಯಬೇಕೆಂಬುದು ಕಟ್ಟುಪಾಡು. ಅದೇ ನ್ಯಾಯಯುತವಾದದ್ದು, ಧರ್ಮಪರವಾದದ್ದೂ ಆಗಿ ಮಾನ್ಯತೆ ಪಡೆದಿದೆ. ಅದರ ಹೊರತಾಗಿನ ಆ ಸಂಬಂಧ ಅಪಾಯದ್ದಾಗಿ ಗುರುತಿಸಿ ಎಚ್ಚರಿಸುವುದಕ್ಕಾಗಿಯೇ ವಿವಾಹ ಸಂಸ್ಥೆಯನ್ನು ಕಾಯ್ದುಕೊಳ್ಳುವಂತೆ ಗೌತಮಿಯ ಮೂಲಕ ತಿಳಿಸುತ್ತಾರೆ.

ವಿವಾಹದ ಸಂಸ್ಥೆಯನ್ನು ಗೌತಮಿ ಪ್ರತಿಷ್ಠಾಪಿಸುವುದನ್ನು ಶಾಲಿನಿ ರಘುನಾಥ್ ಅವರು 'ಮದುವೆ ಎನ್ನುವ ಸಾಮಾಜಿಕ ಕಟ್ಟಳೆಯ ಮೂಲಕ ಆ ಪ್ರವೃತ್ತಿಯ ಸಫಲವಾದ ಈಡೇರಿಕೆಯಾಗಬೇಕೆನ್ನುವ ಸಂದೇಶವನ್ನು ಕೂಡ ಗೌತಮಿ, ಪ್ರಾಪ್ತ ವಯಸ್ಸಿನಲ್ಲಿ ಅನಸೂಯ, ಪ್ರಿಯಂವದರಿಗೆ ವಿವಾಹವಾಗಲು ಒತ್ತಾಯಿಸುವುದರಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲ, ಶಕುಂತಲೆ, ದುಷ್ಯಂತನನ್ನು ಪ್ರೇಮಿಸಿದ್ದನ್ನು ಅವಳು ಅರ್ಥ ಮಾಡಿಕೊಳ್ಳುವುದೂ, ಸಹಾನುಭೂತಿ ತೋರುವುದೂ ಈ ಹಿನ್ನಲೆಯಲ್ಲಿಯೇ' ಎಂದು ವಿಮರ್ಶಿಸಿದ್ದಾರೆ.[೧]

ಎ.ಎನ್ . ಮೂರ್ತಿರಾಯರು, 'ಮಾಲಿನಿಯ ಪಾತ್ರ ಬಹು ಸೊಗಸಾಗಿ ಮೈತುಂಬಿ ಬಂದಿದೆ. ಅವಳು ಕೊನೆಯ ಸಾರಿ ಪ್ರೇಮ ಭಿಕ್ಷೆಯನ್ನು ಬೇಡುವ ದೃಶ್ಯ ಶಕ್ತಿಯುತವಾಗಿದೆ. ಮಾಸ್ತಿಯವರು ಆದರ್ಶೀಕರಣಕ್ಕೆ ಮನಸೋಲುವವರಲ್ಲ, ವಸ್ತುಸ್ಥಿತಿಯನ್ನು ದಿಟ್ಟಿಸಿ ನೋಡಲು ಹಿಂಜರಿಯುವುದಿಲ್ಲ ಎಂಬುದಕ್ಕೆ ಅವಳನ್ನು ಚಿತ್ರಿಸಿರುವ ರೀತಿಯೂ ಒಂದು ಸಾಕ್ಷಿ ಎಂದು ಚಿತ್ರಿಸಿದ್ದಾರೆ' ಎಂದು ಮಾಸ್ತಿಯವರ ಮನೋಧರ್ಮವನ್ನು ಅರ್ಥೈಸುತ್ತಾರೆ.[೨]

'ನಳಿನಿಯ ತಂದೆ' ಕತೆಯ ಲಕ್ಷ್ಮಿ ತನಗೆ ಸಹ್ಯವಾಗದ ಗಂಡನ ಮೋಸಗಾರಿಕೆ, ವೇಶ್ಯೆಯೊಂದಿಗೆ ಇಟ್ಟುಕೊಂಡ ಸಂಬಂಧ, ಕಪಟತನ, ಮೋಸಗಾರಿಕಾ ಪ್ರವೃತ್ತಿಗಳಿಂದ ರೋಸಿ ಹೋಗಿದ್ದರಿಂದಲೇ 'ಇನ್ನು ನಮ್ಮ ಸಂಬಂಧ ಸಾಕು' ಎಂದು ಹೊರಗಟ್ಟುವ ಮೂಲಕ ಸ್ವತಂತ್ರ ಜೀವನ ನಿರ್ವಹಿಸುತ್ತಾಳೆ. ವಿವಾಹದಿಂದ ಗಂಡನಿಂದ ತಾನು ಜೀವನದ ಸುಖ ಅನುಭವಿಸದೇ ನೊಂದ ಆಕೆ ಸ್ವಂತ ಉದ್ಯೋಗದ ಧೈರ್ಯದಿಂದ ಮಗಳೊಂದಿಗೆ ಬದುಕುವ ಛಲತೊಡುತ್ತಾಳೆ. ಅದೇ ಮಗಳನ್ನು ಓದಿಸಿ ಮದುವೆ ಮಾಡಿಸಹೊರಟಿದ್ದಾಳೆ. ತಾನು ಜೀವನದಲ್ಲಿ ಸುಖ ಅನುಭವಿಸದೇ ಇದ್ದರೂ ಮದುವೆಯನ್ನು ಆಕೆ ವಿರೋಧಿಸುವುದಿಲ್ಲ. ಅದು ಮುಂದುವರಿಯಬೇಕು ಎಂಬುದನ್ನೇ ಅವಳ ನಿಲುವಿನ ಮೂಲಕ ಪ್ರತಿಪಾದಿಸಿದ್ದಾಳೆ. ತನ್ನ ಮಗಳ ಬದುಕು ಹಾಗೆ ತಲ್ಲಣಿಸೀತೇ? ಎಂದೂ ಯೋಚನೆಗಿಳಿಯುವುದಿಲ್ಲ. ಅಂದರೆ ಮದುವೆ ಇಲ್ಲಿ ಸಹಜ, ಸಂಭಾವ್ಯ ಎಂಬುದನ್ನೇ ಪ್ರತಿಷ್ಠಾಪಿಸುವ ಕೆಲಸವನ್ನೂ ಅವಳು ಮಾಡುತ್ತಾಳೆ. ವಿವಾಹ ಸಂಸ್ಥೆಯನ್ನು ತಿರಸ್ಕರಿಸದ ಅವಳು ಮಗಳಿಗೆ ಇಷ್ಟವಾದ ಹುಡುಗನೊಂದಿಗೇ ವಿವಾಹ ಮಾಡಿಸಿ ವಿವಾಹ ಸಂಸ್ಥೆಯನ್ನು ಮುಂದುವರಿಸುತ್ತಾಳೆ. 'ನಳಿನಿ ರಾಮಸ್ವಾಮಿ ಬಂದಿದ್ದಾರೆ, ನೋಡು' ಎಂದು ತಾಯಿ ಹೇಳಿದಾಗ ಬಂದುಬಿಟ್ಟೆ ಅಮ್ಮ ಎಂದ ನಳಿನಿ ಕೈಯಲ್ಲಿ ಒಂದು ಟೆನಿಸ್ ಬ್ಯಾಟ್ ಹಿಡಿದುಕೊಂಡು ಹೊರಬಂದಳು. ಮಗಳ ಚೆಂದವನ್ನು, ಅದಕ್ಕೂ ಹೆಚ್ಚಾಗಿ ಸಂಭ್ರಮವನ್ನು ನೋಡಿ ತಾಯಿ ಕಣ್ಣು ಸಂತೋಷದಿಂದ ತುಂಬಿತು. ಆಯಾಸ ಮಾಡಿಕೊಳ್ಳದೆ ಒಂದು ಸೆಟ್ ಹೆಚ್ಚಾಗಿ ಸಿಕ್ಕಿದರೆ ಆಡಿಕೊಂಡೇ ಬಾ' ಎಂದು

---

೧ ಪು.೩೫ ಮಾಸ್ತಿ ಕತೆಗಳಲ್ಲಿ ಸ್ತ್ರೀ, ಸಮನ್ವಿತ, ಶಾಲಿನಿ ರಘುನಾಥ್ - ೧೯೯೪

೨ ಪು. ೬೧ ಶ್ರೀ ಮಾಸ್ತಿ ಅವರ ಕತೆಗಳು - ಎ.ಎನ್. ಮೂರ್ತಿರಾವ್ - ೧೯೯೯

ತಾಯಿ ಹೇಳಿಕಳುಹಿಸುವುದು ಪ್ರಗತಿಪರತೆಯ ಲಕ್ಷಣವಾಗಿದೆ. ಮಗಳು ಇಷ್ಟಪಟ್ಟವನೊಂದಿಗೆ ವಿವಾಹ ಮಾಡಿಸುವ ತೀರ್ಮಾನ ತೆಗೆದುಕೊಂಡದ್ದು ತಾನು ಅರಿಯದೇ ಕೈ ಹಿಡಿದ ಗಂಡನಿಂದ ಒದಗಿದ ಆಘಾತಕಾರಿ ಜೀವನ ರೀತಿಗೂ ಕೊಟ್ಟ ಪ್ರತ್ಯುತ್ತರವೂ ಆಗುತ್ತದೆ. ಪರಸ್ಪರ ಇಷ್ಟಪಟ್ಟವರನ್ನು ಒಂದಾಗಿಸುವುದೇ ಹೆಚ್ಚು ಸರಿಯಾದದ್ದು ಎಂಬ ತೀರ್ಮಾನಕ್ಕೆ ಬಂದ ತಾಯಿಯ ನಿರ್ಧಾರ ಈ ಮದುವೆಗೆ ಒಪ್ಪಿಕೊಳ್ಳುತ್ತದೆ. ತಾವು ತೆಗೆದುಕೊಂಡ ದಿಟ್ಟ ನಿರ್ಧಾರದ ಬದುಕು ಅದರಿಂದ ಒದಗಿರಬಹುದಾದ ನೋವು, ತೊಂದರೆ, ಕಷ್ಟಗಳ ಪರಿಣಾಮವೋ ಎಂಬಂತೆ ಆಕೆ 'ದೇವರ ಕೃಪೆಯಿಂದ ಒಳ್ಳೆಯ ಹುಡುಗ ಸಿಕ್ಕಿದ. ಈ ಮದುವೆ ಒಂದು ನಡೆದು ಅವರು ಸುಖವಾಗಿ ನಿಂತರೆ ನನಗಿನ್ನು ಚಿಂತೆ ಇಲ್ಲ' ಎಂದು ಹೇಳುವ ಮೂಲಕ ಆಕೆ ವಿವಾಹ ಸಂಸ್ಥೆಯನ್ನು ಪುನರ್‌ಪ್ರತಿಷ್ಠಾಪಿಸುತ್ತಾಳೆ. ಈ ವಿವಾಹ ಸುಖಕರವಾಗಲಿ ಎಂದು ತಾಯಿ ಹರಸುವುದು ಒಂದು ನೆಲೆಯಿಂದ ಸಹಜವಾದದ್ದಾದರೂ ಮತ್ತೊಂದು ನೆಲೆಯಿಂದ 'ವಿವಾಹ ಸುಖ'ವನ್ನು ಹರಸುವುದೂ ಆಗಿದೆ. ಒಂದು ರೀತಿಯಲ್ಲಿ ಸಾಂಪ್ರದಾಯಿಕತೆಗೆ ಅವಳ ಮೂಲಕ ಪ್ರೋತ್ಸಾಹ ಕೊಡುವ ಕೆಲಸವನ್ನೂ ಮಾಸ್ತಿ ಮಾಡಿಸಿದ್ದಾರೆ. ವಿವಾಹ ಸಂಸ್ಥೆಯೊಂದರ ಪ್ರತಿನಿಧಿಸುವಿಕೆ ಇಲ್ಲಿ ನಿಚ್ಚಳವಾಗಿ ಕಾಣುತ್ತದೆ. ವಿವಾಹದ ರೀತಿಯಲ್ಲಿ ಸಾಂಪ್ರದಾಯಿಕತೆ ಮೀರಿದ್ದು, ವಿಶೇಷವಾಗಿದ್ದರೂ ವಿವಾಹ ಎಂಬ ಪಾರಂಪರಿಕ ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕಾದದ್ದನ್ನು ಇಲ್ಲಿನ ಸ್ತ್ರೀಯರು ಪ್ರತಿಪಾದಿಸಿದ್ದಾರೆ. ಪರಂಪರೆಯೊಂದು ಮೂಲ ಉಳಿಸಿಕೊಂಡೇ ಚಲನ ಶೀಲವಾಗಬೇಕೆಂಬುದನ್ನೇ ಇಲ್ಲಿ ಪ್ರಸ್ತುತ ಪಡಿಸಿದ್ದಾರೆ.

ಲಕ್ಷ್ಮಿಯ ನಿಲುವಿಗೆ ಸಂಬಂಧಿಸಿ ಎ. ಎನ್. ಮೂರ್ತಿರಾವ್ ಅವರು 'ಲಕ್ಷ್ಮಿಯ ಪಾತ್ರವನ್ನು ಚಿತ್ರಿಸಿರುವ ರೀತಿ ಒಳ್ಳೆಯ ನುರಿತ ಕೌಶಲಕ್ಕೆ ಸಾಕ್ಷಿ. ಅವಳಲ್ಲಿ ಮನೋನಿಶ್ಚಯ ತನ್ನ ಜೀವನವನ್ನು ತಾನು ರೂಪಿಸಿಕೊಳ್ಳುತ್ತೇನೆ ಎಂಬ ಕೆಚ್ಚು, ನಿಷ್ಠುರತೆಯ ಜೊತೆಗೆ ಕನಿಕರ - ಎಲ್ಲಾ ಸೊಗಸಾಗಿ ಬೆರೆದಿವೆ. ಕತೆಯನ್ನು ಓದಿದ ಮೇಲೆ ನನಗೆ ಈ ಗಂಡ ಹೆಂಡತಿಯರಿಬ್ಬರ ವಿಷಯದಲ್ಲೂ ಕನಿಕರ ಹುಟ್ಟುತ್ತದೆ' ಎಂದಿದ್ದಾರೆ.[೩]

'ನಾಲ್ಕನೆಯ ಅಧ್ಯಾಯ' ಕತೆಯಲ್ಲಿ ಮುಂದೆ ಒಂದಾಗಿ ಬದುಕುವ ಹೆಣ್ಣು ಗಂಡು ಪರಸ್ಪರ ಒಪ್ಪಿಕೊಳ್ಳಬೇಕಾದ ಆಧುನಿಕ ನಿಲುವು ಹೆತ್ತವರೇ ನಿರ್ಧರಿಸುವ ಮದುವೆಯ ಜಡಸಂಪ್ರದಾಯವನ್ನು ಮುರಿಯುವ ಕೆಲಸ ಮಾಡುವುದಕ್ಕೆ ಮಾಸ್ತಿ ಸಮ್ಮತಿಸುತ್ತಾರೆ. (ಇದು ವೇದ ಕಾಲದಲ್ಲಿ ಹೆಣ್ಣು ಸಂಪ್ರದಾಯದ ನಡುವೆಯೂ ಪಡೆದಿದ್ದ ಸ್ವಾತಂತ್ರ್ಯವನ್ನು ನೆನಪಿಸುತ್ತದೆ.) 'ಗಿರಿಜಾ', ಮೀನಾ ಮದುವೆ ಹೆಣ್ಣುಗಳು. ಅವರನ್ನು ಅವರ ಅಣ್ಣ ಕಳುಹಿಸಿದ ಇಬ್ಬರು ವರರೂ ಒಪ್ಪಿಕೊಳ್ಳುತ್ತಾರೆ. ಇಲ್ಲಿ ಹೆಣ್ಣು ನೋಡಿ ವಿವಾಹಕ್ಕೆ ಒಪ್ಪಿಕೊಳ್ಳುವ ಕ್ರಿಯಾಚರಣೆ ನಡೆದ ರೀತಿ

೩ ಪು.೨೬-೨೭ ಶ್ರೀ ಮಾಸ್ತಿ ಅವರ ಕತೆಗಳು - ಎ. ಎನ್. ಮೂರ್ತಿರಾವ್ ೧೯೯೯

ಕೊಂಚ ಭಿನ್ನವಾಗಿದೆ. ಇಲ್ಲಿ ಹೆಣ್ಣಿನ ಅಭಿಪ್ರಾಯಕ್ಕೂ ಮಾನ್ಯತೆ ಕೊಡಲಾಗಿದೆ. ಯುವಕರು ಇಲ್ಲಿ ಯುವತಿಯ ಅಭಿಪ್ರಾಯ ತಿಳಿದುಕೊಳ್ಳುತ್ತಾರೆ.ಆದರೆ ಹೆತ್ತವರು 'ಹೆಣ್ಣು ತಗೊಳ್ಳೋನು ಹೆಣ್ಣನ್ನು ಒಪ್ಪಬೇಕು ಅನ್ನೋದು ನಿಜ. ಹೆಣ್ಣು ಹುಡುಗನನ್ನು ಒಪ್ಪದೆ ಏನು ಮಾಡುತ್ತಾಳೆ. ಯಾರ ಕೈಗೆ ಕೊಟ್ಟರೂ ಅಲ್ಲಿಗೆ ಹೋಗುತ್ತಾಳೆ' ಎನ್ನುವುದು ಸಾಂಪ್ರದಾಯಿಕ ನಂಬಿಕೆಯಿಂದಲೇ. ವಿವಾಹ ಸಂಸ್ಥೆಯನ್ನು ಸ್ತ್ರೀ ಒಪ್ಪಿಕೊಂಡು ಅದಕ್ಕೆ ಬದ್ಧಳಾಗಿರಬೇಕಾದುದಕ್ಕೆ ಕಾಲದ ಬದಲಾವಣೆಯಿಂದಾಗಿ ಆಯ್ಕೆಯ ಸ್ವಾತಂತ್ರ್ಯವನ್ನು ಕೊಡುವ ಔದಾರ್ಯವನ್ನು ಮುಂದೊಡ್ಡಿ ಮನಃ ಪರಿವರ್ತನೆ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ.

'ಒಬ್ಬ ತಾಯಿ ಮಗ' ಕತೆಯ ತಾಯಿ ಕೂಡ ವಿವಾಹಸಂಸ್ಥೆಯನ್ನು ಹಾಗೇ ಉಳಿದುಕೊಳ್ಳುವಂತೆ ತೀರಾ ಎಚ್ಚರ ವಹಿಸುತ್ತಾಳೆ. ಜೊತೆಗೆ ಮಗನಿಗೆ ವಿವಾಹವಾಗುವಂತೆ ಒತ್ತಾಯ ಮಾಡುತ್ತಾಳೆ. ಮಗ ಊರ ಕೊನೇ ಹಟ್ಟೀಲಿ ಇರುವ ಹುಡುಗಿಯನ್ನು ಕೂಡಿದ್ದು ಅವಳಿಗೆ ಸಹ್ಯವಾಗುವುದಿಲ್ಲ. ಮದುವೆಯಾಗದೇ ಇನ್ನೊಂದು ಹೆಣ್ಣಿನೊಂದಿಗೆ ಸಂಬಂಧ ಬೆಳೆಸುವುದು, ಭಾರತೀಯ ಸಂದರ್ಭಕ್ಕೆ ಒಪ್ಪಿತವಾಗುವುದಿಲ್ಲ. ತಾಯಿ ಮದುವೆಯ ಜೀವನಕ್ಕೆ ಬದ್ಧವಾಗಿದ್ದು ಬದುಕಬೇಕಾಗಿರುವುದನ್ನು ಪ್ರತಿಪಾದಿಸುತ್ತಾಳೆ. ಆದ್ದರಿಂದಲೇ ಅವಳು 'ಮದುವೆ ಆದರೆ ಆಗು, ನಿನ್ನ ಹೆಂಡರು ಮಾಡಿ ಹಾಕಿದ್ದನ್ನು ಉಣ್ಣು. ನೀನು ಎಲ್ಲೋ ಆಡೋಡು, ನಾನು ನಿನಗೆ ಬೇಯಿಸಿ ಹಾಕೋದು ಇದು ಇನ್ನು ನಡೆಯೋದಿಲ್ಲ' ಎಂದು ಖಡಾಖಂಡಿತವಾಗಿ ಹೇಳುತ್ತಾಳೆ. ಅನೈತಿಕ ಹಾದಿ ತೆರೆದಿಡುತ್ತ, ಅಂಥ ಅನಾರೋಗ್ಯಕರ ಸಂಸ್ಕೃತಿಯನ್ನು ವಿರೋಧಿಸುವ ಮನಸ್ಸು ಗಂಡಿಗೆ ಒಂದು ಹೆಣ್ಣು ಎಂದು ನಿಗದಿಪಡಿಸುವ ನಿಲುವನ್ನು ಮಾನ್ಯಮಾಡುವುದಾಗಿದೆ. ಆದುದರಿಂದಲೇ ಆಕೆ ತಾನು ಆಡಿದ ಮಾತಿನಂತೆ ನಡೆದುಕೊಂಡು ಮಗನನ್ನು ದಂಡಿಸಿ ಬಗ್ಗಿಸಹೊರಡುವುದು. ಊರ ಮಂದಿ ಕೂಡಾ 'ಬದುಕೋ ದಾರಿ ನೋಡಿಕೋ' ಎಂದು ಹೇಳಿ ಹೋಗುವುದು ತಾಯಿಯ ನಿಲುವನ್ನು ಊರವರೂ ಒಪ್ಪಿಕೊಂಡದ್ದು ತಿಳಿಯುತ್ತದೆ. ಒಂದು ಸಮಾಜದ ನಿಲುವಿಗೆ ಅಲ್ಲಿನ ಸದಸ್ಯನೂ ಬದ್ಧನಾಗಿರಬೇಕಾದ ಮೌಲ್ಯವನ್ನು ತಾಯಾದವಳು ಪ್ರತಿಪಾದಿಸುತ್ತಾಳೆ. ಪರಿಣಾಮವಾಗಿಯೇ ಮಗಬಂದು 'ನಂದು ತಪ್ಪಾತು, ಮದುವಿ ಆಗತೀನಿ ಬಾ ಅಮ್ಮ' ಎಂದ. ಈ ಮೂಲಕ ತಾಯಿ ಗೊತ್ತು ಮಾಡಿದ ಹುಡುಗಿಯನ್ನೇ ಮದುವೆಯಾಗುವಂತೆ ಮಾಡಿದ್ದು ಒಂದು ರೀತಿಯಲ್ಲಿ ಸಂಪ್ರದಾಯಕ್ಕೆ ಶರಣು ಹೋಗುವಂತೆ ಮಾಡಿದ್ದಾಗಿದೆ. ಸಂಪ್ರದಾಯ ಹಾಗೂ ಪರಂಪರೆಯ ವಿಧಾನಗಳನ್ನು ಕೂಡ ಒತ್ತಾಯದಿಂದ ತಾಯಿ ಹೇರುತ್ತಾಳೆ. ಇದರಲ್ಲಿ ಮುಂದೆಯೂ ಆ ಮೌಲ್ಯ ಉಳಿದುಬಾಳಬೇಕೆಂಬ ಕಾಳಜಿಯಿದೆ. ಅದಕ್ಕಾಗಿಯೇ ಇಲ್ಲಿ ಹಟದ, ದಂಡಿಸುವ ಮಾರ್ಗವನ್ನು ತಾಯಿ ಅನುಸರಿಸುತ್ತಾಳೆ. ಹೀಗೆ ಮಾಸ್ತಿ ಕತೆಗಳ ಸ್ತ್ರೀಯರು ವಿವಾಹ ಸಂಸ್ಥೆಯನ್ನು ಎಚ್ಚರಿಕೆಯಿಂದ ಕಾಯ್ದುಕೊಳ್ಳುತ್ತಾರೆ.

ಜಾತೀಯ ಕಟ್ಟುಪಾಡುಗಳೊಳಗೆ

ಮಾಸ್ತಿ ಅವರ ಕತೆಗಳಲ್ಲಿ ಅಂತರ್ಜಾತಿ ಅಥವಾ ಅಂತರ್‌ಧರ್ಮೀಯ ವಿವಾಹ ನಡೆಯುವುದಿಲ್ಲ. ಅದನ್ನು ನಡೆಯದಂತೆ ತಡೆಯುವಲ್ಲಿ ಸ್ತ್ರೀಯರೇ ಬಹುಮುಖ್ಯ ಪಾತ್ರವಹಿಸುತ್ತಾರೆ. ಹಿಂದೂ ಧರ್ಮದೊಂದಿಗೆ ಅನ್ಯ ಧರ್ಮೀಯ ವೈವಾಹಿಕ ಸಂಬಂಧ ನಡೆಯದಂತೆ ಎಚ್ಚರವಹಿಸುವುದರೊಂದಿಗೆ ಜಾತೀಯ ತರತಮತೆ ಕೂಡ ಉಳಿಯುವಂತೆ ನೋಡಿಕೊಂಡಿದ್ದಾರೆ. ಹಿಂದೂ ಧರ್ಮದೊಳಗಿನ ವೈದಿಕ - ಅವೈದಿಕರ ಮಧ್ಯೆಯೂ ಸಂಬಂಧ ಬೆಳೆಸದಂತೆ ಕಟ್ಟೆಚ್ಚರ ವಹಿಸಿದ್ದಾರೆ. ಇಲ್ಲೆಲ್ಲ ತಾಯಿ ಅದನ್ನು ತಡೆಯುವವಳಾಗಿ ಕಾಣಿಸಿಕೊಳ್ಳುತ್ತಾಳೆ. ತಾಯಿ ಓರ್ವ ನಿಯಂತ್ರಕಿಯಾಗಿ ಕತೆಗಳಾದ್ಯಂತವೂ ಕಾರ್ಯ ನಿರ್ವಹಿಸುತ್ತಾಳೆ.

ವಿಶ್ವವನ್ನೇ ಮುನ್ನಡೆಸುವ ಮಾರ್ಗದರ್ಶಿಯಾದ ತಾಯಿಯ ನಿಲುವು, ಆಕೆ ಹೇರುವ ಕಟ್ಟುಪಾಡುಗಳನ್ನು ಪಾಲಿಸುವುದು ಪೀಳಿಗೆಯ ಕರ್ತವ್ಯ ಎಂಬುದನ್ನು ತೋರಿಸುವ ಕೆಲಸವೂ ಈ ಮೂಲಕ ನಡೆದಿದೆ. ಅದಕ್ಕಾಗಿಯೇ ತಾಯಂದಿರು ಅನ್ಯ ಧರ್ಮೀಯ ಹಾಗೂ ಅನ್ಯ ಜಾತೀಯ ವಿವಾಹ ಸಂಬಂಧ ಬೆಳೆಸುವುದನ್ನು ತಡೆಯುತ್ತಾರೆ. ಮುಖ್ಯವಾಗಿ ಮೇಲ್ವರ್ಗವೆನ್ನಿಸಿಕೊಳ್ಳುವ ವೈದಿಕ ಪರಂಪರೆ ಹಾಗೆಯೇ ಮುಂದುವರಿಯಬೇಕೆಂಬ ಮನಃಸ್ಥಿತಿಯ ಸ್ತ್ರೀಯರೇ ಅದನ್ನು ತಡೆಯುವುದಕ್ಕೆ ಮುಂದಾಗಿದ್ದಾರೆ. ಜೊತೆಗೆ ರಾಣಿಯರು ಕೂಡ ಸೇರಿಕೊಂಡಿದ್ದಾರೆ. ಆದರೆ ಪ್ರಮುಖವಾಗಿ ಗುರುತಿಸಬೇಕಾದ ಅಂಶವೆಂದರೆ ವೈದಿಕ ಮನೆತನದ ಹೆಣ್ಣುಮಕ್ಕಳು ಅನ್ಯ ಜಾತೀಯ, ಅನ್ಯ ಧರ್ಮೀಯ ವಿವಾಹವಾಗುವ ತೀರ್ಮಾನ ತೆಗೆದುಕೊಂಡು ಸಮಸ್ಯೆ ಸೃಷ್ಟಿಸುವುದಿಲ್ಲ. ವೈದಿಕ ಧರ್ಮದ ಹೆಣ್ಣುಮಕ್ಕಳು ಮಾದರಿಯಾಗಿ ಬದುಕಬೇಕಾದುದರಿಂದ ಅವರಿಂದ ಅಂಥ ಸಮಸ್ಯೆ ಸೃಷ್ಟಿಯಾಗದಂತೆ ತಡೆದಿದ್ದಾರೆ.

ಅಂತರ್ಜಾತೀಯ ವಿವಾಹವನ್ನು ತಡೆಯುವ ಬಗೆಯನ್ನು ತೆರೆದಿಡುವ 'ವೆಂಕಟಶಾಮಿಯ ಪ್ರಣಯ' ಕತೆಯಲ್ಲಿ ಶೂದ್ರ ವರ್ಗದವರ ನಾಯಿಂದರ ಕುಟುಂಬದ ವೆಂಕಟಶಾಮಿ ಮತ್ತು ದೊಂಬರ ಹುಡುಗಿಯ ಪ್ರೇಮ ಇಲ್ಲಿ ಪ್ರಶ್ನಾರ್ಹವಾಗುತ್ತದೆ. ಅದು ವೆಂಕಟಶಾಮಿಯ ಕುಟುಂಬಕ್ಕೆ ಸಹ್ಯವಾಗುವುದಿಲ್ಲ. ಅದನ್ನು ಅವನ ತಾಯಿ ಮುನಿಯಮ್ಮಳೇ ಬಹು ಎಚ್ಚರಿಕೆ ಹಾಗೂ ಭಯದಿಂದ ತಡೆಯುತ್ತಾಳೆ. 'ಮಗ ಎಂಥಾ ಪೋಲಿ ಕೆಲಸಕ್ಕೆ ಹೋದರೂ ನೋಡತಾ ಇದೀಯಲ್ಲ ಇದೇನೋ ನಿನಗೆ ತಿಳಿದ ನಡತೆ' ಎಂದು ಕೇಳುತ್ತಾಳೆ. 'ನಿನ್ನ ಯಜಮಾನತನಕ್ಕೆ ನನ್ನ ಯಜಮಾನಿತನ ಎಲ್ಲಾ ಸಾಕು ಹುಡುಗ ಡೊಂಬರ ಹುಡುಗೀನ ಕಟ್ಕೊಂಡಾನು ಹೋಗಿ ಕರತಾ' ಎನ್ನುವುದು, ಈ ವಿಷಯಕ್ಕೆ ಸಂಬಂಧಿಸಿ ತಾಯಿ ಕೂಗಾಡುತ್ತ ಗೌಡನಲ್ಲಿ ಫಿರ್ಯಾದು ಮಾಡುವುದು. ಮಗನೊಂದಿಗೆ, 'ಏನೋ ತಾಯಿಗಾ ನನ್ನ ಮನೆಗೆ ಬರಲಿಲ್ಲ' ಎಂದು ಪ್ರಶ್ನಿಸುತ್ತಾಳೆ.

‘ಎಲಾ ಶಾಮಿಗಾ ಊರ ಜನ ಎಲ್ಲಾ ಏನೇನೋ ಅಂತಾರಲ್ಲಾ ಅಪ್ಪಾಜಿ. ಇಂಥ ಮಾತಿಗೆ ಸಿಕ್ಕಬಹುದೇನೋ’ ಆ ದೊಂಬರ ಹುಡುಗಿಯ ಕಂಡು ಮರುಳಾದ ಅಂತಾರಲ್ಲೋ, ಯಾವಾಗಲೂ ಅವರ ಜೊತೆಯಲ್ಲೇ ಇರುತೀಯಂತಲ್ಲ. ಹೀಂಗನ್ನೋದುಂಟೇನೋ. ಹೆತ್ತೋರು, ಸಾಕಿದೋರು, ಮರ್ಯಾದಿ ಬೇಡವಾ, ಜಾತಿಯೋರು ಏನೆಂದಾರು ಅಂತ ಭಯ ಬೇಡವಾ, ಅಂದರೆ ದೊಂಬರ ಹುಡುಗೀನ್ನ ನನ್ನ ಸೊಸೆ ಅನ್ನಬೇಕೇನೋ ನಾನು. ಹೌದಪ್ಪಾ, ಹೌದು. ಅವಳು ನಿನಗೆ ಬಂಗಾರ, ನೋಡಿದವರಿಗೆಲ್ಲಾ ಬಂಗಾರ, ಅವರಪ್ಪನಿಗೆ ಬಂಗಾರ’ ಎಂದು ಅಳುತ್ತ ಕುಳಿತುಕೊಳ್ಳುವುದು ಆ ಸಂಬಂಧ ಸಡೆಯಗೊಡಬಾರದ ದೃಷ್ಟಿಯಿಂದ. ಅದರ ಹಿಂದೆ ಜಾತಿಯವರ ಅಂಬೋಣ, ಮನೆತನದ ಮರ್ಯಾದೆಯ ಪ್ರಶ್ನೆ ಎಲ್ಲವೂ ಎದುರಾಗುತ್ತದೆ. ಅದು ಇದು ತನಕ ನಡೆದುಕೊಂಡು ಬಂದಿರುವ ಸಾಂಪ್ರದಾಯಿಕ ಚೌಕಟ್ಟನ್ನು ಮೀರುವ ನಿರ್ಧಾರಕ್ಕೆ ತೋರಿಸುವ ಪ್ರತಿಕ್ರಿಯೆಯಾಗುತ್ತದೆ. ಈ ಪ್ರತಿಕ್ರಿಯೆಯೇ ಅಂಥ ನಡವಳಿಕೆಯನ್ನು ತಡೆಯುತ್ತದೆ. ಕಾಗೆ ತಿಂಬೋರು ಮತ್ತು ಕೋಳಿ ತಿಂಬೋರ ನಡುವೆ ಸಂಬಂಧ ನಡೆಯಲಿರುವುದು. ಇಬ್ಬರೂ ಮಾಂಸಾಹಾರಿಗಳೇ, ಪಕ್ಷಿಗಳನ್ನೇ ತಿನ್ನುವುದು ಎನ್ನುವ ಸತ್ಯವಿದ್ದರೂ ಅಲ್ಲಿಯೂ ಮೇಲ್‌ಸ್ತರ, ಕೆಳಸ್ತರದ ವರ್ಗೀಕರಣ ಮಾಡುವುದು ಅವರವರ ನಡುವೆ ಮುಖ್ಯವಾಗುತ್ತದೆ. ಇದು ಮುನಿಯಮ್ಮ ನಿರಂತರ ಗಲಾಟೆ ಅಂಥ ಪ್ರಕ್ರಿಯೆಯನ್ನು ಸಹಿಸದಿರುವುದರಿಂದ ನಡೆಯುತ್ತಿರುತ್ತದೆ.

ವೆಂಕಟಶಾಮಿಯ ಪ್ರಣಯವೇ ಹಾಸ್ಯವಾಗುತ್ತ ಹೋದಾಗ ಮನೆಗೆ ಬಂದು ಬಾಗಿಲು ತಟ್ಟಿದ ಮಗನಿಗೂ ಬಾಗಿಲು ತೆರೆಯಲು ಬಿಡದೆ, ‘ಆ ಪೋಲಿ ಮುಂಡೇದಕ್ಕೆ ಬಾಗೀಲನ ತೆಗೆದೀಯೆ, ಮಲಗಿಕೋ ಇವನು ಬಂಚ ಹೊತ್ತಿಗೆ ಬಾಗಿಲು ತೆಗೆಯೋಕೆ ಇದೇನು ಸೂಳೆ ಮನೇನ’ ಎಂದು ಪ್ರಶ್ನಿಸುವುದು ಅವನನ್ನು ಸಂಪೂರ್ಣ ವಿರೋಧಿಸುವುದಾಗುತ್ತದೆ. ಈ ವಿರೋಧ ಅಂತರ್ಜಾತಿ ಮದುವೆಯನ್ನು ತಡೆಯುತ್ತದೆ. ಪರಿಣಾಮವಾಗಿ ಮಾನಸಿಕ ವೇದನೆ ಯಿಂದ ಆತ ಹಾಸಿಗೆ ಹಿಡಿಯುತ್ತಾನೆ.

ಜಾತೀ ಸಮಸ್ಯೆಯೇ ಪ್ರೇಮಿಸಿದವರನ್ನು ಒಟ್ಟಾಗಿ ಬಾಳಗೊಡದಂತೆ ತಡೆಯುತ್ತದೆ. ಇಲ್ಲಿ ಅದನ್ನು ಪ್ರಬಲವಾಗಿ ತಡೆಯುವ ಕೆಲಸವನ್ನು ತಾಯಿ ಮುನಿಯಮ್ಮ ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ಜೀವ ಹೋದರೂ ಜಾತಿ ಕೊಡಬಾರದ ತತ್ವವನ್ನು ಆಕೆ ಪ್ರತಿನಿಧಿಸುತ್ತಾಳೆ. ಆದರೆ ಅಂಥ ಪರಿಸ್ಥಿತಿ ಬಿಗಡಾಯಿಸಿ ಜೀವಕಳೆದುಕೊಂಡರೂ ಆಕೆ ತನ್ನ ಹಟಕ್ಕಾಗಿ ಒಮ್ಮೆಯೂ ಮರುಗುವುದಿಲ್ಲ. ತಾನು ಮಾಡಿದ್ದು ತಪ್ಪು ಎಂಬ ಅರಿವೂ ಅವಳಿಗೆ ಆಗುವುದಿಲ್ಲ. ಆದ್ದರಿಂದಲೇ ಅವಳನ್ನು ಜಾತಿಯ ಅಂತರ ಕಾಯ್ದುಕೊಳ್ಳುವ ನೆಲೆಗಟ್ಟಿನ ಮುಖ್ಯ ಸ್ತ್ರೀಯಾಗಿ ಗುರುತಿಸಬಹುದಾಗಿದೆ.

ಅಂತರ್‌ಜಾತಿ ವಿವಾಹ ನಡೆಯಗೊಡದಂತೆ ತಡೆದ ಮಾಸ್ತಿ ನಿಲುವಿನ ಕುರಿತು ರಾಜೇಂದ್ರ ಚೆನ್ನಿ 'ಮಾಸ್ತಿ ನಿಷ್ಠರಾಗಿರುವುದು ಮನುಷ್ಯ ಸ್ವಭಾವದ, ಪ್ರವೃತ್ತಿಗಳ ಪರಿಕರಗಳನ್ನು ಗುರುತಿಸಿ ಆ ಪ್ರವೃತ್ತಿಗಳ ಎದುರಲ್ಲಿ ಶೀಲದ ಬೆಳವಣಿಗೆಯನ್ನು ಗುರುತಿಸುವ ಒಂದು ರೀತಿಯ ಸಾರ್ವತ್ರಿಕ ಮಾನವತಾವಾದಕ್ಕೆ. ಆದರೆ ಈ ಪ್ರವೃತ್ತಿಗಳನ್ನು ಸುತ್ತಲಿನ ಸಮಾಜದ ಮೌಲ್ಯ ಕಲ್ಪನೆಗಳ ಜೊತೆ ಕರ್ಷಣಕ್ಕಿಳಿಸಿ ಆಳಕ್ಕಿಳಿದು ಅವುಗಳನ್ನು ಪರೀಕ್ಷಿಸುವ ಸಾಮಾಜಿಕತೆಯ ಅಂಶ ಅವರಲ್ಲಿ ಇಲ್ಲದೇ ಇರುವುದು ಒಂದು ಮುಖ್ಯ ಕೊರತೆ. ಒಂದು ರೀತಿಯಲ್ಲಿ ಅವರ ಸಂವೇದನೆಯ ಸಾಂಪ್ರದಾಯಿಕತೆಯ ಚರ್ಚೆ ತಪ್ಪು ದಾರಿಗೆ ಎಳೆಯುವಂತಹುದು' ಎಂದು ವಿಮರ್ಶಿಸಿದ್ದಾರೆ.[೩]

'ಒಬ್ಬ ತಾಯಿ ಮಗ' ಕತೆಯ ತಾಯಿ ಕೂಡ ಇದೇ ನೆಲೆಯಲ್ಲಿ ಪರಿಚಿತಗೊಳ್ಳುತ್ತಾಳೆ. ತನ್ನ ಅಂತಸ್ತಿಗೆ ತಕ್ಕ ಹುಡುಗಿಯನ್ನು ವಿವಾಹವಾಗಬೇಕೆಂಬ ಉದ್ದೇಶದಿಂದ ಆಕೆ ಮಗನನ್ನು ಒತ್ತಾಯಿಸುತ್ತಾಳೆ. ಅದು ತಾನು ಬಡವಳಾದರೂ ತನಗಿಂತ ಕೆಳಗಿನ ಅಂತಸ್ತಿನ ಹುಡುಗಿಯನ್ನು ವಿವಾಹವಾಗಬಾರದ ಅವಳ ನಿಲುವನ್ನು ಪ್ರಸ್ತುತ ಪಡಿಸುವುದಾಗಿದೆ. ಇಲ್ಲಿ ಪರಸ್ಪರರ ಮನಸ್ಸನ್ನು ಒಂದಾಗಿಸುವ ಕಾಯಕಕ್ಕಿಂತ ಅಂಥ ಅಂತಸ್ತನ್ನು ಕಾಯ್ದುಕೊಳ್ಳುವುದೇ ಅವಳಿಗೆ ಮುಖ್ಯವಾಗುತ್ತದೆ. ಮಗ ಪ್ರೀತಿಸಿದ ಹುಡುಗಿ ಬಡವಳಾಗಿರುವುದರಿಂದ ಅವಳನ್ನು ಸೊಸೆಯಾಗಿ ಕರೆತಂದರೆ ತನ್ನ ಬೊಕ್ಕಸವೂ ಖಾಲಿಯಾಗುತ್ತದೆ ಎನ್ನುವುದು ಅವಳ ನಿಲುವು. ಆದ್ದರಿಂದ ಅವಳಿಗೆ ರೊಕ್ಕ, ಒಡವೆ, ಉಡುಗೆ ಕೊಡುವುದರಿಂದ ತಮ್ಮ ಜೀವನಕ್ಕೇನೇ ಸಾಕಾಗದ 'ಬರಾವು' ಇರುವಾಗ ಈ ಮನೆ ಬಹುಕಾಲ ಉಳಿಯದ ಚಿಂತೆ ಆಕೆಗೆ ಕಾಡುತ್ತದೆ. ಆದ್ದರಿಂದಲೇ ಆಕೆ ಮಗನಿಗೆ ಬುದ್ಧಿ ಹೇಳುತ್ತಾಳೆ, ಬೇಯಿಸಿ ಉಣ ಹಾಕದೆ ಸತ್ಯಾಗ್ರಹ ಮಾಡುತ್ತಾಳೆ. ಈ ವಿಷಯಕ್ಕೆ ಮಗನಿಂದ ಹೊಡೆತ ತಿಂದರೂ ತಾಯಿ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳುವುದಿಲ್ಲ; ಕೊನೆಗೂ ತಾನು ಹೇಳಿದಂತೆ ಅವಳ ಅಣ್ಣನ ಮಗಳನ್ನು ಮದುವೆ ಮಾಡಿಕೊಳ್ಳುವಂತೆ ಮಗನನ್ನುಒಪ್ಪಿಸುವ ಮೂಲಕ ಗೆಲ್ಲುತ್ತಾಳೆ. ಬಳಿಕವೇ ಅವನಿಗೆ ಉಣ ಬಡಿಸುತ್ತಾಳೆ. 'ಯಾಕೆ ಸುಮ್ಮನಿದ್ದಿಯೋ, ಕೊಂದೇ ಪುಣ್ಯ ಕಟ್ಟಿಕೋ' ಎಂಬ ಅವಳ ಭಾವನಾತ್ಮಕ ಬೆದರಿಕೆ, ಹಠವೇ ಅವಳ ಗೆಲುವಿಗೆ ಕಾರಣವಾಗುತ್ತದೆ. ಈ ಹಠದಿಂದಲೇ ಮಗನೆದುರು ಗೆಲ್ಲುತ್ತಾಳೆ.

ಒಂದು ಜಾತಿಯ ಅಂತಸ್ತು ಕಾಯ್ದುಕೊಳ್ಳುವ ಹಣಾಹಣಿಯಲ್ಲಿ ಮಾಸ್ತಿ ಕತೆಗಳ ಹೆಂಗಸರು ಗೆಲುವು ಸಾಧಿಸುತ್ತಾರೆ. ಆ ಮೂಲಕ ಅದನ್ನು ಕಾಯ್ದುಕೊಳ್ಳುವಂತೆ ಪ್ರೇರಿಸುತ್ತಾರೆ. ಹೀಗೆ ಕೆಲವು ಮಂದಿ ಸ್ತ್ರೀಯರು ಅಂತರ್ಜಾತೀಯ ವಿವಾಹ ಸಂಬಂಧವನ್ನು ನಡೆಯಗೊಡದಂತೆ ತಡೆಯುವ ನಿಲುವನ್ನು ಮುಂದಿಟ್ಟರೆ ಅಂತರ್ಧರ್ಮೀಯರ ಮಧ್ಯೆ ವಿವಾಹ ನಡೆಯದಂತೆ ನಾಜೂಕಿನಿಂದ ತಡೆಹಿಡಿಯುವ ಸ್ತ್ರೀಯರೂ ಮಾಸ್ತಿ ಕತೆಗಳಲ್ಲಿ ಕಾಣಸಿಗುತ್ತಾರೆ.

---

೩ ಪು.೩೯ ಮಾಸ್ತಿ ಕತೆಗಳು, ಅಧ್ಯಯನ ರಾಜೇಂದ್ರ. ಚೆನ್ನಿ

ಧರ್ಮದ ಚೌಕಟ್ಟಿನ ವ್ಯಾಪ್ತಿಯಲ್ಲಿ

ಅಂತರ್‌ಧರ್ಮೀಯ ವೈವಾಹಿಕ ಸಂಬಂಧ ನಡೆಯುವುದು ಮಾಸ್ತಿ ಕತೆಗಳ ಸ್ತ್ರೀಯರಿಗೆ ಸ್ವೀಕೃತವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಅಂತರ್‌ಧರ್ಮೀಯ ವಿವಾಹ ಸಂಬಂಧ ನಡೆಯದಂತೆ ಮಾಸ್ತಿ ತಡೆದ ಸಂದರ್ಭಗಳನ್ನು ಬೇಬಿಲಾನ್ ಕುಮಾರಿ ಕತೆಯ ಬೇಬಿಲಾನ್ ರಾಜಕುಮಾರಿ, , 'ಸೋರಲೀ ಪ್ರಸಂಗ' ಕತೆಯ ಬೆಲ್ಲಾ, ಆಚಾರವಂತ ಅಯ್ಯಂಗಾರ್ರು ಕತೆಯ ಕ್ರಿಶ್ಚಿಯನ್ ಸ್ತ್ರೀಯ ರೊಂದಿಗೆ ಭಾರತೀಯರ ವಿವಾಹ ನಡೆಯದಂತೆ ತಡೆದುದನ್ನು ಅಭ್ಯಸಿಸಬಹುದು.

ಬೇಬಿಲಾನ್ ಕುಮಾರಿ ಕತೆಯ ಬೇಬಿಲಾನ್ ರಾಜಕುಮಾರಿಯನ್ನು ಭಾರತೀಯರೊಂದಿಗೆ ಅವಳು ವಿವಾಹವಾಗಿ ಸಂಸಾರ ನಡೆಸಬಾರದೆಂಬ ನಿಟ್ಟಿನಲ್ಲಿಯೇ ಅವಳ ನಾಡಿಗೆ ಕಳುಹಿಸಿಕೊಡಲಾಗಿದೆ. ಗಾಂಧಾರ ತಕ್ಷಶಿಲಾದ ರಾಣಿ ವಸುಮತಿ ಈಜಿಪ್ಟ್‌ನ ಬೇಬಿಲೋನ್‌ನಿಂದ ಭಾರತಕ್ಕೆ ಬಂದ ರಾಜಕುಮಾರಿಗೆ ತಮ್ಮ ಅರಮನೆಯಲ್ಲಿ ಉಳಿದುಕೊಳ್ಳುವುದಕ್ಕೆ ಒಪ್ಪಿಗೆ ಸೂಚಿಸುತ್ತಾರೆ. ಆದರೆ ಆಕೆ 'ಮಗು, ನಮ್ಮ ದೇಶದ ಜನ ನಿಮ್ಮ ಇಲ್ಲಿಯ ಜನರಷ್ಟು ಸರಳರಲ್ಲ. ಬದುಕು ಸ್ವಲ್ಪ ಕಟ್ಟುನಿಟ್ಟು. ನೀನು ನಿಮ್ಮ ದೇಶದಲ್ಲಿ ನಿಲ್ಲುವುದಾದರೆ ಪುಣ್ಯವಂತ ಜನರ ಮನೆಗಳಲ್ಲಿ ಒಬ್ಬ ಸೇವಕಿಯಾಗಿ ನಿಲ್ಲಬಹುದು ಅಷ್ಟೇ' ಎಂದೂ, ಅರಮನೆಯಲ್ಲಿ ಆಗದಿದ್ದರೆ ಧನಪಾಲರಲ್ಲಿ ಉಳಿದು ಸೇವೆ ಮಾಡುವ ಕುರಿತು ರಾಜಕುಮಾರಿ ಪ್ರಸ್ತಾಪಿಸಿದಾಗ 'ಅವರು ನಿನ್ನನ್ನು ತಮ್ಮ ಮನೆಯ ಹುಡುಗಿ ಎಂದು ಕಾಣುವುದಕ್ಕಾಗುವುದಿಲ್ಲ. ನಮ್ಮಲ್ಲಿ ವರ್ಣಭೇದ, ಆಚಾರ ಒಂದು ರೀತಿಯಲ್ಲಿ ಕಟ್ಟುನಿಟ್ಟು. ನೀನು ಮನೆಯ ಮಗುವಾಗಿ ಬಾಳುವಂತಿಲ್ಲ' ಎಂದು ಹೇಳುವುದಕ್ಕೂ ಆಕೆ ಒಪ್ಪಿಕೊಳ್ಳುವಂತಾಗುತ್ತದೆ. ಈ ಶರತ್ತಿನ ಮೂಲಕ ಅನ್ಯಧರ್ಮೀಯರನ್ನು, ಅನ್ಯ ದೇಶೀಯರನ್ನು ಮನೆಮಂದಿಯಂತೆ ಕಾಣಲಾಗದ ವಾಸ್ತವತೆಯನ್ನು ರಾಣಿ ಭಾರತೀಯತೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಪ್ರತಿನಿಧಿಸುತ್ತಾಳೆ. ಮತ್ತು ಆ ಚೌಕಟ್ಟಿನೊಳಗೇ ಬೇಬಿಲಾನ್ ರಾಜಕುಮಾರಿಯನ್ನು ಸ್ವೀಕರಿಸಿದ್ದಾಗಿದೆ. ರಾಣಿ ವಸುಮತಿ ಆ ವರ್ಣ ವ್ಯವಸ್ಥೆಯು ಮುಂದುವರಿಯಬೇಕಾದ್ದನ್ನು ಪ್ರತಿನಿಧಿಸುತ್ತಾಳೆ. ಮತ್ತು ಅದಕ್ಕಾಗಿಯೇ ಅದನ್ನು ಪಾಲಿಸಲೇಬೇಕಾದ ಹಾದಿಯನ್ನು ಅವಳು ಒಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನವನ್ನೂ ಮಾಡುತ್ತಾಳೆ.

ಇಂಥ ಕಟ್ಟುನಿಟ್ಟಿನ ನಡುವೆಯೂ ಆಕೆ ಭಾರತೀಯ ಸಂಸ್ಕೃತಿಯನ್ನು ಅರಿತುಕೊಳ್ಳುವುದಕ್ಕೆ ಉತ್ಸುಕಳಾಗಿಯೇ ಇರುತ್ತಾಳೆ. ಆಕೆ ಬೇಬಿಲಾನ್ ಸಂಸ್ಕೃತಿಯನ್ನೂ ಪರಿಚಯಿಸುತ್ತಾಳೆ. ಆ ಪ್ರಕಾರ ಅಲ್ಲಿನ ವಿವಾಹ ಪದ್ಧತಿ ಭಾರತೀಯ ಪದ್ಧತಿಯನ್ನು ಹೋಲುತ್ತದೆ. ವಿವಾಹದ ನಿರ್ಧಾರದಲ್ಲಿ ಹೆಣ್ಣಿನ ಅಭಿಪ್ರಾಯಕ್ಕೂ ಮಾನ್ಯತೆ ಇರುವುದನ್ನು ಕೇಳಿ ತಕ್ಷಶಿಲಾದ ರಾಜ 'ತುಂಬ ಚೆನ್ನಾದ ಏರ್ಪಾಡು' ಎಂದು ತಲೆದೂಗುವುದು ಆ ಪದ್ಧತಿಯನ್ನು ಮಾನ್ಯ ಮಾಡಬೇಕಾದುದನ್ನು

ಸೂಚಿಸುತ್ತದೆ. ವಿಚ್ಛೇದನ ಪಡೆವಾಗ ಕೂಡ ಹೆಣ್ಣು ಗಂಡಿನ ಕುಟುಂಬದ ಮಧ್ಯೆ ಒಪ್ಪಂದ ಮಾಡಿಕೊಳ್ಳುವ ವಿಧಾನವನ್ನು ಕೂಡ ಮೆಚ್ಚುಗೆಯಿಂದಲೇ ಮಾಸ್ತಿ ಪರಿಚಯಿಸುತ್ತಾರೆ. 'ಮದುವೆ ಆದವನೊಡನೆ ಬಾಳಿದ್ದು ನನಗೆ ಚೆನ್ನಾಗಿಯೇ ಇತ್ತು. ಇರುತ್ತ ಮದುವೆ ಆದವನು ಬಿಟ್ಟು ಹೋಗಿ ತಂದೆಯ ಮನೆಗೆ ಬಂದವಳಿಗೆ ಏನೋ ಕೆಟ್ಟು ಹೋಯಿತು, ಎಂತ ನೋವು ಆಗಲಿಲ್ಲ. ಬರುತ್ತಾನೆ ಎಂತ ಆದುವರೆಗೆ ಸಮಾಧಾನವಾಗಿ ಇದ್ದೆ. ಬರಲಿಲ್ಲ. ಅವನಿಗೆ ಬೇಡ. ಅವನಿಗೆ ಬೇಡವಾದರೆ ನನಗೇಕೆ ಬೇಕು?ನನ್ನ ಮನಸ್ಸು ಹೀಗಿತ್ತು, ನಾನು ಹಿಂತಿರುಗಿ ಬಂದದ್ದರಿಂದ ತಂದೆಗೆ ಏನೂ ಕೇಡಾಗುವುದಿಲ್ಲ ಎನ್ನುವುದು ನಿಶ್ಚಯವಾದೊಡನೆ ನಾನು ತೀರಾ ಸುಖವಾಗಿ ಇದ್ದುಬಿಟ್ಟೆ' ಎಂಬ ನಿರ್ಧಾರಕ್ಕೆ ಆಕೆ ಬಂದಿರುವುದನ್ನೂ ಒಪ್ಪಿಗೆಯಿಂದಲೇ ಪರಿಚಯಿಸುತ್ತಾರೆ. ಬದುಕು ಅಸಹನೀಯವಾದಾಗ ಇಂಥ ನಿರ್ಧಾರವನ್ನು ಹೆಣ್ಣಾದವಳು ತೆಗೆದುಕೊಳ್ಳುವುದು ತಪ್ಪಲ್ಲ ಎಂಬುದನ್ನು ಪ್ರತಿಪಾದಿಸುವ ಮಾಸ್ತಿ ಅವಳು ಧೈರ್ಯದಿಂದ ತೆಗೆದುಕೊಳ್ಳುವ ತೀರ್ಮಾನವನ್ನು ಕೂಡ ಸರಿಯಾದುದೆಂದೇ ಪ್ರತಿಪಾದಿಸುತ್ತಾರೆ. ಆಕೆಯ ಮರುವಿವಾಹವನ್ನೂ ಸಮ್ಮತಿಸುತ್ತಾರೆ. ಆದರೆ ಭಾರತೀಯ ತರುಣರೊಂದಿಗೆ ಮಾತ್ರ ನಡೆಯುವುದನ್ನು ತಪ್ಪಿಸುತ್ತಾರೆ.

ಭಾರತದೊಳಗಿನ ವ್ಯಕ್ತಿಗಳಲ್ಲಿ ಹಲವರು ಬೇಬಿಲೋನ್ ರಾಜಕುಮಾರಿಯನ್ನು ವಿವಾಹವಾಗಲು ಬಯಸಿದ್ದರು. ಆದರೆ ಯಾರೊಬ್ಬರನ್ನೂ ಅವಳು ವಿವಾಹವಾಗಲು ಒಪ್ಪುವುದಿಲ್ಲ. ಬಯಸಿದ ತರುಣರಿಗೂ ಆಕೆ ಬೇರೆ ದೇಶದವಳೆಂಬ ಕಾರಣದಿಂದ ವಿವಾಹವಾಗಲು ಸಾಧ್ಯವಾಗಲಿಲ್ಲ. ಮಾಸ್ತಿ ಅವರಿಗೂ ವಿದೇಶ ಹಾಗೂ ಭಾರತದ ಮಧ್ಯೆ ವೈವಾಹಿಕ ಸಂಬಂಧ ನಡೆಯುವುದು ಕಿಂಚಿತ್ತೂ ಮನಸ್ಸಿಲ್ಲ. ಆದ್ದರಿಂದಲೇ ಅದನ್ನು ನಡೆಯದಂತೆ ತಡೆಯುತ್ತಾರೆ. ಕೊನೆಗೆ ಆಕೆ ತನ್ನ ನಾಡಿಗೇ ಮರಳುವುದು ದೇಶೀಯ ಸಂಸ್ಕೃತಿಯನ್ನೇ ಶಾಶ್ವತವಾಗಿಸುವ, ಅಲ್ಲೇ ಸಂಬಂಧ ಮುಂದುವರಿಸಬೇಕಾದ ಸಂದೇಶ ಕೊಡುವುದಾಗಿದೆ.

'ಸೋರಲೀ ಪ್ರಸಂಗ' ಕತೆಯ ಬೆಲ್ಲಾ ಕೂಡ ಭಾರತಕ್ಕೆ ತನ್ನ ಪ್ರೀತಿಯವರನ್ನು ಅರಸುತ್ತ ಬರುತ್ತಾಳೆ. ಆದರೆ ಅವರ ಮರಣದ ಬಳಿಕವೂ ಭಾರತದಲ್ಲಿದ್ದು ಭಾರತದವರೊಂದಿಗೆ ಸಂಬಂಧ ಬೆಳೆಸುವುದನ್ನು ಆಕೆ ಒಪ್ಪುವುದಿಲ್ಲ. 'ನನಗೆ ಬಿಳಿಯ ಜನ ನಮ್ಮವರು ನೀವು ಹೆರವರು, ಎಂಬ ತಿಳಿವಳಿಕೆಯಿಲ್ಲ. ನಾನು ಥಿಯೋಸಫಿ ಬಲ್ಲೆ. ಚಾರ್ಲಿ ಇಲ್ಲಿಗೆ ಬಂದ ಕಾಲಕ್ಕೆ ನಾನು ಇಲ್ಲಿಗೆ ಬರಬೇಕಾದೀತು ಎಂಬ ಕಾರಣದಿಂದ ನಿಮ್ಮ ದೇಶದ ರೀತಿ ನೀತಿ ತಿಳಿಯುವಂತೆ ಗ್ರಂಥಗಳನ್ನು ಓದಿಕೊಂಡೆ. ನಿಮ್ಮ ಸಂಪ್ರದಾಯವೆಂದರೆ ನನಗೆ ಗೌರವವಿದೆ. ನಾನು ಹಿಂದು ಜನರನ್ನು ಅಲ್ಲಗಳೆಯುವವಳಲ್ಲ' ಎಂದು ಆಕೆ ಹೇಳಿರುವಲ್ಲಿ ಆಕೆಯ ಮನೋ ವೈಶಾಲ್ಯ ಗ್ರಹಿಸಬಹುದಾಗಿದೆ. ದೇಶದ ರೀತಿನೀತಿ ಓದಿದ ಮಾತ್ರಕ್ಕೇನೇ ಅರ್ಥ ಮಾಡಿಕೊಂಡು ಗೌರವ ಭಾವನೆ ತಳೆದಿರುವ ಬೆಲ್ಲಾಳ ಈ ನಿಲುವು ಹೊರಡಿಸಿರುವುದು ಭಾರತದ ಕುರಿತು ಗೌರವ ಕೀರ್ತಿಸುವ ನೆಲೆಯಿಂದಲೇ.

ಭಾರತದಲ್ಲಿ ವಾಡಿಕೆಯಲ್ಲಿಲ್ಲದ ಪರಿಚಯದ, ಆತ್ಮೀಯತೆಯ ಸಂಕೇತವಾಗಿ ನಿರೂಪಕರಿಗೆ ಬೆಲ್ಲಾ ಮುತ್ತು ಕೊಟ್ಟಾಗ ಅದನ್ನು ಅವರು ಅವಳನ್ನು ಐದು ವರ್ಷದ ಮೊಮ್ಮಗಳಂತೆ ಕಾಣುವ ಮೂಲಕ ಸ್ವೀಕರಿಸುತ್ತಾರೆ. ಅನ್ಯ ಹುಡುಗಿಯೊಂದಿಗೆ ಸರಸವಾಡಬಾರದ, ಮುತ್ತು ಪಡೆಯಬಾರದ ಮೌಲ್ಯವನ್ನು ಒಪ್ಪಿಕೊಳ್ಳುವುದಕ್ಕಾಗಿಯೇ ಇಲ್ಲಿ ಆಕೆಯನ್ನು ಸಣ್ಣ ಮಗುವನ್ನಾಗಿ ಕಾಣುವ ಮೂಲಕ ಆ ಗೊಂದಲನ್ನು ತಡೆಯಲಾಗಿದೆ.

ಬೆಲ್ಲಾಳನ್ನು 'ನನ್ನ ಮದುವೆಯಾಗು, ತನ್ನ ಮದುವೆಯಾಗು, ಅಂತ ಈ ಸುಂದೋಪ ಸುಂದರು ಈ ಹುಡುಗಿ ಹಿಂದೆ ಬಿದ್ದರೆ ನನಗೇ ಇದನ್ನ ನೋಡೋದು ಬಹಳ ಕಷ್ಟ ವಾಯಿತು. ನಾನು ಗಂಡಿನಾಟ ಆಡಿದವನು. ನನ್ನ ಮಗಳು ಮುಂದೆ ಹೋಗುತ್ತಾ ಇದ್ದರೆ ಅಳಿಯ ಹಿಂದೆ ಹೋಗುವುದನ್ನು ನೋಡಿದ್ದೇನೆ. ಏನೆಂದರೂ ಅದರಲ್ಲಿ ಒಂದು ಚೆನ್ನ ಏನು ಅಂದರೆ ಒಂದು ಹೆಣ್ಣಿನ ಹಿಂದೆ ಒಂದು ಗಂಡು ಹೋಗುತ್ತದೆ ಅನ್ನುವುದು ಆ ಗಂಡು ಆ ಹೆಣ್ಣಿಗೆ ಅಂತ ಗೊತ್ತಾಗಿದೆ ಅನ್ನುವುದು ಇದನ್ನು ಬಿಟ್ಟು ಒಂದು ಹೆಣ್ಣಿನ ಹಿಂದೆ ಹಲವು ಗಂಡು ಹೋಗುವುದೂ, ಅದರಲ್ಲಿ ಯಾವುದಾದರೂ ಸಮ, ಆ ಹೆಣ್ಣಿನ ಜೊತೆಯಾಗಬಹುದು ಎನ್ನುವುದೂ, ನಮ್ಮವರ ನಡಾವಳಿಗಳಿಗೆ ವಿಕಾರವಾಗಿ ಕಾಣುತ್ತವೆ. ಮನುಷ್ಯರ ಬಾಳುವೆ ಇಂಥ ಹೊತ್ತಿನಲ್ಲಿ ನಾಯಿಗಳ ಬಾಳುವೆ ಆಯಿತು ಅನ್ನಿಸುತ್ತದೆ' ಎಂದು ಅಂದುಕೊಳ್ಳುವುದು ಭಾರತೀಯ ಚೌಕಟ್ಟಿನ ಬದುಕನ್ನು ಇನ್ನಷ್ಟು ಎತ್ತರಕ್ಕೆ ಒಯ್ಯುತ್ತದೆ. ಇಲ್ಲಿ ಆಕೆ ನಿರೂಪಕರನ್ನು 'ಅಪ್ಪ' ಎಂದು ಕರೆದದ್ದಕ್ಕಾಗಿ ಅವರು ಅವಳ ಕುರಿತು ವಹಿಸುವ ಕಾಳಜಿ ಅದು ಆ ಪದದ ಸಂಬಂಧದ ವ್ಯಾಪಕತೆ ಪಡೆದುಕೊಳ್ಳುವಂತೆ ಮಾಡುತ್ತದೆ. ಮನುಷ್ಯ ಸಂಬಂಧವನ್ನು ಭಾವನಾತ್ಮಕ ಚೌಕಟ್ಟಿನಲ್ಲಿ ಇಟ್ಟು ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತದೆ. ಮಗಳ ಕಲ್ಪನೆಯೇ ಆಕೆಯ ವಾಸ್ತವ್ಯಕ್ಕೆ, ನಿರೂಪಕರೊಂದಿನ ಒಡನಾಟಕ್ಕೆ ನಿರಾಳವಾದ ವಾತಾವರಣ ಉಂಟಾಗುವಂತಾಗಿದೆ.

ಇಲ್ಲಿ ಬೆಲ್ಲಾಳಿಗಾಗಿ ಸೋರಲಿ ಹಾಗೂ ಲಾಂಗ್‌ರ ನಡುವೆ ನಡೆಯುವ ಶೀತಲ ಸಮರದ ನಡುವೆ ಆಕೆ ಅವರಿಬ್ಬರ ಸ್ವಭಾವವನ್ನು ತಾಳೆ ನೋಡುತ್ತಾಳೆ. ಈಗಾಗಲೇ ಒಂದು ಹೆಣ್ಣಿನೊಂದಿಗೆ ಸಂಬಂಧ ಹೊಂದಿರುವ ಸೋರಲಿಯನ್ನುವಿವಾಹವಾದರೆ ಒಂದು ಹೆಣ್ಣಿಗೆ ಅನ್ಯಾಯವಾಗುತ್ತದೆ. ಮರ್ಯಾದೆಯೂ ಕೊಂಚ ಕಡಿಮೆಯಾಗುತ್ತದೆ. ಲಾಂಗ್‌ನನ್ನು ಮದುವೆಯಾದರೆ ಅಂತರ್ ಸಮಸ್ಯೆ ಇಲ್ಲಿ ಒಂದು ನಿರ್ಧಾರಕ್ಕೆ ಬರುತ್ತದೆ ಎಂದು ನಿರ್ಧರಿಸುವಲ್ಲಿ ಭಾರತೀಯ ಜೀವನದ ಮಾದರಿಯನ್ನು ಅನುಸರಿಸಿದ್ದು ತಿಳಿಯುತ್ತದೆ. ಮಾಸ್ತಿ ಉದ್ದೇಶವೂ ಅದೇ. ಭಾರತೀಯ ಬದುಕಿನ ಮೌಲ್ಯವನ್ನು ವಿಶ್ವವೂ ಸ್ವೀಕರಿಸಬೇಕೆಂಬ ಆಶಯವನ್ನು ಈ ಮೂಲಕ ಪ್ರತಿಪಾದಿಸಿದ್ದು ಸ್ಪಷ್ಟವಾಗುತ್ತದೆ. ಆ ಕಾರಣಕ್ಕಾಗಿಯೇ ಬೆಲ್ಲಾ ಭಾರತಕ್ಕೆ ಬರುವುದನ್ನು ಸ್ವಾಗತಿಸಿದ್ದು ಎನ್ನುವುದು ಇಲ್ಲಿ ಖಚಿತವಾಗುತ್ತದೆ. ಬೆಲ್ಲಾ ಭಾರತೀಯ ಸಂಸ್ಕೃತಿಯೊಂದಿಗೆ ಹೊಂದಿಕೊಂಡು ಬದುಕಿದ

ರೀತಿಯೇ ಓದಿನಿಂದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳುವುದು ಸುಲಭವೇ ಎಂಬ ಸಂದೇಹಕ್ಕೆ ಉತ್ತರ ಕೊಡುತ್ತದೆ.

ಸೋರಲಿ, ಲಾಂಗ್‌ರ ನಡುವೆ ನಡೆದ ಗುಂಡಿನ ಚಕಮಕಿಯಿಂದಾಗಿ ಇಬ್ಬರೂ ಪರಸ್ಪರರನ್ನು ಕೊಂದುಕೊಳ್ಳುತ್ತಾರೆ. ಅನಂತರ ಬೆಲ್ಲಾ ಒಬ್ಬಳೇ ಭಾರತದಲ್ಲಿರುವುದನ್ನು ಒಪ್ಪುವುದಿಲ್ಲ. ಅದಕ್ಕೆ ಮುಖ್ಯ ಕಾರಣ ಆಕೆ ಭಾರತದವರೊಂದಿಗೆ ವಿವಾಹ ಸಂಬಂಧ ನಡೆಸಬಾರದೆಂಬ ಎಚ್ಚರಿಕೆಯಾಗಿದೆ.

ಆಕೆಯೂ ತನ್ನ ನಾಡಿಗೆ ತೆರಳಿ ಬಳಿಕ ಅಲ್ಲಿಯವನನ್ನೇ ಮದುವೆಯಾಗುವುದು ಅವಳು ಅವರವರ ಸೀಮೆಯ ಸಂಸ್ಕೃತಿಯೊಂದಿಗೆ ಬಾಳಬೇಕಾದ ಅನಿವಾರ್ಯತೆಯನ್ನು ಪ್ರತಿನಿಧಿಸುವಂತೆ ಮಾಸ್ತಿಯವರು ಎಚ್ಚರ ವಹಿಸಿದ್ದಾರೆ.

'ಆಚಾರವಂತ ಅಯ್ಯಂಗಾರ್ರು' ಕತೆಯಲ್ಲಿ ಅನ್ಯ ಧರ್ಮೀಯ ಹೆಣ್ಣೊಂದಿಗೆ ಸಂಬಂಧ ನಡೆಯುತ್ತದೆ. ಆದರೆ ಅದು ವೈವಾಹಿಕ ನೆಲೆಯಲ್ಲಿ ನಡೆಯುವುದಿಲ್ಲ. ವಿವಾಹ ಸಂಸ್ಥೆಗೆ ಅದು ಒಪ್ಪಿತವಾಗುವುದಿಲ್ಲ. ಮಾನವೀಯ ನೆಲೆಯ ಸಂಬಂಧವನ್ನಷ್ಟೇ ಇಲ್ಲಿ ನಡೆಯುವುದಕ್ಕೆ ಆಸ್ಪದ ಕೊಡಲಾಗಿದೆ. ಅನ್ಯ ಧರ್ಮೀಯ ಸಂಬಂಧ ನಡೆಯಬಾರದ ಕಾಳಜಿಯನ್ನು ಇಲ್ಲಿ ಚೆನ್ನಾಗಿ ಕಾಯ್ದುಕೊಳ್ಳಲಾಗಿದೆ. ಪರಸ್ಪರ ಪ್ರೀತಿ ಪೂರ್ವಕ ಬದುಕು ಸಾಗಿಸುವುದಕ್ಕೆ ಬೇಕಾದದ್ದು ಮಾನವೀಯತೆ. ಅದಕ್ಕೆ ಜಾತಿ ಮತ ಭೇದ ಇಲ್ಲ. ಆದರೆ ವಿವಾಹ ಸಂಬಂಧ ನಡೆಯುವುದು ಅಪಚಾರವಾಗುತ್ತದೆ. ಅದು ಒಂದು ಸಂಸ್ಕೃತಿಯ ನಂಬಿಕೆಯನ್ನು ಮುರಿಯುತ್ತದೆ. ಹಾಗಾಗದಂತೆ ಮಾಸ್ತಿ ಕಾವಲು ಕಾಯುತ್ತಾರೆ. ಅದಕ್ಕಾಗಿಯೇ ಆಚಾರವಂತ ಅಯ್ಯಂಗಾರರು ಕ್ರಿಶ್ಚಿಯನ್ ಧರ್ಮದ ನರ್ಸ್ ಒಬ್ಬಳೊಂದಿಗೆ ಸಂಸಾರ ಮಾಡಿದರೂ ತಾವೇ ಅಡುಗೆ ಮಾಡುತ್ತಾರೆ. 'ನೀವು ಒಂಟಿಯಾಗಿರುವುದನ್ನು ನೋಡಿ ನನಗೆ ಅಯ್ಯೋ ಪಾಪ ಅನ್ನಿಸುತ್ತದೆ' ಎಂದು ಪತ್ನಿ ಕಳೆದುಕೊಂಡಿದ್ದ ಆಚಾರ್ಯರ ಏಕಾಂತ ಜೀವನಕ್ಕೆ ಆಕೆ ಕೇಳುವ ಪ್ರಶ್ನೆಯೇ ಅವರು ಅವಳೊಂದಿಗೆ ಸಂಸಾರ ಮಾಡುವುದಕ್ಕೆ ಒಪ್ಪಿಕೊಳ್ಳುವಂತೆ ಮಾಡುತ್ತದೆ. ಜೊತೆಯಾಗಲು ಇಲ್ಲಿ ಧರ್ಮದ ಅಂತರ ಅಡ್ಡಿಯಾಗುವುದಿಲ್ಲ. ಆದರೆ 'ಮದುವೆ' ಆಗದೆ ಹಾಗೇ ಒಂದಾಗಿ ಬಾಳುವುದಕ್ಕೆ ಹೊರಟದ್ದು ಗಮನಿಸಬೇಕಾಗುತ್ತದೆ.

ವೈದಿಕ ಹಾಗೂ ಅವೈದಿಕರ ನಡುವೆ ಆಚಾರವಂತಿಕೆ ದೃಷ್ಟಿಯಿಂದಲೂ ಅದು ನಡೆಯುವುದು ಅಷ್ಟು ಸಹ್ಯವಾಗುವುದಿಲ್ಲ. 'ಒಂಟಿಯಾಗಿರುವುದು ಬೇಡ ಅಂದರೆ ನೀವು ನನಗೆ ಜೊತೆ ಆದಿರೇನು' ಎಂಬ ಅಯ್ಯಂಗಾರರ ಪ್ರಶ್ನೆಗೆ ನೀವು ಬ್ರಾಹ್ಮಣರು ನಾನು ಕ್ರಿಶ್ಚಿಯನ್ ಮದುವೆ ಆಗಬಹುದೇ. ಮದುವೆಯಲ್ಲಿ ಜೊತೆ ಆಗಬಹುದು. ಮದುವೆ ಆದರೆ ಏನು ವಿಶೇಷ. ಆಗಲಿಲ್ಲ ಹೋದದ್ದೇನು' ಎಂದದ್ದಕ್ಕೆ ಆಕೆ ಆಗೋಣವಂತೆ ಎನ್ನುತ್ತಾಳೆ. ಇದು ಪರಂಪರೆಯ ನಂಬಿಕೆಯನ್ನು ಒಪ್ಪಿಕೊಳ್ಳುವುದೂ ಆಗುತ್ತದೆ. ಆ ನಿಲುವನ್ನು ಒಡೆಯುವ ಪ್ರಯತ್ನ ಮಾಡುವುದಿಲ್ಲ. ಮಾಸ್ತಿ

ಆ ಧೋರಣೆಯನ್ನು ಹೆಣ್ಣೇ ಒಪ್ಪಿಕೊಳ್ಳುವಂತೆ ಮಾಡಿ ಅದನ್ನು ಗಟ್ಟಿಗೊಳಿಸುತ್ತಾರೆ. ಅಯ್ಯಂಗಾರರ ಸಂಬಂಧ ಬೆಳೆಸುವ ಹೆಣ್ಣು ಅವರಿಗೆ ಬೇಕಾದಂತೆ ಅವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಈ ಹೊಂದಾಣಿಕೆಗೆ ಪರಸ್ಪರರ ನಡುವಿನ ವಿಶ್ವಾಸ ಕಾರಣವಾಗುತ್ತದೆ. ಆದರೆ ಆಯ್ಯಂಗಾರರ ಆಚಾರ ಬಿಡದಂತೆ ಕೂಡ ಕಟ್ಟೆಚ್ಚರ ವಹಿಸಲಾಗಿದೆ. ಅವರ ಮರಣದ ಬಳಿಕ ಅವರು ಹೇಳಿಕೊಂಡಂತೆ ಅಂತ್ಯ ಸಂಸ್ಕಾರ ಮಾಡಿಸುವ ಜವಾಬ್ದಾರಿಯನ್ನು ಕೂಡಾ ಪೂರೈಸುವುದು ಅವಳು ಕೊಟ್ಟ ಮಾತನ್ನು ತೀರಿಸುವುದಾಗಿದೆ. ವೈಷ್ಣವಾನುಯಾಯಿಯಾಗಿರುವ ಅಯ್ಯಂಗಾರರ ಅಂತ್ಯಕ್ರಿಯೆಗಳನ್ನು ವೈಷ್ಣವರಿಂದಲೇ ಮಾಡಿಸಿ ಮಾತನ್ನು ಪೂರೈಸುತ್ತಾಳೆ. ಆಕೆ ಇತರ ವೈಷ್ಣವರ ಸಹಾಯ ಕೇಳುವುದು ಅಯ್ಯಂಗಾರರ ಆತ್ಮಶಾಂತಿಗಾಗಿ. ಅವರ ಆಚಾರ ಪಾಲಿಸುವ ನಿಟ್ಟಿನಲ್ಲಿ ವಚನ ಪಾಲಿಸುವವಳಾಗುತ್ತಾಳೆ.

ಈ ಸಂದರ್ಭದ ಕುರಿತು ಡಿ. ರಘುನಾಥ್ ರಾವ್ ಅವರು 'ಅಚಾನಕ್ಕಾಗಿ ಅಯ್ಯಂಗಾರರನ್ನು ಸಾಯಿಸಿದ್ದರ ಹಿಂದಿನ ಧೋರಣೆ ಯಾವುದಿರಬಹುದು. ಸಾಂಪ್ರದಾಯಿಕ ಮನೋಧರ್ಮ ಅವರ ನೋಟದ ಮೇಲೆ ಪ್ರಭಾವ ಬೀರಿದೆ ಅಂತ ಅನ್ನಿಸುವುದಿಲ್ಲವೇ? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಹೀಗೆಂದು ಕತೆಯ ಮತ್ತೊಂದು ಮೈಯನ್ನು ಅಲಕ್ಷಿಸಬೇಕೇ? ಪ್ರವೃತ್ತಿ ಎಲ್ಲಾ ಕಟ್ಟುಪಾಡುಗಳನ್ನು ಮೀರಿ ಮನುಷ್ಯರು ಸೇರುವುದಕ್ಕೆ ಒತ್ತಾಯಿಸುತ್ತದೆ ಎಂಬುದು ಈ ಕತೆಯ ಹಿಂದಿನ ಕಾಣ್ಕೆ ಅಲ್ಲವೇ? ಆ ಮತ್ತೊಂದು ಮೈಯನ್ನು ಅನೈತಿಕ ಎಂದು ತಿರಸ್ಕರಿಸದಿರುವುದೇ ನಮಗೆ ಮುಖ್ಯವಾಗುತ್ತದೆ' ಎಂದು ತರ್ಕಿಸಿದ್ದಾರೆ.[೫]

ಮಾನವೀಯ ಕಾಳಜಿ ಇರುವ ಮಾಸ್ತಿ ಮನುಷ್ಯ ಸಂಬಂಧದ ಕುರಿತು ಅಷ್ಟು ಕಾಳಜಿ ವಹಿಸುತ್ತಾರಾದರೂ ವಿಭಿನ್ನ ಜಾತಿ ಧರ್ಮಗಳೊಂದಿಗೆ ನಡೆಯುವ ವೈವಾಹಿಕ ಸಂಬಂಧಗಳನ್ನು ತಡೆಯುತ್ತಾರೆ. ಅಂಥ ವರ್ಗ, ವರ್ಣಭೇದ ನೀತಿಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕು ಎಂಬುದನ್ನು ಈ ಮೂಲಕ ಪ್ರತಿಪಾದಿಸಿದ್ದಾರೆ. ಮಾಸ್ತಿ ಧೋರಣೆಯೇ ಪ್ರತಿನಿಧಿತವಾಗಿದೆ. ಅಂಥ ವ್ಯವಸ್ಥೆಯೊಂದು ಹಾಗೆಯೇ ಮುಂದುವರಿದುಕೊಂಡು ಬರಬೇಕೆಂಬ ಸಂಪ್ರದಾಯವನ್ನು ಉಳಿಸುವ ಎಚ್ಚರವನ್ನು ಕಾಣುತ್ತೇವೆ.

ಮರು ಮದುವೆ -ವಿಧವಾ ವಿವಾಹ ಸಮಸ್ಯೆಗಳ ಸುಳಿಯಲ್ಲಿ

ಮಾಸ್ತಿ ಕತೆಗಳಲ್ಲಿನ ವಿಧವೆಯರು ಮರುಮದುವೆಯ ಅವಕಾಶ ಪಡೆದವರಲ್ಲ. ಮಕ್ಕಳಿದ್ದ ವಿಧವೆಯರು ಮರು ಮದುವೆಯಾದರೆ ಈ ತಾಯಿ-ಮಕ್ಕಳ ನಡುವಿನ ಸಂಬಂಧ ಕೆಡುತ್ತದೆ. ಮಾನಸಿಕ ನೆಮ್ಮದಿ ಕಳಕೊಳ್ಳಬೇಕಾಗಿ ಬರುತ್ತದೆ ಎಂಬುದನ್ನು ಗಟ್ರೂಡ್‌ಳ ಜೀವನದ ಮೂಲಕ

೫ ಪು. ೫೦ ಸಮ್ಮುಖ ಡಿ. ರಘುನಾಥ್ ರಾವ್ ೧೯೯೭

ತೋರಿಸಿದ್ದಾರೆ. ಅಂಥ ಸಂದರ್ಭಗಳು ಎದುರಾಗದಂತೆ ತಡೆಯಲು ಮಾಸ್ತಿ ಮರುಮದುವೆ ಪ್ರಸ್ತಾಪವನ್ನೇ ಎಲ್ಲೂ ಮಾಡುವುದಿಲ್ಲ. ವಯಸ್ಸಿಗೆ ಬಂದ ಮಕ್ಕಳಿರುವಾಗ ವಿಧವೆಯಾದ ತಾಯಿ ಮರು ಮದುವೆಯಾದರೆ ಆಕೆ ಸುಖದ ಬದುಕು ಕಾಣುವುದು ಅಸಾಧ್ಯ. ಅದಕ್ಕಾಗಿ ಆಕೆ ತನ್ನನ್ನು ಕೊಂದುಕೊಳ್ಳಲೂಬೇಕಾಗಿಬರುತ್ತದೆ ಎಂದೂ ತೋರಿಸಿಕೊಡುತ್ತಾರೆ.

ಗಟ್ರೂರ್ಡ್‌ಳ ವಿವಾಹ ನಡೆದ ರೀತಿಯೂ ವಿಭಿನ್ನವಾದದ್ದು. ಅಕ್ಕ ತೀರಿಕೊಂಡಾಗ ಅವಳು ವಿವಾಹವಾಗಬೇಕಾಗಿದ್ದ ಗಂಡನ್ನೇ ತನ್ನೊಂದಿಗೆ ನಿಶ್ಚಯ ಮಾಡಿಕೊಂಡಿದ್ದ ಅವನ ತಮ್ಮನನ್ನು ಬಿಟ್ಟು ಮದುವೆಯಾಗಬೇಕಾಯಿತು. ಆ ಮೂಲಕ ಆಕೆ ರಾಣಿಯಾಗುವ ಅವಕಾಶವನ್ನು ಪಡೆದುಕೊಂಡಳು. ಇಲ್ಲಿ ಯಾವುದೇ ಭಾವನಾತ್ಮಕತೆಯೂ ಕೆಲಸ ಮಾಡುವುದಿಲ್ಲ. ನಿರ್ಲಿಪ್ತಳಾಗಿಯೇ ತನಗೆ ನಿಶ್ಚಯಿಸಿದ ವರನನ್ನು ತೊರೆದು ಅವನ ಅಣ್ಣನನ್ನು ವಿವಾಹವಾಗುತ್ತಾಳೆ. ಪುತ್ರನನ್ನೂ ಪಡೆಯುತ್ತಾಳೆ.

'ಪೊಲೋನಿಯಾ ಹೇಳಿಕೆ' ಕಥೆಯ ಗಟ್ರೂರ್ಡ್ ಕೆಲವೇ ಸಮಯದಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯೂ ಆಗುತ್ತಾಳೆ. ಮತ್ತೆ ಕೆಲವೇ ತಿಂಗಳಲ್ಲಿ ಆಕೆ ಗಂಡನ ತಮ್ಮ ಕ್ಲಾಡಿಯಸ್ಸನನ್ನು ಮದುವೆ ಆಗುವ ನಿರ್ಧಾರಕ್ಕೂ ಬರುತ್ತಾಳೆ.

ಅವಳ ಈ ನಿರ್ಧಾರ, ತೀರ್ಮಾನಗಳೆಲ್ಲ ಒಪ್ಪಿತ ಮೌಲ್ಯವಾಗುವುದಿಲ್ಲ. ಅದು ಮೌಲ್ಯಯುತ ನಡವಳಿಕೆ ಅಲ್ಲ ಎಂಬುದನ್ನು ಸಾಬೀತು ಪಡಿಸುವುದಕ್ಕಾಗಿಯೇ 'ವರ್ಷಗಟ್ಟಲೆ ಕ್ಲಾಡಿಯಸ್ ಜೊತೆಯಲ್ಲಿ ಅವನ ಹೆಂಡತಿಯಾಗುತ್ತೇನೆಂದು ನಡೆದಾಡಿದ್ದ ಗಟ್ರೂರ್ಡ್ ಅದು ಹೇಗೆ ಅವನ ಅಣ್ಣ ಹ್ಯಾಮಲೆಟನನ್ನು ಮದುವೆ ಆಗಲು ಒಪ್ಪಿದಳು? ತಾನಾಗಿದ್ದರೆ ಇದಕ್ಕೆ ಒಪ್ಪುತ್ತಿರಲಿಲ್ಲ. ಮೊದಲಾಗಿ ಗಟ್ರೂರ್ಟ್‌ಗೆ ರಾಣಿ ಆಗೋಣ ಎಂಬ ಪದವಿಯ ಆಶೆ ದೊಡ್ಡದಾಗಿ ಇರಬೇಕು. ಜೊತೆಗೆ ಇವರು ಗಂಡನಾದರೇನು ಅವನು ಗಂಡನಾದರೇನು ಎನ್ನುವ ಅಸಡ್ಡೆಯೂ ಇದ್ದಿರಬೇಕು. ಇಲ್ಲದಿದ್ದರೆ ಒಂದು ಕಡೆಗೆ ಹರಿದಿದ್ದ ಅಪೇಕ್ಷೆಯನ್ನು ಇದ್ದಕ್ಕಿದ್ದಂತೆ ಇನ್ನೊಂದು ಕಡೆಗೆ ತಿರುಗಿಸಲು ಸಾದ್ಯವೆ? ಈ ಹುಡುಗಿ ಯಾವುದನ್ನಾಗಲೀ ಅಗತ್ಯ ಎಂದು ಬಯಸುವ ಸ್ವಭಾವದವಳಲ್ಲ ಎಂದರೆ ಒಂದು ರೀತಿ ಅರಿವು, ಒಂದು ರೀತಿ ಮೊದ್ದು' ಎಂಬ ತೀರ್ಮಾನಕ್ಕೆ ಬಂದು ಬಿಡಲಾಗಿದೆ. ಇದು ಅವಳ ನಡವಳಿಕೆ ಗೌರವ ಕಳೆದುಕೊಳ್ಳುವಂತೆ ಮಾಡುವುದಾಗುತ್ತದೆ. ಈ ಪರಿಚಯವೇ ತಮ್ಮನನ್ನು ಮದುವೆಯಾಗುವುದಾಗಿ ಮಾಡಿದ್ದ ಕುರಿತು ಬದಲಾಯಿಸಿ ಅಣ್ಣನಾದವನೊಂದಿಗೆ ಮದುವೆಯಾಗುವುದರ ಕುರಿತು ಪ್ರಶ್ನಿಸಿದಾಗ 'ಕುರಿಪ್ಪು ಅಲ್ಲವೇ? ಎಷ್ಟೋ ಸಲ ಕುರಿಪ್ಪು ಆಗಿ, ಆ ಮೇಲೆ ಹುಡುಗ, ಹುಡುಗಿ ಬೆರೆಯುವವರನ್ನು ಆಗುತ್ತಾರಲ್ಲ, ಬೇಸರ ಏನು?' ಎಂದು ನಿರ್ಲಿಪ್ತಳಾಗುವುದು, 'ನಾನು ದೊರೆ ತಮ್ಮನ ಜೊತೇಲಿ ಹತ್ತಾರು ಸಲ ಕೂತು ಮಾತನಾಡಿದ್ದುಂಟು' ಎಂದು ಹೇಳುವುದು ಹೆಣ್ಣಿನ ವ್ಯಕ್ತಿತ್ವ ಇರಬೇಕಾದ ಪರಿಯನ್ನು ತೆರೆದಿಡುತ್ತದೆ.

ಪೊಲೋನಿಯಾ ಗಟ್ರೂರ್ಡಳನ್ನು ಕಾಣಲು ಹೋದಾಗ ಆಕೆ ತೆರೆದಿಡುವ ಈ ವಿವರಗಳು ಅವಳ ನಿರ್ಧಾರದಿಂದ ಬದುಕಿನ ಗತಿ ಬದಲಾಗುತ್ತಿರುವುದನ್ನೂ ಪರಿಚಯಿಸುತ್ತವೆ. 'ರಾಣಿಯವರು ಒಪ್ಪಿಕೊಂಡು ತಾವು ದೊರೆ ಆದದ್ದೇ ಈ ದೊರೆ ತೀರಾ ಉಬ್ಬಿದ್ದರು. ಕುಮಾರನ್ನ ಮರ್ಯಾದೆಯಿಂದ ಕಾಣಲಿಲ್ಲ. ಕುಮಾರನಿಗೆ ಮನಸ್ಸು ಕೆಟ್ಟಿತು. ಯಾವ ಮಾತೋ ಯಾರ ಮಾತೋ ಅವರಿಗೆ ಈ ತಮ್ಮ ತನ್ನ ತಾಯನ್ನು ಕೈಗೆ ಹಾಕಿಕೊಂಡು ಅಣ್ಣನನ್ನು ಕೊಂದು ಇವಳನ್ನು ಮದುವೆ ಆಗಿ ದೊರೆಯಾದ ಅಂತ ತೋಚಿತು. ತಂದೆ ಇದ್ದ ದಿನದಲ್ಲಿ ಅವನಿಗೆ ಹಾಗೆ ಅಂಟಿಕೊಂಡಿದ್ದ ಈ ತನ್ನ ತಾಯಿ ಈಗ ಇದೇನು ಈ ಮನುಷ್ಯನಿಗೆ ಹೀಗೆ ಅಂಟಿಕೊಂಡಿದ್ದಾಳೆ, ಆ ತಂದೆ ಎಂಥ ಮನುಷ್ಯ, ಈ ಮನುಷ್ಯ ಇವನು ಏತರ ಪ್ರಾಣಿ? ಅವನ ಸಹವಾಸದಲ್ಲಿ ಸುಖ ಕಂಡಿದ್ದ ಹೆಣ್ಣೊಬ್ಬಳು ಇಂಥವನೊಂದಿಗೆ ಇಷ್ಟು ಅಕ್ಕರೆಯಿಂದ ಬಾಳುವುದೇ? ಇದು ಏನು ನಾಚಿಕೆಗೇಡು! ಎಂಥ ಅನ್ಯಾಯ ! ಇವನೊಂದಿಗೆ ಲೋಲುಪ್ತಿಯಲ್ಲಿ ಬಾಳುತ್ತಿರುವ ಈ ಹೆಂಗಸು ಕಾರಣ. ಇವಳು ತನ್ನ ತಾಯೇ? ಇವಳು ಒಬ್ಬ ಹೆಂಗಸೇ?' ಎಂದು ಯೋಚಿಸುವಲ್ಲಿ ತಾಯಿಯ ಮರು ವಿವಾಹಕ್ಕೆ ಅಸಹ್ಯ ಆಕ್ರೋಶ ವ್ಯಕ್ತವಾಗಿದೆ. ಈ ಮನಸ್ಸು ನಾನಾ ರೀತಿಯ ನಾಟಕಗಳನ್ನಾಡಿಸುವ ಮೂಲಕ ತನ್ನ ತಂದೆಯನ್ನು ಕೊಂದು ತಾಯಿಯನ್ನು ವಿವಾಹವಾದವನನ್ನಾಗಿ ಚಿಕ್ಕಪ್ಪನನ್ನು ಇ ಲ್ಲಿ ದೂಷಿಸುತ್ತದೆ. ತಾಯಿಯ ಬಗೆಗಂತೂ ಅವನಿಗೆ ವಾಕರಿಕೆ. ಅದು ಅವನಲ್ಲಿ ಒಂದು ರೀತಿಯ ದ್ವೇಷವಾಗಿ ಮಾರ್ಪಡುತ್ತದೆ. ಇದು ವಿವಾಹಕ್ಕೆ ಬಂದಿದ್ದ ತನಗೆ ವಿವಾಹ ಮಾಡದೇ ಇದ್ದುದಕ್ಕೆ ಅವನು ತೋರಿಸುವ ಪ್ರತಿಕ್ರಿಯೆಯಾಗಿದೆ.

ದೊರೆ ಪೀಠಕ್ಕಾಗಿ ಆತ ಆಸೆಪಟ್ಟುತನ್ನ ತಂದೆಯನ್ನೇ ಕೊಂದು ರಾಣಿಯನ್ನು ವಿವಾಹವಾಗಿ ಅದನ್ನು ಪಡೆದ ಎಂದು ಮಗ ಮಾಡುವ ಆರೋಪದ ಹಿಂದಿನ ಹಳಹಳಿಕೆಯಲ್ಲಿ ತನಗೆ ರಾಜನಾಗಲಿಲ್ಲ ಎಂಬ ನೋವು ಅಡಗಿದೆ.

ತಾಯಿ ಮರುಮದುವೆ ಆದದ್ದರಿಂದಲೇ ಅವರಿಬ್ಬರ ನಡುವೆ ಅಸಮಾಧಾನ ಮೊಳೆತು ಬೆಳೆದಿದೆ.

'ನೀನು ಕೆಟ್ಟ ಹೆಂಗಸು, ನಿನಗೆ ಮರ್ಯಾದೆ ಇಲ್ಲ, ನೀತಿ ಇಲ್ಲ, ನಡತೆ ಇಲ್ಲ. ಎಂಥ ಗಂಡನನ್ನು ಎಷ್ಟು ಒಪ್ಪಿಕೊಂಡಿದ್ದವಳು ಈಗ ಎಂಥ ಪಾಪಿಯನ್ನು ಗಂಡ ಎನ್ನುತ್ತಿದ್ದೀಯಾ. ನನ್ನ ತಂದೆ ಕುದುರೆ, ನೀನು ಕಟ್ಟಿಕೊಂಡಿರುವ ಈ ಪ್ರಾಣಿ ಕತ್ತೆ. ನಿನಗೆ ಕಣ್ಣಿಲ್ಲದೇ ಹೋಯಿತೇ? ಬುದ್ಧಿಯಿಲ್ಲದೇ ಹೋಯಿತೇ? ವಯಸ್ಸಾದ ಹೆಂಗಸು; ನಿನಗೆ ಗಂಡಿನ ಸಹವಾಸ ಬೇಕಾಯಿತೇ? ರಾಣಿ ಆದವಳಿಗೆ ಸಂಕೋಚ ಬೇಡವೇ? ಇದು ಎಂಥ ಅಕ್ರಮ' ಎಂದು ಏದುರಾಡುತ್ತಾನೆ. ಮರುವಿವಾಹವಾದ ತಪ್ಪಿಗೆ ಅವಳು ಅವಳನ್ನು ಕೊಂದುಕೊಳ್ಳಬೇಕಾಗಿ ಬರುತ್ತದೆ.

ವಿಧವೆ ತಾಯಿ ಮರು ಮದುವೆ ಮಾಡಿಕೊಂಡ ಒಂದೇ ಒಂದು ಕಾರಣದಿಂದಾಗಿ ಘಟಿಸಿದ ಅಶಾಂತಿ, ಕೊಂದುಕೊಳ್ಳುವ ಪರಿ ಅಂದಿನ ಪರಿಸ್ಥಿತಿ ಮಕ್ಕಳಿದ್ದ ವಿಧವೆ ಮರುಮದುವೆಯಾಗುವುದನ್ನು ತಡೆಯುತ್ತದೆ.

ಇಲ್ಲಿ ವಿವಾಹಕ್ಕೆ ಅವಕಾಶ ಕೊಡುವುದರೊಂದಿಗೆ ಅದರಿಂದಾಗುವ ಸಂಘರ್ಷ ಕುಟುಂಬ ಕಲಹವನ್ನು ಪರಿಚಯಿಸುವ ಮೂಲಕ ಅದನ್ನು ತಡೆಯುವ ಪ್ರಯತ್ನ ಮಾಡಲಾಗಿದೆ. ಹೆಣ್ಣಿನ ಬೇಕು ಬೇಡಗಳನ್ನು ಅರ್ಥ ಮಾಡಿಕೊಳ್ಳದೇ, ತನ್ನ ಸ್ವಾರ್ಥ ಮಾತ್ರ ನೋಡುವ ಪುರುಷಾಧಿಕ್ಯ ಇಲ್ಲಿ ಮೆರೆಯುತ್ತದೆ. ತಾಯಿ ಸುಖಪಡುವುದನ್ನು ಕಾಣದ ಮಗ, ತನ್ನ ಅಧಿಕಾರ ಮೋಹ ಗೆಲ್ಲಬೇಕೆಂದೇ ಸಂಘರ್ಷಕ್ಕಿಳಿಯುತ್ತಾನೆ. ಇಂಥ ಅಸ್ವಸ್ಥ ಮನಸ್ಸೂ ಕೂಡ ಕೊನೆಗೆ ತಾಯಿಯೊಂದಿಗೆ ತನ್ನ ಅಂತ್ಯವನ್ನೂ ಕಾಣುತ್ತದೆ. ಇದು ಸಂಘರ್ಷಕ್ಕೆ ಕಾರಣವಾಗುತ್ತದೆ. ಘರ್ಷಣೆಯ ತೀವ್ರತೆ ಹಾಗೂ ಪರಿಣಾಮವನ್ನು ಪ್ರಕಟಿಸುವುದೇ ಮಾಸ್ತಿಯವರ ಉದ್ದೇಶವಾಗಿದೆ.

ತಾಯ್ತನದ ಕರ್ತವ್ಯ ನಿರ್ವಹಣೆಯಲ್ಲಿ

ಲೋಕ ಉಳಿಯಬೇಕು, ಮನುಷ್ಯ ಸಂಬಂಧ ಗಟ್ಟಿಗೊಳ್ಳಬೇಕು ಎಂಬ ಆಶಯದಿಂದಲೇ ಮಾಸ್ತಿ ಜೀವವೊಂದು ಹುಟ್ಟುವ, ಬೆಳೆಯುವ ಪ್ರಕ್ರಿಯೆಗೆ ಮಹತ್ವ ಕೊಡುತ್ತಾರೆ. ಆ ಆಶಯದಿಂದಲೇ ಅವರು ತಾಯ್ತನವನ್ನೂ ವೈಭವೀಕರಿಸುತ್ತಾರೆ. ವೈದಿಕ ಪರಂಪರೆ ತಾಯಿಯನ್ನು, ತಾಯ್ತನವನ್ನು ಅತ್ಯಂತ ಉನ್ನತ ಸ್ತರದಲ್ಲಿಟ್ಟು ಕಾಯ್ದುಕೊಳ್ಳುವುದನ್ನು ಕಾಣುತ್ತೇವೆ. ಅಲ್ಲಿ ತಾಯ್ತನ ಎನ್ನುವುದು ಒಂದು ಜೀವಸೆಲೆ. ಅದು ಹೆಣ್ಣಿನ ಹುಟ್ಟಿನೊಂದಿಗೆ ಜನ್ಮವೆತ್ತಿರುತ್ತದೆ ಎಂಬ ನಂಬಿಕೆ ಬಿಂಬಿಸಿದೆ. ಆ ನಂಬಿಕೆಯ ತಳಹದಿಯ ಮೇಲೆ ನಿಂತು ಜೀವನ ಸಾಗಿಸಬೇಕಾಗುತ್ತದೆ ಎಂದು ದೃಢವಾಗಿ ಮಾಸ್ತಿ ನಂಬಿದ್ದಾರೆ. ತಾಯ್ತನಕ್ಕಾಗಿ ಪ್ರತಿಯೊಬ್ಬ ಹೆಣ್ಣು ಕೂಡ ಕಾಯುವಂತೆ, ಹಪಹಪಿಸುವಂತೆ ಅವರು ಚಿತ್ರಿಸಿದ್ದಾರೆ. ತಾಯ್ತನದ ಹಂಬಲವೇ ಇಲ್ಲದವರಲ್ಲೂ ಅದನ್ನು ಬಿತ್ತುವ ಕೆಲಸವನ್ನೂ ಮಾಡಿದ್ದಾರೆ. ಇದರ ಪರಿಣಾಮವಾಗಿ ಹೆಣ್ಣನ್ನುನೋಡುವ ದೃಷ್ಟಿಕೋನದ ಚರ್ಚೆಯನ್ನು ಮಾಸ್ತಿ ಕತೆಗಳ ಸ್ತ್ರೀಯರು ಮುಂದುವರಿಸಿಕೊಂಡು ಹೋಗುವ ಕುರಿತು ಪುನರ್‌ಮೌಲ್ಯೀಕರಣ ಮಾಡಬೇಕಾಗುತ್ತದೆ. ಮಾಸ್ತಿಯವರ ಪ್ರಕಾರ ಒಂದು ಸಾಂಪ್ರದಾಯಿಕ, ಪಾರಂಪರಿಕ ಮೌಲ್ಯವಾದ ತಾಯ್ತನವನ್ನು ವಿರೋಧಿಸುವುದು ಅಂದರೆ ಜೀವವಿರೋಧಿ ಪ್ರಕ್ರಿಯೆಯಾಗುತ್ತದೆ. ಆದ್ದರಿಂದಲೇ ಆಕೆ ಅದನ್ನು ಪ್ರಶ್ನಿಸಬಾರದು, ವಿರೋಧಿಸಬಾರದು. ಆ ಕಾಳಜಿಯನ್ನು ಹೆಣ್ಣಲ್ಲಿ ಹುಟ್ಟು ಹಾಕುವ ಕೆಲಸವನ್ನೂ ಬಹುಜಾಗರೂಕತೆಯಿಂದ ಮಾಸ್ತಿ ಮಾಡಿದ್ದಾರೆ.

ಮಾಸ್ತಿಕತೆಗಳ ಸ್ತ್ರೀಯರು ತಮ್ಮ ಮೇಲೆ ಹೇರಿದ ಮೌಲ್ಯವೊಂದರ ಪ್ರತಿನಿಧಿಗಳಾಗಿಯೇ ಕಾಣಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಇಷ್ಟ - ಅನಿಷ್ಟಗಳು ಅವರಿಗೆ ಮುಖ್ಯವಾಗುವುದಿಲ್ಲ.

ಹೆಣ್ಣಿನ ಉದ್ದೇಶವನ್ನು ಅಷ್ಟಕ್ಕೇ ಸೀಮಿತಗೊಳಿಸಿರುವುದರಿಂದ ಅದನ್ನು ಆಕೆ ಪಾಲಿಸಬೇಕಾಗುತ್ತದೆ. ಅದು ಎಂಥದ್ದೇ ಸಂಕಷ್ಟದ ಸ್ಥಿತಿಯಲ್ಲಿ ಕೂಡ ಆಕೆ ತಾಯಾಗುವಲ್ಲಿ ಸ್ತ್ರೀ ತನ್ನನ್ನು ತೊಡಗಿಸಿಕೊಂಡಿರಬೇಕಾದ ಸ್ಥಿರೀಕೃತ ಸಂಸ್ಕೃತಿಯ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ.

ಪಿತೃಪ್ರಧಾನ ಆಲೋಚನೆಯ ಸಂಸ್ಕೃತಿಯೊಳಗೆ ಮಾಸ್ತಿ ಕತೆಗಳ ಸ್ತ್ರೀಯರು ತಾಯ್ತನವನ್ನು ಅತ್ಯಂತ ಗೌರವದಿಂದ ಸ್ವೀಕರಿಸುತ್ತಾರೆ. ಅದನ್ನೊಂದು ಉದಾತ್ತ ಮೌಲ್ಯವಾಗಿ ಕಂಡ ಸಮಾಜ ಅದನ್ನೇ ಅವಳಿಗೆ ಹೇರುತ್ತದೆ. ಇದು ಹೆಣ್ಣಿನ ಅಧೀನತೆಯನ್ನು ಕಾಯ್ದುಕೊಳ್ಳುವಲ್ಲಿ ಅತಿಜಾಗರೂಕತೆ ವಹಿಸುತ್ತದೆ. ಹೆಣ್ತನದ ಪರಮ ಪಾವಿತ್ರ್ಯವೇ ತಾಯ್ತನದಲ್ಲಿದೆ ಎಂಬ ಮೌಲ್ಯಾಧಾರಿತ ಸಮಾಜದಲ್ಲಿ ಅದಕ್ಕೆ ಮನ್ನಣೆ ನೀಡಬೇಕಾದದ್ದು ಅವಳ ಕರ್ತವ್ಯವಾಗಿತ್ತು. ಈ ತಾಯ್ತನದ ನೆಲೆಯಲ್ಲಿಯೇ ಅವಳು ವ್ಯಕ್ತಿತ್ವ ಉಳಿಸಿಕೊಳ್ಳುವವಳಾಗುತ್ತಾಳೆ. ತಾನು ಅದನ್ನು ಪಾಲಿಸುವ ಮೂಲಕ ಇತರರಿಗೂ ಅದನ್ನು ಪಾಲಿಸಬೇಕಾದ ನೀತಿಯನ್ನು ಹೇಳುತ್ತಾಳೆ.

ಮಾಸ್ತಿ ಅವರ ಕತೆಗಳಲ್ಲಿನ ಸ್ತ್ರೀಯರಲ್ಲಿ ತಾಯ್ತನದ ಜವಾಬ್ದಾರಿಯನ್ನು ಹೊತ್ತವರು ವಿಭಿನ್ನ ಸ್ತರದವರು. ಒಂದರ್ಥದಲ್ಲಿ ಮಾಸ್ತಿ ಅವರ ಕತೆಗಳ ಮೂಲ ಸೆಲೆಯೇ ತಾಯ್ತನ. ಆದುದರಿಂದಲೇ ಅಲ್ಲಿ ಸ್ತ್ರೀಯರಲ್ಲಿ ಬಹುತೇಕ ಮಂದಿ ತಿಳಿ ಹೇಳುವ, ಬುದ್ಧಿ ಹೇಳುವ ಹಿರಿಯ ವ್ಯಕ್ತಿತ್ವದ ತಾಯಂದಿರು ಬರುತ್ತಾರೆ. ಒಂದು ಜನಾಂಗವನ್ನು ತಿದ್ದಿ, ತೀಡುವ ಮಹತ್ತರ ಜವಾಬ್ದಾರಿಯ ನೆಲೆಯಲ್ಲಿ ತಾಯ್ತನವನ್ನು ಅತಿಯಾಗಿ ಗೌರವಿಸುತ್ತಾರೆ. ತಿದ್ದಿತೀಡುವ ವ್ಯಕ್ತಿತ್ವ ಹಾಗೂ ಸಮಾಜದ ಕಟ್ಟಳೆಗಳನ್ನು ಪಾಲಿಸುತ್ತ, ಮಕ್ಕಳಿಗೂ ತಿಳಿಸಬೇಕಾದ ಕರ್ತವ್ಯವನ್ನು ಸ್ತ್ರೀಯರಿಂದಲೇ ಪರಿಚಯಿಸುವ ಕೆಲಸವನ್ನು ಮಾಡುತ್ತಾರೆ. ಸಂಸ್ಕೃತಿಯಲ್ಲಿ ಹೆಣ್ಣಿನೊಂದಿಗೆ ಗಂಡೂ ಇರುತ್ತಾನೆ. ಆದರೂ ಸಮಾಜ ಈ ತಿದ್ದುವ ಜವಾಬ್ದಾರಿಯನ್ನು ಹೆಣ್ಣಿಗೇ ಹೇರಿ ತಾಯ್ತನದ ಗೌರವದ ಹೆಸರಿನಲ್ಲಿ ಕಟ್ಟಿಹಾಕಿ ಗಂಡು ಪಲಾಯನ ಮಾಡುವ ಸಂದರ್ಭಗಳ ಕುರಿತು ಮಾಸ್ತಿ ಮೌನ ತಳೆಯುತ್ತಾರೆ. ಗಂಡು ಜವಾಬ್ದಾರಿತನದಿಂದ ಮಾಡುವ ಪಲಾಯನವಾದ ಮಾಸ್ತಿಗೆ ಪ್ರಶ್ನಾರ್ಹವಾಗುವುದಿಲ್ಲ. ಹೆಣ್ಣಿಗೆ ಮಾತ್ರ ಆ ಜವಾಬ್ದಾರಿಯನ್ನು ಅದು ಅವಳ ಕರ್ತವ್ಯ ಎಂಬಂತೆ ಹೇರಿದ್ದಾರೆ. ಜೊತೆಗೆ ಸ್ತ್ರೀ ಮಗಳೂ ಆಗಿರಬೇಕು ಎಂದು ಮಾಸ್ತಿ ಬಯಸುತ್ತಾರೆ. ಇಲ್ಲಿ ಈ ನೆಲೆಯಲ್ಲಿ ಮುಖ್ಯವಾಗಿ ಗೌತಮಿಯನ್ನು ಪರಿಚಯಿಸುತ್ತಾರೆ. 'ಗೌತಮಿ ಹೇಳಿದ ಕತೆ'ಯ ಗೌತಮಿಯೇ ಇಲ್ಲಿ ಹಿರಿಯ ತಾಯಿ. ಆಕೆಯ ವ್ಯಕ್ತಿತ್ವ ನೀಡುವ ಮಾರ್ಗದರ್ಶನ ಇಡೀ ಸನಾತನ ವೈದಿಕ ಧರ್ಮದ ತತ್ವಗಳನ್ನು ಪಾಲಿಸುವ ಹಾಗೂ ಬಾಳಿಸುವ ಕುರಿತು ಅತ್ಯಂತ ಕಾಳಜಿಯದ್ದಾಗಿದೆ ಎಂದು ಕಂಡರಿಸುತ್ತಾರೆ. ತಾಯ್ತನದ ಅನಿವಾರ್ಯತೆಯನ್ನು ತಿಳಿ ಹೇಳಿ ತಿದ್ದುವವಳು, ಸಲಹೆ ನೀಡುವವಳಾಗಿರುವುದರಿಂದ ಅವರಿಗೆ ಆಕೆ ಮುಖ್ಯಳಾಗುತ್ತಾಳೆ. ಇತರರಲ್ಲೂ ಆ ಭಾವನೆ ಮೂಡುವಂತೆ ಮಾಡುವಲ್ಲಿ ಪ್ರಯತ್ನಿಸಿದ್ದಾರೆ. ಗೌತಮಿ ಮೂಲಕ

ಸಮಾಜದ ಸಾಂಪ್ರದಾಯಕ ನಡವಳಿಕೆಗಳನ್ನು ಪುನರ್‌ರಚಿಸುವ ಮೌಲ್ಯವನ್ನೇ ಸಾರುತ್ತಾರೆ. ಅಂದರೆ ವಿವಾಹವನ್ನು ಯಾರೂ ಮೀರಬಾರದೆಂಬ ನಿಲುವನ್ನು ಹೆಣ್ಣಿನಿಂದಲೇ ಒಪ್ಪಿಸಿ ಅದಕ್ಕೆ ಬದ್ಧರಾಗಿರುವಂತೆ ಕಟ್ಟಿಹಾಕುತ್ತಾರೆ. ಮಾಸ್ತಿ ಅವರ ಪ್ರಕಾರ ವಿವಾಹ, ತಾಯ್ತನ ಹೆಣ್ಣಿನ ಬದುಕಿನ ತಳಹದಿ ಆಗಿದೆ. ವಿವಾಹವಾಗಲೇಬೇಕಾದ ಅನಿವಾರ್ಯತೆಗೆ ಅವರು ಶಕುಂತಲೆಯ ಬದುಕಿನ ಉದಾಹರಣೆಯನ್ನು ಕೊಡಿಸುವ ಮೂಲಕ ಸ್ತ್ರೀ ವಿವಾಹವಾಗದೇ ಉಳಿಯದಂತೆ ತಡೆಯುವ ಪ್ರಯತ್ನ ಮಾಡಿದ್ದಾರೆ. ಆದರೆ ಅದು ಎಷ್ಟು ಪ್ರಸ್ತುತ ಎಂಬುದು ಪ್ರಶ್ನಾರ್ಹವಾಗುತ್ತದೆ. ಆದರೆ ಈ ಕಾಳಜಿಯ ಹಿಂದೆ ಅಡಗಿರುವುದು ಸ್ತ್ರೀ ವಿವಾಹವಾಗಬೇಕು, ತಾಯಿಯಾಗಬೇಕು ಎಂಬ ಪರಂಪರಾಗತ ನಂಬಿಕೆ, ಧೋರಣೆಯೇ ಆಗಿದೆ. 'ನೀವು ಚಿಕ್ಕವರು, ನಿಮಗೆ ಈ ಮಾತೆಲ್ಲ ತಿಳಿಯುವುದಿಲ್ಲ. ಬ್ರಹ್ಮಚರ್ಯೆಯಲ್ಲಿ ಇರುವ ಮಕ್ಕಳಿಗಾದರೂ ಶಕುಂತಲೆಗೆ ಒದಗಿದ ಮನೋಧರ್ಮ ಒದಗಬಹುದು. ನನ್ನ ಚಿಕ್ಕಂದು ಒಬ್ಬ ತರುಣಿಗೆ ಆದ ಅನುಭವವನನ್ನು ನಾನು ಬಲ್ಲೆನು. ಅದನ್ನು ಹೇಳುತ್ತೇನೆ ಕೇಳಿ. ಅದನ್ನು ಕೇಳಿದ ಮೇಲೆ ನೀವು ನಿಮ್ಮನ್ನು ಕುರಿತು ನಾನು ಭಯ ಪಡುವುದು ಸರಿಯೆಂದು ಒಪ್ಪುವಿರಿ' ಎಂದು ತಿಳಿ ಹೇಳುವಲ್ಲಿ ಗೌತಮಿ ಸೀಮೆ ಮೀರಿದ ತಾಯ್ತನ ಮೆರೆಯುತ್ತಾಳೆ. ಆಕೆಯ ಕಾಳಜಿ ಇಡೀ ಹೆಣ್ಣು ಕುಲದ ಕುರಿತಾದದ್ದು, ತನ್ನ ಅನುಭವದ ನೆಲೆಗಟ್ಟಿನಲ್ಲಿ ಮುಂದಿನ ಪೀಳಿಗೆಯನ್ನು ಸಿದ್ಧಗೊಳಿಸುವಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಗೌತಮಿ ಹೀಗೆ ಎಚ್ಚರಿಕೆ ಹೇಳುವುದು, ಕಾಳಜಿ ತೋರುವುದು ಮಾಸ್ತಿಯವರ ಮನಃಸ್ಥಿತಿಯ ಪ್ರತಿಬಿಂಬವಾಗಿದೆ. ಹೆಣ್ಣು ನಡೆಯಬೇಕಾದ ಸಾಂಪ್ರದಾಯಕ ಜೀವನ ಮೌಲ್ಯವೊಂದನ್ನು ಮೀರಬಾರದಂತೆ ತೋರಿಸುವ ಪ್ರಯತ್ನ ಮಾಡಿದ್ದಾರೆ. ಈ ತಿಳಿ ಹೇಳುವಿಕೆಗೆ ವೃದ್ಧೆ ಗೌತಮಿಯನ್ನೇ ಬಳಸಿಕೊಳ್ಳುವುದು ಅವಳು ಹೇಳಿದ ಹಿತವಚನವನ್ನು, ಹಿರಿಯ ತಲೆಮಾರಿನ ಸಂದೇಶವನ್ನು ತಾಯ್ತನದ ನಿಟ್ಟಿನಲ್ಲಿ ಗ್ರಹಿಸಿ ಸ್ವೀಕರಿಸಬೇಕೆಂಬ ಆತಂಕದಿಂದ ಎನ್ನಬಹುದು. ಕಾಮ ಎಲ್ಲರನ್ನೂ ಕಾಡುತ್ತದೆ. ಅದು ಸನ್ಯಾಸಿನಿಯರನ್ನು ಕಾಡದಿರದು. ಆದರೆ ಅದರ ನಿಗ್ರಹ ಸಲ್ಲದು ಎಂಬ ತಿಳಿವಳಿಕೆಯ ನೆಲೆಯಲ್ಲಿಯೇ ವಿವಾಹ, ಕುಟುಂಬಕ್ಕೆ ಸ್ತ್ರೀ ಬದ್ಧಳಾಗಿರಬೇಕಾದುದನ್ನು ಗೌತಮಿಯ ಮೂಲಕ ಹೇಳಿಸುವ ಕೆಲಸವನ್ನು ಮಾಸ್ತಿ ನಿರ್ವಹಿಸಿದ್ದಾರೆ.

'ಮಾಸ್ತಿ ನಿಸ್ಸಂಕೋಚವಾಗಿ ಕಾಮದ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ. ಆದರೆ ಈ ಮಾನಸ ಪ್ರವೃತ್ತಿಗಳ ಬಗ್ಗೆ ಇಂಥ ಮಾಗಿದ, ವಿಶಾಲ, ತೀವ್ರ ಎಚ್ಚರಿಕೆ ಇರುವ ಮಾಸ್ತಿ ಅವುಗಳ ಮೇಲೆ ಮನುಷ್ಯ ಕಟ್ಟುವ ಸಾಮಾಜಿಕ ಮೌಲ್ಯಗಳು, ಅವುಗಳ ಪ್ರಸ್ತುತತೆಯ ಪ್ರಶ್ನೆಯನ್ನು ಎತ್ತಿಕೊಳ್ಳುವುದಿಲ್ಲ. ಬಹುಶಃ ಈ ಕೊರತೆಯಿಂದಲೋ ಏನೋ ಅವರ ಕಥೆಗಳಲ್ಲಿ ಎಲ್ಲಿಯೂ ವ್ಯವಸ್ಥೆಯನ್ನು ಅಲ್ಲಾಡಿಸುವ, ಕೆದಕುವ ಪ್ರಶ್ನೆಗಳೇ ಏಳುವುದಿಲ್ಲ' ಎಂದು ರಾಜೇಂದ್ರ ಚೆನ್ನಿ ಚರ್ಚಿಸಿದ್ದಾರೆ.[೭]

---

೭ ಪು. ೩೧, ಮಾಸ್ತಿಯವರ ಸಣ್ಣಕತೆಗಳು, ಅಧ್ಯಯನ, ರಾಜೇಂದ್ರ ಚೆನ್ನಿ

‘ನಳಿನಿಯ ತಂದೆ’ ಕತೆಯ ಲಕ್ಷ್ಮಿ ಕೂಡಾ ತಾಯ್ತನದ ಮೌಲ್ಯವನ್ನು ಉಳಿಸುವ ನಿಟ್ಟಿನಲ್ಲಿ ಎಚ್ಚರ ವಹಿಸುತ್ತಾಳೆ. ಆಕೆ ಪತ್ನಿಯಾಗಿ ಗುರುತು ಪಡೆಯುವುದಕ್ಕಿಂತ ತಾಯಿಯಾಗಿಯೇ ಹೆಚ್ಚು ಪ್ರಸ್ತುತವಾಗುತ್ತಾಳೆ. ಅವಳ ಮಗಳ ಭವಿಷ್ಯವೇ ಅವಳ ಮುಂದಿದೆ. ಅಲ್ಲಿ ತನ್ನ ಸುಖ, ನೆಮ್ಮದಿ, ವೈಯಕ್ತಿಕ ಚಿಂತೆಗಳು ಹೆಚ್ಚು ಮುಖ್ಯವಾಗುವುದಿಲ್ಲ. ಮಗಳ ಸುಖದ ಕಡೆಗೆ ತಾಯಿಯ ಮನಸ್ಸು ತುಡಿಯುತ್ತದೆ. ಇದು ತನ್ನತನವನ್ನು ಹೆಣ್ಣೊಬ್ಬಳು ಕಳೆದುಕೊಳ್ಳುವುದು, ಆಕೆಯ ಜೀವನವಿಡೀ ಮಕ್ಕಳ ಭವಿಷ್ಯ ರೂಪಿಸುವ ಕಡೆಗೇ ಹರಿಯುತ್ತಿರಬೇಕೆಂಬ ಚೌಕಟ್ಟು ಬಹು ಮಟ್ಟಿಗೆ ಇಲ್ಲಿ ಪಾಲಿತವಾಗುತ್ತದೆ. ಅದಕ್ಕಾಗಿ ತನ್ನ ಕಷ್ಟಸುಖಗಳನ್ನು ಎಣಿಸದೇ ಮಗಳ ಭವಿಷ್ಯಕ್ಕೆ ಹೆಣಗುವ ರೀತಿಯೂ ಒಂದು ಮೌಲ್ಯವಾಗಿ ಪ್ರತಿಪಾದಿಸುವುದಕ್ಕೆ ಸ್ತ್ರೀಯೇ ಇಲ್ಲಿ ತೊಡಗಿಕೊಳ್ಳುವಂತೆ ಎಚ್ಚರವಹಿಸಿದ್ದನ್ನು ಕಾಣಬಹುದಾಗಿದೆ.

ಆ ನೆಲೆಯಲ್ಲಿ ತಾಯಿಯೊಬ್ಬಳು ತೊಡಗಿಸಿಕೊಳ್ಳಬೇಕಾದ ಸಾಂಪ್ರದಾಯಕ ಸಂದೇಶವನ್ನು ಕೂಡ ಇಲ್ಲಿ ಅವಳು ಕೊಡುತ್ತಾಳೆ. ‘ ಅವಳ ಪಾಲು ನೋಡಿಕೊಂಡು ಆ ಮೇಲೆ ನಮ್ಮ ಪಾಲಿನ ಯೋಚನೆ ಮಾಡಬಹುದು. ಹೊಸದೇನಲ್ಲವಲ್ಲ! ಹಳೇ ಪಾಲು ಅದರಲ್ಲಿ ಉಳಿದಿರೋದು ತಾನೇ ಬರುತ್ತೆ’ ಎಂದು ಹೇಳುವಲ್ಲಿಯೇ ತಾಯ್ತನದ ಜೀವಸೆಲೆ ಜಿನುಗಿದೆ. ಈ ಜೀವಸೆಲೆ ತನ್ನನ್ನು ಮರೆಯುವ ಮಕ್ಕಳನ್ನು ಬೆಳಗಿಸುವ ನಿಟ್ಟಿನಲ್ಲಿ ಪ್ರಜ್ವಲಿಸುತ್ತದೆ. ಅದೇ ತಾಯಿಯಾದವಳ ಕರ್ತವ್ಯ ಎಂಬ ಸಂದೇಶವನ್ನು ಸ್ತ್ರೀಯ ಮೂಲಕವೇ ಕೊಡಿಸಲಾಗಿದೆ. ಇದೇ ನೆಲೆಯಲ್ಲಿ ‘ವೇಲೂರಿನ ಲಕ್ಷ್ಮಮ್ಮ’ ಕತೆಯ ಕುರುಡಿ ವೇಲೂರಿನ ಲಕ್ಷ್ಮಮ್ಮ ಕೂಡ ಗಮನ ಸೆಳೆಯುತ್ತಾಳೆ. ಅವಳು ಗಂಡನ ಸ್ವಭಾವದ ಅತಿರೇಕದಿಂದಾಗಿ ಹುಚ್ಚಿಯಾದರೂ ತಾಯ್ತನದ ನೆಲೆಯಿಂದ ಅನಾವರಣಗೊಂಡಿದ್ದಾಳೆ. ಇಲ್ಲಿ ಕುರುಡಿ ಹಾಗೂ ಹುಚ್ಚಿಯಾಗಿರುವ ಲಕ್ಷಮ್ಮ ಮಕ್ಕಳನ್ನೂ ಕಳೆದುಕೊಂಡಿದ್ದಾಳೆ. ಆದರೂ ಆಕೆ ಮಗಳು ಬದುಕಿಯೇ ಇದ್ದಾಳೆ ಎಂದೇ ಭ್ರಮಿಸಿ ತನ್ನಷ್ಟಕ್ಕೇ ತನ್ನ ಮಗಳನ್ನು ತಿದ್ದುವ, ಆಕೆಗೆ ಬುದ್ಧಿ ಹೇಳುವ ಕೆಲಸವನ್ನು ಮಾಡುತ್ತಿರುತ್ತಾಳೆ. ಮಗಳು ಇನ್ನೊಂದು ಮನೆಗೆ ಕೊಡುವ ಹೆಣ್ಣಾದ್ದರಿಂದ ಆ ಮನೆಯಲ್ಲಿ ಗಂಡನೊಂದಿಗೆ ದಿನಕಳೆಯಬೇಕಾದ ಬುದ್ಧಿಮಾತುಗಳನ್ನು ಹೇಳುತ್ತಾಳೆ. ತಾಯ್ತನದ ಜವಾಬ್ದಾರಿಯನ್ನೂ ಹೆಣ್ಣೊಬ್ಬಳು ಎಷ್ಟು ತೀವ್ರವಾಗಿ ವಹಿಸಿಕೊಂಡಿರುತ್ತಾಳೆ ಎಂಬುದಕ್ಕೆ ಅವಳು ಉದಾಹರಣೆಯಾಗುತ್ತಾಳೆ. ಹೆಣ್ಣು ಹೆಣ್ಣಾಗಿಯೇ ಇರುವಂತೆ ನೋಡಿಕೊಳ್ಳುತ್ತಿರುವಲ್ಲಿ ತಾಯಿ ಸದಾ ಜಾಗೃತಳಾಗಿರಬೇಕೆಂಬುದನ್ನು ಈ ಮಾತುಗಳು ತೋರಿಸಿಕೊಡುತ್ತದೆ.

‘ ಕಣ್ಣಿಲ್ಲದ ಹೆಂಗಸು ಎಲ್ಲರಂತೆ ಹೆಮ್ಮೆಯಿಂದ ನಡೆಯುವುದು ಕೂಡದು. ತಲೆ ತಗ್ಗಿಸಿಕೊಂಡು ನಡೆಯಬೇಕು. ಹೇಳಿದ ಮಾತು ಕೇಳಬೇಕು. ಹೆಂಗಸಿಗೆ ಎಂದಿದ್ದರೂ ಗಂಡ ದೇವರು. ಕುರುಡಿ ಬೇರೆ ಆಗಿಬಿಟ್ಟದ್ದರೆ ಅವಳು ಅವನನ್ನು ಪರದೈವ ಎಂತಲೇ ಎಣಿಸಬೇಕು. ತಾನು

ಮಾನವಾಗಿರುವುದಕ್ಕೆ ತನ್ನ ಗಂಡನನ್ನು ತಿಳಿಯುವ ಗುರುತು ಏನಾದರೂ ಒಂದನ್ನು ಇಟ್ಟುಕೊಳ್ಳಬೇಕು' ಎಂದು ತಿಳಿ ಹೇಳಿರುವಲ್ಲಿ ಗಂಡ ದೇವರು ಎಂಬ ಸಾಂಪ್ರದಾಯಿಕ ಚೌಕಟ್ಟನ್ನು ಮೀರಬಾರದ ನಿರ್ಬಂಧವನ್ನು ಪುನರ್ ಪ್ರತಿಷ್ಠಾಪಿಸುವುದು ನಿಚ್ಚಳವಾಗಿದೆ. ಅದನ್ನು ವಿಜೃಂಭಿಸುವುದರ ಹಿಂದೆ ಮಾಸ್ತಿ ಬದುಕಿದ ಕಾಲದ, ನಂಬಿಕೆ ಹಾಗೂ ನಿಲುವಿನ ಪ್ರತಿಪಾದನೆ ಇರುವುದನ್ನು ಗ್ರಹಿಸಬಹುದು.

ಮಾಸ್ತಿ ಅವರ ತಾಯ್ತನದ ಆಶಯ ನಿಲ್ಲುವುದೇ 'ನೆಪೋಲಿಯನ್‌ನ ಸೋಲು' ಕತೆಯಲ್ಲಿ ಪ್ರಸ್ತಾಪಿಸಿರುವಂತೆ 'ತಾಯಾದ ಹೆಂಗಸಿಗೆ ತನ್ನ ಮಗುವಿನಷ್ಟು ಪ್ರೀತಿಯ ವಸ್ತು ಬೇರೊಂದಿಲ್ಲ. ಮಗುವಿಗೂ ಅಷ್ಟೇ. ತಾಯಿಯಂತೆ ಪ್ರೀತಿಸುವ ಜೀವ ಬೇರೊಂದಿಲ್ಲ' ಎಂಬಲ್ಲಿ . ಅಂದರೆ ಈ ಅಭಿಪ್ರಾಯ ತಾಯ್ತನದ ಕುರಿತ ಸ್ಥಿರೀಕೃತ ನಂಬಿಕೆಯ ತಳಹದಿಯಲ್ಲಿ ದಾಖಲಾಗಿದೆ. ಈ ಅನುಭವ ಕಂಡ - ಕೇಳಿದ ನೆಲೆಯದ್ದು. ಈ ಕಂಡು ಕೇಳಿದ ರೀತಿ ಕೂಡ ವಿಜೃಂಭಿಸುವುದು ತಾಯ್ತನದ ಮೌಲ್ಯವನ್ನು ಹೇರಿದ ಕಟ್ಟು ಕಟ್ಟಳೆಗಳ ಸಂಪ್ರದಾಯದ ಆಧಾರದಲ್ಲಿಯೇ. ಆದ್ದರಿಂದಲೇ 'ಒಬ್ಬ ತಾಯಿ ಮಗ' ಕತೆಯಲ್ಲಿ ತಾಯಿಯಾದವಳು ಹಠಮಾರಿ ಮಗನನ್ನು ಕೂಡ ಮುದ್ದಿನಿಂದಲೇ ಕಾಣುತ್ತಾಳೆ ಮತ್ತು ತನ್ನ ತಹಬದಿಯಲ್ಲೇ ಪಳಗಿಸುತ್ತಾಳೆ. ತಾಯಿ ಮಗುವನ್ನು ತನ್ನ ಸುಪರ್ದಿಗೆ ಬಿಟ್ಟು ಮುಂದೆ ಹೋಗಬಾರದಂತೆ ಕಾಳಜಿ ವಹಿಸುತ್ತಾಳೆ. ತಾಯಿ ಉಪದೇಶ ನೀಡಿದ್ದಕ್ಕೆ ಅವಳಿಗೇ ಹೊಡೆದ ಮಗನ ರೀತಿ ಇಲ್ಲಿ ಪ್ರಸ್ತುತವಾಗಿಸುವುದನ್ನು ರೈಲು ಪ್ರಯಾಣಿಕರು ಪರಸ್ಪರ ಮಾತನಾಡಿಕೊಂಡು ಊರವರಲ್ಲಿ 'ಯಾರಯ್ಯ ಅವರು, ಆ ಹುಡುಗ ಮುದುಕೀನ ಹೊಡೆದು ಬಯ್ದು ಬೆದರಿಸುತಾ ಇದ್ದಾನೆ. ಅವಳು ಬಯ್ದು ಅರಚುತಾ ಇದ್ದಾಳೆ. ಅಂತ ಕೇಳಿದೆ, ಅವನೂ 'ಇವರ ಗೋಳು ದಿನಾ ಇದೆ. ಈ ಪುಂಡನ್ನ, ಸರಿ ಮಾಡತೇನೆ ಅಂತ ಮುದುಕಿ ಹಟ. ನಾನು ಹಾಳೇ ಆಗುತ್ತೇನೆ ಅಂತ ಈ ಮಗನ ಹಟ. ದಿನಾ ಇವರದು ಇದೇ ಗೋಳು' ಎಂದು ನಿರ್ಲಿಪ್ತವಾಗಿಯೇ ಹೇಳಿರುವುದನ್ನು ತಿಳಿದಾಗ ಮುದುಕಿ ತಾಯಿ ಹಾಗೂ ಮಗನ ನಡುವಿನ ಎರಡು ತಲೆಮಾರುಗಳ ಮನಃಸ್ಥಿತಿಯ ಅಂತರದ ಅರಿವಾಗುತ್ತದೆ. ತನ್ನ ಮಾತನ್ನು ಕೇಳಬೇಕೆಂಬ ಸದಾಶಯ ಹೊತ್ತಿರುವ ಮುದುಕಿ ತಾಯಿ ಒಂದೆಡೆ ಅದನ್ನು ಧಿಕ್ಕರಿಸುವ ಮಗ ಇನ್ನೊಂದೆಡೆ ಇದ್ದಾರೆ. ಅವರ ನಡುವೆ ಉಂಟಾಗುತ್ತಿರುವ ಘರ್ಷಣೆ ಮಗನ ವಿವಾಹ ಹಾಗೂ ಅದರ ನಂತರ ಮುಂದುವರಿಯಬೇಕಾದ ಸೃಷ್ಟಿಕ್ರಿಯೆಯ ಒತ್ತಡಕ್ಕೆ ಸಂಬಂಧಿಸಿದ್ದಾಗಿದೆ ಎಂದು ಬಳಿಕ ತಿಳಿದು ಬರುತ್ತದೆ. ಅಂದರೆ ಸ್ತ್ರೀಗೆ ಹೊತ್ತು, ಹೆತ್ತು ಸಾಕುವ ತಾಯ್ತನದ ಹೊರೆಯನ್ನು ಹೊರಿಸುವುದರೊಂದಿಗೆ ಮಗುವನ್ನು ತಾಯಿಯ ಮಾತು ಮೀರದಂತೆ ಸಲಹಬೇಕು. ಉತ್ತಮ ನಾಗರಿಕನನ್ನಾಗಿ ರೂಪಿಸುವ ಜವಾಬ್ದಾರಿಯನ್ನೂ ಪೂರೈಸಬೇಕು ಎಂಬುದನ್ನು ನೆನಪಿಸಿದ್ದಾರೆ.

ಇಲ್ಲಿ ಮಾಸ್ತಿ ತಾಯ್ತನದ ಮೌಲ್ಯವನ್ನು ಮೆರೆಯಿಸುವುದು ಪೆಟ್ಟು ಕೊಟ್ಟ ಮಗುವಿಗೇ ಮರುಕ್ಷಣ ತಾಯಿ ದುಗ್ಗವ್ವ ಉಣಬಡಿಸುವ ರೀತಿಯಲ್ಲಿ, ಮಗುವಿನ ತಪ್ಪನ್ನು ತಾಯಿ ಕ್ಷಮಿಸುವಲ್ಲಿ. ಇದು

ತಾಯಿಯಾದವಳ ಕರ್ತವ್ಯ ಎಂಬುದನ್ನು ಪ್ರತಿಪಾದಿಸಲಾಗಿದೆ. ಈ ತಾಯ್ತನ ಮುಖ್ಯವಾಗಿ ಆಕ್ಷೇಪಿಸುವುದು ಮಗ ವಿವಾಹ ಮುಂದೂಡುವುದನ್ನು ಮತ್ತು ಹಟ್ಟೀಲಿ ಇರುವ ಹುಡುಗಿಯೊಂದಿಗೆ ಕೂಡಿದ್ದನ್ನು. ಆಕೆಯ ಬುದ್ಧಿವಾದಕ್ಕೆ, ಲೋಕದ ಒತ್ತಾಯಕ್ಕೆ ಮಗ ವಿವಾಹಕ್ಕೆ ಒಪ್ಪುವುದು ತಾಯಿಗೆ ಕೊಡುವ ಮರ್ಯಾದೆಯಾಗುತ್ತದೆ. ಈ ಮೂಲಕ ಪುರುಷ ಪ್ರಧಾನ ಸಂಸ್ಕೃತಿಯನ್ನು ಸ್ತ್ರೀಯಾದವಳು ಪ್ರತಿಪಾದಿಸಿ ಪ್ರತಿಷ್ಠಾಪಿಸುವುದಕ್ಕೆ ಕೊಡುವ ಗೌರವವೂ ಆಗುತ್ತದೆ. ತಾಯಿ ಒಪ್ಪದ ವಿಚಾರಕ್ಕೆ ಮಕ್ಕಳು ಕೈ ಹಾಕಬಾರದ ನೀತಿಯನ್ನು ಈ ಮೂಲಕ ಮಾಸ್ತಿ ಹೇಳಿಸಿದ್ದಾರೆ. 'ನಂದು ತಪ್ಪಾತು ಮದುವಿ ಆಗತೇನಿ ಬಾ ಅಮ್ಮಾ ' ಎಂದು ಯಾಚಿಸುವುದು, ತಾಯಿಗೆ ಕೊಡುವ ಗೌರವವಾಗುತ್ತದೆ. ' ನೀನು ಪುಣ್ಯವಂತ ತಾಯಿ ಅವ್ವ, ದಾರಿ ತಪ್ಪಿದ ಅಂತ ಇದ್ದ ಮಗ ದೇವರ ದಯೆ ದೊಡ್ಡೋರ ಹರಕೆ, ದಾರಿ ತಿಳಿದು ಹಿಂದಕ್ಕೆ ಬಂದ. ಹೆತ್ತ ತಾಯಿ ಮಗನ್ನಾ ಒಳ್ಳೆ ದಾರಿಗೆ ಸೆಳೆದು ತಂದಿರಿ. ದೇವರು ಅವನ್ನ ಕಾಪಾಡಲಿ. ಅವನ ಸಂಸಾರ ಚೆನ್ನಾಗಲಿ, ನೀವು ಅವನ್ನ ಸೊಸೇನ ಮೊಮ್ಮಕ್ಕಳನ್ನು ನೋಡಿಕೊಂಡು ನೂರು ಕಾಲ ಸುಖವಾಗಿರಿ' ಎಂದು ನಿರೂಪಕ ಹರಸುವ ಮೂಲಕ ಮಕ್ಕಳು ನಡೆದುಕೊಳ್ಳುವ ರೀತಿಗೆ ತಾಯಿಯೇ ಹೊಣೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಮಕ್ಕಳು ತಪ್ಪು ಮಾಡಿದರೆ, ಕೀರ್ತಿ-ಅಪಕೀರ್ತಿ ತಂದರೆ, ಒಳ್ಳೆಯ ಕೆಲಸ ಮಾಡಿದರೆ ತಾಯಿಯನ್ನೇ ಬೊಟ್ಟು ಮಾಡಿ ತೋರಿಸಲಾಗುತ್ತದೆ. ಆ ನೆಲೆಯಲ್ಲಿ ತನ್ನ ಮಕ್ಕಳು ಹಾದಿ ತಪ್ಪಬಾರದ ಕುರಿತಂತೆ ತಾಯಿಯೇ ಎಚ್ಚರ ವಹಿಸಬೇಕು ಎಂಬುದನ್ನು ಹೆಣ್ಣಿಗೇ ಹೇರಿದ್ದನ್ನು ಗ್ರಹಿಸಬಹುದಾಗಿದೆ. 'ದೊಡ್ಡೋರಿಗೆ ಮುಕ್ಕೋ ಅಪ್ಪಾ' ಎಂದು ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುವುದನ್ನು ತಿಳಿಸುವಲ್ಲಿ ಸಂಸ್ಕೃತಿಯನ್ನು ಪರಿಪಾಲಿಸುವ ನಾಯಕಿಯಾಗಿ ಕೂಡ ಕೆಲಸ ಮಾಡುವಂತೆ ನೋಡಿಕೊಂಡದ್ದನ್ನು ಗುರುತಿಸಬಹುದಾಗಿದೆ. ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ರೂಢಿಸಿಕೊಳ್ಳುವ, ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ತಾಯ್ತನ ಕೆಲಸ ಮಾಡಬೇಕು ಎಂಬ ನೀತಿಯನ್ನೂ ಮಾಸ್ತಿ ಇಲ್ಲಿ ಹೇಳಿಸಿದ್ದಾರೆ. ತಾಯಿ ಹಾಕಿ ಕೊಡುವ ಪರಂಪರೆಯ ಮಾರ್ಗವನ್ನು ಮಕ್ಕಳು ತುಳಿಯಬಾರದೆಂಬ ಉಪದೇಶ ಇಲ್ಲಿ ಬಿತ್ತರಗೊಳಿಸಿದ್ದಾರೆ. ಇಷ್ಟೆಲ್ಲ ಹೊರೆ ಹೊರಿಸಿದ ಬಳಿಕ ಅದನ್ನು ಅವಳು ಪಾಲಿಸುವಂತೆ ಪ್ರೇರಿಸಿ ತಾಯಿಗೆ ಅತ್ಯಂತ ಗೌರವ, ಮಾನ್ಯತೆ, ಪ್ರಾಶಸ್ತ್ಯವನ್ನುಕೊಟ್ಟಿದ್ದಾರೆ. ಆದುದರಿಂದಲೇ ಭಾರತೀಯ ಹಿಂದೂ ವೈದಿಕ ಪರಂಪರೆಯ ನೆಲೆಯಿಂದ ಅತ್ಯಂತ ಉನ್ನತ, ಗೌರವಾನ್ವಿತ ಸ್ಥಾನವನ್ನು ತಾಯಿಗೆ ಪ್ರಾಪ್ತವಾಗಿಸಿದ್ದಾರೆ. ಇದೇ ಮೌಲ್ಯವನ್ನು ಮಾಸ್ತಿಯವರು ಬ್ರಾಹ್ಮಣ ಹಾಗೂ ವಿದೇಶಿ ನೆಲೆಗಟ್ಟಿನಲ್ಲಿಯೂ ಪ್ರತಿಷ್ಠಾಪಿಸಲು ಮುಂದಾಗಿದ್ದಾರೆ. ಅವರ ಉದ್ದೇಶ ಬದುಕಿನ ಉದಾತ್ತ ಮೌಲ್ಯಗಳನ್ನು ವಿಶ್ವಮಾನ್ಯವಾಗಿಸುವುದು. ಅವರಿಗೆ ಒಟ್ಟೂ ಬದುಕನ್ನು ಬದುಕಾಗಿಯೇ ನೋಡುವ ಕುತೂಹಲವಿದೆ. ಮಾನವೀಯ ಬದುಕು, ಸಂಬಂಧ ಎಲ್ಲ ಎಲ್ಲೆಗಳನ್ನು ಮೀರಿದ್ದು. ಆದ್ದರಿಂದಲೇ ತಾಯಿ-ಮಗು ಸಂಬಂಧ ಅಥವಾ ಬಿಡಿಸ್ನ

ಬಗೆಯ ಸಂಬಂಧಗಳು ವಿಶ್ವಾದ್ಯಂತ ಒಂದೇ ತೆರನಾಗಿ ನಡೆಯುತ್ತಿರುತ್ತವೆ ಎಂದು ಅವರು ನಂಬಿದ್ದಾರೆ. ಭಾರತೀಯ ಜೀವನ ಮೌಲ್ಯಗಳನ್ನು ಜಗತ್ತೇ ಒಪ್ಪಿಕೊಳ್ಳುವಂತೆ ಮಾಡುವ ಕೆಲಸವನ್ನು ಅಷ್ಟೇ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ.

ಭಾರತೀಯ ಸಂಸ್ಕಾರವನ್ನು ಮಕ್ಕಳಲ್ಲಿ ಬಿತ್ತಿ ಬೆಳೆಸುವ ಜವಾಬ್ದಾರಿ ಹೊತ್ತು ಅದನ್ನು ಪೂರೈಸುವ ಸ್ತ್ರೀಯಾಗಿ 'ಚಟ್ಟೇಕಾರ ತಾಯಿ' ಕತೆಯ ತಾಯಿಯನ್ನು ಮಾಸ್ತಿ ಪರಿಚಯಿಸುತ್ತಾರೆ. ಆಕೆ ತನ್ನ ಮಕ್ಕಳಿಗೆ ಕಂಪೆನಿಯಲ್ಲಿ ಸ್ಟ್ರೈಕ್ ಮಾಡುವ ಉದ್ದೇಶವನ್ನು ತಡೆದು ಅದನ್ನು ರದ್ದುಗೊಳಿಸಿದ ರೀತಿಯನ್ನು ಮೆಚ್ಚುಗೆಯಿಂದ ಪರಿಚಯಿಸಿದ್ದಾರೆ. ತಾಯಿಯಾದವಳು ಮಕ್ಕಳು ನಡೆಸುವ ಕುತಂತ್ರದ, ಅಪಾಯಕಾರಿ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡಬಾರದ ವಾಸ್ತವವನ್ನು ಹೇಳಿದ್ದಾರೆ. ಇಲ್ಲಿಯೂ ಮಕ್ಕಳನ್ನು ಕೆಟ್ಟ ದಾರಿ ಹಿಡಿಯದಂತೆ ಸ್ತ್ರೀಯೇ ಎಚ್ಚರ ವಹಿಸಬೇಕಾದ ನೀತಿಯನ್ನು ಮಾಸ್ತಿ ಒಪ್ಪಿತಗೊಳಿಸುವಂತೆ ಮಾಡಿದ್ದಾರೆ. ಆಕೆ ಸುಪರಿಟೆಂಡೆಂಟ್‌ನೊಂದಿಗೆ, 'ನೀವು ಈ ತರುಣರನ್ನು ಸ್ಟ್ರೈಕ್ ಮಾಡದೆ ದಾರಿಯಿಲ್ಲ ಎನ್ನುವ ಮಟ್ಟಿಗೆ ಕಾಡಿದಿರಿ, ನೀವು ನಿಮ್ಮ ಮೇಲಿನ ಅಧಿಕಾರಿಗಳಿಗೆ ನೀವು ದಕ್ಷರಲ್ಲಿ ನಿಮ್ಮ ಕೆಲಸವನ್ನು ನಿರ್ವಹಿಸಲಾರಿರಿ ಎಂದಷ್ಟೇ ತೋರಿಸುತ್ತೀರಿ. ಏಕೆ? ನ್ಯಾಯಪರವಾದ ಮಾತು ಎನ್ನುವುದನ್ನು ನಾನು ಏನನ್ನೇ ಇವರಿಗೆ ಹೇಳಲಿ, ಇವರು ತಪ್ಪದೆ ನಡೆಸುತ್ತಾರೆ. ಅಂಥ ಮಾತು ಏನನ್ನೇ ನೀವು ಹೇಳಿರಿ, ಅದನ್ನು ಇವರು ನಡೆಸುವವರೇ. ಅರೆಹೊಟ್ಟೆಗೆ ತಿಂದು ಸುಮ್ಮನಿರಿ ಎಂದು ಶಾಸನ ಮಾಡಬೇಡಿ. ಅದು ನ್ಯಾಯವಾದ ಮಾತಾಗುವುದಿಲ್ಲ. ನೀವು ಹೊಟ್ಟೆ ತುಂಬಿ ಉಣ್ಣುವಂತೆ ಅವರೂ ಹೊಟ್ಟೆ ತುಂಬ ಉಣ್ಣಲಿ ಎಂದು ನೋಡಿಕೊಳ್ಳಿ' ಎಂಬ ಆಕೆಯ ಪರಿಣಾಮಕಾರೀ ಮಾತುಗಳೇ ಹಿಂಸಾಪ್ರವೃತ್ತಿಯಿಂದ ಹಿಂದೆ ಸರಿಸುತ್ತದೆ. ಅದು ಇಲ್ಲಿ ಆಕೆಯ ದಿಟ್ಟತನವಾಗಿಕಾಣಿಸಿಕೊಳ್ಳುತ್ತದೆ. 'ಏನಿಲ್ಲವೆಂದರೂ ಈ ತಾಯಿ ಒಬ್ಬ ಅಸಾಧಾರಣ ರೀತಿಯ ಮಹಿಳೆ. ಅಸಾಧಾರಣವೇನು ? ಅಪೂರ್ವ ರೀತಿಯ ಮಹಿಳೆ ಎಂದರೂ ಸಲ್ಲುತ್ತದೆ' ಎಂದು ಆಕೆಯ ವ್ಯಕ್ತಿತ್ವವನ್ನು ಆದರ್ಶೀಕರಿಸಿದ್ದಾರೆ. ಅಂಥ ಸಂಯಮದ ನಿರ್ಧಾರ ತಳೆಯುವ ಮೂಲಕ ಹೋರಾಟಕ್ಕಿಳಿದ ಅಪೂರ್ವ ಹೆಣ್ಣಾಗಿ ಆಕೆಗ ಮಾನ್ಯತೆ ನೀಡುವಲ್ಲಿ ತಾಯ್ತನಕ್ಕೆ ವಹಿಸಿದ ಜವಾಬ್ದಾರಿಯನ್ನು ಆಕೆ ನಿರ್ವಹಿಸಬೇಕೇ ಹೊರತು ಅವಳು ಸ್ವತಂತ್ರ ಆಲೋಚನೆ ತಳೆಯುವುದಕ್ಕೆ ಎಡೆ ಮಾಡಿ ಕೊಡದಿರುವುದನ್ನು ಗ್ರಹಿಸಬೇಕು.

ಆಕೆ ಮಕ್ಕಳನ್ನು ಸಾಕಿ ಸಲಹಿದ ರೀತಿಯನ್ನೇ ಇಲ್ಲಿ ಮುಖ್ಯವಾಗಿ ಪರಿಚಯಿಸಿ ಇತರರೂ ಅನುಸರಿಸುವಂತೆ ಸಾರುತ್ತಾರೆ. ಕುಡುಕ, ದಾರಿ ತಪ್ಪಿದ ಗಂಡನನ್ನು ತೊರೆದು ಮೂವರು ಮಕ್ಕಳನ್ನು ಸಾಕಿ ಸಲಹಿದ ಆಕೆಗೆ ನಿಯತ್ತಿನ ದಾರಿಯಲ್ಲಿ ಮಕ್ಕಳನ್ನು ಸಲಹುವ ಹೊರೆ ಹೊತ್ತಿದ್ದಾಳೆ. ಹಣಕಾಸಿನ ಅತಂತ್ರ ಸ್ಥಿತಿ ಆಕೆಗೆ ಮೂವರು ಮಕ್ಕಳನ್ನು ಸಲಹುವುದಕ್ಕೆ ಬಿಡುವುದಿಲ್ಲ. ಅನಾಥ ಬಾಲಕರ ಸಂಸ್ಥೆಗೆ ತೆರಳಿ ತಾನು ವಿಧವೆ, ಹಿರಿಯ ಮಗನ ಸಂಬಳ ಜೀವನಕ್ಕೆ ಸಾಲದು, ಈ

ಹುಡುಗ ಇನ್ನೊಬ್ಬ ಶಾಲೆಗೆ ಹೋಗಬೇಕು. ಒಬ್ಬ ಹುಡುಗಿ ಬೇರೆ ಇದ್ದಾಳೆ. ತಮಗೆ ಏನಾದರೂ ಸಹಾಯ ಕೊಡಬೇಕು ಎಂದು ಬೇಡುವುದು, ಪಟ್ಟು ಹಿಡಿಯುವುದು ಮಾಡುತ್ತಾಳೆ. ಅವಳ ಮಾತಿಗೆ ಬೆಲೆ ದಕ್ಕುತ್ತದೆ. ತಾಯಿಯಾದ ನೆಲೆಯಿಂದಲೇ ಮಕ್ಕಳಿಗೆ ವಿದ್ಯೆ ಕೊಡಿಸುವ ಮಹತ್ತರ ಉದ್ದೇಶಕ್ಕೆ ಆಕೆ ಅನಾಥವಾಗಿ ಕಾಣಿಸಿಕೊಳ್ಳುತ್ತಾಳೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ , ದರಿದ್ರ ಆಗಿದೇನೆ. ಹಾಗೆಂದು ಹೇಳಿಕೊಂಡರೆ ಏನು ತಪ್ಪು? ನಿಮಗೆ ಇಷ್ಟ ಬಂದ ಹೆಸರಿಡಿ. ಸಹಾಯ ಮಾಡಿರಿ ಎಂದು ಅಂಗಲಾಚುತ್ತಾಳೆ. ಮಾಸ್ತಿ ಅವಳ ಕಷ್ಟವನ್ನು, ತ್ಯಾಗವನ್ನು ಇಲ್ಲಿ ಆದರ್ಶವಾಗಿ ಕಂಡು ವೈಭವೀಕರಿಸಿದ್ದಾರೆ.

ಮಕ್ಕಳ ಭವಿಷ್ಯದ ಚಿಂತನೆಯಿಂದ ಮರು ಮದುವೆಯ ಪ್ರಸ್ತಾಪವನ್ನು ಕೂಡ ಆಕೆ ತಿರಸ್ಕರಿಸುತ್ತಾಳೆ. ಮಕ್ಕಳ ಭವಿಷ್ಯದ ಚಿಂತನೆಯಿಂದ. ತಾಯಿಯ ಕುರಿತು ಮಕ್ಕಳು ಅಸಹ್ಯ ಪಡಬಾರದ ಕಾಳಜಿ ಹಾಗೂ ತಾನು ನಡೆವ ರೀತಿ ಮಕ್ಕಳಿಗೆ ಮಾದರಿಯಾಗಬೇಕಾದ ಎಚ್ಚರಿಕೆ ಅವಳಿಗಿರಬೇಕಾದ್ದರಿಂದ ಅವಳು ಆ ನಿರ್ಧಾರ ತೆಗೆದುಕೊಳ್ಳದಂತೆ ಮಾಡಿದ್ದಾರೆ. ಈ ಮೂಲಕ ತಾಯ್ತನ ಮಕ್ಕಳ ಭವಿಷ್ಯಕ್ಕಾಗಿ ತನ್ನ ಬಯಕೆಗಳನ್ನು ಈಡೇರಿಸುವುದಕ್ಕೆ ಹೊರಡದಿರುವುದೇ ಆದರ್ಶವಾಗಿದೆ ಎಂದು ~~ಪರಿಗಣಿಸಿ~~ ಅದನ್ನೇ ಒಪ್ಪಿಸುವ ಕೆಲಸವನ್ನೂ ಮಾಡಿದ್ದಾರೆ. ಆದ್ದರಿಂದಲೇ "ನನ್ನ ಮಕ್ಕಳು ನನ್ನ ವಿಷಯಕ್ಕೆ ನಾಚಿಕೊಳ್ಳಬಾರದಂತೆ ನಡೆಯುವುದು ನನ್ನ ಗುರಿಯಾಗಿದೆ. ಈ ನನ್ನ ವಯಸ್ಸಿನಲ್ಲಿ ನಾನು ಸುಖವನ್ನು ಬಯಸುತ್ತಿಲ್ಲ. ಸುಖವನ್ನು ಕೊಟ್ಟೇನೆಂದು ನಿರೀಕ್ಷಿಸುತ್ತಿಲ್ಲ. ಏನೆನ್ನುತ್ತೀರಿ?" ಎಂದು ಪ್ರಶ್ನಿಸುವ ಮೂಲಕ ಇತರ ಸ್ತ್ರೀಯರಿಗೂ ಮಾದರಿಯಾಗುವಂತೆ ಮಾಸ್ತಿ ತೋರಿಸಿಕೊಟ್ಟಿದ್ದಾರೆ. ಆದರೆ ಮಗ ತನ್ನ ಪತ್ನಿಯ ಮಾತು ಕೇಳಿ ತಾಯಿಗೆ 'ನೀನು ಸುಮ್ಮನಿರಮ್ಮ, ನೀ ಒಬ್ಬ ಮುದುಕಿ' ಎಂದು ಆಡುವ ನುಡಿ ತಾಯ್ತನದ ಮೌಲ್ಯಕ್ಕೆ ಮಾಡಿದ ಅವಮಾನವಾಗಿ ಕಾಣಿಸಿದ್ದಾರೆ. ಮಕ್ಕಳು ತಾಯಿಗೆ ಅವಮಾನ ಮಾಡಬಾರದ ನೀತಿಯನ್ನು 'ಎಲ, ನಾ ಹೆತ್ತ ಮಗನೇ, ನನಗೆ ಈ ಮಾತು ಹೇಳುವುದಕ್ಕೆ ನಿನಗೆ ನಾಚಿಕೆ ಆಗುವುದಿಲ್ಲವೇ? ನಾ ಮುದುಕಿ ಹೌದು, ಹತ್ತು ಮಕ್ಕಳನು ಹೆತ್ತವಳು ಕೋಮಲೆಯಾಗಿ ಉಳಿದೇನು ಹೇಗೆ? ಮುದುಕಿ ಏಕೆ? ಎಂದು ಕಂಚುಕವನ್ನು ಬಿಚ್ಚಿ ತನ್ನ ಸ್ತನಗಳನ್ನು ಕೈಯಲ್ಲಿ ಹಿಡಿದು ಮುಂದಕ್ಕೆ ಚಾಚಿ, ಈ ಎದೆ ಹೇಗೆ ಜೋತು ಬಿದ್ದಿದೆ, ಅದಕ್ಕೆ ಇದು ಜೋತು ಬಿದ್ದದ್ದು ಏಕೆ ಕಾಣೆಯಾ ? ನೀನು, ನಿನ್ನ ಕೂಡ ಹುಟ್ಟಿದ ಮಕ್ಕಳು ಈ ಎದೆ ಹಾಲಿನಿಂದ ಬೆಳೆದಿರಿ. ಇದು ಜೋತು ಬಿದ್ದಿದೆ. ಇದಕ್ಕಾಗಿ ನೀನು ನಮಗೆ ಮರ್ಯಾದೆ ತೋರಿತ್ತಿಯೋ ಇದು ಒಂದು ಅಪರಾಧ ಅಂತ ಅವಮಾನ ಮಾಡುತ್ತಿಯೋ?' ಎಂದು ಮರ್ಮಾಘಾತಕಾರಿಯಾಗಿ ಪ್ರಶ್ನಿಸುತ್ತಾಳೆ. ಇದು ತಾಯ್ತನದ ಮೌಲ್ಯವನ್ನು ಉನ್ನತಿಗೇರಿಸುತ್ತವೆ. ಆದುದರಿಂದಲೇ ಮಗ, 'ಅಮ್ಮಾ, ತಪ್ಪು ಮಾಡಿದೆ ಕ್ಷಮಿಸು' ಎಂದು ಬೇಡಿದ್ದು, 'ನಾವು ಇನ್ನು ಮೇಲೆ ಎಂದೂ ತಾಯಿಗೆ ಇಂಥ ಮಾತನ್ನು ಹೇಳಬಾರದು

ಎಂದು ಆಣೆ ಇಟ್ಟುಕೊಂಡೆವು' ಎಂಬಲ್ಲಿಗೆ ಬಂದು ನಿಲ್ಲಿಸುವ ಮೂಲಕ ತಾಯ್ತನದ ಗೌರವವನ್ನು ಮೆರೆಯಿಸಿದ್ದಾರೆ. ತಾಯಿ ಎಂಬ ಪದಕ್ಕೆ ಆ ಬದುಕಿನ ರೀತಿಯಿಂದ ಭಕ್ತ್ಯಾಧಾರಿತ ಮೌಲ್ಯಗಳನ್ನು ಹೇರಿದ್ದಾರೆ. ಅದುವೇ ಆಕೆ ಬದುಕಬೇಕಾದ ರೀತಿ. ಅದೇ ಆಕೆಗೆ ಅತ್ಯಂತ ಗೌರವಯುತವಾದದ್ದು ಎಂದು ಮಾಸ್ತಿ ಸೂಚಿಸಿದ್ದಾರೆ. ತಾಯ್ತನ ವಹಿಸುವ ಕರ್ತವ್ಯವನ್ನು ಸ್ತ್ರೀ ಹಾಗೇ ಸ್ವೀಕರಿಸಿ ಅದನ್ನು ಬಾಳಿಸಬೇಕು. ಆ ಮೂಲಕ ಪರಂಪರೆಯನ್ನು ಅವಳು ಮುಂದುವರಿಸಿಕೊಂಡು ಹೋಗಬೇಕೆಂಬುದನ್ನು ಪುನರ್ ಪ್ರತಿಷ್ಠೆ ಮಾಡಿ ಬಾಳಿಸಲು ಪ್ರಯತ್ನಿಸಿದ್ದಾರೆ.

'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಮಗಳನ್ನು ಕಾಪಾಡಿಕೊಳ್ಳುವ ನೆಲೆಯಲ್ಲಿ ತುಡಿಯುವ ತಾಯ್ತನ, ಮಗಳ ಗಂಡ ಸತ್ತ ಸುದ್ದಿ ತಿಳಿದಾಗ ಅವಳನ್ನು ಉಳಿಸಿಕೊಳ್ಳುವ ನೆಲೆಯಲ್ಲಿ ಒಳಗೊಳಗೆ ನೊಂದು ಮುಚ್ಚಿಡುತ್ತದೆ. ತಾನು ಸ್ವತಃ ವಿಧವೆಯಾಗಿದ್ದು ಮಗಳನ್ನು ಸಲಹಿದ, ಕಣ್ಣಲ್ಲಿ ಕಣ್ಣಿಟ್ಟು ಸಾಕಿದ ಅವಳ ಅಧೀರತೆಯನ್ನು ಕಳೆಯುವ, ಧೈರ್ಯ ತುಂಬುವ ಕಾಯಕ ಮಾಡುವುದಕ್ಕೆ ಈಕೆ ಶಕ್ತಳಾಗಿಲ್ಲ. ಆಕೆ ಒಂದು ರೀತಿಯಲ್ಲಿ ಮಗಳ ಬದುಕಿನ ದುರಂತದಲ್ಲಿ ಹೈರಾಣಾಗಿ ಹೋಗಿದ್ದಾಳೆ.

ಈ ಅಧೀರತೆ, ಭಯ ಕೂಡ ತಾಯಿಯ ಅಂತಃಕರಣ, ಮೃದು ಸ್ವಭಾವವನ್ನು ಮಾಸ್ತಿ 'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಚಿತ್ರಿಸಿದ್ದಾರೆ. ಕಿರು ಹರೆಯಕ್ಕೇ ವಿವಾಹವಾಗಿ ವಿಧವೆಯಾದ ಮಗಳ ಬದುಕಿನ ಕುರಿತು ಅವಳು ಖೇದಿಸುವುದು ಇಲ್ಲಿ ತಾಯಾದವಳ ಕರ್ತವ್ಯವೆಂಬಂತೆಯೇ ಮಾಸ್ತಿ ದಾಖಲಿಸಿದ್ದಾರೆ. ಅವಳ ಆಂತರ್ಯದ ನೋವು, ಅಸಹಾಯಕತೆ, ತೊಳಲಾಟ ನಿರೂಪಕರೊಂದಿಗೆ ತಾಯಿ ಹೇಳುವ ಮಾತುಗಳಲ್ಲಿ ತೆರೆದುಕೊಳ್ಳುತ್ತದೆ. ಆಕೆ ನಿರೂಪಕನೊಂದಿಗೆ 'ಈ ವಿಷಯ ನೀವು ಬಂದು ಸಮಾಧಾನ ಮಾಡುವಂತಿಲ್ಲ, ನಾನು ಒಬ್ಬಳು ಹುಡುಗಿ ಏನು ಮಾಡಿದರೂ ಮಾಡಿಬಿಟ್ಟಾಳು. ಅವಳು ಏನಾದರೂ ಆಗಿ ಹೋದರೆ ಅಪ್ಪಾ ನನಗೆ ಯಾರು ಗತಿ? ನಾನು ಕೇಳುವವರಿಲ್ಲದೆ ಹೋಗುತ್ತೇನೆ. ಹ್ಯಾಗಾದರೂ ಅವಳು ಉಸಿರೊಂದಿಗಿದ್ದರೆ ಸಾಕು. ಗಂಡೂ ಅದೇ, ಹೆಣ್ಣೂ ಅದೇ. ಇಷ್ಟರ ಮಟ್ಟಿಗೆ ನಡೆಸಿಕೊಡಿ. ಅವರು ತೀರಿಹೋದರೆಂದು ತಿಳಿದರೆ ಹುಡುಗಿ ಏನನ್ನಾದರೂ ಮಾಡಿಕೊಳ್ಳುವುದೇ ನಿಜ' ಎಂದು ಗೋಗರೆಯುವಲ್ಲಿ ಮಗಳನ್ನು ಉಳಿಸಿಕೊಳ್ಳಬೇಕಾದ ಕಾಳಜಿ ಇದೆ. ಅದು ತಾಯಿಯಾದವಳ ಪ್ರಧಾನ ತುಡಿತವೂ ಆಗಿರುತ್ತದೆ ಎಂಬುದು ಮಾಸ್ತಿ ಅವರ ನಿಲುವು. ಅಲ್ಲಿ ತಾಯಿಗೆ ಧೈರ್ಯ ಕೊಡುವ ಅಥವಾ ಅದನ್ನು ಅವಳು ಪಡೆಯಬೇಕಾದ ಕಡೆಗೆ ಕೂಡ ಮನಸ್ಸು ಯೋಚಿಸುವುದಿಲ್ಲ. ಈ ಚಿತ್ರಣದಲ್ಲಿ ಸ್ತ್ರೀಯ ಸ್ವಭಾವ ಅಷ್ಟು ಮೃದುವಾಗಿಯೇ ಇರುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ.

ಹೇಗಾದರೂ ಮಾಡಿ ಕರುಳಕುಡಿಯನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿಯನ್ನು ತಾಯ್ತನ ಹೊತ್ತಿರುತ್ತದೆ ಎಂಬುದನ್ನು ಇಲ್ಲಿ ಪ್ರಸ್ತುತ ಪಡಿಸಿದ್ದಾರೆ. ಗಂಡನನ್ನು ಅತಿಯಾಗಿ ಪ್ರೀತಿಸಿದ ಮಗಳು ಆ ಪ್ರೀತಿಗಿಂತ ಮುತ್ತೈದೆ ತನದ ಬದುಕಿಗೂ ಹೆಚ್ಚು ಮಹತ್ವ ಕೊಟ್ಟದ್ದನ್ನು ಮುಗ್ಧೆಯಾಗಿ

ಕಾಣುವ ತಾಯಿ ಅದನ್ನು ತಿದ್ದಲಾಗದ ಅಸಹಾಯಕತೆಗೆ ಒಳಗಾಗಿ ಮುತ್ತೈದೆತನವನ್ನು ಪಾಲಿಸುವಂತೆ ವರ್ತಿಸುತ್ತಾಳೆ. ಮುತ್ತೈದೆತನವನ್ನು ಕಾಯ್ದುಕೊಳ್ಳುವುದಕ್ಕೆ ಸ್ತ್ರೀಯರೆಲ್ಲ ಹೆಣಗಬೇಕಾದುದನ್ನು ಪ್ರೇರಿಸುವ ಕೆಲಸವನ್ನು ಮಾಸ್ತಿ ನಿರ್ವಹಿಸಿದ್ದು ಸ್ಪಷ್ಟವಾಗುತ್ತದೆ. ಆ ಮುಗ್ಧತೆಯನ್ನು ತಿದ್ದಲಾಗದ ಪರಿಸ್ಥಿತಿ ತಾಯಿಯದು. ಇದು ತಾನು ಹೆತ್ತ ಮಗು ಮುಂದಿನ ದಿನಗಳಲ್ಲಿ ತನ್ನ ಕಣ್ಣೆದುರಿಗೇನೇ ಕಷ್ಟದ ಕ್ಷಣಗಳನ್ನು ಕಾಣಬೇಕಾದ ಸ್ಥಿತಿಯನ್ನು ನೆನೆಪಿಸಿಕೊಂಡೇ ವ್ಯಥಿಸುತ್ತದೆ. ಕರುಳಕುಡಿಯನ್ನು ಬದುಕಿಸಿಕೊಳ್ಳುವುದಕ್ಕೆ ಬೇರೆಯವರ ಸಹಾಯ ಹಾಗೂ ಸಲಹೆಯನ್ನು ಕೇಳುತ್ತದೆ. ಈ ಹೊಯ್ದಾಟ ತನ್ನ ಕರುಳ ಕುಡಿಯ ಕುರಿತಾದದ್ದು. ಅದು ತಾಯಿಯೊಬ್ಬಳ ಸಹಜ ಸ್ವಭಾವವಾಗಿದೆ ಎಂದೇ ಮಾಸ್ತಿ ದಾಖಲಿಸುತ್ತಾರೆ. ಸ್ತ್ರೀ ಹುಟ್ಟಿನಿಂದಲೇ ಹೊತ್ತುಕೊಂಡು ಬರುವ ಈ ತಾಯ್ತನದ ಜವಾಬ್ದಾರಿಯಿಂದ ಆಕೆ ಆಚೆ ಹೋಗದಂತೆ ಕಾಯ್ದುಕೊಳ್ಳುವುದು ಬಹುಮುಖ್ಯ ಎಂಬುದನ್ನು ಈ ಮೂಲಕ ಪರಿಚಯಿಸಿದ್ದಾರೆ. ಅಂಥ ತಾಯ್ತನವನ್ನೇ ಸಾರ್ವತ್ರಿಕಗೊಳಿಸುವಂತೆ ಪ್ರಕಟಿಸಿದ್ದಾರೆ. ಈ ತೆರನಾದ ಬದುಕಿನೊಂದಿಗೆ ಹೆರುವ, ಸಲಹುವ ಜವಾಬ್ದಾರಿಯನ್ನು ಕತೆಗಳಲ್ಲಿ ಸ್ತ್ರೀಯರೇ ನಿರ್ಭಾವುಕತೆಯಿಂದ ಒಪ್ಪಿಕೊಂಡು ಪಾಲಿಸುವಂತೆ ಮಾಡಿ ಸಾರ್ವತ್ರಿಕಗೊಳಿಸುವ ಪ್ರಯತ್ನ ಮಾಡಿದ್ದಾರೆ.

ವಿಶ್ವದ ನೆಲೆಯಲ್ಲೂ ಸ್ತ್ರೀಯನ್ನು ತಾಯ್ತನದ ಪ್ರಕ್ರಿಯೆಗೆ ಒಳಗಾಗಿಸುವ ಬದ್ಧಗೊಳಿಸುವ ಪ್ರಯತ್ನವನ್ನು ಮಾಸ್ತಿ ಮಾಡಿದ್ದಾರೆ. ವಿದೇಶೀ ಸ್ತ್ರೀಯರು ಮಕ್ಕಳನ್ನು ಹೆರುವುದು ಮಾತ್ರವಲ್ಲ ಉತ್ತಮ ನಾಗರಿಕರನ್ನಾಗಿರೂಪಿಸುವ ಜವಾಬ್ದಾರಿಯಿಂದ ದೂರವಿರುವ ಪರಿಯನ್ನು ಮಾಸ್ತಿ ಸ್ವಭಾವತಃ ಒಪ್ಪುವುದಿಲ್ಲ. ತಾಯ್ತನದ ಸ್ವಭಾವ ವಿಶ್ವದ ಎಲ್ಲ ಸ್ತ್ರೀಯರಲ್ಲೂ ಒಂದೇ ತೆರನಾಗಿರಬೇಕು ಎಂಬುದನ್ನು ಹೇಳುವುದಕ್ಕೆ ಅವರು ತಾಯ್ತನವನ್ನು ಪಾಲಿಸದ್ದರಿಂದ ಕೊನೆಯಲ್ಲಿ ಪರಿತಪಿಸುವಂತೆ ಚಿತ್ರಿಸಿದ್ದಾರೆ. ಅಂದರೆ ಸ್ತ್ರೀಯೊಬ್ಬಳು ಕುಟುಂಬದ ಹೊರತಾಗಿನ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾಗಲೂ ತಾಯಿಯಾಗಿ ಕರ್ತವ್ಯ ನಿರ್ವಹಿಸಿದಾಗಲೇ ಬದುಕಿನ ಸಂಪೂರ್ಣ ಆನಂದ ಅನುಭವಿಸುತ್ತಾಳೆ ಎಂಬುದನ್ನು ಪ್ರತಿಪಾದಿಸುವುದು ಮಾಸ್ತಿ ಅವರ ಪ್ರಧಾನ ಧ್ಯೇಯವಾಗಿದೆ. ತಾಯ್ತನದ ಜವಾಬ್ದಾರಿಯನ್ನು ಸ್ತ್ರೀಯಾದವಳು ಪೂರೈಸಬೇಕಾದ ನೀತಿಯನ್ನು ಹೇಳುವ, ಸನಾತನ ವೈದಿಕ ಧರ್ಮದ ತತ್ವವನ್ನು ವಿಶ್ವಮಾನ್ಯಗೊಳಿಸುವ ನಿಟ್ಟಿನಲ್ಲಿ ಮಾಸ್ತಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಈ ಮನೋಭಾವವನ್ನು ಧ್ಯೇಯವನ್ನು ಪ್ರತಿಪಾದಿಸುವ ನೆಲೆಯಲ್ಲಿಯೇ ಕತೆಗಳಲ್ಲಿನ ಸ್ತ್ರೀಯರನ್ನು ಚಿತ್ರಿಸಿದ್ದು ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ 'ರಾಣಿ ಹಾಟ್ ಷೇಪ್ ಸಿಟೂ' ಕತೆಯ ರಾಣಿ ಹಾಟ್ ಷೇಪ್ ಸಿಟೂ ಮುಖ್ಯಳಾಗಿದ್ದಾಳೆ. ಆಕೆ ಹೆಣ್ತನವನ್ನೇ ಮರೆತೂ ಬಿಟ್ಟಿರುತ್ತಾಳೆ. ಮಾಸ್ತಿ ಧೋರಣೆಯ ಪ್ರಕಾರ ಇದು ಪ್ರಕೃತಿ ವಿರೋಧವಾಗಿದೆ. ರಾಣಿ ಹಾಟ್ ಷೇಪ್ ಸಿಟೂ ಗಂಡಿನಂತೆ ಕಾಣಬೇಕೆಂಬ ಹುಚ್ಚಿನಿಂದ

ಗಂಡಾಗಿ ವೇಷ ಧರಿಸುತ್ತಾಳೆ. ಎದೆಯೂ ಕಾಣದಂತೆ ಮರೆಮಾಚುತ್ತಾಳೆ. ಆಕೆ ಬದುಕುವ ರೀತಿಯನ್ನು ಪ್ರಜೆಗಳು ಸ್ವೀಕರಿಸುವುದು ಅವಳು ರಾಣಿ ಎಂಬ ಒಂದೇ ಕಾರಣದಿಂದಾಗಿ. ಆದರೆ ಆಕೆಯ ಆಡಳಿತ ವೈಖರಿ, ಸಾಧನೆಗಳು ಮಾನ್ಯವಾಗುತ್ತವೆ. ಇಲ್ಲಿ ಆಕೆ ಈಜಿಪ್ಟ್ ರಾಷ್ಟ್ರದ ಸಾಂಪ್ರದಾಯಕ ಪದ್ಧತಿಯಂತೆಯೇ ತಮ್ಮನನ್ನೇ ವಿವಾಹವಾಗುತ್ತಾಳೆ. ಅನಂತರ ಮಗುವನ್ನು ಹೆತ್ತರೂ ಅದನ್ನು ಪ್ರಕೃತಿದತ್ತ ಕೊಡುಗೆಯಾಗಿ ಮಾತ್ರ ಸ್ವೀಕರಿಸಿದ್ದಾಳೆ. ತನ್ನ ಆಡಳಿತ ಸಾಧನೆಗಳಷ್ಟೇ ತನಗೆ ಮುಖ್ಯವಾದುದು ಎಂದು ಗ್ರಹಿಸಿ ಆಕೆಯ ನಡವಳಿಕೆ ಸಹಜ ಎಂಬುದನ್ನು ಮಾಸ್ತಿ ಒಪ್ಪಿಕೊಳ್ಳುವುದಿಲ್ಲ. ಆಕೆಯ ಛಲ ಸಾಧನೆ ಹೆಣ್ಣು ಮಕ್ಕಳಿಗೆ ಮಾದರಿಯೆನ್ನುವಂತೆ ಸ್ವೀಕರಿಸುತ್ತಾರೆ. ಆದರೆ ಅವಳ ಧೈರ್ಯದ ಆಡಳಿತ ರೀತಿಯ ಜೊತೆಗೆ ಆಕೆ ತನ್ನ ತಾಯ್ತನದ ಕರ್ತವ್ಯದಿಂದ ದೂರವಾಗುವುದು ಸರಿಯಲ್ಲವೆಂದೂ ಹೇಳುತ್ತಾರೆ. ಆಕೆ ಪತ್ನಿಯಾಗಿ, ತಾಯಿಯಾಗಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾದುದು ಪತಿ ಇನ್ನೊಂದು ಮದುವೆಗೆ ಸಿದ್ಧಗೊಳಿಸುವಂತೆ ಮಾಡುತ್ತದೆ. ಕಿರಿಪತ್ನಿಯಿಂದ ಪ್ರೀತಿ, ಮಮತೆ ವಾತ್ಸಲ್ಯ ಎಲ್ಲವೂ ಅವನಿಗೆ ದಕ್ಕಿದೆ. ಅದರಿಂದ ಆತ ಸಂತೃಪ್ತನೂ ಆಗುತ್ತಾನೆ. ಹಿರಿಯ ಪತ್ನಿಯ ತೀರಾ ವ್ಯಾವಹರಿಕ ಹಾಗೂ ಅಹಂನ ನಡವಳಿಕೆ, ಇತರರೊಂದಿಗೆ ಆತ್ಮೀಯವಾಗಿ ಬೆರೆಯದ ಸ್ವಭಾವದಿಂದಾಗಿ ಎಲ್ಲರಿಂದ ಅವಳು ದೂರವಾಗಿ ಬಾಳಬೇಕಾದ ಪರಿಸ್ಥಿತಿಯನ್ನು ಚಿತ್ರಿಸಿದ್ದಾರೆ. ಅದು ಹೆಣ್ತನವನ್ನು ಮರೆತದ್ದರಿಂದಲೇ ಆಕೆಗೆ ಗೃಹಿಣಿಯಾಗಿ ತಾಯಿಯಾಗಿ ಬಾಳಲು ಸಾಧ್ಯವಾಗಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಹೆಣ್ಣಿನಲ್ಲಿ ಕಾಣಬೇಕಾದ ತಾಯ್ತನ ಮರೆಯಾಗಿರುವುದನ್ನು ಇಲ್ಲಿ ಆಕ್ಷೇಪಿಸಿದ್ದಾರೆ. ಆದುದರಿಂದಲೇ ಕಿರಿ ಪತ್ನಿಯ ಪ್ರೀತಿ-ಮಮತೆ-ತಾಯ್ತನದ ಮೂಲಕ ಗಂಡನ ಪ್ರೀತಿಗೆ ಒಳಗಾಗುವಂತೆ ಮಾಡುವುದನ್ನು ಉನ್ನತೀಕರಿಸಿದ್ದಾರೆ. 'ಇಕೋ ತಮ್ಮಾಜಿ ಆಯುಸ್ಸು ಮುಗಿಯಿತು ಅಂತ ಹೇಳುತ್ತಿದ್ದಿ. ಈ ಹೊತ್ತಿನಲ್ಲಿ ನಿನ್ನ ಎದುರು ನಾನು ನನ್ನ ಮಗಳ ಮೇಲೆ ಆಣೆ ಇಟ್ಟು ಹೇಳುತ್ತೇನೆ. ಮದುವೆಯಾದ ಅಂತ, ದೇವರು ಹಾಗೆ ಸೃಷ್ಟಿಸಿದ ಅಂತ, ನಿನ್ನ ಪಾಲಿಗೆ ನಾನು ಹೆಣ್ಣಾಗಿ ನಡಕೊಂಡೆ. ರಾಷ್ಟ್ರಕ್ಕೆ ಇರಲಿ ಅಂತ ನಿನ್ನ ಮಗಳನ್ನು ಹೆತ್ತೆ' ಎಂದು ಸಮಜಾಯಿಷಿ ನೀಡುತ್ತಾಳೆ. ಈ ಮೂಲಕ ತನಗಾಗಿ ತಾನು ಹೆರದ ಸಂದರ್ಭದಲ್ಲಿ ಪ್ರಕೃತಿಯ ನಿಲುವನ್ನು ಮೀರಲಾಗದ ಸತ್ಯವನ್ನು ನಿರೂಪಿಸಿದ್ದಾಳೆ. ಆಕೆ ಜ್ವರದಿಂದಿರುವ ಗಂಡನೊಂದಿಗೆ ಕೂಡ ತೀರಾ ವ್ಯಾವಹಾರಿಕವಾಗಿ ಮಾತನಾಡುವುದನ್ನು ತೋರಿಸಿ ತಾಯ್ತನದ ಸ್ವಭಾವವನ್ನೇ ಸಂಪೂರ್ಣ ಕಳಚಿಕೊಂಡದ್ದಾಗಿ ಪರಿಚಯಿಸಿದ್ದಾರೆ. ಒಂದು ರೀತಿಯಲ್ಲಿ ಪ್ರಕೃತಿಗೆ ಭಿನ್ನವಾಗಿ ವರ್ತಿಸುವ ನಡವಳಿಕೆ ತಪ್ಪೆಂದು ಆಕೆಗೆ ಮನವರಿಕೆಯಾಗುವುದು ಪ್ರಕೃತಿ ಸಹಜ ಗುಣಗಳಿಂದ ದೂರ ಹೋಗಬಾರದ ತತ್ವವನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಬದುಕಿನ ಸವಿಗೆ ತನ್ನ ಮಗಳೂ ಪಕ್ಕಾಗಲಿ ಎಂದು ಹರಸುವುದು ತಾಯ್ತನದ ತುಡಿತದಿಂದಾಗಿಯೇ ಆಗಿದೆ. ಕಿರಿಯ ರಾಣಿ ಆಕೆ ತೋರಿಸುವ ಮಾತೃವಾತ್ಸಲ್ಯದಿಂದಲೇ ಅವಳಿಗೆ ಪ್ರಾಮುಖ್ಯ

ಕೊಟ್ಟಿದ್ದಾರೆ. ಅದೇ ಹೆಚ್ಚು ಆಪ್ತವಾಗಿ ಪ್ರಕೃತಿ ಸಹಜ ಸ್ವಭಾವ ಎಂದು ಗುರುತಿಸಿ ಅವಳಿಗೆ ತನ್ನಿಂತಾನೇ ಗೌರವ ದಕ್ಕುವಂತೆ ಚಿತ್ರಿಸಿದ್ದಾರೆ. ರಾಣಿಯ ಈ ಬದಲಾವಣೆಯ ಸ್ವಭಾವ ಬದುಕನ್ನು ಕಟ್ಟುವ ಕ್ರಿಯೆಗೆ ತಲೆ ಬಾಗಿಸುವಂತೆ ಮಾಡುವ ಮೂಲಕ ತಾಯ್ತನದ ಸ್ವಭಾವಕ್ಕೆ, ಜವಾಬ್ದಾರಿಗೆ ಒಳಗಾಗಿಸುತ್ತಾರೆ. ಈ ಮೂಲಕ ಸಮಾಜದ ಸ್ತ್ರೀಯರೂ ಅಂತೆಯೇ ಬಾಳಬೇಕಾದ ತತ್ವವನ್ನು ಪ್ರತಿಪಾದಿಸಿದ್ದನ್ನು ಗುರುತಿಸಬೇಕಾಗುತ್ತದೆ.

ಮಾಸ್ತಿ ಕತೆಗಳಲ್ಲಿನ ಸ್ತ್ರೀಯರು ಜವಾಬ್ದಾರಿಯನ್ನು ಹೊತ್ತವರು. ಹಾಗೆಯೇ ಬದುಕಬೇಕು ಹೀಗೇ ಇರಬೇಕು ಎಂಬುದನ್ನು ಪ್ರತಿನಿಧಿಸುವವರು. ಆ ಮೂಲಕ ಅವರು ತಾಯ್ತನದ ಮಾದರಿ ಸ್ತ್ರೀಯರಾಗಿ ಪ್ರಕಟವಾಗುತ್ತಾರೆ. ಇವರು ವಿವಾಹವಾಗಿ ಮಕ್ಕಳನ್ನು ಹೆತ್ತು ತಾಯಂದಿರಾಗುತ್ತಾರೆ!

ಇಸಡೋರಾ ಕೂಡ ಪ್ರಕೃತಿ ಸಹಜ ಗುಣವಾದ ತಾಯ್ತನದ ತತ್ವವನ್ನು ಒಪ್ಪಿಕೊಳ್ಳದೇ ಅದಕ್ಕಿಂದ ಭಿನ್ನವಾಗಿ ಬದುಕು ಕಾಣಹೊರಡುವುದರಿಂದ ಪರಾಧೀನಳಾಗುತ್ತಾಳೆ. ಕೇವಲ ಗಂಡಸಿನ ಪಾವಿತ್ರ್ಯವನ್ನು ಬಯಸುವ ಹೆಣ್ಣಾಗಿ ಕಾಣಿಸಿಕೊಳ್ಳುವ ಇಸಡೋರಾಳ ಸ್ವೈರ ತಾಯಿಯಾಗುವುದನ್ನು ಬಯಸುವುದಿಲ್ಲ. ಅದು ಗಂಡಿನಿಂದಲೇ 'ನಮಗೊಂದು ಮಗು ಆದರೆ ಅದರ ಮುಂದು ಹೇಗೆ? ಎಂಬ ಪ್ರಶ್ನೆಗೆ 'ಆದಾಗ ಆ ಮಾತು', ' ನಾನು ಆ ಸ್ವಭಾವದ ಗಂಡೂ ಅಲ್ಲ' ನನ್ನ ಮಗುವಿಗೆ ಅದರ ತಾಯಿ ಒಲವು ಇರಬೇಕು. ಅದನ್ನು ನೀನೂ ನೋಡಬೇಕು' ಎಂದಾಗ ನೀವು ವಿಚಿತ್ರ ಮನುಷ್ಯರಾಗಿದೀರಿ ಎಂಬಲ್ಲೂ, ಆಕೆಗೆ ಈ ಕಟ್ಟು ಪಾಡು ವಿಚಿತ್ರವಾದುದಾಗಿ ಕಾಣುತ್ತದೆ. ತನ್ನನ್ನು ಪ್ರಕೃತಿ ಸಂಬಂಧದೊಂದಿಗೆ ಒಪ್ಪಿಕೊಳ್ಳಲಾರದೇ ಹೋದುದರಿಂದ ತಾಯ್ತನಕ್ಕೆ ಅರ್ಪಿಸಿಕೊಳ್ಳಲಾರದೇ ಹೋದುದರಿಂದ ಆಕೆ ಭಾರತೀಯ ಮೌಲ್ಯದ ಬದುಕಿನಿಂದ ದೂರ ತಳ್ಳಿಸಿಕೊಳ್ಳುತ್ತಾಳೆ. ಈ ಮೌಲ್ಯ ಭಾರತೀಯ ಮೂಲದ್ದಾದರೂ ಬದುಕಿನ ಸಾರ್ವತ್ರಿಕತೆಯಿಂದಾಗಿ ಅತಿಮುಖ್ಯವಾಗುತ್ತದೆ. ಅದು ಇಡೀ ಹೆಣ್ಣು ಸಮಾಜಕ್ಕೆ ಮಾದರಿಯಾಗಿ ಪ್ರತಿನಿಧೀಕರಣಗೊಂಡಿದೆ.

ವಿವಾಹಾ ನಂತರ ತಾಯಾಗುವುದು ಸಮಾಜಕ್ಕೆ ಸ್ವೀಕಾರಾರ್ಹವಾಗುವುದು ಪ್ರಪಂಚದೆಲ್ಲೆಡೆಯೂ ನಡೆಯುತ್ತದೆ. ಆದರೆ ವಿವಾಹಪೂರ್ವ ಪ್ರಣಯದಿಂದಾಗಿ ನಡೆದು ಹೋದ ದೈಹಿಕ ಸಂಬಂಧದಿಂದ ತಾಯಿಯಾಗಬೇಕಾದ ಸಂದರ್ಭವನ್ನೂ ಮಾಸ್ತಿ ಕತೆಗಳ ಸ್ತ್ರೀಯರು ಎದುರಿಸುತ್ತಾರೆ. ಸ್ತ್ರೀಯೊಬ್ಬಳು ತಾಯಾಗುವ ಪ್ರಕ್ರಿಯೆಯನ್ನು ಅಪಾರವಾಗಿ ಗೌರವಿಸುವ ಮಾಸ್ತಿಗೆ ವಿವಾಹಕ್ಕಿಂತ ಮುನ್ನ ತಾಯಾಗುವುದೂ ಒಪ್ಪಿತವಾಗುತ್ತದೆ. ಅಲ್ಲಿ ಹೆಣ್ಣು ತಾಯ್ತನದ ಸುಖ ಉಣ್ಣುವುದಕ್ಕೆ ಅವರನ್ನು ಒಪ್ಪಿಸಿಕೊಳ್ಳುವುದು ಮುಖ್ಯವಾಗುತ್ತದೆ. ಆ ಮೂಲಕ ತಾಯಿಯಾದವರು ಎಲ್ಲೆಡೆಯೂ ಕಾಣಸಿಗುತ್ತಾರೆ. ಅವರು ಸಮಾಜದಿಂದ ಮಾನ್ಯತೆ ಪಡೆಯುವುದಕ್ಕಿಂತ ಹೆಚ್ಚಾಗಿ ಕುಹಕದ ನೋಟ, ತಾತ್ಸಾರ ಭಾವವನ್ನೇ ಎದುರಿಸುತ್ತಾರೆ. ಈ ತಾಯ್ತನದ ಸುಖದೊಂದಿಗೆ ಸಮಾಜ ಮಾನ್ಯ ಮಾಡದ ನೋವು ತಾಯಿಯಾದವಳಿಗೆ

ಎದುರಾಗುತ್ತದೆ. ಆಕೆ ಎದುರಿಸಬೇಕಾದ ಸಂದರ್ಭಗಳು ಒಂದೇ ತೆರನಾಗಿರುತ್ತವೆ. ಆದರೆ ಮಾಸ್ತಿ ಅವರ ಕತೆಗಳಲ್ಲಿ ಅಂಥ ಪರಿಸ್ಥಿತಿಯನ್ನು ಎದುರಿಸುವ ಸ್ತ್ರೀಯರು ಯಾರ ತಾತ್ಸಾರ ಭಾವಕ್ಕೂ ನೇರವಾಗಿ ಒಳಗಾಗದಂತೆ ಮಾಸ್ತಿ ಚಿತ್ರಿಸಿಲ್ಲ. ಅಂಥ ಪರಿಸ್ಥಿತಿ ಎದುರಾದರೆ ಅವರು ಅಂಜಿ ನೊಂದು ಕೊಳ್ಳಬಾರದಂತೆ ಎಚ್ಚರವಹಿಸುವ ಅನುಕಂಪದ ಹಿಂದೆ ಈ ತೆರನಾದ ಹುಟ್ಟಿನ ಪ್ರಕ್ರಿಯೆಯ ಕುರಿತು ಗೌರವವಿದೆ. ವೈದಿಕ ಪರಂಪರೆಯಲ್ಲಿ ಆ ಸಂಬಂಧ ಅನೈತಿಕದ್ದಾಗುತ್ತದೆ. ಈ ಅನೈತಿಕ ಸಂಬಂಧ ಮಾನ್ಯತೆ ಪಡೆಯುವುದು ಗಂಡು ಹೆಣ್ಣಿನ ಕೈ ಹಿಡಿದ ಮೇಲೆಯೇ ಆಗುತ್ತದೆ. ಅದು ತಾಯ್ತನದ ಭಾವುಕತೆಯಿಂದ ಆ ಮಕ್ಕಳನ್ನು ಸಲಹುವುದು ಕರ್ತವ್ಯ ನಿಷ್ಠೆಯಿಂದ ಮುಖ್ಯದ್ದಾಗುತ್ತದೆ. ಆ ಮೂಲಕ ಆಕೆಯೊಳಗೆ ಅಡಗಿರುವ ತಾಯ್ತನದ ಸ್ವಭಾವದ ಸೆಲೆ ಸ್ಫುರಿಸಬೇಕು. ಆದರೆ ಅಂಥ ಸಂದರ್ಭವನ್ನು ಮಾಸ್ತಿ ಕತೆಗಳಲ್ಲಿ ಅವೈದಿಕ ನೆಲೆಯ ಹೆಣ್ಣು ಮಕ್ಕಳು ಮತ್ತು ವಿದೇಶೀ ಮೂಲದ ಸ್ತ್ರೀಯರು ಮಾತ್ರ ಎದುರಿಸುತ್ತಾರೆ. ವೈದಿಕ ಮನೆತನದ ಹೆಣ್ಣು ಮಕ್ಕಳು ಅಂಥ ಸಂದರ್ಭ ಎದುರಿಸಿದ ಪ್ರಸಂಗಗಳನ್ನು ಅವರು ಎದುರಾಗಿಸಿಲ್ಲ. ಅಂಥ ಸಂದರ್ಭವೊಂದನ್ನು ಎದುರಿಸುವುದಕ್ಕೆ ಇಲ್ಲಿ ಅವಕಾಶ ಪಡೆದುಕೊಳ್ಳುವುದಿಲ್ಲ. ಅಂದರೆ ಅವರು ಹೆಣ್ಣು ಬದುಕಬೇಕಾದ ರೀತಿಗೆ ಮಾದರಿಯಾಗುವ ನಿಟ್ಟಿನಿಂದ ಸಾಂಪ್ರದಾಯಿಕ ಬದುಕನ್ನು ಸ್ವೀಕರಿಸುತ್ತಾರೆ. ಮುಖ್ಯವಾಗಿ ವೈದಿಕ ಮನೆತನದ ಹೆಣ್ಣು ಮಕ್ಕಳು ಸಾಂಪ್ರದಾಯಿಕ ಪ್ರಕ್ರಿಯೆಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಆದರೆ ಅವರು ನೀತಿ ಹೇಳುವ ಸ್ಥಾನದಲ್ಲಿದ್ದುದರಿಂದ ಅದನ್ನು ಹಾಗೆ ಒಪ್ಪಿಕೊಳ್ಳುವುದು ಅಕ್ಷಮ್ಯವಾಗುತ್ತದೆ. ಅವರು ಬಾಳುವ ರೀತಿಯೇ ಉನ್ನತವಾದದ್ದು ಎಂಬ ಆ ನಂಬಿಕೆಯನ್ನು ಉಳಿಸಿಕೊಳ್ಳುವ ಎಚ್ಚರಿಕೆಯಿಂದಾಗಿ ಅಲ್ಲಿ ಅಂಥ ಘಟನೆಗಳು ನಡೆದದ್ದನ್ನು ಪರಿಚಯಿಸುವ ಕತೆಗಳನ್ನು, ಸ್ತ್ರೀಯರನ್ನು ಅವರು ಚಿತ್ರಿಸಿಲ್ಲ. ಅದು ಸಮಾಜವನ್ನು ತಿರಸ್ಕರಿಸುವುದಕ್ಕೆ ಹೆಣ್ಣು ಒಡ್ಡಿಕೊಳ್ಳಬಾರದ ಮಿತಿಯೊಂದು ತಡೆಯುವ ನೆಲೆಯದ್ದಾಗುತ್ತವೆ. ಅಂದರೆ ಪೌರಾಣಿಕ ಸ್ತ್ರೀಯಾಗಿ ಶಕುಂತಲೆ ವಿವಾಹ ಪೂರ್ವ ಪ್ರಣಯದಿಂದ ತಾಯಾಗಿ ಎದುರಿಸಿದ ತೊಂದರೆಗಳನ್ನು ನೆನಪಿಸಿ ಅಂಥ ಸಂಬಂಧ ನಡೆಸಬಾರದೆಂಬುದನ್ನೇ ಗೌತಮಿ ಹೇಳಿದ ಕತೆ ಕತೆಯ ಮೂಲಕ ಮಾಸ್ತಿ ನೆನಪಿಸುತ್ತಾರೆ. ಶಕುಂತಳೆಯ ಕಷ್ಟ, ಸಮಸ್ಯೆ ಕಳೆಯುವುದು ದುಷ್ಯಂತನೊಂದಿಗೆ ಬದುಕುವ ಅವಕಾಶ ಪಡೆದುಕೊಳ್ಳುವ ಮೂಲಕವೇ. ಆಮೇಲೆಯೇ ಅವಳ ಮೇಲಿನ ಆರೋಪ ದೂರವಾಗುತ್ತದೆ. ಆದುದರಿಂದ ಅಂಥ ಘಟನೆ ಘಟಿಸದೇ ಇರುವಂತೆ ಸ್ತ್ರೀಯಾದವಳು ಸದಾ ಎಚ್ಚರಿಕೆಯಿಂದಿರಬೇಕು ಎಂಬುದನ್ನು ಹೇಳುವ ಪ್ರಯತ್ನವನ್ನು ಈ ಮೂಲಕ ಮಾಸ್ತಿ ಮಾಡಿದ್ದಾರೆ. ಅಂಥ ಸಂಬಂಧ ತಪ್ಪೆಂಬುದನ್ನೇ ಸಾಬೀತು ಪಡಿಸುವುದು ಮಾಸ್ತಿಯವರ ಪ್ರಮುಖ ಉದ್ದೇಶವೂ ಆಗಿದೆ. ಅದಕ್ಕಾಗಿಯೇ ಪುರಾಣದ ಚೌಕಟ್ಟಿನೊಳಗೆ ಘಟನೆಗಳನ್ನು ವಿವರಿಸುತ್ತಾರೆ. ಹಾಗೂ ಅವೈದಿಕ ಪರಂಪರೆಯೊಳಗೆ ಬದುಕುವ 'ಚಂದ್ರವದನಾ' ಕತೆಯ ಚಂದ್ರವದನಳನ್ನಾಗಲೀ ,

'ಅರ್ವಾಚೀನ ಆಂಗ್ಲ ಶಕುಂತಲೆ' ಕತೆಯ ಜೆನ್ನಿಯನ್ನಾಗಲೀ ಅವರು ಅಗೌರವದಿಂದ ಕಾಣುವುದಿಲ್ಲ. ಆದರೂ ಅವರಿಬ್ಬರೂ ತಾಯಿಯಾಗುವ ಸಂದರ್ಭಗಳು ಮಾತ್ರ ವಿಭಿನ್ನ ಸಂದರ್ಭಗಳಿಗೆ ಸಂಬಂಧಿಸಿದ್ದಾಗಿವೆ. ಆದರೆ ಅವರಿಬ್ಬರೂ ಅದಕ್ಕಾಗಿ ಅಳುಕುವುದಿಲ್ಲ, ಕೊರಗುವುದಿಲ್ಲ. ಒಬ್ಬಳು ತಾಯಿಯಾಗಲೇಬೇಕೆಂದೇ ಬಸುರಾದವಳು. ಇನ್ನೊಬ್ಬಳು ವಿವಾಹಪೂರ್ವ ಪ್ರಣಯದಿಂದಾಗಿ ಬಸುರಾಗಿ ಹೆತ್ತವಳು. ಇಲ್ಲಿ ಅವರಿಬ್ಬರೂ ಅನಿವಾರ್ಯ ಹಾಗೂ ಅಗತ್ಯಕ್ಕೆ ತಕ್ಕಂತೆ ಹೆರಬೇಕಾಗಿ ಬಂದ ಸಂದರ್ಭವನ್ನು ಪ್ರತಿನಿಧಿಸಿದ್ದಾರೆ. ಸಮಾಜದ ಭೀತಿಗಿಂತ ತಮ್ಮ ಕುಡಿ ಬೆಳೆಸುವ ಉದ್ದೇಶವೇ ಅವರಿಗೆ ಮುಖ್ಯವಾಗುತ್ತದೆ. ಚಂದ್ರವದನಾ ಅಕ್ಕನ ಮೇಲಿನ ಹಠಕ್ಕೆ ಮಗುವೊಂದನ್ನು ಹೆತ್ತು ನಾಟಕ ರಂಗಕ್ಕೆ ಪ್ರವೇಶ ಮಾಡುತ್ತಾಳೆ. ಇಲ್ಲಿನ ಅವಳ ತಾಯ್ತನದ ಜವಾಬ್ದಾರಿ ತನ್ನ ಮಗುವನ್ನು ರಕ್ಷಿಸುತ್ತದೆ.

ಚಂದ್ರವದನಾಳೂ ತಾಯಿಯಾಗುವುದನ್ನು ಚಿತ್ರಿಸಿರುವುದು ವೇಶ್ಯೆಯೂ ತಾಯಿಯಾಗುವುದಕ್ಕೆ ಅರ್ಹಳೇ ಎಂಬುದನ್ನು ತೋರಿಸಿಕೊಡುವ ಉದ್ದೇಶದಿಂದ. ಸಮಾಜ ವೇಶ್ಯೆಯನ್ನೊ ಕಲಾವಿದೆಯನ್ನು ಅವಳ ಸೌಂದರ್ಯ ಕಾಪಾಡುವ ದೃಷ್ಟಿಯಿಂದ ಹೆರಿಗೆಯಿಂದ ದೂರವಿಡುವ ಪ್ರಯತ್ನವನ್ನು ಸುಳ್ಳಾಗಿಸುವುದು, ಪ್ರತಿ ಹೆಣ್ಣಿಗೂ ತಾಯ್ತನದ ಕರ್ತವ್ಯ ನಿಭಾಯಿಸುವ ಅವಕಾಶವಿರುವುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಇಲ್ಲಿ ಚಂದ್ರವದನಾ ಹೆರಿಗೆಯ ಬಳಿಕ ಸೌಂದರ್ಯವನ್ನು ಕಳಕೊಳ್ಳದೇ ಅವಳ ಜನಪ್ರಿಯತೆ ಹಾಗೇ ಉಳಿದುಕೊಳ್ಳುವುದನ್ನು ತೋರಿಸುವ ಮೂಲಕ ತಾಯ್ತನವನ್ನು ನೆಲೆಗೊಳಿಸುತ್ತಾರೆ. ಆಕೆ ಸೂಳೆಯಾದುದರಿಂದ ಆಕೆಯ ಮಗುವಿನ ಜನ್ಮಕ್ಕೆ ಕಾರಣನಾದವನ ವಿವರ ಬಯಸುವುದಿಲ್ಲ. ಆದರೆ ಅವಳೂ ತಾಯಿಯಾಗುವ ಸಾಧ್ಯತೆ ಪಡೆದುಕೊಳ್ಳುವ ಮೂಲಕ ಹೆಣ್ಣೊಬ್ಬಳು ತಾಯಾಗುವ ಕರ್ತವ್ಯವನ್ನು ಪಾಲಿಸಬೇಕು. ಆ ಅವಕಾಶದಿಂದ ಯಾರೂ ವಂಚಿತರಾಗಬೇಕಾಗಿಲ್ಲ ಎಂದು ತೋರಿಸಿಕೊಡುವ ಈ ಹಿನ್ನೆಲೆಯಲ್ಲಿ ಮಾಸ್ತಿ ದೃಷ್ಟಿಕೋನವೇ ವಿಜೃಂಭಿಸಿದೆ.

ವಿವಾಹ ಪೂರ್ವ ಪ್ರಣಯದಿಂದ ಮಗುವನ್ನು ಹೆರಬೇಕಾದ ಸಂದರ್ಭವನ್ನು ಎದುರಿಸಬೇಕಾಗಿ ಬಂದವರನ್ನೂ ಮಾಸ್ತಿ ಪರಿಚಯಿಸುತ್ತಾರೆ. ತಾಯ್ತನವನ್ನು ಗೌರವಿಸುವ ಮಾಸ್ತಿ ಆ ಸಂದರ್ಭವನ್ನು ತಿರಸ್ಕರಿಸುವುದಿಲ್ಲ. ಆ ಮಗುವಿಗೂ ಕುಟುಂಬದ ಪ್ರೀತಿ, ಭದ್ರತೆ ಸಿಗುವಂತೆ ಮಾಡಿಸುತ್ತಾರೆ.

ವಿವಾಹ ಪೂರ್ವ ಪ್ರಣಯದಿಂದ ತಾಯಿಯಾಗುವ ನಿಟ್ಟಿನಲ್ಲಿ 'ಅರ್ವಾಚೀನ ಆಂಗ್ಲ ಶಕುಂತಲೆ' ಕತೆಯ ಜೆನ್ನಿ ಮುಖ್ಯವಾಗುತ್ತಾಳೆ. ವಿವಾಹಪೂರ್ವ ಪ್ರಣಯದಿಂದಾಗಿ ಗರ್ಭ ಧರಿಸಿ ಹೆತ್ತು ಶಕುಂತಲೆ ಎದುರಿಸಿದ ಪರಿಸ್ಥಿತಿಯೊಳಗೆ ಜೆನ್ನಿಯೂ ಸಿಲುಕಬೇಕಾಗಿ ಬರುತ್ತದೆ. ಆದರೆ ಜೆನ್ನಿ ತಾಯ್ತನವನ್ನು ಎದುರಿಸುವ ಸಂದರ್ಭವೇ ಅವಳಿಗಿಂತ ಭಿನ್ನ ಸ್ಥಿತಿಯದು. ಶಕುಂತಳೆ

ಭಾರತೀಯ ಮೌಲ್ಯಗಳ ಆಧಾರದಲ್ಲಿ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದು ನೋವನ್ನು ಅನುಭವಿಸಬೇಕಾಗಿ ಬಂದಿದೆ. ನಿಂದೆಗಳ ನಡುವೆ ಬದುಕು ಕಳೆಯಬೇಕಾಗಿ ಬಂದದ್ದೇ ಭಾರತೀಯ ಸಾಂಪ್ರದಾಯಕ ನೆಲೆಯ ಹಿನ್ನೆಲೆಯಿಂದಲೇ. ವಿವಾಹಕ್ಕೂ ಮುನ್ನ ತಾಯಿಯಾಗುವ ಸಂದರ್ಭ ಭಾರತೀಯ ಸಂದರ್ಭಕ್ಕೆ ಅಪಮಾನವಾಗುತ್ತದೆ. ಈ ಅಪಮಾನ ಅಸ್ಪೃಶ್ಯತೆಯ ನಡುವೆ ಆಕೆ ಬದುಕಬೇಕಾಗಿ ಬರುವುದರಿಂದ ಮರಳಿ ಗಂಡನ ಬಳಿಗೇ ಬಂದು ಸೇರುವುದಕ್ಕೆ ಕಾಯಬೇಕಾಗುತ್ತದೆ. ಈ ಕಾಯುವಿಕೆ ಗಂಡನ ಹೊರತಾಗಿನ ತಾಯ್ತನವನ್ನು ಮಾನ್ಯ ಮಾಡದ ನಮ್ಮ ಸಮಾಜದ ಮನಃಸ್ಥಿತಿಯನ್ನು ಪರಿಚಯಿಸುತ್ತದೆ. ಆ ಮಾನ್ಯತೆಗಾಗಿ ಅವನನ್ನು ಸೇರಿಯೇ ಬದುಕುವಂತೆ ಪಣ ತೊಡಬೇಕಾಗಿ ಬರುತ್ತದೆ. ಆದರೆ ಅರ್ವಾಚೀನ ಆಂಗ್ಲ ಶಕುಂತಳೆಯಾಗಿ ಜೆನ್ನಿ ಎದುರಿಸುವ ಸಂದರ್ಭ ಅನಂತರ ಅದನ್ನು ಬಗೆಹರಿಸಿದ ರೀತಿ ಬೇರೆಯದೇ ಆದ ಹಾದಿಯನ್ನು ಹಿಡಿಯುತ್ತದೆ. ಭಾರತೀಯ ಮೂಲದ ಶಕುಂತಳೆಗಿಂತ ಅರ್ವಾಚೀನ ಆಂಗ್ಲ ಶಕುಂತಲೆ ಗಟ್ಟಿಗಿತ್ತಿ. ಸಮಸ್ಯೆಯನ್ನು ಸಮಸ್ಯೆಯಾಗಿ ಕಾಣದೆ ಅದಕ್ಕೊಂದು ಪರಿಹಾರ ಕೊಡುವವಳಾಗುತ್ತಾಳೆ. ಆಕೆಯ ಧೈರ್ಯದ ನಡವಳಿಕೆಯ ಜೊತೆಜೊತೆಗೇ ತಾಯ್ತನವನ್ನು ಕೂಡ ಪಾಲಿಸಿಕೊಂಡು ಬರುವುದು ಹೆಣ್ಣು ಆ ಕ್ರಿಯೆಗೆ ತಂತಾನೇ ಒಳಗಾಗುವುದನ್ನು ಹೇಳುತ್ತದೆ. ಇದು ತಾಯಿಯಾಗುವುದು ಹೆಣ್ಣಿನ ಹಕ್ಕು, ಅದನ್ನು ಆಕೆ ವಿರೋಧಿಸಬಾರದು ಎಂಬುದನ್ನು ಪ್ರತಿನಿಧಿಸುತ್ತದೆ. ಜೆನ್ನಿಯ ಧೈರ್ಯದ ತೀರ್ಮಾನ ಇಲ್ಲಿ ಗೌರವ ಪೂರ್ವಕವಾಗಿಯೇ ಒಪ್ಪಿಕೊಳ್ಳುವುದು ಆಕೆ ಭಾರತೀಯ ಹೆಣ್ಣಲ್ಲದ ಕಾರಣಕ್ಕಾಗಿ. ಆದುದರಿಂದ ಅಲ್ಲಿ ಆಕೆಯ ನಡವಳಿಕೆ ಸ್ವಾಭಾವಿಕವಾದುದು. ಆಕೆ ತಾಯ್ತನದ ಜವಾಬ್ದಾರಿಯನ್ನು ಮಗುವಿನ ಹುಟ್ಟಿಗೆ ಕಾರಣನಾದವನಿಲ್ಲದೆ ಹೊರುವುದಕ್ಕೆ ಒಪ್ಪುವುದಿಲ್ಲ. ತಾಯಿಯಾಗಿ ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪೂರೈಸುವ ಅವಳಿಗೆ ಸಂಪೂರ್ಣ ಜವಾಬ್ದಾರಿ ಹೊರುವ ಶಕ್ತಿ ಇಲ್ಲವಾಗಿದೆ. ಹಾಗೂ ಅಕ್ರಮ ಸಂಬಂಧದಿಂದಾಗಿ ಹುಟ್ಟಿದ ಮಗುವಿನ ಕುರಿತು ಸಮಾಜ ಮಾನ್ಯಮಾಡಿರುವುದು ಪ್ರಸ್ತಾಪಿಸಿ ಚರ್ಚಿಸುವುದಾಗಿದೆ. ಭಾರತೀಯ ಮೌಲ್ಯದ ನಂಬಿಕೆಗಳನ್ನು ವಿದೇಶದಲ್ಲಿಯೂ ಅಚ್ಚೊತ್ತುವುದಾಗಿದೆ. ಇಲ್ಲಿ ತಾಯಿ ತಂದೆಯರ ಇರುವಿಕೆಯನ್ನು ಅನಿವಾರ್ಯಗೊಳಿಸುವ ನೈತಿಕತೆಯನ್ನು ನೆನಪಿಸಲಾಗುತ್ತದೆ. ಜೆನ್ನಿಗೆ ಈ ಬಸುರು ಹಾಗೂ ತಾಯ್ತನ ಆಘಾತ ಹುಟ್ಟಿಸುವುದಿಲ್ಲ. 'ನಾವು ಜೊತೆಗೆ ಇದ್ದೆವು. ಮೂರು ತಿಂಗಳಾಯಿತು. ನನಗೆ ನಾನು ತಾಯಿ ಆಗತೇನೆ ಅನ್ನೋದು ತಿಳಿಯಿತು. ನನಗೆ ಹೀಗಾಗಬಹುದು ಅನ್ನೋ ಚಿಂತೆ ಇತ್ತು. ಇದ್ದೂ ಆಗತ್ತೆ ಅಂತ ನಾನು ಅಂದು ಕೊಂಡಿರಲಿಲ್ಲ. ನಾನು ಲಿಯೋನೆಲ್‌ಗೆ ಹೇಳಿದೆ. 'ನೋಡು, ಮದುವೆ ಆಗದೆ ಜೊತೆಗೆ ಇದ್ದದ್ದು ಸರಿ ಆಗಲಿಲ್ಲ. ಬೇಗನೆ ಮದುವೆ ಆಗು ನಾನು ಹೆರೋ ಮಗು ಪಾಪದ ಕೂಸು ಅನ್ನಿಸಿಕೊಳ್ಳೋದು ಬೇಡ' ಎಂದು ಆಕೆ ತನ್ನ ಪ್ರಿಯಕರನಲ್ಲಿ ಹೇಳಿರುವ ಮಾತುಗಳಲ್ಲಿ

ಅವಳ ಕಳಕಳಿ ಸ್ಪಷ್ಟವಾಗುತ್ತದೆ. ಜೆನ್ನಿಗೆ ತಾಯಿಯಾಗುವುದು ಬೇಡವೆಂದಲ್ಲ. ಅದು ಆಕೆಗೆ ಆಪ್ತವೇ. ಆದರೆ ಮದುವೆಗೂ ಮುನ್ನ ತಾಯಿ ಆದದ್ದಕ್ಕೂ ಆಕೆಯಲ್ಲಿ ವಿಷಾದವಿಲ್ಲ. ಆದರೆ ಆ ಮಗುವಿಗೆ ಬದುಕು ಕೊಡುವ ನೆಲೆಯಲ್ಲಿ ಇಬ್ಬರೂ ಜೊತೆಯಾಗಿ ಬದುಕಬೇಕಾದ ರೀತಿಯನ್ನು ಒತ್ತಾಯಿಸುತ್ತದೆ. ಜೆನ್ನಿ ಮಗುವಿಗೆ ನೆಲೆ ಕೊಡುವ ನಿಟ್ಟಿನಿಂದಲೇ ಜಾಗ್ರತೆ ವಹಿಸುವುದಾಗಿದೆ. ಜೆನ್ನಿ ವಿವಾಹ ಪೂರ್ವ ಪ್ರಣಯದಿಂದಾಗಿ ತಾಯಿಯಾಗುತ್ತಾಳಾದರೂ ಅದಕ್ಕೆ ಕಾರಣವಾದವನ ಹೆತ್ತವರಿಗೇ ಅದರ ಜವಾಬ್ದಾರಿಯನ್ನು ವಹಿಸುವ ಕಳಕಳಿ ದಾಂಪತ್ಯವನ್ನು ಬಯಸುತ್ತದೆ. ಮಾಸ್ತಿ ಈ ಪ್ರಕ್ರಿಯೆಯನ್ನು ವಿವಾಹ ಬಾಹಿರ ಪ್ರಣಯವಾಗಿ ಕಾಣದೆ ವಿವಾಹ ಪೂರ್ವ ಪ್ರಣಯವಾಗಿ ಕಾಣುತ್ತಾರೆ. ಇದು ವೈದಿಕ ಪರಂಪರೆಯಲ್ಲಿ ಬದುಕು ಕಾಣುತ್ತಿರುವ ಸ್ತ್ರೀಯರ ಬದುಕಿನಲ್ಲಿ ಘಟಿಸುವುದಿಲ್ಲ. ಅಲ್ಲಿನ ಹೆಣ್ಣು ಅತಿ ಮಡಿವಂತಿಕೆಯಿಂದ ಉಸಿರಾಡುತ್ತಿರುವುದರಿಂದ ಅಲ್ಲಿ ಅದನ್ನು ಸಾಧ್ಯವಾಗಿಸುವುದಿಲ್ಲ.

ಮಾಸ್ತಿ ಅವರ ಕತೆಗಳಲ್ಲಿ ಹೆರದೆಯೂ ಮಗುವಿಗೆ ತಾಯಿಯ ಪ್ರೀತಿಯನ್ನು ಕೊಡುವ ಸ್ತ್ರೀಯರು ತಾಯ್ತನದ ವಿಶಾಲ ಮೌಲ್ಯವನ್ನು ಪ್ರತಿನಿಧಿಸುತ್ತಾರೆ. ಇದು ಸ್ತ್ರೀಯಲ್ಲಿ ತಾಯ್ತನ ಎನ್ನುವುದು ಅವಳ ಹುಟ್ಟಿನೊಂದಿಗೇ ಮೈಗೂಡಿಸಿಕೊಂಡಿರುತ್ತದೆ ಎಂಬುದನ್ನೇ ಅವರು ಪ್ರತಿಪಾದಿಸಿದ್ದಾರೆ.

'ಚಿಕ್ಕವ್ವ' ಕತೆಯ ಚಿಕ್ಕವ್ವ ಮದುವೆಗೆ ಮುನ್ನ ತನ್ನ ಗಂಡನಿಗೆ ಅವನ ಮೊದಲ ಹೆಂಡತಿಗೆ ಜನಿಸಿದ ಚಿಕ್ಕ ಮಗುವನ್ನು ಸಲಹುವುದಕ್ಕೆ ತಾನು ವಿವಾಹವಾಗುವ ಅನಿವಾರ್ಯತೆಗೆ ಒಳಗಾಗಿದ್ದಾಳೆ. ತಾಯ್ತನದ ಕುರಿತು ಅವ್ಯಕ್ತ ಗೌರವ, ಪ್ರೀತಿಯನ್ನು ಸ್ಥಾಪಿಸುವ ನಿಟ್ಟಿನಿಂದಲೇ 'ನಿಮ್ಮ ತಾಯಿ ಬರ್ತಾಳೆ'ಎಂಬ ಮಾತಿನಿಂದ ಮಗು ಸಂತೋಷಗೊಳ್ಳುವುದನ್ನು ಕತೆಯಲ್ಲಿ ಮಾಸ್ತಿ ತೋರಿಸಿದ್ದಾರೆ. ತಾಯಿ ಇಲ್ಲದ ಜೀವಕ್ಕೆ ಜೀವ ಕಳೆ ನೀಡುವ ತಾಯಿಯಾಗಿ ಆಕೆ ಕಾಣಿಸಿಕೊಳ್ಳುತ್ತಾಳೆ. 'ಆಕೆಯ ಸ್ವಭಾವ ಬೇರೆಯ ರೀತಿ ಇದ್ದಿದ್ದರೆ ಬೇಸರವಾಗಿದ್ದಿರಬೇಕು. ಆದರೆ, ಚಿಕ್ಕವ್ವ ನಾನು ಎಷ್ಟು ಆತುರದಿಂದ ಅವರಿಗೆ ಅಂಟಿದೆನೋ ಅದಕ್ಕೂ ಹೆಚ್ಚಿನ ಆತುರದಿಂದ ನನ್ನನ್ನು ಕಟ್ಟಿಕೊಂಡರು' ಎಂಬಲ್ಲಿಯೇ ಅವಳ ವ್ಯಕ್ತಿತ್ವದೊಳಗೆ ಅಂತರ್ಗತವಾಗಿದ್ದ ತಾಯ್ತನದ ಸ್ವಭಾವ ಪ್ರಕಟವಾಗುತ್ತದೆ. ಆಕೆ ಕೇವಲ ಆ ಮಗುವಿಗೆ ತಾಯಾಗುವ ಹೊಣೆಯನ್ನಷ್ಟೇ ಹೊರುವುದು ತಾಯ್ತನವನ್ನು ಗೌರವಿಸುವ ನೆಲೆಯಿಂದ. ತಾಯಿಯೊಬ್ಬಳು ತನ್ನ ಮಗುವನ್ನು ಸಲಹುವುದಕ್ಕಿಂತ ಒಂದು ಹೆಜ್ಜೆ ಹೆಚ್ಚೇ ಆಗಿ ನೋಡಿಕೊಳ್ಳುತ್ತಾಳೆ. ಮಲತಾಯಿಯ ರೂಢಿಗತ ವ್ಯಕ್ತಿತ್ವಕ್ಕಿಂತ ಭಿನ್ನವಾಗಿ ನಡೆದುಕೊಳ್ಳಬಹುದಾದ ಸಾಧ್ಯತೆಯನ್ನು ಪರಿಚಯಿಸುವ ಕೆಲಸವನ್ನುಅವಳು ಮಾಡಿದ್ದಾಳೆ. ಆ ಮೂಲಕ ಸ್ತ್ರೀ ಅಂಥ ಸ್ವಭಾವವನ್ನು ಸದಾ ಕಾಯ್ದುಕೊಳ್ಳಬೇಕು ಎಂಬುದನ್ನೂ ಪ್ರತಿಪಾದಿಸುವ ಕೆಲಸವನ್ನು ಮಾಡಿದ್ದಾರೆ. ಹೆಣ್ಣಿಗೆ ರಕ್ತಗತವಾಗಿಯೇ ಬಂದಿರುವ ತಾಯ್ತನವನ್ನು ಪಾಲಿಸುವ

ರೀತಿಗೆ ಅವಳು ಪ್ರತಿನಿಧಿಯಾಗುತ್ತಾಳೆ. ಮನೆ ನಡೆಸುವ ಅವಳು ಪೀಳಿಗೆಯೊಂದನ್ನು ಚೆನ್ನಾಗಿ ಸಲಹಿ ಉತ್ತಮ ನಾಗರಿಕನನ್ನಾಗಿ ಗುರುತಿಸುವಂತೆ ಮಾಡುತ್ತಾಳೆ. ಮಗುವನ್ನು ಒಂದು ಹಂತಕ್ಕೆ ಬೆಳೆಯಿಸುವುದು ಅವಳಿಗೆ ಮುಖ್ಯವಾಗುತ್ತದೆ. ಪುಟ್ಟ ಮಗುವನ್ನು ಸ್ವತಂತ್ರವಾಗಿ ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವಂತೆ ಮಾಡಿ ತಾನು ದೂರವಾಗುವುದು ಒಂದು ನೆಲೆಯಲ್ಲಿ ತಾಯ್ತನದ ಜವಾಬ್ದಾರಿಯಿಂದ ಮುಕ್ತಳಾಗದಂತೆ ಎಂದು ತೋರಿಸಿಕೊಡುವುದಾಗುತ್ತದೆ.

'ಚಿಕ್ಕವ್ವ' ಕತೆಯ ಚಿಕ್ಕವ್ವಳಂತೆ 'ಲಿಯರ್‌ದೊರೆಯ ಮಗಳುದಿರು' ಕತೆಯ ಪ್ರಭುವಿಯೂ ತಾಯಿಯನ್ನು ಕಳೆದುಕೊಂಡ ತನ್ನ ಅಕ್ಕನ ಮಕ್ಕಳನ್ನು ಸಲಹುವ ಜವಾಬ್ದಾರಿ ಹೊರುತ್ತಾಳೆ. ಅಕ್ಕ ಹೆತ್ತ ಮಕ್ಕಳನ್ನು ಅವಳ ಮರಣದ ಬಳಿಕ ತಾನು ಸಲಹುವುದಕ್ಕೆ ಬರುವುದು, ತಿದ್ದುವುದಕ್ಕೆ ಪ್ರಯತ್ನಿಸುವುದನ್ನು ಕಾಣುತ್ತೇವೆ. ಪ್ರಭುವಿ ತನ್ನದೇ ಆದ ನೆಲೆಯಲ್ಲಿ ತನ್ನದೇ ಮಕ್ಕಳೆಂಬಂತೆ ತನ್ನ ಅಕ್ಕನ ಮಕ್ಕಳನ್ನು ಸಲಹುವುದಕ್ಕೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. 'ನಾನು ಬರುವುದು ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ನೀನು ನನ್ನಿಂದ ಬೇರೆ ಏನನ್ನೂ ನಿರೀಕ್ಷಿಸಬಾರದು' ಎಂದು ಶರತ್ತು ಹಾಕಿ ಲಿಯರ್ ದೊರೆಯ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಒಪ್ಪಿಕೊಳ್ಳುತ್ತಾಳೆ. ಚಿಕ್ಕವ್ವ ಹಾಗೂ ಪ್ರಭುವಿ ಅದಕ್ಕೆ ಒಪ್ಪಿಕೊಳ್ಳುವ ಸಂದರ್ಭವೇ ಭಿನ್ನವಾದದ್ದು. ಚಿಕ್ಕವ್ವ ಮದುವೆಯಾದೊಡನೆಯೇ ತಾಯಿಯೂ ಆಗಿ ಕರ್ತವ್ಯ ನಿಭಾಯಿಸುವುದಕ್ಕೆ ತೊಡಗಿಕೊಂಡವಳು. ಆದರೆ ಪ್ರಭುವಿ ವಿಧವೆ, ಒಂದು ಗಂಡು ಮಗುವನ್ನು ಹೆತ್ತು ಸಲಹಿದ ಅನುಭವ ಉಳ್ಳವಳು. ಆದರೆ ಅವರಿಬ್ಬರೂ ಮಕ್ಕಳನ್ನೂ ನೋಡಿಕೊಳ್ಳುವಲ್ಲಿ ತಮ್ಮನ್ನು ತೊಡಗಿಸಿಕೊಂಡ ರೀತಿ ಕೊಂಚ ಭಿನ್ನವಾದುದಾಗುತ್ತದೆ. ಚಿಕ್ಕವ್ವಳನ್ನು ಮಗ ಅಂಟಿಕೊಂಡಂತೆಯೇ ಪ್ರಭುವಿಯನ್ನು ಲಿಯರ್ ದೊರೆಯ ಮಕ್ಕಳು ಅಂಟಿಕೊಳ್ಳುತ್ತಾರೆ. ಅಲ್ಲಿ ಚಿಕ್ಕವ್ವ ಗಂಡು ಮಗುವನ್ನು ಸಲಹುವ ಜವಾಬ್ದಾರಿ ಹೊತ್ತವಳು. ಅವಳು ಅವನಿಗೆ ಸ್ವತಂತ್ರವಾಗಿ ಕೆಲಸ ಮಾಡಿಕೊಳ್ಳುವ ಬುದ್ಧಿ ಕಲಿಸುವ ಕಡೆಗೆ ತೊಡಗಿಕೊಂಡರೆ ಪ್ರಭುವಿ ಮೂವರು ಹೆಣ್ಣು ಮಕ್ಕಳಿಗೆ ಒಳ್ಳೆಯ ನಡತೆ ಕಲಿಸಿಕೊಡಲು ಪ್ರಯತ್ನಿಸುತ್ತಾಳೆ.

ಹೆಣ್ಣು ಮಕ್ಕಳು ದಾರಿತಪ್ಪದಂತೆ ನೋಡಿಕೊಳ್ಳುವ ಕಡೆಗೆ ಅವಳ ತಾಯ್ತನ ತುಡಿಯುತ್ತದೆ. ಈ ದೃಷ್ಟಿಕೋನದಿಂದಲೇ ಅವಳು ಅವರಿಗೆ ವಿವಾಹ ಮಾಡಿಸುವ ಕುರಿತು ಪ್ರಸ್ತಾಪಿಸುತ್ತಾಳೆ. ಜನ ಮಾನಸದ ಸಹಜ ಪ್ರಕ್ರಿಯೆಯಾಗಿ ಅದನ್ನು ಆಕೆ ದೊರೆಯೊಂದಿಗೆ ಪ್ರಸ್ತಾಪಿಸಿದ್ದು ತನ್ನ ಕರ್ತವ್ಯ ಪೂರೈಸುವ ದೃಷ್ಟಿಯಿಂದಲೇ. ಅಂಥ ಸೂಕ್ಷ್ಮತೆಯನ್ನು ಗಂಡಿಗಿಂತ ಹೆಚ್ಚಾಗಿ ಹೆಣ್ಣೇ ಅರಿತುಕೊಂಡಿರುತ್ತಾಳೆ ಎಂಬ ನಿಟ್ಟಿನಿಂದಲೇ ಅಂಥ ಜವಾಬ್ದಾರಿಗಳನ್ನು ಅವಳಿಗೇ ಹೇರುವುದಾಗುತ್ತದೆ. ಇಲ್ಲಿ ತಂದೆತನ ಯಾವುದರಲ್ಲೂ ತೊಡಗಿಕೊಳ್ಳದೇ ಹೋದರೂ ಅವನ ಯಾಜಮಾನ್ಯ ಯಾವತ್ತೂ ಕುಗ್ಗುವುದಿಲ್ಲ. ಸ್ತ್ರೀ ಅವನನ್ನು ಕೇಳಿಯೇ ಮುನ್ನಡೆಯಬೇಕಾದಂತೆ

ಆತ ಸಮಾಜವನ್ನು ಸಿದ್ಧಗೊಳಿಸಿ ಬಿಟ್ಟಿದ್ದಾನೆ. ದೊರೆಯ ಮಕ್ಕಳನ್ನು ಕೂಡ ಆಕೆ ಚೆನ್ನಾಗಿಯೇ ನೋಡಿಕೊಳ್ಳುತ್ತಾಳೆ. 'ನಿಮ್ಮ ಮಕ್ಕಳಿಬ್ಬರೂ ಪರದೇಶದಲ್ಲಿ ಹೋಗಿ ವ್ಯವಹಾರ ಜ್ಞಾನ ಪಡೆದು ಬರಬೇಕಾದ ವಯಸ್ಸನ್ನು ಮುಟ್ಟಿದ್ದಾರೆ. ಹಿರಿಯನನ್ನು ನೀವು ಹತ್ತಿರದಲ್ಲಿ ಇಟ್ಟುಕೊಂಡಿರಬೇಕು. ಅವಶ್ಯಕವಾದ ಸಂಗತಿಯನ್ನು ನೀವೇ ಅವನಿಗೆ ಕಲಿಸಬೇಕು. ಎರಡನೆಯ ಮಗ ಎಡ್ಮಂಡ್‌ನನ್ನು ಈ ಬಗ್ಗೆ ಪರದೇಶಕ್ಕೆ ಕಳಿಸುವ ದಿನ ಒದಗಿದೆ. ಅವನನ್ನು ಫ್ರಾನ್ಸ್ ದೇಶಕ್ಕೆ ಕಳುಹಿಸಿಕೊಡಿ ಎಂದು ನನ್ನ ಪ್ರಾರ್ಥನೆ' ಎಂದು, 'ನಿನ್ನ ಮಕ್ಕಳು ಬೆಳೆಯುತ್ತಾ ಇದ್ದಾರೆ. ಕಿರೀ ಹುಡುಗಿ ಇನ್ನೂ ಹುಡುಗಿ ಅಂದರೂ, ಹಿರಿಯರಿಬ್ಬರೂ ಮದುವೆಗೆ ಎಡವಿದ್ದಾರೆ. ಇವರಿಗೆ ಇಷ್ಟರಲ್ಲೇ ಮದುವೆ ಮಾಡುವ ಯೋಚನೆ ಮಾಡಬೇಕು' ಎಂದು ಸಲಹೆ ನೀಡುವುದು ತಾಯಿಯಾದವಳ ಪ್ರಬುದ್ಧ ನಿಲುವನ್ನು ತೋರಿಸುತ್ತದೆ. ಆ ನೆಲೆಯಲ್ಲಿಯೇ ಆಕೆ ತನ್ನ ಕರ್ತವ್ಯ ಪೂರೈಸಿ, ಅಪ್ಪಣೆಯಾದರೆ ನಾನು ಹೋಗುತ್ತೇನೆ' ಎಂದು ಎದ್ದಳು. ಚಿಕ್ಕವ್ವ ತನ್ನನ್ನು ಕೊಂದು ಕೊಂಡು ದೂರ ಹೋದರೆ ಪ್ರಭುವಿ ತನ್ನ ಅರಮನೆಗೇ ಹೋಗುತ್ತಾಳೆ 'ಭಾವ! ಮಕ್ಕಳನ್ನು ನೋಡಿಕೊಳ್ಳಿ ಅಂತ ನಾನು ನಿನ್ನನ್ನು ಅರಮನೆಗೆ ಕರೆತಂದೆ. ನನ್ನ ಮಗ ಇಷ್ಟರಲ್ಲೇ ಇಟಲಿಯಿಂದ ಹಿಂದಿರುಗುತ್ತಾನೆ.

ಪ್ರಭು ಪದದ ವ್ಯವಹಾರವನ್ನೆಲ್ಲ ಅವನಿಗೆ ಒಪ್ಪಿಸಿ ಅವನು ಅದನ್ನು ನೋಡಿಕೊಳ್ಳುವಂತೆ ಪಕ್ಕದಲ್ಲಿ ನಿಂತು ನಾನು ಸಲಹೆ ನೀಡಬೇಕು. ಮಕ್ಕಳು ಬೆಳೆದಿದ್ದಾರೆ. ತಮ್ಮನ್ನು ತಾವು ನೋಡಿಕೊಳ್ಳಬಲ್ಲವು. ಹಿರಿಯ ಮಗಳಿಗೆ ಒಡನೆ ಮದುವೆ ಮಾಡು. ಎರಡನೆ ಮಗಳಿಗೆ ಒಂದೆರಡು ವರ್ಷದಲ್ಲಿ ಮದುವೆ ಮಾಡಿದರೂ ಆಯಿತು. ಕೊನೆಯ ಹುಡುಗಿಯ ಯೋಚನೆ ನಾಲ್ಕು ವರ್ಷದ ಬಳಿಕ ಮಾಡಬಹುದು. ಈಗ ನನಗೆ ನನ್ನ ಊರಿಗೆ ಹೋಗಲು ಅಪ್ಪಣೆ ಕೊಡು' ಎನ್ನುವಲ್ಲಿ ಆಕೆಯ ತಾಯ್ತನದ ಜವಾಬ್ದಾರಿಯನ್ನು ಪೂರೈಸಿದ ರೀತಿಯಲ್ಲಿ ಅವಳ ಹಿರಿತನ ವಿಜೃಂಭಿಸಿದೆ.

ತಾಯಿಯಾದವಳು ತನ್ನ ಮಕ್ಕಳ ಹೊರತಾಗಿ ಇನ್ನೊಬ್ಬರ ಮಕ್ಕಳನ್ನು ಅಷ್ಟೇ ಕಾಳಜಿಯಿಂದ ನೋಡಿಕೊಳ್ಳುವ ರೀತಿ ಅತ್ಯಂತ ಗೌರವಯುತವಾದದ್ದಾಗಿ ಇಲ್ಲಿ ಕಂಡರಿಸಲಾಗಿದೆ. ದೊರೆ ಮಕ್ಕಳು ಮಿತಿಮೀರಿದ ನಡವಳಿಕೆಗಳನ್ನು ಕಣ್ಮುಂದೆ ನಿಲ್ಲಿಸುತ್ತ ' ಇಪ್ಪತ್ತು ವರ್ಷದ ಹಿಂದೆ ಭಾವ ತನ್ನನ್ನು ಅಕ್ಕನ ಮಕ್ಕಳನ್ನು ನೋಡಿಕೊಳ್ಳಲೆಂದು ಅರಮನೆಗೆ ಒಯ್ದನು. ನೋಡಿಕೊಳ್ಳೋಣ ಎಂದೇ ತಾನು ಅರಮನೆಗೆ ಹೋದಳು. ನೋಡಿಕೊಳ್ಳುವುದಕ್ಕೆ ಅಲ್ಲಿ ಏನು ಇತ್ತು ? ವರ್ಷದ ಆ ಹಿರಿಯ ಮಗಳು ಅರ್ಧ ಮೊದ್ದು ಆ ಎರಡನೆಯವಳು, ತುಂಬ ಒಳ್ಳೆಯ ಸ್ವಭಾವದ ಆ ಕಿರಿಯ ಮಗಳು. ಮೂವರಲ್ಲಿ ಒಬ್ಬಳು ಮಾತ್ರ ಸ್ವಲ್ಪ ತನ್ನ ತಾಯಂತೆ ಇದ್ದಳು. ಮೂವರೂ ಮೂರು ಪಾಲು ತಂದೆಯಂತೆ ಹಟಮಾರಿಗಳು. ಇವರ ಸ್ವಭಾವ ಹೀಗಿರುವಾಗ ತಾನು ಅವರನ್ನು ಏನು ಮಾಡುವಂತಿತ್ತು? ಕೆಲವು ವರ್ಷ ಕಳೆದು ಭಾವ ತಾನು ರಾಜ್ಯವನ್ನು ಮಕ್ಕಳಿಗೆ ಹಂಚುವ

ಯೋಚನೆ ಮಾಡಿದನು. ಇದು ಬೇಡ ಎಂತ ತಾವೆಲ್ಲ ಹೇಳಿದೆವು. ಭಾವ ಕೇಳಲಿಲ್ಲ' ಎಂದಿರುವುದು, ಆರಂಭದಲ್ಲಿ ಚಿಕ್ಕಮ್ಮ ಬಂದಳೆಂದು ಮಕ್ಕಳಿಗೆಲ್ಲ ತುಂಬ ಸಂತೋಷ. ಅವರು ಆಸೆಯಿಂದ ಅವಳಿಗೆ ಅಂಟಿಕೊಂಡರು. ಪೇಳಿದಂತೆ ನಡೆದುಕೊಂಡು ತಮ್ಮನ್ನು ಬೆಳೆಸುವುದು ಚಿಕ್ಕಮ್ಮನಿಗೆ ಒಂದು ಸಮಸ್ಯೆ ಆಗದಂತೆ ಮಾಡಿದರು. ಗಾನೆರಿಲ್‌ಗೆ ಆಗ ಸುಮಾರು ಹದಿನಾರು ವರುಷ. ರೀಗನ್ ಹದಿನಾಲ್ಕು,. ಕಾರ್ಡಿಲಿಯಾ ಹನ್ನೆರಡು ವರ್ಷದ ಹುಡುಗಿಯರು.

ಪ್ರಭುವಿ ಇವರಿಗೆ ಮುಖ್ಯವಾಗಿ ನಡತೆ ಕಲಿಸಿಕೊಟ್ಟಳು. "ದೊರೆ ಮಕ್ಕಳು ತಮ್ಮ ಸ್ಥಾನದ ಮರ್ಯಾದೆಗೆ ತಕ್ಕಂತೆ ನಡೆದುಕೊಳ್ಳಬೇಕು. ದರ್ಪ ಕೂಡದು. ಹಾಗೆಯೇ ಅತಿ ಸೌಲಭ್ಯ ಕೂಡದು. ಉಳಿದಂತೆ ದೊಡ್ಡ ಮನೆತನದ ಹೆಣ್ಣು ಮಕ್ಕಳು ಆ ದಿನದಲ್ಲಿ ಕಲಿಯುತ್ತಿದ್ದ ಎಲ್ಲ ಸಂಗತಿಗಳನ್ನು ಆಲಸ್ಯವಿಲ್ಲದೆ ಕಲಿಯಲೇಬೇಕು. ಇದೆಲ್ಲ ಚೆನ್ನಾಗಿ ನಡೆಯಿತು' ಎಂದಿರುವಲ್ಲಿ ಭಿನ್ನ ಅಭಿಪ್ರಾಯಗಳ ಚಿತ್ರಣವಿದೆ. ಅಲ್ಲಿ ಸ್ವಭಾವಗಳ ಕುರಿತ ದ್ವಂದ್ವ ಅಭಿಪ್ರಾಯಗಳಿವೆ. ಸ್ವಭಾವವನ್ನು ಕಟ್ಟಿಕೊಡುವಲ್ಲಿ ಇಲ್ಲಿ ಕ್ರಮ ಬದ್ಧತೆ ಕಾಯ್ದುಕೊಳ್ಳಲಾಗಲಿಲ್ಲ.

'ಇಂದಿರೆಯೋ ಅಲ್ಲವೋ ' ಕತೆಯ ಇಂದಿರೆ ಹಾಗೂ ಸಾವಿತ್ರಿಯರು ತಾಯ್ತನದ ಎರಡು ಮುಖಗಳಾಗಿ ಕಾಣಿಸಿಕೊಳ್ಳುತ್ತಾರೆ. ಮೊದಲ ಹೆಂಡತಿ ಇಂದಿರೆ ಒಂದು ಮಗುವಿಗೆ ಜನ್ಮ ನೀಡಿ ತಾಯಿಯಾದವಳು ಅವಳ ಮರಣದ ಬಳಿಕ ಬಂದ ಮಲತಾಯಿ ಸಾವಿತ್ರಿ ಕಟುಕಿ. ಒಂದು ರೀತಿಯಲ್ಲಿ ಆಕೆ 'ಚಿಕ್ಕವ್ವ ' ಕತೆಯ ಚಿಕ್ಕವ್ವ ಹಾಗೂ "ಲಿಯರ್ ದೊರೆಯ ಮಗಳುದಿರು' ಕತೆಯ ಪ್ರಭುವಿಯರ ಸ್ವಭಾವಕ್ಕೆ ವಿರೋಧವಾಗಿ ಮಲತಾಯಿಯ ಕಠಿಣ ಸ್ವಭಾವಕ್ಕೆ ಸಾಕ್ಷಿಯಾಗುತ್ತಾಳೆ.

ಆಕೆ ತನ್ನ ಮಗುವನ್ನುಮಾತ್ರ ಪ್ರೀತಿಸುವ, ಇಂದಿರೆಯ ಮಗುವನ್ನು ಕ್ರೂರವಾಗಿ ಶಿಕ್ಷಿಸುವ ದುಷ್ಟತೆಗೂ ಒಳಗಾಗುತ್ತಾಳೆ. ಮೊದಲ ಹೆಂಡತಿ ಇಂದಿರೆಯನ್ನು ಕಳೆದುಕೊಂಡ ನಾರಾಯಣಮೂರ್ತಿ ಮರು ಮದುವೆಯಾಗುವುದೇ ಮಗುವನ್ನು ಸಲಹುವ ನಿಟ್ಟಿನಿಂದ. ಆದರೆ ಅದುವೇ ಅವನ ಉದ್ದೇಶಕ್ಕೆ ತಿರುಗೇಟು ನೀಡುತ್ತದೆ. 'ಅವನ ಸುಖಕ್ಕೆಂದು ನಾನು ಅವಳನ್ನು ಮದುವೆ ಮಾಡಿಕೊಂಡೆ. ಅವನಿಗೆ ಅದರಿಂದ ಸುಖವಿಲ್ಲದೇ ಹೋಯಿತು. ಹ್ಯಾಗೋ ಸ್ವಲ್ಪ ದೊಡ್ಡವನಾಗುವವರೆಗೆ ಬೆಳೆದರೆ ಆ ಮೇಲೆ ಹ್ಯಾಗಾದರೂ ಆಗುತ್ತದೆ ಎಂದು ಕೊಂಡು ಸುಮ್ಮನಿದ್ದೆ. ಅದಕ್ಕೂ ಕಷ್ಟ ಬಂದಿತು' ಎಂದು ಹಳಹಳಿಸುವಲ್ಲಿಯೇ ಅವನ ಮನದ ನೋವಿನ ಅರಿವಾಗುತ್ತದೆ. ಆ ನೋವಿಗೆ ಎರಡನೇ ಹೆಂಡತಿಯೇ ಕಾರಣಳಾಗುತ್ತಾಳೆ ಎಂಬುದು ಅಲ್ಲಿ ವೇದ್ಯವಾಗುತ್ತದೆ.

ಜ್ವರದಿಂದ ನರಳುವ ಮಗುವನ್ನೂ ಕೂಡ ಜೊತೆಯಲ್ಲಿ ಇರಿಸಿಕೊಳ್ಳದೇ ದೂರದ ಶೆಡ್‌ಗೆ ಅಟ್ಟುವ ಮಲತಾಯಿ ಸಾವಿತ್ರಿ ಮನುಷ್ಯತ್ವ ಕಳೆದುಕೊಂಡವಳಾಗಿ ಕಾಣಿಸಿಕೊಳ್ಳುತ್ತಾಳೆ. ತನ್ನ ಮಗುವನ್ನು ಮಾತ್ರ ಪ್ರೀತಿಸಿ, ಉಪಚರಿಸುವ ಮತ್ಸರ ಸ್ವಭಾವ ಅವಳದು. ಆಕೆ ಸಾವಿತ್ರಿ, ಚಿಕ್ಕವ್ವ ಹಾಗೂ ಪ್ರಭುವಿಯರಿಗಿಂತ ತೀರಾ ಕುಬ್ಜಳಾಗಿದ್ದಾಳೆ. ಸಾವಿತ್ರಿಯ ಈ ದುಷ್ಟವರ್ತನೆಯ

ಮುಂದೆ ಇಂದಿರಾಳ ಸ್ವಭಾವ ಮಾನ್ಯತೆ ಪಡೆಯುತ್ತದೆ. ಚಿಕ್ಕಮ್ಮಳ ದಿವ್ಯ ನಿರ್ಲಕ್ಷ್ಯದಿಂದಾಗಿಯೇ ಇಂದಿರಾಳ ಮಗು ಕೊನೆಯುಸಿರೆಳೆಯುತ್ತದೆ. ತನ್ನ ಮಗುವನ್ನು ಮಾತ್ರ ಪ್ರೀತಿಸುವ ಸ್ವಾರ್ಥಿಯಾಗಿ ಅವಳು ಕಾಣಿಸಿಕೊಳ್ಳುತ್ತಾಳೆ. ಇಂದಿರಾಳ ಪ್ರೀತಿ ಸಹಜವಾದದ್ದು . ಆಕೆಗೆ ತಾನು ಹೆತ್ತ ಮಗನ ಮೇಲಿನ ವಾತ್ಸಲ್ಯವಿರುವುದೂ ಸಹಜವಾದದ್ದೇ. ಅದನ್ನು ಕೂಡ ಮಾಸ್ತಿ ತಾಯ್ತನದ ಜವಾಬ್ದಾರಿಯನ್ನು ಹೆಣ್ಣಾದವಳು ಹೊರಬೇಕಾಗುತ್ತದೆ ಎಂಬುದನ್ನು ಸಂಸ್ಕೃತಿಯ ಹಿನ್ನೆಲೆಯಿಂದಲೇ ಹೇರುತ್ತಾರೆ.

ಅಂದರೆ ಮಾಸ್ತಿ ಕತೆಗಳಲ್ಲಿ ಬರುವ ಸ್ತ್ರೀಯರೆಲ್ಲರೂ ತಾಯ್ತನವನ್ನು ಗೌರವಯುತವಾದದ್ದು ಹಾಗೂ ಅನಿವಾರ್ಯವಾದದ್ದು ಎಂಬ ನೆಲೆಯಲ್ಲಿ ಒಪ್ಪಿಕೊಂಡಿದ್ದಾರೆ. ಮನುಷ್ಯ ಲೋಕದ ಉಳಿವು, ಬೆಳವಣಿಗೆಯ ನಿಟ್ಟಿನಲ್ಲಿ ಆ ಪ್ರಕ್ರಿಯೆಯನ್ನು ಅನಿವಾರ್ಯವಾಗಿರುವುದನ್ನು ಇಲ್ಲಿನ ಸ್ತ್ರೀಯರು ಒಪ್ಪಿಕೊಂಡು ಪಾಲಿಸಬೇಕೆಂಬುದನ್ನು ಮಾಸ್ತಿ ಪ್ರತಿಪಾದಿಸಿದ್ದಾರೆ. ಅವರ ಪರಿಣಾಮವಾಗಿಯೇ ಅತಿ ಪ್ರೀತಿಯಿಂದ ಅದನ್ನು ಸ್ವೀಕರಿಸುವಂತೆ ಅವರನ್ನು ತಯಾರುಗೊಳಿಸಿದ್ದಾರೆ. ಆ ಸ್ವೀಕಾರದೊಂದಿಗೆ, ಅದಮ್ಯ ಪ್ರೀತಿ, ಮಮತೆ, ಕರುಳಕುಡಿ ಎಂಬ ಅತಿ ಕಾಳಜಿಯನ್ನು ಅಳವಡಿಸಿಕೊಂಡು ಸ್ಪಂದಿಸುವ ನಿಟ್ಟಿನಲ್ಲಿ ಅವಳನ್ನು ಸಿದ್ಧಿಗೊಳಿಸುವ ಕಾರ್ಯ ಮಾಡಿದ್ದಾರೆ. ಅಲ್ಲಿನ ಸ್ತ್ರೀಯರು ಪುರುಷ ಆಲೋಚನೆ ಹೇರಿದ ಕಟ್ಟಳೆಗಳನ್ನು ಒಪ್ಪಿಕೊಂಡು ಬಾಳುವುದೇ ಹೆಣ್ಣಿನ ಬದುಕಿನ ಮೌಲ್ಯವೆಂದು ಅದನ್ನು ಬಾಳಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ತಾಯಿಯಾಗುವುದೇ ಹೆಣ್ಣಿನ ಬದುಕಿನ ಸಾರ್ಥಕ್ಯ ಎಂಬ ಭ್ರಮೆ ಹುಟ್ಟಿಸುವ ಕೆಲಸವನ್ನು ಇಲ್ಲಿನಿರಾತಂಕವಾಗಿಯೇ ನಡೆಸಿದ್ದಾರೆ.

ಔದಾರ್ಯದ ಉರುಳಲ್ಲಿ

ಮಾಸ್ತಿ ಅವರ ಕತೆಗಳಲ್ಲಿ ಉದಾರವಾದೀ ಧೋರಣೆಯೂ ಒಂದು ಮೌಲ್ಯವಾಗಿಯೇ ಮೆರೆಯುತ್ತದೆ. ಅದನ್ನು ಪ್ರತಿನಿಧಿಸುವ ಮಹಿಳೆಯರೂ ಕತೆಗಳಲ್ಲಿ ಕಾಣಿಸುತ್ತಾರೆ. ಪುರಾಣದ ಸ್ತ್ರೀಯರೇ ಅದನ್ನು ನಿರ್ವಹಿಸುವ ಪ್ರಧಾನ ಪಾತ್ರ ವಹಿಸುತ್ತಾರೆ. ಪುರಾಣದ ಚೌಕಟ್ಟಿನೊಳಗೆ ಶ್ರೀಕೃಷ್ಣನ ಉದಾರವಾದಕ್ಕೆ ನೆರವಿನ ಹಸ್ತ ಚಾಚುವುದು, ಪ್ರತಿಯೊಬ್ಬರನ್ನೂ ಪ್ರೀತಿಸುವುದು ಸಾಧ್ಯವಾಗುವುದು 'ಕುಚೇಲನ ಭಾಗ್ಯ' ಕತೆಯ ರುಕ್ಮಿಣಿಯಿಂದ. ಪ್ರೀತಿಯಿಂದ ಕುಚೇಲನನ್ನು ಉಪಚರಿಸುವ ರುಕ್ಮಿಣಿಯೇ ಆತನನ್ನು ಆರ್ಥಿಕ ಬಡತನದಿಂದ ಶ್ರೀಮಂತವಾಗುವ ಬಗೆಗೆ ನೆರವಾಗುತ್ತಾಳೆ, ಮಾರ್ಗದರ್ಶನ ನೀಡುತ್ತಾಳೆ. ಜನ ಸಾಮಾನ್ಯರ ಬದುಕಿನ ಸಂದರ್ಭದಲ್ಲಿ ಅಂಥ ಉದಾರನೀತಿ ತಳೆಯುವುದು ಸಾಧ್ಯವೇ ಎಂದು ಅಚ್ಚರಿ ಮೂಡಿಸುವಂಥ ಸ್ವಭಾವ ಮೈಗೂಡಿಸಿಕೊಂಡ ರುಕ್ಮಿಣಿ ಇಲ್ಲಿ ದೇವತೆಯಾಗಿ ಪರಿಚಿತಗೊಳ್ಳದೆ ಓರ್ವ ಸಾಮಾನ್ಯ

ಸ್ತ್ರೀಯಂತೆಯೇ ಕಾಣಿಸಿಕೊಂಡು ಇತರರೂ ಅಂತೆಯೇ ಬದುಕುವುದಕ್ಕೆ ಪ್ರೇರಣೆಯಾಗುತ್ತಾಳೆ. ಅದು ಭಾರತೀಯ ಸಂಸ್ಕೃತಿಯೊಳಗಿನ ಹೆಣ್ಣಿನ ಸ್ವಭಾವಕ್ಕೆ ಹೊಂದುವಂಥದ್ದೇ. ಇದು ಅದೇ ಸ್ವಭಾವವನ್ನು ಇತರ ಸ್ತ್ರೀಯರೂ ಹೊಂದಿಸಿಕೊಳ್ಳಬೇಕಾದದ್ದರ ಕುರಿತ ಪ್ರತಿನಿಧೀಕರಣವಾಗಿದೆ.

ಅದಕ್ಕೂ ಭಿನ್ನವಾಗಿ ಹೆಣ್ಣಿನಲ್ಲಿ ಔದಾರ್ಯ ಜಿನುಗುವುದು 'ಹೇಮಕೂಟದಿಂದ ಬಂದ ಮೇಲೆ' ಕತೆಯ ಶಕುಂತಲೆಯಲ್ಲಿ. ಆಕೆಯಲ್ಲಿನ ಸರಳ, ಶಾಂತ, ಸ್ವಭಾವ ಮೈವೆತ್ತ ಬಗೆಯನ್ನು ಮಾಸ್ತಿಯವರು ~~ಅರ್ಥ ಮಾಡಿಕೊಳ್ಳುವಂತೆಯೇ~~ ಪರಿಚಯಿಸಿದ್ದಾರೆ. ತನ್ನನ್ನು ತಾನು ಪ್ರೀತಿಸುವ, ಕಷ್ಟದಲ್ಲಿ ನೊಂದು-ಬೆಂದು ಹೋದ ಶಕುಂತಲೆಯ ಸಂಯಮದ ಸ್ವಭಾವವನ್ನು ಉದಾತ್ತೀಕರಿಸಿದ್ದಾರೆ. ಆಕೆಯ ದುರಂತ ಬದುಕಿಗಿಂತ ಇಲ್ಲಿ ಅವಳು ಆ ಬಳಿಕ ಹೊಂದಾಣಿಕೆ ಮಾಡಿಕೊಂಡು ನಡೆದ ರೀತಿ ಪ್ರಾಧಾನ್ಯ ಪಡೆದಿರುವುದಾಗಿ ಹೇಳಿದ್ದಾರೆ. ಶಕುಂತಳೆಯ ಉದಾರ ಸ್ವಭಾವ ಅವಳು ಕೇವಲ ದುಷ್ಯಂತನ ಪತ್ನಿಯಾಗಿದ್ದರೆ ಅಷ್ಟು ಮುಖ್ಯದ್ದಾಗುತ್ತಿರಲಿಲ್ಲ. ಪಟ್ಟದ ರಾಣಿಯಾದ ಮೇಲೂ ಆಕೆಯ ಉದಾತ್ತ ಗುಣಗಳು ಮುಂದುವರಿಯುವುದು, ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ಕಡೆಗೇ ತುಡಿಯುವುದು ಪ್ರಾಮುಖ್ಯವಾಗುತ್ತದೆ. ಆಕೆ ಪ್ರತಿಯೊಬ್ಬರನ್ನೂ ಪ್ರೀತಿಸುತ್ತಾ, ಯಾರನ್ನೂ ನೋಯಿಸದೆ ಬದುಕುತ್ತ ದೊಡ್ಡವಳಾದವಳು.

ಸಾಮಾನ್ಯ ಸ್ತ್ರೀಯರು ಮನೆಗಳಲ್ಲಿ ವಾಸಿಸುವವರು. ಅವರು ತಮ್ಮ ಕುಟುಂಬದ ಸಹಜ ಸಂದರ್ಭಗಳೊಂದಿಗೆ ಏಗಬೇಕಾದವರು. ಹಾಗೆ ಬದುಕು ಸಾಗಿಸುತ್ತಿರುವಾಗಲೂ ಗಂಡನೇ ಅವಳಿಂದ ದೂರ ಹೋಗಿಬಿಡುವ ಸಂದರ್ಭವೂ ಇದೆ. ಮತ್ತೆ ಕೆಲವು ಸನ್ನಿವೇಶಗಳಲ್ಲಿ ಸ್ತ್ರೀಯರೇ ಗಂಡನಿಂದ ದೂರವಾಗುವ ಸಂದರ್ಭವೂ ಎದುರಾಗುತ್ತದೆ. ಈ ಎರಡೂ ಸಂದರ್ಭಗಳು ಗಂಡಸಿನ ಸ್ವಭಾವ ಬದಲಾವಣೆಯಾಗುವ ಸಾಧ್ಯತೆಗಳನ್ನು ಪ್ರತಿನಿಧಿಸುತ್ತವೆ. ಕ್ಷಮಾಗುಣ ಮೆರೆಯುವುದಕ್ಕೆ ಸ್ತ್ರೀಯೇ ಪ್ರತ್ಯಕ್ಷ ಕಾರಣಳಾಗುತ್ತಾಳೆ. ಮತ್ತೆ ಪುರುಷರ ತಪ್ಪು ನಿಲುವು, ನಡವಳಿಕೆಗಳ ನಡುವೆ ಏಗುವ ಸ್ತ್ರೀಯ ಪರಿಚಯಿಸುವಿಕೆಯಿಂದ ಅಂಥ ಪುರುಷ ಸ್ವಭಾವ ಬದಲಾಗಬೇಕು ಎಂದೇ ಪ್ರೇರಿಸುವುದಾಗಿದೆ. ಶಕುಂತಲೆ ರಾಣಿಯೊಬ್ಬಳ ಜವಾಬ್ದಾರಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡವಳಾಗಿದ್ದಾಳೆ.

ಮನುಷ್ಯ ಸಂಬಂಧವನ್ನು ಗಟ್ಟಿಗೊಳಿಸುವ ನೆಲೆಯಲ್ಲಿ ಶಕುಂತಲೆ ಮುಖ್ಯಳಾಗುತ್ತಾಳೆ. ಬದುಕಿನ ಪಾಠ ಅವಳನ್ನು ಬಹಳಷ್ಟು ತಿದ್ದಿತ್ತು. ಮನುಷ್ಯತ್ವದ ಎಲ್ಲ ಸ್ವಭಾವಗಳನ್ನು ಅವಳು ಮೈಗೂಡಿಸಿಕೊಂಡಿದ್ದಳು. ತನ್ನ ರಾಜನ ಮನವನ್ನು ಆಕ್ರಮಿಸಿದ್ದ, ಅರಮನೆಯ ರಾಣಿ ಪಟ್ಟವನ್ನು ಪಡೆದಿದ್ದ ರಾಣಿ ಹಂಸಪದಿಕೆಗೆ ಶಕುಂತಲೆ ಕೊಡುವ ಗೌರವವೇ ಆಕೆಯ ವ್ಯಕ್ತಿತ್ವದ ಉನ್ನತಿಕೆಯನ್ನು ಪ್ರತಿನಿಧಿಸುತ್ತದೆ. ಹಂಸಪದಿಕೆ ಚೆಲುವೆಯೂ ಹೌದು. ಆಕೆ ತನ್ನ ತೇಜಸ್ಸಿನಿಂದಲೂ ಆಳ್ವಿಕೆ ನಡೆಸಿದವಳು. ಆದರೆ ಶಕುಂತಲೆಯ ಪ್ರವೇಶದ ಬಳಿಕ ರಾಜ ಬದಲಾಗಿದ್ದಾನೆ. ಆತ ಅವಳನ್ನು

ಉಪೇಕ್ಷಿಸುತ್ತಾನೆ. ಅದು ಅಂದಿನ ಸಮಾಜದಲ್ಲಿ ಸಾಮಾನ್ಯವಾದರೂ ಅಮಾನವೀಯತೆಯೇ ಆಗುತ್ತದೆ. ನಿರಾಶೆಯ ಹೊರೆಯನ್ನು ಹೊತ್ತು ನಿಂತಿದ್ದ ಹಂಸಪದಿಕೆಗೆ ಶಕುಂತಲೆ ಆನಂದ ಕೊಡುವ ಜೀವಸೆಲೆಯಾಗುತ್ತಾಳೆ. ಮಗನನ್ನು ಹೆತ್ತದ್ದರಿಂದ ರಾಣಿ ಪಟ್ಟ ಪಡೆದ, ಆಶ್ರಮ ವಾಸಿಯಾಗಿದ್ದ ಶಕುಂತಲೆ ಎಲ್ಲ ಬಿಗುಮಾನವನ್ನು ತೊರೆದು ಬಾಳುವುದಕ್ಕೆ ಹೊರಡುವುದೇ ಅವಳ ದೊಡ್ಡತನವನ್ನು ತೋರಿಸುತ್ತದೆ. ಶಕುಂತಲೆ ಅಕ್ಕ ಹಂಸಪದಿಕೆಯೊಂದಿಗೆ, 'ನೀವು ನನಗೆ ಹಿರಿಯರು, ನಾನು ಅರಿಯದ ಹುಡುಗಿ, ನನ್ನನ್ನು ತಂಗಿಯಂತೆ ನೋಡಿಕೊಂಡು ತಿಳಿಯದ್ದನ್ನು ಹೇಳಿಕೊಡಬೇಕು'ಎಂದು ಕೇಳಿದಳು. ಶಕುಂತಲೆಯ ಈ ವಿನಯವನ್ನು ನೋಡಿ ಹಂಸಪದಿಕೆಗೆ ಆಶ್ಚರ್ಯವಾಯಿತು. ಅವಳು ಶಕುಂತಲೆಯನ್ನು ಹತ್ತಿರ ಕರೆದು, ಅಪ್ಪಿಕೊಂಡು, 'ಇದು ಏನು ತಂಗಿ, ನೀನು ಹೇಳುವ ಮಾತು? ರಾಜನು ನಿನ್ನ ಆಜ್ಞೆಯಂತೆ ನಡೆಯುತ್ತಾನೆ. ನಾನು ನಿನ್ನನ್ನು ಆಶ್ರಯಿಸಬೇಕು. ಹೊರತು ನೀನು ನಮ್ಮನ್ನು ಕೇಳಬೇಕಾದದ್ದೇನಿದೆ' ಎಂದಳು. ಶಕುಂತಲೆ, 'ನನಗೆ ರಾಜನ ಒಲುಮೆ ಬಹಳ ಬೇಕು. ಆದರೆ ಹಾಗೆಯೇ ತನ್ನ ಅಕ್ಕಂದಿರ ವಿಶ್ವಾಸವೂ ಇರಬೇಕು' ಎಂದು ಹೇಳಿ ಅವಳ ಮನಸ್ಸನ್ನು ಒಲಿಸಿಕೊಂಡಳು. ಅಂದಿನಿಂದ ಇವರ ಸ್ನೇಹ ಒಂದೇ ರೀತಿ ಬೆಳೆದಿತ್ತು' ಎಂದು ಮಾಸ್ತಿ ಪ್ರಸ್ತಾಪಿಸಿರುವಲ್ಲಿಯೇ ಶಕುಂತಲೆಯ ದೊಡ್ಡ ಮನಸ್ಸು ಹಾಗೂ ಹಂಸಪದಿಕೆಯ ದೊಡ್ಡತನವೂ ಪ್ರತಿನಿಧಿತವಾಗುತ್ತದೆ. ಇದು ಸ್ತ್ರೀಯರು ಹೇಗೆ ಔದಾರ್ಯದಿಂದ ವರ್ತಿಸಬೇಕೆಂಬುದನ್ನು ಪರಿಚಯಿಸುತ್ತದೆ. ಶಕುಂತಲೆ ವಿನಯ ತೋರಿದ್ದರಿಂದ ಹಂಸಪದಿಕೆ ಅದರಿಂದಾಗಿ ತನ್ನ ಬೇಗುದಿಯನ್ನೆಲ್ಲ ಮರೆತು ಆಕೆಯನ್ನು ಮಗುವಂತೆ ಕಾಣುವ ರೀತಿ ಎರಡೂ ಉದಾತ್ತವಾದವೇ ಆಗಿ ಮೆರೆಯುತ್ತದೆ.

ಶಕುಂತಲೆ ಹಂಸಪದಿಕೆಯ ಪ್ರೀತಿಯನ್ನು ಸಂಪಾದಿಸ ಬಯಸುವುದರ ಕುರಿತಂತೆ ಸಬಿಹಾ ಭೂಮಿಗೌಡ ಅವರು 'ಇಲ್ಲಿ ಉದಾತ್ತತೆಗಿಂತ ಪ್ರಭುಶಾಹಿ ವ್ಯವಸ್ಥೆಯಲ್ಲಿ ಮಹಿಳೆಗೆ ತನ್ನ ಅಸ್ತಿತ್ವದ ಅತಂತ್ರತೆಯ ಆತಂಕವೇ ಪ್ರಧಾನವಾಗಿದೆ ಎನ್ನಬಹುದು. ತನ್ನ ಈ ಪಟ್ಟದರಸಿಯ ಪಟ್ಟವು ಇನ್ನೋರ್ವಳು ರಾಜನ ಕಣ್ಣಿಗೆ ಬೀಳುವಲ್ಲಿಯವರೆಗಿನದು ಎಂಬ ಆತಂಕ ಅಥವಾ ಅರಿವು ಶಕುಂತಲೆಯ ನಡಾವಳಿಯ ಹಿಂದೆ ಪ್ರಧಾನವಾಗಿರುವುದು ಕಾಣಿಸುತ್ತದೆ' ಎಂದು ವಿಶ್ಲೇಷಿಸಿದ್ದಾರೆ.[೭]

ಶಕುಂತಲೆ ತಾನು ತವರಿಗೆ ಹೊರಡುವ ಸಂದರ್ಭವೂ ಅಕ್ಕ ಹಂಸಪದಿಕೆಗೆ ತಿಳಿಸುವ ಹಾಗೂ ಅಲ್ಲಿಗೆ ಆಕೆಯನ್ನು ತನ್ನೊಂದಿಗೆ ಆಮಂತ್ರಿಸುವ ಔದಾರ್ಯವನ್ನು ಇಲ್ಲಿ ಕಾಣುತ್ತೇವೆ. ರಾಜಮಾತೆಯ ಆಶೀರ್ವಾದದೊಂದಿಗೆ ಒತ್ತಾಯ ಮಾಡಿ ಅಕ್ಕನೊಂದಿಗೆ ತವರಿಗೆ ಹೊರಡುತ್ತಾಳೆ. ಅಲ್ಲಿಗೆ ತಲುಪಿದ ಬಳಿಕ, 'ಇವರು ನಮ್ಮ ಅಕ್ಕ, ನನ್ನನ್ನು ತಂಗಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಾರೆ'

---

೭ ಪು.೧೦೭ ಶಕುಂತಲೆಗೆ ಹೊನ್ನ ಶೂಲ, ಬಗೆ, ಸಬಿಹಾ ಭೂಮಿ ಗೌಡ ೨೦೦೧

'ನಮ್ಮ ಅಕ್ಕ, ಕೂಡ ಬರಲು ಒಪ್ಪಿದರು. ನಿಮಗೆಲ್ಲ ಅವರು ಬರುವುದು ಬಹು ಸಂತೋಷವೆಂದು ಕರೆತಂದೆನು' ಎನ್ನುವಲ್ಲಿ ಕೊಂಚವೂ ಬದಲಾಗದೆ ಆಶ್ರಮದ ಮಗುವೇ ಆಗಿ ನಡೆದುಕೊಳ್ಳುವ ರೀತಿ ಪ್ರಾಧಾನ್ಯ ಪಡೆಯುತ್ತದೆ.

ಹೋಮಾಗ್ನಿಯ ಎದುರು ಕುಳಿತ ಶಕುಂತಲೆಗೆ ಆದ ಸಹಜ ಆಸೆ, ಅನುಭವವನ್ನು ಮಾಸ್ತಿ, 'ಶಕುಂತಲೆಗೆ ಹೋಗಿ ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಆಸೆ. ಆದರೆ ಬೆಳೆದ ಹೆಣ್ಣಿಗೆ, ಚಕ್ರವರ್ತಿಯ ಪತ್ನಿಗೆ, ಚಕ್ರವರ್ತಿಯಾಗುವವನ ತಾಯಿಗೆ ಅದು ಸರಿಯಲ್ಲ. ಅವಳು ಮಗುವನ್ನು ಕುರಿತು, ಬಾರಪ್ಪ ತಾತನಿಗೆ ನಮಸ್ಕಾರ ಮಾಡು, ಎಂದು ಹೇಳಿ, ನಮಸ್ಕರಿಸುತ್ತೇನೆ ಎಂದು ತಂದೆಗೆ ಮಂಡಿಯನ್ನೂರಿದಳು' ಎಂದು ಚಿತ್ರಿಸುತ್ತಾರೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿನ ಆಲಿಂಗನ ಪದ್ಧತಿಯನ್ನು ಸೀಮಿತ ಸಂಬಂಧಕ್ಕೆ ಮಾತ್ರ ಬದ್ಧಗೊಳಿಸುವ ಮನಸ್ಥಿತಿ ಇಲ್ಲಿ ಪ್ರತಿನಿಧೀಕರಣಗೊಂಡಿದೆ.

ತಂದೆ-ಮಗಳ ನಡುವೆ ಈ ತೆರನಾದ ಅಂತರ ಬೆಳೆಯಗೊಡುವ ಅಗತ್ಯ ಇತ್ತೇ? ಈ ವಾತ್ಸಲ್ಯದ ಭಾವಕ್ಕೆ ಅದು ತಡೆಯಾಗುವ ಅವಶ್ಯಕತೆ ಇತ್ತೇ ಎಂದು ಅನ್ನಿಸುತ್ತದೆ. ಅಷ್ಟೊಂದು ವಿನಯದಿಂದ ನಡೆದುಕೊಂಡವಳಲ್ಲಿ ಅದು ಹೇಗೆ ಒಮ್ಮೆಲೇ ಅಂತರದ ಆ ಭಾವನೆ ಬರುತ್ತದೆ ಎಂಬ ಸಂದೇಹವೂ ಕಾಡುತ್ತದೆ.

ಈ ಸಂದರ್ಭದ ಕುರಿತು ಸಬಿಹಾ ಅವರೂ, 'ಆಕೆಯ ವರ್ತನೆಗಳು ಆಕೆಯ ಇಚ್ಛೆಗೆ ಅನುಗುಣವಾಗಿ ಇರಬೇಕಾದವುಗಳಲ್ಲ, ಆಕೆಯ ಗಂಡನ ಮಗನ ಸ್ಥಾನಮಾನ ಘನತೆ ಗೌರವಗಳಿಗೆ ಅನುಗುಣವಾಗಿ ರೂಪಿತವಾಗಬೇಕಾಗಿದೆ. ಇದು ಅಯಾಚಿತ ಅಲ್ಲ, ಪ್ರಜ್ಞಾಪೂರ್ವಕವಾಗಿ ಶಕುಂತಲೆಯ ಮಾತು ಹಾಗೂ ವರ್ತನೆಗಳಲ್ಲಿ ಕಾಣಿಸಿಕೊಂಡಿದೆ'[೮] ಎಂದು ಚರ್ಚಿಸಿದ್ದಾರೆ.

ಬಹುವಚನದಿಂದಲೇ ಕರೆದು ಮಾತನಾಡಿಸುವ ಶಾರ್ಙ್ಗರವನಲ್ಲಿ 'ನೀನು ನನ್ನನ್ನು ಬಹುವಚನದಿಂದ ಕರೆಯಬೇಡ ಅಣ್ಣ ಎಂದಿದ್ದರೂ ಏನಾದರೂ ನಾನು ನಿನ್ನ ತಂಗಿ. ಇನ್ನು ಅಂದು ನೀನು ಹೇಳಿದ್ದು ಆಗಿನ ಸಂದರ್ಭದಲ್ಲಿ ತಪ್ಪಲ್ಲ. ಇಂದು ಹೇಗೆ ತಪ್ಪಾದೀತು. ನೀನು ನನ್ನ ಅಣ್ಣನೆಂದು ಮಾತ್ರ ನನ್ನ ಅರಿವು, ಉಳಿದದ್ದು ನನಗೆ ಜ್ಞಾಪಕವೇ ಇಲ್ಲ' ಎಂದು ವಿನಯ ಮೆರೆಯುವ ಶಕುಂತಲೆ ಅಂಥ ಗಾಂಭೀರ್ಯ ತಳೆಯುವುದಕ್ಕೆ ಸಾಧ್ಯವೇ? ತಂದೆಯನ್ನು ಅಪ್ಪಿಕೊಳ್ಳದಂಥ ಗಾಂಭೀರ್ಯ ಇದ್ದದ್ದೇ ಹೌದಾಗಿದ್ದರೆ ಆಕೆ ಅರಮನೆಯಲ್ಲಿ, ಅರಸನ ಮನದಲ್ಲಿ ಒಡಕನ್ನು ತಂದೇ ಬಿಡುತ್ತಿದ್ದಳು. ಆದರೆ ಆಕೆ ಯಾವತ್ತೂ ದೊಡ್ಡಸ್ತಿಕೆಯನ್ನು ಏನೆಂದೂ ಅರಿತುಕೊಳ್ಳಲು ಹೋಗದಂತೆ ನಡೆಯುವುದನ್ನು ನೋಡುತ್ತೇವೆ. ಆದ್ದರಿಂದಾಗಿಯೇ ಶಕುಂತಲೆ ಉದಾರವಾದಿಯ ಪ್ರತಿನಿಧಿಯಾಗಿ ಮೆರೆಯುತ್ತಾಳೆ.

---

೮ ಪು. ೧೦೭-೧೦೮ ಶಕುಂತಲೆಗೆ ಹೊನ್ನಶೂಲ, ಬಗೆ, ಸಬಿಹಾ ಭೂಮಿ ಗೌಡ ೨೦೦೧

ಶಕುಂತಲೆಯ ಜೀವನಾನುಭವವೇ ಅವಳನ್ನು ಅಷ್ಟೂ ಅಷ್ಟು ಎತ್ತರಕ್ಕೆ ಒಯ್ದಿದೆ. ಶಕುಂತಲೆಯ ಈ ಎಲ್ಲ ನಡವಳಿಕೆಗಳನ್ನು ಪರಿಚಯಿಸುವುದು ಉದಾರವಾದಿ ಧೋರಣೆಯನ್ನು ವೈಭವೀಕರಿಸುವುದಕ್ಕಾಗಿ ಎನ್ನುವುದು ನಿಜ: ಆದರೆ ಅದೇ ವೈಭವೀಕರಣವೇ ಭಾರತೀಯ ಮೂಲದ ಸ್ತ್ರೀಯೋರ್ವಳು ಬಾಳಿದ ರೀತಿಯ ಪ್ರತಿನಿಧೀಕರಣವಾಗುತ್ತದೆ. ಆಕೆಯ ಸ್ವಭಾವದ ಕುರಿತ ಮೆಚ್ಚುಗೆಯ ಹಿಂದಿನ ಮನಸ್ಸು ಪಾರಂಪರಿಕ ಸ್ತ್ರೀ ಪುರುಷ ನಿಷ್ಠೆಯ ಬಾಳನ್ನು ಬಾಳುವುದಕ್ಕಾಗಿಯೇ ಇರುವುದು ಎಂಬುದನ್ನು ಆಕೆಯ ಮೂಲಕ ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ಹೇಳುವಂತಾಗಿದೆ. ಹೆಣ್ಣಿನ ವ್ಯಕ್ತಿತ್ವವೊಂದನ್ನು ರೂಪಿಸಿಕೊಂಡು ಬೆಳೆಸಿ ಬಾಳುವುದಕ್ಕೆ ಬಹುತೇಕ ಅವಕಾಶವನ್ನು ಇಲ್ಲಿ ಕೊಡುವುದೇ ಇಲ್ಲ. ಅವರ ಉದಾರವಾದ ದೃಷ್ಟಿಕೋನದ ಹಿಂದೆ ಹೆಣ್ಣು ತಗ್ಗಿ ಬಗ್ಗಿ ನಡೆಯಬೇಕೆಂಬುದರ ಪ್ರತಿಪಾದನೆ ಇದೆ. ಆದ್ದರಿಂದಲೇ ಹೆಣ್ಣು ತೆಗೆದುಕೊಂಡ ನಿರ್ಧಾರ ತಪ್ಪಾಗುವಂತೆ, ಮರಳಿ ಗಂಡನ ಬಳಿಗೇ ಬರುವಂತೆ, ಹೆಣ್ಣು ಗಂಡನಿಗೆ ನಿಷ್ಠೆಯಿಂದ ಇರುವಂತೆ, ಗೃಹಿಣಿಯಾಗಿ ಹಾಗೂ ಪತಿವ್ರತೆಯಾಗಿಯೇ ಇರುವಂತೆ ಎಚ್ಚರ ವಹಿಸಿದ್ದಾರೆ. ಅದನ್ನು ಜಾನಪದ, ಐತಿಹಾಸಿಕ, ಪೌರಾಣಿಕ ಹಾಗೂ ಪಾಶ್ಚಾತ್ಯ ಸ್ತ್ರೀ-ಪುರುಷರ ನಡುವಣ ಬದುಕಿನ ನಿರ್ಧಾರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಇದು ಇಂದಿನ ಕಾಲಘಟ್ಟದಲ್ಲಿ ನಿಂತು ಚರ್ಚಿಸುವುದಾಗಿದೆ. ಇಂದು ಬೆಳೆದ ಆಲೋಚನೆ, ಸ್ತ್ರೀವಾದದ ದೃಷ್ಟಿಯಿಂದ ಕತೆಗಳ ಸ್ತ್ರೀ ಪಾತ್ರಗಳನ್ನು ವಿವೇಚಿಸಿದಾಗ ಮಾಸ್ತಿಯವರ ಧೋರಣೆಗಳು ಸ್ತ್ರೀವಾದಕ್ಕೆ ಹತ್ತಿರವಾಗಿಯೇ ಇವೆ ಎಂಬ ತೆರನಾದ ರೀತಿಯಲ್ಲಿ ಭ್ರಮೆ ಹುಟ್ಟಿಸುತ್ತವೆ.[೯] ಆದರೆ ಅಂತ್ಯದಲ್ಲಿ ಆಕೆ ಕಾಣುವ ಸೋಲಿನ ಮೂಲಕ ಪುರುಷನ ಅಧೀನತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬುದನ್ನು ಸಾಧಿಸುತ್ತಾರೆ. ಬದುಕಿನ ಕುರಿತ ಕಾಳಜಿ ಇರುವ ಮಾಸ್ತಿಗೆ ಮುಖ್ಯವಾಗುವುದು ಕೇವಲ ಮಾನವೀಯ ನೆಲೆಯಿಂದ ಬದುಕು ಸಾಗಿಸಬೇಕಾದ ಅಲ್ಲಿನ ತತ್ವ ಸಂದೇಶಗಳು. ಆದರೆ ಹೆಣ್ಣಿನ ವ್ಯಕ್ತಿತ್ವ ಉಳಿಸಿಕೊಳ್ಳುವ ಕುರಿತು ಮಾಸ್ತಿ ಮೌನ ತಳೆಯುತ್ತಾರೆ.

ಸಹನೆ, ತಾಳ್ಮೆಗಳ ಪ್ರತಿಮೂರ್ತಿಯಾಗಿ

ಮಾಸ್ತಿ ಸ್ತ್ರೀ ಸಹನಾಮಯಿಯಾಗಿರಬೇಕು, ಮಮತಾಮಯಿಯಾಗಿರಬೇಕು, ತಾಳ್ಮೆಯ ಸಾಕಾರಮೂರ್ತಿಯಾಗಿರಬೇಕು ಎಂಬುದನ್ನೇ ಪ್ರತಿಪಾದಿಸುವವರು. ಎಂಥ ಸಂಘರ್ಷಾತ್ಮಕ ಸನ್ನಿವೇಶಗಳನ್ನೂ ಕೂಡ ಸಂಯಮದಿಂದ ಪರಿಹರಿಸಬೇಕೆಂಬುದನ್ನೇ ಅವರು ಬಿತ್ತರಿಸುತ್ತಾರೆ. ಕಲಹ ಬಯಸದ ಮಾಸ್ತಿ ಎಂಥದ್ದೇ ಉದ್ರಿಕ್ತ ಸನ್ನಿವೇಶಗಳಲ್ಲಿ ಕೂಡ ಘಟಿಸಬಹುದಾಗಿದ್ದ ಸಂಘರ್ಷ ಹಾಗೂ ದುರಂತವನ್ನು ತಪ್ಪಿಸುತ್ತಾರೆ.

---

೯ ಈ ಕುರಿತು ಸಬಿಹಾ ಭೂಮಿಗೌಡ ಅವರು ಚರ್ಚಿಸಿರುವ ಬಗೆಯನ್ನು ಪ್ರಸ್ತುತ ಪ್ರಬಂಧದ ಮೊದಲ ಅಧ್ಯಾಯದಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.

ಮಾಸ್ತಿಯವರ ಕಲಹ ಬಯಸದ ಸ್ವಭಾವದ ಬಗೆಗೆ, 'ಮಾಸ್ತಿ ಅವರು ಅವರ ತಲೆಮಾರಿನ ಇತರ ಬರಹಗಾರರಂತೆ ಭಾವಾವೇಶಕ್ಕೆ ಒಳಗಾಗದೇ ಸಂಯಮದಿಂದ, ಸಮಾಧಾನಚಿತ್ತದಿಂದ ತಮ್ಮ ಪಾತ್ರಗಳನ್ನು ಚಿತ್ರಿಸುತ್ತಾರೆ. ಇವರ ಪಾತ್ರಗಳು ಸಂಘರ್ಷದ ಸ್ಥಿತಿಗೆ ತಮ್ಮನ್ನು ಒಡ್ಡಿಕೊಳ್ಳದಂತೆ ಚಿತ್ರಿತವಾಗಿರುವುದು ತಾಂತ್ರಿಕ ಜಾಣ್ಮೆಯೂ ಆಗಿದೆ'[೧೦] ಎಂದು ಎಂ. ಗಾಯತ್ರಿ ಚರ್ಚಿಸಿದ್ದಾರೆ.

ಸಂಘರ್ಷವಿಲ್ಲದ ಶಾಂತಿಯುತ ಬದುಕು ಸಾಗಿಸಬೇಕು ಎಂಬ ನಂಬಿಕೆಯ ಮಾಸ್ತಿ ತಳೆಯುವ ನಿಲುವನ್ನು ಒಪ್ಪಿಕೊಳ್ಳುವ ಅವರ ಕತೆಗಳ ಸ್ತ್ರೀಯರು ಆಂತರ್ಯದ ಎಲ್ಲಾ ಭಾವನೆಗಳನ್ನು ಹೊರಗೆಡಹುವುದಿಲ್ಲ. ಅವರನುಭವಿಸುವ ನೋವು, ಖುಷಿ ಮಾಸ್ತಿಗೆ ಮುಖ್ಯವಾಗುವುದಿಲ್ಲ. ತನ್ನ ಕರ್ತವ್ಯಗಳನ್ನು ಪೂರೈಸುವುದಷ್ಟೇ ಅವಳ ಧ್ಯೇಯವಾಗಿರಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತಾರೆ. ಹೆಣ್ಣು ಅನುಭವಿಸುವ ಬದುಕಿನ ವಿವಿಧ ಸಂದರ್ಭಗಳಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಲೇ ಹೋಗುತ್ತಾಳಾದರೂ ಅವಳ ಅಂತರಂಗ ಇಲ್ಲಿ ತೆರೆದುಕೊಳ್ಳುವುದಿಲ್ಲ. ಹೆಣ್ಣು ಅವಳ ಬದುಕಿನಲ್ಲಿ ಎದುರಿಸುವ ವಿವಿಧ ಘಟ್ಟ, ಸಂದರ್ಭಗಳನ್ನು ಮಾಸ್ತಿ ಪರಿಚಯಿಸುತ್ತಾರೆಯೇ ಹೊರತು ಅವಳ ಭಾವನೆಗಳಿಗೆ ಸರಿಯಾದ ಸ್ಥಾನ ದೊರಕಿಸುವುದಿಲ್ಲ. ಪರಿಸ್ಥಿತಿಗೆ ತನ್ನನ್ನು ತಾನು ಹೊಂದಿಸಿಕೊಳ್ಳುವ ಅನಿವಾರ್ಯತೆಗೆ ಅವಳನ್ನು ಪಕ್ಕಾಗಿಸಿದ್ದಾರೆ.

ವೈದಿಕ ಮನೆತನದ ಸ್ತ್ರೀಯರಂತೂ ಪಿತೃ ಪ್ರಧಾನ ಮೌಲ್ಯಗಳಿಗೆ, ಸಮಾಜಕ್ಕೆ ತೀರಾ ಒಗ್ಗಿಕೊಂಡು ಅದನ್ನು ಪ್ರಶ್ನಿಸಲಾರದೇ ಬದುಕುವವರು. ಅವರು ಅವರ ಇಷ್ಟ, ಬೇಕು ಬೇಡಗಳನ್ನು ಹಳಹಳಿಕೆಗಳನ್ನು ವ್ಯಕ್ತಪಡಿಸುವುದಿಲ್ಲ. ಜಡ ಸಾಂಪ್ರದಾಯಕ ಬದುಕಿನ ಪ್ರಕಾರ ಹೆಣ್ಣೊಬ್ಬಳು ಯಾವುದೇ ನಿಲುವನ್ನು ತಡೆಯಲಾಗದ ಗಂಡನ ಆಲೋಚನೆಯನ್ನೇ ಅನುಸರಿಸುವ ಪದ್ಧತಿಗೆ ಒಳಗಾಗಿದ್ದಾರೆ. ಎಂಥದ್ದೇ ಪರಿಸ್ಥಿತಿಗೂ ಕೂಡ ಅದಕ್ಕೆ ಕೊರಳೊಡ್ಡಿ ಕೂರುವವರೇ ಬಹುತೇಕ ಮಂದಿ. ಒಂದು ವೇಳೆ ಅದಕ್ಕಿಂತ ಭಿನ್ನವಾಗಿ ಇಲ್ಲಿನ ಸ್ತ್ರೀಯರು ವರ್ತಿಸಿದ್ದೇ ಆದರೆ ಬದುಕು ನುಚ್ಚುನೂರಾಗುತ್ತದೆ, ಶಾಂತಿಗೆಡುತ್ತದೆ. ಹಾಗಾಗಬಾರದೆಂಬುದರಿಂದಲೇ ಮಾಸ್ತಿ ಅದನ್ನು ತಡೆಯುತ್ತಾರೆ. ಈ ತಡೆಯುವಿಕೆಯ ಹಿಂದೆ ಹೆಣ್ಣಿನ ಸಹನೆಯ ವೈಭವೀಕರಣವೂ ಇದೆ. ಗಂಡ ಬಿಟ್ಟಾಗ ಆತ ಮರಳಿ ಬಂದಾಗ, ಅಸಹನೀಯ ಹಿಂಸೆ ಕೊಟ್ಟಾಗಲೂ ಹೆಣ್ಣಾದವಳು ಸಹನೆಯಿಂದಲೇ ಇರಬೇಕೆಂಬ ಸಂದೇಶವನ್ನು ಕೊಡುತ್ತಾರೆ. ಕುಟುಂಬವೊಂದು ಮುನ್ನಡೆಯಬೇಕಾದ ಸಂದರ್ಭದಲ್ಲಿ ಸಂಘರ್ಷಕ್ಕೆ ಎಡೆಕೊಡಬಾರದು ಎಂಬ ತತ್ವವನ್ನೇ ಇಲ್ಲಿ ಪ್ರತಿಪಾದಿಸಿದ್ದಾರೆ. ನಡೆಯಬಹುದಾಗಿದ್ದ ಜಗಳ ವಾಗ್ಯುದ್ಧಗಳು ಕೂಡಾ ತಿರುವು ಪಡೆದುಕೊಳ್ಳುವಂತೆ ಮಾಡಿದ್ದಾರೆ. ಆದುದರಿಂದಲೇ ಹೆಣ್ಣಿನ ಹಳಹಳಿಕೆ, ವೇದನೆ, ಸಂತಸಗಳೆಲ್ಲಾ

---

೧೦ ಪು. ೧೨೬ ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ವಿಕಾಸ ಮತ್ತು ಸ್ತ್ರೀ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ವಿವಧ ಲೇಖಕರು ೧೯೯೩

ಕತೆಗಳಲ್ಲಿ ಬಾಯಿ ಇಲ್ಲದೇ ಮೂಕವಾಗಿ ಬಿಡುತ್ತವೆ. ಮೂಕರೋದನವನ್ನು ಕೂಡ ಅವರು ಪರಿಚಯಿಸುವುದಿಲ್ಲ. ಅದರಲ್ಲೂ ಎಲ್ಲರೂ ಅನುಸರಿಬಹುದಾದ ಎಲ್ಲರಿಗೂ ಮಾದರಿಯಾಗುವ ವೈದಿಕ ಕುಟುಂಬದ ಸ್ತ್ರೀಯರಂತೂ ಏರು ಧ್ವನಿಯಲ್ಲಿ ಮಾತನಾಡುವುದಾಗಲೀ ದುಃಖಿಸುವುದಾಗಲೀ ಸಲ್ಲದು ಎಂಬಂತೆ ಜಾಗೃತೆ ವಹಿಸಿದ್ದಾರೆ. ಆ ಜಾಗೃತೆಯೇ ಸಂಘರ್ಷವನ್ನು ತಡೆಯುತ್ತದೆ. ಅಂಥ ಬದುಕಿನ ಮಾದರಿಯಾಗಿ ಅಲ್ಲಿ ಸ್ತ್ರೀಯರನ್ನೇ ತೋರಿಸಿಕೊಡುತ್ತಾರೆ. ಕೆಲವು ಸ್ತ್ರೀಯರು ಕುಟುಂಬದಿಂದ ಸಿಡಿಯುವುದು ಸಹನೆಯ ಕೊನೆಯ ಹಂತದಿಂದ ಮಾತ್ರ ಎನ್ನಬಹುದು. ಒಂದು ವೇಳೆ ಸಿಡುಕಿನಿಂದ ತೆಗೆದುಕೊಂಡ ನಿರ್ಧಾರಗಳು ಕೂಡಾ ಇಲ್ಲಿ ತಿರುಗೇಟು ಹೊಡೆದುದರ ಪರಿಣಾಮವಾಗಿ ಮರಳಿ ಮೊದಲಿನ ರೀತಿಗೆ ಬರುವವರೂ ಇದ್ದಾರೆ. ಪತಿಯೇ ಪರದೈವ ಎಂದು ನಂಬಿದ ಮಾಸ್ತಿ ಕತೆಗಳ ವೈದಿಕ ಸ್ತ್ರೀಯರು ಗಂಡನಿಗಾಗಿ ಏನು ಮಾಡುವುದಕ್ಕೂ ಸಿದ್ಧರಾಗಿರುತ್ತಾರೆ. ಅವನ ಎಲ್ಲಾ ನಿರ್ಧಾರಗಳಿಗೂ ಕೂಡ ಇಲ್ಲಿನ ಸ್ತ್ರೀಯರು ತೆಪ್ಪಗಿರುತ್ತಾರೆ. ಅವರು ಅದನ್ನು ಪ್ರಶ್ನಿಸುವುದು ಭಾರತೀಯ ಸಂಪ್ರದಾಯದ ಪ್ರಕಾರ ಅಪರಾಧವಾಗುತ್ತದೆ. ಈ ತೆಪ್ಪಗಿರುವಿಕೆಯೇ ಅವರು ಬಾಳಬೇಕಾದ ರೀತಿಯ ಪರಿಸ್ಥಿತಿಯನ್ನು ಪರಿಚಯಿಸುತ್ತದೆ. ಅದು ಮೌಲ್ಯಯುತವಾದದ್ದಾಗಿ ಇಲ್ಲಿ ಪ್ರತಿನಿಧೀಕರಣಗೊಂಡಿದೆ.

ಸ್ತ್ರೀ ಎದುರಿಸುವ ಸಮಸ್ಯೆ ಮತ್ತು ಆ ಸಂದರ್ಭ ಅವಳು ಸ್ವೀಕರಿಸಿದ ಬಗೆಯನ್ನು

೧. ಗಂಡನಿಂದ ದೂರಾದ ಸ್ತ್ರೀಯರು ಬದುಕನ್ನು ಎದುರಿಸುವ ಸಂದರ್ಭ

೨. ಗಂಡ ತೊರೆದ ಹೆಣ್ಣಿನ ಬದುಕು, ಮರಳಿ ಬಂದಾಗ ಅವನನ್ನು ಸ್ವೀಕರಿಸುವ ಸಂದರ್ಭಗಳಲ್ಲಿ ಚರ್ಚಿಸಬಹುದಾಗಿದೆ.

೧. ಗಂಡನಿಂದ ದೂರಾದ ಸ್ತ್ರೀಯರು ಬದುಕನ್ನು ಎದುರಿಸುವ ಸಂದರ್ಭಕ್ಕೊಳಗಾದ ಸ್ತ್ರೀಯರ ಮನಸ್ಸು ತಾಕಲಾಟ ಗೊಂದಲಗಳು ಇಲ್ಲಿ ಬಿತ್ತರಗೊಳ್ಳುವುದಿಲ್ಲ. ಅದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ಮಾಸ್ತಿ ಯಾಕೆ ಮುಂದಾಗಿಲ್ಲ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಅದು ಅವರಿಗೆ ಮುಖ್ಯವಲ್ಲ. ಅವರಿಗೆ ಪರಂಪರೆ ಉಳಿಸುವ ಸಂಪ್ರದಾಯಕ ನಿಲುವಿಗೆ ಸ್ತ್ರೀಯರು ಬದ್ಧರಾಗಿರುವುದೇ ಮುಖ್ಯ. ಹೆಣ್ಣಿಗೆ ಎದುರಾಗುವ ಎಲ್ಲ ಸಂದರ್ಭಗಳಿಗೂ ತಗ್ಗಿ ನಡೆದುಕೊಂಡು ಜೀವನ ನಡೆಸುವ ರೀತಿಯೇ ಮೌಲ್ಯಯುತವಾದದ್ದೆಂದು ಒಪ್ಪಿಕೊಂಡು ಬಾಳುವಂತೆ ಮಾಸ್ತಿ ತಿಳಿಸುತ್ತಾರೆ.

ಹೆಣ್ಣೇ ಗಂಡನನ್ನು ತೊರೆದು ಬಾಳಬೇಕಾದ ಸಂದರ್ಭವನ್ನು ಕೆಲವೆಡೆ ಮಾಸ್ತಿ ಹೆಣ್ಣಿಗೆ ಕೊಡುತ್ತಾರೆ. ಅದು ಆಕೆಯ ಸಹನೆಯ ಕೊನೆಯ ಘಟ್ಟದ ಪ್ರತಿಕ್ರಿಯೆಯಾಗುತ್ತದೆ. ಹಾಗಲ್ಲದೆ ಆಕೆ ಬಿಟ್ಟು ಹೋಗುವ ಪರಿ ಬದುಕನ್ನು ಅಪಾರವಾಗಿ ಪ್ರೀತಿಸುವ ಮಾಸ್ತಿಗೆ ಸರಿ ಕಾಣುವುದಿಲ್ಲ. ಅದು ಮಾನವ ಲೋಕದ ಬೆಳವಣಿಗೆಗೆ ಸಹಕಾರಿಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಹೆಣ್ಣಿಗೆ ಸಹನೆ

ಅಗತ್ಯವಾಗಿರಬೇಕು ಎಂದು ತೋರಿಸುತ್ತಾರೆ. ಈ ಸಹನೆಯ ಹಿಂದಿನ ಸ್ತ್ರೀಯ ಮಾನಸಿಕ ವೇದನೆಯಾಗಲೀ ಅವಳನ್ನು ನಡೆಸಿಕೊಳ್ಳುವ ಗಂಡಿನ ನಡವಳಿಕೆಯಾಗಲೀ ಇಲ್ಲಿ ಪ್ರಕಟಗೊಳ್ಳುವುದಿಲ್ಲ. ಅದು ಅವಳಿಗೆ ಅನಿವಾರ್ಯ ಎಂದಷ್ಟೇ ಹೇಳುತ್ತಾರೆ. 'ನಳಿನಿಯ ತಂದೆ' ಕತೆಯ ಲಕ್ಷ್ಮಿ ನಿತ್ಯ ಮನೋವೇದನೆ ನೀಡಿದ ಗಂಡನನ್ನು ತೊರೆಯುವ ನಿರ್ಧಾರಕ್ಕೆ ಬರುವುದು ಸಹನೆಯ ಕೊನೆಯ ಉತ್ತರವಾಗಿ ಮಾತ್ರ.

ವೈದಿಕ ಮನೆತನದ ಹೆಂಗಸಾಗಿರುವ ಆಕೆ ಬದುಕನ್ನು ಗಂಭೀರವಾಗಿ ತೆಗೆದುಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಸಾಗಿಸುವ ಶ್ರದ್ಧೆವುಳ್ಳವಳು. ಆದರೆ ಈ ಶ್ರದ್ಧೆ ಅವರನ್ನು ಅವರ ಬದುಕನ್ನು ನೇರವಾಗಿ ನಡೆಸುವುದಕ್ಕೆ ಬಿಡುವುದಿಲ್ಲ. ಅವಳ ಪತಿ ಭಕ್ತಿ, ಪ್ರೀತಿ, ನಂಬಿಕೆ, ವಿಶ್ವಾಸಗಳು, ಅವಳಿಗೆ ಪ್ರತಿಯಾದ ಫಲವನ್ನು ಕೊಡುವುದಿಲ್ಲ. ಅವಳ ನಿಷ್ಠೆಯನ್ನೇ ಒಂದು ದೌರ್ಬಲ್ಯವಾಗಿ ಕಾಣುವ ಆತ ವಿದ್ಯಾಭ್ಯಾಸಕ್ಕೂ ಮುನ್ನ ಮದುವೆಯಾದರೂ ಅವಳೊಂದಿಗೆ ಬಾಳುವುದಕ್ಕೆ ನಾನಾ ಕಾರಣಗಳಿಂದ ಹಿಂದೇಟು ಹಾಕುವುದಲ್ಲದೆ ಅವಳನ್ನು ತುಚ್ಛವಾಗಿ ಕಾಣುವುದಕ್ಕೆ ಮುಂದಾಗುತ್ತದೆ. ಆದರೆ ಇಲ್ಲಿ ಆಕೆ ತುಂಬಾ ಅವಮಾನ ಪಟ್ಟಳು ಎಂದು ಪರಿತಪಿಸಿದ್ದಾರೆ. ಈ ಅವಮಾನವೇ ಇವನು ಅಯೋಗ್ಯ ಎಂದು ಬೇಸರದಿಂದ ತೀರ್ಪು ಕೊಡುವುದಾಗುತ್ತದೆ. ದಿನಗಳೆದಂತೆ ಮನಸ್ಸನ್ನು 'ಈ ಗಂಡನಿಂದ ಸುಖವನ್ನು ನಿರೀಕ್ಷಿಸಬಾರದು, ಎಷ್ಟಾದರೆ ಅಷ್ಟು ತನ್ನ ಪಾಡು ಎನ್ನುವುದನ್ನು ತಾನೇ ನೋಡಿಕೊಳ್ಳಬೇಕು' ಎಂದು ನಿರ್ಧರಿಸಿಕೊಳ್ಳುತ್ತದೆ. ಬದುಕಿನ ಎಲ್ಲ ಕನಸುಗಳನ್ನು ವಿವಾಹವಾದ ಸಂದರ್ಭವೇ ದೂರ ಮಾಡಿದ್ದ ವಿಶ್ವನಾಥ ಅವಳ ಅಪ್ಪನ ಮರಣದ ಬಳಿಕ ಆಸ್ತಿಯನ್ನು ಭೋಗಿಸುವ ಅಟ್ಟಹಾಸ ಮಾಡುವುದಕ್ಕೆ ಲಕ್ಷ್ಮಿಯಿಂದ ಯಾವ ಪ್ರತಿಭಟನೆಯೂ ವ್ಯಕ್ತವಾಗುವುದಿಲ್ಲ. ಜಗಳ ಘರ್ಷಣೆ ತಿಕ್ಕಾಟಕ್ಕೆ ಕಾರಣವಾಗಬಾರದೆಂದೇ ಲಕ್ಷ್ಮಿಯ ಮನಸ್ಸು ಮೌನ ತಳೆದ ನಿರ್ಧಾರವನ್ನು 'ಲಕ್ಷ್ಮೀ ಸಂಸಾರದಲ್ಲಿ ಯಾವ ಸುಖವನ್ನಾಗಲೀ ನಿರೀಕ್ಷಿಸುವುದನ್ನು ಬಿಟ್ಟು ಬಿಟ್ಟಿದ್ದಳು. ಕಂಡ ಹಾಗೆ ಇವನೊಂದಿಗೆ ಜಗಳ ಮಾಡುವುದಕ್ಕೆ ಇವಳಿಗೆ ಇಷ್ಟವಿಲ್ಲ. ಅದಕ್ಕಾಗಿ ಎಷ್ಟೆಲ್ಲಾ ಅನ್ಯಾಯವನ್ನು ಸಹಿಸಿಕೊಂಡಿರುವಳು. ಮಗುವಿಗೆ ಸ್ವಲ್ಪ ಆಸ್ತಿ ಉಳಿದರೆ ಸಾಕು ಎಂಬುದೊಂದೆ ಅವಳ ಯೋಚನೆ. ಈ ಗಂಡನನ್ನು ನಂಬಿದರೆ ಈ ಆಶೆಯಿಲ್ಲ. ಏನು ಮಾಡುವುದು ಹೀಗೆ ಯೋಚಿಸುತ್ತಾ ಮನೆಯನ್ನು ಮಾರುವುದಕ್ಕೆ ಒಪ್ಪಬಾರದು ತನ್ನ ತಾಯದು, ತನ್ನದು ಒಡವೆ ಏನಿದೆ ಅದನ್ನು ಭದ್ರವಾಗಿ ಇಟ್ಟುಕೊಳ್ಳಬೇಕು. ಇಷ್ಟನ್ನು ಅವಳು ನಿಶ್ಚಯ ಮಾಡಿಕೊಂಡಳು' ಎಂಬ ಮಾತುಗಳು ಸ್ಪಷ್ಟಪಡಿಸುತ್ತವೆ. ಅದಲ್ಲದೆ ತಕ್ಷಣವೇ ಅವಳು ಏರುದನಿಯೆತ್ತಿ ಜಗಳ ಉಂಟು ಮಾಡಿದ್ದೇ ಹೌದಾದರೆ ಅಲ್ಲಿ ದೊರೆಯುವ ಪ್ರತಿಫಲವೇ ಬೇರೆಯಾಗುತ್ತಿತ್ತು. ಆದುದರಿಂದ ಅದಕ್ಕೆ ಅವಕಾಶ ಕೊಡದೆ ಜಾಣ್ಮೆಯಿಂದಲೇ ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಳ್ಳುತ್ತಾಳೆ. ಜಗಳವನ್ನು ಕುಟುಂಬದಲ್ಲಿ ತರಬಾರದು ಎಂಬ ಕಾರಣಕ್ಕೆ

ಲಕ್ಷ್ಮೀ ಸಹನಾಮೂರ್ತಿಯಾಗುತ್ತಾಳೆ. ಆದರೆ ಅದೇ ಸಹನೆಯ ಮನೋಧರ್ಮದ ಪರಿಣಾಮವಾಗಿಯೇ ವಿಶ್ವನಾಥ ವೇಶ್ಯೆಯ ಸ್ನೇಹ ಬೆಳೆಸುವುದು, ಅವಳಿಗೆ ಹೆಂಡತಿಯ ಒಡವೆ ಕೊಡುವುದು ನಡೆಯುತ್ತದೆ. ಆದರಿಂದಲೇ ಲಕ್ಷ್ಮಿಯ ಮನಸ್ಸು ಮುರಿಯುತ್ತದೆ. ಅದು ತನ್ನ ನೆಮ್ಮದಿಗಿಂತ ಮುಖ್ಯವಾಗಿ ತನ್ನ ಮಗು ಅಂಥ ಅಪ್ಪನ ಮಗು ಎಂದು ಗುರುತಿಸಿಕೊಂಡು ಬೆಳೆಯುವುದು ಅವಳಿಗೆ ಬೇಕಿಲ್ಲ. ಆದ್ದರಿಂದಲೇ ಅವನನ್ನು ದೂರ ಹೋಗುವಂತೆ ನಿರ್ದಾಕ್ಷಿಣ್ಯವಾಗಿ ಹೇಳುತ್ತಾಳೆ. ಇಲ್ಲಿ ಆಕೆ ಪಡೆದಿದ್ದ ಲೋಯರ್ ಸೆಕೆಂಡರಿ ವಿದ್ಯೆ ಮುಂದಿನ ವಿದ್ಯಾಭ್ಯಾಸಕ್ಕೆ ನೆರವಾಗುತ್ತದೆ. ಉದ್ಯೋಗ ಕೊಡಿಸುತ್ತದೆ. ಈ ಧೈರ್ಯವೇ ಅವಳು ಒಬ್ಬಂಟಿ ಜೀವನಕ್ಕೆ ತೊಡಗುವುದಕ್ಕೆ ಧೈರ್ಯ ಕೊಡುತ್ತದೆ. ಮಗುವನ್ನು ಸಲಹುವಲ್ಲಿ ಮತ್ತೆ ತಾನು ತನ್ನನ್ನು ಸಮರ್ಪಿಸಿಕೊಳ್ಳುವುದು, ಗಂಡ ಬಂದಾಗ ಅವನನ್ನು ನಾಜೂಕಿನಿಂದಲೇ ಸಾಗ ಹಾಕುವುದು ಅವಳ ಮನಸ್ಸಿನ ಗಟ್ಟಿತನವನ್ನು ಬೆಟ್ಟು ಮಾಡುತ್ತದೆ. ಆದರೆ ಮಗಳಿಗೆ ತಂದೆಯಾದವನ ಕೋರಿಕೆಯಂತೆ ಹತ್ತಿರದಿಂದ ಮಗಳನ್ನು ಮಾತನಾಡಿಸಲು ಬಿಡುತ್ತಾಳೆ. ಅದು ಲಕ್ಷ್ಮೀ ಗಂಡನ ಮಾತಿಗೆ ಗೌರವ ಕೊಡುವುದಲ್ಲ. ಒಂದು ನೆಲೆಯಲ್ಲಿ ಮಗಳ ಮದುವೆ ದಿನಗಳು ಹತ್ತಿರವಾಗುತ್ತಿರುವುದರಿಂದ ಮತ್ತೆ ಜಗಳ ಗದ್ದಲ ಹುಟ್ಟಿಸುವುದು ಅವಳಿಗೆ ಇಷ್ಟವಿಲ್ಲ. ಮಗಳ ಮದುವೆ ಹಾಗೂ ಬದುಕು ಆಕೆಗೆ ಮುಖ್ಯವಾದದ್ದು. ಆದ್ದರಿಂದಲೇ ಜಗಳ ತಾರಕಕ್ಕೇರಿ ಮದುವೆಗೆ ಎಲ್ಲಿ ಭಂಗ ಬರುವುದೋ ಎಂದು ಸಹನೆಗೆ ಶರಣಾಗುತ್ತಾಳೆ. ಸಮಾಜದ ಕಟ್ಟುಪಾಡು, ಮಗಳು, ಅವಳ ಭವಿಷ್ಯ ಲಕ್ಷ್ಮಿಯ ಸಹನೆಗೆ ಕಾರಣವಾಗುತ್ತದೆ. ಗಂಡ ವಿಶ್ವನಾಥ ತಂದೆಯಾಗಿ ಕರ್ತವ್ಯ ನಿಭಾಯಿಸದವನು ತಂದೆತನದ ಹಕ್ಕು ಸ್ಥಾಪಿಸಹೊರಟಾಗ ಅದನ್ನು ಪೂರ್ತಿ ತಡೆಯಲಾಗದೆ ಕೊಂಚ ಮಟ್ಟಿಗೆ ರಾಜಿ ಮಾಡಿಕೊಳ್ಳುತ್ತಾಳೆ. ಈ ರಾಜಿ ಕೇವಲ ಮಗಳ ಬದುಕಿನ ದೃಷ್ಟಿಯಿಂದ ಮಾತ್ರ ಮಾಡಿಕೊಳ್ಳುವುದಾಗಿದೆ. ತಾಯ್ತನ ಇಲ್ಲಿ ಕಲಹ ಆಗದಂತೆಯೇ ತಡೆಯುತ್ತದೆ. ಈ ತಡೆ ಹಿಡಿಯುವಿಕೆ ಮಗಳಿಗೆ ಮುಂದೆ ತೊಂದರೆಯಾಗದಂತೆ ಹಾಕುವ ಕಡಿವಾಣವಾಗಿ ಕೆಲಸ ಮಾಡುತ್ತದೆ.

'ಚೆನ್ನಮ್ಮ' ಕತೆಯ ಚೆನ್ನಮ್ಮ, 'ವೇಲೂರಿನ ಲಕ್ಷ್ಮಮ್ಮ' ಕತೆಯ ಲಕ್ಷ್ಮಮ್ಮನಿಗಿಂತ ವಿಭಿನ್ನ ಪರಿಸ್ಥಿತಿ ಸಂದರ್ಭಕ್ಕೆ ಒಳಗಾದವಳು ಮಾತ್ರವಲ್ಲ ಆಕೆಯ ತೀರ್ಮಾನ ತೀರಾ ಕೊನೆಯ ಹಂತದಲ್ಲಿ ವ್ಯಕ್ತವಾಗುತ್ತದೆ. ಆಕೆ ಬದುಕಿದ ಸಾಂಪ್ರದಾಯಿಕ ಪರಿಸರ ಮನಸ್ಸು ಆ ಸಹನೆಯನ್ನು ಕೊಡಮಾಡಿದೆ. ತನ್ನ ಜೀವನವೇ ತೇದು ಹೋಗುತ್ತಿದ್ದರೂ ಒಳಗೊಳಗೇ ದಹಿಸಿಕೊಳ್ಳುವುದು ಸಂಘರ್ಷಾತ್ಮಕ ಪರಿಸ್ಥಿತಿ ತಂದುಕೊಳ್ಳುವುದಕ್ಕೆ ಇಷ್ಟವಿಲ್ಲದ್ದರಿಂದಲೇ. ಅಲ್ಲಿ ಆಧುನಿಕತೆ ಹಾಗೂ ಪರಂಪರೆಯ ನಡುವೆ ಇರುವ ಸಂಘರ್ಷವನ್ನು ತೆರೆದಿಟ್ಟು ಪರಂಪರೆಯೇ ಬಾಳಬೇಕೆಂಬ ಪ್ರಯತ್ನ ಮಾಡಬೇಕಾದುದರ ಪ್ರತಿನಿಧಿಯಾಗಿ ಆಕೆ ದಾಖಲಾಗಿದ್ದಾಳೆ. ಚೆನ್ನಮ್ಮ ಅದರ

ನಿಯಂತ್ರಕಳಾಗಿ ಕಾಣಿಸಿಕೊಳ್ಳುತ್ತಾಳೆ. ಆ ಪರಂಪರೆಯ ಪ್ರತಿಪಾದಕಿಯಾಗಿ ಆಕೆ ಗಂಡನನ್ನು ನಿಯಂತ್ರಿಸುತ್ತಾಳೆ. ಸಹನೆಯಿಂದಲೇ ಗಂಡನ ಮನಸ್ಸನ್ನು ತಿದ್ದಿತೀಡಿ ಸರಿಪಡಿಸಬಹುದು ಎಂಬ ಅವಳ ನಿಲುವು ಅವಳನ್ನು ಸೌಮ್ಯದಿಂದ ನಡೆಯುವಂತೆ ಮಾಡುತ್ತದೆ. ಚೆನ್ನಮ್ಮ ಆರಂಭದಿಂದಲೂ ಗಂಡನ ಎಲ್ಲ ನಿರ್ಧಾರಗಳಿಗೆ ಮನಸ್ಸಿಲ್ಲದ ಮನಸ್ಸಿನಿಂದ ಒಳಗಾಗುತ್ತಾ ಬರುವುದು ಗಂಡನ ಘಾತುಮೀರಬಾರದು ಎಂದೇ. ಆಕೆ ಗಂಡನ ಪ್ರತಿಯೊಂದು ತೀರ್ಮಾನವನ್ನು ಪ್ರಶ್ನಿಸುತ್ತಾಳೆ ನಿಜ. ಆದರೆ ಅದನ್ನು ಗಟ್ಟಿಯಾಗಿ ವಿರೋಧಿಸುವುದಕ್ಕೆ ಅವಳಿಂದ ಸಾಧ್ಯವಾಗುವುದಿಲ್ಲ. ಸಾಧ್ಯವಾದರೂ ಗಂಡ ಅದನ್ನು ಕೇಳುವ ಹಂತದಲ್ಲಿಲ್ಲ. ಬದಲಿಗೆ ಹೊಲ ಕೊಳ್ಳುವ ಅವಳ ವಿಚಾರಕ್ಕೆ 'ಹೊಲ ತೆಗೆಯೋದು ಹಳೇ ಮಾತು. ಹೊಲಾನ ಉಡಬಹುದಾ, ತೊಡಬಹುದಾ ಒಡವೆ ವಸ್ತು ಇಕ್ಕಿಕೊಳ್ಳಬಹುದು. ಇಕ್ಕಿಕೊಂಡವರನ ನೋಡಬಹುದು. ಹೊಲ ಮಾಡಿದರೆ ವಾರಕ್ಕೆ ಕೊಟ್ಟು ವರ್ಷ ಕಾದು ನಾಲುಕು ಕಾಳು ಉಣ್ಣೋದಾಗುತ್ತದೆ. ಏನು ಸಂತೋಷ?' ಎಂದು ಹೇಳುವುದು, ಚೆನ್ನಮ್ಮ ವಿಧಿಯಿಲ್ಲದೆ ನಗುವುದು 'ನಾ ಹೇಳಿದ್ದು ಹೇಳಿದೆ. ಇದರ ಮೇಲೆ ನಿನ್ನ ಮನಸ್ಸು' ಎಂದು ಹೇಳುವುದು ಆಕೆಯ ಹೊಂದಾಣಿಕೆಯ ಸ್ವಭಾವವನ್ನು ತೋರಿಸುತ್ತದೆ.

ರಾಮಪ್ಪನ ಗಿರಣಿಯ ಜೀವನ, ಇನ್ನೊಂದು ಹೆಣ್ಣಿನ ಸಹವಾಸ, ಕೆಟ್ಟ ಹವ್ಯಾಸಗಳು ಗಂಡ ಹೆಂಡತಿಯ ನಡುವೆ ಬಹು ದೊಡ್ಡಅಂತರವನ್ನು ಸೃಷ್ಟಿಸಬಹುದಾಗಿದ್ದರೂ ಇಲ್ಲಿಅಂಥ ಬಿರುಕು ಗೋಚರಿಸದಂತೆ ಚೆನ್ನಮ್ಮ ತಾಳ್ಮೆ ನಹಿಸುತ್ತಾಳೆ. ಚೆನ್ನಮ್ಮ ಒತ್ತಾಯದಿಂದ ಗಿರಣಿಗೆ ಸೇರುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ಗಿರಣಿಗೆ ಸೇರುವ ಆಕೆಗೆ ಮಾಲಿಕ ಕೊಡುವ ದೈಹಿಕ ಹಾಗೂ ಮಾನಸಿಕ ಕಿರಿಕಿರಿಯನ್ನು ಆಕೆ ಎದುರಿಸುವ ರೀತಿ ಉದ್ಯೋಗಸ್ಥ ಮಹಿಳೆ ಅನುಭವಿಸಬೇಕಾಗಿ ಬರುವ ಸಂದಿಗ್ಧ ಸ್ಥಿತಿಯನ್ನು ಪರಿಚಯಿಸುತ್ತದೆ. ಅದು ಉಗ್ಯೋಗಸ್ಥ ಮಹಿಳೆ ನೆಮ್ಮದಿಯನ್ನು ಪಡೆಯಲು ಸಾಧ್ಯವಾಗದಿರುವುದನ್ನು ತೋರಿಸುತ್ತದೆ. ಅಲ್ಲಿ ತನಗೆ ದೊರಕದ ಮಾನಸಿಕ ನೆಮ್ಮದಿಯನ್ನು ಅರಸಿಕೊಂಡು ಆಕೆ ಕೊನೆಗೂ ತವರಿನ ಹಾದಿ ಹಿಡಿಯುತ್ತಾಳೆ. ಆದರೆ ಅದಕ್ಕೂ ಮುನ್ನ ಆಕೆಯ ವೇದನೆಗಳು ಅಷ್ಟಾಗಿ ಪ್ರಕಟಗೊಳ್ಳುವುದಿಲ್ಲ. ಅದನ್ನು ಅಲ್ಲಿ ಅವಳ ಮೇಲೆ ನಡೆಯುವ ಆಕ್ರಮಣ ಕಂಡು ಅರ್ಥಮಾಡಿಕೊಳ್ಳಬೇಕಾಗುತ್ತದೆಯೇ ಹೊರತು ಅವಳು ಆ ಕುರಿತು ಅಭಿಪ್ರಾಯ ಮಂಡಿಸುವುದಿಲ್ಲ.

ಕ್ಷಣಿಕ ತೃಪ್ತಿ ಕೊಡುವ ಆಧುನಿಕತೆಯ ಅನುಕರಣೆ ಮಾಡುವ ಗಂಡ ಕೊನೆಯಲ್ಲಿ ಸಾಯುವುದನ್ನು ಆಧುನಿಕತೆಯಲ್ಲಿ ಗಟ್ಟಿತನವಿಲ್ಲ ಎಂದೇ ಹೇಳುವುದಾಗುತ್ತದೆ. ಚೆನ್ನಮ್ಮ ಗಂಡನ ಎಲ್ಲ ನಡವಳಿಕೆಯ ಹಿಂದೆ ಸೋಗು ಕಪಟತನಗಳ ನಡುವೆ ಪ್ರೀತಿಯ ಲವಲೇಶವೂ ಕಾಣದೇ ಹೋದಾಗ ಅವಳು ಜಗಳ ಮಾಡದಿರುವ ಮೂಲಕ ನಯವಾಗಿಯೇ ಅದನ್ನು ತಿಳಿಗೊಳಿಸುವ ಪ್ರಯತ್ನಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಾಳೆ. ಈ ಪ್ರವೃತ್ತಿ ಸಂಘರ್ಷದ ರಾದ್ಧಾಂತಗಳನ್ನು ತಡೆಯುವ ನಿಟ್ಟಿನಿಂದಲೇ

ತೆರೆದುಕೊಳ್ಳುತ್ತದೆ. ಒಂದು ವೇಳೆ ಸಂಘರ್ಷ ನಡೆದಿದ್ದರೆ ಬದುಕಿನ ರೀತಿಯೇ ಭಿನ್ನವಾಗುತ್ತಿತ್ತು. ಅಂಥ ಆತುರದ ಸಂದರ್ಭ ಸೃಷ್ಟಿಯಾಗುವುದಕ್ಕೆ ಎಡೆಕೊಡಬಾರದು. ಅದನ್ನು ತಿದ್ದುವ, ತೀಡುವ ಮೂಲಕವೇ ಮನದಟ್ಟು ಮಾಡಿಸುವ ಪ್ರಯತ್ನ ಮಾಡಬೇಕೆಂಬ ನೀತಿಯನ್ನು ಅವರು ಹೇಳುತ್ತಾರೆ. ಅದರ ಪರಿಣಾಮವಾಗಿಯೇ ಚೆನ್ನಮ್ಮ ತನ್ನ ಬದುಕನ್ನು ನೆಮ್ಮದಿಯತ್ತ ಒಡ್ಡಿಕೊಳ್ಳುತ್ತಾಳೆ. ಇದು ಅಂತ್ಯದಲ್ಲಿ ತನ್ನನ್ನು ಧಬ್ಬಾಳಿಕೆ ಮಾಡಿದ ರೀತಿಗೆ ಪ್ರತಿಭಟಿಸಿದ್ದು ಅನ್ನುವುದಕ್ಕಿಂತಲೂ ಸಾಂಪ್ರದಾಯಿಕ ಬದುಕಿನ ಪರವಾಗಿ ಆಧುನಿಕತೆಗೆ ತೆರೆದುಕೊಂಡು ಮೂರ್ಖ ಸ್ವಭಾವ ಅನುಸರಣೆ ಮಾಡಿದ ವ್ಯವಸ್ಥೆಗೆ ತೋರಿದ ವಿರೋಧವಾಗಿ ಕೂಡ ಅದನ್ನು ಅರ್ಥೈಸಿಕೊಳ್ಳಬಹುದಾಗಿದೆ. ಆ ನೆಲೆಯಿಂದಲೇ ಚೆನ್ನಮ್ಮ ಕಾಣಿಸಿಕೊಳ್ಳುತ್ತಾಳೆ. ಅವಳ ಮಾನಸಿಕ ವೇದನೆ, ನೋವು, ಅಭಿಲಾಷೆಗಳನ್ನು ಅವಳು ಎಲ್ಲೂ ವ್ಯಕ್ತಪಡಿಸುವುದಿಲ್ಲ. ಅದನ್ನೆಲ್ಲ ಸಹಿಸುವುದೇ ಸ್ತ್ರೀಯ ಕರ್ತವ್ಯ. ಅದೇ ಅವಳ ಬದುಕು ಎಂಬುದನ್ನು ಈ ಮೂಲಕ ಪ್ರಕಟಿಸುತ್ತಾರೆ.

'ಚಿಕ್ಕವ್ವ' ಕತೆಯ ಚಿಕ್ಕವ್ವಳ ಮನಸ್ಸು, ನಿಲುವುಗಳಿಗೂ ಪ್ರಾಧಾನ್ಯ ದೊರಕುವುದಿಲ್ಲ. ಆಕೆ ಕೊನೆಗೂ ತನ್ನನ್ನು ತಾನು ಕೊಂದುಕೊಳ್ಳುವ ಕ್ರಿಯೆಗೆ ಮುಂದಾಗುವುದು ತನ್ನನ್ನು ಅರ್ಥ ಮಾಡಿಕೊಳ್ಳದ ಪುರುಷ ಪ್ರಾಧಾನ್ಯ ವ್ಯವಸ್ಥೆಗೆ ಒಗ್ಗಿಕೊಂಡು ಅದನ್ನು ಪ್ರತಿಭಟಿಸಿ ಬದುಕಲು ಸಾಧ್ಯವಿಲ್ಲದಿರುವುದರಿಂದ. ಗಂಡನನ್ನು ಬಿಟ್ಟು ಬದುಕುವ ತೀರ್ಮಾನಕ್ಕೆ ಬದ್ಧಳಾಗುವಂತೆ ಮಾಡಿದ ಸಂದರ್ಭ ಎದುರಾದಾಗ ತನ್ನ ನಿರ್ಧಾರಕ್ಕೆ ಕೆಟ್ಟ ಹೆಸರು ಬರಬಾರದು ಎಂದು ನಳಿನಿಯ ತಂದೆ ಕತೆಯ ಲಕ್ಷ್ಮಿ ಸೌಮ್ಯವಾಗಿಯೇ ನಡೆದುಕೊಳ್ಳುವುದಕ್ಕೇ ಪ್ರಯತ್ನಿಸುತ್ತಾಳೆ. ಕೊನೆಗೂ ಗಂಡನೇ ದೂರ ಹೋಗುವಂತೆ ಮಾಡುತ್ತಾಳೆ. ಚಿಕ್ಕಮ್ಮ ತನ್ನನ್ನು ತಾನು ಕೊಂದುಕೊಳ್ಳುವುದು, ಚೆನ್ನಮ್ಮ ಗಂಡನನ್ನು ಬಿಟ್ಟು ಬದುಕುವ ನಿರ್ಧಾರಕ್ಕೆ ಬರುತ್ತಿದ್ದಂತೆಯೇ ಗಂಡ ಸತ್ತು ಹೋಗುವುದು, ಚಿಕ್ಕವ್ವ ತನ್ನನ್ನು ತಾನು ಕೊಂದುಕೊಳ್ಳುವುದು ಹೆಣ್ಣು ಗಂಡನನ್ನು ತೊರೆದಳು ಅನ್ನುವುದಕ್ಕಿಂತ ಅವನೇ ದೂರ ಹೊಗುವಂತೆ ಅಥವಾ ಮರಣ ಹೊಂದುವಂತೆ ಮಾಡಿ ಹೆಣ್ಣು ಮುಂದೆ ಅನುಭವಿಸುವ ಪರಿಸ್ಥಿತಿಗಳಿಂದ ತಪ್ಪಿಸಿಕೊಳ್ಳುವಂತೆ, ಎಲ್ಲ ಸಂದಿಗ್ದತೆಯಿಂದ ಪಾರು ಮಾಡಲಾಗಿದೆ. ಯಾವ ಆರೋಪ, ಚುಚ್ಚು ಮಾತು ಆಕೆಗೆ ಬರಬಾರದು. ಅದಕ್ಕಾಗಿ ಎಲ್ಲ ಸಂದಿಗ್ಧ ಸ್ಥಿತಿಯಿಂದ ಆಕೆಯನ್ನು ಆ ಮೂಲಕ ಪಾರು ಮಾಡಲಾಗಿದೆ. ಚಿಕ್ಕವ್ವ ತನ್ನನ್ನು ತಾನೇ ಕೊಂದುಕೊಳ್ಳುವ ಮೂಲಕ ಅಂಥ ಸಂದಿಗ್ಧ ಸ್ಥಿತಿಯಿಂದ ತನ್ನನ್ನು ತಾನೇ ಬಿಡುಗಡೆ ಮಾಡಿಕೊಳ್ಳುತ್ತಾಳೆ, ಆಕೆಯ ಅಂಥ ಪರಿಸ್ಥಿತಿ ಪುರುಷ ಪ್ರಾಧಾನ್ಯವಾದದ್ದು, ಅದನ್ನು ನಿಭಾಯಿಸುವುದು ಹೆಣ್ಣಿನ ಕೈಯಲ್ಲಿದೆ. ಹೆಣ್ಣಿನ, ಮನಃಸ್ಥಿತಿ, ವೇದನೆಗಳು ಮಾಸ್ತಿಗೆ ಹೆಚ್ಚು ಪ್ರಮುಖವಾಗುವುದಿಲ್ಲ. ಅಂದರೆ ಸಾಂಪ್ರದಾಯಕ ಹಾಗೂ ಪಾರಂಪರಿಕ ವ್ಯವಸ್ಥೆಯ ಮೌಲ್ಯಗಳನ್ನು ಬಾಳಿಸುವ ನಿಟ್ಟನಲ್ಲಿ ಅವಳು ಮುಖ್ಯಳಾಗಬೇಕೆಂಬ ತತ್ವವನ್ನು ಅವರ ಮೂಲಕವೇ ತೋರಿಸಿಕೊಡುವ ಪ್ರಯತ್ನ ಮಾಡುತ್ತಾರೆ. ಗಂಡ ಎಂಬ

ಮೌಲ್ಯವನ್ನು ಬಾಳಿಸುವ ಹೆಂಡತಿ ಅದನ್ನು ಮೀರಿ ನಡೆಯಬಾರದು ಎಂಬುದನ್ನು ಒಪ್ಪಿಕೊಂಡು ಬದುಕುವಂತೆ ಪ್ರೇರೇಪಿಸುತ್ತಾರೆ.

೨. ಗಂಡ ತೊರೆದು ಹೋದ ಹೆಣ್ಣಿನ ಬದುಕು, ಗಂಡ ಮರಳಿ ಬಂದಾಗ ಅವರನ್ನು ಸ್ವೀಕರಿಸುವ ಸಂದರ್ಭಗಳ ನಡುವೆ ಅವಳ ಮನಸ್ಥಿತಿಯನ್ನು ಪರಿಚಯಿಸುವುದಕ್ಕೆ ಮಾಸ್ತಿ ತೊಡಗುವುದಿಲ್ಲ. ಗಂಡಬಿಟ್ಟು ಹೊದ ಎಲ್ಲಾ ಸಂದಂರ್ಭಗಳಿಗೂ ಸ್ತ್ರೀಯೇ ಕಾರಣ ಎಂಬುದನ್ನು ತಿಳಿಸಿ ಅವಳನ್ನೇ ಎಲ್ಲ ಸಮಸ್ಯೆಗೆ ಹೊಣೆಯಾಗಿಸುತ್ತಾರೆಯೇ ಹೊರತು ಅವಳ ಮನಸ್ಸಿನ ಭಾವನೆಗಳಾಗಲೀ, ಬದುಕಿನಲ್ಲಿ ಎದುರಿಸಿದ ಕಷ್ಟ-ಸುಖಗಳಾಗಲೀ ಅವರಿಗೆ ಮುಖ್ಯವಾಗುವುದಿಲ್ಲ. ಸ್ತ್ರೀ ಬದುಕಿನ ಮುನ್ನಡೆಗೆ ಹೇಗೆ ಕಾರಣಳಾಗಬೇಕು ಎಂಬುದನ್ನೇ ತೋರಿಸಿಕೊಡುವುದು, ಪ್ರಸ್ತುತ ಪಡಿಸುವುದು ಅವರಿಗೆ ಮುಖ್ಯವಾಗಿದೆ. ಗಂಡ ಬಿಟ್ಟು ಹೋದ ಬಳಿಕ ಅನಿಗಾಗಿಯೇ ಪರಿತಪಿಸುತ್ತ, ಅವನ ನಿರೀಕ್ಷೆಯಲ್ಲಿ ಅವನೊಂದಿಗೆ ಒಂದಾಗಿ ಬಾಳುವುದನ್ನೇ ಇದಿರು ನೋಡುತ್ತ ಕಾಲ ಕಳೆಯುವ ಸ್ತ್ರೀಯರನ್ನು ಆದರ್ಶರಾಗಿ ಕಾಣಿಸುತ್ತಾರೆ. ಅದೆಷ್ಟೋ ವರ್ಷ ಬಿಟ್ಟು ಬದುಕಿದ್ದ ಬೇಜವಾಬ್ದಾರಿಯುತ ಗಂಡಂದಿರು ಮರಳಿ ಬಂದಾಕ್ಷಣವೇ ಅವರನ್ನು ಒಪ್ಪಿ ಸ್ವೀಕರಿಸಿ ಬಿಡುವುದನ್ನು ಪರಿಚಯಿಸಿ ಹೆಣ್ಣು ಗಂಡ ಎಂಬ ಪದಕ್ಕೆ, ವ್ಯಕ್ತಿಗೆ ಕೊಡಬೇಕಾಗಿರುವ ಪ್ರಾಮುಖ್ಯವನ್ನು ಸ್ತ್ರೀ ಒಪ್ಪಿಕೊಳ್ಳುವಂತೆ ಮಾಡಿದ್ದಾರೆ. ಅಲ್ಲಿ ಕೇವಲ ಸಣ್ಣ-ಪುಟ್ಟ ತಪ್ಪಿಗೆ ಹೆಂಡತಿಯನ್ನು ತೊರೆದು ಊರು ಬಿಡುವ ನಿಷ್ಕಾಳಜಿಯ, ಬೇಜವಾಬ್ದಾರಿಯುತ ಗಂಡಸರ ನಿರ್ಧಾರ ಹೆಚ್ಚು ಮುಖ್ಯವಾಗಿರುವುದಿಲ್ಲ. ಆದರೆ ಅಂಥ ನಿರ್ಧಾರ ತೆಗೆದುಕೊಳ್ಳದಂತೆ ಮಾಡುವುದಕ್ಕೆ ಹೆಂಗಸರೇ ಸೇವಕಿಯರಾಗಿ ಇರಬೇಕು. ಅಲ್ಲವಾದರೆ ಗಂಡ ಬಿಟ್ಟು ಹೋಗುವ ಮತ್ತು ಅದಕ್ಕಾಗಿ ಪರಿತಪಿಸುವ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಪುರುಷ ಪ್ರಧಾನವಾದ ವ್ಯವಸ್ಥೆ ಹೇರಿದ ಮೌಲ್ಯಗಳಿಗೆ ಸ್ತ್ರೀ ಬದ್ಧಳಾಗಿರಬೇಕೆಂಬುದನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಹೆಣ್ಣು ಮಾಡಿದ್ದು ಸಣ್ಣ ತಪ್ಪೇ ಆಗಿದ್ದರೂ ಅದಕ್ಕೆ ತೋರಿಸುವ ಪ್ರತಿಫಲವಾಗಿ ಗಂಡ ಎಲ್ಲ ಜವಾಬ್ದಾರಿಯನ್ನು ತೊರೆದು ಹೋಗುವ ಸಂದರ್ಭಗಳು ಇಲ್ಲಿ ಆಕ್ಷೇಪಾರ್ಹ ದನಿಯಿಂದ ದಾಖಲಾಗುವುದಿಲ್ಲ. ಬದಲಾಗಿ ಹಾಗೆ ಹೆಣ್ಣು ನಡೆಯಬಾರದು ಎಂದೇ ಸೂಚ್ಯವಾಗಿ ಹೇಳಲಾಗಿದೆ.

ಸಾರಿಪುತ್ರನ ಕಡೆಯ ದಿನಗಳು ಕತೆಯ ವೇದವತಿ, ಕಾಮನ ಹಬ್ಬದ ಒಂದು ದಿನ ಕತೆಯ ಸಾವಿತ್ರಮ್ಮ , ಮುನೀಶ್ವರನ ಮರದ ರಾಜಮ್ಮ , ವೇಲೂರಿನ ಲಕ್ಷ್ಮಮ್ಮ ಕತೆಯ ಲಕ್ಷ್ಮಮ್ಮ , ಸನ್ಯಾಸವಲ್ಲದ ಸನ್ಯಾಸ ಕತೆಯ ನರಸಮ್ಮ , ಆಚಾರ್ಯರ ಪತ್ನಿ ಕತೆಯ ಆಚಾರ್ಯರ ಪತ್ನಿ ಇವರು ತಮ್ಮ ಕರ್ತವ್ಯ ನಿಷ್ಠೆಯಿಂದ ಕೊಂಚವೇ ತಪ್ಪಿ ನಡೆಯುವವರಾಗುತ್ತಾರೆ. ಆದರೆ ಅವರ ಸಣ್ಣ ಸಣ್ಣ ತಪ್ಪುಗಳಿಗೆ ತಿದ್ದಿ ತಿಳಿ ಹೇಳುವ ಜವಾಬ್ದಾರಿಯನ್ನು ಗಂಡಂದಿರು ಹೊರುವ ಬದಲು ತೊರೆದು ಹೋಗುವ ಮೂಲಕ ಬುದ್ಧಿ ಕಲಿಸ ಹೊರಡುತ್ತಾರೆ.

ಸಾರಿಪುತ್ರನ ಕಡೆಯ ದಿನಗಳು ಕತೆಯ ನರಸಿಂಹ ಶರ್ಮನ ಸನ್ಯಾಸ ಸ್ವೀಕಾರದಿಂದಾಗಿ ಪತ್ನಿ ವೇದವತಿಯ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳ್ಯಾವವನ್ನೂ ಮಾಸ್ತಿ ಪ್ರಕಟಪಡಿಸುವುದಿಲ್ಲ. ಕುಟುಂಬದ ಜವಾಬ್ದಾರಿಯನ್ನು ಪೂರೈಸುವಲ್ಲಿ ಆಕೆ ಕೊಂಚವೂ ತಪ್ಪುವುದಿಲ್ಲ. ಸನ್ಯಾಸಿಯಾಗಿರುವ ಗಂಡ ಬಂದಾಗ ನಿರ್ಲಿಪ್ತಳಾಗಿಯೇ ಮಾತನಾಡಿಸುತ್ತಾಳೆ. ಹಾಗೂ 'ನಿಮ್ಮ ಧರ್ಮದಲ್ಲಿ ನಾನು ಭಿಕ್ಷುಣಿಯಾಗಬಹುದಾದರೆ ನಮಗೂ ಅದೇ ಸ್ಥಿತಿಯನ್ನು ಕೊಡಿ. ನಿಮ್ಮ ಜೊತೆಗೆ ಇರುತ್ತೇನೆ' ಎನ್ನುವಲ್ಲಿ ಗಂಡಬಿಟ್ಟು ಹೋದ ಕುರಿತ ವ್ಯಥೆಯಾಗಲೀ ಕೋಪವಾಗಲೀ ಇಲ್ಲಿ ಪ್ರಕಟವಾಗುವುದಿಲ್ಲ. ಅದು ಪ್ರಕಟವಾಗದಿರುವುದನ್ನು ತೋರಿಸುತ್ತದೆ. ಹಾಗೆ ತೋರ್ಪಡಿಸುವುದು ಹೆಣ್ಣಿನ ಧರ್ಮ ಅಲ್ಲ. ಗಂಡನೊಂದಿಗೆ ಬದುಕು ಸವೆಸುವುದು ಅವಳ ಧರ್ಮ. ಆದುದರಿಂದಲೇ ಅದನ್ನು ಅನುಸರಿಸಿ ಬದುಕುವುದಕ್ಕೆ ಒಪ್ಪಿಕೊಳ್ಳುವಿಕೆಯು ಹಿಂದೆ ಗಂಡ ಎಂಬ ಗೌರವದ ಜೊತೆಗೆ ಅವನಿಲ್ಲದೆ ಬದುಕಿದ ದಿನಗಳ ಅನುಭವ ಹಾಗೂ ಮುಂದೆ ಒದಗಬಹುದಾದ ಕಷ್ಟಗಳ ಕುರಿತಂತೆ ವೈದಿಕ ಧರ್ಮವನ್ನೇ ಎಲ್ಲರ ಮೋಕ್ಷಕ್ಕೆಂದು ಸುಲಭವಾಗಿ ಮಾಡಲು ಭಗವಂತನು ಬೌದ್ಧಾವತಾರವನ್ನು ತಾಳಿ ಅಲ್ಲಲ್ಲಿ ಸಾರಿಪುತ್ರನು ಜನರಿಗೆ ಬೌದ್ಧಮತದಲ್ಲಿ ಪ್ರೀತಿ ಬರುವಂತೆ ಮಾಡಿದನು. ಎರಡು ವರ್ಷಗಳ ಬಳಿಕ ಪತ್ನಿಯೇ ಭಿಕ್ಷುಣಿಯಾಗುವ ಮೂಲಕ ಹೆಣ್ಣಿಂದಲೇ ಅದನ್ನು ಪರಿಚಯಿಸುವ ಮೂಲಕ ವೈದಿಕ ಹಾಗೂ ಬೌದ್ಧ ಧರ್ಮದ ನಡುವಿನ ಸಂಘರ್ಷವನ್ನು ದೂರಮಾಡಲಾಗಿದೆ. ಆದ್ದರಿಂದಲೇ ಆಕೆಯ ಭಾವನೆಗಳು ಇಲ್ಲಿ ಜೀವ ಪಡೆದುಕೊಳ್ಳುವಂತೆ ಮಾಡುವುದಿಲ್ಲ. ಗಂಡ-ಹೆಂಡತಿ ಜೊತೆಯಾಗಿರಬೇಕೆಂಬ ಸಮಾಜದ ಕಟ್ಟುಪಾಡುಗಳನ್ನು ಮೀರುವ ಧೈರ್ಯವನ್ನು ಅವಳು ಪಡೆಯದೇ ಹೋದುದರಿಂದಲೇ ಅವಳು ಗಂಡನ ನಿರ್ಧಾರಗಳನ್ನು ಪ್ರಶ್ನಿಸುವುದಿಲ್ಲ, ಬಂದಾಗ ಹೀಯಾಳಿಸುವುದೂ ಇಲ್ಲ. ವ್ಯಕ್ತಿತ್ವವೇ ಇಲ್ಲದಂತೆ ಅವನೊಡನೆಯೇ ಬಾಳುವುದಕ್ಕೆ ಬಾಗುತ್ತಾಳೆ.

ವೇಲೂರಿನ ಲಕ್ಷ್ಮಮ್ಮ ಕತೆಯ ಲಕ್ಷ್ಮಮ್ಮ ಗಂಡನ ನಿರ್ಲಕ್ಷ್ಯಕ್ಕೆ ಒಳಗಾದಾಗ ಅದನ್ನು ಎದುರಿಸಲಾಗದೇ ಜಗಳವಾಡಿ ಸಂಘರ್ಷಕ್ಕೆ ಹಾದಿಯಾಗಬಾರದೆಂದೇ ಅವಳನ್ನು ಹುಚ್ಚಿಯಾಗಿಸಿದ್ದಾರೆ. ಕುರುಡಿಯಾದ ಮಾತ್ರಕ್ಕೆ ಪ್ರೀತಿಯಿಂದ ಹೆಂಡತಿ ಎಂಬ ಮಮಕಾರದಿಂದ ವಂಚಿತಳಾದಾಗ ಆಕೆ ಮಮ್ಮಲ ಮರುಗುವುದು ಮಾನಸಿಕ ರೋಗಿಯಾಗಿ ಕಾಣಿಸಿಕೊಂಡ ಮೇಲೆಯೇ. ಆಕೆ ಅಂಥ ಸಂದರ್ಭದಲ್ಲಿ ಆರೋಗ್ಯವಂತಳಾಗಿದ್ದರೆ ಎದುರಿಸಬಹುದಾಗಿದ್ದ ಸಂದರ್ಭವೇ ಬೇರೆ ತೆರನಾದದ್ದು. ಅದು ಅನಾರೋಗ್ಯದ ಸಂಘರ್ಷಕ್ಕೆ ಮಾರ್ಗ ತೆರೆದಿಡಬಹುದೆನೋ ಎಂಬ ಸಂಶಯದಿಂದ ಅದನ್ನು ತಡೆಯಲಾಗಿದೆ. ಅವಳು ಅದರ ವಿವೇಚನೆಯನ್ನು ಕಳೆದುಕೊಳ್ಳುವಂತೆ ಮತ್ತು ಮಾನಸಿಕ ಅಸ್ವಸ್ಥಳಾಗಿಯೇ ಚಿತ್ರಿಸುವಲ್ಲಿ ಕೂಡ ಗಂಡನನ್ನು ವಿರೋಧಿಸುವುದನ್ನು ತಡೆಯುವ ಮೌಲ್ಯ ಪ್ರತಿನಿಧಿತವಾಗಿದೆ. ಅದೇ ನೆಲೆಯಲ್ಲಿ ''

'ಮುನೀಶ್ವರನ ಮರ' ಕತೆಯ ರಾಜಮ್ಮ ಕೂಡ ಸಾಗುತ್ತಾಳೆ. ಗಂಡನ ಮಾತಿಗೆ ಬೆಲೆ ಕೊಡದೇ ತನ್ನದೇ ರೀತಿಯಲ್ಲಿ ಆಕೆ ನಡೆಯುವುದರಿಂದ ಗಂಡನೇ ಮನೆ ಬಿಟ್ಟು ಹೋಗುತ್ತಾನೆ. ಹಾಗೂ ಊರಿಗೆ ಬಂದಾಗಲೂ ಅವಳ ನಿವೇದನೆಗೆ ಕ್ಷಮೆ ಕೊಡದೇ ಹೊಗುತ್ತಾನೆ. ಆದರಿಂದಾಗಿ ಮುಂದೆ ಬರಬಹುದಾದ ಸಮಸ್ಯೆಗಳಿಗೆ ಹಾಗೂ ನಡೆಯಬಹುದಾದ ಸಂಘರ್ಷಕ್ಕಾಗಿ ಕಡಿವಾಣ ಹಾಕುವುದಕ್ಕಾಗಿಯೇ ಆಕೆಯನ್ನು ಹುಚ್ಚಿಯನ್ನಾಗಿಯೇ ಮಾಡಿಬಿಡಲಾಗಿದೆ. ಮುಂಬರುವ ಎಲ್ಲ ತೊಂದರೆಗಳಿಗೆ ಆ ಮೂಲಕ ಪೂರ್ವ ಯೋಜನೆಯಾಗಿಯೇ ಅವಳನ್ನು ಹುಚ್ಚಿಮಾಡಿದ್ದಾಗಿದೆ.

ಹುಚ್ಚಿಯಲ್ಲದೆ ಉಳಿದಿದ್ದರೆ ಆಕೆಯ ಮಾನಸಿಕ ಹಾಗೂ ದೈಹಿಕ ರಕ್ಷಣೆ ಸಾಧ್ಯವಾಗದೇನೋ ಎಂಬ ಅಧೀರತೆ ಕಾಡಿದೆ. ಆಕೆಯ ಶೀಲದ ರಕ್ಷಣೆಗಾಗಿ ಅವಳ ಬಳಿ ಯಾರೂ ಸುಳಿಯದಂತೆಯೂ ಅವಳನ್ನು ಹುಚ್ಚಿಯಾಗಿಸಲಾಗಿದೆ.

'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿಯಾಗಲೀ, ಸನ್ಯಾಸವಲ್ಲದ ಸನ್ಯಾಸ ಕತೆಯ ನರಸಮ್ಮಳಾಗಲೀ ತಮ್ಮ ಗಂಡಂದಿರಿಂದಾಗಿ ಅನುಭವಿಸಿದ ನೋವಿನ ಬದುಕಿನ ವಿವರ, ಅವರ ಮಾನಸಿಕ ತುಮುಲ ತಾಕಲಾಟಗಳು ಕತೆಯಲ್ಲಿ ಎಲ್ಲೂ ತೆರೆದುಕೊಂಡಿಲ್ಲ. ಆಚಾರ್ಯರ ಪತ್ನಿ ಗಂಡನ ಕುರಿತ ನಿರ್ಲಕ್ಷ್ಯದಿಂದಾಗಿ ಪರಿತ್ಯಜಿತೆಯಾಗಿ ಕೊನೆಗೆ ತನ್ನನ್ನು ತಾನು ಕೊಂದುಕೊಂಡರೆ 'ಸನ್ಯಾಸಅಲ್ಲದ ಸನ್ಯಾಸ' ಕತೆಯ ನರಸಿಂಹಯ್ಯ ಪತ್ನಿ ಬೆಂಡೆಕಾಯಿ ಹುಳಿ ಮಾಡಿ ಹಾಕದ ಕುಂಟು ನೆಪ ಒಡ್ಡಿ ಸನ್ಯಾಸ ಸ್ವೀಕರಿಸಿದರೂ ಅದೊಂದು ಸಣ್ಣ ಕಾರಣವೆಂಬಂತೆ ಮತ್ತೆ ಒಂದಾಗುವ ಅವಕಾಶವನ್ನು ಕೊಡುತ್ತಾರೆ. ಪರಿತ್ಯಕ್ತೆಯಾದ ಸಂದರ್ಭದಲ್ಲಿ ಆಕೆ ಅನುಭವಿಸಿದ ವೇದನೆಗಳನ್ನು ಪರಿಚಯಿಸದೆ ಪತಿವ್ರತಾಧರ್ಮವನ್ನು ಉಳಿಸುವ ನಿಟ್ಟಿನಲ್ಲಿ ಅವಳೇನನ್ನೂ ಪ್ರಶ್ನಿಸದೆ ಅವನನ್ನು ಸೇರುವುದಕ್ಕೇ ಜೀವನವಿಡೀ ಕಾಯುತ್ತಿರುವಂತೆ ಮಾಡಿ ಪತಿವ್ರತಾ ಧರ್ಮವನ್ನು ಪಾಲಿಸುವಂತೆ ಎಚ್ಚರ ವಹಿಸಿದ್ದಾರೆ.

ಸಂಘರ್ಷದ ತೀವ್ರತೆಗೇರುತ್ತಿದ್ದಂತೆಯೇ ಸಂಯಮವಾಗುವ ಇನ್ನೊಂದು ಮುಖವನ್ನು ಮಾಸ್ತಿ ಅವರ ಆಲೋಚನೆಯ ವೈರುಧ್ಯವಾಗಿ ಗುರುತಿಸಿ ಚರ್ಚಿಸಬಹುದಾಗಿದೆ. ಜೀವನದ ರೀತಿಗೆ ಮಾದರಿಯಾಗುವ ಈ ಎಲ್ಲ ಘಟನೆಗಳು ಬದುಕಿನಲ್ಲಿ ಅನುಸರಿಬೇಕಾದ ಯೋಚನಾಬದ್ಧ ತೀರ್ಮಾನಕ್ಕೆ ಒತ್ತು ಕೊಡುವುದನ್ನು ಗುರುತಿಸಬಹುದಾಗಿದೆ.

ಪುರುಷೋತ್ತಮ ಬಿಳಿಮಲೆ ಅವರು ಮಾಸ್ತಿಯವರು,'ಯಾರ ಪರವಾಗಿ ಮಾತನಾಡುತ್ತಾರೋ, ಆ ಪಾತ್ರಗಳೆಲ್ಲ ಘರ್ಷಣಾತೀತ ಸ್ಥಿತಿಯಲ್ಲಿ ಬದುಕಿರುತ್ತಾರೆ. ಸಾಮಾಜಿಕ ಸಂದರ್ಭದ ಬಿಕ್ಕಟ್ಟುಗಳಲ್ಲಿ ಸಹಜವಾಗಿಯೇ ಹುಟ್ಟಿಕೊಳ್ಳಬಹುದಾದ ಘರ್ಷಣೆಯನ್ನು ಈ ನಾಯಕರು ತಮ್ಮ ತಾಳ್ಮೆ - ಸಂಯಮ ಉದಾತ್ತಚರಿತ್ರೆಗಳಿಂದ ಮೀರಿಬಿಡುತ್ತಾರೆ. ಇದನ್ನೇ ಸ್ವಲ್ಪ ಬೇರೆ ರೀತಿಯಲ್ಲಿ ಹೇಳಬೇಕೆಂದರೆ 'ಸಾಮಾಜಿಕ ಸಂಘರ್ಷ' ಏರ್ಪಡುವ ಸಂದರ್ಭದಲ್ಲಿ ಮಾಸ್ತಿ ಅವರು

ಅತ್ಯಂತ ಎಚ್ಚರದಿಂದ ಸಂಘರ್ಷಾತೀತ ಸ್ಥಿತಿಯನ್ನು ನಿರ್ಮಿಸಿಬಿಡುತ್ತಾರೆ'[೧೧] ಎಂದು ವಿವರಿಸಿದ್ದಾರೆ.

ಸಂಘರ್ಷಕ್ಕೆ ಬೆನ್ನು ಹಾಕಿ ಸಹನೆ ತಂದುಕೊಂಡು ಬದುಕು ಸಾಗಿಸುವ ಮಾಸ್ತಿ ಕತೆಗಳ ಪಾತ್ರ ಬದುಕುವ ಪರಿಯನ್ನು ಡಿ.ಆರ್. ನಾಗರಾಜ್ 'ಸಂಘರ್ಷಹೀನ' ಸಂಸ್ಕೃತಿ [೧೨] ಎಂದು ಕರೆದು ವಿಮರ್ಶಿಸಿದ್ದಾರೆ. ಜಿ.ಎಚ್.ನಾಯಕ್ ಅವರು ಕಥೆಗಳಲ್ಲಿ ಸಂಘರ್ಷ ಉಂಟಾಗುವ ಸಂದರ್ಭದಲ್ಲಿ ಅಲ್ಲಿಂದ ದೂರ ಹೋಗುವ ಅಲ್ಲಿನ ಪಾತ್ರಗಳ ಪ್ರಕ್ರಿಯೆಯನ್ನು ಪಲಾಯನೋಪಾಯ ಎಂದು, ಶೀಲ ಉಳಿಸಿಕೊಳ್ಳಲು ಬಳಸುವ ಉಪಾಯವನ್ನು ಸಮರ್ಪಣೋಪಾಯ ಎಂದು, ಸಂಘರ್ಷ ಪರಿಹಾರ ಸೂತ್ರವನ್ನು ಪರೋಕ್ಷೋಪಾಯ[೧೩] ಎಂದು ಕರೆದು ಚರ್ಚಿಸಿದ್ದಾರೆ. ಆದರೆ ಈ ಕುರಿತ ಆರ್.ವಿ. ಭಂಡಾರಿ ಅವರ ಚಿಂತನೆ ಭಿನ್ನವಾಗಿದೆ.

ಸಂಘರ್ಷದ ಕುರಿತಂತೆ ಆರ್.ವಿ. ಭಂಡಾರಿ ತಳೆಯುವ ನಿಲುವೇ ಭಿನ್ನವಾದುದು ಅವರು ' ಮಾಸ್ತಿ ಅವರ ಕಥೆಗಳಲ್ಲಿ ಸಂಘರ್ಷದ ಗೈರು ಹಾಜರಿ ಇದ್ದಂತೆ ತೋರಿದರೂ ಅದರ ಒಳಮೈಯಲ್ಲಿ ಅಂತ ಸಂಘರ್ಷವನ್ನೇ ಕೊಟ್ಟಿದೆ. ಆದರೆ ಆ ಸಂಘರ್ಷ ಪ್ರಗತಿಗಾಮಿಯಾದುದಲ್ಲ. ಆಧುನಿಕತೆಯ ಹೊಸ ನೆಗ್ಗಸಿನಲ್ಲಿ ಕೊಚ್ಚಿಹೋಗುತ್ತಿರುವ ಪ್ರಾಚೀನತೆಯ ಅಂದರೆ ವೈದಿಕ ಪರಂಪರೆಯ ಶ್ರೇಷ್ಠತೆಯನ್ನೇ ಮರುಸ್ಥಾಪನೆ ಮಾಡುವುದಾಗಿದೆ. ಆದರೆ ಇದೊಂದು ದುರಹಂಕಾರದ ಅಡಿಯಲ್ಲಿ ನಡೆಯದೇ ಸಜ್ಜನಿಕೆಯ ಸಹೃದಯತೆಯ ನೆರಳಿನಲ್ಲಿ ನಡೆಯುತ್ತದೆ. ಅಂದರೆ ಮಾಸ್ತಿ ಅವರು 'ಕನ್ನಡ ಸಣ್ಣ ಕಥೆ' ಭಾರತೀಯ ಸಂಸ್ಕೃತಿಯ ವೈದಿಕ ಪರಂಪರೆಯ ಸಂಸ್ಕಾರವನ್ನೇ ನೀಡುತ್ತಾರೆ ' ಎಂದು ಚರ್ಚಿಸಿದ್ದಾರೆ.[೧೪]

ಗಿರಿಜಾ ಶಾಸ್ತ್ರಿ ಅವರು 'ಅವರ ಸಾಮಾಜಿಕ ಕಥೆಗಳಲ್ಲಿ ಅವರ ಸಾಂಪ್ರದಾಯಿಕ ಹಾಗೂ ಆಧುನಿಕ ಈ ಎರಡೂ ವಿಭಿನ್ನ ನೆಲೆಗಳು ಬೇರೆ ಬೇರೆಯದೇ ಆದ ಧಾರೆಗಳಾಗಿ ಕಂಡುಬರುತ್ತದೆ. ಬಹುಶಃ ಇದುವೇ ಅವರ ಸಂಘರ್ಷ ಹೀನತೆಗೆ ಕಾರಣವಿರಬಹುದು. ಅವರು ತೋರಿಸುವ ವಿಭಿನ್ನ ನೆಲೆಗಳೇ ಅವುಗಳ ಸಾಮಾಜಿಕ ಸ್ತರಗಳನ್ನೂ ನಿರ್ದೇಶಿಸುತ್ತದೆ'[೧೫] ಎಂದು ವಿಶ್ಲೇಷಿಸಿದ್ದಾರೆ.

---

೧೧ ಪು. ೨೩ ಮಾ ಮಾಸ್ತಿಯವರ ಕತೆಗಳಲ್ಲಿ ಸಾಮಾಜಿಕ ಘರ್ಷಣೆಯ ನಿರ್ವಹಣೆ, ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ, ಸಂಪಾದಕರು ಡಿ.ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ, ಸ. ಉಷಾ ೧೯೯೨

೧೨ ಮಾಸ್ತಿಯವರ ತಾತ್ವಿಕ ನಿಲುವುಗಳು, ಅಮೃತ ಮತ್ತು ಗರುಡ ಡಿ.ಆರ್. ನಾಗರಾಜ್, ೧೯೮೩

೧೩ ಮಾಸ್ತಿಯವರ ಸಣ್ಣಕತೆಗಳಲ್ಲಿನ ಸಂಘರ್ಷಗಳ ಸ್ವರೂಪ, ನಿಜದನಿ ಜಿ.ಎಚ್.ನಾಯಕ೧೯೮೮

೧೪ ಪು.೧೭೮ ಕನ್ನಡ ಸಣ್ಣಕತೆಗಳ ಸಾಂಸ್ಕೃತಿಕ ಸ್ವರೂಪದ ನೆಲೆಗಳು, ಸಾಹಿತ್ಯ ವಿಮರ್ಶೆ ೧೯೯೩ ಸಂ. ಡಾ. ಕೆ. ಕೇಶವ ಶರ್ಮ - ೧೯೯೭

೧೫ ಪು.೪೩ ಕಥಾ ಮಾನಸಿ, ಗಿರಿಜಾ ಶಾಸ್ತ್ರೀ - ೨೦೦೦

ಸಹನೆ ಹಾಗೂ ತಾಯ್ತನಗಳನ್ನು ಇಲ್ಲಿ ಗಂಡಿಗೆ ಆರೋಪಿಸಿರುವಲ್ಲಿ ಗಂಡು ಮೈಗೂಡಿಸಿಕೊಳ್ಳಬೇಕಾದ ಪರಿಯನ್ನು ಸಾರಲಾಗಿದೆ. ಯಾರೊಬ್ಬರ ಮನಸ್ಸನ್ನು ಹೆಣ್ಣು - ಗಂಡಿನ ನಡುವೆ ನೋಯಿಸುವುದು ಸರಿಯಲ್ಲ. ಮಾನವೀಯ ತತ್ವ ಅನುಸರಿಸಿ ಸಮಾನವಾಗಿ ನಡೆಯುವಂತೆ ಬೋಧಿಸುವ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಮಾನವೀಯ ದೃಷ್ಟಿಕೋನ ಯಾವುದೇ ಅಹಿತಕರ ವಾತಾವರಣ ಸೃಷ್ಟಿಯಾಗಗೊಡುವುದಿಲ್ಲ. ಹೆಣ್ಣು ಗಂಡುಗಳ ನಡುವೆ ಪರಸ್ಪರ ಘರ್ಷಣೆಯಾಗಬಾರದು, ಒಬ್ಬರನ್ನೊಬ್ಬರು ನೋಯಿಸಿಕೊಳ್ಳಬಾರದು. ಅದಕ್ಕೆ ಯಾರಿಗೂ ಅಧಿಕಾರ, ಹಕ್ಕು ಇಲ್ಲ ಎಂದು ವಾದಿಸುವುದನ್ನೇ ಕತೆಗಳಲ್ಲಿ ಕಾಣುತ್ತೇವೆ. ಕತೆ ಕೊನೆಗಾಣಿಸುವ ರೀತಿಯಲ್ಲಿ ಮಾಸ್ತಿ ನಿಲುವು ಏನೆಂಬುದು ಸ್ಪಷ್ಟವಾಗುತ್ತದೆ.

ಕುಟುಂಬ ಪಾಲನೆಯ ಹೊಣೆಗಾರಿಕೆಯಲ್ಲಿ

ಮಾಸ್ತಿ ಕತೆಗಳ ಸ್ತ್ರೀಯರು ಕುಟುಂಬದ ಪಾಲನೆ ಮಾಡುವುದಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ. ಕುಟುಂಬವನ್ನು ಸರಿದಾರಿಯಲ್ಲಿ ಸಾಗಿಸುವವಳೇ ಸ್ತ್ರೀ. ಅದಕ್ಕಾಗಿ ಆಕೆ ಸ್ವತಃ ನಿಷ್ಠೆಯಿಂದ ಕುಟುಂಬವನ್ನು ಪೊರೆಯಬೇಕು. ಮತ್ತು ಮುಂದಿನ ಜನಾಂಗವೂ ಅದನ್ನು ಮುಂದುವರಿಸಿಕೊಂಡು ಬರುವಂತೆ ಎಚ್ಚರವಹಿಸಬೇಕು ಎಂಬ ನೀತಿಯನ್ನು ಅವರು ಹೇಳುತ್ತಾರೆ. ಆದುದರಿಂದಲೇ ಮಾಸ್ತಿ ಕತೆಗಳ ಸ್ತ್ರೀಯರಲ್ಲಿ ಯಾರೂ ಕುಟುಂಬ ಬಿಟ್ಟು ಬದುಕುವ ಧೈರ್ಯ ತೋರುವುದಿಲ್ಲ. ಹಾಗೆ ಕುಟುಂಬ ಬಿಟ್ಟರೂ ಅದರಿಂದಾಗಿ ಅಭದ್ರತೆ ಕಾಡುವ ಸಂದರ್ಭಗಳನ್ನು ಹೇಳಿ ಆ ನಿರ್ಧಾರ ತೆಗೆದುಕೊಳ್ಳದಂತೆ ಕೂಡ ನೀತಿ ಹೇಳುತ್ತಾರೆ.

ಪುರುಷ ಪ್ರಧಾನ ಸಮಾಜ ಸ್ತ್ರೀಯನ್ನು ಕುಟುಂಬ ಪಾಲನೆಯ ನೆಲೆಯಲ್ಲಿಯೇ ಸಿದ್ಧಗೊಳಿಸಿದೆ. ಕುಟುಂಬ ಪದ್ಧತಿಯನ್ನು ಇದೇ ಮನುಕುಲದ ಬೆಳವಣಿಗೆಯ ದೃಷ್ಟಿಯಿಂದ ಮುಂದುವರಿಸಬೇಕೆಂಬುದನ್ನು ಸ್ತ್ರೀಯರ ಮೂಲಕವೇ ಹೇಳಿಸುವ ಕೆಲಸವನ್ನೂ ಮಾಸ್ತಿ ನಿರ್ವಹಿಸಿದ್ದಾರೆ. ಅಲ್ಲದೆ ಕುಟುಂಬವೊಂದನ್ನು ಮುನ್ನಡೆಸದೇ ಹೋದರೆ ಹೆಣ್ಣಿಗೆ ಒದಗುವ ಕಷ್ಟಗಳನ್ನು ಪರಿಚಯಿಸಿ ಆಕೆ ಅದಕ್ಕೆ ಅಂಟಿಕೊಂಡಿರಬೇಕಾಗುತ್ತದೆ ಎಂದೂ ಎಚ್ಚರಿಕೆ ನೀಡಿದ್ದಾರೆ. ಎಂಥದೇ ಪರಿಸ್ಥಿತಿ ಬಂದರೂ ಕುಟುಂಬವನ್ನು ಬಿಟ್ಟು ಹೋಗಬಾರದ ತತ್ವವನ್ನೇ ಕತೆಗಳ ಸ್ತ್ರೀಯರ ಮೂಲಕ ಮಾಸ್ತಿ ಪ್ರತಿಪಾದಿಸಿದ್ದಾರೆ. ಮತ್ತು ಅದನ್ನು ವೈಭವೀಕರಿಸುವಲ್ಲೂ ಮುಂದಾಗಿದ್ದಾರೆ. ಕುಟುಂಬವನ್ನು ಪೋಷಿಸುವ ಬಹುಮುಖ್ಯ ವ್ಯಕ್ತಿಯಾಗಿ ಮಾಸ್ತಿ 'ಮೊಸರಿನ ಮಂಗಮ್ಮ' ಕತೆಯ ಮೊಸರಿನ ಮಂಗಮ್ಮಳನ್ನು ದಾಖಲಿಸುತ್ತಾರೆ. ಕುಟುಂಬದಿಂದ ಹೊರಬಂದ ಪರಿಣಾಮವಾಗಿ ಮಂಗಮ್ಮ ಬಹಳ ಇರುಸು ಮುರುಸಿನ ಪ್ರಸಂಗವನ್ನು ಎದುರಿಸುತ್ತಾಳೆ. ಈ ಮೂಲಕ ಕುಟುಂಬ ಬಿಟ್ಟು ಹೆಣ್ಣೊಬ್ಬಳು ಬಾಳಲಾಗದ ಹಾಗೂ ಬಾಳಬಾರದ ಮೌಲ್ಯವನ್ನು ಪ್ರತಿನಿಧಿಸುತ್ತಾರೆ.

ಮೊಸರಿನ ಮಂಗಮ್ಮ ಮೊಸರು ಮಾರಾಟ ಮಾಡುವ ಮೂಲಕ ಸ್ವತಂತ್ರ ಬದುಕನ್ನು ಸಾಗಿಸುವವಳು. ಆಕೆ ಪರಂಪರೆಯನ್ನು ಉಳಿಸಿ-ಬೆಳೆಸಿಕೊಂಡು ಬರುವ ಸ್ತ್ರೀ. ಓರ್ವ ಪತ್ನಿ, ತಾಯಿ ಹಾಗೂ ಅತ್ತೆ, ಅಜ್ಜಿಯಾಗಿರುವ ಮಂಗಮ್ಮನ ಮೂಲಕವೇ ಅದನ್ನು ಪ್ರತಿಷ್ಠಾಪಿಸುವ ಪ್ರಯತ್ನವನ್ನು ಮಾಸ್ತಿ ಮಾಡಿದ್ದಾರೆ.

'ಅವ್ವಾ ಬಂಗಾರದಂಥ ಮಗನನ್ನು ಹೆತ್ತುಕೊಂಡಿದೀಯಾ. ನಿನ್ನ ಗುಣ ಹೆಂಗೂ ಆ ಮೊಗಾನೂ ಹಂಗೇ ಐತೆ?' ಎಂಬ ಕತೆಯೊಳಗಿನ ನಿರೂಪಕಿಯ ಅಭಿಪ್ರಾಯಕ್ಕೆ ಮಂಗಮ್ಮ, ' ಆದರೆ ಇದೆಲ್ಲ ಏನವ್ವ? ಹುಡುಗ ಬೆಳೆಯೋ ತಂಕಾನೇ. ಬೆಳೆದ ಮೇಲೆ ಯಾವಳೋ ಬರ್ತಾಳೆ. ಈಗ ಅಮ್ಮ ಅಮ್ಮ ಅಂತ ಇರೋ ಮಗ ಆಗ ಅಮ್ಮನ್ನ ನೀನು ಇದ್ದೀಯಾ ಸತ್ಯಾ ಅಂತ ಕೇಳೋಲ್ಲೆ' ಎನ್ನುವುದು, 'ಸರಿಬಿಡು ನನ್ನ ತಾಯಿ, ಕೈಹಿಡಿದ ಗಂಡನೇ ನನ್ನ ಮಾತನ್ನು ಕೇಳಲಿಲ್ಲ. ಇನ್ನು ಮಗ ಏನು ಕೇಳಿಯಾನು ? ಅಯ್ಯೋ ನನ್ನ ತಾಯಿ, ನಾನು ಒಳ್ಳೇ ಶಾಲೆ ಉಡಲಿಲ್ಲ. ಇನ್ಯಾವಳೋ ಉಟ್ಟುಕೊಂಡು ಶಾಲೆಗೆ ಬೆರಗಾಗಿ ಹೊದ ಅವಳ ತಾವ ಏನೋ. ಹೆಂಗಾದರೂ ಇರ್ಲಿ. ನನ್ನ ಮನೆ ನನ್ನ ಹೆಂಡ್ರು ಅಂತ ಗಂಡಸಿರೋದೆ ಚೆಂದ ಅಂತ ಸುಮ್ಗಿದ್ದೆ. ನೀನು ಮಾತ್ರ ನೋಡು, ಗಂಡ ಮನೆಗೆ ಬರೋ ಹೊತ್ತಿಗೆ ಒಳ್ಳೇ ಶಾಲೆ ಉಟ್ಟುಕೊಂಡು ಓಡಾಡು. ಗಂಡಸರ ಮನಸ್ಸು ಬಹಳ ಚಪಲ ತಾಯಿ. ಅವರ ಕಣ್ಣಿಗೆ ಚೆಂದಾಗಿರೋ ಹಂಗೆ ಶಾಲೆನೋ, ರವಿಕೇನೋ ಏನಾದರೂ ಒಂದು ಹೆಂಗಸು ಹಾಕಿಕೊಳ್ಳುತ್ತಾ ಇರಬೇಕು. ಹೂವು ಗಂಧ ತೋರಿದ್ದನ್ನು ತಕ್ಕೊಂಡು ಅವರ ಮನಸ್ಸಿಗೆ ಸಮಾಧಾನ ಇರೋ ಹಂಗೆ ಇಟ್ಟುಕೋಬೇಕು ತಾಯಿ' ಎಂದಿರುವಲ್ಲಿ ಹೆಣ್ಣನ್ನು ಸಾಂಪ್ರದಾಯಕ ಸಮಾಜ ಸಿದ್ಧಗೊಳಿಸಿದ ಪರಿಚಯ ದೊರೆಯುತ್ತದೆ. ಹೆಣ್ಣಿರುವುದೇ ಗಂಡನನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಂತೃಪ್ತಿ ಪಡಿಸುವುದಕ್ಕೆ ಎಂಬ ನಂಬಿಕೆಯನ್ನು ಯಥಾವತ್ತಾಗಿ ಸ್ವೀಕರಿಸಿದ ಮಾಸ್ತಿ ಅದನ್ನೇ ಹೆಣ್ಣಾದವಳು ಪಾಲಿಸಿಕೊಂಡು ಒಂದು ಕುಟುಂಬ ಕಾಯ್ದುಕೊಳ್ಳುವುದಕ್ಕೆ ಪ್ರೇರೇಪಣೆಯನ್ನೂ ನೀಡುವ ಕೆಲಸವನ್ನು ಇಲ್ಲಿ ನಿರ್ವಹಿಸಿದ್ದಾರೆ.

ಮೊಮ್ಮಗುವನ್ನು ಹೊಡೆದದ್ದನ್ನು ಮಂಗಮ್ಮ ಪ್ರಶ್ನಿಸಿದ ಮಾತ್ರಕ್ಕೆ ಮಗ-ಸೊಸೆಯಿಂದ ಆಕೆ ಪರಕೀಯಳಾಗಿ ಬಿಡುತ್ತಾಳೆ. 'ಏನೋ ಇದು ? ಹೆಂಡ್ರು ನಿನ್ಗೆ ಹಾಕಿರೋ ಮಂಕು ಬೂದೀಲಿ ನಿನ್ಗೆ ಅವಳು ಕಂದನ್ನ ಬಡಿದರೂ ಸರಿಯೆ. ನನ್ನ ಬೈದರೂ ಸರಿಯೇ ಆಗದೆ. ಚೆನ್ನಾಗಿ ಹೋಯ್ತಪ್ಪ ನಾಳೆ ಅವಳು ತಾಯೀನ ಆಚೆಗೆ ಕಳಿಸು ಅಂದ್ರೂ, ನೀನು ಕಳಿಸೋನೆ' ಎಂಬ ಮಂಗಮ್ಮನ ಆರೋಪಕ್ಕೆ 'ಇನ್ನೇನು ಮಾಡೋಕಾಗ್ತದವ್ವ, ಹೆಂಡ್ತಿ ಇದ್ರೆ ನಾನಿರೋದಿಲ್ಲ ನಾನಿದ್ರೆ ಹೆಂಡ್ತಿ ಇರೋದು ಬೇಡ ಅಂದ್ರೆ, ದಿಕ್ಕಿಲ್ಲದ ಹೆಂಗ್ಸು ಅವಳ್ನ ಏನು ಮಾಡೋದು' 'ನೀನ್ಗೇನವ್ವ ದನ ಅದೆ, ಕರ ಅದೆ, ದುಡ್ಡು ಅದೆ, ಕಾಸದೆ, ನಿನ್ನ ನಾನು ಸಾಕಬೇಕಾದ್ದೇನು, ನಿನ್ನಿಷ್ಟ ಹೋಗಬೇಕು ಅಂದರೆ ನಾನು ಬ್ಯಾಡ ಅನ್ನೋಲ್ಲ ಅವ್ವ, ನಿಮ್ಮ ಪಂಚಾಯ್ತಿ ಸಾಕು ನನಗೆ'

ಎಂದಿರುವಲ್ಲಿಯೂ ಹೆಂಡತಿಯ ಪರ ವಹಿಸುವ ಮಗ ಹೆತ್ತವಳನ್ನೇ ದೂರ ಮಾಡುವುದಕ್ಕೆ ಹೇಸದಷ್ಟು ಬದಲಾಗುತ್ತಾನೆ. ಬುದ್ಧಿ ಮಾತಿಗೆ ಕಿವಿಗೊಡದೆ, ಸಠಮಾರಿತನದಿಂದ ಮನನೋಯಿಸುತ್ತಾನೆ. ಇದರಿಂದಾದ ನೋವಿನಿಂದ ಮಂಗಮ್ಮ ಕುಟುಂಬದಿಂದ ಹೊರಬರುತ್ತಾಳೆ. ಇದು ತನಕ ಮೊಮ್ಮಗುವಿಗಾಗಿ ಹಣ ಕೂಡಿ ಹಾಕುತ್ತಿದ್ದುದನ್ನು ನಿಲ್ಲಿಸುತ್ತಾಳೆ. ತನ್ನ ಸ್ವಂತ ಸುಖಕ್ಕಾಗಿ ಹಣ ವ್ಯಯಿಸಲಾರಂಭಿಸುತ್ತಾಳೆ. ಈ ಪರಿಣಾಮವಾಗಿಯೇ ಆಕೆ ಮಕ್‌ಮಲ್ ಜಾಕೀಟು ಹೊಲಿಸಿಕೊಳ್ಳುವುದಕ್ಕೆ ಹಾತೊರೆಯುತ್ತಾಳೆ. ಆ ಮೂಲಕ ಆಧುನಿಕತೆಯ ಬೆನ್ನು ಹತ್ತುತ್ತಾಳೆ. ಅದನ್ನು ಆ ಸ್ವಾತಂತ್ರ್ಯ ಹಾಗೂ ಬದಲಾವಣೆಯನ್ನು ಒಪ್ಪಿಕೊಳ್ಳಬಾರದಂತೆ ಮಂಗಮ್ಮಳನ್ನು ಬುದ್ಧಿ ಭ್ರಮಣೆಗೆ ಒಳಪಡಿಸಲಾಗಿದೆ. ಮಾಸ್ತಿಗೇನೇ ಈ ತೆರನ ಸ್ವಭಾವ ಹಿಡಿಸುವುದಿಲ್ಲ. ಆದ್ದರಿಂದಲೇ ಅವಳ ನಿರ್ಧಾರವನ್ನು ಮೌಲ್ಯ ಬಾಹಿರವಾದುದಾಗಿ ಚಿತ್ರಿಸಿದ್ದಾರೆ.

ಮಕ್‌ಮಲ್ ಜಾಕೀಟ್ ಕುರಿತಂತೆ ಬೆಂಗಳೂರಿನಲ್ಲಿ ಓದುತ್ತಿದ್ದ ಹುಡುಗನೊಬ್ಬ 'ಏನವ್ವಾ, ಪೂರಾ ಮಕ್‌ಮಲ್ ಹಾಕಿಬಿಟ್ಟೆ' ಎಂದದ್ದು, ಮಂಗಮ್ಮ 'ಯಾಕೋ ಹೈದ ಬಹಳ ಉಚಾಯಿಸಿ ಮಾತ್ನಾಡ್ತೀಯಾ, ನೀನು ಆ ಕತ್ತಿಗೆ ಉರ್ಲು ಹಾಕ್ಕೋಬಹುದಂತೆ, ನಾನು ಜಾಕೀಟು ಯಾಕೆ ಹಾಕ್ಕೋಬಾರದು?' ಎಂದು ಪ್ರಶ್ನಿಸುವುದು, ಸೊಸೆಯಾದವಳು 'ಸೊಸೆಗೆ ಒಂದು ರವಿಕೆ ಹೊಲಿಸಲಾರದೆ ಅತ್ತೆ ಬೇರೆ ಸಂಸಾರ ಆಗಿ, ಜಾಕೀಟು ಹಾಕಿರೋದ ನೋಡಿ' ಎಂದು ಟೀಕಿಸುವುದು ಮಂಗಮ್ಮಳಿಗೆ ನೋವುಂಟು ಮಾಡುತ್ತದೆ

ಆಕೆ ಕುಟುಂಬದಿಂದ ಹೊರಬಂದ ಮೇಲೆ ಎದುರಿಸುವ ಸಮಸ್ಯೆಗಳೂ ಕೂಡ ಅವಳ ನಿರ್ಧಾರವನ್ನು ಬದಲಾಯಿಸುವಂತೆ ಮಾಡುತ್ತದೆ. ಸೊಸೆಯೇ ಲೇವಡಿ ಮಾಡುವುದು, ಬರುವ ರಂಗಪ್ಪನು ಮಂಗಮ್ಮ ಕುಟುಂಬದಿಂದ ಹೊರಗಿರುವುದನ್ನು ತಿಳಿದೇ ಅವಳಲ್ಲಿರುವ ಹಣಕ್ಕಾಗಿ 'ಏನು ಮಂಗಮ್ಮ, ಚೆಂದಾಗಿದೀಯಾ' ಎನ್ನುವುದು, ಹತ್ತಿರವಾಗುತ್ತ 'ಒಸಿ ಸುಣ್ಣ ಕೊಡತೀಯಾ ' ಎಂದು ಪುಸಲಾಯಿಸುವುದು, 'ಮಂಗಮ್ಮ ಸಮಯಾಗೈತೆ ಒಂದು ಸ್ವಲ್ಪ ಸಾಲ ಕೊಟ್ಟೀಯಾವ್ವ' ಎಂದು 'ನಿನ್ನ ಮಗನೂ ನೀನೂ ಜೊತೆಗೆ ಇದ್ದಿದ್ದರೆ ನಾನು ನಿನ್ನ ಕೇಳುತ್ತಾ ಇರಲಿಲ್ಲ. ಏನೋ ಸೊಸೆಗೆ ಬೇಕು ಬಾಕು ಮಾಡಿಸೋವಾ ಅಂತಿರುತೀಯಾ ಅಂತ ನಾ ಬಲ್ಲೆ. ಈಗ ಅದೇನೂ ಇಲ್ಲವಲ್ಲ ಅಂತ ಕೇಳಿದೆ' ಎನ್ನುವುದು, ಆಕೆ 'ನಮ್ಮ ಯಜಮಾನರನ್ನು ಕೇಳಿ ಹೇಳುತ್ತೇನೆ' ಎಂದದ್ದು, ಅವಳ ಕೈಹಿಡಿದು 'ಮಂಗಮ್ಮ ನೀನು ಎಷ್ಟು ಚೆಂದಾಗಿದ್ದೀಯಾ ಅಂತೀಯಾ' ಎಂದದ್ದನ್ನು ಕುಟುಂಬದಿಂದ ಹೊರಗಿರುವ ಹೆಣ್ಣಿಗೆ ಚಪಲದ ಗಂಡಸರಿಂದಾಗಿ ಭದ್ರತೆ ದೊರೆಯುವುದಿಲ್ಲ ಎಂಬುದನ್ನು ಪ್ರತಿಪಾದಿಸುವುದಕ್ಕಾಗಿಯೇ ಚಿತ್ರಿಸಿದ್ದಾರೆ. ಕುಟುಂಬದಿಂದ ಹೊರಗಿದ್ದರೂ ಯಜಮಾನನ್ನು ಕೇಳಿ ಹೇಳುತ್ತೇನೆ ಎನ್ನುವಲ್ಲೂ ಸ್ತ್ರೀ ಪುರುಷ ಯಾಜಮಾನ್ಯ ಶಾಹಿತ್ವಕ್ಕೆ ಮೊರೆಹೋಗಬೇಕಾದ ಅನಿವಾರ್ಯತೆಯನ್ನು ಮರೆಯದಂತೆ ಮಾಡಿದ್ದಾರೆ. ಆದುದರಿಂದಲೇ

ಮಂಗಮ್ಮ ಅನುಭವಿಸುವ ಬದುಕನ್ನು ಅಭದ್ರತೆಯದ್ದಾಗಿ ಚಿತ್ರಿಸಿದ್ದಾರೆ. ಆದುದರಿಂದಲೇ ಆಕೆ ಪ್ರತ್ಯೇಕವಾಗಿ ಬದುಕಲು ತಂದುಕೊಂಡಿದ್ದ ಧೈರ್ಯವನ್ನು ಉಡುಗಿಸಿಬಿಡಲಾಗಿದೆ. ಈ ಭಯವನ್ನು, ಏಕಾಂತವನ್ನು ನೀಗಿಸಿಕೊಳ್ಳುವುದಕ್ಕೆ ಆಕೆ ಮತ್ತೆ ಕುಟುಂಬದ ಮೊರೆ ಹೋಗುವಂತೆ ಮಾಡಲಾಗಿದೆ.

ಹೀಗೆ ಗಂಡು ರೂಪಿಸಿದ ಸಮಾಜಕ್ಕೆ ಹೆಣ್ಣು ಬದ್ಧಳಾಗಬೇಕಾದ ಪರಿಸ್ಥಿತಿಯನ್ನು ಮಂಗಮ್ಮಳ ಬದುಕಿನ ಮೂಲಕವೇ ಪರಿಚಯಿಸಿದ್ದಾರೆ. ಆಧುನಿಕತೆಯ ಪ್ರಭಾವದ ವಿಚಾರವಂತಿಕೆಯಿಂದ ಕುಟುಂಬದ ಹೊರಬಂದು ಒಬ್ಬಂಟಿ ಜೀವನ ನಡೆಸಿದ ಸಂದರ್ಭದಲ್ಲಿ ಆಕೆ ಮೊಮ್ಮಗುವನ್ನು ಪ್ರೀತಿಯಿಂದ ಕಾಣುತ್ತಲೇ ಬರುತ್ತಾಳೆ. ಇದು ಮನುಷ್ಯ ಸಂಬಂಧದ ಬಿಗಿಯನ್ನು ಸಡಿಲಿಸಲಾಗದ ಬಂಧವನ್ನು ಸೂಚಿಸುತ್ತದೆ. ಈ ಸಂಬಂಧದ ನೆಪದಿಂದಲೂ ಅವಳನ್ನು ಕುಟುಂಬದ ಹತ್ತಿರಕ್ಕೆ ಬರುವಂತೆ ಮಾಡುವ ಕೆಲಸವನ್ನು ಮಾಸ್ತಿ ಜಾಣ್ಮೆಯಿಂದ ನಿರ್ವಹಿಸುತ್ತಾರೆ. ಸೊಸೆ ಹಾಗೂ ಮಗನ ಮೇಲಣ ಒಟ್ಟು ಅಭಿಪ್ರಾಯವನ್ನು ಕೊನೆಗೆ ಬದಲಾಯಿಸಿಕೊಳ್ಳುವುದು ಅಂಥ ವಾತಾವರಣ ಕುಟುಂಬದಲ್ಲಿ ಸಹಜ. ಅಷ್ಟಕ್ಕೇ ಅದರಿಂದ ಹೊರಬರಬಾರದೆಂಬ ಸಾರವನ್ನು ಪ್ರಕಟಿಸಿದ್ದಾರೆ. ಕುಟುಂಬದ ಸಂಘರ್ಷದ ನಡುವೆಯೂ ತನ್ನವರೆಂಬ ಮಮಕಾರದಿಂದ ಮಂಗಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸಲೆತ್ನಿಸುತ್ತಾಳೆ.

ಯಜಮಾನಿಕೆ ವಿಷಯದಲ್ಲಿ ಆರಂಭವಾದ ಕುಟುಂಬ ಕಲಹ ಕೊನೆಗೆ ಅಂತ್ಯ ಕಂಡು ಅತ್ತೆ-ಸೊಸೆ ಇಬ್ಬರೂ ಒಟ್ಟಾಗಿ ಮೊಸರು ಮಾರಲು ಬರುತ್ತಾರೆ. ಆ ಕೆಲಸವನ್ನು ಸೊಸೆಗೆ ಒಪ್ಪಿಸಿಬಿಡುತ್ತಾಳೆ. ಈ ಮೂಲಕ ಯಜಮಾನಿಕೆಯನ್ನು ತಲೆಮಾರಿನ ಬದಲಾವಣೆಗೆ ಅನುಸಾರವಾಗಿ ಬಿಟ್ಟುಕೊಡಬೇಕಾದ್ದು ಸಹಜವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಮನುಷ್ಯ ಸಂಬಂಧ ಚೆಂದವಾಗಿಯೇ ಸಾಗಬೇಕು, ಅದಕ್ಕಾಗಿ ಹೆಣ್ಣು ಕುಟುಂಬ ಬಿಟ್ಟಿರಬಾರದು ಎಂದು ಹೇಳುವ ಮಾಸ್ತಿ ಅದರಿಂದ ಹೊರಬಂದರೆ ಎದುರಾಗುವ ಕಷ್ಟಗಳನ್ನು ಮಂಗಮ್ಮನ ಬದುಕು, ತೀರ್ಮಾನ, ಹಾಕುವ ಅಭದ್ರತೆ, ಗೊಂದಲ, ಅಶಾಂತಿಯ ಪರಿಸ್ಥಿತಿಗಳ ಮೂಲಕ ಪ್ರತಿಪಾದಿಸಿದ್ದಾರೆ.

ಎಂಥದ್ದೇ ಸಂದರ್ಭದಲ್ಲಿ ಕೂಡ ಹೆಣ್ಣು ಕುಟುಂಬದಿಂದ ಹೊರಬರಬಾರದ ಮೌಲ್ಯವನ್ನು ಪ್ರತಿನಿಧಿಸಿದ್ದಾರೆ. ಆದುದರಿಂದಲೇ 'ನಳಿನಿಯ ತಂದೆ' ಕತೆಯ ಲಕ್ಷ್ಮಿ ತನ್ನ ಗಂಡನಿಂದ ತೊಂದರೆಗೆ ಒಳಗಾಗಿದ್ದರೂ ಗಂಡನನ್ನೇ ದೂರ ಮಾಡುತ್ತಾಳೆಯೇ ಹೊರತು ತಾನು ಕುಟುಂಬದಿಂದ ಹೊರಬರುವುದಿಲ್ಲ. ಕುಟುಂಬದ ಪರಿಪಾಲಕಳಾಗುವವಳು ಹೆಣ್ಣೇ ಎಂಬ ನೆಲೆಯಿಂದ ಗಂಡನಿಗೆ ಮಾಸಿಕ ವೇತನ ಕೊಟ್ಟು ದೂರ ಮಾಡಿ ತಾನು ಮಾತ್ರ ಮಗಳೊಂದಿಗೆ ಕಳೆಯುತ್ತಾಳೆ. ತಾನು ಹೆತ್ತ ಮಗಳನ್ನು, ಆಕೆಯನ್ನು ಸಲಹುವ ಜವಾಬ್ದಾರಿಯ ಹಿನ್ನಲೆಯಲ್ಲಿಯೇ ಆಕೆ ಮುನ್ನಡೆಯುತ್ತಾಳೆ. ಮಗಳಿಗೆ ವಿವಾಹ ಮಾಡಿಸುವ ರೀತಿ ಕೂಡ ಇನ್ನೊಂದು ಕುಟುಂಬವನ್ನು ರೂಪುಗೊಳಿಸುವುದಕ್ಕೆ ಹಾಗೂ ಅದು ವೃದ್ಧಿ ಹೊಂದುವುದಕ್ಕೆ ಅವಳನ್ನು ಬದ್ಧಗೊಳಿಸುವುದಾಗಿದೆ. ಕುಟುಂಬವೊಂದು

ಮರ್ಯಾದೆಯಲ್ಲಿ ಮುಂದುವರಿಯಬೇಕೆಂಬ ಕಾಳಜಿಯಿಂದಲೇ ಗಂಡ ಬಂದಾಗಲೂ ಆತನನ್ನು ಪರಿಚಯಿಸದೇ ಉಳಿಯುತ್ತಾಳೆ. ಲಕ್ಷ್ಮಮ್ಮನಿಗೆ ಆಕೆಯ ಗಂಡ ವಿಶ್ವನಾಥ 'ನಾನು ನೀನು ಪಡದೇ ಉಳಿಸಿಟ್ಟ ಸಂಸಾರ ಸುಖ ಮಗಳಿಗೆ, ಅಳಿಯನಿಗೆ ಲಭಿಸಲಿ. ನಿನಗೂ ಜೀವನದಲ್ಲಿ ಸಮಾಧಾನ ದೊರೆಯಲಿ' ಎಂದು ಬರೆಯುವಲ್ಲಿ ಸಂಸಾರ ಸುಖದ ಹಾರೈಕೆಯಿದೆ. ಮತ್ತು ಸಂಸಾರ ಸುಖವೇ ಹೆಚ್ಚು ಮಹತ್ವ ಪಡೆಯುತ್ತದೆ ಎಂಬುದನ್ನು ಮನವರಿಕೆ ಮಾಡಿಸಿ ಒಪ್ಪಿಸುವ ಪ್ರಯತ್ನವಿದೆ.

'ಸಾರಿಪುತ್ರನ ಕಡೆಯ ದಿನಗಳು' ಕತೆಯ ವೇದಾವತಿಯ ಗಂಡ ನರಸಿಂಹ ಶರ್ಮ ಸನ್ಯಾಸಿಯಾಗಿ ಊರುಬಿಟ್ಟರೂ ಸಹನೆಯಿಂದ ಅವನಿಗಾಗಿ ಕಾಯುತ್ತಿರುವುದು ಕೂಡ ಕುಟುಂಬ ಉಳಿಸುವ ನೆಲೆಯಿಂದಲೇ. ಆಕೆಗೆ ಒಂಟಿ ಜೀವನ ಮಾಡುವ ಧೈರ್ಯ ಇದ್ದರೂ ಹಾಗೆ ಬದುಕದಿರುವುದು ಮಗಳು-ಮನೆ ಎಂಬ ಮಮಕಾರವನ್ನು ತೊರೆಯಬಾರದೆಂಬುದನ್ನು ಮನದಟ್ಟು ಮಾಡಿಸುವ ಉದ್ದೇಶವಿರುವುದು ಇಲ್ಲಿ ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. 'ಕುಮುದಾ ನಿಮ್ಮ ಅತ್ತೆಯ ಮನೆಯವರು ಏನೇ ಹೇಳಲಿ, ನಿಮ್ಮಮ್ಮನನ್ನು ಒಬ್ಬಳೇ ಬಿಡಬೇಡ, ಒಂಟಿಯಾಗಿರುತ್ತಾಳೆ, ಬೇಸರ ಪಡುತ್ತಾಳೆ' ಎಂಬ ಕಟ್ಟುಕಟ್ಟಳೆಗಳು ಹೇರುವುದನ್ನು ಅವಲೋಕಿಸಿದರೆ ಹೆಣ್ಣು ಒಂಟಿಯಾಗಿ ಬಾಳಗೊಡುವುದಕ್ಕೆ ಬಿಡುವುದಿಲ್ಲ ಎಂಬುದು ಇಲ್ಲಿ ವೇದ್ಯವಾಗುತ್ತದೆ. ಇಲ್ಲಿ ಆಕೆಗೆ ವಯಸ್ಸಾಗಿದೆ. ಆದುದರಿಂದ ಅಭದ್ರತೆ ಕಾಡುತ್ತದೆ. ಬಳಿಕ ಏಕಾಂತತೆ ದಟ್ಟವಾಗುತ್ತ ಹೋಗುತ್ತದೆ ಎಂಬ ಕಾಳಜಿಗಿಂತ ಮುಖ್ಯವಾಗಿ ಯಾವತ್ತೂ ಹೆಣ್ಣು ಏಕಾಂಗಿಯಾಗಿ ಬಾಳಬಾರದೆಂಬುದನ್ನು ಹೇಳುವುದೇ ಮುಖ್ಯ ಉದ್ದೇಶವಾಗಿದೆ. ಈ ಅನುಕಂಪ ಹೆಣ್ಣಿನಲ್ಲಿ ಒಬ್ಬಂಟಿಯಾಗಿದ್ದೂ ಬದುಕನ್ನು ಎದುರಿಸುವ ಧೈರ್ಯವನ್ನು ಉಡುಗಿಸುವ ಕೆಲಸವನ್ನು ನಾಜೂಕಾಗಿ ಮಾಡುತ್ತದೆ. ಕುಟುಂಬವನ್ನು ಸರಿಯಾದ ನೆಲೆಗೆ ತಲುಪಿಸಬೇಕಾದ ಗುರುತರ ಜವಾಬ್ದಾರಿಯನ್ನು ಹೆಣ್ಣಿಗೆ ಹೊರಿಸಿದ್ದು ಇಲ್ಲಿ ಸ್ಪಷ್ಟವಾಗುತ್ತದೆ. ಅನಂತರ ವೇದವತಿಯೇ ಭಿಕ್ಷುಣಿಯಾಗಿ ಬೌದ್ಧ ಧರ್ಮದ ಸ್ವೀಕಾರ ಮಾಡುತ್ತಾಳೆ. ಇಲ್ಲಿ ಕುಟುಂಬದ ಜವಾಬ್ದಾರಿಯನ್ನು ಮಗಳಿಗೆ ವಹಿಸಲಾಗಿದೆ. ಏಕಾಂತ ಕಾಡಬಾರದ ನೆಪದ ಮೂಲಕ ಗಂಡನೊಂದಿಗೇ ಕುಟುಂಬಕ್ಕೆ ಬದ್ಧಳಾಗಿಯೇ ಹೆಣ್ಣು ಬಾಳಬೇಕಾದ ವೈದಿಕ ಪರಂಪರೆಯ ಮೌಲ್ಯವನ್ನು ಪಾಲಿಸುವಂತೆ ನೀತಿ ಹೇಳಿರುವುದನ್ನು ಇಲಿ ಗಮನಿಸಬಹುದಾಗಿದೆ.

'ವೇಲೂರಿನ ಲಕ್ಷ್ಮಮ್ಮ' ಕತೆಯ ವೇಲೂರಿನ ಲಕ್ಷ್ಮಮ್ಮ ಈ ಹಿನ್ನೆಲೆಯಲ್ಲಿ ಬಹುಮುಖ್ಯಳಾಗುತ್ತಾಳೆ. ಕುರುಡಿಯಾದ ಆಕೆ ಮಕ್ಕಳನ್ನು ಹೆರುವ ಪ್ರಕ್ರಿಯೆಯಲ್ಲಿ ಬಳಕೆಯಾಗುತ್ತಾಳೆಯೇ ವಿನಃ ಯಾವುದೇ ಸ್ವಂತ ಅಸ್ತಿತ್ವವನ್ನು ಪಡೆದುಕೊಂಡಿಲ್ಲ. ಹಣದ ದಾಹದ ಮಂದಿಯ ನಡುವೆ ಕುರುಡಿಯಾಗಿದ್ದರಿಂದ ಅನುಭವಿಸಬೇಕಾಗಿ ಬಂದ ಮಾನಸಿಕ ಹಿಂಸೆಯ ಪರಮಾವಧಿ ಅವಳಲ್ಲಿ ಸಹನಶೀಲ ಗುಣವನ್ನು ಮೈಗೂಡಿಸುತ್ತದೆ. ಕುಟುಂಬವು ಒಂದಾದ ನಂತರ ಒಂದು ಮಗುವನ್ನು ಹೆರುವಂತೆ ಆಕೆಯನ್ನು ಬಳಸಿಕೊಳ್ಳುವುದು ಕುಟುಂಬ ವೃದ್ಧಿಸುವ

ಚೌಕಟ್ಟಿನಿಂದಲೇ. ಆ ಕುಟುಂಬದ ಮುನ್ನಡೆಗೆ ಗಂಡುಬೇಕೆಂಬ ಒತ್ತಾಸೆ ಕೂಡ ಸಾಂಪ್ರದಾಯಿಕ ನೆಲೆಯದ್ದೇ ಆಗಿರುತ್ತದೆ. ಗಂಡ-ಮನೆ-ಮಕ್ಕಳ ಕುರಿತ ವಿಚಾರಕ್ಕೆ ಹೆಣ್ಣು ಬದ್ಧಳಾಗಿರಬೇಕಾದ ಮೌಲ್ಯವನ್ನು ಆಕೆಯ ಬದುಕು ಹೊತ್ತಿದ್ದನ್ನು ಆದರ್ಶೀಕರಿಸಿವುದರ ಬೆನ್ನಲ್ಲೇ ಸ್ತ್ರೀ ಇದರಾಚೆಗೆ ಯೋಚಿಸಬಾರದೆಂಬುದನ್ನು ಸಾರುವ ಮಾಸ್ತಿ ಸಂದೇಶವನ್ನು ಇಲ್ಲಿ ಗಮನಿಸಬಹುದಾಗಿದೆ.

'ಕಾಮನ ಹಬ್ಬದ ಒಂದು ದಿನ' ಕತೆಯ ಸಾವಿತ್ರಮ್ಮ ಗಂಡ ಶ್ರೀನಿವಾಸ ಶಾಸ್ತ್ರಿಯನ್ನು(ಶೀನಿ) ಒಪ್ಪಿಕೊಂಡ ರೀತಿ, ಅವನು ಸತ್ತನೆಂದೇ ಭ್ರಮಿಸಿ ಮುಂದಿನ ಜನ್ಮದಲ್ಲಿ ಅವನೇ ಪತ್ನಿಯಾಗಿಯೇ ದೊರೆಯಬೇಕು ಎಂದು ಆಶಿಸಿ ಅವನಿಲ್ಲದ ದಿನಗಳಲ್ಲಿ ಅವನನ್ನು ನಂಬಿ ಬೂದಿ ಎರೆಯಿಸಿಕೊಳ್ಳುವ ಕ್ರಿಯೆಗೆ ಒಳಗಾದದ್ದರಲ್ಲಿ ಹೆಣ್ಣು ಏನೇ ಆದರೂ ಕುಟುಂಬದೊಳಗಿದ್ದೇ ಎಲ್ಲವನ್ನೂ ಆಚರಿಸಬೇಕಾದ ಮಾರ್ಗದರ್ಶನವಿದೆ. ಹೆಣ್ಣಿಗೆ ಏಕಾಂತ ಜೀವನವನ್ನು ಅನುಭವಿಸಲಾಗದ ರೀತಿ ಹಾಗೂ ಗಂಡನಿಗೆ ಮಾನ್ಯತೆ ಕೊಡಬೇಕಾದ ಸಾಂಪ್ರದಾಯಿಕ ನಂಬಿಕೆಯೇ ಅತ್ಯಂತ ಮೌಲ್ಯಯುತವಾದದ್ದು. ಅದನ್ನು ಸ್ತ್ರೀಯರು ಪಾಲಿಸಬೇಕೆಂಬುದನ್ನು ಮನದಟ್ಟು ಮಾಡಿಸುವುದಕ್ಕೆ ಸಾವಿತ್ರಮ್ಮಳ ಬದುಕನ್ನು ಪರಿಚಯಿಸಿರುವುದನ್ನು ಗ್ರಹಿಸಬಹುದಾಗಿದೆ.

'ಚೆನ್ನಮ್ಮ' ಕತೆಯ ಚೆನ್ನಮ್ಮ ಎಲ್ಲ ಸಂಕಷ್ಟಗಳ ನಡುವೆ ಕೂಡ ಕುಟುಂಬವೊಂದನ್ನು ಜವಾಬ್ದಾರಿಯಿಂದ ನಿಭಾಯಿಸುತ್ತಾಳೆ. ಇದರ ಹಿಂದೆ ಆಕೆ ಅನುಭವಿಸಿದ ನೋವು ವೇದನೆಯನ್ನು ಗುರುತಿಸಿಕೊಳ್ಳಬಹುದಾಗಿದೆ. ಒಂದು ಕುಟುಂಬದೊಳಗಿದ್ದೇ ತಾಯಿಯಾಗುವ ಆಕೆ ಅದೇ ಮಗುವಿನೊಂದಿಗೆ ಹೊರಕ್ಕೆ ಬರುತ್ತಾಳೆ. ಗಂಡನಾದವನೊಂದಿಗೆ ಏಗಲಾಗದ ಜೀವನದ ನಡುವೆಯೂ ಬದುಕುವ ಪ್ರಯತ್ನ ಮಾಡುತ್ತಾಳೆ. ಕೊನೆಗೂ ಆತನ ಶೋಷಣೆ ಸಹಿಸಲಾಗದ ಹಂತಕ್ಕೆ ಬಂದಾಗ ಗಂಡನನ್ನು ಬಿಟ್ಟು ಬದುಕುವ ತೀರ್ಮಾನ ತೆಗೆದುಕೊಳ್ಳುತ್ತಾಳೆ. ಆದರೂ ತಾನು ಕುಟುಂಬದಿಂದ ಹೊರನಡೆಯುವುದಿಲ್ಲ. ಕೇವಲ ಗಂಡನನ್ನು ದೂರಮಾಡಿ ಸ್ವತಂತ್ರಳಾಗುತ್ತಾಳೆ. ಆದರೆ ಸ್ವತಂತ್ರ ಬದುಕನ್ನು ಆಕೆಯಾಗಿಯೇ ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಆಕೆ ಪಡೆದಿಲ್ಲ. ಅಭದ್ರತೆಯ ನೆಪವೊಡ್ಡಿಯೇ ಇಲ್ಲಿಯೂ ಚೆನ್ನಮ್ಮ ತನ್ನಸಂಬಂಧಿಕರೊಂದಿಗೆ ಬೆರೆತು ಬಾಳುವ ನೆಲೆಯಲ್ಲಿ ಅವಳನ್ನು ಒಪ್ಪಿಸಿಕೊಳ್ಳುತ್ತಾಳೆ. ಅದನ್ನೇ ಇತರ ಸ್ತ್ರೀಯರೂ ಪಾಲಿಸಬೇಕೆಂಬುದನ್ನು ಮಾಸ್ತಿ ಈ ಮೂಲಕ ತೋರಿಸಿಕೊಡುತ್ತಿದ್ದಾರೆ.

ಗಂಡ ಸನ್ಯಾಸ ಸ್ವೀಕರಿಸಿದರೂ ಸ್ತ್ರೀ ಮಾತ್ರ ಕುಟುಂಬದೊಳಗೇ ಇದ್ದು ಉಸಿರಾಡಬೇಕೆಂಬ ತತ್ವಕ್ಕೆ ಬದ್ಧಳಾಗಬೇಕೆಂಬುದನ್ನು ಕೂಡ ಮಾಸ್ತಿ ಪ್ರತಿಪಾದಿಸಿದ್ದಾರೆ. ಅದೇ ತತ್ವವನ್ನು ಪ್ರತಿಪಾದಿಸುವ 'ಸನ್ಯಾಸವಲ್ಲದ ಸನ್ಯಾಸ' ಕತೆಯಲ್ಲಿ ಪತ್ನಿ ನರಸಮ್ಮ ಬೆಂಡೆಕಾಯಿಯ ಹುಳಿಯನ್ನು ಉಪಾಧ್ಯಾಯ ಪತಿ ನರಸಿಂಹಯ್ಯನಿಗೆ ಕ್ಲುಪ್ತ ಸಮಯಕ್ಕೆ ಮಾಡಿಹಾಕದೇ ಇದ್ದುದರಿಂದ ಆತ ಸಿಟ್ಟುಗೊಳ್ಳುತ್ತಾನೆ. ಪರಿಣಾಮವಾಗಿ ಸನ್ಯಾಸತ್ವವನ್ನು ಸ್ವೀರಿಸುತ್ತಾನೆ. ಇದಕ್ಕೆ ಮುಖ್ಯ ಕಾರಣ ಗಂಡನ ಮಾತನ್ನುಹೆಂಡತಿ

ಪಾಲಿಸದೇ ಇರುವುದು ಎಂಬುದನ್ನುಮಾಸ್ತಿ ಎತ್ತಿತೋರಿಸುತ್ತಾರೆ. ಹೆಣ್ಣಿನ ತಪ್ಪನ್ನೇ ಬೆಟ್ಟು ಮಾಡಿ ತೋರಿಸುವ ಮಾಸ್ತಿ ಗಂಡಿಗೂ ಸಮಯಪ್ರಜ್ಞೆ, ಸಹನೆ ಇರಬೇಕು ಎಂಬುದನ್ನು ಎಲ್ಲೂ ನೆನಪಿಸುವುದಿಲ್ಲ. ಪತಿಯನ್ನು ಉಪಚರಿಸುವುದು ಗೃಹಿಣಿಯ ಕರ್ತವ್ಯವಾದುದರಿಂದ ಅದರಿಂದ ಹೊರತಾಗದಂತೆ ಸ್ತ್ರೀಯರನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ.

ಗಂಡನ ಮನೆ ಸೇರಿದ ಹೆಣ್ಣು ಅಲ್ಲಿ ಎಂಥ ಕಷ್ಟವೇ ಬಂದರೂ ಅದೊಂದು ಕಷ್ಟವೇ ಅಲ್ಲ ಎಂದೆಣಿಸಿ ಬಾಳಬೇಕಾದ ಪರಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಅದನ್ನು ಸಮ್ಮತಿಸುವಂತೆ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ ಕೂಡ ನಡೆಯುತ್ತಾಳೆ. ಗಂಡನ ಗುರುವಿಗೆ ಬಡಿಸಿ ಆತ ಕೆಳ ಜಾತಿಯವನೆಂಬ ಕಾರಣದಿಂದ ಸ್ನಾನ ಮಾಡಿ ಬಂದದ್ದು, ಪತಿ ಅತಿಯಾಗಿ ಗೌರವ ಕೊಡುತ್ತಿದ್ದ ಗುರುವಿನ ಮನೆಯವರಿಗೆ ಪತ್ನಿ ಬಯ್ದದ್ದು, ಅದರಿಂದ ನೊಂದು ಹೊತ್ತು ಮಾಡಿ ಮನೆಗೆ ಬಂದಾಗ ಪತ್ನಿ ಮಲಗಿದ್ದಳು ಎಂಬ ಕಾರಣಕ್ಕೆ ಸಿಟ್ಟಾಗಿ ರಾಮಾನುಜಾಚಾರ್ಯರು ಸನ್ಯಾಸ ತೆಗೆದುಕೊಳ್ಳುತ್ತಾರೆ. ಈ ಮೂಲಕ ಕುಟುಂಬ ಒಡೆದು ಹೋದದ್ದು ಕೇವಲ ಹೆಣ್ಣಿನಿಂದಲೇ ಎಂದು ಬೆಟ್ಟುಮಾಡಲಾಗಿದೆ. ಆದರೆ ಇಂಥ ಸಣ್ಣಪುಟ್ಟ ವಿಷಯಕ್ಕೂ ಸಿಟ್ಟುಗೊಳ್ಳುವ ನೆಪದಿಂದ ಸನ್ಯಾಸತ್ವ ಸ್ವೀಕರಿಸುವುದು, ಬಳಿಕ ಪತ್ನಿ ಗಂಡನ ನೆನಪಿನಲ್ಲಿಯೇ ಕೊರಗುತ್ತ ಕೂರುವುದು ಪತಿಯ ನಿರ್ಲಕ್ಷ್ಯದ ಪರಿಣಾಮವಾಗಿಯೇ ಪರಿಚಿತಗೊಂಡಿದೆ. ಇಲ್ಲಿ ದಾಂಪತ್ಯ ಜೀವನದ ಹೊಂದಾಣಿಕೆಗೆ ಪರಸ್ಪರರ ನಡುವಿನ ಅರ್ಥೈಸಿಕೊಳ್ಳುವಿಕೆ, ಹೊಂದಾಣಿಕೆಗಳ ಅಗತ್ಯವನ್ನು ಮನನ ಮಾಡಿಸುವ ಪ್ರಯತ್ನ ಮಾಡಲಾಗಿದೆ. ಹೊಂದಿಕೊಳ್ಳದ, ಸ್ವತಂತ್ರ ಆಲೋಚನೆ ಹೊಂದಿದ ಸ್ತ್ರೀಯರು ಸುಂದರ ಬದುಕು ಕಾಣದೇ ಕಷ್ಟ-ನಷ್ಟ-ನೋವು ಅನುಭವಿಸಬೇಕಾಗಿ ಬರುತ್ತದೆ ಎಂಬುದನ್ನೇ ಈ ಮೂಲಕ ಚಿತ್ರಿಸಿ ತೋರಿಸಿಕೊಟ್ಟಿದ್ದಾರೆ. ಇದು ವಿವಾಹವಾದ ಆರಂಭದಲ್ಲಿ ಸರಿಯಾಗಿ ನಡೆದುಕೊಳ್ಳದೆ ಬಳಿಕ ಗಂಡನಿಗಾಗಿ ಪರಿತಪಿಸುವ ಸ್ತ್ರೀಯ ರೀತಿಯಿಂದ ಮತ್ತು ಆಚಾರ್ಯರ ಪತ್ನಿ ಆಚಾರ್ಯರ ಜ್ವರ ಆವಾಹಿಸಿಕೊಂಡು ತನ್ನ ಸಾವನ್ನು ತಂದುಕೊಳ್ಳುವ ದುರಂತವನ್ನು ಪರಿಚಯಿಸಿ ಪ್ರತೀ ಹೆಣ್ಣೂ ಗಂಡನಿಗೆ ಅಧೀನಳಾಗಿಯೇ ಇರಬೇಕು ಎಂದು ಉಪದೇಶ ನೀಡಿದ್ದಾರೆ. ಈ ಉಪದೇಶ ಹೇಗೇ ಆಗಲಿ ಸ್ತ್ರೀ ಕುಟುಂಬವನ್ನು ಕಟ್ಟಬೇಕು. ಗಂಡನೊಂದಿಗೆ ಆಕೆ ಜೀವನ ಸಾಗಿಸಬೇಕು. ಅದು ಅಸಾಧ್ಯವಾದರೆ ಅವಳಿಗೆ ಬದುಕು ಸಹ್ಯವಾಗುವುದಿಲ್ಲ ಎಂಬುದನ್ನೂ ಸೂಚಿಸಿದ್ದಾರೆ. ಸೀತೆಯಾಗಲಿ, ಇಂದಿರೆಯಾಗಲಿ ಅವರವರದೇ ನೆಲೆಯಲ್ಲಿ ಮನೆ-ಸಂಸಾರವನ್ನು ಸಾಗಿಸುತ್ತಾರೆ. ಒಳ್ಳೆಯ ರೀತಿಯಲ್ಲಿ ಗಂಡನೊಂದಿಗೆ ಜೀವನ ನಡೆಸುತ್ತಾರೆ. ಆದುದರಿಂದ ಅವರು ಗಂಡನ ಪ್ರೀತಿಗೆ ಒಳಗಾಗುತ್ತಾರೆ. ಗಂಡನನ್ನು ಚೆನ್ನಾಗಿ ನೋಡಿಕೊಳ್ಳುವುದರಿಂದ ಅವರ ಕುಟುಂಬ ನಿರ್ವಹಣೆಯೂ ಇಲ್ಲಿ ಉತ್ತಮವಾಗಿ ನಡೆಯುತ್ತದೆ ಎಂಬ ಅಂಶವನ್ನೂ ಇಲ್ಲಿ ಇವರ ಮೂಲಕ ಮಾಸ್ತಿ ಸಾಕಾರಗೊಳಿಸಿದ್ದಾರೆ.

ಒಂದು ಕುಟಂಬದೊಳಗಿನ ಕಟ್ಟುಪಾಡು ಇನ್ನಷ್ಟು ಹತ್ತಿರವಾಗಿಸುವುದಕ್ಕೆ ಪೂರಕವಾಗುವವರೇ ಸ್ತ್ರೀಯರು. ಅದರಲ್ಲೂ ವೈದಿಕ ಪರಂಪರೆಯೊಳಗೆ ಬೆಳೆದುಬಂದ ಸ್ತ್ರೀಯರು ಅಲ್ಲಿನ ಸಾಂಪ್ರದಾಯಿಕ ಚೌಕಟ್ಟುಗಳನ್ನು ಹಾಗೆಯೇ ಒಪ್ಪಿಕೊಳ್ಳುವುದಾಗಿ ಪರಿಚಯಿಸಿ ಅದನ್ನು ಪಾಲಿಸುವಂತೆ ಪ್ರೇರಿಸುವ ಕೆಲಸವನ್ನು ಮಾಸ್ತಿ ಸಮರ್ಥವಾಗಿ ನಿರ್ವಹಿಸಿದ್ದಾರೆ. ವೈದಿಕ ಪರಂಪರೆಯ ತತ್ವವನ್ನೇ ಅವೈದಿಕ ಪರಂಪರೆಯವರು ಕೂಡ ಅನುಸರಿಸಬೇಕು ಎಂಬ ಧ್ಯೇಯ, ಧೋರಣೆಯನ್ನೂ ಹೇರುವಲ್ಲಿ ಅವರು ಕೂಡ ಪರಂಪರೆಗೇ ಬದ್ಧರಾಗಿರಬೇಕೆಂಬ ಕಾಳಜಿ ಇದೆ. ವೈದಿಕ-ಅವೈದಿಕ ಸಂಸ್ಕೃತಿಯ ನಡುವೆಯೂ ಬದುಕನ್ನು ಸಾರ್ವತ್ರಿಕಗೊಳಿಸುವ ತತ್ವವೊಂದನ್ನು ಸಾಮಾನ್ಯೀಕರಿಸುವ ಧ್ಯೇಯ ಹೊಂದಿದ್ದಾರೆ. ಆ ಪರಿಣಾಮವಾಗಿಯೇ 'ದುರದೃಷ್ಟದ ಹೆಣ್ಣು' ಕತೆಯ ದುರದೃಷ್ಟದ ಹೆಣ್ಣಿಗೆ ಷಂಡ ಗಂಡನಿಂದಾಗಿ ತಾನು ಅನುಭವಿಸಿದ ಯಾತನೆ, ಹಿಂಸೆಗಳು ವೇಶ್ಯಾವೃತ್ತಿಗೆ ತನ್ನನ್ನು ಇಳಿಸಲು ಪ್ರಯತ್ನಿಸಿದ ಅವನ ಪ್ರವೃತ್ತಿ ವಾಕರಿಕೆ ಹುಟ್ಟಿಸುತ್ತದೆ. ಅದು ಆಕೆ ಅವನನ್ನು ತೊರೆದು ಹೊರಬರುವಂತೆ ಮಾಡುತ್ತದೆ. ಆದರೆ ಆಕೆ ಇನ್ನೊಬ್ಬ ಗಂಡಿನೊಂದಿಗೇ ಬದುಕು ಸಾಗಿಸುವುದು ಹೆಣ್ಣೊಬ್ಬಳು ಆಯ್ಕೆ ಮಾಡಿಕೊಂಡ ಬದುಕಿನ ಮಾರ್ಗ ಇಲ್ಲಿ ವಿವಾಹಕ್ಕೆ, ಕುಟುಂಬಕ್ಕೆ ಒಪ್ಪಿತವಾಗುತ್ತದೆ ಎಂದು ಮಾಸ್ತಿ ಸೂಚಿಸಿದ್ದಾರೆ. ಅವಳು ಗಂಡನನ್ನು ಬಿಡುವುದಕ್ಕೆ ಆ ಸಮ್ಮತಿ ಸುವುದು ಆಕೆ ಇನ್ನೊಬ್ಬನೊಂದಿಗೆ ಬದುಕುತ್ತಾಳೆ ಎಂಬುದರಿಂದ. ಈ ಆಯ್ಕೆ ಕುಟುಂಬವನ್ನು ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಾರೆ.

ಮಾಸ್ತಿ ಅವರ ಕತೆಗಳಲ್ಲಿ ಕುಟುಂಬವೊಂದನ್ನು ಮುಂದುವರಿಸಿಕೊಂಡು ಹೋಗುವುದನ್ನು ಒಪ್ಪಿಕೊಂಡ ಅವೈದಿಕ ಸ್ತ್ರೀಯರು ಅಲ್ಲಿನ ಕಟ್ಟಳೆಗಳನ್ನು ಮುರಿಯಲಾಗದ ಬಂಧಕ್ಕೆ ಸಿಲುಕಿಕೊಳ್ಳುತ್ತಾರೆ. ಈ ಕುಟುಂಬ ಪಾಲನೆ ಕುರಿತ ಅಸಮಾಧಾನ ವ್ಯಕ್ತಪಡಿಸುವುದನ್ನಾಗಲೀ, ಚರ್ಚೆ ನಡೆಸುವುದನ್ನಾಗಲೀ ಅವರು ಮಾಡುವುದಿಲ್ಲ. ಅದು ಸರಿಯಲ್ಲ ಎಂಬ ನಂಬಿಕೆಯನ್ನೇ ಒಳಗೊಂಡ ಅವರ ಕುಟುಂಬ ನಿರ್ವಹಣೆಯ ಕುರಿತು ಯಾವ ಬದಲಾವಣೆಗೂ ಪ್ರಯತ್ನಿಸುವುದಿಲ್ಲ.

ಕುಟುಂಬದಿಂದ ಹೊರಗಿರುವ ಸ್ತ್ರೀಯರಾಗಿ 'ಚಂದ್ರವದನಾ' ಕತೆಯ ಚಂದ್ರವದನಾ ಮತ್ತು 'ಬೀದಿಯಲ್ಲಿ ಹೋಗುವ ನಾರಿ' ಕತೆಯ ನಾಗರತ್ನಸಾನಿ ಪರಿಚಿತಗೊಂಡಿದ್ದಾರೆ. ಆದರೆ ಅವರು ವೇಶ್ಯಾ ವೃತ್ತಿಯವರಾಗಿ ಭಿನ್ನರಾಗುತ್ತಾರೆ. ಚಂದ್ರವದನೆ ತಾಯಿಯಾಗುವ ಪ್ರಕ್ರಿಯೆಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. ಆದರೆ ಆಕೆ ಒಂದು ಕುಟುಂಬದೊಳಗೆ ಬದ್ಧಳಾಗಿರುವುದಕ್ಕಾಗಿ ಆಕೆಯ ವೃತ್ತಿ ಬಿಡುವುದಿಲ್ಲ. ಓರ್ವ ಕಲಾವಿದೆಯಾಗಿರುವುದರಿಂದ ಅದೇ ಅವಳಿಗೆ ಮುಖ್ಯವಾಗುತ್ತದೆ. ಅವಳಿಗೆ ಕುಟುಂಬದೊಳಗಿನ ಬದುಕೂ ಸಹ್ಯವಾಗುವುದಿಲ್ಲ. ಇದರಿಂದಾಗಿ ಅವಳು ಗೌರವಾನ್ವಿತ ಮನೆತನದವಳಾಗಿ ಗುರುತು ಪಡೆಯುವುದಿಲ್ಲ. ಚಂದ್ರವದನಾಳ ಹೆರಿಗೆಗೆ ಸಹಕಾರ ನೀಡುವುದು

ಕುಟುಂಬವೇ. ಅದು ಕುಟುಂಬ ನೀಡುವ ರಕ್ಷಣೆಯನ್ನು ಪ್ರತಿನಿಧಿಸುತ್ತದೆ. ಅಲ್ಲದೆ ಆಕೆಗೆ ಹೆರಿಗೆಗೆ ಕದ್ದು ಮುಚ್ಚಿಯೇ ಇನ್ನೊಂದು ಊರಾದ ಸಿರಿವರಕ್ಕೆ ಹೋಗುವುದು ಕುಟುಂಬದ ಒಳಗಿಲ್ಲದ ಹೆಣ್ಣೊಬ್ಬಳು ಬಸಿರು ಬಾಣಂತನದ ಸಂದರ್ಭದಲ್ಲಿ ಎದುರಿಸಬೇಕಾಗಿ ಬರುವ ಸಂಕಷ್ಟಗಳನ್ನು ವಿವರಿಸುತ್ತದೆ.

'ಬೀದಿಯಲ್ಲಿ ಹೋಗುವ ನಾರಿ' ಕತೆಯ ನಾಗರತ್ನಸಾನಿ ವೇಶ್ಯೆ. ಅವಳ ಕುಟುಂಬದ ಮಹತ್ವ ತಿಳಿದವಳಲ್ಲ. ಆಕೆಗೆ ಅಲ್ಲಿನ ಸಂಬಂಧಗಳೂ ಕೂಡ ಅರ್ಥವಾಗುವುದಿಲ್ಲ. ಶ್ರೀನಿವಾಸಯ್ಯ ಅವಳ ವೃತ್ತಿಯನ್ನು ತಿಳಿದಿದ್ದರೂ ತಾತ್ಸಾರ ಮಾಡುವುದಿಲ್ಲ. ತನ್ನ ತಂದೆಗೆ ಜನಿಸಿದ ಅವಳನ್ನು ತಂಗಿ ಒಂದು ಕರೆಯುತ್ತಾನೆ. ಹಾಗೂ ಮುತ್ತಿಡುವುದಕ್ಕೆ ಮುಂದಾಗುತ್ತಾನೆ. ಆದರೆ ಆಕೆಗೆ ಕುಟುಂಬದ ಸಂಬಂಧದ ಅನುಭವ ಇಲ್ಲದೇ ಹೋದುದರಿಂದಾಗಿ ಆಕೆಗೆ ಕುಟುಂಬವನ್ನು ಒಪ್ಪಿಕೊಳ್ಳುವುದಕ್ಕೆ ಅಥವಾ ಅದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿಯೇ ಆಕೆ ಇನ್ನೊಬ್ಬ ಬಂದಾಗ ಅಣ್ಣ ಎಂದು ಕರೆಯಿಸಿಕೊಂಡ ನಿರೂಪಕ ಶ್ರೀನಿವಾಸಯ್ಯನನ್ನೇ 'ಅವನೊಬ್ಬ ಹುಚ್ಚ' ಎಂದು ಕರೆದುಬಿಡುತ್ತಾಳೆ. ಈ ತಕ್ಷಣದ ನಿರ್ಧಾರದಿಂದ ಮನ ಬದಲಾವಣೆ ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತದೆ. ವೇಶ್ಯೆಯಾದುದರಿಂದ ಆಕೆಗೆ ಸಂಬಂಧಗಳ ಅರಿವಿರುವುದಿಲ್ಲ ಎಂದು ಹೇಳಬೇಕಾಗಿರುವುದು ಮಾಸ್ತಿಯವರ ಉದ್ದೇಶ. ಆದರೆ ಅಲ್ಲಿ ಅವಳ ಚಾಂಚಲ್ಯಕ್ಕೆ ಕಾರಣರಾದ ಆಕೆಯ ಪರಿಸರದ ಸ್ವಭಾವವನ್ನು ಪರಿಚಯಿಸಿದ್ದಾರೆ. ವೇಶ್ಯೆಗೆ ದೈಹಿಕ ಸಂಬಂಧಕ್ಕೆ ಮನುಷ್ಯ ಸಂಬಂಧದ ಎಲ್ಲೆಯೇ ಇಲ್ಲ ಎಂಬುದನ್ನು ಮಾಸ್ತಿ ಇಲ್ಲಿ ಪರಿಚಯಿಸಿದ್ದಾರೆಯೇ ಹೊರತು ಅವರಿಗೆ ವೇಶ್ಯೆಯ ಸಮಸ್ಯೆ ಕಾಡಿಲ್ಲ. ಅದನ್ನು ತಡೆಯಬಹುದಾದ ಕಡೆಗೂ ಅವರು ಚಿಂತಿಸಿಲ್ಲ. ಆಕೆಗೆ ಒದಗಬಹುದಾದ ಸೋದರ ಸಂಬಂಧ ಕೂಡ ಕಳೆದು ಕೊಳ್ಳಲಾಗುತ್ತದೆ. ಒಂದು ಕುಟುಂಬದೊಳಗೆ ಬೆಳೆಯದ ಹೆಣ್ಣು ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಸಂದರ್ಭವನ್ನು ಇವರ ಮೂಲಕ ಮಾಸ್ತಿ ಪರಿಚಯಿಸಿದ್ದಾರೆ. ಕುಟುಂಬದೊಳಗೇನೇ ಇದ್ದು ಶಿಸ್ತು, ನಿಯಮ ಉಳಿಸಿಕೊಳ್ಳಬೇಕಾದ ಸಾಂಪ್ರದಾಯಿಕತೆಯನ್ನು ಮಾಸ್ತಿ ಇಲ್ಲಿ ಪ್ರತಿಪಾದಿಸಿದ್ದಾರೆ.

ಮಾಸ್ತಿ ಭಾರತೀಯ ಸನಾತನ ವೈದಿಕ ಪರಂಪರೆಯ ಹೆಣ್ಣು ಬಾಳುವ ರೀತಿನೀತಿ ಮೌಲ್ಯವನ್ನು ವಿಶ್ವಮಾನ್ಯವಾಗಿಸುವ ಧ್ಯೇಯ ಉಳ್ಳವರು. ಹೆಣ್ಣೊಬ್ಬಳು ಹೀಗೇ ಬಾಳಿದರೆ ಚೆನ್ನ ಎಂಬುದು ಮಾಸ್ತಿ ನಂಬಿಕೆ. ಅದು ವಿಶ್ವಾದ್ಯಂತವೂ ಪಾಲನೆಯಾಗಬೇಕು ಎಂಬುದನ್ನು ಅವರು ಪ್ರತಿಪಾದಿಸುತ್ತಾರೆ. ಆದರೆ ಈ ಪ್ರತಿಪಾದನೆಯಲ್ಲಿ ಆವೇಶವಿಲ್ಲ. ಒತ್ತಾಯಪಡಿಸುವ ಧ್ವನಿ ಇಲ್ಲ. ಸಾವಧಾನವಾಗಿಯೇ ಹೆಣ್ಣು ಲಜ್ಜೆಯನ್ನು ಒಳಗೊಂಡಿರಬೇಕಾದುದನ್ನು ಅನಿವಾರ್ಯಗೊಳಿಸುತ್ತಾರೆ. ಬಳಿಕ ಪಾತಿವ್ರತ್ಯ ಮೀರಬಾರದ ನೀತಿಯನ್ನೂ ಹೇಳುತ್ತಾರೆ. ಸದ್ಗೃಹಿಣಿಯಾಗಿ ಬಾಳುವಂತೆ ಪ್ರೇರಣೆ ನೀಡುತ್ತಾರೆ. ಮಕ್ಕಳನ್ನು ಹೆರಲೇಬೇಕಾದ ಮತ್ತು ಪೋಷಿಸಬೇಕಾದ ಜವಾಬ್ದಾರಿಯನ್ನು

ಹೇರುತ್ತ ಕುಟುಂಬವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಯಿಸಬೇಕೆಂಬುದನ್ನೂ ಹೇಳುತ್ತಾರೆ. ಯಾರು ಈ ನಿಯಮಗಳನ್ನು ಮುರಿಯಬಯಸುತ್ತಾರೋ ಅವರ ಬದುಕು ಅಲ್ಲೋಲ ಕಲ್ಲೋಲವಾಗಿ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂಬುದನ್ನು ಅವರಿಗೊದಗುವ ದುರ್ಗತಿಯ ಮೂಲಕ ತೋರಿಸಿ ಭಯದಿಂದ ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಅವಳು ರಾಣಿಯಾಗಿದ್ದರೂ ಕುಟುಂಬಕ್ಕೆ ಬದ್ಧಳಾಗಿರಬೇಕು ಎಂಬುದನ್ನು ಮಾಸ್ತಿ ಸಾರುತ್ತಾರೆ. ಪಾಶ್ಚಾತ್ಯ ಸ್ತ್ರೀಯರೂ ಸನಾತನ ವೈದಿಕ ಪರಂಪರೆ ತೋರಿಸಿಕೊಟ್ಟ ರೀತಿಯಲ್ಲೇ ಹೆಣ್ಣು ಬಾಳಬೇಕು ಎಂದು ಹೇಳುವುದು ಮಾಸ್ತಿಯವರ ಒಂದು ಉದ್ದೇಶವಾದರೆ, ಇನ್ನೊಂದು ಉದ್ದೇಶ ಅಲ್ಲಿನ ಸ್ತ್ರೀಯರ ಸ್ವಚ್ಛಂದ ಬದುಕು ಅಸ್ತವ್ಯಸ್ತಗೊಳ್ಳುವುದನ್ನು ತೋರಿಸಿ ಅದಕ್ಕಾಗಿ ನೊಂದು ಸಾಂಪ್ರದಾಯಿಕತೆಯನ್ನೇ ಒಪ್ಪಿಕೊಳ್ಳುವಲ್ಲಿ ಹಿತವಿದೆ ಎಂದು ನಂಬಿಸುತ್ತಾರೆ. ಆಧುನಿಕ ಚಿಂತನೆಗಳೆಲ್ಲ ಸಾಂಪ್ರದಾಯಿಕ ಬದುಕಿನೆದುರು ಗಾಳಿಗೆ ತೂರಿ ಹೋಗುತ್ತವೆ ಎಂಬುದನ್ನುಅಂಥ ವೈಚಾರಿಕತೆ ಮೈಗೂಡಿಸಿಕೊಂಡು ಜೀವನದಲ್ಲಿ ಸೋತ ಹೆಣ್ಣಿನಿಂದಲೇ ತೋರಿಸಿಕೊಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ರಾಣಿ ಹಾಟ್ ಷೇಪ್ ಸಿಟೂ ಕತೆಯ ರಾಣಿ ಹಾಟ್ ಷೇಪ್ ಸಿಟೂ , ಲಿಯರ್ ದೊರೆಯ ಮಗಳುದಿರು ಕತೆಯ ಪ್ರಭುವಿ, ಅರ್ವಾಚೀನ ಆಂಗ್ಲ ಶಕುಂತಲೆ ಕತೆಯ ಜೆನ್ನಿ, ಆ್ಯನ್ ಶೇಕ್ಸ್‌ಪಿಯರ್ ಕತೆಯ ಶೇಕ್ಸ್‌ಪಿಯರ್‌ನ ಪತ್ನಿ ಆ್ಯನ್ , ಬೇಬಿಲಾನ್ ಕುಮಾರಿ ಕತೆಯ ರಾಜಕುಮಾರಿ, ಸೋರಲೀ ಪ್ರಸಂಗ ಕತೆಯ ಬೆಲ್ಲಾಳನ್ನು ಪರಿಚಯಿಸಿದ್ದಾರೆ.

ಕುಟುಂಬ ಮೌಲ್ಯವನ್ನು ಮಾಸ್ತಿ ವಿಶ್ವಮಾನ್ಯವನ್ನಾಗಿಸುತ್ತಾರೆ. ಮನುಷ್ಯ ಸಹಜ ಸಂಬಂಧ ಮುರಿಯಬಾರದ ತತ್ವ ಎಂಬುದನ್ನು ಸಾದರ ಪಡಿಸುವುದಕ್ಕೆ ಕುಟುಂಬ ವ್ಯವಸ್ಥೆಯನ್ನು ಮುಂದುವರಿಸುವಂತೆ ಕಾಳಜಿ ವಹಿಸುತ್ತಾರೆ. ಅದು ವಿಶ್ವಾದ್ಯಂತ ಸಮನಾಗಿದೆ. ಅವರ ನಿರ್ವಹಣೆಗೆ, ಅಚ್ಚುಕಟ್ಟುತನಕ್ಕೆ ಶಿಸ್ತು ಬದ್ಧತೆಗೆ ತಂದೆ-ತಾಯಿಯರನ್ನು ಒಳಗೊಂಡ ಕುಟುಂಬ ವ್ಯವಸ್ಥೆ ಅನಿವಾರ್ಯ ಎಂಬುದನ್ನು ಪ್ರತಿಪಾದಿಸುತ್ತಾರೆ. ವಿದೇಶಿಯರು ಭಾರತೀಯ ವೈದಿಕ ಸಂಸ್ಕೃತಿಯ ಬದುಕಿನಲ್ಲಿಯಂತೆ ಕಟ್ಟುಕಟ್ಟಳೆಗಳಿಗೇ ಬದ್ಧರಾಗದೇ ಹೋದರೂ ಅವರದೇ ಆದ ಸಂಸ್ಕೃತಿಗೆ ಅವರು ಒಗ್ಗಿಕೊಂಡಿರುತ್ತಾರೆ. ಆದರೆ ಈ ಒಗ್ಗುವಿಕೆ ಕುಟುಂಬದ ಹೊರತಾಗಿರುವುದಿಲ್ಲ. ಅಥವಾ ಕುಟುಂಬದ ಹೊರತಾಗಿರುವವರನ್ನು ಮಾಸ್ತಿ ಈ ನೆಲೆಯಲ್ಲಿ ಪರಿಚಯಿಸುವುದಿಲ್ಲ. ಹೆಣ್ಣೊಬ್ಬಳು ತೆಗೆದುಕೊಳ್ಳುವ ನಿರ್ಧಾರ ಗಂಡಿನ ನೆರಳಿನಲ್ಲಿ, ಕುಟುಂಬದೊಳಗಿದ್ದು ಬಾಳುತ್ತ ಬಂದಿರುವ ಮೌಲ್ಯ ಹೊತ್ತದ್ದೇ ಆಗಿರುತ್ತದೆ. ಅದನ್ನು ಮೀರುತ್ತೇನೆಂದರೂ ಮೀರದಂತೆ ಸ್ತ್ರೀಯರಿಂದಲೇ ತಡೆಯಿಸುತ್ತಾರೆ. ಮಾಸ್ತಿ ಪ್ರಕಾರ ಅದನ್ನು ಮೀರಿ ನಿಂತು ಬದುಕ ಹೊರಡುವ ಸ್ತ್ರೀ ಬದುಕಿನಲ್ಲಿ ಗೆಲ್ಲುವುದಿಲ್ಲ. 'ರಾಣಿ ಹಾಟ್ ಫೇಪ್ ಸಿಟೂ' ಕತೆಯ ರಾಣಿ ಹಾಟ್ ಫೇಪ್ ಸಿಟೂ ರಾಣಿಯಾಗಿದ್ದು ಗಂಡಸಿನಂತೆ ಪ್ರತಿಬಾರಿಯೂ ವರ್ತಿಸುತ್ತಾಳಾದರೂ ಗಂಡ ಹಾಗೂ ಮಕ್ಕಳನ್ನು

ಆಕೆ ಸಂಪೂರ್ಣ ತೊರೆಯುವುದರಿಂದ ಕೊರಗಬೇಕಾಗುತ್ತದೆ ಎಂದು ಚಿತ್ರಿಸಿದ್ದಾರೆ. ಮತ್ತು ಕೊನೆಗೆ ತಾನು ಸಾಮಾನ್ಯ ಮನೆತನವೊಂದರಲ್ಲಿ ಹುಟ್ಟಿದ್ದರೆ ಒಬ್ಬ ಸಾಮಾನ್ಯ ಗೃಹಸ್ಥೆಯಾಗಿ ಎಷ್ಟು ಸುಖದಿಂದ ಬಾಳಬಹುದಾಗಿತ್ತು! ಪುಣ್ಯವಂತೆಯಾಗಿದ್ದರೆ ಈ ಕಿರಿಯ ರಾಣಿಯಂತೆ ಒಬ್ಬ ರಾಜನನ್ನು ಒಲಿಸಿ ರಾಣಿಯಾಗಿ ಬಾಳಬಹುದಿತ್ತು ರಾಣಿಯ ಪಟ್ಟ ಉಂಟು. ಹೆಣ್ಣುತನದ ಸುಖ ಇಲ್ಲ ಎಂದು ಯೋಚಿಸುವಲ್ಲಿಯೇ ಕುಟುಂಬದ ನಿಯಮಗಳಿಗೆ ಬದ್ಧಳಾಗಬೇಕಾದ ರೀತಿಯನ್ನು ಒಪ್ಪಿಕೊಳ್ಳುವುದಾಗಿದೆ. ಈ ಮೂಲಕ ಇತರರೂ ಅದಕ್ಕೆ ಬದ್ಧರಾಗಬೇಕಾದ ಅನಿವಾರ್ಯತೆಯನ್ನು ಮುಂದಿಡಲಾಗಿದೆ ಮತ್ತು ಇತರರಿಗೂ ಅದನ್ನು ಒಪ್ಪಿಕೊಳ್ಳವಂತೆ ಪ್ರೇರಿಸುವ ಪ್ರಯತ್ನ ಮಾಡುವುದಾಗಿದೆ.

'ಲಿಯರ್ ದೊರೆಯ ಮಗಳುದಿರು' ಕತೆಯ ಆಲ್ಬೆನಿ ಮನೆತನದ ಪ್ರಭುವಿ ಕುಟುಂಬ ಕಟ್ಟುವ ನೆಲೆಯಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದಾಳೆ. ಇಲ್ಲಿನ ತಾಯಿ- ಮಕ್ಕಳ ನಡುವಿನ, ಚಿಕ್ಕಮ್ಮ-ಮಕ್ಕಳ ಸಂಬಂಧ ಕುಟುಂಬದೊಳಗಿದ್ದುದರಿಂದ ದಕ್ಕುವ ಸಂಬಂಧವಾಗಿ ಕಾಣಿಸಿಕೊಳ್ಳುತ್ತದೆ. ಆ ನೆಲೆಯಲ್ಲಿ ತಾಯಿ ಮಕ್ಕಳನ್ನು ಸರಿದಾರಿಯಲ್ಲಿ ಸಾಗುವಂತೆ ನಿರ್ದೇಶಿಸುವುದಕ್ಕೆ ಪ್ರಯತ್ನಿಸುತ್ತಾಳೆ. ಆದರೆ ಮಕ್ಕಳು ಅವಳು ಹೇಳಿದಂತೆ ಕೇಳುವವರಲ್ಲ. ಪರಿಣಾಮವಾಗಿ ಮೂವರೂ ಬದುಕಿನಲ್ಲಿ ಸೋಲನ್ನು ಅನುಭವಿಸುತ್ತಾರೆ. ಹೆಣ್ಣಿಗಿರಬೇಕಾದ ಸಂಯಮ, ಸಹನೆ, ತಾಳ್ಮೆ, ಲಜ್ಜೆ ಅವರಲ್ಲಿರದೇ ಇದ್ದುದೇ ಅವರ ಬದುಕು ದುರಂತದ ಅಂತ್ಯ ಕಾಣುತ್ತದೆ. ಸಂಯಮ, ತಾಳ್ಮೆಯ ಕೊರತೆಯಿಂದಾಗಿಯೇ ಮೂವರು ಹೆಣ್ಣುಮಕ್ಕಳ ಬದುಕು ದುರಂತ ಕಾಣುತ್ತದೆ. ಈ ಸಂಯಮ ರೂಢಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಕುಟುಂಬ ಮುಖ್ಯವಾದುದರಿಂದ ಅದಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕು ಅಲ್ಲವಾದರೆ ಬದುಕು ದುರಂತವನ್ನು ಅಪ್ಪುತ್ತದೆ ಎಂಬ ಸಂದೇಶವನ್ನೂ ಈ ಮೂಲಕ ಮಾಸ್ತಿ ಕೊಡಿಸಿದ್ದಾರೆ.

'ಅರ್ವಾಚೀನ ಆಂಗ್ಲ ಶಕುಂತಲೆ' ಕತೆಯ ಜೆನ್ನಿಗೆ ಪ್ರತ್ಯೇಕ ಕುಟುಂಬ ಸ್ಥಾಪಿಸುವುದಕ್ಕೆ ಗಂಡನಿಲ್ಲದೇ ಸಾಧ್ಯವಾಗುವುದಿಲ್ಲ. ಆದರೆ ಈಗಾಗಲೇ ತಾನು ಬದುಕುತ್ತಿರುವ ಕುಟುಂಬದೊಳಗೇ ಉಳಿದು ಬದುಕುವುದು, ಮಗುವನ್ನು ಅದರ ತಂದೆ ಎನ್ನಿಸಿದವನ ತಂದೆಯ ಕುಟುಂಬದ ಜವಾಬ್ದಾರಿಗೆ ಒಪ್ಪಿಸುವ ಮೂಲಕ ಕುಟುಂಬದೊಳಕ್ಕೇನೆ ಮಗು ಬೆಳೆಯಬೇಕೆಂಬ ಪಾರಂಪರಿಕ ನಂಬಿಕೆಯನ್ನು ಪ್ರತಿಪಾದಿಸಿದ್ದಾಳೆ. ಮತ್ತು ಅದನ್ನು ಉಳಿಸುವ ನೆಲೆಯಲ್ಲಿ ಕ್ರಮ ಕೈಗೊಳ್ಳುತ್ತಾಳೆ. ಹೆಣ್ಣು ತನ್ನ ಹಾಗೂ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಕುಟುಂಬವನ್ನು ಅವಲಂಬಿಸಿರುವುದು ಅನಿವಾರ್ಯ ಎಂಬುದನ್ನು ಮಾಸ್ತಿ ವಿಶ್ವಮಾನ್ಯಗೊಳಿಸುತ್ತಾರೆ. ಅಂದರೆ ಬದುಕಿನ ಭದ್ರತೆಯ ದೃಷ್ಟಿಯಿಂದ ಮತ್ತು ಮನುಷ್ಯ ಸಂಬಂಧವೊಂದರ ಗಟ್ಟಿಗೊಳಿಸುವಿಕೆಯ ನೆಲೆಯಿಂದಲೂ ಕುಟುಂಬವೊಂದನ್ನು ಅನಿವಾರ್ಯವಾಗಿಸಿದ್ದಾರೆ.

'ಆ್ಯನ್ ಶೇಕ್ಸ್‌ಪಿಯರ್' ಕತೆಯಲ್ಲಿ ಶೇಕ್ಸ್‌ಪಿಯರ್‌ನ ಪತ್ನಿ ತನ್ನ ಗಂಡ ಇನ್ನೊಂದು ಹೆಣ್ಣಿನೊಂದಿಗೆ ಹೊಂದಿದ ದೈಹಿಕ ಸಂಬಂಧವನ್ನು ಅರಿತೂ ಅರಿಯದಂತೆ ಕುರುಡಾಗಿಯೇ ಇರುವ ಮೂಲಕ, ಒಳಗೊಳಗೇ ಎಲ್ಲ ನೋವನ್ನು ಅನುಭವಿಸುತ್ತಾಳೆ. ತನ್ನ ಮಗಳ ಹಿತಚಿಂತನೆಯಿಂದ ಮತ್ತು ಕುಟುಂಬ ಕಲಹ ನಡೆಯಬಾರದು ಎಂಬ ಕಾರಣಕ್ಕಾಗಿಯೇ ಆಕೆ ಸಹನೆ ತಳೆಯುತ್ತಾಳೆ. ಕುಟುಂಬ ಅನಿವಾರ್ಯವಾಗಿರುವಾಗ ವಿನಾ ಕಾರಣ ದಾಂಪತ್ಯ ವಿರಸ, ಜಗಳಗಳು ನಡೆಸುವುದು ತೆರವಲ್ಲ ಎಂದೇ ಆಕೆ ಸುಮ್ಮನಾಗುತ್ತಾಳೆ. ರಂಪ ಮಾಡುವುದು ಸ್ತ್ರೀತ್ವಕ್ಕೆ ಭೂಷಣ ಅಲ್ಲ ಎಂಬುದನ್ನೂ ಈ ಮೂಲಕ ತೋರಿಸಿಕೊಡುತ್ತಾಳೆ. ಎಷ್ಟು ಸಾಧ್ಯವೋ ಅಷ್ಟು ತಣ್ಣನೆಯ ಪ್ರತಿರೋಧ ತೋರಿಸುವ ಆಕೆ ರಂಪ ಮಾಡುವುದಕ್ಕೆ ಎಡೆಕೊಡುವುದಿಲ್ಲ. ಆದುದರಿಂದಲೇ ಇಲ್ಲಿ ಮೌನವನ್ನು ಉದ್ದೇಶಪೂರ್ವಕವಾಗಿ ~~ಪರಿಚಯಿಸುವ ಕೆಲಸವನ್ನು~~ ಮಾಸ್ತಿ ಜಾಣ್ಮೆಯಿಂದ ನಿರ್ವಹಿಸಿದ್ದಾರೆ. ಆದರೆ ಆ ತೆರನಾದ ಜೀವನ ರೀತಿಯೇ ಮೌಲ್ಯಯುತವಾದದ್ದು ಎಂದೂ ಹೇಳುವ ಉದ್ದೇಶದ ಹಿಂದೆ ಕುಟುಂಬ ಉಳಿಸುವ ಕಾಳಜಿಗೆ ಹೆಣ್ಣು ಬದ್ಧಳಾಗಿರಬೇಕು ಎಂಬುದರ ಪ್ರತಿಪಾದನೆ ಇದೆ.

ಕುಟುಂಬದೊಳಗೆ ಬದ್ಧರಾಗದೇ ಹೊರ ಬರುವ ವಿದೇಶೀ ಸ್ತ್ರೀಯರು ಇಲ್ಲಿ ಹೊಸ ಕುಟುಂಬ ಕಟ್ಟಲು ಸಾಧ್ಯವೆಂಬುದನ್ನು ಗ್ರಹಿಸಬಹುದಾಗಿದೆ. ಒಲ್ಲದ ಗಂಡನನ್ನು ತೊರೆದು ಭಾರತಕ್ಕೆ ಬರುವ 'ಬೆಬಿಲಾನ್ ಕುಮಾರಿ' ಕತೆಯ ಬೆಬಿಲೊನ್‌ನ ರಾಜ ಕುಮಾರಿ, ಇಲ್ಲೂ ವಿವಾಹದ ನೆಲೆ ದಕ್ಕಿಸಿಕೊಳ್ಳದೆ ತನ್ನದೇ ನಾಡಿಗೇ ತೆರಳುವ ಮೂಲಕ ದೇಶೀ ಬದುಕನ್ನು ಅವರವರು ಕಂಡುಕೊಳ್ಳಲೇಬೇಕಾದದ್ದನ್ನು ಪ್ರತಿನಿಧಿಸುತ್ತಾಳೆ. ಇಲ್ಲಿ ಆಕೆ ಭಾರತದ ಸಂಸ್ಕೃತಿ ಕಲಿಯುವ, ತನ್ನ ಸಂಸ್ಕೃತಿಯ ಒಳಿತನ್ನು ತಿಳಿಸುವ ನೆಲೆಯಿಂದ ಮುಖ್ಯಳಾಗುತ್ತಾಳೆ. ವಿವಾಹವಾಗುವುದಕ್ಕೆ, ಕುಟುಂಬ ಸ್ಥಾಪಿಸುವುದಕ್ಕೆ ಅವಕಾಶವಾಗಲಿ ಎಂದು ಆಕೆಯನ್ನು ಅವಳ ನಾಡಿಗೇ ಅವಳು ತೆರಳಿ ಅಲ್ಲಿಯೇ ಬದುಕನ್ನು ಕಟ್ಟಿಕೊಳ್ಳಬೇಕೆಂಬುದನ್ನು ಹೇಳುವ ಮಾಸ್ತಿಯವರ ಒಂದು ಕುಟುಂಬದೊಳಗೆ ಹೆಣ್ಣು ಬದ್ಧಳಾಗಿರಬೇಕೆಂಬ ನಿಲುವಿಗೆ ಆಕೆ ತಿಲಾಂಜಲಿ ಕೊಡಲು ಹೊರಡುತ್ತಾಳೆ.

'ಸೋರಲೀ ಪ್ರಸಂಗ' ಕತೆಯ ಬೆಲ್ಲಾ ಕುಟುಂಬ ತೊರೆದು ಪ್ರೀತಿಸಿದ ಗಂಡಿಗಾಗಿ ತನ್ನದೇ ಆದ ಸಂಸಾರವೊಂದನ್ನು ಕಟ್ಟಿಕೊಳ್ಳಬೇಕು ಎಂಬ ನೆಲೆಯಿಂದ ತನ್ನ ದೇಶವನ್ನು ಬಿಟ್ಟು ಬರುವುದನ್ನು ಮಾಸ್ತಿ ಪೂರ್ತಿ ಮನಸ್ಸಿನಿಂದ ಒಪ್ಪಿಕೊಳ್ಳುವುದಿಲ್ಲ. ಸಂಸ್ಕೃತಿಯ ಕೊಡು - ಕೊಳೆ ಕ್ರಿಯೆಯನ್ನು ಒಂದು ನೆಲೆಯಲ್ಲಿ ಮಾತ್ರ ಸಮ್ಮತಿಸುತ್ತಾರೆ. ಜೊತೆಗೆ ಆಕೆ ಕುಟುಂಬದೊಳಗೆ ಇರುವುದಕ್ಕೆ ಮತ್ತು ಅದನ್ನು ಸ್ಥಾಪಿಸುವುದಕ್ಕೆ ಪೂರಕ ಎಂಬಂತೆ ತನ್ನ ನಾಡಿಗೇ ತೆರಳುವ ಪರಿಸ್ಥಿಯನ್ನು ನಿರ್ಮಿಸುತ್ತಾರೆ. ಕುಟುಂಬದಿಂದ ಹೊರಗುಳಿಯುವ ಹೆಣ್ಣು ಮಕ್ಕಳು

ಅನುಭವಿಸುವ ಕಷ್ಟಗಳ ವಿವರಗಳೊಂದಿಗೇ ಅವಳನ್ನು ಕುಟುಂಬಕ್ಕೆ ಬದ್ಧಗೊಳಿಸಬೇಕಾದ ತತ್ವವನ್ನು ಅವಳು ತನ್ನ ನಾಡಿಗೆ ತೆರಳಿ ಕುಟುಂಬಕ್ಕೆ ಒಪ್ಪಿಸಿಕೊಳ್ಳುವಂತೆ ಮಾಡುತ್ತಾರೆ. ಆ ನೆಲೆಯಲ್ಲಿಯೇ ಇಲ್ಲಿನ ಸ್ತ್ರೀಯರು ಕೆಲಸ ನಿರ್ವಹಿಸುವಂತೆ ಮಾಸ್ತಿ ಎಚ್ಚರವಹಿಸುತ್ತಾರೆ.

ಪತಿವ್ರತಾಧರ್ಮ ಪರಿಪಾಲನೆಯಲ್ಲಿ

ಗಂಡನಿಗಾಗಿ ಪರಿತಪಿಸುವುದು ಮಾಸ್ತಿ ಕತೆಗಳಲ್ಲಿ ಒಂದು ಮೌಲ್ಯವಾಗಿದೆ. ಗಂಡನ ಹೊರತಾಗಿನ ಬಾಳನ್ನು ಬಾಳುವುದಕ್ಕೆ ಅಲ್ಲಿನ ಸ್ತ್ರೀಯರು ಬಹುಕಷ್ಟ ಪಡುತ್ತಾರೆ. ಅದು ಸಮಾಜ ಹಾಕಿದ ಚೌಕಟ್ಟನ್ನು ಮೀರಬಾರದ ಅವರ ಪರಿಧಿಯನ್ನು ಪರಿಚಯಿಸುತ್ತದೆ. ವೈದಿಕ ಪರಂಪರೆ ಬೋಧಿಸಿದ್ದು ಹೆಣ್ಣು ಗಂಡನಿಗೆ ಅಧೀನಳಾಗಿಯೇ ಇರಬೇಕು ಎಂದು. ಗಂಡಿನ ಯಾಜಮಾನ್ಯವನ್ನು ಸಹಜವೆಂಬಂತೆ ಒಪ್ಪಿಕೊಳ್ಳುವಂತೆ ಮಾಡಿ ಅದನ್ನು ಪ್ರಶ್ನಿಸದಂತೆ ಅವಳನ್ನು ಕಟ್ಟಿಹಾಕಿದ್ದರಿಂದ ಅವನಿಲ್ಲದ ಬದುಕನ್ನು ಸ್ವೀಕರಿಸುವುದಕ್ಕೆ ಕಷ್ಟಪಡುವಂತೆ ಮಾಡುತ್ತದೆ. ಮಾಸ್ತಿ ಕತೆಗಳ ಸ್ತ್ರೀಯರು ಗಂಡಬಿಟ್ಟು ಹೋದಾಗ ಪರಿತಪಿಸುತ್ತಾರೆ. ಅವನಿಲ್ಲದ ಬಾಳು ಬಾಳೇ ಅಲ್ಲ ಎಂದು ಗೋಳಿಡುತ್ತಾರೆ. ಪತಿಯೇ ಪರದೈವ ಎಂಬ ಪತಿವ್ರತಾಧರ್ಮವನ್ನು ಪಾಲಿಸುವ ಮೌಲ್ಯವೇ ಅವರಿಗೆ ಮುಖ್ಯದ್ದಾಗುತ್ತದೆ. ಕೈಹಿಡಿದ ಗಂಡ ದುಷ್ಟನಾಗಿದ್ದರೂ ಆತನನ್ನು ಮರೆತುಬಿಡುವ ಗೋಜಿಗೆ ಹೋಗುವುದಿಲ್ಲ. ಹಾಗೆ ಮಾಡದಿರುವುದು ಅವರಿಗೆ ಧರ್ಮ ಮಾರ್ಗದ ಅನುಸರಣೆಯಾಗುತ್ತದೆ. ಅಂತೆಯೇ ಬಾಳಬೇಕಾದ ತತ್ವವನ್ನೂ ಪ್ರತಿಪಾದಿಸುವವರಾಗಿ ಅವರು ಪರಿಚಿತಗೊಂಡಿದ್ದಾರೆ. ಅವನನ್ನು ಮರೆಯುವ ಅಧರ್ಮಕ್ಕೆ ಕೈಹಾಕಬಾರದು ಎಂಬ ಎಚ್ಚರಿಕೆಯನ್ನು ಮುಂದಿನ ಪೀಳಿಗೆಗೆ ಅವರ ಮೂಲಕ ಮಾಸ್ತಿ ಕೊಡಿಸಿದ್ದಾರೆ.

‘ಮಾಸ್ತಿ ಅವರ ಸ್ತ್ರೀ ಪಾತ್ರಗಳ ಪ್ರಪಂಚ ಗರತಿಯ ಪ್ರಪಂಚಕ್ಕಿಂತ ಭಿನ್ನವಾದದ್ದಲ್ಲ ಎನ್ನುವುದನ್ನು ಗುರುತಿಸಬಹುದು. ಮನುಸ್ಮೃತಿಯ ಷಡ್ಗುಣಗಳ ಮಾಲೆಯಲ್ಲಿ ಮಾಸ್ತಿ ವಿಶೇಷ ಒತ್ತು ನೀಡುವುದು ಮಾತೆಯ ಮತ್ತು ಕ್ಷಮೆಯ ಗುಣಗಳಿಗೆ ಹಾಗೂ ದಾಸಿಯ ಅಂಶಗಳಿಗೆ. ಸ್ತ್ರೀಯನ್ನು ಭೋಗದ ವಸ್ತುವಾಗಿ ನೋಡುವುದು ಅವರಿಗೆ ಒಪ್ಪಿತವಲ್ಲ’[೧೬] ಎಂದು ಬಿ.ಎನ್. ಸುಮಿತ್ರಬಾಯಿ ವಿಶ್ಲೇಷಿಸಿದ್ದಾರೆ.

---

೧೬ ಪು.೩೭ ಮಾಸ್ತಿ ಕತೆಗಳ ಸ್ತ್ರೀ ಪಾತ್ರಗಳು, ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ, ಸಂ. ಡಿ.ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ, ಸ. ಉಷಾ ೧೯೯೨

ಹೆಣ್ಣಿನ ಮನಸ್ಸನ್ನು ಗಂಡಿನಲ್ಲೇ ಕೇಂದ್ರೀಕರಿಸುವಂತೆ ಸನಾತನ ಪರಂಪರೆ ಹಾಕಿದ ಮರ್ಯಾದೆಯ ಕಲ್ಪನೆಯನ್ನು ಮೀರಲಾಗದಂತೆ ತಡೆಯುವುದು ಕೂಡ ಅವರ ಉದ್ದೇಶವಾಗಿದೆ. ಗಂಡ ಹೆಂಡತಿಯನ್ನು ಬಿಡುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನು ಅವರು ಮಾಡುವುದಿಲ್ಲ. ಸಂಪ್ರದಾಯ ಹಾಕಿಕೊಟ್ಟದ್ದು ಇದನ್ನೇ. ಅವನ ಸರಿತಪ್ಪು ಯಾವುದೆನ್ನುವುದು ನೋಡಬೇಡ. ಅವನನ್ನು ವಶದಲ್ಲಿಟ್ಟುಕೊಳ್ಳುವಂತೆ ಪ್ರಯತ್ನಿಸು ಎಂಬ ನುಡಿಯ ಪರಿಪಾಲಕರಾಗಿ ಮಾಸ್ತಿ ಕತೆಗಳಲ್ಲಿನ ಸ್ತ್ರೀಯರು ಚಿತ್ರಿತರಾಗಿದ್ದಾರೆ.

ಇಲ್ಲಿನ ಸ್ತ್ರೀಯರು ವೈದಿಕ ಪರಂಪರೆಯ ಪರಿಪಾಲಕರಾಗಿ ಬರುವ ಮೂಲಕ ಆ ಪರಂಪರೆಯನ್ನು ಮುಂದುವರಿಸುವುದನ್ನು ಪ್ರತಿನಿಧಿಸುವವರಾಗಿದ್ದಾರೆ. ವೈದಿಕ ಪರಂಪರೆ ರೀತಿಯೇ ಸರಿಯಾದದ್ದು ಮತ್ತು ಅನುಕರಣೀಯವಾದದ್ದು ಎಂದು ಸ್ವೀಕರಿಸಿ ಅವರು ಅದಕ್ಕೆ ತಮ್ಮನ್ನು ಒಡ್ಡಿಕೊಂಡು ತಮ್ಮತನವನ್ನು ಮರೆತು ಬಾಳಿದ್ದಾರೆ. ಎಲ್ಲೂ ಅವರ ಮನದ ಹಳಹಳಿಕೆಯನ್ನೂ ವ್ಯಕ್ತ ಪಡಿಸುವುದಿಲ್ಲ.ಬದಲಾಗಿ ವೈದಿಕ ಪರಂಪರೆಯನ್ನು ಮುಂದುವರಿಸುವ ಕಾಳಜಿಯನ್ನು ಪ್ರಕಟಿಸಿದ್ದಾರೆ. ಮಾಸ್ತಿಗೂ ಮನಸ್ಸಿನ ತಾಕಲಾಟಗಳು ಮುಖ್ಯವಾಗುವುದಿಲ್ಲ. ಅವಳ ಮನದ ತಾಕಲಾಟ, ನೋವು ಮುಂದಿಟ್ಟರೆ ಅದು ವಿಮರ್ಶಾತ್ಮಕವಾಗುತ್ತದೆ. ಬದುಕಿನ ರೀತಿಯನ್ನು ಬದಲಾಯಿಸಿಕೊಳ್ಳುವ ತೀರ್ಮಾನ ವನ್ನು ಕೂಡ ಸ್ತ್ರೀ ಮಾಡಬಹುದು. ಹಾಗೆ ಮಾಡಿದರೆ ವೈದಿಕ ಪರಂಪರೆಯ ನಡವಳಿಕೆಗಳು ಅಳಿದುಬಿಡಬಹುದು. ಹಾಗಾಗಬಾರದು ಅಂತಾದರೆ ಅಲ್ಲಿನ ಸ್ತ್ರೀ ಎಲ್ಲವನ್ನೂ ಕೂಡ ಸರಿ ಎಂದೇ ಒಪ್ಪಿ ಪ್ರೀತಿಯಿಂದ ಬದುಕಿದ ರೀತಿಯನ್ನು ತೋರಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಆ ವರ್ಗದ ಸ್ತ್ರೀಯರು ಹಾಗೆ ಬಾಳುವಂತೆ ಪರಿಚಯಿಸಿದ್ದಾರೆ. ಆದ್ದರಿಂದಲೇ ಇಲ್ಲಿನ ಸ್ತ್ರೀಯರು ಆಲೋಚನಾ ಶಕ್ತಿಯನ್ನು, ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ.

ಪತಿವ್ರತಾ ಧರ್ಮ ಹಾಕಿಕೊಟ್ಟ ಮಾರ್ಗವನ್ನು ಕಿಂಚಿತ್ತೂ ತಪ್ಪದಂತೆ ಜಾಗರೂಕತೆ ಹೇಳುವುದು ಮಾಸ್ತಿಯವರ ಉದ್ದೇಶವಾಗಿದೆ. ಗಂಡನಿಗಾಗಿ ಪರಿತಪಿಸುವ ಮೌಲ್ಯವನ್ನು ಮುಖ್ಯವಾಗಿ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿಯ ಮೂಲಕ ಪ್ರತಿಪಾದಿಸಿದ್ದಾರೆ. ಗಂಡನನ್ನು ಹೆಂಡತಿಯಾದವಳು ನೋಡಿಕೊಳ್ಳಬೇಕಾದ ರೀತಿಯನ್ನು ಪರಿಚಯಿಸುವುದಕ್ಕಾಗಿ ಅವಳ ತಪ್ಪು ನಡವಳಿಕೆಯಿಂದಾಗಿ ಗಂಡ ಅವಳನ್ನು ಬಿಡಬೇಕಾಗಿ ಬಂದ ಪರಿಸ್ಥಿತಿಯನ್ನುಮಾಸ್ತಿ ತೋರಿಸಿಕೊಟ್ಟಿದ್ದಾರೆ. ವಿಧೇಯತೆ, ಪತಿಸೇವೆಯೇ ಅವಳಿಗೆ ಬಹು ಮುಖ್ಯವಾಗಿರಬೇಕಾಗಿದೆ ಎಂಬ ನೀತಿಯನ್ನೂ ಹೇಳಿದ್ದಾರೆ. ಆಚಾರ್ಯರು ಹಾಗೂ ಪತ್ನಿಯ ನಡುವೆ ಇರುವ ೨೫ ವರ್ಷಗಳ ಅಂತರ ಇಲ್ಲಿ ಮುಖ್ಯವಾಗುವುದಿಲ್ಲ. ಆದರೆ ಹೆಂಡತಿಯಾದವಳು 'ಗಂಡ' ಎಂಬ ಪದಕ್ಕೆ ಹಾಗೂ ವ್ಯಕ್ತಿಗೆ ಕೊಡುವ ಮರ್ಯಾದೆಯೇ ಅವನ ಸೇವೆ ಮಾಡುವುದಾಗಿದೆ. ಅದು

ಹೆಂಡತಿಯ ಕರ್ತವ್ಯವಾಗಿದೆ. ಸೇವೆ ಮಾಡಿಸಿಕೊಳ್ಳುವುದು ಗಂಡನಾದವನ ಮರ್ಯಾದೆಯಾಗುತ್ತದೆ. ೧೫ ವರ್ಷದ ಬಾಲೆಯಾಗಿದ್ದ ಆಚಾರ್ಯರ ಪತ್ನಿ ಪತಿಯಾದ ಆಚಾರ್ಯರ ಮನಸ್ಸನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ. ತಿಳಿಯಬೇಕೆಂದೂ ಅಪೇಕ್ಷಿಸಲಿಲ್ಲ. ಆಚಾರ್ಯರ ಸನ್ಯಾಸತ್ವ ಸ್ವೀಕಾರಕ್ಕೆ ಕಾರಣವಾಗುವುದು ಹೆಂಡತಿಯಾದವಳು ಗಂಡನಾದವನನ್ನು ಚೆನ್ನಾಗಿ ನೋಡಿಕೊಳ್ಳದೇ ಹೋದದ್ದು ಎಂಬುದನ್ನು ತೋರಿಸಿಕೊಡುವುದರ ಹಿಂದೆ ಹೆಂಡತಿಯ ಕರ್ತವ್ಯವನ್ನು ಪರಿಚಯಿಸುವ ಕೆಲಸವನ್ನೂ ಮಾಡಲಾಗಿದೆ.

ರಾಮಾನುಜಾಚಾರ್ಯರ (ಆಚಾರ್ಯರ) ಪತ್ನಿಯ ಸ್ವಭಾವ ತಾವು ಬಯಸಿದ್ದಕ್ಕಿಂತ ಭಿನ್ನವಾಗಿದ್ದುದರಿಂದ ಆಕೆಯನ್ನು ತೊರೆದು ಹೋಗುತ್ತಾರೆ. ಆದರೆ ಅದಕ್ಕಾಗಿ ಆಕೆ ಅನಂತರದ ದಿನಗಳಲ್ಲಿ ಪರಿತಪಿಸುವ ಸ್ಥಿತಿಗೆ ತಲುಪುತ್ತಾಳೆ. ಗಂಡನಿಗಾಗಿ ದಿನದಿನವೂ ಹಂಬಲಿಸುವ ಈ ಸ್ತ್ರೀ ಅನ್ಯ ಗಂಡನ್ನು ವರಿಸುವ ಕುರಿತು ಕನಸಲ್ಲೂ ಯೋಚಿಸುವುದಿಲ್ಲ. ಅದು ಸನಾತನ ವೈದಿಕ ಸಂಸ್ಕೃತಿ ರೂಪಿಸಿದ ಕಟ್ಟಳೆಗಳಿಗೆ ವಿರೋಧವಾಗುತ್ತದೆ. ಮನುಷ್ಯ ಸಹಜ ಕಾಮನೆಗಳನ್ನು ಹೊತ್ತ ಈ ಸ್ತ್ರೀ ಅದನ್ನು ಮೀರಲಾಗದೇ ಹೋದರೂ ಸನಾತನ ಸಂಸ್ಕೃತಿ, ಪುರುಷ ಪ್ರಭುತ್ವ ಹೇರಿದ ಮೌಲ್ಯದಿಂದಾಗಿ ತನ್ನ ಕಾಮನೆಗಳನ್ನು ತಡೆದುಕೊಂಡಿರಬಹುದು.

ಆದರೆ ಆಚಾರ್ಯರು ತಂಗಿರುವ ಊರಿಗೆ ಬಂದಿದ್ದ ಅವರ ಪೂರ್ವಾಶ್ರಮದ ಪತ್ನಿ ಆಚಾರ್ಯರು ಸ್ನಾನ ಮಾಡುತ್ತಿದ್ದ ಸಂದರ್ಭವನ್ನು ಅರಳಿ ಮರದ ಹಿಂದೆ ನಿಂತು ಇಣುಕಿ ನೋಡುತ್ತಾಳೆ. ಗಂಡನ ಕುರಿತು ಆಸಕ್ತಿ, ಒಳಮನದ ತಾಕಲಾಟದ ನಡುವೆ ಹುದುಗಿರುವ ಪ್ರೀತಿಯ ಪರಿಣಾಮವೇ ಅಲ್ಲಿ ಬಿಂಬಿಸುತ್ತದೆ. ಗಂಡನ ಕುರಿತ ಆಂತರ್ಯದ ಕಾಳಜಿಯಿಂದಲೇ ಗಂಡನಾದವನ ದೇಹವನ್ನೊಮ್ಮೆ ಸೋಂಕುವಾಗ ಕಾಲನ್ನು ಔಕುತ್ತಾಳೆ. ಈ ಮೂಲಕ ಪತಿಯ ಜ್ವರವನ್ನು ತಾನು ಆವಾಹಿಸಿಕೊಳ್ಳುವ ಮೂಲಕ ಪತಿಗೆ ಜೀವದಾನ ಮಾಡುತ್ತಾಳೆ. ಈ ಜೀವದಾನದ ಹಿಂದೆ ಪತ್ನಿಯು ತಾನು ಮಾಡಿರುವ ತಪ್ಪಿಗೆ ಮಾಡಿಕೊಂಡ ಪ್ರಾಯಶ್ಚಿತ್ತ ಅಡಗಿದೆ. ಹಾಗೂ ತಾವು ತಂದುಕೊಳ್ಳುವ ಸಾವು ಈಗಾಗಲೇ ಬಂದೊದಗಿದ್ದ ಸುಮಂಗಲ ವಿಧವೆಯೆನಿಸಿ ಬಾಳಿದ ಘೋರ, ದುಃಖದ ಬದುಕಿಗಿಂತ ಸುಮಂಗಲೆ ಸಾವೇ ಗೌರವಯುತವಾದದ್ದು, ಸುಖಕರವಾದ್ದು ಎಂದು ಊಹಿಸಿದ್ದಾಳೆ. ಈ ಮೂಲಕ ಆಕೆ ಸುಮಂಗಲೀ ಸಾವನ್ನು ಸ್ವೀಕರಿಸುತ್ತಾಳೆ.

ಇಲ್ಲಿ ಪುರುಷನ ಉನ್ನತಿಯನ್ನು ಬಯಸುವಂತೆ ಪುರುಷನೇ ಹಾಕಿಕೊಟ್ಟ ಸಂಸ್ಕೃತಿ ಸ್ತ್ರೀ ಸುಮಂಗಲಿಯಾಗಿ ಸಾಯುವುದನ್ನು ಅತ್ಯಂತ ಗೌರವಯುತವಾದದ್ದಾಗಿ ಕಾಣುತ್ತದೆ. ಇಲ್ಲಿ ಗಂಡನಿಗಿಂತ ನಂತರ ಪತ್ನಿ ಸತ್ತರೆ ಕಷ್ಟಗಳನ್ನು ಎದುರಿಸಬೇಕಾಗಿ ಬರುವ ಸಾಧ್ಯತೆಗಳನ್ನು ತಪ್ಪಿಸುವ ನೆಪದಿಂದ ಅವಳಿಗೆ ಗಂಡ ಸಾಯುವುದಕ್ಕೂ ಮೊದಲು ಸಾಯಬೇಕಾದ ಅನಿವಾರ್ಯತೆಯನ್ನು ಸುಮಂಗಲೀ ಸಾವು ಅಥವಾ ಮುತ್ತೈದೆ ಸಾವಿನ ಹೆಸರಿನಲ್ಲಿ ಅವಳೇ ತಂದುಕೊಳ್ಳುವಂತೆ ಪ್ರೇರಣೆ ನೀಡಿದ್ದಾಗಿದೆ.

ಅದನ್ನೇ ಸ್ತ್ರೀಯರು ನಂಬಿಕೊಂಡು ಅದನ್ನೊಂದು ಮೌಲ್ಯವಾಗಿ ಕಂಡು ಅನುಸರಿಸುತ್ತ ಬಂದರು. ಅದನ್ನೇ ಪ್ರತಿಪಾದಿಸುವ ಹಾಗೂ ಪ್ರತಿಷ್ಠಾಪಿಸುವ ಕೆಲಸವನ್ನು ಮಾಸ್ತಿ ಈ ಮೂಲಕ ಮಾಡುತ್ತಿರುವುದು ವೇದ್ಯವಾಗುತ್ತದೆ.

ಆದುದರಿಂದ ಗಂಡನಿಗಿಂತ ಮೊದಲು ತಾನೇ ಸಾವು ತಂದುಕೊಳ್ಳುವುದಕ್ಕಿರುವ ಗೌರವಕ್ಕೆ ಆಕೆ ತನ್ನನ್ನು ತಾನು ಅರ್ಪಿಸಿಕೊಂಡುಬಿಡುತ್ತಾಳೆ. ಅಂಥ ಪತಿವ್ರತಾ ಮೌಲ್ಯ ವೊಂದನ್ನು ಸ್ವತಃ ತಾನೇ ಆಚರಿಸಿ ಮೆರೆಯುತ್ತಾಳೆ. ಗಂಡ ಎಂಬ ಗೌರವಕ್ಕೆ ತಪ್ಪಿ ನಡೆದದ್ದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಭಾರತೀಯ ನಾರೀತ್ವದ ಮೌಲ್ಯವನ್ನು ಪ್ರತಿಷ್ಠಾಪಿಸುತ್ತಾಳೆ.

ಶಾಮಲಾಂಬೆ ಆಚಾರ್ಯರ ಪತ್ನಿ ಪಟ್ಟ ಪಶ್ಚಾತ್ತಾಪ, ಆಚಾರ್ಯರ ಜ್ವರವನ್ನು ತಾವು ಆವಾಹಿಸಿಕೊಂಡು ತಾನು ಸಾವನ್ನು ಸ್ವೀಕರಿಸಿ, ಪತಿಗೆ ಜೀವದಾನವನ್ನು ಮಾಡಿದ ಸಂದರ್ಭಗಳೆಲ್ಲವೂ ಹೆಣ್ಣಿನ ಸಹನೆಯನ್ನೇ ಪ್ರಸ್ತುತಪಡಿಸುತ್ತವೆ. 'ನಲವತ್ತು ವರ್ಷಗಳ ಹಿಂದೆ ಸಂಸಾರವನ್ನು ಮುಗಿಸಿದ ನನಗೆ ಇಂದು ಏನು ಸಂದೇಶ ತಾಯಿ?' ಎಂದು ಆಚಾರ್ಯರು ಪಶ್ನಿಸುವ ಹಿನ್ನೆಲೆಯಲ್ಲಿ ಹಾಗೂ ಪತ್ನಿ ಕಾಲನ್ನು ಸೋಂಕಿ ಔಕಿ ಜ್ವರವನ್ನು ಆವಾಹಿಸಿಕೊಂಡು ಮರಣವನ್ನಪ್ಪಿದ್ದು ತಿಳಿದೂ ಯಾವ ಭಾವವನ್ನೂ ತೋರಿಸಿಕೊಳ್ಳದೇ ಮೌನವಾಗಿರುವುದು ಅವರ ಸನ್ಯಾಸತ್ವದ ಸಂದರ್ಭಕ್ಕೆ ಹೊಂದಿಸಿಕೊಳ್ಳುವಂಥದ್ದೇ ಆಗುತ್ತದೆ. 'ಎಲ್ಲ ಜೀವಕ್ಕೂ ಒಂದೊಂದು ದಾರಿ ನಿಯಮಿತವಾಗಿದೆ. ಆಯಾ ಜೀವ ಅದರದರ ದಾರಿ ನಡೆದು ಗುರಿಯನ್ನು ಮುಟ್ಟಬೇಕು. ನಮ್ಮ ದಾರಿ ಹೀಗೆ ಆಗುವುದಿತ್ತು. ಈ ನಿಮ್ಮ ದಾರಿ ಸುಖವಾಗಲಿ' ಎಂದು ಆಚಾರ್ಯರು ಸುಲಭದಲ್ಲಿ ಹೇಳುವುದು ಪಲಾಯನೋಪಾಯವಾಗಿಯೇ ಕಾಣುತ್ತದೆ. ಪುರುಷಾಧಿಕ್ಯ, ಸ್ವಾರ್ಥದ ನಡುವೆ ತಲ್ಲಣಿಸುವ ಸ್ತ್ರೀ ಜೀವನದ ಕುರಿತು ಕಿಂಚಿತ್ತೂ ಯೋಚನೆಯೇ ಲೊಕಕ್ಕೆ ಗುರುವಾದ ರಾಮಾನುಜಾಚಾರ್ಯರಿಗೆ ಬಾರದೇ ಹೋಗುತ್ತದೆ. ಅಂದರೆ ಸಂಸ್ಕೃತಿಯೊಂದರ ಕುರಿತು ತಿಳಿ ಹೇಳುವ, ಅದನ್ನು ನೆಲೆಯೂರಿಸುವ ಪ್ರಯತ್ನದಲ್ಲಿ ತಲ್ಲೀನರಾಗಿರುವ ಪುರುಷ ಮನಸ್ಸಿಗೆ ಸ್ತ್ರೀ ಬದುಕು-ಮನಸ್ಸು ಮುಖ್ಯ ವಾಗುವುದಿಲ್ಲ. ಅದು ಮಾಸ್ತಿಗೂ ಮುಖ್ಯವಾಗುವುದಿಲ್ಲೆಂಬುದು ಕತೆಯಲ್ಲಿ ಅವರು ಅಡಕವಾಗಿಸಿದ ಅಂಶಗಳೇ ಧ್ವನಿಸುತ್ತವೆ. ಕೇವಲ ಪತಿಯ ನೆನಪಲ್ಲಿಯೇ ದಿನ ಕಳೆದ ಆ ಹೆಣ್ಣು ಜೀವ ಪಟ್ಟ ಕಷ್ಟ, ನಷ್ಟ ನೋವುಗಳನ್ನು ಮರೆತು ಗಂಡನ ಒಳಿತನ್ನೇ ಹಾರೈಸುತ್ತ ಬದುಕಿ, ಗಂಡನನ್ನೊಮ್ಮೆ ಸೋಂಕಿ ಸಾವು ತಂದುಕೊಳ್ಳುವ ಮೂಲಕ ಪಾತಿವ್ರತ್ಯವನ್ನು ಉಳಿಸಬೇಕೆಂಬುದನ್ನೇ ಆಕೆ ಪ್ರತಿಪಾದಿಸುತ್ತಿದ್ದಾಳೆ.

ಯಶವಂತ ಚಿತ್ತಾಲ, 'ಆಚಾರ್ಯರ ಬಗೆಗಾಗಲಿ ಅವರ ಅಸಮಾಧಾನಕ್ಕೆ ಕಾರಣಳಾದಳು ಎನ್ನಲಾದ ಅವರ ಹೆಂಡತಿಯ ಬಗೆಗಾಗಲಿ ತೀವ್ರವಾದ ಭಾವನೆಗಳಿದ್ದಂತೆ ಎಲ್ಲೂ ತೋರುವುದಿಲ್ಲ.

ಕತೆಗೆ ಪ್ರಚೋದನೆಯಿಟ್ಟ ಪ್ರಶ್ನೆಗೆ ಉತ್ತರ ದೊರಕಿಸಿಕೊಳ್ಳುವ ಪ್ರಯತ್ನ ಕತೆಯಲ್ಲಿ ತಪ್ಪಿ ಕೂಡ ಸುಳಿಯುವುದಿಲ್ಲ'. ಎಂದಿರುವುದು ಸರಿಯಾಗಿಯೇ ಇದೆ.[೧೭]

'ಹೆಣ್ಣಿಗಿರುವ ಈ ರೀತಿಯ ಆತ್ಮಶೋಧನ ಅಥವಾ ಪಶ್ಚಾತ್ತಾಪ, ಪ್ರಾಯಶ್ಚಿತ್ತ ಕಲ್ಪನೆಗಳು ಮಾಸ್ತಿಯವರ ಗಂಡು ಪಾತ್ರಗಳಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ'[೧೮] ಎಂದು ಶಾಲಿನಿ ರಘುನಾಥ್ ಹೇಳಿರುವುದು ಚರ್ಚಾರ್ಹ ವಿಷಯವೇ ಆಗಿದೆ.

'ಮುನೀಶ್ವರನ ಮರ' ಕತೆಯ ರಾಜಮ್ಮ ಕೂಡ ಗಂಡನೊಂದಿಗೆ ಇರಬೇಕಾದ ರೀತಿಯನ್ನು ಅನುಸರಿಸದೇ ಇದ್ದುದರಿಂದ ಗಂಡನಿದ್ದೂ ಇಲ್ಲದ ಬದುಕು ಅನುಭವಿಸುವಂತಾಯಿತು. ಸಂದೇಹಕ್ಕೆ ಎಡೆಕೊಡದಂತೆ ಬಾಳಬೇಕಾದ ಹೆಂಡತಿ ಧರ್ಮವನ್ನು ಮೀರಿದ ಫಲವಾಗಿ ಆಕೆ ಗಂಡನಿಂದ ದೂರವಾಗಿ ಬದುಕಬೇಕಾದ ಕರ್ಮ ಅನುಭವಿಸಬೇಕಾಗುತ್ತದೆ. ತಪ್ಪು ಅವಳದಲ್ಲವಾದರೂ ಪತಿಯ ಮನಸ್ಸಿನಲ್ಲಿ ಮೂಡಿದ ಆ ಸಂದೇಹ ಪಿಶಾಚಿ ಅವಳ ಬದುಕನ್ನು ನುಚ್ಚುನೂರುಮಾಡುತ್ತದೆ. ಹಾಗೆ ಸಂದೇಹಕ್ಕೆ ಎಡೆಮಾಡಿಕೊಡದಂತೆ ಬದುಕನ್ನು ನೇರವಾಗಿ ಕೊಂಡೊಯ್ಯಬೇಕಾದವಳು ಹೆಂಡತಿ. ಗಂಡ ಏನು ಬೇಡ ಅಂದನೋ, ಅದನ್ನು ಶಿರಸಾ ಪಾಲಿಸಬೇಕಾದ ಪತ್ನಿ ಅದರ ಹೊರತಾಗಿ ತನ್ನ ನೇರಕ್ಕೆ ನಡೆದ ಪ್ರತಿಫಲ ಎಂಬಂತೆ ರಾಜಮ್ಮಳಿಂದ ಗಂಡ ದೂರವಾಗುವ ಉತ್ತರ ದೊರೆಯುತ್ತದೆ. ಇಲ್ಲಿ ಗಂಡ-ಹೆಂಡತಿಯರು ಪರಸ್ಪರ ಅರ್ಥಮಾಡಿಕೊಳ್ಳಬೇಕಾದ ಸಂದೇಶವಿದೆ. ಹೆಂಡತಿ ಏನೇ ಆದರೂ ಗಂಡ ಹೇಳಿದ ಗೆರೆ ದಾಟಬಾರದ ಪಾತಿವ್ರತ್ಯ ಪ್ರತಿನಿಧಿತವಾಗಿದೆ.

ರಾಜಮ್ಮನನ್ನು ಅವಳ ತವರು ಮನೆಯಲ್ಲಿ ಕೂಡ ಆಕೆಯನ್ನು ಉಳಿಯಗೊಡದಂತೆ ತಡೆಯುವ ಪುರುಷ ಮನಸ್ಸು ಯೋಚಿಸುವುದು ಹೀಗೆ, 'ಮನೆಗೆ ಹೋಗಬೇಕು, ಇವಳನ್ನು ಸ್ಪಷ್ಟವಾಗಿ ಕೇಳಬೇಕು, ಸರಿಯಾದ ರೀತಿಯಲ್ಲಿ ದಂಡಿಸಬೇಕು, ಇನ್ನು ಮುಂದೆ ಅಂಕೆಯಲ್ಲಿ ಇರಿಸಿಕೊಳ್ಳಬೇಕು. ಇಂಥ ಮಾತುಬಂದಮೇಲೆ ಗಂಡನ ಅಂಕೆ ಎಷ್ಟು ದುರ್ಬಲ ಎನ್ನುವುದನ್ನು ಗಂಡನಾದವನು ಕಾಣುವುದಿಲ್ಲ. ಗಾಳಿಯನ್ನು ಕಟ್ಟಿಹಾಕುವ ಹಾಗೆ ಮನಸ್ಸನ್ನು ಕಟ್ಟಿಹಾಕಬಹುದು. ಅದು ಹೇಗೆ ಎನ್ನುವುದು ಮನುಷ್ಯರಿಗೆ ತಿಳಿಯದು ಅಷ್ಟೇ. ತನ್ನ ಮನಸ್ಸನ್ನೇ ಕಟ್ಟದೇ ಇದ್ದ ಮಾನವ ಜೀವ ಬೇರೊಂದು ಮನಸ್ಸನ್ನು ಹೇಗೆಂದು ಕಟ್ಟಬಹುದು? ಆದರೂ ಸಮಾಜದ ಸಂಪ್ರದಾಯದಿಂದ ಗಂಡ ಎನ್ನುವುದು ವಿಚಿತ್ರ ಪ್ರಾಣಿಯಂತೆ. ತಾನು ಗಂಡನಾದ ಕಾರಣದಿಂದ ಹೆಂಡತಿಯ ಮನಸ್ಸಿನ ಮೇಲೆ ತನಗೆ ಈ ಶಕ್ತಿ ಇದೆ ಎಂದು ಮನುಷ್ಯನು ತಿಳಿಯುತ್ತಾನೆ.

---

೧೭ ಪು. XIX ಪ್ರಸ್ತಾವನೆ, ಮಾಸ್ತಿ ಮೂವತ್ತು ಕತೆಗಳು. ಸಂ- ಯಶವಂತ ಚಿತ್ತಾಲ

೧೮ ಪು.೪೨-೪೩ ಮಾಸ್ತಿಕತೆಗಳಲ್ಲಿ ಮಹಿಳೆ, ಸಮನ್ವಿತ ಶಾಲಿನಿ ರಘುನಾಥ್ (ಡಾ.) ೧೯೯೪

ಆ ತಿಳಿವಿನಿಂದ ಪ್ರೇರಿತನಾಗಿ ನಡೆಯುತ್ತಾನೆ ಎನ್ನುವುದು 'ಗಂಡತನ'ವನ್ನು ಪರಿಚಯಿಸುತ್ತದೆ. ಈ 'ಗಂಡತನ'ದ ಅಧಿಕಾರ ಚಲಾವಣೆಗೆ ಅವಕಾಶಕೊಡದಂತೆ ನಿಯಂತ್ರಣಕ್ಕೆ ಒಳಗಾಗಬೇಕಾದವಳು ಹೆಣ್ಣೇ ಆಗಿರಬೇಕು ಎನ್ನುವುದನ್ನು ರಾಜಮ್ಮನ ಬದುಕಿನ ಮೂಲಕ ಮಾಸ್ತಿ ಪ್ರತಿಪಾದಿಸಿದ್ದಾರೆ.

ತೌರಿನಲ್ಲಿ ಎರಡು ದಿನ ಹೆಚ್ಚು ನಿಂತದ್ದಕ್ಕೇನೇ ರಾಜಮ್ಮಳ ಕುರಿತಂತೆ ಇಡೀ ಊರಿಗೇ ಊರೇ ಆಡಿಕೊಳ್ಳುವುದು, ಅದನ್ನೇ ಸುದ್ದಿ ಮಾಡಿಬಿಡುವುದು ಅವಳ ಸ್ವಾತಂತ್ರ್ಯವನ್ನು ಹರಣಮಾಡಿದ್ದಾಗಿ ಕಾಣುತ್ತದೆ. ಅವಳ ತಂಗಿಯ ಗಂಡನೊಂದಿಗೇನೇ ಸಂಬಂಧ ಕಲ್ಪಿಸಿ ಸಂದೇಹದ ಹೊಗೆಯಾಡಿಸುವುದು ಈ ದಾಂಪತ್ಯದ ನಡುವಿನ ಬಿರುಕಿಗೆ ಕಾರಣವಾಗಿದೆ. ಆಕಸ್ಮಿಕವಾಗಿ ಬಾವಿಕಟ್ಟೆಯ ಬಳಿ ಸಿಕ್ಕ ತಂಗಿಯ ಗಂಡನೊಂದಿಗೆ ಮಾತನಾಡಿದ ಬಳಿಕ ಸಂದೇಹ ದೃಢಗೊಳ್ಳುತ್ತದೆ. ಗಂಡನ ಹೊರತಾಗಿ ಅನ್ಯ ಗಂಡಸನ್ನು ತಲೆ ಎತ್ತಿ ನೋಡಬಾರದ ಪದ್ಧತಿಯನ್ನು ಪೋಷಿಸಬೇಕಾದ ಅನಿವಾರ್ಯತೆಯನ್ನು ಈ ಮನೋಹಿಂಸಾ ರೂಪ ಮುಂದಿಡುತ್ತದೆ. 'ಹೆಂಡತಿ ತಪ್ಪಿ ನಡೆದರೆ ಗಂಡ ಅನುಮಾನ ಪಡುವುದು ಏಕೆ ಎನ್ನುವುದನ್ನು ನಿಶ್ಚಯವಾಗಿ ಹೇಳುವುದು ಕಷ್ಟ. ಪ್ರಾಯಶಃ ಈ ಅವಮಾನದ ಮುಖ್ಯ ಕಾರಣ ತಾನು ಜೀವನದಲ್ಲಿ ಸೋತೆ ಎಂಬ ಭಾವ ಇರಬೇಕು. ಹೆಂಡತಿಯನ್ನು ಒಪ್ಪಿಸಿ ಅವಳ ಮನಸ್ಸನ್ನು ತನ್ನದಾಗಿ ಉಳಿಸಿಕೊಳ್ಳುವ ಭಾರ ಗಂಡನದು, ಈ ಹೊಣೆಯನ್ನು ಇವನು ಸಾಧಿಸಲಿಲ್ಲ, ಜೀವನದ ಪರೀಕ್ಷೆಯಲ್ಲಿ ಸೋತನು. ಹೆಂಡತಿ ಸರಿಯಾದವಳಾಗಿದ್ದು, ಗಂಡನ ಯೋಗ್ಯತೆ ಕಡಿಮೆಯಾಗಿದ್ದರೆ ಮಾತ್ರ ಈ ವಾದ ಅನ್ವಯಿಸುವುದಿಲ್ಲ' ಎಂಬುದು ಮತ್ತು ಹೆಂಡತಿ ಕುಟಿಲೆ ಆದರೂ ಗಂಡನ ಸೋಲು ಸೋಲೇ. ಎಂದಾದರೂ ಎಲ್ಲಿಯಾದರೂ ಎಂಥವನ ತಲೆಯನ್ನಾದಾರೂ ತಗ್ಗಿಸುವ ಈ ಸೋಲಿನ ಅವಮಾನ ಸಣ್ಣ ಹಳ್ಳಿಗಳ ಜೀವನದಲ್ಲಿ ಸಹಿಸಲಾರದ ಭಾರವಾಗುತ್ತದೆ, ಗಂಡನನ್ನು ಅಪ್ಪಚ್ಚಿ ಮಾಡಿಬಿಡುತ್ತದೆ' ಎನ್ನುವುದು ಅದಕ್ಕೆ ಉತ್ತರವನ್ನು ಕೊಡುತ್ತದೆ. ಗಂಡಿಗೆ ಸೋಲು ಒದಗದಂತೆ ಪೋಷಿಸಬೇಕಾದ ರೀತಿಗೆ ಹೆಣ್ಣು ಸಿದ್ಧಳಾಗಬೇಕಾದ ಅನಿವಾರ್ಯತೆಯನ್ನು ವೈದಿಕ ಪರಂಪರೆ ಮುಂದೊಡ್ಡುತ್ತದೆ. ಆದರೆ ಗಂಡನಿಗಿದ್ದ ಸಂದೇಹವನ್ನು ಪರಿಹರಿಸುವಲ್ಲಿ ಕೂಡ ಮುಂದಾಗದೇ ಹಟಮಾಡುತ್ತಾಳೆ. ಆ ಹಟವು ಅವಳನ್ನು ಗಂಡ ತೊರೆದು ಹೋಗುವ ಮೂಲಕ ಅದನ್ನು ತಗ್ಗಿಸುವ ಪ್ರಯತ್ನ ಮಾಡಿದೆ. ಈ ಹಟವನ್ನು ವೈದಿಕ ಪರಂಪರೆಯ ಬದುಕು ಒಪ್ಪಿಕೊಳ್ಳುವುದಿಲ್ಲ. ಯಜಮಾನ ಶಾಹಿತ್ವದ ಗಂಡು ಅದನ್ನು ದಮನಿಸಲು ಬೇರೆಯದೇ ಆದ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನಿಸುತ್ತಾನೆ.

'ಪಾಪ ಮಾಡಿದ ಯಾಪ ಮುಂಡೆ ಮಾಡಿದ್ದೇ ಅಂತ ಒಪ್ಪಿಕೊಂಡಾಳು? ಇಂಥ ಬಾಳು ಬಾಳೋದಕ್ಕಿಂತ ಇಬ್ಬರೂ ಸತ್ತರೆ ಚೆನ್ನ. ನನಗೀ ಪುರಾಣ ಎಲ್ಲ ಬೇಡ. ಹೋಗ ಕೂಡದು ಅಂತ

ನಾಹೇಳಿದ್ದೆ. ನನ್ನ ಮಾತು ಮೀರಿ ನೀನು ಹೋಗಿದ್ದೆ. ಹೇಗಿದ್ದರೆ ನಿನಗೆ ಸುಖ ಅನ್ನಿಸುತ್ತೆ ಹಾಗಿರು ನೀನು. ನನಗೆ ಸುಖ ಅನ್ನಿಸಿದ ಹಾಗೆ ನಾನಿರುತ್ತೇನೆ. ಇನ್ನು ನನಗೂ ನಿನಗೂ ಸಂಬಂಧವಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ಹೇಳುವಲ್ಲಿ ಪುರುಷ ಕೇಂದ್ರಿತ ನಿಲುವು ಇದೆ. ಗಂಡಿಗೆ ತೃಪ್ತಳಾಗುವಂತೆ ಹೆಣ್ಣು ಇರಬೇಕಾದ ರೀತಿಗೆ ಸ್ತ್ರೀ ಇಲ್ಲಿ ಬದ್ಧಳಾಗಿರಬೇಕೆಂಬುದನ್ನೇ ಪ್ರತಿಪಾದಿಸಲಾಗಿದೆ. 'ದೇವರಾಣೆ, ಮುಂಡೆಗಿಂಡೆ ಅನ್ನಬೇಡಿ. ದೇವರ ಕೃಪೆಯಿಂದ ನೀವು ನೂರು ವರ್ಷ ಬಾಳಬೇಕು' ಎನ್ನುವುದು ಮತ್ತೆ ಸುಮಂಗಲೆಯ ಸಾವು ಬಯಸುವುದು, ಗಂಡನ ಆಯುಷ್ಯ ಬಯಸುವ ಮೂಲಕ ಸ್ತ್ರೀ ಪುರುಷನಿಗೆ ಅಧೀನಳಾಗಿಯೇ ಇರಬೇಕಾದುದನ್ನು ಸ್ತ್ರೀಯೇ ಒಪ್ಪಿಕೊಳ್ಳುತ್ತಾಳೆ. 'ನಾನು ಸತ್ಯವಾಗಿ ಹೇಳುತ್ತೇನೆ, ನಾನು ತಪ್ಪು ಮಾಡಿಲ್ಲ' ಎಂದು ಗೋಗರೆಯುವುದು ಇಲ್ಲಿ ಪರಿಣಾಮ ಬೀರದೇ ಹೋಗುತ್ತದೆ. ಇದು ಹೆಂಡತಿಗೆ ಕ್ಷಮೆ ಕೇಳುವುದು ಅಥವಾ ಸಮಜಾಯಿಷಿಯ ಉತ್ತರ ಕೊಡುವುದಕ್ಕಿಂತ ಮುಖ್ಯವಾಗಿ ಅದಕ್ಕೆಲ್ಲ ಎಡೆಕೊಡದಂತೆ ಗಂಡನಿಗೆ ಆರಂಭದಿಂದಲೆ ನಿಷ್ಠೆಯಿಂದ ಬಾಳಬೇಕು ಎಂಬುದನ್ನು ಧ್ವನಿಸುತ್ತದೆ.

ಗಂಡನಾದವ ಸಿಟ್ಟಿನಿಂದ ಊರುಬಿಟ್ಟು ಹೋದ ಬಳಿಕ ಗಂಡನನ್ನು ನೆನಪಿಸುತ್ತ ಕಳೆದ ರೀತಿ ಕೂಡ ಸತೀತ್ವವನ್ನು ಪಾಲಿಸುವ ಮೌಲ್ಯವನ್ನು ಒಪ್ಪಿತಗೊಳಿಸುತ್ತದೆ.

ಮುನಿಯಾಗಿ ಊರಿಗೆ ಬರುವ ಗಂಡನೊಂದಿಗೆ ಮತ್ತೊಮ್ಮೆ ಕ್ಷಮೆ ಯಾಚಿಸಿದರೂ, ಅವಳ ತಪ್ಪಿಲ್ಲದ ನಡವಳಿಕೆಯಿಂದಾಗಿ ಬದುಕು ಛಿದ್ರಗೊಂಡಿರುವುದಕ್ಕೆ ಪಶ್ಚಾತ್ತಾಪದಿಂದ ಕೊರಗುತ್ತಾಳೆ. ಆದರೂ ಸಾಂಪ್ರದಾಯಿಕ ಪುರುಷನ ಜಡಮನಸ್ಸಿನ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ. ಆ ಸಂದರ್ಭ ಆತ 'ನೀನು ಲೋಕಮಾತೆ, ಇನ್ನು ನೀನು ಕೇಳತಕ್ಕದ್ದಾಗಲಿ, ನಾನು ಹೇಳತಕ್ಕದ್ದಾಗಲೀ ಬೇರೆ ಮಾತು ಇಲ್ಲ. ನಾನು ತೋರಿಸಬೇಕಾದ ದಾರಿ ಇದೇ.' 'ಲೋಕಮಾತೆ ನೀನು ನನ್ನಿಂದ ಏನನ್ನೂ ಕಲಿಯಬೇಕಾಗಿಲ್ಲ, ನಾನು ನಿನ್ನ ಮಗು-ನೀನು ನನ್ನ ಕಾಲನ್ನು ಮುಟ್ಟಬಾರದು' ಎನ್ನುವ ಮೂಲಕ ಮತ್ತೆ ದಾಂಪತ್ಯ ಮಾಡುವ ಸೋಲಿಗೆ ಒಪ್ಪದಂತೆ ಜಾಗ್ರತೆ ವಹಿಸುವುದು ತಿಳಿಯುತ್ತದೆ. ಈ ಜಾಗ್ರತೆಯ ಪರಿಣಾಮವೇ ಆ ಊರನ್ನು ಯಾರಿಗೂ ಹೇಳದೇ ಬಿಡುವುದನ್ನು ತೋರಿಸಿಕೊಡುತ್ತದೆ. ಇಲ್ಲಿಗಂಡನ ಈ ಗೆಲ್ಲುವ ಹಟ ಹೆಂಡತಿಯ ಮನಸ್ಸನ್ನು ಅರ್ಥ ಮಾಡಿಕೊಳ್ಳದೇ ಹೋಗುವ ವಾಸ್ತವವನ್ನು ಅರಿತುಕೊಂಡು ಹೆಂಡತಿಯಾದವಳು ಗಂಡನೊಂದಿಗೆ ಬದುಕಬೇಕಾದ ಅನಿವಾರ್ಯತೆ ಇದೆ ಎಂಬ ಅಂಶ ಇಲ್ಲಿ ಪ್ರಕಟವಾಗಿದೆ. ಅಲ್ಲದೇ ಹೋದರೆ, ಅನಂತರ 'ನನ್ನ ಕೈಬಿಡಬೇಡ, ಕಾಪಾಡು ನನ್ನದು ತಪ್ಪಾಗಿದೆ. ಅದನ್ನು ಮನ್ನಿಸು ನಾ ತಪ್ಪಿದ್ದು ನಿಜ. ಅದಕ್ಕಾಗಿ ನನ್ನ ತೊರೀಬೇಡ. ನನ್ನ ದೇವರು, ನನ್ನ ಕೈಬಿಡಬೇಡ. ಸೆರಗೊಡ್ಡಿ ಬೇಡುತ್ತೇನೆ. ನನ್ನ ಕಾಪಾಡು' ಎಂದು ಕೂಗುವುದು ವ್ಯರ್ಥವಾಗುತ್ತದೆ. 'ಅಯ್ಯೋ ನನ್ನ ದೇವರೇ, ನನ್ನ ಬಿಟ್ಟು ಹೋದೆಯಲ್ಲ, ಅಯ್ಯೋ ದೇವರೆ ನನ್ನ ತಿರುಗಿ ಅಟ್ಟದೆಯಲ್ಲ' ಎಂದು ಪರಿತಪಿಸುತ್ತ ಹುಚ್ಚಿಯಾಗಬೇಕಾಗುತ್ತದೆ. ಆದುದರಿಂದ

ಸ್ತ್ರೀ ಜಾಗ್ರತೆಯಾಗಿ ಗಂಡನೊಂದಿಗೆ ಹೊಂದಿಕೊಂಡು ಬಾಳಬೇಕೆಂಬ ತತ್ವವನ್ನು ಸಾರ್ವತ್ರಿಕಗೊಳಿಸಿದ್ದಾರೆ.

'ಕೈ ಹಿಡಿದ ಹೆಂಡತಿ ಹತ್ತು ವರ್ಷ ಸಂಸಾರ ಮಾಡಿದವಳು ಹೆಚ್ಚಿಲ್ಲದೆ ಕಡಿಮೆ ಇಲ್ಲದೆ ಹೋದ್ದರಿಂದಲೇ ಹಾಳಾದೆ. ಕೈಬಿಟ್ಟು ಹೋದಿರಿ. ನನ್ನನ್ನು ಕೆಟ್ಟವರ ಕೈಯ್ಯಲ್ಲಿ ಹಾಕಿದಿರಿ. ಕೆಡದೆ ಇರುವ ಯೋಗ್ಯತೆ ನನಗೆ ಇಲ್ಲ. ನಾನು ಕೆಟ್ಟೆ. ಈಗ ಕಂಡಿರಲ್ಲ ಎಂತ ಕನಿಕರ ಪಡುತ್ತಿದ್ದೇನೆ' ಎಂದು ಆಕೆ ಪತಿ ತನ್ನನ್ನು ತೊರೆಯುವ ಮೊದಲು ಮಾಡಿರದ ತಪ್ಪನ್ನು ಅನಂತರ ಮಾಡಬೇಕಾಗಿ ಬಂದ ವಸ್ತುಸ್ಥಿತಿಯನ್ನು ಮುಂದಿಡುತ್ತಾಳೆ. ಅಂದರೆ ಪತಿನಿಷ್ಠೆಯಿಂದ ಇದ್ದೂ ತನ್ನ ತವರೆಂಬ ಮಮಕಾರದಿಂದ ತವರಿನವರ ಒತ್ತಾಯದಿಂದ ಅಲ್ಲಿಗೆ ಹೋಗಿಬರುತ್ತಿದ್ದುದು, ತನಗೇ ಅರಿವಿಲ್ಲದೇ ಸುತ್ತು ಬರುತ್ತಿದ್ದ ಭಾವನ ನಡವಳಿಕೆಯಿಂದಾಗಿ ತನ್ನನ್ನೇ ಸಂದೇಹಿಸಿ, ತೊರೆದು ಹೋದ ಪತಿ ಮರಳಿ ಬಂದಾಗ ಪತಿತೆಯಾಗಿರುವುದನ್ನು ಮುಂದಿರಿಸುತ್ತಾಳೆ. ಅವಳ ಕೆಡುವಿಕೆಗೆ ಗಂಡನ ತೊರೆಯುವಿಕೆಯೇ ಕಾರಣವಾದುದನ್ನು ಆಕೆ ವಿವರಿಸುವಲ್ಲಿ ಆಕೆಯ ಬದುಕಿನ ಸ್ಥಿತಿಯ ಪರಿಚಯ ದೊರೆಯುತ್ತದೆ. ಅನಗತ್ಯ ಸಂದೇಹಕ್ಕೆ ಎಡೆಮಾಡಿಕೊಟ್ಟ ರೀತಿಗೆ ಸ್ಪಷ್ಟೀಕರಣ ನೀಡದಿರುವುದು ಆಕೆಯ ತಪ್ಪಾದರೂ ಕೆಡದೇ ನಿಜ ಸ್ಥಿತಿ ಅರಿಯದೇ ತೊರೆದದ್ದು ಗಂಡನ ತಪ್ಪಾಗುತ್ತದೆ. ಅದರ ನಂತರದ ಆಕೆಯ ಕೆಡುವಿಕೆ ಸಮಾಜದ ದೃಷ್ಟಿಕೋನಕ್ಕೆ ಹಿಡಿದ ಕನ್ನಡಿಯಾಗಿದೆ. ಗಂಡನೊಂದಿಗೆ ಬದುಕಿದ್ದರೇನೇ ಸ್ತ್ರೀಯಾದವಳಿಗೆ ಗೌರವ, ಭದ್ರತೆ ದೊರೆಯುತ್ತದೆ. ಆತನಿಂದ ದೂರವಾದ ಸ್ತ್ರೀಯ ಶೀಲವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ಗಂಡ ತೊರೆದು ಹೋಗದಂತೆ ಅವನನ್ನು ಸಮಾಧಾನಿಯಾಗಿರುವಂತೆ ಹೆಂಡತಿಯಾದವಳು ಎಚ್ಚರಿಕೆಯಿಂದ ಪರಿಚಾರಿಕೆಯಂತೆ ನೋಡಿಕೊಳ್ಳಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ. ಗಂಡ ಹೆಂಡಿರ ನಡುವೆ ಇರಬೇಕಾದ ಪರಸ್ಪರ ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆ ಗಟ್ಟಿಗೊಳ್ಳಬೇಕಾದುದನ್ನು ರಾಜಮ್ಮನ ಸ್ವಭಾವ ಹಾಗೂ ಆಕೆ ಅನುಭವಿಸಬೇಕಾಗಿ ಬಂದ ಸ್ಥಿತಿಯೇ ಮನದಟ್ಟುಮಾಡಿಸುತ್ತದೆ.

ಗಂಡನ ಮೇಲಿನ ಅತಿ ಪ್ರೀತಿಯೇ ಅವನನ್ನು ತೊರೆದು ಇನ್ನೊಬ್ಬನನ್ನು ವರಿಸಬಾರದಂತೆ ತಡೆಯುತ್ತದೆ. ಭಾರತೀಯ ಸತೀತ್ವದ ಶಕ್ತಿ ಹುದುಗಿರುವುದೇ ಅಲ್ಲಿ. ಅದು ಬದಲಾಗಬಾರದ ಕಾಳಜಿಯಿಂದಾಗಿಯೇ ಅಂಥ ಸ್ಥಿತಿ ಮತ್ತು ಪಾತಿವ್ರತ್ಯವನ್ನು ಮತ್ತೆ ಮತ್ತೆ ನೆನಪಿಸುವ ಅಂಶವಾಗಿಯೇ ರಾಜಮ್ಮ ತನ್ನ ಗಂಡನ ನೆನಪಿನಲ್ಲಿ ದಿನ ಕಳೆಯುತ್ತಾಳೆ. ಮತ್ತು ತನ್ನನ್ನು ಪತ್ನಿಯಾಗಿ ಸ್ವೀಕರಿಸುವಂತೆ ಗೋಳಿಡುತ್ತಾಳೆ. ಹೆಣ್ಣಿನ ಪ್ರೀತಿ ವಾತ್ಸಲ್ಯವೇ ದಾಂಪತ್ಯವನ್ನು ಉಳಿಸುತ್ತದೆ ಎನ್ನುವಲ್ಲಿ ಗಂಡನನ್ನು ಯಾವುದಕ್ಕೂ ಹೊಣೆಯಾಗಿಸುವುದಿಲ್ಲ. ಒಂದು ದಾಂಪತ್ಯವನ್ನು ಒಡೆಯುವ, ಕೂಡಿಸುವ ಪರಿಯ ನಡುವೆ ಗಂಡು, ಅವನ ನಡವಳಿಕೆ ಮರೆಯಾಗಿಬಿಡುತ್ತದೆ. ಎಲ್ಲದಕ್ಕೂ ಮಾದರಿಯಾಗಿಸುವುದು ಹೆಣ್ಣನ್ನೇ. ಅದೇ ಹೆಣ್ಣಿನಿಂದಲೇ ಅದರ ಪರಿಪಾಲನೆಯಾಗುವಂತೆ ನೋಡಿಕೊಳ್ಳುವಂತೆ ಕೂಡ ಮಾಡಲಾಗುತ್ತದೆ.

‘ಕಾಮನಹಬ್ಬದ ಒಂದು ದಿನ’ ಕತೆಯ ಸಾವಿತ್ರಮ್ಮ ಪರಿಚಿತಳಾಗುವುದು ಕಾಮನ ಹಬ್ಬದ ಸಂದರ್ಭ ಗಂಡಸತ್ತನೆಂದು ಭ್ರಮಿಸಿ ಅವನ ಸೇವೆ ಮುಂದಿನ ಜನ್ಮದಲ್ಲಿ ಕೂಡ ಮಾಡುವಂತಾಗಲೆಂದು ಕೈಗೊಳ್ಳುವ ವ್ರತದ ಕ್ರಿಯಾಚರಣೆಗೆ ತನ್ನನ್ನು ಒಳಗು ಮಾಡಿಕೊಳ್ಳುವ ಪತಿವ್ರತೆಯಾಗಿ. ಸಾವಿತ್ರಮ್ಮನಿಗೆ ಗಂಡನೆಂದರೆ ಪಂಚಪ್ರಾಣ. ಗಂಡನೊಬ್ಬನೇ ತನ್ನ ಆಸ್ತಿ ಎಂದು ಕೊಂಡಿದ್ದ ಅವಳು ಆ ಪ್ರೀತಿಯಿಂದಲೇ ಅವನಿಲ್ಲದ ಬಾಳನ್ನು ತಾನೊಬ್ಬಳೇ ಕಳೆಯುವುದನ್ನು ಒಪ್ಪಿಕೊಳ್ಳುವುದಿಲ್ಲ. ವಿಧವೆಯ ವೇಷ ತೊಡುವುದು, ಜತೆಗೆ ‘ನನಗೆ ಅವಮಾನ, ನನ್ನನ್ನು ಕಂಡರೆ ನಗುತ್ತಾರೆ, ನಾನು, ನಾನು ಎಂತ ಮಾಡದೇ ಬಿಟ್ಟರೆ ಪತಿಭಕ್ತಿ ಏನು ತೋರಿಸಿದ ಹಾಗಾಯಿತು? ಅವರು ಇಲ್ಲಿದ್ದರೆ ಹೊಡೆದರೆ ಬೇಡಾ ಎಂದಿತ್ತೇ? ಬೈದರೆ ಬೇಡಾ ಎಂದಿತ್ತೇ? ಅದಕ್ಕೆಲ್ಲ ಅವಮಾನ ಎನ್ನುತ್ತಿದ್ದೆನೋ? ಯಾರು ನಕ್ಕರೆ ನನಗೇನು?’ ಎನ್ನುವ ಅವಳ ಪ್ರಶ್ನೆ ಹಾಗೂ ನಿಲುವು ಅಚಲ ಪತಿಭಕ್ತಿಯ ಪ್ರತೀಕದ್ದೂ ಆಗುತ್ತದೆ. ಪ್ರೀತಿ ಹಾಗೂ ಪತಿಭಕ್ತಿಯ ಮೇಳೈಸುವಿಕೆ ಆಕೆಯ ಬದುಕು ಆದರ್ಶದ ನೆಲೆಗಟ್ಟಿನಲ್ಲಿ ನಿಂತು ಅದನ್ನು ಬೋಧಿಸುವ ಕೆಲಸ ಮಾಡುತ್ತದೆ. ಇದು ಅಂಥ ಪ್ರೀತಿಯ ದಾಂಪತ್ಯ ಬದುಕು ಎಲ್ಲರಿಗೂ ದೊರಕಲಿ ಎಂದು ಕನವರಿಸುವಂತೆ ಮಾಡುತ್ತದೆ. ಸತ್ತನೆಂದು ಭಾವಿಸಿದ ಗಂಡ ಮರಳಿ ಬಂದಾಗ ಆಕೆ ಅವನನ್ನು ಸ್ವೀಕರಿಸುತ್ತಾಳೆ. ಇದು ಗಂಡನನ್ನು ಸಂಪೂರ್ಣ ತಿರಸ್ಕರಿಸದೇನೇ ಒಪ್ಪಿಕೊಳ್ಳಬೇಕಾದ ~~ಹಾದಿಯನ್ನು ಅವಲಂಬಿಸಬೇಕಾದ~~ ಅನಿವಾರ್ಯತೆಗೆ ಒಳಗಾಗಬೇಕಾದುದನ್ನು ಪ್ರತಿಪಾದಿಸುತ್ತದೆ.

ಗಂಡಬಿಟ್ಟು ಹೋದ ಅನಂತರದಲ್ಲಿ ಬೂದಿ ಎರಚಿಕೊಳ್ಳುವ ಕುರಿತು ಅಪ್ಪ, ಸತ್ತ ಹೆಣಕ್ಕಿಂತ ಬದುಕಿದ ಹೆಣಕ್ಕೆ ಈ ಮರ್ಯಾದೆ ಹೆಚ್ಚಾಗಿ ಮಾಡಬೇಕು. ನಾನು ಬದುಕಿದ ಹೆಣ , ಜೀವಶವಾ ಅಪ್ಪಾ ಬೂದಿ ಎರೆಯಿಸಿಕೊಳ್ಳುವ ಸಂಪ್ರದಾಯದ ಕುರಿತು ಮಲೆನಾಡಿನಲ್ಲಿ ಆಚರಣೆಯಲ್ಲಿದ್ದ ಈ ಪದ್ಧತಿಯ ಕುರಿತು ವಿಧವೆಯರು ಮುಂದಿನ ಜನ್ಮದಲ್ಲೂ ಪ್ರಸ್ತುತ ಜನ್ಮದಲ್ಲಿ ಬದುಕು ಕಳೆದ ಪತಿಯೇ ದೊರೆಯಬೇಕೆಂದು ಆಶಿಸಿ ಕೈಗೊಳ್ಳುವ ವ್ರತವೆಂದು ಮಾಸ್ತಿ ಪರಿಚಯಿಸಿದ್ದಾರೆ. ಎಂದು ಖೇದಿಸುವುದು, ಕೊರಗುವುದು ಗಂಡಬಿಟ್ಟು ಹೋದ ಹೆಣ್ಣಿನ ಜೀವನವನ್ನು ಹಿಡಿದುಕೊಡುವುದಾಗಿದೆ. ತಲತಲಾಂತರದ ನಂಬಿಕೆಯಾಗಿರುವ ಪತಿವ್ರತಾಧರ್ಮ, ಗಂಡನ ಹೊರತಾಗಿನ ಹೆಣ್ಣಿನ ಬದುಕು ಶೂನ್ಯ ಎಂಬ ನಂಬಿಕೆಯನ್ನು ಇಲ್ಲಿ ಸತ್ವಯುತಗೊಳಿಸುವ ಪ್ರಯತ್ನವಾಗಿ ಕಾಣುತ್ತೇವೆ.

ಸಾವಿತ್ರಮ್ಮ ಕೈ ಗೊಂಡ ಬೂದಿ ಎರೆಯಿಸಿಕೊಳ್ಳುವ ವ್ರತದ ಪರಿಣಾಮವಾಗಿಯೇ ಎಂಬಂತೆ ಗಂಡ ಮರಳಿ ಪ್ರತ್ಯಕ್ಷನಾಗಿ ಇಬ್ಬರೂ ಒಂದಾಗಿ ಮರಳಿ ಬದುಕುವ ಸಂದರ್ಭ ಒದಗುತ್ತದೆ ~~ಎಂಬುದನ್ನು ಮಾಸ್ತಿ ಪ್ರತಿಪಾದಿಸುತ್ತಾರೆ~~. ಗಂಡನನ್ನು ಕಂಡ ಸಂಭ್ರಮದಲ್ಲಿ ಮೂರ್ಛೆ ತಪ್ಪಿದ ಪತ್ನಿಗೆ ಆತನೇ ಸ್ವತಃ ಉಪಚರಿಸುತ್ತಾನೆ. ‘ಗಂಡಂದಿರು ಹೆಂಡತಿಯರ ವಿಷಯದಲ್ಲಿ ಬಹಳ ಪ್ರೀತಿ

ತೋರಿಸುವುವರೆಂದು ಜನರಲ್ಲಿ ಒಂದು ಭಾವನೆ ಇದೆ. ಪ್ರಾಯಶಃ ಇದು ನಿಜವಾದದ್ದೇ. ಆದರೆ ಅಂದು ಆ ಗಂಡನು ಆ ಹೆಂಡತಿಯಲ್ಲಿ ತೋರಿದ ಮಮತೆ ಕನಿಕರ, ದಾಕ್ಷಿಣ್ಯ ಭ್ರಮೆ ಇದನ್ನೆಲ್ಲ ಒಳಗೊಂಡ ಆ ಪ್ರೇಮ ರಸಕ್ಕೆ ಸಮನಾದ ಪ್ರೇಮವನ್ನು ಬೇರೆ ಮಾರ್ಗಗಳಲ್ಲಿ ನಾನು ಕಣ್ಣಿನಲ್ಲಿ ನೋಡಿಲ್ಲ' ಎಂದು ಅದನ್ನು ಉನ್ನತೀಕರಿಸುವುದು ಇಲ್ಲಿ ಕಾಣುತ್ತೇವೆ. ಸತಿ-ಪ್ರೇಮದ ಉನ್ನತೀಕರಣದ ನಡುವೆ ಹೆಣ್ಣಿನ ಹಳಹಳಿಕೆ ಚಿಂತೆ, ಕಷ್ಟ ತುಡಿತಗಳೆಲ್ಲ ಮಾಯವಾಗಿವೆ. ಅವಳಿಗೆ ಅವಳ ಸುಮಂಗಲತ್ವದ ವೈಭವೀಕರಣ ಮಾಡುವುದಕ್ಕಾಗಿಯೇ ಅರಸಿನ ಬಾಗಿನ ಕೊಟ್ಟು 'ಸಾವಿತ್ರಮ್ಮ ನಿಮ್ಮ ವ್ರತ ದೃಢವಾದ ವ್ರತ ಆಶೀರ್ವಾದ ಚೆನ್ನಾಗಿ ಫಲಿಸುತ್ತೆ. ಹುಡುಗಿಯನ್ನುಚೆನ್ನಾಗಿ ಹರಸಿ' ಎಂದು ಹಾರೈಕೆ ಪಡೆಯುವಲ್ಲಿ ಅಂಥ ಬದುಕಿಗೆ ಕೊಡುವ ಮರ್ಯಾದೆಯನ್ನು ಗಮನಿಸಬೇಕು. ಆ ಮೂಲಕ ಅಂಥ ಬದುಕನ್ನು ವೈಭವೀಕರಸಿ ಅವಳನ್ನು ಬಂಧಿಸುವುದನ್ನು ಒಂದು ಮೌಲ್ಯವಾಗಿ ನಂಬಿ ಸ್ವೀಕರಿಸುವಂತೆ ಮಾಡಿದ್ದಾರೆ.

ಗಂಡನನ್ನು ಗೌರವಿಸಲೇಬೇಕಾದ ಸಾಂಪ್ರದಾಯಕ ನಿಲುವನ್ನು ಒಪ್ಪಿಕೊಂಡು ಪಾಲಿಸಬೇಕಾದ ನಿಟ್ಟಿನಲ್ಲಿ ಪ್ರೇರಿಸಲಾಗಿದೆ. ವೈಧವ್ಯದ ವೇಷ ಕೂಡ ಪತಿಭಕ್ತಿಯ ಸಂಕೇತವಾಗಿಯೇ ಸ್ವೀಕಾರವಾಗುತ್ತದೆ. ಮತ್ತು ಸುಮಂಗಲಿ ವೇಷದ ಕುರಿತು ಭಾವನಾತ್ಮಕತೆ ಅತಿ ಎತ್ತರದ ಸ್ಥಾನದಲ್ಲಿ ನಿಲ್ಲುತ್ತದೆ. ಗಂಡನಿ ಗಾಗಿ ಕೈಗೊಂಡ ವ್ರತದ ಫಲವೋ ಎಂಬಂತೆ ಆಕೆ ಮತ್ತೆ ದಾಂಪತ್ಯ ಬದುಕು ಪಡೆಯುವಂತಾದ ರೀತಿಯನ್ನು ಮಾಸ್ತಿ ಈ ಮೂಲಕ ನೆನಪಿಸುತ್ತಾರೆ. ಸಾವಿತ್ರಮ್ಮನಿಗೇ ಮದುವೆ ಮುಂತಾದ ಸಂದರ್ಭದಲ್ಲಿ ಎಲ್ಲರಿಗಿಂತ ಮೊದಲು ಅರಸಿನ ಕುಂಕುಮ ಕೊಡುತ್ತಾರೆ, ಹೆಣ್ಣು ಮಕ್ಕಳ ಕೈಯಲ್ಲಿ ಗೌರಿ ಹಬ್ಬದ ಬಾಗೀನಗಳನ್ನು ಕೊಡಿಸುವಾಗ ಮೊದಲು ಇವರ ಹತ್ತಿರ ಕರೆತಂದು ಕೊಡಿಸಿ, 'ಸಾವಿತ್ರಮ್ಮ, ನಿಮ್ಮ ವ್ರತ, ದೃಢವಾದ ವ್ರತ, ನಿಮ್ಮ ಆಶೀರ್ವಾದ ಚೆನ್ನಾಗಿ ಫಲಿಸುತ್ತೆ . ಹುಡುಗಿಗೆ ಚೆನ್ನಾಗಿ ಹರಸಿ' ಎಂದು ಹೇಳಿರುವಲ್ಲಿ ಪಾತಿವ್ರತ್ಯಕ್ಕೆ ಮಾನ್ಯತೆ ಕೊಡಲಾಗಿದೆ. ಮತ್ತು ಅದಕ್ಕಾಗಿ ಸಮರ್ಪಿಸಿಕೊಳ್ಳುವ ಸಮರ್ಪಣಾ ಮನೋಭಾವದಿಂದಾಗಿ ಇಲ್ಲಿನ ಸ್ತ್ರೀಯರು ಪತಿವ್ರತಾಧರ್ಮ ಪಾಲನೆಗೆ ಗೌರವ ಕೊಟ್ಟದ್ದಾಗಿ ಗುರುತಿಸಬಹುದಾಗಿದೆ. ಗಂಡನೇ ಬದುಕಿನ ಮುಖ್ಯ ಅಂಗ. ಅವನನ್ನು ತೊರೆದು ಬದುಕು ಸಾಗಿಸುವುದು ತೆರನಲ್ಲ ಎಂದೇ ಸಾರುವುದಾಗಿದೆ. ಆದ್ದರಿಂದಲೇ ' ವೇಲೂರಿನ ಲಕ್ಷಮ್ಮ ' ಕತೆಯ ಲಕ್ಷ್ಮಮ್ಮ ಕೂಡ ಗಂಡಬಿಟ್ಟು ಕಾಶಿಗೆ ಹೋದಾಗ ಬುದ್ಧಿಭ್ರಮಣೆಗೂ ಒಳಗಾಗುತ್ತಾಳೆ. ಗಂಡನನ್ನೇ ಮರ್ಯಾದೆಯ, ಗೌರವದ ಸಂಕೇತವಾಗಿ ಸಮಾಜ ಸ್ವೀಕರಿಸಿದ್ದರಿಂದ ಸ್ತ್ರೀ ಅದರಿಂದ ಹೊರತಾಗುವುದು ಅವಮಾನಕಾರಿಯಾಗುತ್ತಿತ್ತು.

ಲಕ್ಷ್ಮಮ್ಮನ ಗಂಡ ಏಕಸ್ತ್ರೀವ್ರತನಾಗಿರದೆ, ನೇರವಾಗಿ ಹೆಂಡತಿ ಬೇಡ ಎಂದು ಹೇಳದೆ, ಎಷ್ಟು ಅಸಡ್ಡೆ ತೋರಿಸಬಹುದೋ ಅಷ್ಟು ಅಸಡ್ಡೆಯಿಂದ ಅವಳನ್ನು ನೋಡುತ್ತ ಬಂದಿದ್ದ. ಆತ ಗಂಡನ

ಮನೆಯ ಸುಖವನ್ನೇನೋ ಕೊಡದೇ ಹೋದರೂ ಅವಳು ಅದೇ ಗಂಡನೊಂದಿಗೆ ಬದುಕಬೇಕಾದದ್ದು ಅನಿವಾರ್ಯವಾಗಿತ್ತು. ಈ ಮೂಲಕ ಆಕೆ ಗಂಡ ಹೇಗೇ ಇದ್ದರೂ ಅವನೊಂದಿಗೇ ಕೊನೆತನಕ ಬಾಳಬೇಕಾದ ಸತೀಧರ್ಮವನ್ನು ಮುಂದಿನ ಜನಾಂಗ ಅನುಸರಿಸುವಂತೆ ಹೇಳಿಕೊಡಲಾಗಿದೆ.

ಸ್ವತಃ ತಾನು ಮದುವೆಯಿಂದ ಕಷ್ಟ ಅನುಭವಿಸುತ್ತಿದ್ದರೂ ಬದುಕಿದ್ದ ಮಗಳಿಗೆ ಮದುವೆಗಾಗಿ ಸಿದ್ಧಪಡಿಸುತ್ತಿದ್ದ ರೀತಿ 'ಕಣ್ಣಿಲ್ಲದ ಹೆಂಗಸು ಎಲ್ಲರಂತೆ ಹೆಮ್ಮೆಯಿಂದ ನಡೆಯುವುದು ಕೂಡದು, ತಲೆತಗ್ಗಿಸಿಕೊಂಡು ನಡೆಯಬೇಕು. ಹೇಳಿದ ಮಾತು ಕೇಳಬೇಕು. ಹೆಂಗಸಿಗೆ ಎಂದಿದ್ದರೂ ಗಂಡ ದೇವರು. ಕುರುಡಿ ಬೇರೆ ಆಗಿಬಿಟ್ಟರೆ ಅವಳು ಅವನನ್ನು ಪರದೈವ ಎಂತಲೇ ಕಾಣಬೇಕು. ತಾನು ಮಾನವಾಗಿರುವುದಕ್ಕೆ ತನ್ನ ಗಂಡನನ್ನು ತಿಳಿಯುವ ಗುರುತು ಏನಾದರೂ ಒಂದನ್ನು ಇಟ್ಟುಕೊಳ್ಳಬೇಕು' ಎಂದು ತಾಯಿಯಾಗಿ ಬುದ್ಧಿ ಹೇಳುವುದು ಗಂಡನನ್ನು ಗೌರವಿಸುವ ರೀತಿಗೆ ಹಾಕಿಕೊಡುವ ಪಾಠ ಮತ್ತು ಅಂಥ ಪರಂಪರೆಯೊಂದು ಮುಂದುವರಿಯ ಬೇಕೆಂಬ ಕಾಳಜಿಯಿಂದಲೇ. ಗಂಡನೆಂಬ ವ್ಯಕ್ತಿಯ ಉನ್ನತೀಕರಣದ ಜೊತೆಗೆ ಶೀಲದ ಮೇಲ್ಮೆಯನ್ನು ಒಪ್ಪಿಕೊಳ್ಳುವಂತೆ ಪ್ರೇರಿಸುವ ಕೆಲಸವನ್ನೂ ಇಲ್ಲಿ ಮಾಸ್ತಿ ಅಚ್ಚುಕಟ್ಟಾಗಿ ನಡೆಸಿದ್ದಾರೆ.

ಬುದ್ಧಿ ಭ್ರಮಣೆಯಾದ ಮೇಲೆ ಆಕೆ ತನ್ನಷ್ಟಕ್ಕೇ 'ಆದರೆ ಏನೇ ತಾಯಿ, ಗಂಡನ ಗುರುತು ಹಿಡಿಯೋಕೆ ಮಾತ್ರ ಏನಾದರೂ ಒಂದು ನೆಪ್ಪು ಇಟ್ಟುಕೊಳ್ಳಬೇಕು. ನಿಮ್ಮ ತಂದೇನೇ ನಾನು ಗುರುತು ಹಿಡಿಯೋಕೆ ಹಾಗೆ ಮಾಡಿಕೊಂಡಿದ್ದೆ' ಎಂದು ತನ್ನ ಚರಿತ್ರೆಯನ್ನು ಮಗಳ ಮುಂದಿಡುವಂತೆ ಹೇಳಿಕೊಳ್ಳುವುದು ಕೂಡ ಸುಪ್ತವಾಗಿರುವ ಪತಿಭಕ್ತಿಯ ಆದರ್ಶವನ್ನೇ ವೈಭವೀಕರಿಸಿದ್ದಾಗಿದೆ. ಮತ್ತು ಗಂಡನ ಹೊರತಾಗಿ ಬೇರಾರಿಗೂ ಹೆಣ್ಣು ಅರ್ಪಿತವಾಗದ ಎಚ್ಚರಿಕೆಯನ್ನು ಕೂಡ ಇಲ್ಲಿ ಬೋಧಿಸಲಾಗುತ್ತದೆ. ಈ ಬೋಧನೆಗೆ ತಾಯಿಯನ್ನೇ ಆರಿಸಿಕೊಳ್ಳುವುದು ಅದನ್ನು ಸ್ವೀಕರಿಸುವುದಕ್ಕೆ ಬಳಸಿಕೊಳ್ಳುವ ಮೌಲ್ಯವಾಗುತ್ತದೆ. ಸಾಂಪ್ರದಾಯಿಕವಾದ ವೈವಾಹಿಕ ಬದುಕಿನ ಅನಿವಾರ್ಯತೆಯನ್ನು ವಿವೇಚನಾರಹಿತವಾಗಿ ಒಪ್ಪಿಕೊಂಡು ಪ್ರತಿಷ್ಠಾಪಿಸಿದ್ದಾಗಿದೆ. ಮತ್ತು ಅದನ್ನು ಶಿರಸಾ ವಹಿಸಿ ಪಾಲಿಸುವುದು ಅನಿವಾರ್ಯವಾಗಿದೆ ಎಂದು ನಂಬಿಸುವಂತೆ ಪ್ರೇರಣೆ ನೀಡಿದ್ದು ಸ್ಪಷ್ಟವಾಗುತ್ತದೆ.

ಆದ್ದರಿಂದಲೇ 'ಮದುವೆ ಆಗುವವರೆಗೆ ಹೇಗೋ ವೇಷ ಮಾಡಬೇಕು. ಆ ಮೇಲೆ ಕೈಹಿಡಿದ ಹೆಂಡತೀನ ಬಿಡುತಾರೆಯೇ? ಸರಿಯಾಗಿ ಬಾಳಿದರೆ ಸಂತೋಷ ಅನ್ನುವುದು ಬೇಡ ಎಂದರೆ ಒಂದು ಕಡೆ ಕೂರಿಸಿ ಅನ್ನ ಹಾಕುತ್ತಾರೆ. ದೇವರ ಇಚ್ಛೆ ಅನ್ನೋದು' ಎಂದು ನಿರ್ಧಾರಕ್ಕೆ ಬರುವಲ್ಲಿ ವ್ಯಕ್ತಿತ್ವ ಕಳಕೊಂಡ ಹೆಣ್ಣೊಬ್ಬಳ ಚಿತ್ರಣವಿದೆ. ಆ ಅನಿವಾರ್ಯ ಬಾಳನ್ನು ಬದುಕಬೇಕಾದ ಸಮಾಜದ ನಿರ್ಣಯ ಮುರಿಯಲಾಗದ ವಾಸ್ತವವನ್ನು ಆಕೆ ಸ್ವೀಕರಿಸಬೇಕಾಗಿ ಬಂದಿದೆ. ಈ

ವಾಸ್ತವತೆ ಅವಳ ವಿವೇಚನೆ ಹಾಗೂ ವ್ಯಕ್ತಿತ್ವವನ್ನುಕಸಿದುಕೊಂಡು ಬಿಟ್ಟಿದೆ. ನನ್ನ ಅತ್ತೆ ಮನೆಗೆ ಕಳುಹಿಸುವುದಕ್ಕೆ ನೀವೇಕೆ ದಿವಾಳಿಯಾಗಬೇಕು ಅಣ್ಣ. ದುಡ್ಡು ಕೊಡದೆ ಇದ್ದರೆ ಸೊಸೇನ ಒಲ್ಲದ ಜನಕ್ಕೆ ಎಷ್ಟು ದುಡ್ಡು ಕೊಟ್ಟರೆ ನಾನು ಬೇಕಾದೇನು. ಸುಮ್ಮನಿರು. ನಾನು ತಂಗಿಯಲ್ಲ, ತಮ್ಮ ಎಂತೆಣಿಸಿಕೋ, ನಾನು ಹುಟ್ಟಿದ ಮನೆಯಲ್ಲಿ ಇದ್ದುಕೊಳ್ಳುತ್ತೇನೆ ಎನ್ನುವ ಧೈರ್ಯ ಇದ್ದರೂ ಇಡೀ ವ್ಯವಸ್ಥೆಯನ್ನು ಸಮಾಜಕ್ಕೆ ತಡೆಯಾಗುವುದನ್ನು ಕೂಡ ಗ್ರಹಿಸಬೇಕಾಗುತ್ತದೆ. ಆದರೆ ಗಂಡನನ್ನು ಮರೆಯುವ ಧೈರ್ಯ ಪಡೆಯುವುದು ಅಶಕ್ಯವಾಗುತ್ತದೆ.

ಕುಮುದಿನಿ ಕೂಡ ವಿವಾಹದ ಕೆಲವೇ ದಿನಗಳಲ್ಲಿ ಪತಿ ನರಸಿಂಹ ಶರ್ಮ ತನ್ನನ್ನು ತೊರೆದು ಹೋದಂದಿನಿಂದಲೂ ಆಕೆ ಅವನ ನೆನಪಿನಲ್ಲಿಯೇ ಉಳಿದುಕೊಳ್ಳುತ್ತಾಳೆ. ಆಕೆ ಮಗಳನ್ನು ಮದುವೆ ಮಾಡಿಸಿದ್ದು ಕೂಡ ಇಲ್ಲಿ ಬರುವ ಮೊಮ್ಮಗುವಿನ ಸಂದರ್ಭದಿಂದ ಖಚಿತಪಡಿಸಿಕೊಳ್ಳಬಹುದು.[೧೯] ಸಂಸಾರದ ನೊಗದೊಂದಿಗೆ ಗಂಡನನ್ನೇ ನೆನಪಿನಲ್ಲಿಟ್ಟುಕೊಂಡು ಅನ್ಯರನ್ನು ಕನಸಿನಲ್ಲಿಯೂ ಎಣಿಸದ ಸಾಂಪ್ರದಾಯಕತೆಯನ್ನೇ ಇಲ್ಲಿ ಮಾನ್ಯ ಮಾಡಿಸುವ ಪ್ರಯತ್ನ ನಡೆಸಿದ್ದಾಳೆ. ಗಂಡನ ಒಳಿತನ್ನೇ ಕ್ಷಣಕ್ಷಣವೂ ಹಾರೈಸುವ ಅವರು ಗಂಡನನ್ನು ಕಂಡಾಗ ಸಂಭ್ರಮಿಸುವಲ್ಲಿ ಕೂಡ ಆ ಧನ್ಯತೆಯನ್ನು ಸಾಕ್ಷಾತ್ಕರಿಸುತ್ತಾರೆ. ಮತ್ತು ಅದು ಇತರರಲ್ಲೂ ನಡೆಯಬೇಕೆಂಬ ನೆಲೆಯಲ್ಲಿಯೇ ಪರಿಚಯಿಸುವುದೂ ಕೂಡಾ ಆಗಿದೆ. ಸಂಸಾರ ಕಟ್ಟಿಕೊಂಡ ಹೆಂಗಸರು ಅದರ ಭಾರವನ್ನು ತೊರೆದು ನಿರ್ಲಿಪ್ತರಾಗಿ ಉಳಿದು ಬಿಡುವುದು ಇಲ್ಲಿ ಚರ್ಚಿತಗೊಳ್ಳುವುದಿಲ್ಲ. ಅದನ್ನು ಪ್ರಶ್ನಿಸದೇ ಅವನನ್ನು ಆರಾಧಿಸಬೇಕಾದ ಸಂದರ್ಭದಲ್ಲಿದ್ದುಕೊಂಡೇ ಹೆಣ್ಣು ಅದನ್ನು ಅನುಭವಿಸಿಯೇ ಬಾಳಬೇಕಾಗಿದೆ. ಅದು ತನ್ನ ಪರಿಸರದ ಸತ್ಯವಾದುದರಿಂದಲೇ ಅದನ್ನೊಂದು ಮೌಲ್ಯವಾಗಿ ಆಕೆ ಸ್ವೀಕರಿಸಬೇಕಾಗುತ್ತದೆ. ಹಾಗಾಗಿಯೇ ವೇದಾವತಿ ತನ್ನ ಗಂಡ ಮರಳಿ ಬಂದಾಗ ನಿರ್ಲಿಪ್ತಳಾಗಿಯೇ ಉಳಿಯುತ್ತಾಳೆ.

---

೧೯ ಇದೇ ಸಂದರ್ಭದಲ್ಲಿಯೇ ಸಿದ್ಧಾರ್ಥ ಪತ್ನಿ ಯಶೋಧರೆಯನ್ನು ಮಗ ರಾಹುಲನನ್ನು ತೊರೆದು ಹೋಗಿ ತಪಸ್ಸಿಗೆ ಕುಳಿತು ಬುದ್ಧನಾದ ಕತೆಯನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ನರಸಿಂಹ ಶರ್ಮನೂ ವಿವಾಹಿತ ಪತ್ನಿಹಾಗೂ ಮಗುವನ್ನು ಯಾವುದೇ ಚಿಂತೆ ಇಲ್ಲದೇ ತೊರೆದು ಬಂದುದು ಬುದ್ಧನ ಬದುಕಿಗೆ ಹೆಚ್ಚು ಹತ್ತಿರವಾದದ್ದಾಗಿದೆ. ಆದರೆ ಇಲ್ಲಿ ನರಸಿಂಹ ಶಾಸ್ತ್ರಿ ತಾನು ಸಂಸಾರ ತೊರೆದು ಬಂದ ಸಂದರ್ಭ ಹಾಗೂ ಸಿದ್ಧಾರ್ಥ ಬಂದ ಸಂದರ್ಭಗಳನ್ನು ಇಲ್ಲಿ ಸಮೀಕರಿಸಿ ನೋಡಿದಾಗಲೂ ಯಶೋಧರೆ ಹಾಗೂ ವೇದಾವತಿ ಒಂದೇ ಸ್ತರದಲ್ಲಿ ನಿಲ್ಲುವವರಾಗುತ್ತಾರೆ. ಅವರ ತಾಟಸ್ಥ್ಯ ಧೋರಣೆಯಿಂದಾಗಿ ಗಂಡಬಿಟ್ಟು ಬಂದಾಗಲೂ ನಿರ್ಲಿಪ್ತರಾಗುವ ಅವರು ಅವರದೇ ನೆನಪಿನಲ್ಲಿ ಮಕ್ಕಳನ್ನು ಸಲಹುವಲ್ಲಿ ಸಂತೃಪ್ತಿ ಹಾಗೂ ಧನ್ಯತೆ ಕಾಣುವ ಪರಿಪಾಠ ಪಾಲಿಸುವವರಾಗಿ ಕಾಣುತ್ತಾರೆ.

ಈ ಪ್ರತಿಕ್ರಿಯೆ ತಿರಸ್ಕಾರದ್ದಲ್ಲ, 'ಹೆಸರು ಹೇಳಿದರೇ? ಸನ್ಯಾಸಿ ಆಗಿದ್ದಾರೆಯೇ? ಮನೆಗೆ ಬರಬಾರದಲ್ಲ. ನಾನು ನೋಡುವುದು ಅವರಿಗೆ ಅನಿಷ್ಟ . ನೀನು ಹೋಗಿ ವಿಚಾರಿಸಿಕೋ. ಸುಖವಾಗಿ ಬಂದರಲ್ಲ. ಅಷ್ಟೇ ಸಂತೋಷ' ಎಂದು ಪ್ರತಿಕ್ರಿಯಿಸುವ ರೀತಿ ಪತಿವ್ರತೆಗೆ ಹೇಳಿ ಮಾಡಿಸಿದ್ದಾಗಿದೆ. ಆದರೆ ಗಂಡನ ಉಳಿವು, ಒಳಿತನ್ನು ಹಾರೈಸುವ ಸತೀತ್ವ ಸನ್ಯಾಸ ರೂಪದಲ್ಲಾದರೂ ಸುಖವಾಗಿರಲಿ ಎಂದು ಹಾರೈಸುತ್ತದೆ. ತನ್ನ ಕಷ್ಟಸುಖ ಏನು ಎಂಬುದು ಇಲ್ಲಿ ಅಮುಖ್ಯವಾಗಿ ಅವನ ಸುಖದಲ್ಲಿ ಧನ್ಯತೆ ಅನುಭವಿಸುವುದು ಪರಂಪರೆ ಹೆಣ್ಣಿಗೆ ಹಾಕಿಕೊಟ್ಟ ಮೌಲ್ಯಯುತ ಹಾದಿಯಾಗಿದೆ. ಆದುದರಿಂದಲೇ ಆಕೆ ಅದನ್ನು ಪಾಲಿಸುವುದು ಅನಿವಾರ್ಯ ಎಂದು ನಂಬಿದ್ದಾಳೆ. ಇತರ ಸ್ತ್ರೀಯರೂ ಹಾಗೇ ಬದುಕಬೇಕೆಂಬುದನ್ನು ತಾನೂ ಅಂತೆಯೇ ಬಾಳಿ ತೋರಿಸುವ ಮೂಲಕ ಪಾಠ ಹೇಳಿದ್ದಾಳೆ. 'ಜೊತೆಗೆ ಆಕೆ ತಾವು ನಮಗಾಗಿ ಚಿಂತೆ ಮಾಡಬೇಡಿ. ನಾರಾಯಣ, ಗೋವಿಂದಾ ಅಂತ ಇರಿ. ನನ್ನನ್ನೇ ಮಗನೆಂದು ಎಣಿಸಿಕೊಳ್ಳಿ. ನಿಮಗೆ ಆಗಬೇಕಾದ ಕರ್ಮವೆಲ್ಲ ನಾನು ಮಾಡಿಸುತ್ತೇನೆ. ನಾನು ಒಂಟಿಯಾಗುತ್ತೇನೆ ಅಂತ ಅಲ್ಲವೇ? ನಾನು ಕುಮುದಾ ಅವರ ಮನೆಗೆ ಹೋದರೂ ಹೋದೆ. ನನ್ನ ಮಾತೇನು?' ಎಂದು ತೋರಿಸುವ ಧೈರ್ಯ ಎದೆಗಾರಿಕೆಯ ಮಾತುಗಳು ಅವಳ ಧೀಮಂತ ವ್ಯಕ್ತಿತ್ವದ ಆಲೋಚನೆಗಳನ್ನು ಮುಂದಿರಿಸುತ್ತವೆ. ಸ್ವತಂತ್ರವಾಗಿ ಬದುಕುವ ಧೈರ್ಯ ಬಂದ ಆಶಾಕಿರಣವಾಗಿ ಆಕೆ ಗೋಚರಿಸುತ್ತಾಳೆ. ಆದರೆ ಅದೇ ಧೈರ್ಯವನ್ನು ಮಟ್ಟಹಾಕುವ ಗಂಡು, 'ನೀನು ಹುಟ್ಟಿನಲ್ಲಿ ಹೆಂಗಸು ಹೊರತು ಗುಣದಲ್ಲೆಲ್ಲ ಗಂಡಸರಂತೆ ಇದೀಯೆ. ಮನಗೆ ಒಳ್ಳೆ ಹೆಸರು ತಂದೆ. ನೀನು ದೀರ್ಘ ಸುಮಂಗಲಿಯಾಗಿರು. ಮುಂದಿನ ಜನ್ಮದಲ್ಲಿ ದೇವರು ನಿನಗೆ ಈ ಪಾತಿವ್ರತ್ಯಕ್ಕೆ ಸರಿಯಾದ ಪತಿ ಸಹವಾಸವನ್ನು ಕೊಡುತ್ತಾನೆ' ಎಂದು ಹೇಳಿರುವಲ್ಲಿ ಸ್ತ್ರೀಯನ್ನು ಸುಮಂಗಲೀತ್ವದ ನೆರಳಿನಡಿಯಲ್ಲಿಯೇ ಬಂಧಿಸುವುದನ್ನು ಕಾಣಬಹುದು. ಅವಳು ಗಂಡನೊಂದಿಗಿನ ಪೂರ್ಣಬಾಳನ್ನು ಕಾಣಬೇಕೆಂಬ ಚೌಕಟ್ಟಿನ ಬದುಕನ್ನು ಮೌಲ್ಯಯುತವಾದದ್ದೆಂದು ಅನುಭವಿಸಿ ಧನ್ಯತೆಯನ್ನು ಕಾಣಬೇಕು. ಅದೇ ಅವಳಿಗೆ ಶ್ರೀರಕ್ಷೆ, ಬದುಕಿನ ಸಾರ್ಥಕ್ಯವೆಂಬುದನ್ನು ಮರೆಯದಂತೆ ನೆನಪಿಸಿದ್ದಾಗಿದೆ. ಈ ಪತಿವ್ರತಾ ಧರ್ಮದ ನಿಷ್ಠೆಯೇ ಬದುಕಿನ ಸುಖ, ಮುಂದಿನ ಜನ್ಮದಲ್ಲಿ ಅದರ ಫಲವಾಗಿ ದೊರೆಯುವ ಉತ್ತಮ ಬದುಕಿನ ಕಲ್ಪನೆಯನ್ನು ಪುನರ್ ಸ್ಥಾಪಿಸುವ ಕರ್ತವ್ಯದಲ್ಲಿ ವೇದಾವತಿ ಗಂಡನೊಂದಿಗೇ ಇರುವುದಕ್ಕಾಗಿ ಭಿಕ್ಷುಣಿಯಾಗಿ ಸೇರಿಸಿಕೊಳ್ಳುವುದಾಗುತ್ತದೆ. ಬೌದ್ಧಭಿಕ್ಷುವಿನೊಂದಿಗೆ ಭಿಕ್ಷುಣಿಯಾಗಿ ಆಕೆ ಇರುವುದಕ್ಕೆ ಒಪ್ಪಿದ್ದು, ವೈದಿಕ ಪರಂಪರೆಯ ಗಂಡ - ಹೆಂಡತಿ ಬಿಟ್ಟಿರಲಾರದ ಹಾಗೂ ಬಿಟ್ಟಿರಬಾರದ ತತ್ವವನ್ನು ಸಾರುವುದಕ್ಕಾಗಿಯೇ ಆಗಿದೆ. ಮಗಳು - ಅಳಿಯ, ಶ್ರವಣ - ಭಿಕ್ಷುಣಿ ಕಲ್ಪನೆ ಗಂಡನೊಂದಿಗೇನೇ ಹೆಂಡತಿಯಾದವಳು ಬಾಳುವುದು ಮಾತ್ರವಲ್ಲ ಗಂಡ ಹಿಡಿದ, ಅನುಸರಿಸಿದ ದಾರಿಯಲ್ಲಿಯೇ ಅವಳು ಬಾಳಬೇಕಾದ ಸತ್ಯವನ್ನು ಕೂಡ ಮುಂದಿಡುವುದಾಗಿದೆ.

ಧೃತರಾಷ್ಟ್ರ ಕುರುಡನಾಗಿದ್ದಾಗಿನಿಂದ ಗಾಂಧಾರಿಯೂ ಗಂಡನಿಗಿಲ್ಲದ ಸುಖ ತನಗೆ ಬೇಡವೆಂದು ಕಣ್ಣಿಗೆ ಬಟ್ಟೆಕಟ್ಟಿದ ತೆರನಲ್ಲಿಯೇ ಗಂಡನ ಸನ್ಯಾಸತ್ವದ ಜೀವನಕ್ಕೆ ಪೂರಕವೆಂಬಂತೆ ಅವಳೂ ಸನ್ಯಾಸಿಯಾಗುತ್ತಾಳೆ. ಮಾತ್ರವಲ್ಲದೆ ಗಂಡನಿಲ್ಲದೆ ಸಂಸಾರದ ಹೆಸರಿನಲ್ಲಿ ಆಕೆಗಿದ್ದುದು ಇದೇ ಸನ್ಯಾಸತ್ವದ ಬದುಕೇ ಆಗಿತ್ತು. ಅಗಿನ ವೇಷ ಬೇರೆ. ಈಗಿನ ವೇಷ ಬೇರೆ ಅಷ್ಟೇ. ಹಾಗಿದ್ದ ಮೇಲೆ ಗಂಡನ ಜೊತೆಗಿದ್ದೇ ಆ. ಸನ್ಯಾಸತ್ವ ಅನುಭವಿಸುವ ರೀತಿಯನ್ನು ಒಪ್ಪಿಕೊಳ್ಳಲಾಗಿದೆ. ಗಂಡ ಹೆಂಡತಿ ಸಂಬಂಧಕ್ಕಿಂತ ಹೆಚ್ಚಾಗಿ ಗಂಡನಿಂದ ಹೊರತಾಗಿ ಹೆಣ್ಣುಬಾಳಬಾರದ ಸಂದೇಶವನ್ನು ಕೊಡಲಾಗಿದೆ. ಪುರುಷ ಪ್ರಧಾನ ಲೋಕದೊಳಗೆ ಅವನು ಇದ್ದು ಮಾಡಿದ ಆಣತಿಯನ್ನು ಹೆಂಡತಿಯಾದವಳು ಮೀರಬಾರದ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಹೋಗಬೇಕಾದದ್ದನ್ನು ಈ ಮೂಲಕ ಹೇಳಲಾಗಿದೆ. ಗಂಡ ಹೆಂಡತಿಯರು ಪರಸ್ಪರ ಅರ್ಥ ಮಾಡಿಕೊಳ್ಳದೇ ಇರುವುದರಿಂದ ಕೂಡ ಸಂಸಾರವೊಂದು ಒಡೆಯಬಹುದಾದ ಎಚ್ಚರಿಕೆಯನ್ನು ಇಲ್ಲಿ ಸ್ತ್ರೀಯರಿಗೆ ಕೊಡಲಾಗಿದೆ.

'ಸನ್ಯಾಸವಲ್ಲದ ಸನ್ಯಾಸ' ಕತೆಯಲ್ಲಿ ಒಂದು ರೀತಿಯಲ್ಲಿ ಬೆಂಡೆಕಾಯಿ ಹುಳಿ ಮಾಡಿ ಹಾಕದ ಹೆಂಡತಿಯ ವರ್ತನೆಗೆ ಸರಿಯಾದ ಕಾರಣ ಕೇಳುವ ತಾಳ್ಮೆಯನ್ನು ಕಳೆದುಕೊಂಡ ನರಸಿಂಹಯ್ಯ ಸನ್ಯಾಸತ್ವ ಸ್ವೀಕರಿಸುವ ನಿರ್ಧಾರಕ್ಕೆ ಬರುತ್ತಾನೆ. ಇದು ಅಧಿಕಾರತ್ವದ ಪ್ರತಿಷ್ಠಾಪಿಸುವಿಕೆ ಮತ್ತು ಮಾತು ಕೇಳದ ಅಧೀನ ವ್ಯಕ್ತಿತ್ವಕ್ಕೆ ಕೊಡುವ ಉತ್ತರವಾಗಿ ಬಿಡುತ್ತದೆ. ಗಂಡನನ್ನೇ ನಂಬಿದ ಹೆಣ್ಣಿನ ವ್ಯಕ್ತಿತ್ವ ತನಗೆ ಬೇಕಾದಂತೆ ಇರುವ ವ್ಯವಸ್ಥೆಗೊಳಿಸುವುದಾಗಿದೆ. ಗಂಡನ ಶಾಲೆ ತಡವಾಗುವುದನ್ನು ತಪ್ಪಿಸುವುದಕ್ಕೆ ಬೆಂಡೆಕಾಯಿ ಹುಳಿ ಆಗ ಮಾಡದಿರಲು ಆಕೆ ತೆಗೆದುಕೊಂಡ ತೀರ್ಮಾನ ಇಲ್ಲಿ ಅವಳಿಗೇ ತಿರುಗೇಟಾಗುತ್ತದೆ. ಅವನೇ ತಡವಾದರೆ ತೊಂದರೆಯಿಲ್ಲ ಎಂದು ಹೇಳಿಬಿಟ್ಟಿದ್ದರೆ ನಡೆಯಬಹುದಾಗಿದ್ದ ಅಚಾತುರ್ಯ ತಪ್ಪಿಸಬಹುದಾಗಿತ್ತು. ಆದರೆ ಅದು ಇಲ್ಲಿ ಸಂಭವಿಸುವುದಿಲ್ಲ. ಸನ್ಯಾಸತ್ವ ಸ್ವೀಕರಿಸಿಬಿಡುವ ಗಂಡ ಭಿಕ್ಷೆಗೆ ಬಂದ ಸಂದರ್ಭ ತನ್ನ ಅತ್ತೆಯ ನೆರವಿನೊಂದಿಗೆ ಮನೆಗೆ ಸ್ವಾಗತಿಸಿ ಬೆಂಡೆಕಾಯಿಯ ಹುಳಿ ಮಾಡಿ ಬಡಿಸುವುದು, ಗಂಡನ ಕಾಲನ್ನು ಪಟ್ಟುಬಿಡದೆ ಹಿಡಿದು 'ನನ್ನನ್ನು ಬಿಟ್ಟು ಹೋದ ದೇವರು ತಿರುಗಿ ಬಂದಿದೀರಿ, ನೀವು ತಿರುಗಿ ನನ್ನನ್ನು ಬಿಡೋದು ಬೇಡ ನಾನು ನಿಮ್ಮನ್ನು ಬಿಡೋದಿಲ್ಲ' ಎಂದು ಗೋಗರೆಯುವುದು ಅಧೀನತೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವಂತೆ ಮಾಡಿದ್ದಾಗುತ್ತದೆ. ಹೆಣ್ಣು ಗಂಡಿಗೆ ತಗ್ಗಬೇಕಾದ, ತನ್ನ ಬದುಕಿನ ನೆಮ್ಮದಿಯನ್ನು ಅಲ್ಲಿಯೇ ಕಾಣುವಂತೆ ವ್ಯವಸ್ಥೆಗೊಳಿಸಿದ ಹೆಣ್ಣು ಅವರನ್ನು ಮೀರಿ ಹೋಗದಂತೆಯೇ ಸಿದ್ಧಗೊಳಿಸುತ್ತದೆ. ಮತ್ತು ಅದನ್ನು ಕಾಯ್ದುಕೊಳ್ಳುವಂತೆ ಹಿರಿಯಳಾದ ಹಿರಿಯತ್ತೆ ಬರುತ್ತಾಳೆ. 'ತಿಳಿಯದ ಹುಡುಗಿ. ಆ ಹೊತ್ತು ಏನೋ ಅಜಾಗ್ರತೆಯಲ್ಲಿ ನಿಮ್ಮ ಇಷ್ಟದಂತೆ ನಡೆಯಲಿಲ್ಲ. ಅದಕ್ಕೆ ಅವಳ ಬದುಕನ್ನೇ ಹಾಳುಮಾಡಿ ಸನ್ಯಾಸ ತಗೊಳ್ಳೋದೇ

ಸ್ವಾಮಿಗಳೇ' 'ನೀವು ಏನು ಸುಖಪಟ್ಟಿರೋ ಕಾಣೆ. ಸನ್ಯಾಸ ಒಂದು ತೀರು ಚೆನ್ನ. ದೊಡ್ಡೋರು ಚಿಕ್ಕೋರು ಎನ್ನದೆ ಜನ ಬಂದು ನಮಸ್ಕಾರ ಮಾಡುತ್ತಾರೆ. ಇರುತ್ತಾ ಮನುಷ್ಯ ಊಟಕ್ಕೆ ಮನೆಯಿಂದ ಮನೆಗೆ ಹೋಗಬೇಕಲ್ಲ. ಇದು ಚೆನ್ನವೇ? ನಮ್ಮ ಮನೆ ನನ್ನ ಹೆಂಡತಿ ಅಂತ ಬಾಳೋದಕ್ಕೆ ಸಮ ಇನ್ನು ಬಾಳುವೆಯುಂಟೇ? ದೊಡ್ಡ ಮನಸ್ಸು ಮಾಡಿ. ಹೆಂಡತೀನ ಒಪ್ಪಿಕೊಳ್ಳಿ. ಜೊತೆಯಾಗಿ ಬಾಳಿ. ಸನ್ಯಾಸ ಸಾಕು' ಎಂದು ಹಿತ ನುಡಿಯುವ ಮೂಲಕ ಸಂಸಾರ ಒಂದಾಗುವಂತೆ ಮಾಡುವ ಕಾಳಜಿಯ ಹಿಂದೆ ಹೆಂಡತಿಗೆ ಗಂಡನ ಅನಿವಾರ್ಯತೆಯನ್ನು ಸೂಚಿಸಲಾಗಿದೆ. ಹೆಂಡತಿಯ ಇರವು ಹಾಗೂ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಸನ್ಯಾಸಿ 'ದೇವರ ಇಚ್ಛೆ' ಎಂದು ಸನ್ಯಾಸ ತೊರೆಯುವುದು ದಾಂಪತ್ಯವನ್ನು ಒಪ್ಪಿಕೊಳ್ಳುವುದೇ ಆಗಿರುತ್ತದೆ. ಪತಿವ್ರತಾ ಧರ್ಮದ ಇನ್ನೊಂದು ಮಗ್ಗುಲಾಗಿಯೇ ಹೆಂಡತಿ ಗಂಡನೊಂದಿಗೆ ಸನ್ಯಾಸತ್ವ ಸ್ವೀಕರಿಸುವುದಕ್ಕೆ ಮುಂದಾಗುವುದರಲ್ಲಿಹೆಣ್ಣನ್ನು ಅಧೀನ ಸಂಸ್ಕೃತಿಯಲ್ಲೇ ಇರಗೊಳಿಸುವಂತೆ ಎಚ್ಚರ ವಹಿಸಲಾಗಿದೆ. ಸ್ತ್ರೀಯಾದವಳು ಗಂಡನನ್ನು ಸಂಸಾರವನ್ನು ಮುನ್ನಡೆಸಿಕೊಂಡು ಹೋಗುವ ದಾರಿದೀಪ ಎಂಬರ್ಥದಲ್ಲಿಯೇ ದಾಖಲಾಗಿದ್ದಾಳೆ.

'ರಂಗಸ್ವಾಮಿಯ ಅವಿವೇಕ' ಕತೆಯ ಸೀತೆ ಹಾಗೂ ಇಂದಿರೆ ಇಬ್ಬರೂ ಪಾತಿವ್ರತ್ಯದ ಎರಡು ವಿಭಿನ್ನ ಮುಖಗಳನ್ನು ಪರಿಚಯಿಸುವವರಾಗುತ್ತಾರೆ. ಸೀತೆ ಗಂಡನಾದವನೊಂದಿಗೆ ಹೆಂಡತಿಯಾದವಳು ಬಾಳಬೇಕಾದನಿಷ್ಠೆಯನ್ನು ಒಪ್ಪಿಕೊಂಡು ಪ್ರೀತಿಯಿಂದ ಬದುಕುವವಳಾಗುತ್ತಾಳೆ. ಒಂದೊಂದು ಸಲ ನನಗೆ ಅಷ್ಟು ಬುದ್ಧಿ ಇಲ್ಲವಲ್ಲ ಅನ್ನಿಸುತ್ತದೆ. ಏನು ಒಳ್ಳೆಯ ಹೆಂಡತಿ ಹೇಳಿ. ನಿಮ್ಮ ಮಾತಿಗೆ ಸರಿಯಾಗಿ ಮಾತನಾಡಲಾರೆ. ನಿಮಗೆ ಬೇಕಾದ ಸುಖವನ್ನೂ ಕೊಡಲಾರೆ. ನಿಮ್ಮ ಬುದ್ಧಿಗೆ ಸರಿಯಾಗಿ ನನಗೆ ಬುದ್ಧಿ ಇಲ್ಲ. ನಿಮ್ಮ ಹೆಂಡತಿ ಅನ್ನುವುದಕ್ಕೋಸ್ಕರ ನೀವು ಮುದ್ದಾಡಿದರೆ ಆಡಿಕೊಳ್ಳಬಹುದು. ಅಷ್ಟೇ ಹೊರತು ಇನ್ನೇನೂ ಇಲ್ಲವಲ್ಲ. ಇಂದಿರಾದೇವಿಯಂತೆ ಬುದ್ಧಿವಂತಳಾಗಿದ್ದರೆ ನಿಮಗೆ ತಕ್ಕವಳಾಗಿರುತ್ತಿದ್ದೆ. ಸರಿಯಾದ ಹೆಂಡತಿಯಾಗಿರುತ್ತಿದ್ದೆ ಎಂದು ಇಂದಿರೆಯನ್ನೇ ಗುಣಗಾನ ಮಾಡಿ ತನ್ನನ್ನು ತಾನು ಕುಬ್ಜಳನ್ನಾಗಿ ಪರಿಚಯಿಸಿಕೊಳ್ಳುತ್ತಾಳೆ. ಈ ಮೂಲಕ ಗಂಡನಿಗೇ ಬದ್ಧಳಾಗಿ ಇದ್ದು ಇತರರೂ ಅಂತೆಯೇ ನಿಷ್ಠೆಯಿಂದ ಇರಬೇಕೆಂಬುದನ್ನೇ ತೋರಿಸಿಕೊಡುತ್ತಾಳೆ. ಅವನಿಗೆ ಖುಷಿ ಕೊಡುವಂತೆ ಬಾಳಬೇಕಾದ ರೀತಿಗೆ ತನ್ನನ್ನು ಅರ್ಪಿಸಿಕೊಂಡು ಸತಿ ಸಾಧ್ವೀಮಣಿಯಾಗುತ್ತಾಳೆ.

ಅದೇ ಸೀತೆ ಸ್ನೇಹಿತೆ ಇಂದಿರಾಳ ಬಗ್ಗೆ ಕೊಡುವ ಪರಿಚಯದ ವರ್ಣನೆ 'ಇಂದಿರಾದೇವಿ ಯ ಬುದ್ಧಿಯನ್ನು ನೋಡಿದರೆ ನೀವು ಏನು ಹೇಳುವಿರೋ ಅವಳಿಗಿರುವಷ್ಟು ಬುದ್ಧಿ ನನಗೆ ಇದ್ದಿದ್ದರೆ ನಿಮಗೆ ಒಳ್ಳೆಯ ಹೆಂಡತಿಯಾಗಿರುತ್ತಿದ್ದೆನೆಂದು ಒಂದೊಂದು ಸಲ ಎಂದುಕೊಳ್ಳುತ್ತೇನೆ' 'ಜಡೆಹಾಕುವುದನ್ನು ಹೇಳಿಕೊಟ್ಟಳು. ಕಸೂತಿ ಹೇಳಿಕೊಡುತ್ತಿದ್ದಾಳೆ. ರಂಗವಲ್ಲಿ ಹಚ್ಚುವುದನ್ನು

ಹೇಳಿಕೊಡುತ್ತಿದ್ದಾಳೆ' ಎಂದು ವಿವರಿಸಿರುವಲ್ಲಿ ಆತ ಇಂದಿರಾದೇವಿಯ ಬುದ್ಧಿವಂತಿಕೆಯನ್ನು ಕಲ್ಪಿಸಿಕೊಳ್ಳುತ್ತಾನೆ. ತನ್ನ ಒಳಗೆ ಮಿಡಿದ ಕಾಮದ ಚಪಲತೆಗೆ ಅವಳನ್ನು ಇಂಚುಇಂಚಾಗಿ ಒಳಗಾಗಿಸಿಕೊಳ್ಳುವ ಆತ ಅಂದುಕೊಳ್ಳುವುದು ಆಕೆಗೆ ತನ್ನ ಮೇಲೆ ಒಲವಿರಬಹುದು ಎಂದು. ಹಂತಹಂತವಾಗಿ ಆಕೆಯೆಡೆಗೆ ವಾಲಿದ ರಂಗಸ್ವಾಮಿ ಅವಳ ಶರೀರದ ಆಯಾಮಗಳ ಅಂದಚೆಂದದ ನಡುವೆ ಕೂಡ ಮೈಮರೆಯುತ್ತಾನೆ, ಅವಳನ್ನು ಮನದಲ್ಲೇ ಆಸ್ವಾದಿಸ ತೊಡಗುತ್ತಾನೆ. ಅವಳು ಮತ್ತು ತನ್ನ ಬಗ್ಗೆ ಆಡಿಕೊಳ್ಳುವ ಮಾತುಗಳನ್ನು ಹೆಂಡತಿಯ ಮೂಲಕ ಕೇಳಿ ತಿಳಿದುಕೊಳ್ಳುತ್ತಾನೆ. ಇದರಿಂದಾಗಿ ಇಂದಿರಾಳಿಗೆ ತನ್ನ ಮೇಲೆ ಬಯಕೆ ಇದೆ ಎಂದು ಭ್ರಮಿಸುತ್ತಾನೆ.

ಈ ಭ್ರಮೆ ಇಂದಿರೆಯ ಚುರುಕಿನ ವ್ಯಕ್ತಿತ್ವದ ಮುಂದೆ ಆಕೆಯ ರಸಿಕನಲ್ಲದ ಮುದಿಯಾದ ಗಂಡನಿಗೆ ಅವಳು ಸರಿಸಮವಲ್ಲ ಎಂದೇ ವಾದಿಸುತ್ತದೆ. ಮತ್ತು ಆ ವ್ಯಕ್ತಿತ್ವಕ್ಕೆ ತನ್ನ ದೇಹ ತಣಿವನ್ನು ನೀಡುತ್ತದೆ ಎಂದು ಭ್ರಮಿಸುತ್ತದೆ. ಹೆಂಡತಿಯ ಪ್ರೀತಿಯನ್ನು ಏನೆಂದು ಅರಿಯದೇ ಹೋಗಿರುವ ಆತ ಆಕೆಯಲ್ಲಿ ರಸಿಕತೆಯ ಕೊರತೆಯನ್ನು ಕಾಣುವುದರಿಂದಲೇ ರಂಗಸ್ವಾಮಿಯ ಮನಸ್ಸು ಇಂದಿರಾಳನ್ನು ಸೇರುವುದಕ್ಕೆ ಹಾತೊರೆಯುವುದೂ ಆಗುತ್ತದೆ. ಆದರೆ ಈ ಹಾತೊರೆಯುವಿಕೆಗೆ ಆಕೆ ಕೊಡುವ ಪ್ರತಿಕ್ರಿಯೆ ಭಾರತೀಯ ಸನಾತನ ಪರಂಪರೆಯ ಪತಿ ಮೌಲ್ಯದ ಒಂದು ಮಗ್ಗುಲನ್ನು ಪರಿಚಯಿಸುತ್ತದೆ. ಪತಿವ್ರತಾ ಧರ್ಮ ಎಂದರೇನು ಎನ್ನುವುದನ್ನು ಗಂಡನಿಗೆ ತಿಳಿಸುವ ನಿಟ್ಟಿನಲ್ಲಿ ಇಂದಿರಾ ಇಲ್ಲಿ ಕರ್ತವ್ಯ ನಿರ್ವಹಿಸುತ್ತಾಳೆ. ಅದನ್ನು ಕಲಿಸುವ ಶಿಕ್ಷಕಿಯಾಗಿ ಕೆಲಸ ಮಾಡುತ್ತಾಳೆ. ತನ್ನ ಅಚಲ ನಿರ್ಧಾರ ಹಾಗೂ ತೆಗೆದುಕೊಳ್ಳುವ ತೀರ್ಮಾನದಿಂದ ಪತಿನಿಷ್ಠೆ ಎಂದರೇನು? ಅದರ ಮೌಲ್ಯವೇನು ಎಂಬುದನ್ನು ಅವಳು ಖಚಿತಪಡಿಸುತ್ತಾಳೆ. ತನ್ನತನ, ತನ್ನ ಇಷ್ಟ ಗಳ ನಡುವೆಯೇ ಬದುಕುತ್ತಿರುವ ಇಂದಿರಾಳು ರಂಗಸ್ವಾಮಿಯ ಮುಖಕ್ಕೆ ಮುಖ ಕೊಡದೆ, ಇದೇಕೆ ಇವನು ಹೀಗೆ ನೋಡುತ್ತಾನೆ? ಎಂದು ಯೋಚಿಸಿ ಅಸಮಾಧಾನ ವ್ಯಕ್ತಪಡಿಸುವುದು, ಆಕೆಯ ಅಂಗಾಂಗಗಳ ಸೌಂದರ್ಯ ಸವಿಯುತ್ತ ಹಿಡಿದೊಯ್ಯಲು ಹೋಗುವ ರಂಗಸ್ವಾಮಿಯ ಅನಿಯಂತ್ರಿತ ಕಾಮದಾಹಕ್ಕೆ ಕನ್ನಡಿಯಾಗುತ್ತದ. ಆದರೆ ಆಕೆ ತನ್ನ ಹತ್ತಿರ ಹತ್ತಿರ ಬರುತ್ತಿದ್ದಂತೆಯೇ ಎಡಗೈಯಿಂದ ತನ್ನ ಸೀರೆಯನ್ನು ಒತ್ತಿ ಹಿಡಿದುಕೊಂಡು ಗೋಡೆಯ ಬಳಿಗೆ ಸರಿದು, ಬಲಕೈಯ್ಯನ್ನು ಅಡ್ಡ ಹಿಡಿದು, ಹುಬ್ಬನ್ನು ಗಂಟಿಕ್ಕಿ, ಕೋಪಗೊಂಡ ಸಿಂಹಿಣಿಯಂತೆ ಇದೇನು ಈ ಹುಚ್ಚು ಎನ್ನುತ್ತ 'ಮುನಿಸ್ವಾಮಿ, ಮುನಿಸಾಮಿ , ಇವರು ಯಜಮಾನರನ್ನು ಕೇಳುವುದಕ್ಕೆ ಬಂದಿದ್ದಾರೆ. ಇಲ್ಲವೆಂದು ಹೇಳಪ್ಪಾ' ಎಂದು ಕೂಗುವುದರಲ್ಲಿಯೇ ಇಡೀ ಭಾರತೀಯ ಸತೀತ್ವದ ಮೌಲ್ಯವನ್ನು ಬಾಳಿಸುವ ನಿಟ್ಟಿನಲ್ಲಿ ತೊಡಗಿಕೊಂಡದ್ದು ಖಚಿತವಾಗುತ್ತದೆ. ಇದು ಆ ಗಂಡಸಿನ ದುರ್ವರ್ತನೆಗೆ ಕೊಡಬೇಕಾದ ಸಂದೇಶವಾಗಿದೆ. ಹೆಣ್ಣಿನ ಸಹಜ ಸ್ವಭಾವವನ್ನು ಕೂಡ ಸಹಜವಾಗಿ ಸ್ವೀಕರಿಸದ ಈ ಗಂಡು ಪ್ರವೃತ್ತಿಗೆ ಇಂದಿರಾದೇವಿ ಅವಮಾನಕರವಾದಂಥ ಪ್ರತಿಕ್ರಿಯೆ ನೀಡುವುದು ಅವನ ಪತ್ನಿಯ

ಸಾಧ್ವೀತನವನ್ನು ನೆನಪಿಸುವುದೂ ಆಗುತ್ತದೆ. ಮತ್ತು ಅಂಥ ಪತಿವ್ರತಾ ಧರ್ಮ ಅಂದರೇನು ಎಂಬುದನ್ನು ಕೂಡ ಆ ಮೂಲಕ ಮನನ ಮಾಡಿಸುತ್ತಾಳೆ. ಇಲ್ಲಿ ಆಕೆ ಪತಿವ್ರತಾ ಮೌಲ್ಯ ಪ್ರತಿಷ್ಠಾಪಿಸುವ ಮೂಲಕ ಅದರ ಉಳಿವಿಗೆ ಪ್ರೇರಣೆ ನೀಡುತ್ತಾಳೆ. ಅವನ ಅವಿವೇಕವನ್ನು ತಿದ್ದುವ ಮೂಲಕ ಸಂಸಾರವನ್ನು ಸರಿಪಡಿಸುವಂತೆ ಮಾಡುತ್ತಾಳೆ.

ಸಂಚಿನಿಂದ ತನ್ನ ದೇಹ ಸುಖ ಬಯಸಿದ ಸನ್ಯಾಸಿಯ ಕಪಟತನಕ್ಕೆ ವಿರುದ್ಧವಾಗಿ ನಡೆಯುವ, ತನ್ನ ಶೀಲ ಕಾಯ್ದುಕೊಳ್ಳುವ ಪತಿವ್ರತೆಯಾಗಿ ‘ಪುತ್ರಕಾಮೇಷ್ಟಿ’ ಕತೆಯ ಸೀತೆ ಕಾಣಿಸಿಕೊಳ್ಳುತ್ತಾಳೆ. ಮಕ್ಕಳಾಗುವ ನೆಪದಲ್ಲಿ ಹೆಣ್ಣಿನ ದೇಹ ಸುಖ ಪಡೆಯಬಯಸುವ ಕಪಟ ಸನ್ಯಾಸಿಗಳಿಗೆ ಸೀತಮ್ಮ ತೋರುವ ಪ್ರತಿಕ್ರಿಯೆ ಶೀಲದ ಕುರಿತ ಗೌರವಕ್ಕೆ, ಜೊತೆಗೆ ಪತಿನಿಷ್ಠೆಗೆ ಆಕೆ ಬೆಲೆಕೊಡುತ್ತಾಳೆ. ಕುಲೋದ್ಧಾರಕನ ಜನುಮಕ್ಕೆ ಸ್ವತಃ ಗಂಡನೇ ಅನ್ಯದಾರಿ ತೋರಿಸಿಕೊಡುವ ರೀತಿಯಲ್ಲಿ ಅವಳನ್ನು ಒಬ್ಬಳನ್ನೇ ಸನ್ಯಾಸಿಯ ಬಳಿಗೆ ಕಳುಹಿಸಲು ತೀರ್ಮಾನಿಸುವಂತೆ ಮಾಡುತ್ತದೆ. ಪುತ್ರನ ಆಸೆಗೆ ಹೆಂಡತಿಯನ್ನೇ ಒಪ್ಪಿಸಬಯಸುವ ಲಂಪಟತನ ಇಲ್ಲಿ ಅಸಹ್ಯಹುಟ್ಟಿಸುತ್ತದೆ. ಈಗ ಜಪ ಸಾಕು. ನನ್ನ ಕಡೆಗೆ ತಿರುಗಿ ಆ ದೇವರ ಮೂರ್ತಿಯನ್ನು ನನ್ನಲ್ಲಿ ಭಾವಿಸಿ ನನ್ನ ಕಣ್ಣನ್ನು ನೋಡಿ. ನೀವು ಬಹು ಸಂಕೋಚ ಸ್ವಭಾವದವರು. ನೀವು ಹಿಡಿದಿರುವ ವ್ರತ ಕ್ರಮವಾಗಿ ಮುಗಿಯಬೇಕಾದರೆ ಈ ಸಂಕೋಚವನ್ನು ಬಿಡಬೇಕು. ಇದು ನಿಮ್ಮ ಯಜಮಾನರಿಗೆ ತಿಳಿದಿತ್ತು. ನೋಡಿ ಯಜಮಾನರಿಗೆ ಇಷ್ಟ ದಂತೆ ನಡೆಯುವುದು ನಿಮ್ಮ ಧರ್ಮ. ಇಷ್ಟವಲ್ಲದಿದ್ದರೆ ಅವರು ನಿಮ್ಮನ್ನು ಇಷ್ಟುದೂರ ಬಿಡುತ್ತಿದ್ದರೇ? ಎಂದು ಹಂತಹಂತವಾಗಿ ಅವಳನ್ನು ಒಪ್ಪಿಸಬಯಸುವ ಅವರ ಕುಟಿಲೋಪಾಯ ಗಂಡಸು ಪ್ರಪಂಚದ ಪರಿಚಯವನ್ನು ನೀಡುತ್ತದೆ. ಇಂಥ ಮನಸ್ಥಿತಿಯನ್ನು ಸೀತಮ್ಮ, ‘ನನ್ನಿಂದ ಇದು ಆಗುವುದಿಲ್ಲ, ಹೆಂಗಸಿಗಿರೋದು ಮರ್ಯಾದೆ. ಅದನ್ನು ಬಿಟ್ಟು ಯಾವ ವ್ರತ ಏನು ಮಾಡೀತು? ನೀವು ಇದನ್ನು ಮೊದಲೇ ಹೇಳಿದ್ದರೆ ನಾನು ಈ ವ್ರತವನ್ನು ಹಿಡೀತಾ ಇರಲಿಲ್ಲ’ ಎಂದು ಕಡ್ಡಿ ಮುರಿದಂತೆ ಹೇಳಿಬಿಡುವುದು, ಮರ್ಯಾದೆ ಬಿಡಲಾಗದ ಹಾಗೂ ಬಿಡಬಾರದ ಮೌಲ್ಯವನ್ನು ಎತ್ತಿಹಿಡಿಯುವುದಾಗಿದೆ. ಒಂದು ಮೌಲ್ಯ ಹಾಕಿಕೊಟ್ಟ ಮಾರ್ಗವನ್ನು ಆಕೆ ಕಾಯ್ದುಕೊಳ್ಳುವುದು ಮಾತ್ರವಲ್ಲದೆ ತನ್ನತನವನ್ನು ಮುರಿಯುವುದನ್ನು ಇಲ್ಲಿ ಆಕೆ ತಡೆಯುತ್ತಾಳೆ. ಸ್ವತಃ ಗಂಡನ ಸಮ್ಮತಿ ಇದಕ್ಕೆ ಇದೆ. ಅವನಿಷ್ಟ ಪೂರೈಸಬೇಕೆಂಬ ಮೌಲ್ಯದ ಹೇರಿಕೆಗೆ ಈಕೆ ಒಪ್ಪುವವಳಾಗುವುದಿಲ್ಲ. ಶೀಲ, ಮರ್ಯಾದೆ ಉಳಿಸುವ ನಿಟ್ಟಿನಲ್ಲಿ ಒಂದು ರೀತಿಯಲ್ಲಿ ತಪವನ್ನೇ ಆಕೆ ಮಾಡುತ್ತಾಳೆ.

‘ದೃಷ್ಟೀನ ಒಬ್ಬರಿಗೆ ಕೊಡಬಹುದು. ನೀವು ಹೇಳುವುದು ಸರಿಯಲ್ಲ ಹೀಗೆ ದೇವರು ಎನ್ನುತ್ತ ಏನೇನು ಮಾಡು ಎಂತ ಹೇಳಬಹುದು? ಎಂದು ಬಲವಾಗಿಯೇ ಪ್ರಶ್ನಿಸುವ ಮೂಲಕ ಮೋಸ ಮಾಡುವ ಸಮಾಜವನ್ನು ತಿವಿಯುತ್ತಾಳೆ. ಅದು ಸಮ. ಅವರು ಇಷ್ಟ ಪಟ್ಟರೂ ನಾನು ಒಪ್ಪದೆ

ನಿಮ್ಮ ಅಪೇಕ್ಷೆ ನಡೆಯುವುದಿಲ್ಲ. ನೀವು ನಡೆಸುವ ವ್ರತ ಇಲ್ಲಿಗೆ ಮುಗಿಯಿತು ಎಂದಿಟ್ಟುಕೊಳ್ಳಿ. ನಾನು ನಾಳೆ ಇಲ್ಲಿಗೆ ಬರುವವಳಲ್ಲ. ನೀವು ಹೀಗೆ ನಡೆದುಕೊಂಡಿರಿ ಎಂದು ತಿಳಿದರೆ ನಮ್ಮ ಯಜಮಾನರಾದರೂ 'ಸುಮ್ಮನೆ ಇರುವುದಿಲ್ಲ' ಎಂದು ಆಕೆ ಈ ಬಗೆಯ ಗಂಡನ ಮೇಲಿಟ್ಟ ನಂಬಿಕೆ ಗಂಡನ ಪರವಾಗಿ ವಾದಿಸುತ್ತದೆ. ಈ ನಂಬಿಕೆಯ ಮಾತುಗಳು ಆಕೆಯ ಮುಗ್ಧತೆಯ ಮನಸ್ಸಿನ ಪ್ರತೀಕವೂ ಹೌದು. ಗಂಡನನ್ನು ಬಿಟ್ಟುಕೊಡಬಾರದ ಸಂಪ್ರದಾಯಪರವಾದದ್ದೂ ಹೌದು. ಆದರೆ ಅದೇ ಗಂಡ ಆ ನಂಬಿಕೆಯನ್ನು ಉಳಿಸಿಕೊಳ್ಳದಿರುವುದು ಅಂಥ ಮೋಸಗಾರಿಕಾ ವಲಯದೊಳಕ್ಕೆ ಗಂಡು ಸೇರಿಹೋಗಿ, ತನ್ನ ಸ್ವಾರ್ಥ ಸಾಧನೆಯನ್ನು ಮೊದಲು ಮಾಡಿಕೊಳ್ಳುವುದನ್ನು ತೋರಿಸುತ್ತದೆ. ಆದರೆ ಅಂಥ ವ್ಯವಸ್ಥೆಯ ನಡುವೆಯೂ ಹೆಣ್ಣಾದವಳು ತನ್ನ ಶೀಲಕ್ಕಾಗಿ ಹಾಗೂ ಗಂಡನ ಮೇಲಿನ ಭಕ್ತಿಗಾಗಿ ಹೋರಾಡಬೇಕಾದ ಇಕ್ಕಟ್ಟಿನ ಸಂದರ್ಭವನ್ನು ಸ್ವಾಮಿಯನ್ನು ಓಡಿಸಿಯೇ ಬಿಡುವಲ್ಲಿ ಗೆಲ್ಲುತ್ತಾಳೆ. ಆಕೆ ಅದನ್ನು ಬಟಾಬಯಲುಗೊಳಿಸುತ್ತಾಳೆ. ಆಕೆಯ ಪತಿನಿಷ್ಠೆಯೇ ಆಕೆಯನ್ನು ಗೆಲ್ಲಿಸುತ್ತದೆ ಎಂಬ ದೃಢ ನಂಬಿಕೆ ಸ್ವಾಮೀಜಿಯನ್ನೇ ಪಲಾಯನ ಮಾಡುವಂತೆ ಮಾಡುತ್ತದೆ. ಆಕೆಯ ಮೈಮುಟ್ಟದಂತೆ ಕ್ಷಣ ಕ್ಷಣ ಎಚ್ಚರವಹಿಸುತ್ತ ವಾದಿಸಿ ಅಲ್ಲಿಂದ ಹೊರಬರುವಲ್ಲಿ ಆಕೆ ಗೆದ್ದಿರುವುದು ಅವಳು ನಂಬಿದ ಪತಿವ್ರತಾ ಮೌಲ್ಯದಿಂದಾಗಿಯೇ ಎಂಬುದನ್ನು ಆಕೆಯ ಮೂಲಕ ಪ್ರತಿಪಾದಿಸಲಾಗಿದೆ. ಅವಳು ತಾನು ನಂಬಿದ ಪತಿನಿಷ್ಠೆಯನ್ನು ಉಳಿಸಿ ಬಾಳಿಸುವ ಪ್ರೇರಕಿಯೂ ಆಗುತ್ತಾಳೆ. ಆ ಮೌಲ್ಯವೊಂದು ಉಳಿಯುವುದರಿಂದಲೇ ಅಂಥ ಮೋಸಗಾರಿಕಾ ಗಂಡು ಪ್ರಪಂಚ ಸ್ವಾರ್ಥ ಸಾಧನೆಯಲ್ಲಿ ವಿಫಲವಾಗುವುದು ಸಾಧ್ಯವಾಗುತ್ತದೆ. ಆರೋಗ್ಯಕರ ಸಮಾಜವೊಂದು ಉಳಿಯುವುದಕ್ಕೆ ನೆರವಾಗುತ್ತದೆ ಎಂಬ ನಂಬಿಕೆಯನ್ನು ಪ್ರತಿಷ್ಠಾಪಿಸುವ ಪ್ರಯತ್ನಕ್ಕೆ ಸೀತೆ ತನ್ನನ್ನು ಒಡ್ಡಿಕೊಂಡಿದ್ದಾಳೆ.

'ಚೆನ್ನಮ್ಮ' ಕತೆಯ ಚೆನ್ನಮ್ಮ ಕೂಡ ಗಂಡನಿಗೆ ಮಾತ್ರ ತನ್ನ ದೇಹವನ್ನು ಒಪ್ಪಿಸುವ ಮೌಲ್ಯವನ್ನು ಪ್ರತಿಪಾದಿಸುತ್ತಾಳೆ. ಪಾತಿವ್ರತ್ಯವನ್ನು ಪ್ರತಿಪಾದಿಸುವ ಸ್ತ್ರೀಯರು ಸಮಾಜದ ಒಂದೊಂದು ಯುಗಮೌಲ್ಯವನ್ನು ಹೇಳುವುದರೊಂದಿಗೆ ಅದನ್ನು ಉಳಿಸಿಬಾಳಬೇಕಾದ ರೀತಿಯನ್ನು ಮುಂದಿಡುತ್ತಾರೆ. ಹಾಗೆ ಮುಂದಿಡುವಾಗ ಸ್ತ್ರೀಯರು ಸ್ವತಃ ತಾವೂ ಅಂಥ ಮೌಲ್ಯವನ್ನು ಪಾಲಿಸುತ್ತಾ ಬದುಕಿ ಅದನ್ನು ಪ್ರತಿಷ್ಠಾಪಿಸಿ ಮುಂದೆಯೂ ಉಳಿದುಕೊಳ್ಳುವಂತೆ ಎಚ್ಚರವಹಿಸುತ್ತಾರೆ. ಗಂಡನೊಬ್ಬನಿಗೇ ಸ್ತ್ರೀಯಾದವಳು ಅರ್ಪಿತವಾಗಬೇಕು ಎಂಬ ಧರ್ಮವನ್ನು ಪಾಲಿಸುವವರಾಗುತ್ತಾರೆ. ಪತಿಯನ್ನೇ ಅತಿಯಾಗಿ ಗೌರವಿಸುವ, ಕೆಡಿಸಬರುವವರನ್ನು ಪತಿನಿಷ್ಠೆಯಿಂದಲೇ ತಡೆಯುವ ಮೌಲ್ಯವನ್ನು ಪಾಲಿಸುವವರಾಗಿದ್ದಾರೆ.

ಚೆನ್ನಮ್ಮ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳುವ ಮೂಲಕ ಪತಿಗೆ ಅಧೀನವಾಗಿರಬೇಕಾದದ್ದರ ಪ್ರತಿಪಾದಕಿಯಾಗಿಯೇ ಕಾಣಿಸಿಕೊಳ್ಳುತ್ತಾಳೆ. ಆಕೆಯ ಸಹನೆ ಕೂಡ ಗಂಡನನ್ನು ಉಳಿಸುವ,

ರಕ್ಷಿಸುವ ನಿಟ್ಟಿನದೇ ಆಗಿರುತ್ತದೆ. ಅಂಥದ್ದೇ ಸಂಪ್ರದಾಯದ ವಕ್ತಾರಳಾಗಿಯೇ ಗಂಡನ ಪರ ವಕಾಲತ್ತುಮಾಡುತ್ತಾಳೆ. 'ಕೂಲಿಯಾದರೂ ಆದಾಳು. ಪರಪುರುಷನೊಂದಿಗೆ ತಪ್ಪಿನಡೆಯುವವಳು ಎಂಬ ಮಾತನ್ನೊಬ್ಬರು ಆಡಿದರೆ ಅವಳು ಸಹಿಸುವುದಕ್ಕೆ ಸಿದ್ಧವಾಗಿರಲಿಲ್ಲ. ಪ್ರಾಣ ಹೋದರೆ ಹೋಗಬಹುದು. ಆದರೆ ಅವಳ ಹೆಸರು ಕೆಡುವುದು ಅಷ್ಟು ಅಸಹ್ಯ' ಎನ್ನುವುದು ಪಾತಿವ್ರತ್ಯ ಮೌಲ್ಯದ ಪ್ರತಿಫಾದಕತೆಯಿಂದಲೇ. ಅಂಥ ಮೌಲ್ಯವನ್ನು ಅಲ್ಲಿನ ಹೆಣ್ಣು ಸ್ವತಃ ತಾನೇ ಬಾಳುವ ಮೂಲಕ ಪರಿಪಾಲಿಸಿ ಉಳಿಸುವಂತೆ ಎಚ್ಚರವಹಿಸುವುದಾಗಿದೆ. ಈ ಧೋರಣೆಯೇ ಎಲ್ಲ ಸ್ತ್ರೀಯರಲ್ಲೂ ಬಿತ್ತಿ ಬೆಳೆಸುವುದು ಮತ್ತು ಬಾಳಿಸುವುದು ಇಲ್ಲಿನ ಉದ್ದೇಶವಾಗುತ್ತದೆ. ಆದರೆ ಅದು ಸತಿ ಒಳ್ಳೆಯವನಾಗಿದ್ದ ಸಂದರ್ಭ ಮಾತ್ರ ಅಲ್ಲ, ಆತ ಎಷ್ಟೇ ದುಷ್ಟ ಹಾಗೂ ಲಂಪಟನಾಗಿದ್ದ ಸಂದರ್ಭದಲ್ಲೂ ಪಾಲಿಸುತ್ತ ಹೋಗಬೇಕು ಎಂಬುದನ್ನೇ ತಿಳಿಹೇಳುವುದಾಗಿದೆ.

ಗಂಡ ಕೇವಲ ಒಬ್ಬ ಕೂಲಿಯಾಗಿದ್ದುಕೊಂಡು ಸುಳ್ಳು ಹೇಳಿ ಮದುವೆಯಾದದ್ದು, ವೇಶ್ಯೆಯೊಂದಿಗೆ ಸಂಬಂಧವಿರಿಸಿಕೊಂಡದ್ದು ಗೊತ್ತಾದಾಗಲೂ ಹೆಂಡತಿ ಆಶಾಸೌಧ ಮುರಿದಂತೆ ನೊಂದುಕೊಂಡು ಏನೂ ಮಾಡಲಾಗದೆ ಕಣ್ಣೀರನ್ನು ಮಾತ್ರ ಹಾಕುವುದಕ್ಕೆ ಚೆನ್ನಮ್ಮನಿಗೆ ಸಾಧ್ಯವಾಗುತ್ತದೆ. ಅಲ್ಲಿ ಆಕೆ ಅದನ್ನು ವಿರೋಧಿಸುವ ಧೈರ್ಯ ಪಡೆದಿಲ್ಲ. ಹಾಗೆ ಮಾಡಿದರೆ ನೆಮ್ಮದಿ ಕೆಡುತ್ತದೆ ಎಂಬ ಕಾರಣ ಅವಳನ್ನು ತೆಪ್ಪಗಿರುವಂತೆ ಮಾಡುತ್ತದೆ.

ಆದರೆ, ತನ್ನ ಸಂಬಂಧಿ ಗಂಡಸಿನೊಂದಿಗೆ ಚೆನ್ನಮ್ಮ ಮಾತನಾಡುವುದನ್ನು ಗಂಡ ಒಪ್ಪಿಕೊಳ್ಳುವುದಿಲ್ಲ. 'ಲೋ, ನೀ ಒಳ್ಳೆ ಗೃಹಸ್ತ. ನಾ ಇಲ್ಲದಾಗ ಬಂದು ನನ್ನ ಎಂಡರನ ಏನು ಮಾಡಬೇಕೂ ಅಂತ ನೋಡಿದೆ? ಅದಕ್ಕಾಗಿ ಏನೇನೋ ಹೇಳಿ ಅವಳ ಮನಸ್ಸು ಕೆಡಿಸಿದ್ಯಾ' ಎಂದು ತನ್ನ ನಡವಳಿಕೆಯ ಕುರಿತ ಪ್ರಶ್ನೆಗೆ ಉತ್ತರ ಕೊಡುತ್ತಾನೆ.

'ಬೇಕಾದ್ದು ತಾಳಿಕೊಂಡೇನು. ಅವ ಮುಟ್ಟೋಕೆ ಬಂದರೆ ಸುಮ್ಮನಿರಲಾರೆ ಏನು ನಿನ್ನ ಕಷ್ಟ' ಎಂದು ಹೇಳುವಲ್ಲಿ, ಅವಳ ಅತಿಭಾವುಕತೆ ಮೆರೆಯುತ್ತದೆ. ಅದೊಂದು ಮೌಲ್ಯಯುತ ಪರಂಪರೆಯನ್ನು ಪ್ರತಿಷ್ಠಾಪಿಸುವುದರೊಂದಿಗೆ ಅದಕ್ಕೆ ಮಹತ್ತರ ಸ್ಥಾನ ನೀಡಲಾಗಿದೆ. ಆದ್ದರಿಂದಲೇ ಅವನ ಹಿಂಸೆಯನ್ನು ಸಹಿಸಿಯೂ ಆತ ಕಷ್ಟದಲ್ಲಿದ್ದಾಗ ಮನ ಮಿಡಿಯುವುತ್ತದೆ. 'ಉಣತೀಯಾ' ಎಂದು ಉಪಚರಿಸುತ್ತದೆ.

'ಅಯ್ಯೋ ನನ್ನಪ್ಪ, ನಾ ಹೆಣ್ ಹೆಂಗ್ಸು, ಇದೆಲ್ಲ ಏನು ಮಾಡಿಯೇನು? ದೇವರು ಮಾಡದ ಹಾಂಗಾಗತದೆ. ಮನೆ ಅನ್ನೋ ತಾವಕೆ ಹೋಗತೀನಿ' ಎಂಬಲ್ಲಿ ಗಂಡ ಏನೇ ಮಾಡಿದರೂ ಅವನಿಗೆ ಹೆಂಡತಿ ಗೌರವ ಕೊಡುವುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಅದನ್ನು ಮುಂದಿನ ಪೀಳಿಗೆ ಮುಂದುವರಿಸಿಕೊಂಡು ಹೋಗಬೇಕೆಂದು ಚೆನ್ನಮ್ಮ ಪ್ರೇರಣೆ ನೀಡಿದ್ದಾಳೆ. ಹೆಂಡತಿ

ಒಂದು ಅಧೀನ ಸಂಸ್ಕೃತಿ. ಗಂಡ ಪ್ರಧಾನ ಸಂಸ್ಕೃತಿ. ಇದನ್ನು ಗೌರವಿಸುವ, ನಿಷ್ಠೆಯಿಂದ ಬದುಕಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ನಂಬಿದ ಸ್ತ್ರೀಯು ಅಧೀನ ಸಂಸ್ಕೃತಿಯೊಳಗೇ ಬಂಧಿತಳಾದರೂ ಭದ್ರತೆಯ ಬದುಕನ್ನು ಕಟ್ಟಿಕೊಡುತ್ತದೆ ಎಂಬುದನ್ನು ನಂಬಿಸುವ ಪ್ರಯತ್ನ ಮಾಡಿದ್ದಾಳೆ.

ಮಾಸ್ತಿ ಇಲ್ಲಿನ ಸ್ತ್ರೀಯರನ್ನು ಮುಖ್ಯವಾಗಿ ಸಿದ್ಧಯುಗ ಮೌಲ್ಯ ಹೊತ್ತ ಪರಂಪರೆಯನ್ನು ಒಪ್ಪಿಕೊಂಡು ಬಾಳುವವರಾಗಿ ಚಿತ್ರಿಸಿದ್ದಾರೆ. ಈ ಬದುಕಿನ ರೀತಿ ವೈದಿಕ ಪರಂಪರೆಯದ್ದಾಗಿರುವುದರಿಂದ ಅದು ಅವರಿಗೆ ಮೌಲ್ಯಯುತವಾಗಿದೆ. ಅದು ಇತರರಿಗೆ ಮಾದರಿಯಾಗಿಸುವ ಆದರ್ಶವಾಗಿದೆ. ಮೂಲ ನೆಲೆಯಾದ ಪಾತಿವ್ರತ್ಯ ಕುರಿತ ಅತ್ಯಂತ ಉನ್ನತವಾದ ಪರಿಕಲ್ಪನೆಗಳನ್ನು ಸಂಸ್ಥಾಪಿಸುವ ನಿಟ್ಟಿನಲ್ಲಿ ಸ್ತ್ರೀಯರೇ ಪ್ರಯತ್ನಿಸುವುದನ್ನು ~~ಪರಿಚಯಿಸಿ ಪ್ರತಿಷ್ಠಾಪಿಸುವುದಕ್ಕೆ ಬದ್ಧರಾಗಿರುವರಂತೆ~~ ಪರಿಚಯಿಸಿದ್ದಾರೆ.

'ಕುಚೇಲನ ಭಾಗ್ಯ' ಹಾಗೂ 'ಶ್ರೀಕೃಷ್ಣನ ಅಂತಿಮ ಸಂದರ್ಶನ' ಕತೆಗಳಲ್ಲಿ ರುಕ್ಮಿಣಿಯ ನಿಲುವು, ನಡವಳಿಕೆ, ಅಚಲ ವಿಶ್ವಾಸವನ್ನು ಪರಿಚಯಿಸುವ ಮೂಲಕ ಪುರಾಣದ ಹೆಣ್ಣೊಬ್ಬಳು ಗಂಡನೊಂದಿಗೆ ವ್ಯವಹರಿಸುವ ರೀತಿ ಇಲ್ಲಿ ಪತಿನಿಷ್ಠೆ, ಗೃಹಿಣಿ ಸ್ವಭಾವವನ್ನು ಮೆರೆಯಿಸಲಾಗಿದೆ. ಹೀಗೆಯೇ ಅನುಸರಿಸಿ ಸ್ತ್ರೀಯಾದವಳು ಬದುಕಬೇಕು ಎಂಬುದನ್ನು ಪ್ರತಿಪಾದಿಸುವುದಕ್ಕೆ ಪುರಾಣದ ಸ್ತ್ರೀಯರ ಸ್ವಭಾವವನ್ನು ವೈಭವೀಕರಿಸಿ ನಿರೂಪಿಸಲಾಗಿದೆ. ಇದು ಜೀವನ ನಡೆಸುವ ರೀತಿಗೆ ಬೋಧನೆಯಾಗುತ್ತದೆ. ಪತಿಭಕ್ತಿಯನ್ನೆಲ್ಲ ಸಾಕಾರಗೊಳಿಸಿಕೊಂಡು ಜೀವನ ನಡೆಸಬೇಕಾದ ಸಂದೇಶ ಕೊಡುವ ಸಂಪ್ರದಾಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಪತಿಯು ಯಾವತ್ತಿಗೂ ಪತ್ನಿಯ ಮನದಲ್ಲಿ ಚಿರಸ್ಥಾಯಿಯಾಗಿರುತ್ತಾನೆ. ಅದು ಆತ ಬದುಕಿರುವಾಗಲೂ ಸರಿ, ಸತ್ತಮೇಲೂ ಸರಿ. ಅದರಾಚೆಗೆ ಮನಸ್ಸು ಹಾಯಿಸದಂತೆ ತಡೆಯಬೇಕಾದ ನಿಟ್ಟಿನಲ್ಲಿ ಕೃಷ್ಣ ಪರಲೋಕಕ್ಕೆ ಹೋದ ಸಂದರ್ಭವನ್ನು ಅರ್ಜುನ ಬಂದು ಹೇಳಿದ ಸಂದರ್ಭ ರುಕ್ಮಿಣಿ 'ಅಣ್ಣನ ದೇಹ ಇಲ್ಲ, ಮನಸ್ಸಿನಲ್ಲಿ ಆ ಮೂರ್ತಿ ಇದ್ದೇ ಇದೆ. ದೇಹ ಇದ್ದದ್ದು ಎಷ್ಟು ನಿಜವೋ ಅಷ್ಟೇ ನಿಜವಾಗಿ ಮೂರ್ತಿ ಜೊತೆಗಿದೆ. ಪರಲೋಕಕ್ಕೆ ಹೋದಾಗಲೂ ಹಾಗೆಯೇ ಜೊತೆಗೆ ಇದೆ. ಒಂದು ಸಲ ಅವರು ನಿಮ್ಮ ನಗರಕ್ಕೆ ಅಂತ ಹೊರಟಾಗ ಅವರು ಸಮಾಧಾನ ಹೇಳಿದ್ದಕ್ಕೆ ನಾನು ಹೀಗಂತ ಉತ್ತರ ಹೇಳಿದೆನಂತೆ. ನಾನು ಬಿಟ್ಟಿರಲಾರೆ ಎಂದಾಗ ಅವರು ಹೀಗೆಂದರು ಅಂತ ನೆನಪು. ನನ್ನ ಮಾತೋ ಅವರ ಮಾತೋ ಅದು ಮುಖ್ಯ ಅಲ್ಲ.ನನ್ನ ಮಾತೇ ಆದರೂ ಅದು ನಾನು ಅವರಿಂದ ಕಲಿತ ಮಾತು. ದೇಹವನ್ನುಬಿಟ್ಟರೂ ಅವರು ನನ್ನನ್ನು ಒಂಟಿಯಾಗಿ ಬಿಟ್ಟು ಹೋಗುವುದಿಲ್ಲ. ಜೊತೆಯಲ್ಲಿ ಇರುತ್ತಾರೆ' ಎಂದು ಹೇಳಿರುವಲ್ಲಿ ಪತಿ ವಾಕ್ಯ ಪರಿಪಾಲನೆಯಿದೆ. ಜೊತೆಗೆ ಪತಿ ಆರಾಧನೆಯಿದೆ, ಪತಿ ಅಳಿದ ಬಳಿಕವೂ ಜೊತೆಗೇ ಇರುತ್ತಾನೆ ಎಂಬ ನಂಬಿಕೆಯನ್ನು ದೃಢಪಡಿಸುವ ಕೆಲಸ ನಡೆದಿದೆ.

ಗಂಡನೊಂದಿಗೆ, ಗಂಡನ ಆಪ್ತನೊಂದಿಗೆ ಪತ್ನಿಯಾದವಳು ಹೇಗಿರಬೇಕೆಂಬುದನ್ನೂ ಮಾಸ್ತಿ ಪುರಾಣದ ರುಕ್ಮಿಣಿಯ ಮೂಲಕವೂ ಪರಿಚಯಿಸುತ್ತಾರೆ. ಗಂಡನೊಂದಿಗೆ ಬಂದ ಆತನ ಸ್ನೇಹಿತ ಕುಚೇಲನ ಕಾಲಿಗೆ ನೀರೆರೆಯುವುದು, ಪಂಚೆ ಉತ್ತರೀಯಗಳನ್ನು ತರುವುದು, 'ಗಂಡ ತಾನು ಸಣ್ಣವನು ಎಂತ ಹೇಳಬಹುದು, ಹೆಂಡತಿ ನೀವು ಸಣ್ಣವಳು ಎನ್ನುವುದಕ್ಕಾಗುತ್ತದೆಯೇ?' ಎನ್ನುವುದು ಹೆಂಡತಿ ಗಂಡನಿಗೆ ಕೊಡುವ ಮರ್ಯಾದೆಯನ್ನು ಹೇಳುತ್ತದೆ ಮತ್ತು ಗೃಹಿಣಿಯಾದವಳ ಕರ್ತವ್ಯವನ್ನೂ ಮನದಟ್ಟು ಮಾಡಿಸುತ್ತದೆ. ಆಕೆಯ ಸರಳತೆಯ ನಡವಳಿಕೆಗಳು ಕುಟುಂಬವನ್ನು ಮುನ್ನಡೆಸುವ ಸೂತ್ರವಾಗಿ ಕೂಡ ಪರಿಚಯಿಸಿದ್ದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

ಈ ಎಲ್ಲ ಸಂದರ್ಭಗಳಲ್ಲಿ ಮಾಸ್ತಿ ಪ್ರತಿಪಾದಿಸಿದ್ದು ಸ್ತ್ರೀಯಾದವಳು ಯಾವತ್ತೂ ಪಾತಿವ್ರತ್ಯವನ್ನು ಪಾಲಿಸಬೇಕು. ಅದು ಎಂಥದ್ದೇ ಸಂದರ್ಭವಾದರೂ ಸರಿ ಅವಳು ಅದನ್ನು ಪಾಲಿಸಿ ಗಂಡನಿಗೆ ನಿಷ್ಠೆಯಿಂದ ಇದ್ದು ಜೀವನ ಸಾಗಿಸಬೇಕು ಎಂಬ ತತ್ವವನ್ನು. ಅದನ್ನು ಕತೆಗಳ ಸ್ತ್ರೀಯರಿಂದಲೇ ಹೇಳಿಸುವ ಮೂಲಕ ಪರಿಣಾಮಕಾರಿಗೊಳಿಸುತ್ತಾರೆ.

ಶೀಲ ಸಂರಕ್ಷಣೆಯಲ್ಲಿ

ಮಾಸ್ತಿಯವರ ಕತೆಗಳಲ್ಲಿನ ಸ್ತ್ರೀಯರು ಶೀಲಕ್ಕೆ ಕೊಡುವ ಮಹತ್ವದಿಂದಾಗಿ ಅದಕ್ಕೆ ಧಕ್ಕೆ ಬಂದಾಗ ಆತ್ಮಾಹುತಿ ಮಾಡಿಕೊಳ್ಳುವುದೂ ಒಂದು ಮೌಲ್ಯವಾಗಿ ಪ್ರತಿನಿಧಿತವಾಗಿದೆ. ಪಾತಿವ್ರತ್ಯದ ಪಾಲನೆ, ಶೀಲ ಉಳಿಸಿಕೊಳ್ಳುವ ಮಹತ್ತರ ಧ್ಯೇಯ ಹೊತ್ತು ಬಾಳಬೇಕಾದುದನ್ನು ಇಲ್ಲಿನ ವೈದಿಕ ಕುಟುಂಬದ ಸ್ತ್ರೀಯರು ಮುರಿಯದಂತೆ ಕಾಳಜಿವಹಿಸಿ ಅದನ್ನು ಮುಂದಿನ ಪೀಳಿಗೆ ಅನುಸರಿಸುವ ಮಾರ್ಗವನ್ನು ಮಾಸ್ತಿ ಅವರ ಮೂಲಕ ತೋರಿಸಿಕೊಟ್ಟಿದ್ದಾರೆ.

ಮಾಸ್ತಿಯವರ ಕತೆಗಳಲ್ಲಿ ಆತ್ಮಾಹುತಿ ಮಾಡಿಕೊಳ್ಳುವ ಸ್ತ್ರೀಯರು ಮೇಲ್ವರ್ಗದ, ವೈದಿಕ ಪರಂಪರೆ ಅನುಸರಿಸುವ ಮನೆತನದವರೇ ಆಗಿದ್ದಾರೆ. ಒಂದು ಸಮಾಜದ ಮೌಲ್ಯಯುತ ಎಂದು ನಂಬಿದ ಕಟ್ಟುಪಾಡುಗಳನ್ನು ಮುಂದುವರಿಸಬೇಕಾದ ಅನಿವಾರ್ಯತೆಯಿಂದಾಗಿ ತಾವೇ ಅದನ್ನು ಪ್ರತಿಷ್ಠಾಪಿಸಬೇಕೆಂದು ಹೊರಡುತ್ತಾರೆ. ಅವರಲ್ಲಿರುವ ಸೌಮಂಗಲ ವೈಧವ್ಯದ ಕುರಿತ ಭಾವನಾತ್ಮಕವಾದ ನಂಬಿಕೆ, ಮುತ್ತೈದೆ ಸಾವಿನ ಕುರಿತ ಅತಿಯಾದ ಗೌರವ, ನಿಷ್ಠೆ ಅತಿ ಮುಗ್ಧತನದ್ದಾಗುತ್ತದೆ. ಪತಿಯ ಸಾವಿನ ನಂತರ ಹೆಣ್ಣೊಬ್ಬಳು ಅಷ್ಟೇ ನಿಷ್ಠೆಯಿಂದ ಬದುಕಬೇಕಾದ ಮೌಲ್ಯ ಹೇರಿದ ವೈದಿಕ ಸಂಸ್ಕೃತಿಯನ್ನು ಒಪ್ಪಿಕೊಂಡ ಮನಸ್ಸು ಎಚ್ಚರಿಕೆಯಿಂದಲೇ ಸಾವನ್ನು ತಂದುಕೊಳ್ಳುತ್ತದೆ. ಕಿರುಹರೆಯದ ಹೆಣ್ಣು ವಿಧವೆಯಾದರೆ ಆಕೆ ಸಾವನ್ನು ತಂದುಕೊಳ್ಳುವುದು ಮುಂದೆ ಶೀಲ ಹರಣ ನಡೆಯಬಾರದ ಕಾಳಜಿಯಿಂದ. ಆಕೆಯ ದೇಹ ಗಂಡನೊಬ್ಬನ ಹೊರತಾಗಿ ಅರ್ಪಿತವಾಗಲಾರದ ಚೌಕಟ್ಟಿಗೆ ಆಕೆ ಬದ್ಧಳಾಗುವಂತೆ ಅತಿ ಎಚ್ಚರ ವಹಿಸಲಾಗಿದೆ. ಒಂದೆಡೆ

ಮತ್ತೈದೆ ಸಾವು, ಮತ್ತೊಂದೆಡೆ ಶೀಲದ ಮಹತ್ವದಿಂದಾಗಿ ವೈಧವ್ಯ ಬಂದೊಡನೆಯೇ ಒಂದೆ ಮುಂದೆ ನೋಡದೇನೇ ಜೀವ ತೆಗೆದುಕೊಳ್ಳುವ ಸಂದರ್ಭವನ್ನು ಪ್ರತಿನಿಧಿಸುತ್ತಾರೆ. ಅದು ವೈದಿಕ ಸಂಸ್ಕೃತಿಯ ಆಚರಣೆಯಾಗಿದೆ. ಸಂಸ್ಕೃತಿಯ ಉಳಿವಿಗೆ ಅದು ಬಹುಮುಖ್ಯವಾದದ್ದು ಎಂದೂ ಈ ಮೂಲಕ ಸಾಬೀತು ಪಡಿಸುವ ಕೆಲಸವನ್ನು ಅವರು ಮಾಡಿದ್ದಾರೆ.

ಸೌಮಂಗಲ ವೈಧವ್ಯದ ಕುರಿತು ಅತ್ಯಂತ ಗೌರವಯುತವಾದ ಭಾವನೆಯನ್ನು ಮುಂದಿರಿಸುವ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ ಆ ಮೌಲ್ಯವನ್ನು ಪರಿಪಾಲಿಸುವಂತೆ ಸ್ವತಃ ತನ್ನನ್ನೇ ಒಪ್ಪಿಸಿಕೊಳ್ಳುವ ಮೂಲಕ ಮನಃ ಪರಿವರ್ತಿಸುವಲ್ಲಿ ಪ್ರಯತ್ನಿಸುತ್ತಾಳೆ. ಗಂಡ ಹೆಂಡತಿಯರ ನಡುವಿನ ಅಂತರ ಹಾಗೂ ಗಂಡನ ಮನಸ್ಸನ್ನು ಅರ್ಥೈಸಿಕೊಳ್ಳಲಾಗದ ಹೆಂಡತಿಯ ವರ್ತನೆ ಗಂಡನ ಸನ್ಯಾಸ ಸ್ವೀಕಾರಕ್ಕೆ ಕಾರಣವಾಗುತ್ತದೆ. ಬಳಿಕ ಹೆಂಡತಿಯಾದವಳು ಆಚಾರ್ಯರನ್ನು ಅರಸುತ್ತ ಬಂದ ಸಂದರ್ಭ ಊಹೆಗೇ ನಿಲುಕದ್ದು. ನಲುವತ್ತು ವರ್ಷಗಳವರೆಗೆ ಆಕೆ ಗಂಡನಿಗಾಗಿ ಪರಿತಪಿಸುತ್ತ ಕೊನೇ ಹಂತಕ್ಕೆ ಭೇಟಿಯಾಗುವಂತೆ ಮಾಡಿದ್ದನ್ನು ಕೂಡ ಸಂದೇಹದಿಂದಲೇ ನೋಡಬೇಕಾಗುತ್ತದೆ.

ಸುದೀರ್ಘ ೪೦ ವರ್ಷಗಳ ಕಾಲವೂ ಹೆಂಡತಿ ಗಂಡನಲ್ಲಿಟ್ಟ ಭಕ್ತಿಗೆ ಉತ್ತರವಾಗಿ ಆಕೆ ಆಚಾರ್ಯರ ಬಳಿಗೆ ಬರುತ್ತಾಳೆ. ಶ್ಯಾಮಲಾಂಬೆಯ ಸಹಕಾರದೊಂದಿಗೆ ಆಚಾರ್ಯರ ಪಾದ ಮುಟ್ಟುವ ಮೂಲಕ ಜ್ವರ ಆವಾಹಿಸಿಕೊಳ್ಳುವುದು ಗಂಡ ಉಳಿಯಬೇಕು ಮತ್ತು ಆತನ ಸಾವಿಗೂ ಮುನ್ನವೇ ತಾನು ಸಾವು ಕಾಣಬೇಕು ಎಂದು, 'ಜ್ವರ ಬಹಳವಿದ್ದಾಗ ಗುರುಪತ್ನಿ ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ಜ್ವರವನ್ನು ನಾನು ತೆಗೆದುಕೊಳ್ಳುತ್ತೇನೆ. ಇವರನ್ನು ಉಳಿಸು ಎಂದು ಬೇಡಿಕೊಂಡರು. ತಮಗೆ ಜ್ವರ ಬಹು ಹೆಚ್ಚಿದ ಆ ರಾತ್ರಿ ಇಲ್ಲಿ ಬಂದಿದ್ದು ನಾನು ದೂರ ಹೋಗಿ ಮಲಗಿದ ವೇಳೆ ತಮ್ಮ ಸನ್ನಿಧಿಯಲ್ಲಿ ಬಂದು ಕುಳಿತು ಕಾಲನ್ನು ಮುಟ್ಟಿ ಜ್ವರವನ್ನು ಎಳೆದುಕೊಳ್ಳಬೇಕೆಂದು ಮೈಯನ್ನು ಸೋಕಿದರು', 'ಮೈಯನ್ನು ಮುಟ್ಟಿದಾಗ ತನ್ನ ಸೌಭಾಗ್ಯದ ದಿನದ ನೆನಪಿಗಾಗಿ ಒಮ್ಮೆ ಕಾಲನ್ನು ಔಕುವ ಚಪಲ ಹುಟ್ಟು ಹಾಕಿದರು. ಅದರಿಂದಲೇ ತಾವು ಎಚ್ಚೆತ್ತಿರಿ, ಯಾರು ಎಂದು ಕೂಗಿದಿರಿ. ನಾನು ಎದ್ದು ಬಂದೆ. ಮಾರನೆಯ ದಿನವೇ ಅವರು ಜ್ವರದಿಂದ ಮಲಗಿದರು' ಎಂದು ವಿವರಿಸುವಲ್ಲಿ ಆಚಾರ್ಯರ ಪತ್ನಿ ಹಾಗೆ ಸಾಯುವ ತೀರ್ಮಾನ ತೆಗೆದುಕೊಂಡಿದ್ದಕ್ಕೆ ಆಕೆ ಅನುಭವಿಸಿದ ಕಷ್ಟಕರ ದಿನಗಳ ವಿವರಗಳು ಇಲ್ಲಿ ಚರ್ಚಿತವಾಗುವುದಿಲ್ಲ. ಆದರೆ ನಿರೂಪಕ 'ಆಚಾರ್ಯರು ಹೀಗೆ ಮಾಡಿದ್ದು ಸರಿ ಇರಬಹುದು' ಎಂದು ಯೋಚಿಸುವಲ್ಲಿಯೇ ಆಕೆ ತೆಗೆದುಕೊಂಡ ನಿರ್ಧಾರಕ್ಕೆ ಉತ್ತರವಿದೆ. ಆಕೆ ಬದುಕಿದ ಕಾಲಘಟ್ಟದಲ್ಲಿ ಗಂಡ ತನ್ನಿಂದ ದೂರವಾದದ್ದರಿಂದ ಪರರ ಹಂಗಿನಲ್ಲೇ ಬಾಳುವ ನಡುವೆಯೇ ಇತರರ ಕುಟಿಲತೆಗೆ ಆಕೆ ಒಳಗಾಗುವ ವೈಪರೀತ್ಯ ಕೂಡ ಎದುರಿಸಿರಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಕಟ್ಟುನಿಟ್ಟಿನ ನಡುವೆ ಪತಿ - ಪರದೈವಗಳ ನಂಬಿಕೆಯ ನಡುವೆಯೇ ಬಂಧಿತಳಾಗಿ ಬದುಕಬೇಕಾಗಿತ್ತು. ಪಟ್ಟ ಕಷ್ಟದ ಕುರಿತು ಚಕಾರ ಎತ್ತಿರದಿದ್ದರೂ ಆಕೆ ತೆಗೆದುಕೊಳ್ಳುವ ಸಾವಿನ ತೀರ್ಮಾನದಲ್ಲಿ ಅದಕ್ಕೆ ಉತ್ತರ ಕಂಡುಕೊಳ್ಳಬಹುದಾಗಿದೆ. ಸಾಂಸಾರಿಕ ಜೀವನದ ನೆನಪು, ಅದರ ಕುರಿತ ಹಳಹಳಿಕೆಗಳ ನಡುವೆಯೇ ಆಕೆ ಆಚಾರ್ಯರ ಕಾಲು ಔಕುವ ನಿರ್ಧಾರ ತಳೆಯುತ್ತಾಳೆ. ಅದು ಸನ್ಯಾಸ ಕೆಡಿಸುವ ಉದ್ದೇಶದ್ದಲ್ಲ. ಆದರೆ ಅಷ್ಟಾದರೂ ಸೇವೆ ಮಾಡಿ ತನ್ನ ಸುಖದ ತಡೆಗೆ ಕಾರಣವಾದ ವ್ಯಕ್ತಿಯಿಂದಲೇ ಸಮಾಧಾನ ಪಟ್ಟುಕೊಳ್ಳುವುದನ್ನು ಕಾಣುತ್ತೇವೆ. ಆದರೆ ಅನಂತರ ಶ್ಯಾಮಲೆಯ ಬಳಿ ಆಚಾರ್ಯರಲ್ಲಿ ಕ್ಷಮೆ ಕೇಳುವಂತೆ ಭಿನ್ನವಿಸುವುದನ್ನು ಕಾಣುತ್ತೇವೆ. ಅಲ್ಲಿ ಆಕೆಯ ಕೊಂದುಕೊಳ್ಳುವಿಕೆ ಗಂಡನನ್ನು ಉಳಿಸುವ, ತಾನು ಅಳಿಯುವ ರೀತಿ ಮುತ್ತೈದೆತನದ ಸಾವನ್ನು ತಂದುಕೊಳ್ಳುವುದು ಮತ್ತು ಸಾವೇ ತನಗೆ ಪ್ರಾಯಶ್ಚಿತ್ತವೆಂದು ತೀರ್ಮಾನಕ್ಕೆ ಬರುವುದಾಗಿ ಅರಿತುಕೊಳ್ಳಬಹುದು. ಹಿಂದೂ ವೈದಿಕ ಪರಂಪರೆ ಹೆಣ್ಣಿಗೆ ಹಾಕಿಕೊಟ್ಟ ಈ ಮಾರ್ಗವನ್ನು ಅತ್ಯಂತ ಗೌರವದ ನೆಲೆಯಲ್ಲಿ ಸ್ವೀಕರಿಸಬೇಕೆನ್ನುವುದನ್ನು ಈ ಮೂಲಕ ಪ್ರತಿನಿಧಿಸಲಾಗಿದೆ. ಆದರೆ ಆಚಾರ್ಯರು 'ಎಲ್ಲಾ ಜೀವಕ್ಕೂ ಒಂದೊಂದು ದಾರಿ ನಿಯಮಿತವಾಗಿದೆ. ಆಯಾಯ ಜೀವ ಅದರದರ ದಾರಿಯಲ್ಲಿ ನಡೆದು ಗುರಿಯನ್ನು ಮುಟ್ಟಬೇಕು. ನಮ್ಮ ದಾರಿ ಹೀಗೆ ಆಗುವುದಿತ್ತು. ನಿಮ್ಮ ದಾರಿ ಹೀಗೆ ಆಗಲಿ' ಎಂದು ನಿರ್ಲಿಪ್ತರಾಗಿ ಹೇಳುತ್ತಾರೆ.

ವಿಧವೆಯ ದುರಂತ ಬದುಕಿನ ಭೀಕರತೆಯ ಸೂಕ್ಷ್ಮವನ್ನು 'ಕೃಷ್ಣಮೂರ್ತಿಯ ಹೆಂಡತಿ' ಕತೆಯಿಂದ ಅರಿತುಕೊಳ್ಳಬಹುದು. ಅಲ್ಲಿ ಕೃಷ್ಣಮೂರ್ತಿಯ ಹೆಂಡತಿಯ ತಾಯಿ ಕೂಡ ವಿಧವೆಯೇ, ಆಕೆಯೇ ಮಗಳನ್ನು ಸಲಹಿ ಮದುವೆ ಮಾಡಿ ನೋಡಿಕೊಳ್ಳುವ ಜವಾಬ್ದಾರಿ ಹೊತ್ತು ಪೂರೈಸಿದ್ದಾಳೆ. ಕಷ್ಟ ನಷ್ಟಗಳ ನಡುವೆ ಆಕೆ ಬದುಕಿದ ರೀತಿಯೂ ಇಲ್ಲಿ ಪರಿಚಿತಗೊಳ್ಳುವುದಿಲ್ಲ. ಮುಖ್ಯವಾಗಿ ಕತೆಯಲ್ಲಿ ಬಾಲ್ಯ ವಿವಾಹ ಪ್ರತಿಪಾದಿತಗೊಂಡಿದೆ ಮತ್ತು ಬಾಲ ವಿಧವೆ ಗಂಡನಿಲ್ಲದೆ ಬದುಕಲಾರೆ ಎಂದು ತಾನೂ ಆತ್ಮಾಹುತಿ ಮಾಡಿಕೊಳ್ಳುವುದೂ ವೈಭವೀಕರಣಗೊಂಡಿದೆ. ಮಾಸ್ತಿಯವರ ಈ ನಿಲುವಿನ ಪ್ರತಿಪಾದನೆಯ ಹಿಂದಿನ ಉದ್ದೇಶವನ್ನು ಅರ್ಥೈಸಿಕೊಳ್ಳಬೇಕಾದರೆ ಅವರು ಬರೆಯುತ್ತಿದ್ದ ಕಾಲದ ಮಹಿಳಾ ಸ್ಥಿತಿ-ಗತಿಗಳನ್ನು ಕೂಡ ಅರಿತುಕೊಳ್ಳಬೇಕಾಗುತ್ತದೆ. ಆದುದರಿಂದಲೇ ಮಾಸ್ತಿ ಬರೆಯುತ್ತಿದ್ದ ಸಂದರ್ಭದಲ್ಲಿ ಸ್ತ್ರೀ ಸುಧಾರಣೆಗಾಗಿ ನಡೆದ ವಿವಿಧ ಬಗೆಯ ಚಳವಳಿಗಳನ್ನು ಅಭ್ಯಸಿಸಿ ಅದಕ್ಕೆ ಅವರು ಕೃಷ್ಣಮೂರ್ತಿಯ ಹೆಂಡತಿ ಕತೆಯಲ್ಲಿ ವಿರೋಧ ಪ್ರತಿಕ್ರಿಯೆ ನೀಡಿರುವುದನ್ನು ಚರ್ಚಿಸಬಹುದಾಗಿದೆ.

ಮಾಸ್ತಿ ಸಮಕಾಲೀನ ದಿನಗಳಲ್ಲಿ ಸ್ತ್ರೀಯರ ಬದುಕಿನ ಸುಧಾರಣೆಗೆ ತೊಡಗಿದವರಲ್ಲಿ ರಾಜಾರಾಮ್ ಮೋಹನ್ ರಾಯ್ ಅವರನ್ನು ಮುಖ್ಯವಾಗಿ ನೆನಪಿಸಿಕೊಳ್ಳಬೇಕಾಗುತ್ತದೆ. ಸತೀ ಪದ್ಧತಿಯನ್ನು ಬಹುಪತ್ನಿತ್ವವನ್ನು ವಿರೋಧಿಸಿದ ಅವರ ಕಾರ್ಯಚಟುವಟಿಕೆಗಳು ರಾಷ್ಟ್ರವ್ಯಾಪಿಯಾಗಿವೆ. ಅಂತೆಯೇ ಈಶ್ವರಚಂದ ವಿದ್ಯಾಸಾಗರರು ವಿಧವಾ ವಿವಾಹವನ್ನೇ ಪ್ರತಿಷ್ಠಾಪಿಸುವುದಕ್ಕೆ ತಮ್ಮದೇ

ಆದ ರೀತಿಯಲ್ಲಿ ದುಡಿದಿದ್ದಾರೆ. ಈ ನಿಟ್ಟಿನಲ್ಲಿ ಅವರು ೧೮೫೬ರಲ್ಲಿ ಬರೆದ MARRIAGE OF HINDU WIDOWS ಕೃತಿ ಮಹತ್ತರ ಪಾತ್ರ ಪಡೆಯುತ್ತದೆ. ಬಹು ಪತ್ನಿತ್ವ ಪದ್ಧತಿಯನ್ನು ನಿರ್ಮೂಲನ ಮಾಡಿಸುವ ಕಡೆಗೂ ಅವರ ಲಕ್ಷ್ಯ ಹರಿದಿದೆ.

ಕೇಶವ ಕರ್ಜೆ ಅವರೂ ತಮ್ಮದೇ ಆದ ನೆಲೆಯಲ್ಲಿ, ಪಾಶ್ಚಾತ್ಯ ರಾಷ್ಟ್ರಗಳ ಮಾದರಿಯಲ್ಲಿ ಹೆಣ್ಣುಮಕ್ಕಳಿಗೆ 'ಹಿಂಗಣೆ'ಯಲ್ಲಿ ಪ್ರತ್ಯೇಕ ವಿದ್ಯಾಲಯ ತೆರೆದದ್ದು ಒಂದು ಮಹತ್ವದ ಸಾಧನೆಯಾಗಿದೆ. ಅವರು ಸ್ತ್ರೀಯರ ಬದುಕಿಗೆ ನೆರವಾಗುವ ರೀತಿಯಲ್ಲಿ ಪಠ್ಯ ಸಿದ್ಧಪಡಿಸಿ ಪಾಠಹೇಳುವ ಪರಿಯನ್ನು ಆರಂಭಿಸಿದ ಪ್ರಮುಖರಾಗಿದ್ದಾರೆ. ವಿದ್ಯಾಲಯವು ಶಿಕ್ಷಣದ ಜೊತೆಗೆ ಸ್ತ್ರೀಯರ ಬದುಕನ್ನು ಸ್ತ್ರೀಯರೇ ರೂಪಿಸಿಕೊಳ್ಳುವಂತೆ ಪ್ರೇರೇಪಿಸಿತು. ಮುಖ್ಯವಾಗಿ ಮದುವೆಗೆ ಮಾತ್ರ ಬದ್ಧವಾಗಿ ಉಳಿಯಗೊಡದಂತೆ ತಡೆಯಿತು. ವೈಚಾರಿಕತೆಯೆಡೆಗೆ ತಮ್ಮ ಮನಸ್ಸನ್ನು ತೆರೆದಿರಿಸಲು ದಾರಿಯಾಯಿತು. ವಿವಾಹವಾಗದೇ ಉಳಿಯುವವರ ಪರವಾದ ದೃಷ್ಟಿಕೊನ ಇಲ್ಲಿ ಕೆಲಸ ಮಾಡಿದೆ. ಕರ್ಜೆ ಸ್ವತಃ ವಿಧವಾ ವಿದ್ಯಾರ್ಥಿಯನ್ನೇ ವಿವಾಹವಾದದ್ದು ಸ್ತ್ರೀ ಪರ ಚಳುವಳಿಗೆ ನೀಡಿದ ಉತ್ತರವಾಗಿತ್ತು.

ಕರ್ಕಿ ವೆಂಕಟಮಣ ಶಾಸ್ತ್ರಿ ಅವರ ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ (೧೮೦೦) ಮುದುಕನಿಗೆ ಚಿಕ್ಕವಯಸ್ಸಿನ ಹುಡುಗಿಯೊಂದಿಗೆ ವಿವಾಹ ಮಾಡಿಕೊಡುವ ಸಮಸ್ಯೆಯ ಕುರಿತು, ಗುಲ್ವಾಡಿ ವೆಂಕಟ ರಾವ್ ಅವರ ಸದ್ಧರ್ಮ ವಿಜಯ ಅಥವಾ ಇಂದಿರಾಬಾಯಿ(೧೮೯೯) ಕೃತಿಗಳು ವಿಧವಾ ವಿವಾಹದ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿವೆ. ಇವು ಕೂಡ ಮಾಸ್ತಿಯವರನ್ನು ತಟ್ಟಿಲ್ಲ. ಆ ಕುರಿತು ಸಕಾರಾತ್ಮಕವಾಗಿ ಚಿಂತನೆಯನ್ನು ಮಾಡುವ ಗೋಜಿಗೇ ಅವರು ಹೋಗಿಲ್ಲ.

ಮಹಾರಾಷ್ಟ್ರದ ಜ್ಯೋತಿಬಾ ಫುಲೆ ಅನಾಥಾಲಯದಲ್ಲಿ ವಿಧವೆಯರ ಮಕ್ಕಳನ್ನು ರಕ್ಷಿಸುವುದಕ್ಕೆ ಅವಕಾಶ ಮಾಡಿಕೊಟ್ಟದ್ದು ಚಾರಿತ್ರಿಕ ದಾಖಲೆಯಾಗಿದೆ. ಕೇಶ ಮುಂಡನದಂಥ ಅಮಾನವೀಯ ಆಚರಣೆಗೆ ತಡೆಯೊಡ್ಡಿದ ಪ್ರಮುಖರಲ್ಲಿ ಅವರು ಒಬ್ಬರಾಗಿದ್ದಾರೆ. ಸ್ತ್ರೀ ಸಮಾನತೆ ಸ್ಥಾಪಿಸುವುದಕ್ಕೆ ಹೋರಾಡಿದ ಅವರು ಅವಳ ಮೇಲಿನ ವೃಥಾ ಆರೋಪಗಳನ್ನು ಕಿತ್ತುಹಾಕುವುದಕ್ಕೆ ಪ್ರಯತ್ನಿಸುತ್ತಾರೆ.

ಜೊತೆಗೇನೇ ಸ್ತ್ರೀ ಪರ ಚಿಂತನೆಯ ಯೋಜನೆಗಳಿಗೆ ವಿರೋಧ ತೋರಿದ ಪ್ರತಿಗಾಮಿಗಳೂ ಇದ್ದರು. ಹೆಣ್ಣನ್ನು ಹದ್ದುಬಸ್ತಿನಲ್ಲಿಡುವ ಸಂಪ್ರದಾಯವಾದಿಗಳೂ ಇದ್ದರು. ಈ ಸಂಪ್ರದಾಯವನ್ನು ಮುಂದುವರಿಸುವ ವಾದಕ್ಕೆ ದನಿಗೂಡಿಸಿದವರಲ್ಲಿ ಮಾಸ್ತಿಯೂ ಒಬ್ಬರಾಗಿದ್ದರು ಅನ್ನಿಸುತ್ತದೆ.

ಮಹಿಳಾ ಚಳವಳಿ, ಹೋರಾಟಗಳಿಂದಲೂ ಕರ್ನಾಟಕದ ಮಹಿಳೆಯರಲ್ಲಿ ಜಾಗೃತಿ ಉಂಟಾಯಿತು. ಪರಿಣಾಮವಾಗಿ ಲೇಖಕಿಯರು ತಮ್ಮ ವೈಚಾರಿಕ ಲೇಖನಗಳ ಮೂಲಕ ತಮ್ಮ ವಿಚಾರಗಳನ್ನು ಮಂಡಿಸಿ ಶೋಷಣೆಯ ತಡೆಗೆ ದನಿಗೂಡಿಸಿದರು. ಸ್ತ್ರೀ ಶಿಕ್ಷಣದ ಕುರಿತಂತೆಯೂ ಈ ಸಂದರ್ಭ ಪ್ರಧಾನವಾಗಿ ಚರ್ಚಿಸಲಾಯಿತು. ಈ ನಿಟ್ಟಿನಲ್ಲಿ ನಂಜನಗೂಡು ತಿರುಮಲಾಂಬ ಹಾಗೂ ಆರ್. ಕಲ್ಯಾಣಮ್ಮ ಪ್ರಮುಖರಾಗಿದ್ದಾರೆ. ಇಬ್ಬರು ಮಹಿಳೆಯರೂ ಪತ್ರಿಕೆಗಳನ್ನು

ಪ್ರಕಟಿಸಿ ವಿಚಾರ ಮಂಡನೆಗೆ ಅವಕಾಶ ಮಾಡಿಕೊಟ್ಟರು. ನಂಜನಗೂಡು ತಿರುಮಲಾಂಬಾ ೧೮೮೭ರಲ್ಲಿ ಜನಿಸಿ ೧೯೮೨ರಲ್ಲಿ ಕಾಲವಾದವರು. ತಮ್ಮ ಬದುಕಿನ ಕಾಲಾವಧಿಯಲ್ಲಿ ಮಹಿಳೆಯರ ಕುರಿತ ಅಪಾರ ಕಾಳಜಿಯನ್ನು ವ್ಯಕ್ತಪಡಿಸಿ ಮಹಿಳಾ ಸ್ಥಿತಿಗತಿಯ ಅಭಿವೃದ್ಧಿಗೆ ತೊಡಗಿಸಿಕೊಂಡಿದ್ದರು. ಕನ್ನಡದ ಲೇಖಕಿಯಾಗಿರುವ ಅವರು ಮಹಿಳೆಯರಿಗಾಗಿ ೧೯೧೬ರಲ್ಲಿ ಕರ್ನಾಟಕ ನಂದಿನಿ ಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿದರು. ತಿರುಮಲಾಂಬಾ ಅವರು ವಿಧವಾ ವಿವಾಹಕ್ಕೆ ಪ್ರತಿರೋಧ ತೋರುವಂಥ ಸಂಪ್ರದಾಯ ಮನಃಸ್ಥಿತಿಯನ್ನು ಹೊಂದಿದ್ದರೂ ವಿಧವೆಯರ ಹಲವಾರು ಸಮಸ್ಯೆಗಳನ್ನು ಸಂವೇದನೆಯ ನೆಲೆಯಿಂದಲೇ ಪ್ರಕಟಿಸಿದ್ದಾರೆ. ಮತ್ತು ಆ ಕುರಿತು ಸುಧಾರಣೆಯಾಗಬೇಕಾದ ಅಭಿಪ್ರಾಯ ಮಂಡಿಸುವ ಅವರು ಬಾಲ್ಯ ವಿವಾಹ ಪದ್ಧತಿಯನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಸಮಾಜ ವಿಧವೆಯನ್ನು ಕಾಣುವ ದೃಷ್ಟಿಕೋನವನ್ನು ಬದಲಾಯಿಸಬೇಕಾದ ಒತ್ತಾಸೆಯುಳ್ಳ ತಿರುಮಲಾಂಬಾ ವಿಧವೆಯರ ಕೇಶಮುಂಡನ ಮಾಡುವ ಪದ್ಧತಿಯನ್ನು ವಿರೋಧಿಸುತ್ತಾರೆ. ವಿವಾಹ ಸಂಬಂಧ ನಡೆಸುವಾಗ ಹೆಣ್ಣು ಹೆತ್ತವರು ಎದುರಿಸುವ ಬಹು ದೊಡ್ಡ ಪೀಡೆಯಾದ ವರದಕ್ಷಿಣೆಯನ್ನು ತಡೆಯಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತಾರೆ. ಈ ನಿಟ್ಟಿನ ವಿಚಾರಗಳನ್ನು ಮಂಡಿಸಿದ ಅವರ ಲೇಖನಗಳಲ್ಲಿ ೧೯೧೪ರಲ್ಲಿ ಪ್ರಕಟವಾದ ವಿದ್ಯುಲ್ಲತಾ, ೧೯೧೫ರಲ್ಲಿ ಪ್ರಕಟವಾದ ವೈರಾಗಿಣಿ, ೧೯೧೬ರಲ್ಲಿ ಬರೆದ ದಕ್ಷಕನ್ಯಾ, ಮಾತೃನಂದಿನಿ ಪ್ರಮುಖವಾಗಿವೆ.

ಇನ್ನೋರ್ವ ಪ್ರಮುಖ ಲೇಖಕಿ, ಸಮಾಜ ಸುಧಾರಣೆ ನಿಟ್ಟಿನಲ್ಲಿ ತೊಡಗಿದ ಆರ್.ಕಲ್ಯಾಣಮ್ಮ ಅವರೂ ತಿರುಮಲಾಂಬಾ ಅವರಂತೆ ೧೯೨೧ರಲ್ಲಿ ಸರಸ್ವತಿ ಪತ್ರಿಕೆಯನ್ನು ಆರಂಭಿಸಿದ್ದರು. ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಪತ್ರಿಕೆಗಳಲ್ಲಿ ಸ್ತ್ರೀ ಶಿಕ್ಷಣದ ಬಗೆಗೆ ಪ್ರತಿಪಾದಿಸುತ್ತಿದ್ದ[೨೦] ಅವರಿಗೆ ಬಾಲ್ಯ ವಿವಾಹ ಪದ್ಧತಿಯಿಂದ ಆಕೆ ಅದರಿಂದ ವಂಚಿತಳಾಗಬೇಕಾಗುತ್ತದೆ ಎಂಬ ಆತಂಕ ಕಾಡಿದೆ. ಅದನ್ನೂ ಲೇಖನದಲ್ಲಿ ಅವರು ಪ್ರತಿಪಾದಿಸಿದ್ದಾರೆ. ಅಲ್ಲದೆ ಬಾಲ್ಯ ವಿವಾಹದಿಂದ ಸಂಭವಿಸುವ ತೊಂದರೆಗಳನ್ನು ವೈಜ್ಞಾನಿಕ ಕಾರಣಗಳ ವಿವರಣೆಯನ್ನು ನೀಡುವ ಮೂಲಕ ತಡೆಯುವಂತೆ ತಿಳಿಹೇಳುತ್ತಾರೆ. ಇಲ್ಲಿ ಪ್ರೌಢಾವಸ್ಥೆಗೆ ತಲುಪುವ ಹೆಣ್ಣಿಗೇ ವಿವಾಹ ಮಾಡಬೇಕಾದ ಪದ್ಧತಿಯನ್ನು ಅವರು ಸಮರ್ಥಿಸಿದ ಲೇಖನ ಕನ್ನಡ ಕೋಗಿಲೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಬಹುಮಾನಗಳಿಸಿತ್ತು. ಬಹುಮಾನ ಬಂದಿರುವುದು ಅವರ ಬರವಣಿಗೆಯ ಶೈಲಿಗೆ ಅನ್ನುವುದು ನಿಜವಾದರೂ ಅವರ ಆ ಆಲೋಚನೆಯನ್ನು ಒಪ್ಪಿಕೊಂಡ ಕಾಲವನ್ನು, ಸಂದರ್ಭವನ್ನು ಗಮನಿಸಬೇಕಾಗುತ್ತದೆ. 'ಬಾಲ್ಯವಿವಾಹ ಖಂಡನೆ' ಲೇಖನದಲ್ಲಿ ಕಲ್ಯಾಣಮ್ಮ ಬಾಲ್ಯ ವಿವಾಹ ಪದ್ಧತಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಸ್ತ್ರೀಯರಿಗೆ ಶಿಕ್ಷಣ ನೀಡಬೇಕೆನ್ನುವುದರ ಕುರಿತು ಪ್ರಬಲವಾಗಿ ತಮ್ಮವಿಚಾರಗಳನ್ನು ಮಂಡಿಸಿದರು.

---

೨೦ ಕನ್ನಡ ಕೋಗಿಲೆ ಅಗಸ್ಟ್ ೧೯೦೭

ಸುಧಾರಣೆಯ ತೀವ್ರತೆಯಿಂದಾಗಿ ಅದರ ಅಗತ್ಯ ಹಾಗೂ ಮಹತ್ತರತೆಯನ್ನು ಅರಿತ ಸಹೃದಯರು ಸ್ತ್ರೀಯರ ಅಭಿವೃದ್ಧಿಗಾಗಿ ಶ್ರಮಿಸತೊಡಗಿದರು. ಮತ್ತೆ ಕೆಲವು ಸಂಪ್ರದಾಯಸ್ಥರು ಆತಂಕಕ್ಕೀಡಾದರು. ಸುಧಾರಣೆ ತೀವ್ರವಾಗುತ್ತಿದ್ದಂತೆಯೇ ಸಂಪ್ರದಾಯವಾದಿಗಳು ಸಂಪ್ರದಾಯ ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಸ್ತ್ರೀ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೂಡ ತೀವ್ರ ಚರ್ಚೆ ನಡೆದಿದೆ. ಆರಂಭದಲ್ಲಿ ಸ್ತ್ರೀ ಶಿಕ್ಷಣವನ್ನು ಒಪ್ಪಿಕೊಂಡರೂ ಅದು ಆಕೆ ಗೃಹಿಣಿಯಾಗಿ ಹೇಗೆ ಬಾಳಬೇಕೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯಷ್ಟೇ ಸೀಮಿತವಾಗಿ ಇರಬೇಕೆಂಬಂತೆ ಚರ್ಚೆ ನಡೆಯಿತು. ಕೊನೆಗೂ ಸ್ತ್ರೀ ಶಿಕ್ಷಣವನ್ನು ಗೃಹಿಣೀ ಧರ್ಮ ಅರಿಯುವುದಕ್ಕಷ್ಟೇ ಸೀಮಿತವಾಗುವುದನ್ನು ಒಪ್ಪಲಾಗಿದೆ. ಸ್ತ್ರೀ ಶಿಕ್ಷಣದ ಅನಿವಾರ್ಯತೆಯನ್ನು ಒಪ್ಪಿಕೊಂಡರೂ ಹೆಂಗಸು ಶಿಕ್ಷಣ ಬಲದಿಂದ ಗೃಹಪರಿಪಾಲನೆಯಲ್ಲಿ ದಕ್ಷಳಾದರೆ ಗಂಡಸು ಉದರ ನಿರ್ವಾಹ ಕಾರ್ಯದಲ್ಲಿ ನಿಪುಣನಾದರೆ ಒಬ್ಬರಲ್ಲಿ ಇನ್ನೊಬ್ಬರಿಗೆ ಗೌರವ ಹುಟ್ಟಿ ಪ್ರೇಮ ಬೆಳೆಯುವುದು ಎಂದು ತೀರ್ಮಾನಿಸಿರುವಲ್ಲಿ ಹೆಣ್ಣಿನ ಬದುಕು, ಗೃಹಪರಿಪಾಲನೆಗಷ್ಟೇ ಸೀಮಿತವಾಗಿಸಿದ್ದು ಸ್ಪಷ್ಟವಾಗುತ್ತದೆ. ಅಂದರೆ ಸ್ತ್ರೀ ಶಿಕ್ಷಣ ಆಕೆ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ, ಉದ್ಯೋಗ ಪಡೆಯುವುದಕ್ಕೆ ಅಲ್ಲ ಎಂದೂ ದೃಢಪಡಿಸಲಾಗಿದೆ. [೨೧]

ಬಾಲ್ಯವಿವಾಹವನ್ನು ವಿರೋಧಿಸಿಯೂ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ. ಈ ನಿಟ್ಟಿನಲ್ಲಿ ಅದನ್ನು ಸಮರ್ಥಿಸುವ ಪ್ರೌಢವಿವಾಹ ಪದ್ಧತಿ [೨೨] ಪ್ರಮುಖ ಲೇಖನವಾಗಿದೆ. ವಿಧವಾ ವಿವಾಹವನ್ನು ಸಮರ್ಥಿಸಿಯೂ ಲೇಖನಗಳು ಪ್ರಕಟವಾಗುತ್ತಿದ್ದವು. 'ಕನ್ಯಾವಿತಂತುಗಳ ವಿವಾಹವು' [೨೩] ಲೇಖನ ವಿಧವಾ ವಿವಾಹವನ್ನು ಸಮರ್ಥಿಸುತ್ತದೆ. ಅದು ಬಾಲ್ಯ ವಿವಾಹವನ್ನೇ ಕೇಂದ್ರೀಕರಿಸಿದ ಬರೆಹವಾಗಿದೆ. 'ಓರ್ವ ಹಿಂದೂವಿತಂತುವಿನ ಮನವಿ' [೨೪] ಯಂಥ ಲೇಖನ ವಿಧವೆಯರ ಕರುಣಾಜನಕ ಸ್ಥಿತಿಗತಿಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಆ ದಾರುಣ ಸ್ಥಿತಿಯಿಂದ ಮುಕ್ತಳಾಗುವುದಕ್ಕೆ ಜೀವವನ್ನೇ ತೆಗೆದುಕೊಳ್ಳುತ್ತದ್ದ ಸಂದರ್ಭವನ್ನೂ ಅವರು ಈ ಸಂದರ್ಭ ದಾಖಲಿಸಿದ್ದಾರೆ. ಅಲ್ಲದೆ ಅವರು ಪ್ರಾಚೀನ ಕಾಲದಲ್ಲಿದ್ದ ಪ್ರೌಢ ವಿವಾಹ ಪದ್ಧತಿಯನ್ನು ನೆನಪಿಗೆ ತರುತ್ತಾರೆ. ಈ ಹಿನ್ನೆಲೆಯಲ್ಲಿ ಬಾಲ್ಯವಿವಾಹ ದೂರವಾಗಿ ಪ್ರೌಢ ವಿವಾಹ ಪ್ರಚಲಿತಕ್ಕೆ ಬರಬೇಕೆಂಬ ವಿಚಾರವನ್ನು ಅವರು ಪ್ರಸ್ತುತ ಪಡಿಸಿದ್ದಾರೆ. ಇವೆಲ್ಲ ಆ ಕಾಲದ ಹೆಣ್ಣಿನ ಬದುಕು, ಸ್ಥಿತಿಗತಿಗಳನ್ನು ತೆರೆದಿಡುತ್ತದೆ. ಅಲ್ಲದೆ ಈ ಸಂಸ್ಕೃತಿಯ ಸುಧಾರಣೆಗೆ

---

೨೧ ಸ್ವದೇಶಾಭಿಮಾನಿ ಆಗಸ್ಟ್, ೧೯೦೯

೨೨ ಸ್ವದೇಶಾಭಿಮಾನಿ ಜುಲೈ ೧೯೧೦

೨೩ ಸ್ವದೇಶಾಭಿಮಾನಿ ಮೇ ೧೯೦೭

೨೪ ಭಾಷಾಂತರ: ರಾಘವೇಂದ್ರ ರಾವ್ ಬಾಳ, ಉದಯಭಾರತ, ಏಪ್ರಿಲ್ ೧೯೨೭.

ತೊಡಗಿಕೊಂಡ ವ್ಯಕ್ತಿಗಳೂ ಪರಿಚಿತರಾಗುತ್ತಾರೆ. ಅವರ ಕಳಕಳಿಯಿಂದಾಗಿ ಕೂಡ ಸ್ತ್ರೀ ಅಭಿವೃದ್ಧಿ ಕಡೆಗೆ ಚಿಂತಿಸುವಂತೆ ಮಾಡಿದ್ದು ಸತ್ಯ.

ಸುಧಾರಣಾವಾದಿಗಳ ಚಟುವಟಿಕೆಗಳನ್ನು ಕಂಡು ಸಂಪ್ರದಾಯವಾದಿಗಳಿಗೆ ಸ್ತ್ರೀ ಎಲ್ಲಿ ಕುಟುಂಬದ ಚೌಕಟ್ಟಿನಿಂದ ಹೊರಗೆ ಬಂದಾಳೋ ಎಂಬ ಆತಂಕ ಕಾಡಿದೆ. ಹೆಣ್ಣು ಹೊರಪ್ರಪಂಚಕ್ಕೆ ಕಾಲಿಟ್ಟು ಕುಟುಂಬ ಮರೆತರೆ ಸಮಾಜ ತನ್ನ ಸ್ಥಿಮಿತ ಕಳೆದುಕೊಳ್ಳುತ್ತದೆ. ಆಕೆಯ ಪಾವಿತ್ರ್ಯವೂ ಕುಂದುತ್ತದೆ ಎಂದೂ ಆಲೋಚಿಸಿದವರಿದ್ದಾರೆ. ಅಲ್ಲದೆ ಸುಧಾರಣಾವಾದಿಗಳ ಚಟುವಟಿಕೆ ಮರೆಯಾಗಿಸುವ ನಿಟ್ಟಿನಲ್ಲಿ ಸ್ತ್ರೀಯ ಪಾಲಿನ ಕರ್ತವ್ಯಗಳೇನು ಎಂಬುದನ್ನು ಹೇಳುವುದಕ್ಕೆ ಪ್ರಯತ್ನಿಸಿತು. ಶೀಲ, ಕುಟುಂಬ,ಪಾತಿವ್ರತ್ಯ, ತಾಯ್ತನಕ್ಕೆ ಅವಳು ಬದ್ಧಳಾಗಿರಬೇಕಾದದ್ದು ಅವಳ ಕರ್ತವ್ಯವಾಗಿಸಿತು. ಅಲ್ಲದೇ ಹೋದವಳು ಬದುಕು ಸವೆಸುವುದಕ್ಕೆ ಕಷ್ಟಪಡುತ್ತಾರೆ ಎಂಬುದನ್ನು ಸಾಬೀತು ಪಡಿಸಹೊರಟವರಿದ್ದಾರೆ.

ಈ ಸಂಪ್ರದಾಯವಾದಿಗಳಿಗೆ ದನಿಗೂಡಿಸಿ, ಅವರಿಗೆ ಪರವಾಗಿದ್ದು ಕತೆ ಬರೆದವರು ಮಾಸ್ತಿ ಅವರು. ತಮ್ಮ ಸಮಕಾಲೀನ ದಿನಗಳಲ್ಲಿ ನಡೆದ ಮಹಿಳಾ ಚಳವಳಿಗಳಿಗೆ ಅವರು ನೀಡಿದ ಪ್ರತಿಕ್ರಿಯೆಯೇ ವಿರುದ್ಧವಾದದ್ದು. ಇಂಥ ಚಳವಳಿ, ಸುಧಾರಣೆಯ ಕಾವಿನ ಸಂದರ್ಭವೂ ಮಾಸ್ತಿ ಅವರಿಗೆ ಸ್ತ್ರೀಯರ ಯಾವ ಸಮಸ್ಯೆಯೂ ಕಾಡಿಲ್ಲ. ಬಾಲ್ಯ ವಿವಾಹದ ಸಮಸ್ಯೆಯೂ ಅವರನ್ನು ತಟ್ಟಿಲ್ಲ. ವಿಧವೆಗೆ ಮರು ವಿವಾಹ ಮಾಡಬೇಕೆಂಬ ಆಲೋಚನೆಯ ಲವಲೇಶವೂ ತಟ್ಟಿಲ್ಲ. ಸನಾತನ ಧರ್ಮದ ನೆಲೆಗಟ್ಟಿನಲ್ಲಿಯೇ ತಮ್ಮ ವಿಚಾರಗಳನ್ನು ಮಂಡಿಸುವ ಅವರಲ್ಲಿ ವೈಚಾರಿಕತೆ ಕೆಲಸ ಮಾಡುವುದಿಲ್ಲ. ಆದುದರಿಂದಲೇ ಅವರು ಬಾಲ್ಯವಿವಾಹ, ಸತಿಪದ್ಧತಿ ತಡೆಯುವುದರ ಬದಲಾಗಿ ಅದನ್ನು ಬಾಳಿಸ ಹೊರಡುತ್ತಾರೆ. ಪರಿಣಾಮವಾಗಿಯೇ 'ಕೃಷ್ಣಮೂರ್ತಿ ಹೆಂಡತಿ' ಕತೆಯಲ್ಲಿ ತಾಯಿ, ಮಗಳ ಗಂಡ ತೀರಿ ಹೋದ ಸಂದರ್ಭದಲ್ಲಿ ಅವಳ ಬಾಳಿನ ಕುರಿತು ಥರಥರಿಸಿ ನಡುಗುವುದನ್ನು ತೋರಿಸುವ ಮೂಲಕ ಆ ಬದುಕಿನ ಘೋರತೆಯನ್ನು ಮಾಸ್ತಿ ಪರಿಚಯಿಸಿದ್ದಾರೆ.

ಕೃಷ್ಣ ಮೂರ್ತಿ ತೀರಿ ಹೋದ ಸಂದರ್ಭ ಅವನ ಸಾವಿಗಿಂತ ಹೆಚ್ಚಾಗಿ ಬದುಕಿರುವ ಅವನ ಹೆಂಡತಿಯ ಕುರಿತು ನಿರೂಪಕ 'ಆದರೆ ನಿನ್ನೆ ಶಾಸ್ತ್ರಿಗಳು ಈ ಹುಡುಗಿ ಅವನ ಹೆಂಡತಿಯೆಂದು ಹೇಳಿದಾಗಿನಿಂದ ಈ ವಿಷಯವನ್ನು ಯೋಚನೆ ಮಾಡುವುದಕ್ಕೆ ಮನಸ್ಸು ತಿಳಿದು ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಾಗಿದೆ. ಪ್ರತ್ಯಕ್ಷವಾದ ವಸ್ತುವನ್ನು ನೋಡುವಾಗ ತಿಳಿಯುವಂತೆ ಕಷ್ಟ ಊಹೆಯಿಂದ ತಿಳಿಯುವುದಿಲ್ಲ. ನಿನ್ನೆಯಿಂದ ಮನಸ್ಸಿನಲ್ಲಿ ಹೋಗಲಿ ಇವಳ ಗತಿಯೇ ಎಂದು ಎಲ್ಲೋ ನಿಲ್ಲದ ಕಳವಳ ಉಂಟಾಗಿದೆ' ಎಂದು ಆರಂಭದಲ್ಲಿ ಊಹಿಸಿರುವಲ್ಲಿಯೇ ವಿಧವೆ ಸಮಾಜದಲ್ಲಿ ದಿಕ್ಕಿಲ್ಲದೆ ಬಾಳುವ ಸಂದರ್ಭವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಲಾಗಿದೆ. ಆದುದರಿಂದಲೇ ಅಂಥ ಸಂದರ್ಭವನ್ನು ಆಕೆ

ಅನುಭವಿಸಬಾರದೆಂಬುದಕ್ಕಾಗಿಯೇ ಅವಳು ಜೀವವನ್ನೇ ತೆಗೆದುಕೊಳ್ಳುವಂತೆ ನಿರ್ಧರಿಸಬೇಕೆಂಬುದನ್ನು ಪ್ರೇರಿಸುವ ಕೆಲಸವನ್ನೂ ಮಾಸ್ತಿ ಪೂರೈಸಿದ್ದಾರೆ.

ಕೃಷ್ಣಮೂರ್ತಿ ಹಾಗೂ ಅವನ ಹೆಂಡತಿಯ ನಡುವಿರುವ ಅಗಾಧ ಪ್ರೀತಿಯ ಘಟ್ಟಕ್ಕಿಂತ ಆಕೆಯ ಹಿಂದಿನ ಭವಿಷ್ಯದ ಕುರಿತ ಕಳವಳವೇ ಇಲ್ಲಿ ಬಿಂಬಿತವಾಗಿದೆ. ಸಣ್ಣ ಪ್ರಾಯಕ್ಕೇನೆ ಗಂಡ ಕಳೆದುಕೊಂಡ ಹೆಣ್ಣು ದಿಕ್ಕಾಪಾಲಾಗುತ್ತಾಳೆ ಎಂಬ ಭಯ, ಆಕೆ ಎಲ್ಲಿ ಇತರರ ಕಣ್ಣಿಗೆ ಬಿದ್ದು ಬಳಸಲ್ಪಡುತ್ತಾಳೋ ಎಂಬ ಆತಂಕ, ಯಾವ್ಯಾವುದೋ ಮಾನಸಿಕ ಹಿಂಸೆ, ಬೇಡಿಕೆಗಳಿಗೆ ಒಳಗಾಗಬೇಕಾಗುತ್ತದೋ ಎಂಬ ಕಳವಳಗಳಿಂದಾಗಿ ಆಕೆ ಜೀವ ತೆಗೆದು ಕೊಳ್ಳಬೇಕಾಗುತ್ತದೆ.

ಸ್ತ್ರೀ ಬದುಕುವುದಕ್ಕೆ ಗಂಡನ ಅನಿವಾರ್ಯತೆ ಇದೆ ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡುವುದಲ್ಲದೆ ಮರುವಿವಾಹವನ್ನು ತಡೆಯುವ ಬಹು ಮುಖ್ಯ ನಿಲುವು ಇಲ್ಲಿ ಪ್ರತಿಪಾದಿತವಾಗಿದೆ.

'ಈಶ್ವರ ಚಂದ್ರ ವಿದ್ಯಾಸಾಗರರು ಧೈರ್ಯ ಮಾಡಿ ವಿಧವಾ ವಿವಾಹವನ್ನು ಮೊದಲು ಮಾಡಿದಂದಿನಿಂದ ಇದುವರೆಗೆ ಅನೇಕರಿಲ್ಲದಿದ್ದರೆ ಇರಲಿ, ಕಷ್ಟಕ್ಕೆ ಸಿಕ್ಕಿದ ಕೊಂಚ ಜನರಾದರೂ ಅದರಿಂದ ನಿವೃತ್ತರಾಗಿರುವರು. ವಾಡಿಕೆ ಹೆಚ್ಚಿದ ಹಾಗೆ ಇಂಥ ದುಃಖವೂ ಕಡಿಮೆಯಾಗುವುದು ಎಂದುಕೊಂಡೆವು. ಒಡನೆಯೇ ಇದೂ ಒಂದು ಹುಚ್ಚು. ಎಷ್ಟು ಮದುವೆ ಮಾಡಿಕೊಂಡರೆ ತಾನೇ ಹೋದವನ ಪ್ರಾಣ ಹಿಂದಕ್ಕೆ ಬರುವುದೇ, ಅವನ ಮೇಲೆ ಪ್ರೇಮದ ನೆನಪು ಮರೆಯುವುದೇ. ಈ ಹುಡುಗಿ ಇನ್ನು ಯಾರನ್ನೂ ಕೃಷ್ಣಮೂರ್ತಿಯನ್ನು ಕಾಣುತ್ತಿದ್ದ ಹಾಗೆ ಕಾಣಲಾರಳು' ಎಂಬಲ್ಲಿ ವಿಧವಾ ವಿವಾಹಕ್ಕೆ ಸ್ವತಃ ಮಾಸ್ತಿ ಸಮ್ಮತಿಸದಿರುವುದು ಸ್ಪಷ್ಟವಾಗುತ್ತದೆ. ಹೆಣ್ಣು ಗಂಡನನ್ನು ಮರೆಯಲಾರಳು ಹಾಗೂ ಮರೆಯಬಾರದ ಮೌಲ್ಯ ಕಟ್ಟಿಕೊಟ್ಟದ್ದನ್ನು ಹಾಗೆ ಹಾಗೆಯೇ ಒಪ್ಪಿಕೊಳ್ಳಬೇಕಾದದ್ದು ಧರ್ಮವಾದುದರಿಂದ ಅದನ್ನು ಕಾಯ್ದುಕೊಳ್ಳುವಂತೆ ಬೋಧಿಸುತ್ತಾರೆ. ಈ ವೇದನೆ ದಾಂಪತ್ಯದ ಕುರಿತ ಭಾವನಾತ್ಮಕ ಹಾಗೂ ಗೌರವಯುತ ನಂಬಿಕೆಯನ್ನು ಬಿಟ್ಟು ಕೊಡಲಾರದಂತೆ ಎಚ್ಚರಿಕೆ ವಹಿಸಿದ್ದಾಗುತ್ತದೆ. ವಿಧವಾ ವಿವಾಹದಂಥ ಕ್ರಿಯಾಚರಣೆಯ ಆರಂಭ ಹೊಸ ವ್ಯವಸ್ಥೆಯೊಂದು ಹುಟ್ಟು ಪಡೆಯುವುದಕ್ಕೆ ಕಾರಣವಾಗುತ್ತದೆ. ಅದು ಇಲ್ಲಿ ಒಪ್ಪಿತವಾಗುವುದಿಲ್ಲ. ಇಂಥ ಮೌಲ್ಯವೊಂದು ಇದ್ದಂತೆಯೇ ಇರಬೇಕೆಂದು ಹೇಳುವಲ್ಲಿ ದ್ವಂದ್ವವಿದೆ. ಒಂದೆಡೆ ಅವಳ ಕುರಿತ ಚಿಂತೆ, ಜೊತೆಗೇನೇ ಆಕೆಯ ಬದುಕಿಗೆ ನೆರವಾಗುವ ಇನ್ನೊಂದು ವಿವಾಹದ ಕುರಿತು ಅಸಮಾಧಾನವೂ ಇದೆ. ಈ ನಿಲುವು ಸ್ವಯಂಘೋಷಿತವೂ ಕೂಡ ಆಗಿರುತ್ತದೆ. ಇಲ್ಲಿ ಮನಃ ಪರಿವರ್ತನೆ ಮಾಡುವ ಪ್ರಗತಿಪರ ಜೀವನ ವ್ಯವಸ್ಥೆ ಅಳವಡಿಸುವ ಸುಧಾರಣೆಗೆ ಮಾಸ್ತಿ ಅವಕಾಶ ಕೊಡುವುದೇ ಇಲ್ಲ. ಈ ಇಲ್ಲಗಳೇ ಅವಳ ಬದುಕಿನ ಅಂತ್ಯಕ್ಕೆ ಕಾರಣವಾಗುವುದಾಗಿದೆ.

ಲಕ್ಷ್ಮೀ ಬಾಲ ವಿಧವೆಯಾಗಿರುವುದರಿಂದಲೇ ಆಕೆಗೆ ವಿಷಯ ತಿಳಿಸಲು ಇಲ್ಲಿ ಹೆದರುವುದಾಗಿದೆ. ಸಂಗೀತ ವಿದುಷಿಯೂ ಆಗಿರುವ ಅವಳು ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡು ಬದುಕು

ಸಾಗಿಸುವ, ದುಃಖ ಮರೆಯುವ ಶಕ್ತಿ ಇದ್ದರೂ ಆಕೆ ಅಧೀರಳಾಗುತ್ತಾಳೆ. ಮುಖ್ಯವಾಗಿ ತಾಯಿ ಹಾಗೂ ಗಂಡನ ಸ್ನೇಹಿತರ ಮಾತುಕತೆಯೂ ಆಕೆಯನ್ನು ಇನ್ನಷ್ಟು ಅಧೀರಳನ್ನಾಗಿಸಿ ಬಿಡುತ್ತದೆ. ಅವರಾಡುವ ಮಾತು ಅವಳ ವ್ಯಕ್ತಿತ್ವವನ್ನು ಕುಗ್ಗಿಸುತ್ತದೆ. ಅಲ್ಲದೆ ವಿಧವೆಯ ಬದುಕಿನ ಭೀಕರತೆಯನ್ನು ಕುರಿತಂತೆ ಚರ್ಚಿಸುವುದನ್ನು ಕೇಳಿಯೂ ಅವಳು ಇನ್ನಷ್ಟು ಅಧೀರಳಾಗುತ್ತಾಳೆ.

ಗಂಡ ಪತ್ರ ಬರೆಯಲಿಲ್ಲ ಎಂಬ ಒಂದೇ ಕಾರಣಕ್ಕೇ ಕುಂಕುಮ ಹಚ್ಚುವುದನ್ನು ತೊರೆದದ್ದು ಹಾಗೂ ತಲೆಬಾಚಿ, ಹೆರಳು ಹಾಕಿಕೊಳ್ಳುವ ರೀತಿ ಮತ್ತೈದೆಯ ಚಿಹ್ನೆಗಳಿಗೆ, ಅಲಂಕಾರಕ್ಕೆ ಆಕೆ ಪ್ರಾಧಾನ್ಯ ಕೊಡುವ ಮೂಲಕ ಅದನ್ನು ವೈಭವೀಕರಿಸುವುದನ್ನು ಕಾಣುತ್ತೇವೆ. 'ಹುಡುಗಿ ಏನು ಮಾಡಿದರೂ ಮಾಡಿಬಿಟ್ಟಳು. ಅವಳು ಏನಾದರೂ ಆಗಿ ಹೋದರೆ, ಅಷ್ಟೇ ನನಗೆ ಯಾರು ಗತಿ. ನಾನು ಕೇಳುವವರಿಲ್ಲದೇ ಹೋಗುತ್ತೇನೆ. ಹ್ಯಾಗಾದರೂ ಅವಳು ಉಸಿರೊಂದಿಗಿದ್ದರೆ ಸಾಕು. ಗಂಡೂ ಅದೇ, ಹೆಣ್ಣೂ ಅದುವೇ. ಇಷ್ಟು ಮಟ್ಟಿಗೆ ನಡೆಸಿಕೊಡಿ. ಅವರು ತೀರಿ ಹೋದರೆಂದು ತಿಳಿದರೆ ಹುಡುಗಿ ಏನನ್ನಾದರೂ ಮಾಡಿಕೊಳ್ಳುವುದೇ ನಿಜ' ಎಂದು ಅಳಿಯನ ಸಾವನ್ನೇ ಮುಚ್ಚಿಟ್ಟು ಮಗಳನ್ನು ಬದುಕಿಸಿಕೊಳ್ಳುವಂತೆ ಯೋಚಿಸುವುದನ್ನೇ ತಿಳಿದು ಮಗಳು ಅಧೀರಳಾಗುತ್ತಾಳೆ. ಇದರಿಂದಾಗಿ ಆಕೆ ಬಾವಿಗೆ ಬೀಳುವ ಮೂಲಕ ಸಮಾಜದ ಕೈಗೆ ತಾನು ಸಿಗದಂತೆ ದೂರವಾಗುವುದು ಅಂಥ ಬದುಕಿಗೆ ಸಿಗದೇ ಮುಕ್ತಿ ಪಡೆಯುವುದೇ ಒಳಿತೆಂಬುದನ್ನು ಬೋಧಿಸುತ್ತದೆ. ಸುಧಾರಣೆ, ಚಳವಳಿಗಳ ವಿಚಾರದಂತೆ ಬದುಕು ಸಾಗಿಸುವುದು ಸಹ್ಯವಲ್ಲ ಎಂಬುದನ್ನೇ ಮಾಸ್ತಿ ಪ್ರತಿಪಾದಿಸುವುದು ಇಲ್ಲಿ ಸ್ಪಷ್ಟವಾಗುತ್ತದೆ. ಅಂದರೆ ಸುಧಾರಣಾವಾದಿ ಧೋರಣೆಯ ಕೆಲಸ ಕಾರ್ಯಗಳು ಪ್ರಾರಂಭವಾದ ಸಂದರ್ಭದಲ್ಲಿ ಬಾಲ್ಯ ವಿವಾಹ ಹಾಗೂ ಬಾಲ ವಿದವೆಯ ಆತ್ಮಾಹುತಿಯನ್ನು ಸಮರ್ಥಿಸುವ ಕೃಷ್ಣಮೂರ್ತಿಯ ಹೆಂಡತಿ ಕತೆ ರಚಿಸುವ ಮೂಲಕ ದೇಶಾದ್ಯಂತ ನಡೆಯುತ್ತಿದ್ದ ಸ್ತ್ರೀ ಸುಧಾರಣಾ ಚಳವಳಿ ಸಂದರ್ಭಕ್ಕೆ ಮಾಸ್ತಿ ಅವರು ತಮ್ಮ ವಿರೋಧ ನಿಲುವನ್ನು ಮಂಡಿಸಿದ್ದಾರೆ ಎನ್ನಬಹುದು.

ಸನಾತನ ವೈದಿಕ ಪರಂಪರೆಯ ಪ್ರಕಾರ ನೈತಿಕತೆ ಎನ್ನುವುದು ಪುರುಷ ಸ್ತ್ರೀಯ ಮೇಲೆ ಹೇರಿದ ಒಂದು 'ಮೌಲ್ಯ'. ಅವನ್ನು ಮೀರಿದವರು ಶೀಲಗೆಟ್ಟವರಾಗುತ್ತಾರೆ. ಸಮಾಜವೊಂದು ಅದನ್ನು ಅನುಸರಿಸಬೇಕಾದರೆ ಆಳುವ ಅರಸಿ ಕೂಡ ಹಾಗೆಯೇ ಬದುಕಬೇಕು. ಅದನ್ನು ಮಾಸ್ತಿ ಅವರೂ ಒಪ್ಪಿಕೊಂಡಿದ್ದಾರೆ. ಅಂಥ ಮೌಲ್ಯವೊಂದನ್ನು ಪ್ರತಿಪಾದಿಸುವ ನೆಲೆಯಲ್ಲಿ ಐತಿಹಾಸಿಕ ವ್ಯಕ್ತಿ 'ನಿಜಗಲ್ಲಿನ ರಾಣಿ' ಕತೆಯ ರಾಣಿ ಲಕುಮವ್ವೆ ಮಾಡಿಕೊಳ್ಳುವ ಆತ್ಮಾಹುತಿ ಇನ್ನೊಂದು ತರನಾದುದಾಗಿದೆ. ಆಕೆಯ ಬದುಕು ಇತಿಹಾಸಕ್ಕೆ ಸಂಬಂಧಿಸಿದ್ದು. ಇತಿಹಾಸವೊಂದು ತೆರೆದಿಡುವುದು ಕಾಲದ ಬದುಕಿನ ಪ್ರತಿಬಿಂಬವನ್ನು. ಆ ಕಾಲದಲ್ಲಿ ನಂಬಿದ್ದ ಬದುಕಿನ ಮೌಲ್ಯವನ್ನು ಒಪ್ಪಿಕೊಳ್ಳುವ ಮತ್ತು ಪಾಲಿಸುವ ಧ್ಯೇಯ ಅವರಿಗೆ ಮುಖ್ಯವಾಗಿದೆ.

ಕ್ಷಾತ್ರ ತೇಜಸ್ಸಿನ ರಾಮರಸನ ಪತ್ನಿಯಾಗಿ ಬರುವ ಲಕುಮವ್ವೆ ಗಿರಿಜವ್ವೆಯರ ಬದುಕು, ಬಾಳುವಿಕೆ ಇತಿಹಾಸದ ದೃಷ್ಟಿಯಿಂದ ನೋಡಿದರೆ ಅತ್ಯಂತ ಮಹತ್ತರವಾದುದಾಗಿದೆ. ಹೆಣ್ತನದ ಎಲ್ಲ ಗುಣಗಳನ್ನು ಪರಿಚಯಿಸುವ ಮೂಲಕ ನಾಡಿನ ಪ್ರೇಮವನ್ನು ಆ ಮೂಲಕ ರಾಷ್ಟ್ರ ಪ್ರೇಮವನ್ನು ಪ್ರಚುರಪಡಿಸುವುದೂ ಇಲ್ಲಿನ ಉದ್ದೇಶವಾಗಿದೆ. ಆದರೆ ಅದಕ್ಕೂ ಮುಖ್ಯವಾಗಿ ಮಾಸ್ತಿ ಪ್ರತಿಪಾದಕತೆಯ ಅಂಗವಾದ ಕಾಲಕ್ಕೆ ಮಹತ್ವ ಕೊಡುವುದೇ ಇಲ್ಲಿನ ಧ್ಯೇಯವಾಗಿದೆ. ಅದನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರೇರಣೆ ನೀಡುವಂತೆ ಐತಿಹಾಸಿಕ ವ್ಯಕ್ತಿಗಳನ್ನು ಕೂಡ ಇಲ್ಲಿ ಬಳಸಿಕೊಳ್ಳಲಾಗಿದೆ. ನಿಜಗಲ್ಲಿನ ರಾಣಿ ಲಕುಮವ್ವೆ ಹಾಗೂ ಪೆನುಕೊಂಡೆಯ ಕೃಷ್ಣಮೂರ್ತಿಯ ಲಕ್ಷ್ಮಮ್ಮಾಂಬೆಯರು ಈ ನಿಟ್ಟಿನಲ್ಲಿ ಬಹಳ ಕಾಳಜಿ ಉಳ್ಳವರಾಗುತ್ತಾರೆ.

ನಿಜಗಲ್ಲಿನ ರಾಣಿಯ ಗಿರಿಜವ್ವೆ ಲಕುಮವ್ವೆಯರೂ ಪಾರಂಪರಿಕ ಬದುಕಿನ ಚೌಕಟ್ಟನ್ನು ಮೀರಬಯಸದವರು. ಗಂಡನ ಕುರಿತು ಅವರು ತೋರುವ ಅತಿಯಾದ ಗೌರವ ಭಕ್ತಿ ಪ್ರದರ್ಶನ ಕೂಡ ಇಲ್ಲಿ ಗಮನಾರ್ಹವಾದುದಾಗುತ್ತದೆ. ನಿಜಗಲ್ಲಿನ ರಾಮರಸ ನಾಯಕನನ್ನು ಮರಾಟೆಯವರಿಂದ ಕೊಲ್ಲಿಸಿರುವಲ್ಲಿ ಲಕುಮವ್ವೆಯ ತಮ್ಮ ಕಸ್ತೂರಿಯ ಕುತಂತ್ರವಿದ್ದುದು ತನ್ನ ಅಧಿಕಾರ ದಾಹ. ತನ್ನ ಸ್ವಾರ್ಥ, ಲಾಭದ ದೃಷ್ಟಿಯಿಂದಲೇ ನಾಡಿನ ಕುರಿತು ಚಿಂತನೆಯನ್ನೇ ಮರೆತು ಬಿಡುವಷ್ಟು ದ್ರೋಹಿಯಾಗುತ್ತಾನೆ. ದಳಪತಿ ಗಿರಿಜವ್ವೆ ಹಾಗೂ ಲಕುಮವ್ವೆಯನ್ನು ಒಟ್ಟಾಗಿಯೂ ಕರೆಯಿಸಿ ನಾಯಕನನ್ನಾಗಿ ಮಾಡುವ ಕುರಿತು ಚರ್ಚೆ ನಡೆಸುತ್ತಾನೆ. ಈ ಚರ್ಚೆ ಅವರ ಆಶೋತ್ತರಗಳ ಈಡೇರಿಕೆಗೆ ಗಿರಿಜವ್ವೆ ತನ್ನ ವಶವಾಗಬೇಕು ಎಂದು ಕೇಳಿಕೊಳ್ಳುವುದು ಮತ್ತು ಅದಕ್ಕೆ ಒಪ್ಪುವಂತೆ ಮಾಡಿಸುವ ದುರುದ್ದೇಶದ ಸಂಚಿನ ಉದ್ದೇಶದಿಂದಲೇ ಭಾವನನ್ನು ಕೊಂದು ನಾಡನ್ನು ಮರಾಠರ ಕೈಗೊಪ್ಪಿಸುತ್ತಾನೆ. 'ನೀವು ನನ್ನ ಮೇಲೆ ಮಾಡಿರುವ ಅನುಗ್ರಹಕ್ಕೆ ಎಂದು ಒಪ್ಪಿಕೊಳ್ಳುವುದು ಉಪಾಯದಿಂದಲೇ. ಈಗಾಗಲೇ ಮರಾಠರ ವಶವಾಗಿರುವ ನಾಡಿನಲ್ಲಿ ಬದುಕುತ್ತಿರುವಾಗ ಅವರಿಗೆ ಶರಣಾಗಿ ಬಾಳಲಾರದ ಸ್ವಾಭಿಮಾನ ತೋರುವುದು ನಾಡಿನ ಮೇಲಿನ ಅಭಿಮಾನದಿಂದ. ತನ್ನನ್ನು ಬಯಸಿದ ದಳಪತಿಯ ನಿರ್ಧಾರವನ್ನು ಒಪ್ಪಿಕೊಳ್ಳಬೇಕು. ಇಲ್ಲವೇ ಜೀವ ತೆಗೆದುಕೊಳ್ಳಬೇಕು. ನಾಡಿಗೆ ದ್ರೋಹ ಬಗೆದ ದಳಪತಿಯನ್ನು ಸೇರುವುದು ಪರಂಪರೆಗೆ ಹೇಳಿದ್ದಲ್ಲ. ಗಂಡನನ್ನು ಕಳೆದುಕೊಂಡಾಗ ಇನ್ನೊಬ್ಬನನ್ನು ಸೇರಬೇಕಾದ ಮೌಲ್ಯಗಳನ್ನು ಪಾಲಿಸಬೇಕಾದದ್ದು ಧರ್ಮ, ದ್ರೋಹ ಮಾಡಿದ ದಳಪತಿಯ ಕೈಗೆ ತಾನು, ತನ್ನ ದೇಹ ಒಪ್ಪಿಸದ ಹಟ ಸ್ಥಾಪಿಸುವ ನಿಟ್ಟಿನಲ್ಲಿಯೇ ಅವಳು ಹೋರಾಡುವ ನಾಟಕವನ್ನು ಮಾಡುತ್ತಾಳೆ. ಯಾರಿಗೂ ಸಂದೇಹವೇ ಬಾರದ ರೀತಿಯಲ್ಲಿ ಆಕೆ ಸಿದ್ಧಗೊಳ್ಳುವ ಮೂಲಕ ಕುತಂತ್ರಕ್ಕೆ ತಾನು ಉತ್ತರ ಕೊಡುತ್ತಾಳೆ.

ಗಂಡ ಸತ್ತ ಸೂತಕ ಕಳೆಯುವ ಮೊದಲೇ ಇನ್ನೊಬ್ಬನೊಂದಿಗೆ ವಿವಾಹಕ್ಕೆ ಒಪ್ಪಿದ ಆಘಾತಕಾರಿ ವಿಷಯ ಕೇಳಿದ್ದರಿಂದ ಊರಿನಲ್ಲಿ ಕೋಲಾಹಲ ಉಂಟಾಗುತ್ತದೆ. ಅದು ತನ್ನ ಮನಸ್ಸಿಗೆ ಸಹ್ಯವಾಗದ್ದನ್ನು ಸಹಿಸಿಕೊಂಡು ಇರಲಾಗದ ಸ್ಥಿತಿಗೆ ತಲುಪುವುದು ಅವಳು ಒಪ್ಪಿಕೊಂಡ ಮೌಲ್ಯದ ಮುಂದುವರಿಕೆಯಾಗಿದೆ. ಆದರೆ ದಳಪತಿಯ ಕೋರಿಕೆಯನ್ನು ಒಪ್ಪದೇ ಹೋದರೆ ಅದನ್ನು ತಿರಸ್ಕರಿಸಿದಂತಾಗುತ್ತದೆ. ಆ ತಿರಸ್ಕಾರ ತಮ್ಮನ್ನು ಮತ್ತೆ ಇಕ್ಕಟ್ಟಿಗೆ ಸಿಲುಕಿಸುತ್ತದೆ. ಬಲಾತ್ಕಾರವಾಗಿಯಾದರೂ ತಮ್ಮನ್ನು ಪಡೆದುಕೊಳ್ಳಬಹುದಾದ ಸಾಧ್ಯತೆಯನ್ನು ಇಲ್ಲಿ ದೂರ ಮಾಡುವುದು ಮೌಲ್ಯವನ್ನು ಬಾಳಿಸುವ ಉದ್ದೇಶದಿಂದ ಮುಖ್ಯವಾಗಿದೆ. ಶೀಲ, ಮಾನದ ಕುರಿತು ಭಾವನಾತ್ಮಕ ಪರಂಪರೆಯ ಮೌಲ್ಯವನ್ನು ಹೆಣ್ಣೇ ಒಪ್ಪಿಕೊಳ್ಳಬೇಕಾದದ್ದು ಕೂಡ ಒಂದು ಮೌಲ್ಯವೇ ಆಗಿ ಇಲ್ಲಿ ಪ್ರಾಧಾನ್ಯ ಪಡೆದಿರುವುದನ್ನು ಈ ಮೂಲಕ ಅವರು ತೋರಿಸಿಕೊಡುತ್ತಾರೆ. ಇದು ನನ್ನ ಹಣೆಯಲ್ಲಿ ಬರೆದಿತ್ತು. ಇಂದಿನಿಂದ ಈ ಮಗು ನನ್ನದಲ್ಲ, 'ನನಗೆ ಒಳ್ಳೆಯದಾಗುವಂತೆ ಹರಸಿ' ಎಂದು ಕೋರುವುದು 'ನಿನ್ನ ಬುದ್ಧಿಯೆಲ್ಲ ಎಲ್ಲಿ ಹೋಯಿತು. ಅವನು ಕೇಳಿದರೆ ಬೇಡವೆನ್ನುವುದಕ್ಕೆ ನಿನಗೆ ತಿಳಿಯಲಿಲ್ಲವೇ ಈಗಲೂ ಇಷ್ಟವಿಲ್ಲದಿದ್ದರೆ ಬೇಡವೆನ್ನು' ಎಂದು ಅಕ್ಕ ಲಕುಮವ್ವೆ ಹೇಳಿದಾಗ ಗಿರಿಜವ್ವೆ 'ಹೇಳಿ ಆಯಿತು ಇನ್ನು ಆ ಮಾತು ಬೇಡಿ. ಇನ್ನು ನನ್ನ ದಾರಿ ಬೇರೆ' ಎಂದು ಹೇಳಿ, ಕಸ್ತೂರಿಗೆಯೊಂದಿಗೆ, 'ನೀನು ಈ ಕಡೆಯಿಂದ ಬಾ. ನಾನು ಆ ಕಡೆಯಿಂದ ಬರುತ್ತೇನೆ. ಕೊತ್ತಲದ ಬಳಿ ಇಬ್ಬರೂ ಸೇರೋಣ' ಎಂದು ಮೆರವಣಿಗೆಯ ಸಿದ್ಧತೆ ಮಾಡಿಸುತ್ತಾಳೆ. ಈ ಸಿದ್ಧತೆಯನ್ನು ಕುತಂತ್ರದ ಬುದ್ಧಿ ತೋರಿಸುವ ಪರಕೀಯರಿಗೆ ತಾನು ಸಿಗಲಾರದಂತೆ ಮಾಡಿಕೊಳ್ಳಲು ಹೊರಟಿರುವ ಉದ್ದೇಶ ತಿಳಿಯಬಾರದೆಂಬ ಜಾಗರೂಕತೆಯಿಂದ ಮಾಡಿದ್ದಾಳೆ. ಕೊತ್ತಳದ ತುದಿಗೆ ಬಂದು ತಮ್ಮನಿಗೆ ಆರತಿ ಎತ್ತಿ 'ಕಸ್ತೂರಿ, ನಿನ್ನಿಂದ ನನಗೆ ಈ ಸರದಿ ಬಂತು. ನಿನ್ನನ್ನು ನಾನು ಮರೆಯಬಾರದು. ನಿನಗೂ ಗದ್ದಿಗೆಯ ಮೇಲೆ ಆಸೆ ' ಎಂದು ಹೇಳಿ, ಕರ್ಕಶವಾದ ಧ್ವನಿಯಿಂದ 'ನನ್ನ ನಿನ್ನಿಂದ ರಾಮರಸನ ಮನೆ ಕೆಟ್ಟಿತು. ನಮ್ಮಿಂದ ಹೆತ್ತವರಿಗೆ ಅಪಕೀರ್ತಿ ಬಂತು. ಕಸ್ತೂರಿ ನಾವು ಬದುಕಬಾರದು' ಎಂದು ಕೂಗಿ ಅವನನ್ನು ಬಿಗಿಯಾಗಿ ಅಪ್ಪಿಕೊಂಡು ಕೊತ್ತಳದಿಂದ ಗೋಡೆಯ ಹೊರಕ್ಕೆ ಧುಮುಕಿದಳು.

ಲಕುಮವ್ವೆಯಾಡುವ ಈ ಮಾತುಗಳು ಹಾಗೂ ತೆಗೆದುಕೊಂಡ ನಿರ್ಧಾರಗಳೇ ಅವಳ ಸಮಗ್ರ ಧೋರಣೆಯನ್ನು ಮುಂದಿಡುತ್ತವೆ. ಒಂದು ನಾಡಿನ ರಾಣಿಯರೂ ಕೂಡ ಒಂದು ಸಮಾಜದ ಸಿದ್ಧ ಮೌಲ್ಯವನ್ನು ಪ್ರತಿನಿಧಿಸಿ ಅದನ್ನು ಪಾಲಿಸಬೇಕೆನ್ನುವ ನೀತಿ ಹೇಳುತ್ತಾಳೆ. ಅಂದರೆ ಸಾಂಪ್ರದಾಯಕ ನಂಜಿಕೆ ಉಳಿಸುವಲ್ಲಿ ಆಕೆ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ರಾಣಿಯರ ಬಾಳ್ವೆಯ ರೀತಿ ನೀತಿಗಳೇ ಪ್ರಜೆಗಳೂ ಅನುಸರಿಸುವ ರೀತಿಯಲ್ಲಿ ಯಥಾ ರಾಜ ತಥಾ ಪ್ರಜಾ ಎಂಬಂತೆ ಬದುಕುವವರಾಗುತ್ತಾರೆ. ಅವರೇ ತಪ್ಪಿ ನಡೆದರೆ ಪ್ರಜೆಗಳು ಮುಂದೆ ಹಿಡಿಯಬಹುದಾದ

ಹಾದಿಯ ಕುರಿತ ಕಾಳಜಿ ಅಂಥ ದುರಂತ ವಾತಾವರಣ ಬದಲಾಗಬಾರದ ಧೋರಣೆ ಈ ಸಾವಿನ ಹಿಂದಿದೆ. ತಾನೇ ಸಾವನ್ನು ತಂದುಕೊಳ್ಳುವ ಮೂಲಕ ಅಂಥ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವುದು ಮತ್ತು ಅದನ್ನು ಒಪ್ಪಿಕೊಳ್ಳಬಾರದ ಸಂದೇಶ ಸಾರಿದೆ. ವಿರೋಧಿಸುವ ಧೈರ್ಯ, ಸಂದರ್ಭ ಅಲ್ಲಿಲ್ಲದೇ ಇದ್ದುದು ಸಾವನ್ನು ತರಿಸಿಕೊಳ್ಳುತ್ತವೆ. ಅಲ್ಲದೆ ಹಾಗೆ ಬಾಳಿದರೆ ಅದು ಸಂಸ್ಕೃತಿಗೆ ದ್ರೋಹ ಬಗೆದಂತಾಗುತ್ತದಾದ್ದರಿಂದ ರಾಣಿಯ ನಿರ್ಧಾರವನ್ನು ಗೌರವಕ್ಕೆ ಪಕ್ಕಾಗುವಂತೆ ಮಾಡಲಾಗಿದೆ. ಈ ಸಾವು ಅವರು ಕುಟಿಲತೆಗೆ ಸಿಕ್ಕದೇ ಗೆಲ್ಲುವುದನ್ನು ತೋರಿಸಿಕೊಡುತ್ತದೆ. ಮತ್ತು ಅಂಥ ಕುತಂತ್ರಕ್ಕೆ ಒಳಗಾಗಬಾರದು ಎಂಬ ಮೌಲ್ಯವೊಂದನ್ನು ಸ್ತ್ರೀಯಿಂದಲೇ ಪ್ರತಿಷ್ಠಾಪಿಸುತ್ತದೆ.

'ಪೆನುಕೊಂಡೆಯ ಕೃಷ್ಣಮೂರ್ತಿ' ಕತೆಯ ಅತ್ತೆ ಸೊಸೆಯರು ಕೂಡ ಮುಸಲ್ಮಾನರ ಆಕ್ರಮಣ ಆದ ಸಂದರ್ಭ ಅವರ ಕೈಗೆ ಸಿಗದಂತೆ ಮರೆಯಾಗುತ್ತಾರೆ. ಅವರು ಜೀವ ಕಳೆದುಕೊಂಡದ್ದನ್ನು ಅನೇಕ ವರ್ಷಗಳ ನಂತರ ಸಿಕ್ಕ ಮೂಳೆ ಹಾಗೂ ಜೊತೆಗಿದ್ದ ಕೃಷ್ಣ ವಿಗ್ರಹದ ಮೂಲಕ ಗುರುತು ಹಿಡಿಯಲಾಗುತ್ತದೆ. ಅಂದರೆ ಇಲ್ಲಿ ಪೆನುಕೊಂಡೆಯ ಮೇಲೆ ಬಿಜಾಪುರದ ಮುಸಲ್ಮಾನರು ದಂಡೆತ್ತಿ ಬರುವ ಸಂದರ್ಭದಲ್ಲಿ ಶೀಲ ರಕ್ಷಣೆಗಾಗಿ ಗುಹೆಯ ಮಾರ್ಗ ಅನುಸರಿಸಿ ಜೀವ ಕಳೆದುಕೊಂಡದ್ದು ಜೀವಕ್ಕಿಂತ ಶೀಲಕ್ಕೆ ಹೆಚ್ಚು ಮಹತ್ವ ಕೊಡಬೇಕಾದ ಮೌಲ್ಯವನ್ನು ಸ್ತ್ರೀಯರಿಂದಲೇ ಪ್ರತಿಪಾದಿಸಿ ಆದರೊಳಗೇ ಬದ್ಧರಾಗಿ ಬಾಳಿಸುವಂತೆ ತಿಳಿ ಹೇಳುವುದಕ್ಕಾಗಿಯೇ ಈ ಮಹಿಳೆಯರ ನಿರ್ಧಾರಗಳನ್ನು ವೈಭವೀಕರಿಸಿದೆ.

ಆತ್ಮಾಹುತಿ ಮಾಡಿಕೊಳ್ಳುವ ಇಲ್ಲಿನ ಸ್ತ್ರೀಯರು ಪ್ರಧಾನವಾಗಿ ಬೆಲೆ ಕೊಡುವುದು ಮಾನ ಹಾಗೂ ಶೀಲಕ್ಕೆ. ಈ ಶೀಲದ ಕುರಿತು ಭಾವನಾತ್ಮಕ ಹಾಗೂ ಅತಿಯಾದ ನಂಬಿಕೆಯ, ನಿಷ್ಠೆಯ ಬದುಕೇ ಹಾಗೇ ಸಾವಿನ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ. ಆತ್ಮಾಹುತಿ ತಮ್ಮತನ ಈಡೇರಿಕೆಯ ಹತಾಶೆಗಿಂತ ಸಮಾಜವನ್ನು ಹಾಗೂ ಇತರರ ಅಭಿಪ್ರಾಯಗಳಿಂದ ನೆಲೆನಿಂತ ಪರಿಸ್ಥಿತಿಗೆ ಗೌರವ ಕೊಡುವುದಕ್ಕೆ ಶರಣಾಗಿ ನಡೆಯುವುದಾಗಿದೆ. ಹಾಗಿಲ್ಲದೇ ತನ್ನತನ ಮೀರಿ ತಾನು ಗೌರವಿಸುವ ಕಾಲವನ್ನು ಕೆಡಿಸಬರುವ ಶಕ್ತಿಯನ್ನು ಪ್ರೋತ್ಸಾಹಿಸುವುದೂ ಪಾಪವೂ ಆಗುತ್ತದೆ. ಈ ಪಾಪ ಕ್ಷಮ್ಯವಲ್ಲದೇ ಹೋದುದರಿಂದ ಆತ್ಮಾಹುತಿಗೆ ಶರಣಾಗಬೇಕಾದದ್ದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆಯನ್ನು ಪತ್ನಿ, ಚಿಕ್ಕವ್ವ ಮುತ್ತೈದೆಯರಾಗಿಯೇ ಸಾವನ್ನು ಕಂಡುಕೊಳ್ಳುವ ಮೂಲಕ ಸಾಧಿಸುತ್ತಾರೆ. ಆದರೆ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ ಗಂಡನೊಂದಿಗೆ ಇದ್ದು ಅವರನ್ನು ಅರ್ಥ ಮಾಡಿಕೊಳ್ಳದೇ ಹೋದ ಸಂದರ್ಭದಲ್ಲಿ ಅವರು ತೊರೆದು ಹೋದ ನಂತರ ಯಾತನೆಗಳ ನಡುವೆಯೂ ಬದುಕಿದ್ದ ಜೀವ ಆಚಾರ್ಯರಿಗೆ ಬಂದಿದ್ದ ಜ್ವರ ಅವರನ್ನು ಬಿಡದೇ ಹೋದಾಗ ಅವರ ಸಾವನ್ನು ತಾನು

ಅವಾಹಿಸಿಕೊಳ್ಳುತ್ತಾರೆ. ಆಚಾರ್ಯರ ಪತ್ನಿ ಸ್ವೀಕರಿಸುವ ಈ ಸಾವಿನ ಮೂಲಕ ಗಂಡನನ್ನು ಉಳಿಸುತ್ತಾಳೆ. ಅಲ್ಲದೇ ಹೋದರೆ ಆಕೆ ವಿಧವೆ ಆಗುತ್ತಾಳೆ. ಅದು ಯಾವ ಹೆಣ್ಣು ಕೂಡ ಬಯಸದ ಬದುಕು. ಅದನ್ನು ತಪ್ಪಿಸಿಕೊಳ್ಳುವ ಮೂಲಕ ಮುತ್ತೈದೆ ತನದ ಸಾವನ್ನು ತಂದುಕೊಂಡು ಆ ಮೌಲ್ಯವನ್ನು ಪ್ರತಿಷ್ಠಾಪಿಸುತ್ತಾಳೆ. ಮುತ್ತೈದೆತನಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಅತಿಯಾದ ಗೌರವವಿದೆ. ಅದನ್ನು ಉಳಿಸಿಕೊಳ್ಳುವುದೇ ಅವಳ ಬದುಕಿನ ಅಂಗವೆಂಬಂತೆ ನಂಬಿರುವಂತೆ ಮಾಡಿರುವಲ್ಲಿ ಪುರುಷನ ಸ್ವಾರ್ಥವೇ ಮೆರೆಯುತ್ತದೆ. ಅದನ್ನೇ ಇಲ್ಲಿ ಹೆಣ್ಣಿನಿಂದಲೇ ಮಾನ್ಯವಾಗಿಸಿ ಹಾಗೇ ಬಾಳಬೇಕಾದ ತತ್ವವನ್ನು ಪ್ರತಿಪಾದಿಸಿದ್ದು ಆ ಚೌಕಟ್ಟಿನೊಳಗೇ ಆಕೆ ಬದ್ಧಳನ್ನಾಗಿರುವಂತೆ ಮಾಡಿದೆ.

\'ಕೃಷ್ಣಮೂರ್ತಿಯ ಹೆಂಡತಿ' ಕತೆಯ ಬಾಲ ವಿಧವೆ ಲಕ್ಷ್ಮಿಯ ಮನಸ್ಸಿನ ಅಧೀರತೆ ಸಮಾಜ ಹೆಣ್ಣನ್ನು ಕಾಣುತ್ತ ಬಂದ ಪರಿಸ್ಥಿತಿಯನ್ನೇ ಹೇಳುತ್ತದೆ. ಆಕೆಯಲ್ಲಿ ಪತಿಯ ಹೊರತಾಗಿನ ಬದುಕೇ ಇಲ್ಲ ಎಂಬ ಭಾವನೆ ಬಿತ್ತಿ ದೃಢ ಪಡಿಸುವಷ್ಟು ಗಂಡನ ಅಧೀನತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದೆ. ಆಕೆಯನ್ನು ಇಲ್ಲಿ ಕಿರು ಹರೆಯದವಳಾದುದರಿಂದ ಇನ್ನು ಯಾರ ಕೈಗೂ ಸಿಗದ ರೀತಿಯಲ್ಲಿ ಆತ್ಮಾಹುತಿಗೆ ಒಳಪಡಿಸಲಾಗಿದೆ. ತಾಯಿ ವಯಸ್ಸಾದವಳಾದುದರಿಂದ ಆಕೆಯ ಮಗುವಿಗಾಗಿ ಆಕೆಯನ್ನು ಉಳಿಸಲಾಗಿದೆ. ಆದರೆ ಮಗಳು ಕಿರು ಹರೆಯದವಳು. ಬೇರೊಬ್ಬರಿಂದ ಆಕೆಗೆ ತೊಂದರೆ ಬರಬಾರದು. ಅಥವಾ ಆಕೆಯೇ ಮನ ಪರಿವರ್ತನೆಗೊಳ್ಳದಂತೆ ತಡೆದು ಮರ್ಯಾದೆ ಉಳಿಸುವ ನಿಟ್ಟಿನಲ್ಲಿ ಹೆಣ್ಣಾದವಳು ಬಾಳಬೇಕಾದ ಮೌಲ್ಯ ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ.|

ಆದರೆ 'ಚಿಕ್ಕಮ್ಮ' ಕತೆಯ ಚಿಕ್ಕಮ್ಮನ ಸಂದರ್ಭವೇ ಬೇರೆ. ಮೋಸಗಾರಿಕೆಗೆ ಆಕೆ ಕೊಡುವ ಪ್ರತಿಕ್ರಿಯೆಯಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ತಾಯ್ತನದ ಜವಾಬ್ದಾರಿಗಳನ್ನು ಪೂರೈಸಿ, ಮೋಸದಿಂದ ಮುದುಕ ತನ್ನನ್ನು ಮದುವೆಯಾದದ್ದು ಆಕೆಗೆ ಆಘಾತಕಾರಿಯಲ್ಲ. ಆದರೆ ಮದುವೆಗೆ ಬಂದ ಇನ್ನೊಬ್ಬ ಮಗನನ್ನು ಬಿಟ್ಟು ವೃದ್ಧ ಮದುವೆಯಾದುದಕ್ಕೆ ಆಕೆಯ ವಿರೋಧ ವಿದೆ. ಆಕೆಯ ದೇಹವನ್ನು ತಂದೆ ಮಗ ಇಬ್ಬರೂ ಬಯಸುವುದನ್ನು ಆಕೆ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ವಿರೋಧಿಸುತ್ತಾಳೆ. ಇಲ್ಲಿ ಆತ್ಮಾಹುತಿ ಮಾಡಿಕೊಳ್ಳುವ ಸ್ತ್ರೀಯರು ವೈದಿಕ ಮನೆತನದವರೇ. ಅವರೂ ಒಂದು ವ್ಯವಸ್ಥೆಯ ಬದ್ಧತೆಗೆ ಅನುಗುಣವಾಗಿ ಈ ತೀರ್ಮಾನ ತೆಗೆದುಕೊಳ್ಳುವುದಾಗಿದೆ. ಯಾಜಮಾನ್ಯ ಸಂಸ್ಕೃತಿಯು ಎಲ್ಲ ನಡವಳಿಕೆಗಳಿಗೆ ದಾರಿದೀಪ ಎಂಬ ನಂಬಿಕೆಯಿಂದಾಗಿ ಅದನ್ನೇ ಪಾಲಿಸಬೇಕಾದ ಒತ್ತಡ ಹೇರುವ ಕೆಲಸವನ್ನು ಈ ಮೂಲಕ ಮಾಡಲಾಗಿದೆ. ಇದೇ ಮೌಲ್ಯಯುತವಾದದ್ದು ಎಂದು ಪ್ರತಿಪಾದಿಸುವ ಕೆಲಸವನ್ನು ಮಾಸ್ತಿ ನಿರ್ವಹಿಸಿದ್ದಾರೆ. ಅಂಥ ಮೌಲ್ಯವೊಂದನ್ನು ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ ಅವರು ಮಹತ್ತರ ಪಾತ್ರ ವಹಿಸುತ್ತಾರೆ.

ಲಕ್ಕಪ್ಪ ಗೌಡ ಅವರು, ನಿಜಗಲ್ಲಿನ ರಾಣಿ ಆತ್ಮಾಹುತಿ ಮಾಡಿಕೊಂಡುದರ ಕುರಿತು, ' ಈ ವೀರ ರಾಣಿಯ ಸಾಹಸ ಸಂಪನ್ನ ಮನೋಧರ್ಮ ನಮ್ಮ ಸಂಸ್ಕೃತಿಯ ಜೀವಾಳವಾಗಿದೆ. ಈಕೆಯ ದುರಂತ ಕಣ್ಣೀರಿನ ಜೊತೆಗೆ ಹೆಮ್ಮೆಯನ್ನೂ ಮೂಡಿಸುತ್ತದೆ' [೨೫] ಎಂದು ವಿಮರ್ಶಿಸಿದ್ದಾರೆ. ನಿಜಗಲ್ಲಿನ ರಾಣಿ ಐತಿಹಾಸಿಕ ವ್ಯಕ್ತಿ, ಆಕೆ ಒಂದು ರಾಜ್ಯದ ರಾಣಿ. ರಾಣಿಯೊಬ್ಬಳ ಬದುಕು, ಬದುಕಿನ ರೀತಿ, ನಡವಳಿಕೆ ಕೂಡ ಅನುಸರಣೀಯವಾಗಿರುವುದರಿಂದ ಆಕೆ ಒಂದು ಉನ್ನತ ಮಾರ್ಗ ನಂಬಿದ ಪರಂಪರೆಯನ್ನೇ ಮುಂದುವರಿಸುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ನಾಡಿನ ಉಳಿವು ಅಳಿವು ಕೂಡ ಅದರಲ್ಲೇ ಇರುವುದರಿಂದ ತಮ್ಮನ್ನು ಜನ ಒಪ್ಪಿಕೊಳ್ಳುವಂತೆ ಮೌಲ್ಯಯುತವಾದ ತತ್ವ, ನಂಬಿಕೆಗಳನ್ನು ಸ್ವತಃ ಅಳವಡಿಸಿಕೊಂಡು ಬದುಕಬೇಕಾಗುತ್ತದೆ. ಆ ಮೂಲಕ ಅವರ ಮುಂದುವರಿಕೆಯ ಸಂದೇಶ ನೀಡುವ ಕೆಲಸವನ್ನು ಆಕೆ ಸಮರ್ಥವಾಗಿ ನಿರ್ವಹಿಸುತ್ತಾಳೆ.

ಹಾಗೆ ನೋಡಿದರೆ ಈ ನಾಲ್ವರೂ ಕೂಡ ಆತ್ಮಾಹುತಿ ಮಾಡಿಕೊಂಡ ಸಂದರ್ಭಗಳು ಬೇರೆ ಬೇರೆ. ಆದರೆ ನೇರ ಹಾಗೂ ಪರೋಕ್ಷವಾಗಿ ಶೀಲದ ರಕ್ಷಣೆಯ ಜವಾಬ್ದಾರಿಯಿಂದಲೇ ಅವರು ಆತ್ಮಾಹುತಿ ಮಾಡಿಕೊಂಡಿದ್ದಾಗಿದೆ. ಗಂಡನನ್ನು ಪೂಜ್ಯ ಸ್ಥಾನದಲ್ಲಿಡುವ ಸ್ತ್ರೀಯರು ಅವರ ಸಾವಿನ ಮೊದಲೇ ತಮ್ಮನ್ನು ತಾವು ಕೊಂದುಕೊಳ್ಳುತ್ತಾರೆ. ಹಾಗೂ ಅವರ ಹೊರತಾಗಿ ತನ್ನನ್ನು ಮುಟ್ಟಬಾರದ ನಂಬಿಕೆ ಕಾಯ್ದುಕೊಳ್ಳುವುದೂ ಇಲ್ಲಿ ಅವರ ಉದ್ದೇಶವಾಗುತ್ತದೆ. ಪುರುಷ ತನ್ನ ಸ್ವಾರ್ಥಕ್ಕಾಗಿ ಹೆಣ್ಣಿಗೇ ಹೇರಿದ ಈ ಮೌಲ್ಯವಾಗಿಯೇ ಸ್ವೀಕರಿಸುವ ಸ್ತ್ರೀಯರು ಅದನ್ನು ಹಾಗೆಯೇ ಒಪ್ಪಿಕೊಂಡು ಪ್ರತಿಷ್ಠಾಪಿಸಿದ್ದಾರೆ.

ನೈತಿಕತೆ ಪ್ರತಿಪಾದಕರಾಗಿ

ಭಾರತೀಯ ಸಂಸ್ಕೃತಿ ನೈತಿಕ ಬದುಕನ್ನೇ ಪ್ರತಿಪಾದಿಸುತ್ತದೆ. ಅಂದರೆ ಪುರುಷಾಧೀನ ಸಂಸ್ಕೃತಿ ನೈತಿಕತೆಯನ್ನು ಕಾಯ್ದುಕೊಳ್ಳುವಂತೆ ಹೆಣ್ಣಿಗೆ ಉಪದೇಶಿಸಿದೆ. ಮತ್ತು ಅದಕ್ಕೊಂದು ನಿಗದಿತ ಚೌಕಟ್ಟನ್ನು ಹಾಕಿದೆ. ಮಾಸ್ತಿ ಅವರ ಕತೆಗಳಲ್ಲಿ ನೈತಿಕತೆಗೇ ಜಯಸಿಗುವಂತೆ ಮಾಡಲಾಗಿದೆ. ಲೈಂಗಿಕ ಸಂಬಂಧಗಳ ಸಮಸ್ಯೆ, ಸಂದರ್ಭ, ಫಲಿತಾಂಶಗಳು ಅದನ್ನು ಹೆಚ್ಚು ಸ್ಪಷ್ಟಗೊಳಿಸುತ್ತವೆ. ಲೈಂಗಿಕತೆಗೆ ಸಂಬಂಧಿಸಿ ಹೆಣ್ಣು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅದನ್ನು ಖಚಿತಗೊಳಿಸಲಾಗುತ್ತದೆ. ಮಾಸ್ತಿ ಮೂಲತಃ ನೈತಿಕತೆಯ ಪ್ರತಿಪಾದಕರು. ಅದನ್ನು ಮೀರಿದ್ದಕ್ಕೆ ಪಶ್ಚಾತ್ತಾಪ ಪಟ್ಟು ತೊರೆದ ಗಂಡನ ಬಳಿಗೆ ಮರಳಿ ಬರುವ ಹೆಣ್ಣು ಮತ್ತು ಅವಳನ್ನು

೨೫ ಪು.೧೦೪ ಕತೆಗಳು, ಶ್ರೀನಿವಾಸ ಸಾಹಿತ್ಯ: ಮಾಸ್ತಿ ಸಾಹಿತ್ಯ ಸಮೀಕ್ಷೆ ಸಂ. ಹಾ.ಮಾ. ನಾಯಕ ೧೯೭೪

ಸ್ವೀಕರಿಸುವ ಗಂಡು ಇಂಥವರು ಅವೈದಿಕರಲ್ಲಿ ಇರುವುದನ್ನು ಕಾಣಿಸುತ್ತಾರೆ. ಆದರೆ ವೈದಿಕರಲ್ಲಿ ಅಂಥ ಪ್ರಕ್ರಿಯೆಗೆ ಅವಕಾಶವನ್ನೇ ಕೊಡಲಾಗಿಲ್ಲ. ಒಂದು ವೇಳೆ ಆ ತೆರನಲ್ಲಿ ನಡೆದುಬಿಟ್ಟರೆ ಅವರು ಎದುರಿಸಬೇಕಾದ ವಿರೋಧಗಳು ಘೋರವಾಗಿರುತ್ತವೆ. ಅಂಥವಳು ಅಲ್ಲಿ ಪರಿತ್ಯಕ್ತಳಾಗುತ್ತಾಳೆ. ಮಾನಸಿಕ ವೇದನೆ ಅನುಭವಿಸುತ್ತಾಳೆ. ಗಂಡನ ಮಾತನ್ನು ಕೇಳದ ಮಾತ್ರಕ್ಕೆ, ಪರಸ್ಪರ ಮನಸ್ಸು ಬಿಚ್ಚದ ಕಾರಣಕ್ಕೆ 'ಮನೀಶ್ವರನ ಮರ' ಕತೆಯ ರಾಜಮ್ಮ ಅನುಭವಿಸಿದ ಬದುಕೇ ಅದಕ್ಕೆ ಸಾಕ್ಷಿಯಾಗುತ್ತದೆ.

ಹೆಣ್ಣಿಗೆ ಈಗಾಗಲೇ ಹೇರಲಾದ ಪಾರಂಪರಿಕ ನಿಲುವು, ನೀತಿ ಸಂಹಿತೆಯ ಪರಿಪಾಲಕರಾಗುವವರು ಸಮಾಜದ ಮಧ್ಯಮವರ್ಗದವರು. ಇಲ್ಲಿ ವರ್ಗ - ಜಾತಿ ಅಂತಸ್ತಿಗಿಂತ ಮುಖ್ಯವಾಗಿ ಶ್ರೀಮಂತಿಕೆ - ಬಡತನದ ವರ್ಗೀಕರಣವೇ ಹೆಚ್ಚು ಸಮಂಜಸವಾಗುತ್ತದೆ. ಶ್ರೀಮಂತರು ಹಣ, ಸಂಪತ್ತು ಅಂತಸ್ತನ್ನೇ ಮುಖ್ಯವಾಗಿರಿಸಿಕೊಂಡು ಅದರ ನೆಲೆಯಲ್ಲಿ ತಮಗೆ ಬೇಕಾದ ಜೀವನ ಕಟ್ಟಿಕೊಳ್ಳುತ್ತಾರೆ. ಅವರು ಇತರರು ತಮಗೇನು ಹೇಳುತ್ತಾರೆ ಎಂಬ ಚಿಂತೆಗೆ ಮುಖಕೊಡುವುದಿಲ್ಲ. ತಾನು ಏನೇ ಮಾಡಿದರೂ ಸರಿ ಎಂಬ ನಂಬಿಕೆಗೆ ಬದ್ಧರಾಗಿಬಿಡುತ್ತಾರೆ. ನೀತಿ ನಿಯಮಗಳನ್ನೆಲ್ಲ ತಮಗೆ ಬೇಕಾದಂತೆ ರೂಪಿಸಿಕೊಂಡುಬಿಡುತ್ತಾರೆ. ಮಧ್ಯಮವರ್ಗದವರು ಮಾತ್ರ ಹಾಗಲ್ಲ. ಅವರು ಮರ್ಯಾದೆಗೆ ತಲೆಕೊಡುವವರಾಗಿದ್ದಾರೆ. ಶೀಲ - ನೀತಿ ಪರಂಪರೆಯ ತತ್ವಗಳಿಗೆ ಶರಣಾಗಿ ಇತರರ ಅಂಜಿಕೆಗೆ ಒಳಗಾಗಿ ಜೀವ ಸವೆಸುತ್ತಿರುತ್ತಾರೆ. ಅಂದರೆ ಬಡವರ್ಗ ಹಾಗಿಲ್ಲ. ಅಲ್ಲಿ ಬಡತನದ ಬೇಗೆಯ ನಡುವೆ ಪ್ರಜ್ವಲಿಸುವುದು ಮಾನವೀಯ ಸಂಬಂಧದ ರೀತಿ ಮಾತ್ರ. ನೀತಿ ಅನೀತಿಗಳು ಆಯಾ ಸಂದರ್ಭಗಳಿಗೆ ರೂಪಿಸಿಕೊಳ್ಳುವುದಾಗಿದೆ. ಪರಂಪರೆಯ ನೀತಿಗಳು ಎಲ್ಲವೂ ಇಲ್ಲಿ ಅನುಸರಣೆಯಾಗುವುದಿಲ್ಲ. ಆಗಬೇಕೆಂದು ಹೇರುವವರೂ ಇಲ್ಲಿ ಇರುವುದಿಲ್ಲ. ತಮ್ಮ ತಮ್ಮ ಬದುಕು ದೂಡುವುದನ್ನೇ ಮುಖ್ಯವಾಗಿಸಿಕೊಳ್ಳುವ ಅವರು ತಮ್ಮದೇ ಆದ ನಿಲುವನ್ನು ಮುಂದಿರಿಸಿಕೊಂಡು ಬಾಳುತ್ತಾರೆ. ಸಮಯ ಸಂದರ್ಭಗಳಿಗೆ ಎದುರಾಗುವ ಸಮಸ್ಯೆಗಳಿಗೆ ತಲೆಬಗ್ಗಿಸದೇ ಅದನ್ನು ಎದುರಿಸಿ ನಡೆಯುವ ರೀತಿಯನ್ನು ಮೈಗೂಡಿಸಿಕೊಂಡವರಾಗಿದ್ದಾರೆ. ಇಲ್ಲಿನ ಸ್ತ್ರೀಯರು ಗಂಡಿಗೆ ಬೆಲೆ ಕೊಡುತ್ತಾರಾದರೂ ಆತ ತಮ್ಮ ಮೇಲೆ ತೋರಿರುವ ಅಮಾನವೀಯ ನಡವಳಿಕೆಗೆ ಪ್ರತಿರೋಧ ತೋರುತ್ತಾರೆ. ಅವನಿಂದ ದೂರವಾಗಿ ಬದುಕುವ ಧೈರ್ಯವನ್ನು ಮಾಡುತ್ತಾರೆ. ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರ ಮನಃಪರಿವರ್ತನೆಯಾಗುವ ನಿಟ್ಟಿನಲ್ಲಿ ಅವರ ಗಂಡುತನವನ್ನು ಇಲ್ಲವಾಗಿಸಹೊರಡುತ್ತಾರೆ.

ಈ ಪ್ರಯತ್ನದ ಹಿಂದೆ ನಾವು ಕಾಣಬಹುದಾದದ್ದು ಮಾನವ ಪರ ಬದುಕನ್ನು ಅಳವಡಿಸಿಕೊಳ್ಳಬೇಕೆನ್ನುವ ಮಾಸ್ತಿ ತತ್ವವನ್ನು. ಈ ನಿಟ್ಟಿನಲ್ಲಿ 'ದುರದೃಷ್ಟದ ಹೆಣ್ಣು' ಕತೆಯ

ದುರದೃಷ್ಟದ ಹೆಣ್ಣು, 'ಚೆನ್ನಮ್ಮ' ಕತೆಯ ಚೆನ್ನಮ್ಮ, 'ಚಿಕ್ಕಮ್ಮ' ಕತೆಯ ಚಿಕ್ಕಮ್ಮ, 'ನಳಿನಿಯ ತಂದೆ' ಕತೆಯ ಲಕ್ಷ್ಮಿ ತೆಗೆದುಕೊಳ್ಳುವ ದೃಢ ನಿಲುವಿನ ಮೂಲಕ ಪ್ರಮುಖ ಕಾರ್ಯ ನಿರ್ವಹಿಸುವ ಪ್ರತಿನಿಧಿಗಳಾಗುತ್ತಾರೆ. ಅವರು ಅಂತಸ್ತಿನ ನೆಲೆಗಟ್ಟಿನಲ್ಲಿ ಯಾವುದನ್ನೂ ಯೋಚಿಸದ ವಾಸ್ತವವಾದಿಗಳಾಗಿ ಬೆಳಗುತ್ತಾರೆ. ಆದರೆ ಅವರವರ ಬದುಕಿನ ಕೊನೆಯಲ್ಲಿ ಅವರು ಅನುಭವಿಸಬೇಕಾಗಿ ಬರುವ ಕಷ್ಟ-ನಷ್ಟಗಳೇ ಅವರ ನಿರ್ಧಾರಕ್ಕೆ ದೊರೆಯುವ ಫಲಿತಾಂಶವಾಗುತ್ತದೆ.

ವೈದಿಕ ಮನೆತನದ ಸ್ತ್ರೀಯರು ಗಂಡ ಬಿಟ್ಟು ಹೋದಾಗಲೂ ನೈತಿಕ ಬದುಕು ಕೆಡದಂತೆ ಅತಿ ಜಾಗರೂಕತೆ ವಹಿಸುತ್ತಾರೆ. ಗಂಡನ ಹೊರತಾಗಿ ಅನ್ಯರಲ್ಲಿ ಒಂದಾಗದ ಮನಸ್ಸಿನಲ್ಲಿ ಇನ್ನೊಬ್ಬರನ್ನು ಬಯಸದಷ್ಟು ಕಟ್ಟುನಿಟ್ಟು ಬದುಕನ್ನು ಅವರು ನಿಭಾಯಿಸುತ್ತಾರೆ. 'ಗೌತಮಿ ಹೇಳಿದ ಕತೆ'ಯ ಗೌತಮಿ ಮದುವೆಗೂ ಮುನ್ನ ಕಾಮಕೇಳಿಗೆ ಒಳಗಾಗುವ ಮತ್ತು ಅದರ ಹಂಬಲದಿಂದ ದತ್ತನನ್ನು ಕಾಡುವ ಪರಿ ಬದುಕಿನ ಸಹಜ ಕ್ರಿಯೆಗಳಲ್ಲಿ ಒಂದು ಎಂದು ಒಪ್ಪಿಕೊಳ್ಳುತ್ತಾರೆ ನಿಜ. ಆದರೆ ಅದರ ಬೆನ್ನಿಗೇ ಅದು ಸರಿಯಲ್ಲ ಎಂಬುದನ್ನೇ ಹೇಳುತ್ತಾರೆ. ಅದಕ್ಕಾಗಿಯೇ ಗೌತಮಿ ಅನುಸೂಯೆ ಪ್ರಿಯಂವದೆಯರ ವಿವಾಹಕ್ಕೆ ಒತ್ತಾಯಿಸುವುದಾಗಿದೆ. ಅಂಥ ಲೈಂಗಿಕ ಪ್ರಕ್ರಿಯೆಯು ನಿಗದಿತ ಗಂಡಿನೊಂದಿಗೆ ನಡೆಯಬೇಕೆಂಬುದು ಇಲ್ಲಿನ ತಿಳುವಳಿಕೆಯಾಗಿದೆ. ಇಲ್ಲಿ ಮಾಸ್ತಿಯವರು ರಾರಾಜಿಸುವಂತೆ ಮಾಡುವುದು ಪ್ರೇಮವನ್ನು ಹೊರತು ಕಾಮವನ್ನಲ್ಲ. ಗಂಡ ಬಿಟ್ಟು ಹೋದ ಬಳಿಕ ಬದುಕು ಸಾಗಿಸುವ ಮಹಿಳೆಯರೂ ಕೂಡ ಇಲ್ಲಿ ಅದಕ್ಕಾಗಿ ಕೊಂಚವೂ ವಿಚಲಿತರಾಗದಂತೆ ತೋರುವುದಿಲ್ಲ. ವೈದಿಕ ಸಂಸ್ಕೃತಿ ಏನು ಹೇಳಿದೆ ? ಅವನ್ನು ಶಿರಸಾ ಪಾಲಿಸುವವರು ಇಲ್ಲಿ ಆದರ್ಶರಾಗುತ್ತಾರೆ.

'ಸಾರಿಪುತ್ರನ ಕಡೆಯ ದಿನಗಳು' ಕತೆಯ ವೇದವತಿ ಮನಸ್ಸಿನಲ್ಲಿ ಯಾದರೂ ಅದನ್ನು ಬಯಸುವವಳಲ್ಲ. ಗಂಡ ಬಂದಾಗ ಅವನೊಂದಿಗೆ ಭಿಕ್ಷುಣಿಯಾಗಿ ಹಿಂಬಾಲಿಸುವ ಮೂಲಕ ಹಿಂದೂ ಮೂಲದ ನಂಬಿಕೆಗಳನ್ನು ತತ್ವಾದರ್ಶದಂತೆ ಕಾಯ್ದುಕೊಂಡಿದ್ದಾಳೆ. ಮಗುವನ್ನು ಪಡೆದಿದ್ದ ಆಕೆಗೆ ಆ ಮಗುವಿನ ಪಾಲನೆಯೇ ಮುಖ್ಯವಾಗುತ್ತದೆ. 'ಕಾಮನಹಬ್ಬದ ಒಂದು ಕತೆ'ಯ ಸಾವಿತ್ರಮ್ಮ ಕೂಡ ಗಂಡನಿಲ್ಲದ ದಿನಗಳಲ್ಲಿ ಕಾಮ ಬಯಕೆಗೆ ಒಳಗಾಗಿದ್ದವಳನ್ನು ಮಾಸ್ತಿ ಪರಿಚಯಿಸುವುದೇ ಇಲ್ಲ. ಅವರಿಗೆ ಗಂಡನ ಆಗಮನದ ನಿರೀಕ್ಷೆ ಮುಖ್ಯವಾಗುತ್ತದೆ. ಅದಕ್ಕಾಗಿ ಜಪತಪ ನಡೆಸಲಾಗುತ್ತದೆ. ಅದು ಅವಳಿಗೆ ಸರಿಕಂಡ ಬದುಕಾಗುತ್ತದೆ. ಅದು ಸಮಾಜ ಹೇರಿದ್ದು ಎಂಬುದನ್ನು ಮರೆಯುವಂತಿಲ್ಲ. ಗಂಡನೊಂದಿಗೇ ಬದುಕಬೇಕಾದ, ಅವನಿಲ್ಲದ ಬದುಕು ಶೂನ್ಯ ಎಂಬ ಹೇಳಿಕೆಯನ್ನು ಇಲ್ಲಿ ಈ ಮೂಲಕ ಕೊಡಲಾಗಿದೆ. 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ ಕೂಡ ದೂರ ಹೋದ ಗಂಡನ ನೆನಪಿನಲ್ಲಿಯೇ ಇರುತ್ತಾಳೆಯೇ ಹೊರತು ಅನ್ಯನೊಂದಿಗ

ಸ್ನೇಹ ಸಂಬಂಧ ಬೆಳೆಸುವುದಿಲ್ಲ. ಮನದಲ್ಲಿ ಕೂಡ ಆಲೋಚಿಸುವುದಿಲ್ಲ. ಆಕೆ ಅಥವಾ ಇಷ್ಟು ಮಂದಿ ಹೆಂಗಸರಲ್ಲಿ ಯಾರಾದರೂ ಒಬ್ಬರು ತಪ್ಪಿ ನಡೆದುಕೊಂಡಿದ್ದೇ ಆದರೆ ಭಾರತೀಯ ಹಿಂದೂತ್ವದ ಸಿದ್ಧಾಂತಗಳು ಮಾಯವಾಗುತ್ತವೇನೋ ಎಂಬಂತಾಗುತಿತ್ತು ಎಂಬುದನ್ನು ಪರಿಚಯಿಸುತ್ತಾಳೆ. ಹಾಗಾಗಿಯೇ 'ರಂಗಸ್ವಾಮಿಯ ಅವಿವೇಕ' ಕತೆಯ ಇಂದಿರಾ ದೇವಿಯು ರಂಗಸ್ವಾಮಿಯ ಕನಸು, ಆಸೆ, ಬಯಕೆಗಳಿಗೆ ಸ್ಪಂದಿಸದೇನೆ ದೂರದೂರ ಸರಿಯುತ್ತಾಳೆ. ಅವಳನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವ ರಂಗಸ್ವಾಮಿ ಮಾಡಬಹುದಾದ ಆಚಾತುರ್ಯಗಳಿಗೆ ಅವಳು ಅದನ್ನು ತೀರಾ ತಪ್ಪು ಎಂಬಂತೆ ಮನವರಿಕೆ ಮಾಡಿಕೊಡುವ ತೆರನಲ್ಲಿಯೇ ಅವಳು ಕಾಳಜಿವಹಿಸುತ್ತಾಳೆ.

ಮಾಸ್ತಿಯವರ ಸ್ತ್ರೀ ಪ್ರತಿನಿಧಿಕರಣದ ವಿವಿಧ ನೆಲೆಗಳನ್ನು ಅವರ ಕತೆಗಳ ಮೂಲಕ ವಿಶ್ಲೇಷಿಸಿದ್ದಾಯಿತು. ಇದು ಭಾರತೀಯ ಬದುಕಿನ ಚೌಕಟ್ಟಿನಲ್ಲಿ ನಂಬಿಕೊಂಡು ಬಂದಿರುವ ಹಾಗೂ ಬರಬೇಕಾದ ಕುರಿತು ನೀತಿ ಹೇಳುವ ನಡವಳಿಕೆಗಳು. ಅದು ಮುಂದೆಯೂ ಪಾಲಿತವಾಗುಬೇಕು. ಹೆಣ್ಣಿನ ರೂಪ, ಆಕೆಯ ಒಳ್ಳೆಯ ಮಾತುಗಳು ದುರುಪಯೋಗಕ್ಕೆ ಒಳಗಾಗುವಂತೆ ನೋಡಿಕೊಳ್ಳಬೇಕಾದುದ್ದನ್ನು ಮಾಸ್ತಿ ಇಲ್ಲಿ ಪ್ರತಿನಿಧಿಸಿದ್ದಾರೆ. ಅದನ್ನು ಇಲ್ಲಿ ಇಂದಿರಾಳ ವ್ಯಕ್ತಿತ್ವದ ಮೂಲಕ ತೋರಿಸಿಕೊಡುತ್ತಾರೆ. ಅದೇ ನೆಲೆಯಲ್ಲಿ 'ನಳಿನಿಯ ತಂದೆ' ಕತೆಯ ಲಕ್ಷ್ಮೀ ಕೂಡ ಗಂಡನನ್ನು ತೊರೆದರೂ ನೀತಿ ಮೀರುವುದಿಲ್ಲ. 'ಮೊಸರಿನ ಮಂಗಮ್ಮ' ಕತೆಯ ಮಂಗಮ್ಮ ಮನೆ ಬಿಟ್ಟು ಬಂದ ಸಂದರ್ಭ ಎದುರಿಸಬೇಕಾದ ಗಂಡಸರ ಕಿರಿಕಿರಿಗೆ ಆಕೆ ರೋಸಿ ಹೊಗುತ್ತಾಳೆ.

/ 'ಸನ್ಯಾಸವಲ್ಲದ ಸನ್ಯಾಸ' ಕತೆಯ ನರಸಮ್ಮ ಕೂಡ ಇಲ್ಲಿ ಗಂಡನಿಗಾಗಿಯೇ ಕಾಯುವ ಪತಿವ್ರತೆಯಾಗಿದ್ದಾಳೆ. ಅದನ್ನು ಮೀರುವುದು ಈ ಬದುಕಿಗೆ ಅಪಚಾರವಾಗುತ್ತದೆ. ಅದು ಅನಾಚಾರವೂ ಆಗುತ್ತದೆ. ಆದ್ದರಿಂದಲೇ ವೈದಿಕ ಹೆಂಗಸರು ವಿಚಾರದಲ್ಲಿ ಕಿಂಚಿತ್ತೂ ವಿಚಲಿತರಾಗದಂತೆ ಮಾಸ್ತಿ ಎಚ್ಚರ ವಹಿಸಿದ್ದಾರೆ. ವೈದಿಕ ಪರಂಪರೆಯ ನಡವಳಿಕೆಯನ್ನು ಪ್ರತಿಷ್ಠಾಪಿಸುವ, ಅಂಥ ಮೌಲ್ಯವೊಂದು ಉಳಿದು ಬಾಳುವ, ಬಾಳಬೇಕಾದ ಜವಾಬ್ದಾರಿಯುತ ಕಾಳಜಿಯಿಂದಲೇ ಆಗಿದೆ. ಅದು ಹಿಂದೂತ್ವದ ಕಲ್ಪನೆ ವೈದಿಕ ಕುಟುಂಬಗಳಿಂದಲೇ ಪ್ರತಿಷ್ಠಾಪಿತವಾಗುವಂತೆ ಎಚ್ಚರವಹಿಸಲಾಗಿದೆ.)

'ಆಂಗ್ಲನೌಕಾ ಕ್ಯಾಪ್ಟನ್' ಕತೆಯ ನೆಲ್ ಬಲಾತ್ಕಾರಕ್ಕೆ ಬಸುರಾಗಿ ಹೆರಬೇಕಾಗುತ್ತದೆ. ಆದರೂ ಅಲ್ಲಿ ಆಕೆ ಮಮ್ಮಲ ಮರುಗುತ್ತಾಳೆ. ಪತಿ ನೆಮ್ಮದಿಗಾಗಿ ತನ್ನದಲ್ಲದ ತಪ್ಪಿಗಾಗಿಯೂ ಆಕೆ ಪತಿಯಿಂದ ವಿಚ್ಛೇದನ ಬಯಸುತ್ತಾಳೆ. ಈ ಮರುಗುವಿಕೆಯೇ ಅಂಥ ಸಂಬಂಧವನ್ನು ನಡೆಯಗೊಡಬಾರದು ಎಂಬುದನ್ನೇ ಪ್ರತಿಪಾದಿಸುತ್ತದೆ. ಗಂಡನಲ್ಲಿ ತನಗೆ ಆಗಿರುವ ಮೋಸದ

ಕುರಿತು ವಿವರಿಸುತ್ತಾಳೆ. ಅಲ್ಲಿ ಆಕೆ ಸಂಚಿನ ಜಾಲಕ್ಕೆ ಒಳಗಾಗಿ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವುದೇ ಹೊರತು ಆಕೆಯಾಗಿಯೇ ಅದಕ್ಕೆ ಒಳಗಾದವಳಲ್ಲ.

ಮಾಸ್ತಿ ಅವೈದಿಕ ಮಹಿಳೆಯರು ಮತ್ತು ವೈದಿಕ ಸಂಸ್ಕೃತಿಗೆ ಬದ್ಧರಾಗಿ ಬದುಕುತ್ತಿರುವವರನ್ನು ಪರಿಚಯಿಸುವಲ್ಲಿನ ಭಿನ್ನತೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅದು ಅತಿ ಸೂಕ್ಷ್ಮ ವ್ಯತ್ಯಾಸವಾಗಿ ಗುರುತಿಸಬಹುದು. ಅವೈದಿಕ ಮಹಿಳೆಯರೆಲ್ಲರೂ ಅದನ್ನು ಮೀರುತ್ತಾರೆ ಅಂತಲ್ಲ ಆದರೆ ಅವರು ಇಂಥ ಕಟ್ಟಳೆಗಳನ್ನು ಮೀರುತ್ತಾರೆ. ಹಾಗೆ ಮೀರುವುದು. ಇಲ್ಲಿ ಪ್ರಶ್ನಾರ್ಹವಾಗುವುದಿಲ್ಲ. ಅದು ಸಹಜ ಎಂಬಂತೆಯೇ ಮಾಸ್ತಿ ತೋರಿಸಿಕೊಡುತ್ತಾರೆ. ಆದರೆ ಅವರೆದುರಿಸುವ ಇಕ್ಕಟ್ಟಿನ, ನೆಮ್ಮದಿ ಕಳೆದುಕೊಳ್ಳಬೇಕಾಗಿ ಬರುವ ಸಂದರ್ಭಗಳಿಂದಾಗಿ ಸಂಸ್ಕೃತಿಯ ಚೌಕಟ್ಟನ್ನು ಮೀರದೆ ಬದುಕುವುದೇ ನೈತಿಕ ಬದುಕಾಗುತ್ತದೆ ಎಂಬುದನ್ನು ಮಾಸ್ತಿ ಪ್ರತಿಪಾದಿಸುತ್ತಾರೆ. ಇವುಗಳನ್ನು ಪ್ರತಿರೋಧಿಸುವ ಗುಣವನ್ನು ಮೈಗೂಡಿಸಿಕೊಂಡ ಸ್ತ್ರೀಯರು ಹಾಗೂ ಅದರಿಂದ ಅವರು ಅನುಭವಿಸಬೇಕಾಗಿ ಬರುವ ಪರಿಣಾಮಗಳನ್ನು ಮುಂದಿನ ಅಧ್ಯಾಯದಲ್ಲಿ ವಿಸ್ತರಿಸಬಹುದು.

ಅಧ್ಯಾಯ - ೪

ಅವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ ಪ್ರತಿನಿಧೀಕರಣ

ಮದುವೆಗೂ ಮುನ್ನ ತಾಯಿಯಾಗಿ

ಪಾತಿವ್ರತ್ಯವನ್ನು ಮೀರಿ

ವಿವಾಹದ ಚೌಕಟ್ಟನ್ನು ಮುರಿದು

ಪ್ರತಿಭಟನೆಯ ನೆಲೆಯಲ್ಲಿ

ವೇಶ್ಯಾವೃತ್ತಿಯಲ್ಲಿ

ಮಕ್ಕಳ ಪಾಲನೆಯಲ್ಲಿ

ಅಧ್ಯಾಯ - ೪

ಅವೈದಿಕ ಸಂಸ್ಕೃತಿಯ ನೆಲೆಯಲ್ಲಿ ಸ್ತ್ರೀ ಪ್ರತಿನಿಧೀಕರಣ

ಅವೈದಿಕ ಪರಂಪರೆಯಲ್ಲಿ ಜನಿಸಿದ ಸ್ತ್ರೀಯರ ಬದುಕು ಭಿನ್ನವಾದುದಾಗಿದೆ. ಅವರು ಧೈರ್ಯ ಛಲ, ಹಟ ಸಾಧಿಸುವವರೂ ಆಗಿದ್ದಾರೆ. ಅವರು ಎಲ್ಲ ಸಾಂಪ್ರದಾಯಿಕ ಕಟ್ಟಳೆಗಳನ್ನು ಮೀರುತ್ತಾರೆ. ಪುರುಷ ಪ್ರಭುತ್ವವನ್ನು ಹಾಗೇ ಒಪ್ಪಿಕೊಳ್ಳದ ಅವರು ಸ್ವಂತಿಕೆಯನ್ನು, ಸ್ವಾತಂತ್ರ್ಯವನ್ನು ಪಡೆದವರು. ಅವರು ಜನಪದರ ಬದುಕಿನ ರೀತಿಯನ್ನು ಅನುಸರಿಸುವವರು. ಅದು ಆ ನೆಲೆಯಲ್ಲಿ ಒಪ್ಪಿತವಾಗುತ್ತದೆ. ಭಾರತೀಯ ಮೂಲದ ಅವೈದಿಕರು ಮತ್ತು ಪಾಶ್ಚಾತ್ಯ ಮೂಲದ ಸ್ತ್ರೀಯರ ಪ್ರಗತಿಪರ ಬದುಕಿನ ನಿಲುವುಗಳನ್ನು ಇಲ್ಲಿ ಸನಾತನ ಧರ್ಮದ ಸಂಚಿಕೆಯೊಳಗೆ ಕಟ್ಟಿಹಾಕುತ್ತಾರೆ.

ಮಾಸ್ತಿ ಅವರ ಕತೆಗಳಲ್ಲಿನ ಅವೈದಿಕ ಸ್ತ್ರೀಯರು ಪುರುಷ ಪ್ರಧಾನ ಮೌಲ್ಯಗಳನ್ನು ಪ್ರಶ್ನಿಸುವವರಾಗಿ ಕಾಣಿಸಿಕೊಳ್ಳುತ್ತಾರೆ. ಜೊತೆಗೆ ಅಧಿಕಾರಶಾಹಿತ್ವವನ್ನು ವಿರೋಧಿಸುವ ಮೂಲಕ

ತಮ್ಮ ಆಯ್ಕೆಯ ಬದುಕನ್ನು ಕಟ್ಟಲು ಹೊರಡುತ್ತಾರೆ. ಆದರೆ ಈ ಸ್ವಭಾವದಿಂದಾಗಿ ಜೀವನವನ್ನು ಪೂರ್ತಿಗೊಳಿಸುವಲ್ಲಿ ಸೋಲುತ್ತಾರೆ. ಈ ಸೋಲಿನ ಮೂಲಕ ಅವರು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾರೆ. ಯಾವುದನ್ನು, ಯಾರನ್ನು ತಿರಸ್ಕರಿಸಿದ್ದೇವೋ ಅದುವೇ ನಿಜವಾದ ಬೆಲೆ ಬಾಳುವಂಥದ್ದು, ಮೌಲ್ಯಯುತವಾದದ್ದು. ಅದಕ್ಕೆ ಬದ್ಧಳಾಗಿರಬೇಕಾದದ್ದೇ ಹೆಣ್ಣಿನ ಧರ್ಮ ಎಂದು ಶರಣಾಗತರಾಗುವುದು ಸನಾತನ ಧರ್ಮದ ನಂಬಿಕೆಗಳನ್ನು ಅವೈದಿಕರೂ ಪಾಲಿಸುವಂತೆ ಮಾಡುವುದಾಗಿದೆ. ಸನಾತನ ವೈದಿಕ ಧರ್ಮದ ಪರಿಪಾಲಕಿಯರು ಕುಟುಂಬ, ತಾಯ್ತನ, ವಿವಾಹ, ಪಾತಿವ್ರತ್ಯ, ಲಜ್ಜೆಯನ್ನೆಲ್ಲ ಪ್ರಶ್ನಾತೀತರಾಗಿ ಮೈಗೂಡಿಸಿಕೊಂಡು ಬಂದಿದ್ದರೋ ಅದನ್ನೆಲ್ಲ ಅವೈದಿಕ ಮಹಿಳೆಯರು ಪ್ರಶ್ನಿಸುತ್ತಾರೆ. ಆದರೆ ಕೊನೆಗೆ ಅದನ್ನೇ ಒಪ್ಪಿಕೊಂಡು ಬಾಳುತ್ತಾರೆ, ಬದುಕನ್ನು ಸ್ವೀಕರಿಸುತ್ತಾರೆ. ಆ ಮೂಲಕ ತಮ್ಮ ಆತುರದ ನಿರ್ಧಾರಗಳೆಲ್ಲ ತಪ್ಪು ಎಂದು ಅವರೇ ಒಪ್ಪಿಕೊಳ್ಳುವಂತೆ ಮಾಸ್ತಿ ಎಚ್ಚರಿಕೆಯಿಂದ ಮಾಡುತ್ತಾರೆ. ಮಾಸ್ತಿ ಅವರ ಸಾಂಪ್ರದಾಯಿಕ ಮನಸ್ಸು ಅವೈದಿಕರ ಬದುಕನ್ನು ಅನುಕಂಪದಿಂದ ಕಾಣುತ್ತದೆ. ಅವರ ಎದೆಗಾರಿಕೆ, ಧೈರ್ಯ, ಸ್ವತಂತ್ರ ನಿಲುವುಗಳನ್ನು ಅಸಮಾಧಾನದಿಂದ ತಪ್ಪು ಎಂದು ಸಾರುವುದಿಲ್ಲ. ಆದರೆ ಆ ನಡವಳಿಕೆಗಳಿಂದ ಅವರಿಗೇ ಪಶ್ಚಾತ್ತಾಪ ಮೂಡಿಸುವ ಮೂಲಕ ತಿಳಿಹೇಳುವ ಕೆಲಸವನ್ನು ಬುದ್ಧಿವಂತಿಕೆಯಿಂದ ನಿರ್ವಹಿಸುತ್ತಾರೆ. ಆ ಮೂಲಕ ಸನಾತನ ಧರ್ಮದ ಸ್ತ್ರೀ ಧರ್ಮವನ್ನು ಅವೈದಿಕರು ಪರಿಪಾಲಿಸುವಂತೆ ನೋಡಿಕೊಳ್ಳುತ್ತಾರೆ. ಆದುದರಿಂದಲೇ ಯಾವೊಬ್ಬ ಹೆಣ್ಣು ಕೂಡ ಕುಟುಂಬ ಬಿಡದಂತೆ, ಗಂಡನನ್ನು ತೊರೆಯದಂತೆ ತಾಯ್ತನವನ್ನು ಅನುಭವಿಸುವಂತೆ ಲಜ್ಜೆಯನ್ನು, ಪಾತಿವ್ರತ್ಯವನ್ನು ಪಾಲಿಸಲೇಬೇಕಾದಂತೆ ಅವರನ್ನು ಸಿದ್ಧಗೊಳಿಸುತ್ತಾರೆ. ಒಂದು ನೋಟಕ್ಕೆ ಅಪೂರ್ವ ಪ್ರತಿಭಟನಾಕಾರ್ತಿಯರಂತೆ ಕಾಣಿಸಿಕೊಳ್ಳುವ ಅವೈದಿಕ ಸ್ತ್ರೀಯರು ಕೊನೆಗೆ ಸನಾತನ ಧರ್ಮದ ಸಾರಸತ್ವಕ್ಕೆ ಶರಣಾಗುತ್ತಾರೆ. ಅಂದರೆ ಅವರೂ ಅದರ ಪ್ರತಿಪಾದಕಿಯರಾಗಿ ಕಾಣಿಸಿಕೊಳ್ಳುತ್ತಾರೆ. ಮಾಸ್ತಿಯವರು ಅವರನ್ನು ಹಾಗೆ ಸಿದ್ಧಗೊಳಿಸಿದ್ದಾರೆ. ಅವೈದಿಕ ಮಹಿಳೆಯರು ತೋರುವ ಪ್ರತಿಭಟನೆಗಳನ್ನು ಮೆಚ್ಚುವಂತೆ ಕಾಣುವಲ್ಲಿ ವ್ಯಂಗ್ಯವೂ ಇದೆ. ಆದರೆ ಮರಳಿ ಬಂದವಳನ್ನು ಸ್ವೀಕರಿಸುವ ಗಂಡನ್ನು ಮೆಚ್ಚುವಲ್ಲಿ ಅಂಥ ಹೆಣ್ಣುಗಳನ್ನು ಸ್ವೀಕರಿಸಬೇಕಾದ ನೀತಿಗಿಂತ ಸನಾತನ ಧರ್ಮಕ್ಕೆ ಅವರನ್ನು ಬದ್ಧಗೊಳಿಸುವ ಕೆಲಸವನ್ನು ನಯವಾಗಿ ಪೂರೈಸಿದ್ದಾಗಿದೆ. ಅತ್ಯಂತ ಸೂಕ್ಷ್ಮವಾದ ನೆಲೆಯಲ್ಲಿ ವೈದಿಕ ಸಂಸ್ಕೃತಿ ರೂಪಿಸಿದ, ಹೇರಿದ ಸ್ತ್ರೀತ್ವದ ಕಟ್ಟಳೆಗಳನ್ನು ಚಾಚೂ ತಪ್ಪದಂತೆ ಪಾಲಿಸುವಲ್ಲಿ ಅವೈದಿಕ ಮಹಿಳೆಯರೂ ಒಳಗಾಗುವಂತೆ ಕಟ್ಟೆಚ್ಚರ ವಹಿಸಿದ್ದಾರೆ. ಈ ಕಟ್ಟೆಚ್ಚರ ಪುರುಷಪ್ರಧಾನ ಸಂಸ್ಕೃತಿಯನ್ನು ಪ್ರಶ್ನಿಸುವುದನ್ನು ಮಟ್ಟಹಾಕುತ್ತದೆ.

ಸ್ತ್ರೀಯರೆಲ್ಲರೂ ತಪ್ಪಿತಸ್ಥರಾಗುವಲ್ಲಿ, ಪುರುಷರೆಲ್ಲರೂ ಆ ತಪ್ಪುಗಳನ್ನು ಮನ್ನಿಸಿ ಸ್ವೀಕರಿಸಿ ಉದಾರರಾಗುವಲ್ಲಿಯೇ ಮಾಸ್ತಿ ಅವರ ಧೋರಣೆಯ ಅರಿವಾಗುತ್ತದೆ. ಅವೈದಿಕರಿಗೆ ಸಂಸ್ಕೃತಿಯ ಪಾಲನೆ ಮುಖ್ಯವಾಗುವುದಿಲ್ಲ. ಆದುದರಿಂದಲೇ ಹೇಗೆಹೇಗೋ ಸಾಗುವ ಅವರ ಬದುಕು ಅವರಿಗೆ

ಅನಾಗರಿಕವಾಗಿ ಕಂಡು ಅನುಕಂಪ ಹುಟ್ಟಿಸುತ್ತದೆ. ಆ ಅನುಕಂಪವೇ ಅವರ ಸಂಸ್ಕೃತಿಯನ್ನು ತಿದ್ದುವುದಕ್ಕೆ ಹೊರಡುತ್ತದೆ. ಈ ತಿದ್ದುವುದು ಕೇವಲ ಜನಪದರ ಜೀವನಕ್ಕೆ ಮಾತ್ರ ಸೀಮಿತಗೊಳ್ಳದೆ ವಿಶ್ವದ ಬದುಕಿನ ಕಡೆಗೂ ಸಾಗುತ್ತದೆ. ಭಾರತೀಯ ಜನಪದರ ಬದುಕಿನಂತೆಯೇ ಮುಕ್ತವಾಗಿ ಬದುಕುವ ಪಾಶ್ಚಾತ್ಯರ ಬದುಕನ್ನೂ ಕೂಡ ಭಾರತೀಯ ಸನಾತನ ಧರ್ಮದ ತಳಹದಿಗೇ ಬದ್ಧಗೊಳಿಸುವ ಪ್ರಯತ್ನವನ್ನು ಇಲ್ಲಿನ ಸ್ತ್ರೀಯರೇ ಮಾಡುತ್ತಾರೆ.

ಅವೈದಿಕರು ಒಟ್ಟೂ ಸಂಸ್ಕೃತಿಯೊಳಗೆ ಬಂಧಿತರಾಗುತ್ತಾರಾದರೂ ಅವರದೇ ಆದ ಬದುಕನ್ನು ಅವರು ನಡೆಸುವವರಾಗುತ್ತಾರೆ. ಅಂದರೆ ಅವರು ಬದುಕುವ ತತ್ವ ಒಂದೇ ಆಗಿರುತ್ತದೆ. ಆದರೆ ಅದನ್ನು ನಡೆಯಿಸಿಕೊಂಡು ಹೋಗುವ ರೀತಿಯಲ್ಲಿ ವ್ಯತ್ಯಾಸವಿದೆ. ವೈದಿಕರು ಪ್ರತಿಷ್ಠಾಪಿಸುವ ಸಾಂಪ್ರದಾಯಿಕತೆ ಮಡಿವಂತಿಕೆ ಇಲ್ಲಿಪ್ರಶ್ನೆಗೆ ಒಳಗಾಗುತ್ತದೆ. ಮಾಸ್ತಿ ವೈದಿಕ ಮನೆತದವರು ನೈತಿಕ ಕಟ್ಟುಪಾಡಿನೊಂದಿಗೆ ಬದುಕನ್ನು ಸಾಧಿಸಬೇಕಾದ ಮೌಲ್ಯವನ್ನು ಅನುಸರಿಸುವಂತೆ ಎಚ್ಚರ ವಹಿಸುತ್ತಾರೆ. ಅಲ್ಲಿನ ಬದುಕಿನ ರೀತಿಯಿಂದಲೇ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ತಮ್ಮದೇ ಆದ ಕೊಡುಗೆಯನ್ನು ವೈದಿಕ ಸ್ತ್ರೀಯರು ಕೊಡುತ್ತಾರೆ. ಆದರೆ ಅವೈದಿಕ ಸ್ತ್ರೀಯರು ಅಕ್ಷರಸ್ಥರಲ್ಲ. ಆದರೆ ಬದುಕಿನ ಮಾರ್ಗವನ್ನು ಚೆನ್ನಾಗಿ ಅರಿತಿರುವವರು. ಇಲ್ಲಿ ಬರುವ ಸ್ತ್ರೀಯರ ಬದುಕಿನ ರೀತಿಯ ಕುರಿತು ಆರೋಪದ ಚಕಾರ ಎತ್ತುವುದಿಲ್ಲ. ಈ ಚಿತ್ರಣದಲ್ಲಿ ಸ್ತ್ರೀಪರ ಕಾಳಜಿ ವ್ಯಕ್ತವಾದಂತೆ ಭಾಸವಾಗುತ್ತದೆ. ಆದರೆ ಪುರುಷ ಪ್ರಭುತ್ವದ ಬದುಕಿನೊಳಗೇ ಅವರು ಅನಿವಾರ್ಯವಾಗಿ ಉಸಿರಾಡಬೇಕಾದ ಪರಿಸ್ಥಿತಿ ನಿರ್ಮಿಸುತ್ತಾರೆ. ಅವೈದಿಕ ಸ್ತ್ರೀಯರು ಅನುಸರಿಸುವ ಸ್ವತಂತ್ರ ಬದುಕನ್ನು ಅವರವರ ಸಂದರ್ಭಕ್ಕೆ ಸರಿ ಎಂಬುದನ್ನು ಒಪ್ಪಿಕೊಳ್ಳುತ್ತಲೇ ಬದುಕಿನ ಗತಿಯನ್ನು ಸಾಂಪ್ರದಾಯಿಕತೆಗೆ ಶರಣಾಗುವಂತೆ ಮಾಡುತ್ತದೆ. ವೈದಿಕ ಮನೆತನದ ಸ್ತ್ರೀಯರು ತೆಗೆದುಕೊಳ್ಳುವ ತೀರ್ಮಾನ ಅವರ ಸಂಸ್ಕೃತಿಗೆ ಒಗ್ಗದೇ ಹೋಗುವುದರಿಂದ ಅವರ ದಾಂಪತ್ಯ ಬದುಕೇ ಒಡೆದು ಹೋಗುವುದನ್ನು ಕಾಣುತ್ತೇವೆ. ಈ ಒಡೆಯುವಿಕೆಗೆ ಸ್ತ್ರೀಯು ಕಾರಣವಾಗುವ ಸಂದರ್ಭವನ್ನು ಮಾಸ್ತಿ ಪರಿಚಯಿಸುತ್ತಾರೆ.

ವೈದಿಕ ಸಂಸ್ಕೃತಿಯಲ್ಲಿ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ ಗಂಡನನ್ನು ಅರ್ಥ ಮಾಡಿಕೊಳ್ಳದೆ ಅವರಿಗೆ ತಕ್ಕಂತೆ ನಡೆಯದಿದ್ದುದು, 'ಸನ್ಯಾಸವಲ್ಲದ ಸನ್ಯಾಸ' ಕತೆಯ ಗಂಡ ನರಸಿಂಹಯ್ಯ ಹೇಳಿದೊಡನೆಯೇ ಹೆಂಡತಿ ನರಸಮ್ಮ ಹುಳಿ ಮಾಡಿ ಹಾಕದ್ದು ಗಂಡನ ಸನ್ಯಾಸತ್ವ ಸ್ವೀಕಾರಕ್ಕೆ ಕಾರಣವಾಗುತ್ತದೆ. ಮುನೀಶ್ವರನ ಮರ ಕತೆಯ ರಾಜಮ್ಮ-ರಾಮಯ್ಯರ ದಾಂಪತ್ಯದಲ್ಲಿ ಪರಸ್ಪರ ಅರ್ಥಮಾಡಿಕೊಳ್ಳುವಿಕೆಗೆ, ಗಂಡನಿಗೆ ಅಪನಂಬಿಕೆ ಬರದಂತೆ ನಡೆದುಕೊಳ್ಳಬೇಕಾದುದು ಪತ್ನಿಯ ಕರ್ತವ್ಯ, ಗಂಡ ಸಂದೇಹಪಟ್ಟನೆಂದರೆ ಅದನ್ನು ದಮನಿಸಬೇಕಾದ ಜವಾಬ್ದಾರಿ ಅವನನ್ನೇ ಕ್ಷಣಕ್ಷಣವೂ ಅನುಸರಿಸಬೇಕಾದ ಅನಿವಾರ್ಯತೆಯನ್ನೇ ಹೇರುವುದಾಗಿರುತ್ತದೆ. ಘಟನೆಯ ಸತ್ಯವನ್ನು

ಹೇಳದೇ ಸಂದೇಹದ ಜ್ವಾಲೆಗೆ ತುಪ್ಪ ಎರೆವ ಅವಳ ಪ್ರವೃತ್ತಿ ತಪ್ಪೆಂದು ತೋರಿಸುವುದು ಗಂಡ ಸನ್ಯಾಸಿಯಾದಾಗ ಅವಳು ಪರಿತಪಿಸುವಲ್ಲಿ, ಸನ್ಯಾಸಿಯಾಗಿ ತನ್ನ ಊರಿಗೇ ಗುರುತು ಹಿಡಿದು ಅವನಲ್ಲಿ ಗೋಗರೆಯುವಲ್ಲಿ. ಇದು ಗಂಡನಿಲ್ಲದ ದಿನಗಳಲ್ಲಿ ಅವಳು ಅನುಭವಿಸಿದ ಮಾನಸಿಕ ಹಿಂಸೆಯ ಪರಿಣಾಮವಾಗಿದೆ. ಇದು ಗಂಡನ ಅನಿವಾರ್ಯತೆಯನ್ನು ಹೇರುವ ನೆಲೆಯದ್ದು, ಅಥವಾ ಹಾಗೆ ಹೇರಿದ್ದನ್ನು ಒಪ್ಪಿಕೊಂಡು ಅವರ ಹೊರತಾಗಿನ ಜೀವನ ಕಲ್ಪಿಸಿಕೊಳ್ಳುವಲ್ಲಿ ಆಗದ ಮಟ್ಟಿಗೆ ಅಧೀನರಾದದ್ದು . ಈ ಅಧೀನತೆಯೇ ಒಂದು ಸಂಸ್ಕೃತಿಯ ಪ್ರಧಾನವಾಹಿನಿಯಾಗಿ ಮುಂದುವರಿಸುವಂತೆ ಅವರು ಕಾರ್ಯನಿರ್ವಹಿಸುವವರಾಗಿದ್ದಾರೆ.

ವಿವಾಹದ ಕುರಿತಾದ ಆಯ್ಕೆ ಕೂಡ ಅವಳಿಗಿಲ್ಲ. ಈ ಇಲ್ಲಗಳ ನಡುವೆ ಅವಳು ವಿವಾಹವನ್ನು ಯಾರೊಂದಿಗೇ ಆದರೂ ಒಪ್ಪಲೇಬೇಕಾದ ಪರಿಸ್ಥಿತಿ ಇದೆ. ಆದರೆ ಅವೈದಿಕ ಸ್ತ್ರೀಯರು ವಿವಾಹವನ್ನು ಅಲ್ಲಗಳೆಯುವುದಿಲ್ಲ. ಆದರೆ ಆ ವಿವಾಹದೊಂದಿಗೇ ಬೆಳೆಯಬೇಕಾದ ಏಕಪತ್ನೀ ವ್ರತವನ್ನು ಬೆಳೆಸಿಕೊಳ್ಳಬೇಕಾಗುವುದಿಲ್ಲ. ಅಲ್ಲಿ ವಿಫಲವಾಗುವ ಯಾವುದೇ ರೀತಿಯ ಜೀವನ ಪದ್ಧತಿಯ ಹಿಂದೆ ಹೆಣ್ಣೊಬ್ಬಳ ತಪ್ಪು ನಡೆದಿರುವುದು, ಅದನ್ನು ಗಂಡು ಕ್ಷಮಿಸದೇ ಇರುವುದನ್ನು ಹೇಳುತ್ತಲೇ 'ಚೆನ್ನಮ್ಮ' ಕತೆಯ ಚೆನ್ನಮ್ಮ , 'ನಳಿನಿಯ ತಂದೆ' ಕತೆಯ ಲಕ್ಷ್ಮಿ ತೆಗೆದುಕೊಂಡ ಕೊನೇ ನಿರ್ಧಾರಗಳನ್ನು ಒಪ್ಪಿಕೊಂಡಿದ್ದಾರೆ. ಇದು ಅವರ ಸಹನೆಯ ಕೊನೇ ಹಂತದ ನಿರ್ಧಾರವಾಗಿದೆ. ಅಲ್ಲಿಯವರೆಗೂ ಅವಳು ಎಲ್ಲ ಹಿಂಸೆಯನ್ನು ತಾಳಬೇಕಾದ ಅನಿವಾರ್ಯತೆಯನ್ನು ಸ್ತ್ರೀಯರು ಪರಿಚಯಿಸುತ್ತಾರೆ. ಅಲ್ಲಿ ಅದು ಒಪ್ಪಿತವಾಗುತ್ತಿತ್ತು. ಈ ಕುರಿತು ಇಲ್ಲಿ ಆರೋಪದ ಧ್ವನಿ ಇಲ್ಲ. ಅವರನ್ನು ನೇರವಾಗಿ ಆರೋಪಿಸುವುದಿಲ್ಲ. ಆದರೆ ಹೆಣ್ಣೊಬ್ಬಳು ತಪ್ಪಿದರೆ ಆಗಬಹುದಾದ ದುರಂತವನ್ನು ಮುಂದಿಟ್ಟು ಅವಳು ಬದುಕಬೇಕಾದ ಮಾರ್ಗವನ್ನು ನಿರ್ದೇಶಿಸಲಾಗಿದೆ. ಆದರೆ ಅವೈದಿಕ ಮನೆತನದ ಸ್ತ್ರೀಯರ ಬದುಕಿನಲ್ಲಿ ನಡೆಯುವ ಎಲ್ಲ ಚಲನೆಗಳನ್ನು ಅವರ ಬದುಕಿಗೆ ಸರಿ ಅನ್ನಿಸುವಂತೆ ಮಾಸ್ತಿ ನಂಬುತ್ತಾರೆ. ಅದನ್ನು ಮರುಮಾತನಾಡದೇ ಒಪ್ಪಿಕೊಳ್ಳುವ ಉದಾರವಾದೀ ಗಂಡಸರ ಪರಿಚಯವನ್ನೂ ಮಾಡುತ್ತಾರೆ. ಈ ಉದಾರವಾದದ ಹಿಂದೆ ಹೆಣ್ಣಿನ ಶರಣಾಗತಿ ಇದೆ. ಇದು ಸನಾತನ ಧರ್ಮದ ಹೆಣ್ಣು ಬಾಳಬೇಕಾದ ರೀತಿಯನ್ನೂ ಒಪ್ಪಿಕೊಳ್ಳುವುದನ್ನು ತೋರಿಸುತ್ತದೆ.

ಸ್ತ್ರೀಯರಿಂದ ನಡೆಯುವ ಎಲ್ಲ ಅನಾಹುತಗಳನ್ನು ಕ್ಷಮಿಸಿ ಸ್ವೀಕರಿಸುವಲ್ಲೇ ಅಲ್ಲಿ ಸ್ತ್ರೀಯರನ್ನು ಗೌರವಿಸುವಂತೆ ಕಾಣುತ್ತದಾದರೂ ಆಂತರ್ಯದಲ್ಲಿ ಅವರ ಮನಃಪರಿವರ್ತನೆಗೆ ಬಳಸಿಕೊಂಡ ಉದಾರವಾದಿ ಧೋರಣೆಯಾಗಿದೆ. ಆಕೆಯ ಇಷ್ಟ-ಅನಿಷ್ಟಗಳ ನಡುವೆ ಯಾರೂ ಅಡ್ಡಿಯಾಗದೇ ಇರಬಹುದು. ಆದರೆ ಅವರೇ ಕೊನೆಗೆ ತೆಗೆದುಕೊಳ್ಳುವ ನಿರ್ಧಾರ ಆ ಬದುಕನ್ನು ಸಾಕುಗೊಳಿಸುವ ತೆರನಾದದ್ದು. ಪರಿಣಾಮವಾಗಿ ಸಾಂಪ್ರದಾಯಿಕ ರೀತಿಯೇ ಸುಖದ್ದು ಎಂಬ ತೀರ್ಮಾನಕ್ಕೆ ಬಂದು ನಿಂತು ಬಿಡುತ್ತಾರೆ. ತೆಗೆದುಕೊಂಡ ಎಲ್ಲ ಚಲನಶೀಲ ನಡವಳಿಕೆಗಳನ್ನು ಮರಳಿ ಪುರುಷ ಪ್ರಾಧಾನ್ಯ

ನಂಬಿಕೆಯ ಮೌಲ್ಯವನ್ನು ಒಪ್ಪಿಕೊಂಡ ಸಾಂಪ್ರದಾಯಿಕ ನಂಬಿಕೆಯೊಳಗೆ ಪ್ರತಿಷ್ಠಾಪಿಸುವ ಕೆಲಸವನ್ನು ಮಾಸ್ತಿ ಇಲ್ಲಿ ಮಾಡಿಸಿದ್ದಾರೆ.

ವಿಧವೆಯ ಬದುಕನ್ನು ಅನುಭವಿಸುವ ಅವಕಾಶವನ್ನು ಮಾಸ್ತಿ ವಿಧವೆಯರಿಗೆ ಕೊಟ್ಟಿಲ್ಲ. ಯಾಕೆಂದರೆ ಅವರು ಅದನ್ನು ಬಾಳಿಸುವವರಲ್ಲವಾದುದರಿಂದ ಗಂಡ, ಪತಿಭಕ್ತಿ ಅವರಿಗೆ ಅಷ್ಟು ಪೂಜ್ಯವಾಗುವುದಿಲ್ಲ. ತಮ್ಮ ಇಷ್ಟಗಳನ್ನು ತಾವು ನೆರವೇರಿಸಿಕೊಳ್ಳುವ ಸಕಲ ಸ್ವಾತಂತ್ರ್ಯ ಹೊಂದಿದವರಾಗಿದ್ದಾರೆ. ವೈದಿಕ ಸಂಸ್ಕೃತಿಯ ತಳಹದಿಯೇ ಆಗಿರುವ ಪತಿನಿಷ್ಠೆ ಅವೈದಿಕ ಸ್ತ್ರೀಯರಿಗೆ ಮುಖ್ಯವಾಗುವುದಿಲ್ಲ. ಮಾಸ್ತಿ ಅವರ ಕತೆಗಳಲ್ಲಿ ಇಷ್ಟವಾದವನೊಂದಿಗೆ ಬದುಕುವ ಆಯ್ಕೆಗೆ ಅವರು ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ಮುಗ್ಧರಾಗಿ ಗುರುತಿಸಿಕೊಳ್ಳುವುದಿಲ್ಲ. ಅಥವಾ ಅವರು ಸಹನಶೀಲರೂ ಅಲ್ಲ. ಪರಿಸ್ಥಿತಿಗೆ ಎದುರಾಗಬೇಕಾದ ರೀತಿಗೆ ಅವರು ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ಕಾಲಾನುಕ್ರಮದ ಜೀವನ ರೀತಿಯಲ್ಲಿ ಕೂಡ ಸ್ತ್ರೀಯರು ಇಲ್ಲಿ ತಮ್ಮತನ ಕಳೆದುಕೊಳ್ಳುವುದಿಲ್ಲ. ಅವೈದಿಕ ಸ್ತ್ರೀಯರು ಪತಿವ್ರತಾ ಧರ್ಮವನ್ನು ಪರಿಚಯಿಸುವವರಾಗಿರುವುದಿಲ್ಲ. ಅವರಿಗೆ ಗಂಡ ಪದದ ಚೌಕಟ್ಟು, ನಿರ್ಬಂಧ ಬೇಕಾಗಿಲ್ಲ. ಆ ನಿರ್ಬಂಧವನ್ನು ಮೀರಿ ಬದುಕುವುದಕ್ಕೆ ಪ್ರಯತ್ನಿಸುತ್ತಾರೆ.

ಆದರೆ ಈ ಎಲ್ಲ ನಿಲುವುಗಳಿಂದಾಗಿ ಅಂಥ ಸ್ತ್ರೀಯರ ಬದುಕು ಸರಿಯಾದ ಹಾದಿಯಲ್ಲಿ ಸಾಗುವುದಿಲ್ಲ ಎಂಬುದನ್ನು ತೋರಿಸುವುದು ಮಾಸ್ತಿಯವರ ಪರಮ ಧ್ಯೇಯವಾಗಿದೆ. ಆದುದರಿಂದಲೇ ಸ್ತ್ರೀಯರು ತೆಗೆದುಕೊಳ್ಳುವ ತೀರ್ಮಾನಗಳು ಆತುರದ್ದಾಗಿವೆ ಎಂದು ತೋರಿಸಿದ್ದಾರೆ. ಈ ತೀರ್ಮಾನದ ಹಿಂದೆ ಒಂದು ಉದ್ದೇಶವಾಗಲೀ, ದೃಢತೆಯಾಗಲಿ ಇಲ್ಲ. ಆದ್ದರಿಂದಲೇ ಅವರು ಇಲ್ಲಿ ಪೂರ್ಣ ಬದುಕನ್ನು ಕಾಣುವಲ್ಲಿ ಸಫಲರಾಗುವುದಿಲ್ಲ ಎಂಬುದನ್ನು ಪ್ರತಿಪಾದಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಇಲ್ಲಿನ ಸ್ತ್ರೀಯರ ಕುರಿತಂತೆ ಚರ್ಚಿಸುವ ಸಂದರ್ಭದಲ್ಲಿ ಪುರುಷಪ್ರಧಾನ ಸಮಾಜ ಸಿದ್ಧಪಡಿಸಿದ ಸಂಪ್ರದಾಯವನ್ನು ಮೀರ ಹೋಗುವ ಅವರು ಮತ್ತೆ ಅದಕ್ಕೇ ಬದ್ಧರಾಗಬೇಕಾಗಿ ಬರುವ ರೀತಿಯನ್ನು ಅವಲೋಕಿಸಲಾಗಿದೆ. ಅದು ಅವರ ನಿಲುವಿನ ಒಂದು ಮುಖವಾಗಿ ಕಾಣಿಸಿಕೊಳ್ಳುತ್ತದೆ.

ನಿಜದಲ್ಲಿ ಜನಪದ ಸ್ತ್ರೀಯರು ಅಸಹನೆ - ಅಸಮಾಧಾನ -ಆಶೆ- ಆಕಾಂಕ್ಷೆಗಳನ್ನು ಅದುಮಿಟ್ಟುಕೊಂಡು ಬದುಕುವವರಲ್ಲ. ದಮನಿಸುವವರಿಗೆ ಕೊರಳು ಕೊಡುವವರಲ್ಲ. ಪತಿಯೇ ಪರದೈವ ಎಂಬ ಸಾಂಪ್ರದಾಯಿಕ ನಂಬಿಕೆಗೆ ಅವರು ಅರ್ಪಿಸಿಕೊಳ್ಳುವವರಲ್ಲ. ಇಷ್ಟವಾದವರ ಜೊತೆಗೆ ಬಾಳುವುದಕ್ಕೆ ಆತ್ಮಸಾಕ್ಷಿ ಒಪ್ಪುವ ರೀತಿಯಲ್ಲಿ ಬದುಕು ಕಾಣುವುದಕ್ಕೆ ವಿರೋಧ ತೋರುವವರಲ್ಲ. ಇಲ್ಲಿನ ಸ್ತ್ರೀಯರು ತಮ್ಮನ್ನು ಮಾರಿಕೊಳ್ಳದೆ, ತಮಗೆ ಅನ್ಯಾಯವಾಗದಂತೆ ಬದುಕುವವರು. ಗಂಡ ಇದ್ದಾಗಲೂ ಅವನನ್ನು ಬಿಟ್ಟು ಇನ್ನೊಬ್ಬರೊಂದಿಗೆ ಬದುಕುತ್ತಾರೆ. ಸಂಸ್ಕೃತಿ ಹಾಕಿರುವ ನೈತಿಕ - ಅನೈತಿಕ ಚೌಕಟ್ಟುಗಳನ್ನು ಮುರಿಯ ಹೊರಡುವ ಅವರು ಸಹಜ ನಿಯಮ

ಪ್ರತಿಪಾದಿಸುವವರೂ ಆಗಿದ್ದಾರೆ. ಆದರೆ ಅವರ ಈ ನಿಲುವುಗಳನ್ನು ಒಪ್ಪದ ಮಾಸ್ತಿ ಸನಾತನ ಧರ್ಮದ ಬದುಕಿಗೆ ಅದು ತಿರುಗೇಟು ನೀಡುತ್ತದೆ ಎಂದು ಭಾವಿಸುತ್ತಾರೆ. ಆ ನಿಲುವು ಬದುಕನ್ನು ಮುನ್ನಡೆಸದೆ ಮುರಿಯುತ್ತದೆ ಎಂಬ ಪ್ರಗತಿ ವಿರೋಧಿ ನಿಲುವನ್ನು ತಳೆಯುತ್ತಾರೆ. ಆದ್ದರಿಂದಲೇ ಇಂಥ ಧೈರ್ಯ ತಳೆದ ಹೆಣ್ಣು ಮಾಸ್ತಿ ಕತೆಗಳ ಕೊನೆಯಲ್ಲಿ ಪಶ್ಚಾತ್ತಾಪ ಪಡುತ್ತಾಳೆ ಮತ್ತು ಸಂಪ್ರದಾಯ ಬದುಕಿಗೇ ಶರಣಾಗುತ್ತಾಳೆ.

'ರಾಣಿ ಹಾಟ್ ಷೇಪ್ ಸಿಟೂ' ಕತೆಯಲ್ಲಿ ಗಂಡಸಿನಂತೇ ಬಾಳಿದ ರಾಣಿ ಹಾಟ್ ಷೇಪ್ ಸಿಟೂ ಕೂಡ ಇಂಥದ್ದೇ ಸಂದರ್ಭವನ್ನು ಪ್ರಸ್ತುತ ಪಡಿಸುತ್ತಾಳೆ. ಕುಟುಂಬದೊಳಗೆ ಬದ್ಧರಾಗಿದ್ದು ಜೀವನ ಸಾಗಿಸುವ ನಿರ್ಧಾರಕ್ಕೆ ಬರುತ್ತಾಳೆ.

ರಾಣಿ ಹಾಟ್‌ಷೇಪ್ ಸಿಟೂ ಹೆಣ್ಣೊಬ್ಬಳು ಗಂಡಿನಂತೆ ರಾಜ್ಯವಾಳುವ, ಗಂಡೇ ಎಂಬಂತೆ ಭ್ರಮಿಸಿ ವರ್ತಿಸುವ ಅವಳ ಧೈರ್ಯ, ಸ್ಥೈರ್ಯಗಳನ್ನು ಮುಂದಿಡುವುದು ಕತೆಯ ಉದ್ದೇಶ. ಹೆಣ್ಣಿನ ಎದೆಗಾರಿಕೆ, ಶಕ್ತಿ ಪರಾಕ್ರಮಗಳೆಲ್ಲ ಯಾವ ಗಂಡಿಗೂ ಕಡಿಮೆ ಆಗಿರುವುದಿಲ್ಲ. ಅವಳ ವ್ಯಕ್ತಿತ್ವದ ಒಳವಿವರಗಳು ಹೆಣ್ಣೊಬ್ಬಳು ಬದುಕಬಹುದಾದ ವ್ಯಕ್ತಿತ್ವ, ಸ್ವಾತಂತ್ರ್ಯಗಳನ್ನು ಮುಂದಿಡುತ್ತವೆ. ಯಾವ ಗಂಡೂ ಆಕೆಗೆ ಗಣ್ಯವೇ ಅಲ್ಲ. ತಾನೂ ಗಂಡೆಂಬುದೇ ಅವಳ ನಂಬಿಕೆ. ವರ್ತನೆಯೂ ಅಂಥದ್ದೇ. ಗಂಡನಿಗೆ ಮಾತ್ರ ಹೆಣ್ಣಾಗುವ ಅವಳು ಹೆಣ್ಣಿನ ಶಕ್ತಿಯ ಸಂಕೇತ, ಪ್ರತಿನಿಧಿಯಾಗುತ್ತಾಳೆ. ಹೆಣ್ಣನ್ನು ಕಾಣುವ ನಮ್ಮಲ್ಲಿಯ ದೃಷ್ಟಿಕೋನ ಮತ್ತು ವಿದೇಶೀ ದೃಷ್ಟಿಕೋನ ಇವುಗಳ ವ್ಯತ್ಯಾಸ ಗಮನಿಸಬಹುದು. ಹೆಣ್ಣಿನ ವ್ಯಕ್ತಿತ್ವವನ್ನು ವಿಶ್ವವ್ಯಾಪಿಯಾಗಿಸುತ್ತಾರೆ. ಹೆಣ್ತನ, ಅವಳ ವ್ಯಕ್ತಿತ್ವ ರಾಣಿಯ ಧೀರತ್ವದಿಂದ ಹೆಣ್ಣುಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬುವವಳಾಗಿ ಕಾಣುತ್ತಾಳೆ. ತಾನೇ ಮುಂದಾಗಿ ರಾಜ್ಯ ಆಳುವ ಧೀಮಂತೆ. ಗಂಡನಿಗೆ ಹೆಂಡತಿಯಾಗಿ, ಮಗುವಿಗೆ ತಾಯಾಗುವವಳಾಗುತ್ತಾಳೆ. ಅದು ಕೇವಲ ಯಾಂತ್ರಿಕವಾಗಿ ಮಾತ್ರ. ಆದರೆ ಅದಕ್ಕಾಗಿ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಒದು ರೀತಿಯಲ್ಲಿ ಇಡೀ ಹೆಣ್ಣು ಪ್ರಪಂಚಕ್ಕಿಂತ ತೀರಾ ಭಿನ್ನವಾಗಿ ಬಿಡುವ ರಾಣಿಗೆ ಸಾಧನೆಯ ಛಲವಿದೆ. ಹೆಣ್ಣೆಂದರೆ ಹೀಗಿರಬೇಕೆಂಬ ಪ್ರಜ್ಞೆಯ ಸ್ವಾಭಿಮಾನಿ ಹೆಣ್ಣಾದ ರಾಣಿ ಸಾಮಾನ್ಯರೊಂದಿಗೆ ಸಾಮಾನ್ಯರಾಗಿ ಬಿಡುವುದಕ್ಕೆ ಒಪ್ಪದೆ ಮಗಳೊಬ್ಬಳನ್ನೇ ಹೆರುವುದು, ಪ್ರಜೆಯ ನಿರೀಕ್ಷೆಯಂತೆ ಗಂಡೊಂದನ್ನು ಹೆರದೇ ಹೋಗುವುದು ಅವಳ ಒಟ್ಟೂ ಸ್ವಾತಂತ್ರವನ್ನು ತನ್ನ ತಹಬಂದಿಯಲ್ಲೇ ಇರಿಸಿಕೊಂಡದ್ದನ್ನು ಹೇಳುತ್ತದೆ.

ಸಂಸಾರದಾಚೆಗಿನ ಹೆಣ್ಣಿನ ತೊಡಗಿಸಿಕೊಳ್ಳುವಿಕೆ ಅಕ್ಷಮ್ಯ ಅಲ್ಲ. ಅದೂ ಹೆಣ್ಣಿಗೆ ಸಾಧ್ಯ ಎನ್ನುವುದನ್ನು ಅವಳ ವ್ಯಕ್ತಿತ್ವ ಮುಂದಿಡುತ್ತದೆ. ಗೃಹಿಣಿಯಾಗಿ, ಅಂತಃಪುರದ ರಾಣಿಯಾಗಿ ಮಾತ್ರ ದಿನದೂಡುವುದು ಅವಳಿಗೆ ಹಿಡಿಸದ ವಿಚಾರವಾಗುತ್ತದೆ.

'ಇಕೋ ತಮ್ಮಾಜಿ, ಆಯುಸ್ಸು ಮುಗಿಯಿತು ಅಂತ ಹೇಳುತಿದ್ದೀ. ಈ ಹೊತ್ತಿನಲ್ಲಿ ನಿನ್ನ ಎದುರು ನಾನು ನನ್ನ ಮಗಳ ಮೇಲೆ ಆಣೆ ಇಟ್ಟು ಹೇಳತೇನೆ. ಮದುವೆಯಾದೆ ಅಂತ, ದೇವರು ಹೀಗೆ ಸೃಷ್ಟಿಸಿದ

ಅಂತ, ನಿನ್ನ ಮಗಳನ್ನು ಹೆತ್ತೆ. ಉಳಿದಂತೆ ಗಂಡಾಗಿ ಬಾಳಿದ್ದೇನೆ. ಲೋಕದ ಗಂಡಸರು ನನ್ನ ಜೊತೆ ಗಂಡಸರು. ಈಜಿಪ್ಟ್ ರಾಜನಿಗೆ ಹೊರತು ಇನ್ನೊಬ್ಬರಿಗೆ ನಾನು ಹೆಣ್ಣಲ್ಲ.'

'ನನಗಾದರೂ ಬಹಳ ಹೆಣ್ಣಾಗಲಿಲ್ಲ. ಜೊತೆಯ ಗಂಡಾಗಿಯೇ ಇದ್ದೆ.'

'ಅದೂ ಸರಿ. ನಾನು ಬಣ್ಣದ ಚಿಟ್ಟೆ ಆಗಲಿಲ್ಲ. ನಿನಗೆ ಅದು ಬೇಕಾಯಿತು. ತನ್ನ ಹೊರತಾಗಿ ಇನ್ನೊಬ್ಬಳನ್ನು ಗಂಡ ವಿವಾಹವಾದಾಗ ಮನುಷ್ಯ ಸಹಜ ಸ್ವಭಾವವಾಗಿ ಮನಸ್ಸು ಖಿನ್ನಗೊಳ್ಳುತ್ತದೆ.'

ಈಜಿಪ್ಟ್‌ನಲ್ಲಿ ಅಕ್ಕ ತಮ್ಮರೇ ವಿವಾಹವಾಗುವ ಸಂಸ್ಕೃತಿಯನ್ನು ಪರಿಚಯಿಸುವ ಈ ಕತೆ ಅದೇ ಪರಂಪರೆಯ ಮುಂದುವರಿಕೆಯಾಗಿ ಅವಳ ಮಗು ಹಾಗೂ ಗಂಡನ ಇನ್ನೊಂದು ಪತ್ನಿಯ ಮಗುವಿನೊಂದಿಗೆ ವಿವಾಹ ನಡೆಯುತ್ತದೆ. ಕಿರಿಯ ರಾಣಿಯನ್ನು ವಿವಾಹವಾಗುವ ರಾಜನ ನಿರ್ಧಾರಕ್ಕೆ ಹಿರಿಯ ರಾಣಿಯಾಗಿ ಬೇಸರವಾದರೂ ನಿರ್ಲಿಪ್ತಳಂತೆಯೇ 'ನೀನು ರಾಜ, ಏನುಮಾಡುವುದಕ್ಕೂ ನಿನಗೆ ಸ್ವತಂತ್ರವಿದೆ. ಕಿರಿಯ ರಾಣಿಯೊಬ್ಬಳು ಬೇಕೆಂದರೆ ಮಾಡಿಕೊಳ್ಳಬಹುದು' ಎಂದಳು.

ಈ ರಾಣಿ ಹೆಣ್ಣಾಗಿ ಹೆಣ್ಣಿನ ಕರ್ತವ್ಯವವನ್ನು ಪಾಲಿಸುವ ಪತ್ನಿಯಾಗಿ ಕಾಣಿಸಿಕೊಳ್ಳುತ್ತಾಳೆ. ರಾಜನಿಗೆ ಜ್ವರ ಬಂದಾಗ ಹೇಳಿ ಕರೆಯಿಸಿಕೊಳ್ಳುವ ಆತ ಮುಂದಿಡುವ ಪ್ರಸ್ತಾಪ ಹಿರಿಯ ರಾಣಿಯ ಮಗಳ ಹಾಗೂ ಕಿರಿ ರಾಣಿಯ ಮಗನ ವಿವಾಹದ ಕುರಿತಂತೆ. ಮನುಷ್ಯ ಸಹಜ ತಲ್ಲಣಕ್ಕೆ ಇವಳೂ ಒಳಗಾಗಿ ವಿಚಲಿತಗೊಳ್ಳುತ್ತಾಳೆ. ಆದ್ದರಿಂದಲೇ ಆಕೆ, 'ದೇವರು ಮಾಡಿದ ರಾಜ, ರಾಣಿ, ನಾನು ಅನುಗ್ರಹಿಸುವುದಲ್ಲ, ಆಗಲಿ' ಎಂದು ಸಮ್ಮತಿಸುವುದಾಗಿದೆ.

ಜೊತೆಜೊತೆಗೇನೇ ಈ ಭಾವನಾತ್ಮಕ ಸಂಬಂಧಕ್ಕೆ ಮನಸ್ಸು ತಲ್ಲಣಿಸುತ್ತದೆ. ಈ ರಾಣಿಯ ಮನಸ್ಸು ಪಟ್ಟಕ್ಕಿಂತ ಬಡತನದ ಮನೆಯಲ್ಲಿ ಹುಟ್ಟಿ ಗೃಹಿಣಿಯಾಗಿರುವ ಜೀವನವೇ ಸುಖ ಕೊಡುತ್ತಿತ್ತೇನೋ ಎಂದು ಚಿಂತಿಸುತ್ತದೆ. ಈ ಯೋಚನೆ ಕುಟುಂಬ ಬಿಟ್ಟು ಹೆಣ್ಣು ಬದುಕಬಾರದ ವಿಚಾರವನ್ನೇ ಪ್ರತಿಪಾದಿಸುವುದಾಗಿದೆ. ಗಂಡ ಮನೆ ಮಕ್ಕಳು ಎನ್ನುತ್ತ ಸಂಪೂರ್ಣ ಅಲ್ಲಿಗೇ ಹೊಂದಿಕೊಂಡು ಬಾಳುವ ಸುಖ, ತೃಪ್ತಿಯೆಲ್ಲ ದುಡಿಯುವ, ರಾಜ್ಯಭಾರ ಮಾಡುವ ಹೆಣ್ಣಿಗೆ ದಕ್ಕುವುದಿಲ್ಲ, ಕೊನೆಗೆ ಅವಳು ಅದಕ್ಕಾಗಿ ಹಪಹಪಿಸಬೇಕಾಗುತ್ತದೆ ಎಂಬುದನ್ನು ಆಕೆಯ ಮನದ ತಾಕಲಾಟ ಹಾಗೂ ಕಿರಿಯ ರಾಣಿಯ ಸಂತೃಪ್ತಿಯ ಜೀವನ ಪರಿಚಯಿಸುವ ಮೂಲಕ ಸಾಬೀತು ಪಡಿಸುತ್ತಾರೆ.

ಮದುವೆಗೂ ಮುನ್ನ ತಾಯಿಯಾಗಿ

ಮದುವೆಗೂ ಮುನ್ನ ತಾಯಾಗುವವರು ಮಾಸ್ತಿ ಕತೆಗಳಲ್ಲಿ ಕಾಣಸಿಗುತ್ತಾರೆ. ಅವರ್‍ಯಾರೂ ಅಂಥ ತಾಯ್ತನವನ್ನು ಮುಜುಗರದಿಂದ ಸ್ವೀಕರಿಸುವವರಲ್ಲ. ಅಂದರೆ ತಾಯ್ತನವನ್ನು ಅಪಾರವಾಗಿ ಗೌರವಿಸುವ ಮಾಸ್ತಿ ಅವರಿಗೂ ಅದರ ಕುರಿತು ತಾತ್ಸಾರವಿಲ್ಲ. ಅದನ್ನು ತೆರೆದಿಟ್ಟ ಬಗೆಯನ್ನು 'ಅರ್ವಾಚೀನ ಆಂಗ್ಲಶಕುಂತಲೆ' ಕತೆಯ ಜೆನ್ನಿಯ ಬದುಕಿನ ಮೂಲಕ ಪರಿಚಯಿಸಿಕೊಳ್ಳಬಹುದು.

ಜೆನ್ನಿ ಭಾರತೀಯ ಪುರಣಾದ ಶಕುಂತಳೆಗಿಂತ ಭಿನ್ನವಾದ ಅಂತ್ಯವನ್ನು ಕಾಣುವವಳು. ತಾನು ವಿವಾಹಕ್ಕೂ ಮುನ್ನ ತಾಯಾದುದಕ್ಕೆ ಆಕೆ ಕಂಗಾಲಾಗುವುದಾಗಲೀ, ಭಯಪಡುವುದಾಗಲೀ, ಮುಜುಗರ ಪಡುವುದಾಗಲೀ ಮಾಡುವುದಿಲ್ಲ. ಅದನ್ನೊಂದು ಸಹಜ ಎಂಬಂತೆಯೇ ತಿಳಿದುಕೊಂಡು ಧೈರ್ಯದಿಂದ ಒಂದು ನಿರ್ಧಾರಕ್ಕೆ ಬರುತ್ತಾಳೆ. ಅದರಂತೆ ನಡೆಯುವುದು ಅವಳ ಎದೆಗಾರಿಕೆಯಾಗಿದೆ.

ಇಲ್ಲಿನ ಜೆನ್ನಿ ವಿವಾಹ ಸಂಸ್ಥೆಯೊಳಗೆ ಬದ್ಧಳಾಗುವುದಿಲ್ಲ. 'ನೀವು ನನ್ನನ್ನು ಕಾಣಿರಿ. ನಾನು ಜೆನ್ನಿ. ಪಕ್ಕದ ಊರಿನ ಜೋನ್ಸ್ ದಂಪತಿಗಳ ಮಗಳು. ಇದು ಮೂರು ತಿಂಗಳ ಹಿಂದೆ ನಾನು ಹೆತ್ತ ಮಗು. ನಿಮಗೆ ಇದನ್ನು ತೋರಿಸಬೇಕು ಎಂದು ಬಂದಿದ್ದೇನೆ., ಅಲ್ಲಾ, ನೀವು ಗುರುತು ಹಿಡಿಯುತ್ತೀರಿ ಅಂತ ನನಗೆ ನಿಶ್ಚಯ. ಹಾಗೆಂತಲೇ ಇಲ್ಲಿಗೆ ಬಂದೆ. ನಿಮ್ಮ ಮೊಮ್ಮಗನನ್ನು ಹೆತ್ತ ನನ್ನ ಮೇಲೆ ನಿಮಗೆ ಪ್ರೀತಿ ಇರಲೇಬೇಕಲ್ಲ ' ಎಂದು ದೃಢವಾಗಿಯೇ ಹೇಳಿದಾಗ ಇಲ್ಲಿ ರಂಪಾಟ ನಡೆಯುವುದಿಲ್ಲ ಎಂಬುದನ್ನು ಗ್ರಹಿಸಬೇಕಾಗುತ್ತದೆ. ಅಂಥ ಸಂದರ್ಭ ಸೃಷ್ಟಿಯಾಗುವುದಕ್ಕೆ ದುಷ್ಯಂತನೂ ಇಲ್ಲಿ ಇಲ್ಲ ಎಂಬುದೂ ಸರಿಯೇ. ಅದಕ್ಕೂ ಮುಖ್ಯವಾಗಿ ಇಲ್ಲಿನ ಸಂಸ್ಕೃತಿಯ ಭಿನ್ನತೆ ಕೂಡಾ ಕಾರಣವಾದುದನ್ನು ಗ್ರಹಿಸಬೇಕಾಗುತ್ತದೆ.

ಲಿಯೋನೆಲ್ ಹಾಗೂ ಜೆನ್ನಿ ವಿವಾಹಕ್ಕೂ ಮುನ್ನ ಜೊತೆಗಿದ್ದ ದಿನಗಳನ್ನು ಇಲ್ಲಿ ಸಹಜವೆಂಬಂತೆ ಸ್ವೀಕಾರಗೊಳ್ಳುವುದು ಒಂದು ಮೌಲ್ಯವಾಗಿ ಪ್ರತಿನಿಧಿತವಾಗಿದೆ. ವಿವಾಹ ಆಗುವ ಮುಂದಿನ ಆಲೋಚನೆಗೂ ಮುನ್ನ ನಡೆದು ಹೋದ ಪ್ರಾಕೃತಿಕ ಕ್ರಿಯೆಗೆ ಆಕೆ ಸಮ್ಮತಿಸಿದ್ದು ಮದುವೆ ಆಗುವ ಆಲೋಚನೆಯ ಮುಂದುವರಿಕೆಯಿಂದಾಗಿಯೇ. 'ಅವನೇನು ಮೋಸ ಮಾಡೋಣ ಅಂತ ಯೋಚಿಸಿರಲಿಲ್ಲ. ನಾನೂ ಮೋಸ ಏನೂ ಹೋಗಲಿಲ್ಲ. ಮದುವೆ ಆಗತಾನೆ, ನಾಲ್ಕು ದಿನ ಮುಂದಾಗಿ ಜೊತೆಗೆ ಇದ್ದರೆ ಏನು ತಪ್ಪು, ಎಂದುಕೊಂಡೆ. ಒಪ್ಪಿದೆ. , ಲಿಯೋನೆಲ್ ಆಗತೇನೆ ಸ್ವಲ್ಪ ತಡಿ ಅಂದ. ಆಯಿತು ಎಂದು ನಾನು ಸುಮ್ಮನಾದೆ. ಇನ್ನು ಮೂರು ತಿಂಗಳಾಯಿತು. ಲಿಯೋನೆಲ್ ಹತ್ತಿರದಲ್ಲಿ ಯಾವುದೂ ಕೆಲಸ ಸಿಕ್ಕಲಿಲ್ಲ. ದೊಡ್ಡ ಊರಿಗೆ ಹೋಗಿ ಏನಾದರೂ ಸಂಪಾದಿಸೋದು ಆಗುತ್ತದೆಯೇ ನೋಡಿಕೊಂಡು ಬರುತ್ತೇನೆ ಅಂತ ನನಗೆ ಹೇಳಿ ಹೋದ. ಹೋದ ಮೂರು ತಿಂಗಳಲ್ಲಿ ನಾನು ಈ ಮಗುವನ್ನು ಹೆತ್ತೆ. ಅಮ್ಮ ಅಪ್ಪ ನನ್ನನ್ನ ಬಯ್ಯಲಿಲ್ಲ. ಹುಡುಗ ನಂಬಿಕೆ ಕೊಟ್ಟ, ನೀ ಒಪ್ಪಿಕೊಂಡೆ, ತಪ್ಪಿಲ್ಲ. ಮಗೂನ ನೋಡಿಕೊಳ್ಳಬೇಕು ನಾವು ಮೂವರು ದುಡಿದರೂ ನಮ್ಮ ಸಂಸಾರಕ್ಕೆ ಎಷ್ಟು ಬೇಕೋ ಅಷ್ಟೇ ಬರುತ್ತೆ. ಮಗೂನ ನೋಡಿಕೊಂಡು ನೀ ಸುಮ್ಮನೆ ಕೂತರೆ ಅಷ್ಟು ವರಮಾನ ಕಡಿಮೆ. ಮಗುವಿಗೆ ಪೋಷಣೆ ಸುಲಭ ಅಲ್ಲ. ಹೋಗಿ ಲಿಯೋನೆಲ್ ತಂದೆಗೆ ಹೇಳು. ಅವರು ಏನಾದರೂ ಏರ್ಪಾಡು ಮಾಡುವುದಾದರೆ ನಿನ್ನ ಬದುಕು ಸುಲಭ ಆಗತ್ತೆ ಅಂದರು.

ಹೌದು ಅಂತ ತೋಚಿ ಇದೋ ಈ ಹೊತ್ತು ಹೀಗೆ ಬಂದೆ. ಲಿಯೋನೆಲ್ ಹೊರಟುಹೋಗಿ, ತಿಂಗಳು ಬರದೆ ನಿಂತಾಗ ನಾನು ಇತ್ತಲಾಗ ಬಂದು, ಜನರನ್ನು ಕೇಳಿ, ಇದು ನಿಮ್ಮ ಮನೆ ಅಂತ

ತಿಳಿಕೊಂಡೆ. ನಿಮ್ಮನ್ನ ಅಜ್ಜೀನ ದೂರದಿಂದ ನೋಡಿದೆ. ಇಬ್ಬರೂ ಒಳ್ಳೆಯವರು, ಒಳ್ಳೇ ಮನಸ್ಸಿನ ಜನ, ನನ್ನ ಕೈ ಹಿಡೀತಾರೆ ಅಂದುಕೊಂಡೆ. ಬಂದು ನಿಮ್ಮೆದುರಿಗೆ ಮಗೂನ ಹಿಡಿದಿದ್ದೇನೆ. ಏನಂತೀರಿ' ಎಂದು ಅವಳು ನಿಶ್ಯಂಕೆಯಿಂದ ಅರಿಕೆ ಮಾಡಿ [illegible] ಆಕೆಯ ಸಂಸ್ಕೃತಿ ನೆಲೆಯಲ್ಲಿಯೇ ಅದನ್ನು ಧೈರ್ಯವಾಗಿ ಪ್ರಸ್ತುತ ಪಡಿಸುತ್ತಾಳೆ. ಇದರಲ್ಲಿ ಬಡತನದ ನಡುವೆಯೂ ಆಕೆ ತನಗೆ ಗತಿ ಇಲ್ಲವೆಂದು ರೋದಿಸುವುದಿಲ್ಲ, ತನ್ನನ್ನು ಸಲಹುವಂತೆ ಗೋಳಿಡುವುದಿಲ್ಲ.

'ತಂದೆ ತಾಯ ಜೊತೆಗಿರುತ್ತ ನಾನು ಅಲ್ಲೇ ಇರುತ್ತೇನೆ. ನೀವು ಮಗೂನ್ನ ನೋಡಿಕೊಳ್ಳಿ. ವಾರದಲ್ಲಿ ನಾಲ್ಕು ಸಲ ನಾನು ಬಂದು ಮಗುವನ್ನು ನೋಡಿಕೊಂಡು ಹೋಗುತ್ತೇನೆ. ನಿಮಗೇನಾದರೂ ಸಹಾಯಬೇಕು ಅನ್ನಿಸಿದರೆ ಮಾಡಿಕೊಡುತ್ತೇನೆ' ಎಂದು ಅಳುಕದೆ ತನ್ನ ನಿರ್ಧಾರವನ್ನು ತಿಳಿಸುವುದು ಅವಳ ಸ್ವಾತಂತ್ರ್ಯವನ್ನು ಪ್ರಸ್ತುತಪಡಿಸಿದ್ದಾಗಿದೆ. ಇಲ್ಲಿ ಮಗುವಿನ ಹುಟ್ಟಿಗೆ ಕಾರಣನಾದವನ ಹೆತ್ತವರಿಗೇ ಮಗುವನ್ನು ಸಲಹುವ ಜವಾಬ್ದಾರಿಯನ್ನು ಹೊರಿಸುವುದು ಮಗುವಿಗೆ ಕುಟುಂಬದ ಭದ್ರತೆಯ ಬದುಕು ಬೇಕು. ತಂದೆ ಮನೆಯ ಗುರುತು ಇಲ್ಲಿಯೂ ಪಿತೃ ಪ್ರಧಾನ ಮೌಲ್ಯವನ್ನು ಒಪ್ಪಿಕೊಂಡು ಅದಕ್ಕೇ ಶರಣಾಗಿ ಬಾಳುವುದೇ ಸರಿಯಾದದ್ದೆಂದು ಪರಿಚಯಿಸುತ್ತಾಳೆ.

ಲಿಯೋನೆಲ್‌ನಿಂದಾಗಿ ಈ ಮಗು ಜನಿಸಿದ್ದಾದದ್ದರಿಂದ ಈ ಮಗುವನ್ನು ಸಲಹುವ ಹೊಣೆಯನ್ನು ತಂದೆಯಾದವನ ಕುಟುಂಬಕ್ಕೆ ಬಿಟ್ಟುಬಿಡುವುದು ಒಂದು ರೀತಿಯಲ್ಲಿ ಅಂಥ ಮನಃಸ್ಥಿತಿಯ ಮಂದಿಗಳಿಗೆ ಜವಾಬ್ದಾರಿಯನ್ನು ಹೊರಿಸುವುದಾಗಿದೆ. ತಾಯ್ತನದ ಭಾವನಾತ್ಮಕ ಸಂಬಂಧ ಆರ್ಥಿಕ ಅಭದ್ರತೆ, ಹೆತ್ತವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿರುವ ತಾನು ಮಗುವನ್ನು ಬಿಟ್ಟು ಬದುಕುವ ಅನಿವಾರ್ಯತೆ ಒಪ್ಪಿತವಾಗುತ್ತದೆ. ಈ ರೀತಿಯ ಆಕೆಯ ಬೇಡಿಕೆ ಇಲ್ಲಿ ಅಮಾನ್ಯವೂ, ತಿರಸ್ಕೃತವೂ ಆಗುವುದಿಲ್ಲ. ಇಲ್ಲಿ ಆಕೆ ಕರೆದೊಯ್ದಿದ್ದ ಮಗು ತಂದೆಯ ಪ್ರತಿರೂಪವಾದದ್ದರಿಂದಲೋ ಏನೋ ಅಜ್ಜ ಅಜ್ಜಿ ಮಗುವನ್ನು ಮಗನ ಮಗು ಹೌದು ಎಂದು ಒಪ್ಪಿಕೊಳ್ಳುವಂತಾಗುತ್ತದೆ. ಇಲ್ಲಿ ಮಗುವಿನ ರೂಪವನ್ನು ಹುಡುಕುವ ಕೆಲಸ ನಡೆದಿದೆ. ಮಗುವಿನ ಹುಟ್ಟಿಗೆ ಕಾರಣನಾದ ಲಿಯೋನೆಲ್‌ನ ಲಕ್ಷಣಗಳೆಲ್ಲ ಮಗುವಿನಲ್ಲಿ ಕಂಡದ್ದರಿಂದ ಅಜ್ಜಿ ಮಗುವನ್ನು ಮೊಮ್ಮಗುವೆಂದೇ ಒಪ್ಪಿಕೊಳ್ಳುವುದು ಕೂಡ ಸಾಂಪ್ರದಾಯಿಕ ನಿಲುವುಗಳನ್ನೇ ಪ್ರತಿಪಾದಿಸುತ್ತದೆ.

ಲಿಯೋನೆಲ್‌ನ ಆತುರ, ತಲೆಮರೆಸಿಕೊಳ್ಳುವಂಥ ಬೇಜವಾಬ್ದಾರಿತನಕ್ಕೆ ಜೆನ್ನಿ ನೀಡುವ ಪ್ರತಿಕ್ರಿಯೆ, ತೆಗೆದುಕೊಳ್ಳುವ ನಿರ್ಧಾರ ಇತರ ಹೆಣ್ಣುಗಳಿಗೂ ಮಾದರಿಯದ್ದಾಗಿದೆ. ಅವರ ಮಗನ ಹೊಣೆಗಾರಿಕೆ ತನಕ್ಕೆ ಮಗುವನ್ನು ತನ್ನ ಬಡತನದ ನಡುವೆ ತಾಯ್ತನದ ಭಾವುಕತನಕ್ಕೆ ಮರುಳಾಗಿ ತಾನೇ ಸಾಕುವ ಹಠ ತೊಡುವುದಿಲ್ಲ. ಇಲ್ಲಿನ ತಾಯ್ತನ ಮಗುವನ್ನು ತಾಯಾಗಿ ನೋಡಿಕೊಳ್ಳುವ ಹೊಣೆ ಮಾತ್ರ ಹೊತ್ತು ಸಾಕಿ ಸಲಹುವ ಜವಾಬ್ದಾರಿಯನ್ನು ಮಗುವಿನ ತಂದೆಯ ಕುಟುಂಬಕ್ಕೆ ಹೊರಿಸಿ, ತನ್ನ ಕುಟುಂಬವನ್ನು ಸಲಹುವ ನಿಲುವಿಗೆ ಬಂದ ಚಾಲಾಕಿತನ, ಅಂಥ ಹೊಣೆಗೇಡಿತನ ಮಾಡುವ ವರ್ಗಕ್ಕೆ

ತೋರಿದ ತಣ್ಣನೆಯ ಪ್ರತೀಕಾರವಾಗಿಯೂ ಅದನ್ನು ಚರ್ಚಿಸಬಹುದು. ತಾನೂ ಅಲ್ಲಿ ಆಶ್ರಯ ಕೇಳದಿರುವುದು ಅವಳ ಸ್ವಾಭಿಮಾನವಾಗುತ್ತದೆ. ಗಂಡನೇ ತನ್ನನ್ನು ಕರೆದೊಯ್ಯಲಿ ಎಂಬ ಛಲವೂ ಅಲ್ಲಿದೆ. ಈ ಛಲ, ನಿಲುವಿನ ಆಂಗ್ಲಸಂಸ್ಕೃತಿಯನ್ನು ಪರಿಚಯಿಸುವುದರೊಂದಿಗೆ ಮಾಸ್ತಿ ಮಗುವಿನ ಭದ್ರತೆಗಾಗಿ ತಂದೆಯ ಅಸ್ತಿತ್ವ ಬೇಕು. ಅದರ ಬೆಳವಣಿಗೆಗೆ ಕುಟುಂಬದ ನೆಲೆ ಅಗತ್ಯ ಎಂಬುದನ್ನು ತೋರಿಸಿಕೊಡುತ್ತಾರೆ.

ಪಾತಿವ್ರತ್ಯವನ್ನು ಮೀರಿ

ಪಾತಿವ್ರತ್ಯದ ನಂಬಿಕೆಯನ್ನು ಮೀರುವ ಪ್ರಯತ್ನ ಮಾಡುವ ಸ್ತ್ರೀಯರು ಮಾಸ್ತಿ ಕತೆಗಳಲ್ಲಿದ್ದಾರೆ. ಹಾಗೆ ಮೀರುವವರು ಅವೈದಿಕ ಸ್ತ್ರೀಯರೇ. ಅವರು ವಿವಾಹದ ಬಳಿಕವೂ ಗಂಡ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಗಲೂ ಇನ್ನೊಬ್ಬನೆಡೆಗೆ ಆಕರ್ಷಿತರಾಗಿ ಅವರೊಂದಿಗೆ ಬದುಕು ಮಾಡುತ್ತಾರೆ. ಆದರೆ ಭಾರತೀಯ ಸಂಸ್ಕೃತಿಯ ತತ್ವಕ್ಕೆ ಈ ನಡವಳಿಕೆ ವಿರುದ್ಧವಾದುದರಿಂದ ಅವರಿಗೆ ಅದರಿಂದ ತೊಂದರೆಯೇ ಕಾಡುತ್ತದೆ. ತನ್ನ ಸ್ವಾರ್ಥಕ್ಕೆ ಪುರುಷ ಸ್ಥಾಪಿಸಿದ ಇಂಥ ನಿಯಮಗಳಿಗೆ ಹೆಣ್ಣು ತಪ್ಪಬಾರದೆಂಬುದನ್ನು ಸಾಬೀತುಪಡಿಸುವುದಕ್ಕಾಗಿ ಕೂಡ ಅವಳಿಗೆ ಕಷ್ಟ ಒದಗುತ್ತದೆ ಎಂಬುದನ್ನು ಗ್ರಹಿಸಬಹುದಾಗಿದೆ. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿಯೂ ಅವರು ಮರಳಿ ಮೊದಲ ಗಂಡನ ಬಳಿಗೆ ಬರುವಂತಾಗುತ್ತದೆ. ಈ ಸಂದರ್ಭವನ್ನು ವೆಂಕಟಿಗನ ಹೆಂಡತಿ ಹಾಗೂ ಆಂಗ್ಲನೌಕಾ ಕ್ಯಾಪ್ಟನ್, ವಿಚಿತ್ರ ಪ್ರೇಮ, ಸಂಯಮಿ ಕೇಟೋ, ಮುಪ್ಪಿನ ಚಪಲ, ಪಕ್ಷಿಜಾತಿ ಮೊದಲಾದ ಕೆಲವು ಕತೆಗಳ ಮೂಲಕ ಚರ್ಚಿಸಬಹುದಾಗಿದೆ.

'ವೆಂಕಟಿಗನ ಹೆಂಡತಿ' ಕತೆಯ ರಂಗಿ ಪತಿ ವೆಂಕಟಿಗ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಗಲೇ ಸಾಹುಕಾರತನಕ್ಕೆ ಮರುಳಾಗಿ ಸಾಹುಕಾರನೊಂದಿಗೆ ಬಾಳುವೆ ಮಾಡ ಹೊರಡುತ್ತಾಳೆ. ಅಲ್ಲಿ ಅವಳು ಪತಿಯೇ ಪರದೈವ ಎಂಬ ನಂಬಿಕೆಯನ್ನು ಮುರಿಯ ಹೊರಟದ್ದನ್ನು ನಿಚ್ಚಳವಾಗಿ ಗುರುತಿಸಬಹುದು. ಏನೂ ಅರಿಯದ ಹುಡುಗಿಯಾಗಿ, ಕದಿಯೋಣ ಎಂದರೆ ಜೋಕೆ ದೇವರು ಶಿಕ್ಷೆ ಕೊಡುತ್ತಾನೆ ಎನ್ನುವ ಪ್ರಾಮಾಣಿಕಳಾಗಿ, ಹುಡುಗರ ಸಲುಗೆಗೆ ಏನೋ ಅದು, ನನ್ನ ಸೂಳೇನ್ನ ಮಾಡಿದ್ಯಾ ಎನ್ನುತ್ತಿದ್ದ ಮುಗ್ಧ ವ್ಯಕ್ತಿತ್ವದವಳಾಗಿ ಕಾಣಿಸಿಕೊಳ್ಳುತ್ತ ಬಂದ ಅವಳು ಸಾಹುಕಾರನೊಂದಿಗೆ ಬಾಳ ಹೊರಟಿದ್ದು ಪತಿಗೆ ಅಚ್ಚರಿ ಹುಟ್ಟಿಸುತ್ತದೆ. ಅಂದರೆ ವ್ಯಕ್ತಿತ್ವ ಬದಲಾವಣೆಗೆ ಒಳಗಾಗುವ ಪರಿಯಾಗಿ ಮಾಸ್ತಿ ಇದನ್ನು ಪರಿಚಯಿಸಿದ್ದಾರೆ.

ಹೆಣ್ಣಿಗೆ ತನಗೆ ಬೇಕಾದ ರೀತಿಯಲ್ಲಿ ಬದುಕುವ ಆಯ್ಕೆಯ ಸ್ವಾತಂತ್ರ್ಯ ಇರುವ ಸಮಾಜದೊಳಗಿನಿಂದಲೇ ಹೆಂಡತಿಯ ನಿರ್ಧಾರಕ್ಕೆ ಗಂಡ ಅಚ್ಚರಿಪಡುವುದು, ಅತ್ತೆ ನನ್ನ ಮಗನ ಕೆಡಿಸಿದಿಯಾ? ಎಂದು ಬಯ್ದಾಡುವುದು, ಅದನ್ನು ಒಪ್ಪಿಕೊಳ್ಳದ ಇನ್ನೊಂದು ಮುಖವನ್ನು

ತೋರಿಸಿದೆ. ಅತ್ತೆ ಬಹು ಮಂದಿ ಒಪ್ಪಿರುವ ಸನಾತನ ವೈದಿಕ ಮೌಲ್ಯದ ಪ್ರತಿನಿಧಿಯಾಗಿದ್ದಾಳೆ. ಸಾಂಪ್ರದಾಯಿಕ ನಿಲುವು ಕಳಚಿಕೊಳ್ಳುವುದರ ಕುರಿತು ಆತಂಕದಿಂದ ಆಕೆ ಬಾಯಿ ಬಾಯಿ ಬಡಿದುಕೊಳ್ಳುತ್ತಾಳೆ. ಆದರೆ ಈ ಅಚಾನಕ್ ನಿಲುವು ಗಂಡನಾದವನಿಗೆ ಅಚ್ಚರಿ ಹುಟ್ಟಿಸುತ್ತದೆ. ಅವಳನ್ನು ಆತ ನಿಂದಿಸುವುದಿಲ್ಲ, ಸಂಯಮದಿಂದಲೇ ಪರಿಸ್ಥಿತಿಯನ್ನು ನಿಭಾಯಿಸುತ್ತಾನೆ. ವ್ಯವಸ್ಥೆಯ ಪರಿವರ್ತನೆಯನ್ನು ಆತ ವೀಕ್ಷಿಸುವ ಕಾಲವೂ ಆಗಿ ನಿಲ್ಲುತ್ತಾನೆ.

ರಂಗಿ ಸಾಹುಕಾರನ ಶ್ರೀಮಂತಿಕೆಯು ರಂಗಿಗೆ ಮರುಳಾಗುವುದು ಅಂದರೆ ಆಧುನಿಕತೆಯ ಸೋಗಿಗೆ ಮಾರು ಹೋಗುವುದು. ಆ ಶೋಕಿಯನ್ನು ಅನುಭವಿಸಬೇಕೆಂಬ ಆಸೆಯನ್ನೇ ಅವಳು ತಡೆಹಿಡಿಯದೆ, ಬೇಡ ಎಂದರೂನೂ ಹೋಗದೇ ಇರಲಾರದ ಅವಳು ಅವನ ಸಂಪೂರ್ಣ ಹಿಡಿತದೊಳಗೇ ಸಿಲುಕಿ ಒಂದರ್ಥದಲ್ಲಿ ಕರಗಿಯೇ ಹೋಗುತ್ತಾಳೆ. ಅವನ ಸ್ತ್ರೀ ಲೋಲುಪತೆಯ ಸ್ವಭಾವಕ್ಕೆ ರೋಸಿ ಹೋಗುತ್ತಾಳಲ್ಲದೆ ಅದನ್ನು ಪ್ರಶ್ನಿಸುವ ಧೈರ್ಯವನ್ನು ಪ್ರಕಟಿಸುತ್ತಾಳೆ. ಅಲ್ಲಿಂದ ಹೊರಬಂದು ಗಂಡನೊಂದಿಗೆ ಮನಕರಗುವಂತೆ ಪಶ್ಚಾತ್ತಾಪ ಪಡುತ್ತ 'ದೇವರಂಥ ಗಂಡನ್ನ ಬಿಟ್ಟು ನಿನ್ನ ಹತ್ತಿರ ಬಂದೆ. ನನ್ನ ಬುದ್ಧಿಗೆ ಕತ್ತಲು ಮುಟ್ಟಿತ್ತು. ಆ ಹೊತ್ತು ಒಳ್ಳೆಯ ಮಾತಾಡಿ ನೀನು ನನ್ನನ್ನು ಕೆಡಿಸಿದೆ, ಮಿಂಡನಾದೆ. ಈ ಹೊತ್ತು ಕೆಟ್ಟ ಮಾತುಗಳನ್ನಾಡಿ ನನ್ನ ಉದ್ಧಾರ ಮಾಡಿದೆ. ನೀನು ನನ್ನ ತಂದೆ' ಎಂದು ಪಶ್ಚಾತ್ತಾಪದಿಂದ ಮನಕರಗುವಂತೆ ಕ್ಷಮೆ ಕೇಳಿ ಹಳೆ ಗಂಡ ವೆಂಕಟಿಗನೊಂದಿಗೆ ಬದುಕು ಕಾಣುವುದಕ್ಕೆ ಬರುತ್ತಾಳೆ. ಅಂದರೆ ಗಂಡನನ್ನು ತೊರೆಯಬಾರದ, ತಿರಸ್ಕರಿಸಬಾರದ ನೀತಿಯನ್ನೇ ಇಲ್ಲಿ ಅವಳ ಬದುಕಿನ ಮೂಲಕ ನೂಸ್ತಿ ಮುಂದಿಟ್ಟಿದ್ದಾರೆ. ಅಂದರೆ ಇಲ್ಲಿ ಗಂಡನ ಕುರಿತ ಭಕ್ತಿ ತೂರೆಯಬಾರದ ಸಂದೇಶವೂ ಅಡಕವಾಗಿರುವುದು ಸುಸ್ಪಷ್ಟವಾಗಿದೆ. ತನ್ನ ನಿರ್ಧಾರವೇ ಘೋರ ತಪ್ಪಾಗಿ ಗುರುತಿಸಿಕೊಂಡು ಶಾಸ್ತಿ ಪಡೆಯುವ ರಂಗಿ ಮರಳಿ ಹಳೇ ಗಂಡನನ್ನೇ ಒಪ್ಪಿಕೊಂಡು ಕ್ಷಮೆ ಯಾಚಿಸುವುದು ಅವಳ ಅತಿ ಸ್ವಾತಂತ್ರ್ಯದ ನಿಲುವುಗಳನ್ನು ಗಾಳಿಗೆ ತೂರಿಸುತ್ತದೆ. ಹೆಣ್ಣೇ ಮನಃ ಪರಿವರ್ತನೆ ಮಾಡಿ ತಾನು ಕೈಗೊಂಡ ತೀರ್ಮಾನಗಳು ತಪ್ಪು ಎಂದು ಕ್ಷಮೆಯಾಚಿಸುವಲ್ಲೇ ಸಂಪ್ರದಾಯ ಬದ್ಧತೆ ಅಥವಾ ಪುರುಷ ಪ್ರಧಾನ ಮೌಲ್ಯಗಳನ್ನೇ ಒಪ್ಪುವುದನ್ನು ಕಾಣುತ್ತೇವೆ. ಮತ್ತು ಅದನ್ನು ಹೆಣ್ಣೇ ಪ್ರತಿಪಾದಿಸುವ ಮೂಲಕ ಇತರರೂ ಅನುಸರಿಸುವಂತೆ ಪ್ರೇರಣೆ ನೀಡುತ್ತಾಳೆ.

'ಸಾಹುಕಾರನ ಲಂಪಟತನಕ್ಕೆ ಆಕೆಯ ಪ್ರತಿರೋಧವನ್ನು 'ನೀನೇನು ತಾಳಿಕಟ್ಟಿಕೊಂಡ ಹೆಂಗಸು ಎಂತ ತಿಳಿದುಕೊಂಡಿಯಾ? ಜಿಸಿ ಹೆಚ್ಚು ಸಿಕ್ಕುತ್ತೆ ಅಂತ ಬಾಯಿ ತೆರೆದು ಬಂದ ನಾಯಿ, ನಿನಗೆಷ್ಟೆ ಅಹಂಕಾರ' ಎಂದು ಅವಮಾನಿಸಿದ್ದು ಹೆಣ್ಣನ್ನು ನೋಡುವ ಗಂಡಸಿನ ಮನಃಸ್ಥಿತಿಗೆ ಸಾಕ್ಷಿಯಾಗುತ್ತದೆ. ವೆಂಕಟಿಗ ಸೌಮ್ಯದ ಮುಖವಾದರೆ ಸಾಹುಕಾರನದು ಧಾರ್ಷ್ಟ್ಯದ ಇನ್ನೊಂದು ಮುಖ. ಅವೆರಡನ್ನೂ ಪರಿಚಯಿಸುವ ಪಾತ್ರವಾಗಿ ರಂಗಿ ಕೆಲಸ ಮಾಡುತ್ತಾಳೆ. ವೆಂಕಟಿಗ ಮರಳಿ ಬಂದ ಹೆಂಡತಿಯನ್ನು ಚಂಚಲಿತನಾಗದೆ ಸ್ವೀಕರಿಸಿ ಬಿಡುತ್ತಾನೆ. ಕೈಯ್ಯಲ್ಲಿರುವ ಮಗುವಿನ ಪ್ರಾಯ, ಚಹರೆ

ಗಮನಿಸಿದರೂ ಆಕೆ ಎಲ್ಲಿ ನೊಂದಾಳೋ ಎಂದು ಆ ಕುರಿತು ತಲೆಕೆಡಿಸಿಕೊಳ್ಳದೇನೇ ಮಗುವನ್ನು ಮಗುವಾಗಿಯಷ್ಟೇ ನೋಡುವ ದೊಡ್ಡಗುಣ ಮೆರೆಯುತ್ತಾನೆ.

ವೆಂಕಟಿಗ ಸಂಪೂರ್ಣವಾಗಿ ಅವಳನ್ನು ಕ್ಷಮಿಸಿರುವ ರೀತಿಯಲ್ಲಿ ಸ್ತ್ರೀಯರನ್ನು ಸಮಾಜ ಕಾಣಬೇಕಾದ ರೀತಿಗೆ ಉದಾಹರಣೆಯಾಗುತ್ತಾನೆ. ಒಬ್ಬ ಹೆಣ್ಣಿನ ನಡವಳಿಕೆಯ ಹಿಂದೆ ಅವಳ ಮನಃಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹೆಣ್ಣು ವ್ಯಕ್ತಿತ್ವಕ್ಕೆ ಗೌರವ ಕೊಡುವ ಹಾಗೂ ಕೊಡಬೇಕಾದದ್ದರ ಕಡೆಗೆ ಬೊಟ್ಟು ಮಾಡುತ್ತಾನೆ. ಗಂಡನೆಂಬವ ಇಲ್ಲಿ ಹಿಂಸಕನಾಗುವುದಿಲ್ಲ. ಅಂದರೆ ಸನಾತನ ಧರ್ಮದ ತತ್ವಕ್ಕೆ ಹೆಣ್ಣನ್ನು ಬದ್ಧಗೊಳಿಸುವುದಕ್ಕೆ ಗಂಡನ್ನು ಉದಾರವಾದಿಯಾಗಿ ಮಾಸ್ತಿ ಚಿತ್ರಿಸಿದ್ದಾರೆ. ಈ ಉದಾರವಾದಿ ಧೋರಣೆಯ ಹಿಂದೆ ಸನಾತನ ಸಂಸ್ಕೃತಿಯ ಮೌಲ್ಯವನ್ನು ಮೆರೆಯಲಾಗಿದೆ. ರಂಗಿ ಗಂಡನನ್ನು ಬಿಟ್ಟು ಸಾಹುಕಾರನಲ್ಲಿ ಹೋಗುವ ಮನಸ್ಸು ಮಾಡುವುದು ಶ್ರೀಮಂತಿಕೆಯ ಆಶೆಯಿಂದ. ಅಲ್ಲಿ ತನ್ನ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅದನ್ನು ಪ್ರತಿಭಟಿಸಿ ಮರಳಿ ಗಂಡನಲ್ಲಿಗೆ ಬರುವಂತೆ ಮಾಡಿರುವಲ್ಲಿ ಹೆಣ್ಣು ಆಧುನಿಕತೆಗೆ ಒಲಿಯಬಾರದಂತೆ ಮಾಸ್ತಿ ತಡೆದದ್ದು ಸ್ಪಷ್ಟವಾಗುತ್ತದೆ. ಹೆಣ್ಣು ಸ್ವಾತಂತ್ರ್ಯದ ನೆಪದಲ್ಲಿ ಗಂಡನ ಹೊರತಾಗಿ ಇನ್ನೊಬ್ಬನೊಂದಿಗೆ ಬಾಳಬಾರದ ನೀತಿಯನ್ನು ಸಾಹುಕಾರ ನೀಡುವ ಹಿಂಸೆಯ ಮೂಲಕ ಹೇಳಲಾಗಿದೆ.

'ಹಣ, ದವಲತ್ತಿಗೆ ಮರುಳಾಗಿ ಹೋಗಿದ್ದ, ತಿರುಗ ಗಂಡನ ಜೊತೆ ಇರಲು ಬಂದ ವೆಂಕಟಿಗನ ಹೆಂಡತಿ ಹಳೆ ಮೌಲ್ಯವನ್ನು ಹೇಳುತ್ತಿದ್ದಾಳೆಯೇ. ಪಶ್ಚಿಮದ ಶಿಕ್ಷಣ ಅಲ್ಲಿನ ಸಾಂಸ್ಕೃತಿಕ ಪರಿಕರಗಳನ್ನು ಅನುಸರಿಸಿ ಮಾಡಿದ ಇಲ್ಲಿನ ಸಮಾಜದ ವಿಶ್ಲೇಷಣೆಗೆ ಮಾತ್ರ ಆಧುನಿಕ ಮೌಲ್ಯಗಳ ಶೋಧನೆಯಾಗಿ ಬಿಡುತ್ತದೆಯೇ?' ಎಂದು ಕೆ. ಸತ್ಯನಾರಾಯಣ ಪ್ರಶ್ನಿಸಿದ್ದಾರೆ.[೧]

ಇದರ ಜೊತೆಗೇನೇ ಸಾಹುಕಾರನ ಪತ್ನಿ ಪತಿಯ ಲೋಲುಪತೆಗೆ ಮೂಕಿಯಾಗುತ್ತಾಳೆ. ಪತಿ ತನ್ನ ಪತಿ ಇನ್ನೋರ್ವ ವಿವಾಹಿತ ಸ್ತ್ರೀಯನ್ನು ಇಟ್ಟುಕೊಳ್ಳುವುದನ್ನು ಪರಿಪೂರ್ಣವಾಗಿ ವಿರೋಧಿಸುತ್ತಾಳಾದರೂ ಅವಳ ಬಾಯಿಗೆ ಕಿವಿ ಇಲ್ಲವಾಗುತ್ತದೆ. ಇದು ಹೆಣ್ಣಿನ ಅಸಹಾಯಕತೆಯ ವ್ಯಕ್ತಿತ್ವಕ್ಕೆ ಉದಾಹರಣೆಯಾಗುತ್ತದೆ. ಆದರೂ ಪಾತಿವ್ರತ್ಯದ ನೆಪದಿಂದ ಆಕೆ ಅವನಿಂದ ಹೊರಬಂದು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಅವಳು ಮನಸ್ಸು ಮಾಡದಿರುವುದು ಪಾರಂಪರಿಕ ಮೌಲ್ಯವನ್ನು ಒಪ್ಪಿಕೊಳ್ಳಬೇಕಾದುದನ್ನು ಪ್ರತಿಪಾದಿಸುತ್ತದೆ.

ಪಾತಿವ್ರತ್ಯವನ್ನು ಶೀಲದ ನೆಲೆಯಿಂದ ಕಾಪಾಡಿಕೊಳ್ಳಬೇಕೆಂಬುದನ್ನು 'ಪಕ್ಷಿಜಾತಿ' ಕತೆಯ ಈರವ್ವ ಪ್ರತಿಪಾದಿಸುವ ರೀತಿಯೇ ಭಿನ್ನವಾದುದು. ವಿವಾಹಿತೆಯಾಗಿದ್ದರೂ ಸೋದರನೊಂದಿಗೇ ಲೈಂಗಿಕ ಸಂಬಂಧ ಹೊಂದುವ ಮೂಲಕ ಸಮಾಜ ಹಾಕಿದ ಚೌಕಟ್ಟನ್ನು ಅವಳು ಮೀರಿದ್ದನ್ನು ಕಾಣುತ್ತೇವೆ.

---

೧ ಪು.೧೧೦ ಸ್ಥಿತ್ಯಂತರಗಳ ಶತಮಾನದ ಕತೆಗಾರ ಮಾಸ್ತಿ, ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ, ಸಂ. ಡಿ.ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ, ಪ್ರ. ಉಷಾ ೧೯೯೨

ಅನೈತಿಕ ಎಂದು ಕರೆಯಿಸಿಕೊಳ್ಳುವ ಲೈಂಗಿಕ ಸಂಬಂಧ ಸ್ವಂತ ಅಣ್ಣತಂಗಿಯ ಮಧ್ಯೆ ನಡೆದು ಹೋಗಿ ಬಿಡುವ ಘಟನೆ ಗಂಡನಾದವನಿಗೆ ಆಘಾತವುಂಟುಮಾಡುತ್ತದೆ. 'ಚಿಕ್ಕಂದಿನಿಂದಲೇ ಮೈಸುಖ ಉಣ್ಣುತ್ತಬಂದಿರುವ ಅವರು ಆಗಲೇ ಕೂಡಿಯೂ ಆಗಿದೆ ಎನ್ನುವುದು - ಬೆಳೀತಾ ನಾವು ಅಣ್ಣ - ತಂಗಿ, ಏನು ತಿಳಿದು ಮಾಡಿದೆವೆ? ತಿಳೀದೆ ಆಟದಲ್ಲಿ ಗಂಡು ಹೆಣ್ಣಾಗಿ ಕೂಡಿದೆವು. ಅದು ಬರೀ ಆಟ; ಹಂಗೂ ಬಾಳಿದಿವಿ ಅಂತ ಅಲ್ಲ. ಕೂಡಿದಿವಿ. ಜನ ಇದನ್ನು ಒಪ್ಪೋದಿಲ್ಲ ಅಂತ ಕಂಡಿವಿ, ಬಿಟ್ಟಿವಿ, ಪಕ್ಷಿಜಾತಿ, ಬೆಳೆವನ ಹಕ್ಕಿ ಕೂಡ ಹುಟ್ಟಿದೋವು ಹೀಗೆ ಬಾಳತಾವೆ ಅಂತಾರೆ. ನಾವು ಹಂಗೆ ಬಾಳಲಿಲ್ಲ. ಎಳೇದರಲ್ಲಿ ಕೂಡಿದಿವಿ. ಬೆಳೆದ ಮೇಲೆ ಅವರ ಮನೇಲಿ ಇವರು, ನಮ್ಮ ಮನೇಲಿ ನಾನು ನನ್ನ ಹೆಂಡ್ರು ಬಾಳಿಕೊಂಡು, ಸಂತೋಷವಾಗಿ ಚೆನ್ನಾಗಿಯೇ ಇದ್ದೀವಿ' ಎಂದು ಹೇಳೀರುವುದು ಪಕ್ಷಿಯ ಬೆಳವಣಿಗೆ ಇಲ್ಲಿ ಮನುಷ್ಯ ಬದುಕನ್ನು ಇತರ ಎಲ್ಲ ಸಂಬಂಧದ ಚೌಕಟ್ಟುಗಳಿಂದ ಕಳಚಿ ವಿಶ್ವಮಾನ್ಯವಾಗುವುದಕ್ಕೆ; ಲೈಂಗಿಕ ಸಂಬಂಧಕ್ಕಿರುವ ಕಟ್ಟಳೆಗಳು ಕಳಚಿಕೊಂಡಿರುವುದು ಜನಪದರ ಜೀವನ ವಿಧಾನವಾಗಿ ಮಾಸ್ತಿ ಪರಿಚಯಿಸಿದ್ದಾರೆ.

ಲೈಂಗಿಕ ಸಂಬಂಧ ಪರಸ್ಪರ ಒಪ್ಪಿತವಾದದ್ದಾದರೆ ಅದು ಯಾವುದೇ ಶಿಕ್ಷೆಗೆ ಅರ್ಹವಾಗುವುದಿಲ್ಲ. ಆದರೆ ಇಲ್ಲಿ ಆಕ್ಷೇಪಾರ್ಹವಾಗುವುದು ವಿವಾಹಿತೆ ಸೋದರಿ ಗಂಡನಿಗೆ ಕಾಣದಂತೆ ಸೋದರನೊಂದಿಗೆ ಕೂಡುವುದು. ಆದರೆ ಅವರಿಗೆ ಯಾವುದೇ ಅಪರಾಧಿ ಭಾವವಿಲ್ಲ. ಊರವರು, ಬಂಧುಗಳು ಕಂಡ ಈ ಸನ್ನಿವೇಶವೇ ರಂಪಕ್ಕೆ ಕಾರಣವಾಗುವುದು. ವಿವಾಹ ಹಾಗೂ ಲೈಂಗಿಕತೆಗೆ ಸಂಬಂಧ ಕಲ್ಪಿಸಿಯೇ ಗಂಟು ಹಾಕುವ ಸಂಬಂಧದಾಚೆಗೂ ಅವಳು ಇಲ್ಲಿ ಅದನ್ನು ಮೀರಿ ಮುಂದುವರಿಯುತ್ತಾಳೆ. ಪಾವಿತ್ರ್ಯದ ನಂಬುಗೆಯನ್ನು ದಾಟಿದ ಅವಳ ಪ್ರಜ್ಞೆ ಇಲ್ಲಿ ವಿವಾಹ ಮತ್ತು ಲೈಂಗಿಕ ಸಂಬಂಧವನ್ನು ಬೇರ್ಪಡಿಸುತ್ತದೆ. ಒಡಹುಟ್ಟಿದವನೊಂದಿಗಿನ ಅವಳ ದೈಹಿಕ ಸಂಬಂಧ ಪ್ರಶ್ನಾರ್ಹವಾಗುವುದೇ ಊರವರ ಕಣ್ಣಿಗೆ ಬಿದ್ದುದರಿಂದ ಎಂಬ ವ್ಯಂಗ್ಯ ಕೂಡ ಗಮನಾರ್ಹವೇ. ಪತ್ನಿಯ ವರ್ತನೆಯಿಂದ ನಾಚಿಕೆಯಾಗಿ ಊರುಬಿಡುವ ಮಂಚನಲ್ಲಿ ಪತ್ನಿಯ ಅಣ್ಣ ಮುದ್ದಣ್ಣ ಕೇಳುವ ಕ್ಷಮೆ ತಂಗಿಯ ಪರವಾಗಿ ಕೂಡ ಇರುತ್ತದೆ. ಇಲ್ಲಿ ತಂಗಿ ಈರವ್ವನನ್ನು ವಿರೋಧಿಸುವ ಮಂಚನ ಮೂಲಕ ಅದನ್ನು ಒಪ್ಪಿಕೊಳ್ಳದ ಸಮಾಜವನ್ನು ಪ್ರತಿಬಿಂಬಿಸಲಾಗಿದೆ.

ಈರವ್ವ ಇಲ್ಲಿ ಎಲ್ಲೂ ಮಾತನಾಡುವುದಿಲ್ಲ. ತನ್ನಿಷ್ಟದ ಲೈಂಗಿಕ ಬದುಕಿನ ಹಾದಿಗೆ ತನ್ನನ್ನು ಒಪ್ಪಿಸಿಕೊಳ್ಳುವ ಸ್ವಾತಂತ್ರ್ಯ ಪಡೆದುಕೊಂಡವಳನ್ನು ಒಪ್ಪದಿರುವುದು ಪಾತಿವ್ರತ್ಯ ಹಾಗೂ ಶೀಲವನ್ನು ಕಾಯ್ದುಕೊಳ್ಳದಿರುವುದನ್ನು ತೋರಿಸುತ್ತದೆ. ಏರ್ಪಟ್ಟ ಸಂಘರ್ಷದಿಂದಾದ ವಿಚಲಿತ ಸನ್ನಿವೇಶ, ಅವಳ ಮರ್ಯಾದೆಗೆ ಕುಂದು ತರುವಂತೆ ಮಾಡುತ್ತದೆ. ಆದರೆ ಅವಳನ್ನು ಪತಿ ಮರಳಿ ಸ್ವೀಕರಿಸುವ ಔದಾರ್ಯ ತೋರುವುದರಿಂದ ಮತ್ತೆ ಅವಳು ಅಂಥ ನಡತೆಗೆ ತಪ್ಪಬಾರದಂತೆ ಮನಸ್ಸು ತಿದ್ದಿಕೊಳ್ಳಬೇಕಾದದ್ದನ್ನು ಪ್ರೇರಿಸಲಾಗಿದೆ. ಯಾರಿಗೂ ಕಾಣದಂತೆ ನಡೆಯುತ್ತಿದ್ದ ಅಣ್ಣ - ತಂಗಿಯರ

ದೈಹಿಕ ಸಂಬಂಧ ಕಂಡು ವಯಸ್ಸಾದ ವ್ಯಕ್ತಿ ಕೂಗಿದಾಗ ತಂಗಿ ಅಯ್ಯೋ ಎಂದು ಕುಸಿದು ಕುಳಿತುಕೊಳ್ಳುತ್ತಾಳೆ. ವ್ಯವಸ್ಥೆಯ ನಿಯಮವೊಂದನ್ನು ಕದ್ದುಮುಚ್ಚಿ ಮುರಿಯುವ ಧೈರ್ಯ ತೋರಿದ್ದ ಅವಳು ಇತರರು ಕಂಡಾಗ ಬೆದರುವ ಮೂಲಕ ನಿರ್ಬಂಧಕ ವಾತಾವರಣವನ್ನು ಅವಳೂ ಒಪ್ಪಿಕೊಳ್ಳುತ್ತಾಳೆ. ಕದ್ದು ಮುಚ್ಚಿ ನಡೆಸುವ ದೈಹಿಕ ಸಂಬಂಧ ತಪ್ಪು ಎಂಬುದನ್ನು ಅವಳ ಅಪರಾಧಿ ಭಾವದಿಂದ, ನಡೆದ ರಾದ್ಧಾಂತದಿಂದ ಮಾಸ್ತಿ ತೋರಿಸಿಕೊಟ್ಟಿದ್ದಾರೆ. ಗಂಡನೊಬ್ಬನೊಂದಿಗೇ ಹೆಣ್ಣು ಸಂಬಂಧ ಹೊಂದಿರಬೇಕಾದ ನೀತಿಯನ್ನೂ ಈ ಮೂಲಕ ಪ್ರಕಟಪಡಿಸಿದ್ದಾರೆ.

'ಆಂಗ್ಲನೌಕಾ ಕ್ಯಾಪ್ಟನ್' ಕತೆಯಲ್ಲಿ ಹ್ಯಾರಿ ಹಾಗೂ ನೆಲ್‌ಳ ನಡುವಿನ ಅಂತರಕ್ಕೆ ಕಾರಣವಾದ ಘಟನೆ ಪಾತಿವ್ರತ್ಯ ಮೀರಿದ್ದಾಗಿ ಗುರುತಿಸುವುದು ಸಮಂಜಸವಾಗುವುದಿಲ್ಲ. ತಾನಾಗಿ ಮಾಡದ ತಪ್ಪಿಗೆ ಅವಳು ಒಳಗಾಗಿದ್ದಾಳೆ. ಗಂಡನಿಲ್ಲದ ಸಂದರ್ಭದಲ್ಲಿ ಬಲಾತ್ಕಾರಕ್ಕೆ ಒಳಗಾಗಿದ್ದಾಳೆ. ಪರಿಣಾಮವಾಗಿ ಆಕೆ ಬಸುರಾಗಿ ಮಗುವನ್ನು ಹೆತ್ತಿದ್ದಾಳೆ.ನೌಕಾದಳದಲ್ಲಿ ಕ್ಯಾಪ್ಟನ್ ಆಗಿ ಉದ್ಯೋಗದಲ್ಲಿರುವ ನಾಯಕ ಹ್ಯಾರಿ ನೌಕೆಯಿಂದ ಮರಳಿ ಬಂದಾಗ ಅವನ ಪತ್ನಿ ಹೆರಿಗೆ ಆಸ್ಪತ್ರೆಯಲ್ಲಿದ್ದುದು ಅವನಿಗೆ ಆಶ್ಚರ್ಯ ಹುಟ್ಟಿಸುತ್ತದೆ. ವೆಂಕಟಿಗನ ಹೆಂಡತಿ ಕತೆಯ ರಂಗಿ ಗಂಡನ ಜೊತೆಗೆ ಇದ್ದಾಗಲೇ ಇನ್ನೊಬ್ಬನೊಂದಿಗೆ ಬದುಕ ಹೊರಡುವ ತೀರ್ಮಾನ ತೆಗೆದುಕೊಂಡರೆ, ಆಂಗ್ಲ ನೌಕಾ ಕ್ಯಾಪ್ಟನ್ ಕತೆಯ ನೆಲ್ ಗಂಡ ನೌಕೆಗಿಳಿದ ಕಾಲದ ಸಂದರ್ಭದಲ್ಲಿ ಅವನ ವಿರೋಧಿಗಳಿಂದಲೇ ಬಸುರಾಗುವಂತಾಗಿದೆ. ಅವಳು ಅವಳದಲ್ಲದ ತಪ್ಪಿನಿಂದಾಗಿ ಅತ್ಯಾಚಾರಕ್ಕೆ ಒಳಗಾಗಿ ತಾಯಾಗಬೇಕಾದ ಪರಿಸ್ಥಿತಿಗೆ ಒಡ್ಡಿಕೊಳ್ಳಬೇಕಾಗುತ್ತದೆ. ಆದರೆ ಇದರಿಂದ ಕ್ಯಾಪ್ಟನ್ ಹ್ಯಾರಿ ತೀವ್ರವಾಗಿ ತಲ್ಲಣಗೊಳ್ಳುತ್ತಾನೆ.

'ಗಂಡಸಿಗೆ ಹೇಗೋ ಹಾಗೆ ಹೆಂಗಸಿಗಾದರೂ ಒಬ್ಬಂಟಿ ಬಾಳು ತುಂಬ ಕಷ್ಟ ಎಂದು, ತಾವು ಅಪ್ಪಣೆ ಕೊಡಿಸಿದಿರಿ' ಎಂದು ನಿರೂಪಕ ತಳೆವ ನಿಲುವು ಏಕಾಂತವನ್ನು ಒಪ್ಪಿಕೊಳ್ಳದ ಮನುಷ್ಯನ ಸಹಜ ಪರಿಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಈ ಮಾತಿನ ಮೂಲಕ ಅವಳ ಪರಿಸ್ಥಿತಿಯನ್ನು ತುಲನಾತ್ಮಕವಾಗಿ ನೋಡಿದ ಹ್ಯಾರಿ ಅವಳನ್ನು ಕ್ಷಮಿಸುತ್ತಾನೆ. ಅನ್ಯಾಯವಾಗಿ ನಡೆದ ದೈಹಿಕ ಸಂಬಂಧಕ್ಕೆ ನೆಲ್ ಪರಿತಪಿಸುತ್ತಾಳೆ. ತನ್ನನ್ನು ಒತ್ತಾಯಪೂರ್ವಕವಾಗಿ ಕರೆಯಿಸಿದ ಆಕೆ 'ಹ್ಯಾರೀ, ನಾನು ನಿನ್ನ ವಿಷಯಕ್ಕೆ ತಪ್ಪಿ ನಡೆದಿದ್ದೇನೆ. ನನ್ನನ್ನು ಮನ್ನಿಸು ಎಂದು ಹೇಳಿದಳು. ನಾನು ಸುಮ್ಮನಿದ್ದೆ, ಅವಳು, ಹೇಳಿದರೆ ನಂಬುವುದು ಕಷ್ಟ, ಆದರೆ ಸತ್ಯವೆಂದು ಆಣೆ ಮಾಡುತ್ತೇನೆ, ನಾನು ಎಲ್ಲ ಹೊತ್ತೂ ನಿನ್ನಲ್ಲೇ ಅನುರಕ್ತಳಾಗಿದ್ದೆ, ಆದರೆ ಹೀಗೆಂದು ಫಲವೇನು? ನನ್ನನ್ನು ಒಪ್ಪಿ ಮತ್ತೆ ಕಟ್ಟಿಕೋ ಎಂದು ನಾನು ಹೇಳುತ್ತಿಲ್ಲ, ಚರಿತ ಒಳ್ಳೆಯದಲ್ಲ ಎಂದು ತಿಳಿಸಿ ದಾಂಪತ್ಯ ವಿಚ್ಛೇದನವನ್ನು ಪಡೆದುಕೋ. ನನಗಿಂತ ಒಳ್ಳೆಯ ಹೆಂಗಸೊಬ್ಬಳನ್ನು ಮದುವೆಯಾಗು ಎಂದಳು. ಹ್ಯಾರಿ, ಹಿಂದಿನ ಪ್ರೀತಿಯ ನೆನಪಿಗಾಗಿ ನನಗೆ ಒಂದೇ ಒಂದು ಮುತ್ತು ಕೊಡು. ಅಷ್ಟು ಮಾಡಿ ಹೊರಟುಬಿಡು. ಈ ದಾಂಪತ

ಮುಗಿಯಲಿ ಎಂದಳು' ಎಂದು ಪರಿತಪಿಸಿ ಬೇಡಿಕೊಂಡದ್ದನ್ನು ಹ್ಯಾರಿ ನೆನಪಿಸಿಕೊಳ್ಳುತ್ತಾನೆ. ನಡೆಯಬಾರದ ಘಟನೆ ನಡೆದುಹೋದುದರಿಂದ ಗಂಡನಿಗಾಗಿ ಗೋಗರೆಯುವಲ್ಲಿ ಅಪರಾಧೀ ಭಾವವಿದೆ. ಗಂಡನಿಗೆ ಮೋಸ ಮಾಡಿದೆ ಎಂಬ ಭಾವನೆಯಿದೆ. ಈ ಭಾವನೆ ವ್ಯಕ್ತವಾಗುವುದೇ ಪಾತಿವ್ರತ್ಯದ ನಂಬಿಕೆಯಿಂದ. ಗಂಡನ ಹೊರತಾಗಿ ಇನ್ನೊಬ್ಬನೊಂದಿಗೆ ಭಾವನೆಯನ್ನು, ಮೈಯನ್ನು ಹಂಚಿಕೊಳ್ಳಬಾರದ ಸನಾತನ ಧರ್ಮದ ತತ್ವವನ್ನೇ ವಿದೇಶೀ ಬದುಕಿಗೂ ಅನ್ವಯಿಸುವಂತೆ ಈ ಮೂಲಕ ಪ್ರೇರೇಪಿಸಿದ್ದಾರೆ.

ತನ್ನ ಮೇಲೆ ನಡೆದಿರುವ ಲೈಂಗಿಕ ಅತ್ಯಾಚಾರದಿಂದಾಗಿ ಗಂಡನ ಮಾನಸಿಕ ವೇದನೆಯಾಗಿರುವುದಕ್ಕೆ ಆಕೆ ಕ್ಷಮೆ ಕೇಳುತ್ತಾಳೆ. ಆ ಮೂಲಕ ಮಾಸ್ತಿ ಭಾರತದ ಸಂದರ್ಭದಲ್ಲಿನಂತು ಭಾರತೀಯ ಸಮಾಜದ ಮೌಲ್ಯಗಳನ್ನು ಅವಳ ಮೂಲಕ ವಿಶ್ವದಲ್ಲೂ ಪ್ರತಿಷ್ಠಾಪಿಸುತ್ತಾರೆ. ತನ್ನದಲ್ಲದ ತಪ್ಪಿಗೆ ಅವಳು ಕ್ಷಮೆ ಕೇಳುವುದು ದಾಂಪತ್ಯ ಉಳಿಯಬಹುದಾದರೆ ಉಳಿಯಲಿ ಎಂಬ ಆಶಾಭಾವನೆಯಿಂದ. ಆದರೆ ಆಕೆ ಗಂಡನಿಗೆ ನಂಬುಗೆ ಇಲ್ಲದೇ ಹೋದರೂ ಸಂಶಯಿತ ಬದುಕನ್ನು ಕಾಣುವುದಕ್ಕೆ ಒಪ್ಪುವವಳಲ್ಲ. ಅಲ್ಲಿಂದ ಮುಕ್ತಳಾಗುವುದಕ್ಕೆ ಆಕೆ ವಿಚ್ಛೇದನದ ಆಯ್ಕೆಯನ್ನು ಕೊಡುತ್ತಾಳೆ, ಗಂಡಬಿಟ್ಟು ಬದುಕುವ ಧೈರ್ಯವನ್ನು ಮಾಡುತ್ತಾಳೆ.

ಇಲ್ಲಿನ ಹ್ಯಾರಿ ತಾಕಲಾಟ - ವೆಂಕಟಿಗನ ಸಂಯಮದ ಸಂದರ್ಭದಲ್ಲಿ ಚರ್ಚೆಗೆ ಒಳಾಗಾಗುತ್ತದೆ.

ಕ್ಯಾಪ್ಟನ್‌ನ ಮನಸ್ಸು ವೆಂಕಟಿನದ್ದರಷ್ಟು ಸರಳವಲ್ಲ. ವೆಂಕಟಿಗನಿಗೆ ತನ್ನ ಸ್ಥಾನಮಾನಗಳ ಯೋಚನೆ ಬರಲಿಲ್ಲ. ಕ್ಯಾಪ್ಟನ್‌ಗೆ ತಾನು ಇಷ್ಟು ಅಗ್ಗವಾದೆನೇ ಎಂದು ಅವಮಾನ ಆದಂತಾಯಿತು. ಆದರೂ ಅವನು ತನ್ನೊಡನೆ ತಾನು ಗೆದ್ದು ದೊಡ್ಡತನವನ್ನೇ ತೋರಿದ [೨]ಎಂದು ಹೇಳಿದ ಅವರು ಮುಂದುವರಿದು ಮಧ್ಯಮವರ್ಗದ ಸಮಾಜವು ಹೆಂಡತಿ ತಪ್ಪು ಮಾಡಿದರೆ ಗಂಡನನ್ನು ಸ್ವಲ್ಪ ನಿಕೃಷ್ಟವಾಗಿ ಕಾಣುವುದುಂಟು. ಅಂತಹ ಹೆಂಡತಿಯ ವಿಷಯದಲ್ಲಿ ಔದಾರ್ಯ ತೋರುವ ಗಂಡನನ್ನು - ಅವನ ಎದುರಿಗೆ ಅಲ್ಲದಿದ್ದರೂ - ಹಾಸ್ಯ ಮಾಡಿ ನಗುವುದುಂಟು. ಇದು ಔದಾರ್ಯಕ್ಕೆ ಅಡ್ಡಿಯಾಗಬಹುದು. ಈ ಕಷ್ಟ ವೆಂಕಟಿಗನ ಸಮಾಜದಲ್ಲೂ ಇರಬಹುದಾದರೂ ಬಹಳ ಕಡಿಮೆ. ಅವನ ಔದಾರ್ಯ ಅಸ್ವಾಭಾವಿಕವಾಗಿ ಕಾಣದಂತೆ ಮಾಸ್ತಿ ಅವರು ಮೊದಲಿನಿಂದಲೂ ಅವನ ದೊಡ್ಡತನವನ್ನು ತೋರಿಸುವ ಪ್ರಯತ್ನ ಮಾಡಿದ್ದಾರೆ. ಆದರೂ ಅವನು ಆದರ್ಶೀಕೃತ ವ್ಯಕ್ತಿ ಎನ್ನಿಸುತ್ತದೆ. ಅವನ ಹೆಂಡತಿಯ ಚಿತ್ರಣದಲ್ಲಿ ಅಸಹಜತೆಯೇನೂ ಇಲ್ಲ[೩] ಎಂದು ತರ್ಕಿಸಿದ್ದಾರೆ.

ವೆಂಕಟಿಗನ ಹೆಂಡತಿ ಮರಳಿ ಗಂಡನ ಬಳಿಗೆ ಬಂದರೆ, ನೆಲ್ ಸತ್ಯ ಘಟನೆ ಮಾತ್ರ ಮುಂದಿಟ್ಟು ಸ್ವೀಕರಿಸುವ, ತ್ಯಜಿಸುವ ಆಯ್ಕೆಯ ಅವಕಾಶವನ್ನು ಗಂಡನಿಗೆ ಕೊಡುತ್ತಾಳೆ. ಬಡತನದ ಮಧುರ

---

೨ ಪು. ೧೯-೨೦ ಶ್ರೀ ಮಾಸ್ತಿ ಅವರ ಕತೆಗಳು - ಎ. ಮೂರ್ತಿರಾವ್ ೧೯೯೯

೩ ಅದೇ ಪು.೨೦

ಪ್ರೀತಿಯ ಬದುಕೇ ಸಾಕೆಂದು ರಂಗಿ ಗಂಡನ ಬಳಿಗೆ ಮರಳಿ ಬಂದು ಆಧುನಿಕತೆಗೆ ಬೆನ್ನು ಹಾಕುತ್ತಾಳೆ. ಆಧುನಿಕತೆಯ ಜಗತ್ತಿನಲ್ಲೇ ಉಸಿರಾಡುತ್ತಿದ್ದು ಅದರ ಅನುಭವವನ್ನು ಕಹಿಯಾಗಿಸಿಕೊಂಡು ಪರಂಪರೆಗೆ ಬದ್ಧಳಾಗಿ ಬಾಳುತ್ತಾಳೆ. ಈ ಮೂಲಕ, ಪರಂಪರೆ - ಆಧುನಿಕತೆಯ ನಡುವಿನ ಘರ್ಷಣೆಗೆ ಆಕೆ ಪರಂಪರೆಯನ್ನೇ ಒಪ್ಪಿಕೊಂಡು ಬಾಳುವಂತೆ ತೀರ್ಪು ನೀಡುವವಳಾಗುತ್ತಾಳೆ. ಆದರೆ ಪಾಶ್ಚಾತ್ಯ ಬದುಕನ್ನೇ ಅನುಭವಿಸಿದ ಹ್ಯಾರಿಯ ಪತ್ನಿಯ ನಾಡು ಹಾಕಿಕೊಳ್ಳದ ಚೌಕಟ್ಟಿಗೆ ಅವಳು ಪಾತಿವ್ರತ್ಯದ ಮೌಲ್ಯದ ಕಟ್ಟುಗಳನ್ನು ತಾನಾಗಿಯೇ ಹೇರಿಕೊಳ್ಳುವುದರ ಮೂಲಕ ಇಂತಹ ಭಾರತೀಯ ಬದುಕಿನ ಮೌಲ್ಯಗಳನ್ನು ವಿಶ್ವಮಾನ್ಯ ಮಾಡುವಂತೆ ಬಯಸಿದ್ದಾರೆ. ಆದರೂ ನೆಲ್ ವಿಚ್ಛೇದನ ಪಡೆಯುವುದಕ್ಕೂ ತಯಾರಿರುವಷ್ಟು ಸ್ವತಂತ್ರಳಾಗಿ ಕಾಣಿಸುತ್ತಾಳಾದರೂ ಅದಕ್ಕೆ ಆಕೆ ತೊಡಗಿಕೊಳ್ಳುವುದಿಲ್ಲ. ಗಂಡನ ಅನುಮಾನ, ಸಂದೇಹಗಳಿಗೆ ಅವಳು ವಿಚ್ಛೇದನ ನೀಡಿ ಪ್ರತಿಭಟಿಸುವ ಧೈರ್ಯವನ್ನು ತೋರುವುದಿಲ್ಲ. ಆದರೆ ಹ್ಯಾರಿಯ ಗೊಂದಲಕ್ಕೆ ನಿರೂಪಕ 'ಅಂತಿಮವಾಗಿ ಗಂಡು ಬರಿಯ ಗಂಡಾಗಿ ಯೋಗ್ಯತೆಯನ್ನಳೆಯದೆ ಮಾನವಾಗಿ ನೋಡುವುದಾದರೆ ಒಂದು ಹೆಣ್ಣಿನ ತಪ್ಪು ಒಂದು ಗಂಡಿನ ತಪ್ಪಿಗಿಂತ ಹೆಚ್ಚಿನ ತಪ್ಪು ಆಗುವುದಿಲ್ಲ' ಎಂದು ತಿಳಿ ಹೇಳುವಲ್ಲಿ ಹಾಗೆ ನಡೆಯುವ ತಪ್ಪನ್ನುಗಂಡು ಕ್ಷಮಿಸಬೇಕಾದ ಸಂದೇಶವಿದೆ. 'ನಾನು ಕ್ರೈಸ್ತನಲ್ಲ, ಆದರೂ ತಪ್ಪಿ ನಡೆದವಳೆಂಬ ಒಬ್ಬ ಹೆಂಗಸನ್ನು ಎಳೆದು ತಂದು ಎದುರಲ್ಲಿ ನಿಲ್ಲಿಸಿದಾಗ ಕ್ರೈಸ್ತಗುರು ಮಾಡಿದ ಉಪದೇಶ ಹಿರಿಯ ಉಪದೇಶ ಎಂದು ಎಲ್ಲ ವೇಳೆಯೂ ಕಂಡಿದೆ' ಎಂಬಲ್ಲಿ ತಪ್ಪನ್ನು ತಪ್ಪಾಗಿಯೇ ಕಾಣದ, ಅದೊಂದು ಮನುಷ್ಯ ಸಹಜ ಸ್ವಭಾವವಾಗಿ, ಘಟನೆಯಾಗಿ ಕಾಣುವ ಹೃದಯವಂತಿಕೆ, ಮಾನವಾಂತಃಕರಣ ವಿಶ್ವಮಾನವ ತತ್ವದ ನೆಲೆಗಟ್ಟಿನದಾಗುತ್ತದೆ.

ಹೆಣ್ಣು ಎಂದಿಗೂ ತಪ್ಪಲಾರದ ನೀತಿಯನ್ನು, ಎಚ್ಚರವನ್ನು ಇಲ್ಲಿ ಮುರಿಯಲಾಗಿದೆ. ಒತ್ತಾಯಕ್ಕೆ ಆಕೆ ಬಸುರಾಗುವುದನ್ನು ಒಪ್ಪಿಕೊಂಡರೂ, ಅನಂತರದ ಗಂಡಿನ ಸಂದೇಹ, ಗೊಂದಲ, ತಾಕಲಾಟಗಳ ಹಿಂದಿನ ವ್ಯಂಗ್ಯ ಅದನ್ನು ಒಪ್ಪಿಕೊಳ್ಳದಿರುವುದನ್ನು ಸೂಚಿಸುತ್ತದೆ. ತಾನು ತಪ್ಪಿ ನಡೆಯುವ ಗಂಡು ಅದು ತನಗೆ ಮಾತ್ರ ಸೀಮಿತಗೊಳಿಸಿಕೊಂಡುಬಿಟ್ಟು ಸ್ವಾರ್ಥ ಆಲೋಚನೆಯನ್ನು ಹ್ಯಾರಿಯ ಪತ್ನಿ ಗಂಡನಿಲ್ಲದ ವೇಳೆಯಲ್ಲಿ ಬಸುರಾಗಬೇಕಾದ ಸಂದರ್ಭದ ಮೂಲಕ ಮುಂದಿಡುತ್ತಾಳೆ ಎಂದೇ ಅನ್ನಿಸುತ್ತದೆ. ಅದನ್ನು ದೊಡ್ಡ ತಪ್ಪಾಗಿ ಗ್ರಹಿಸದೆ, ಗಂಡಿನ ತಪ್ಪಿನ ನಡವಳಿಕೆ ಮುಂದೆ ಅದನ್ನು ಏನೂ ಅಲ್ಲವಾಗಿಸುವ, ತಪ್ಪನ್ನು ಸಾಮಾನ್ಯೀಕರಿಸಿ ಸಹಜವಾಗಿ ಸ್ವೀಕರಿಸುವಂತೆ, ಸ್ವೀಕರಿಸಬೇಕಾದ ಮಾನವೀಯ, ಪ್ರಗತಿಪರ ವಿಚಾರವನ್ನು ಒಪ್ಪಿಕೊಳ್ಳುವಂತೆ ಮಾಸ್ತಿ ಪ್ರೇರಿಸುತ್ತಾರೆ. ಆದರೆ ಅದನ್ನು ಮಾಸ್ತಿ ಮನಃಸ್ಥಿತಿ ಒಪ್ಪಿಕೊಳ್ಳುವುದಿಲ್ಲ. ಅದನ್ನು ಅಚಾನಕ್ ಆಗಿ ನಡೆದು ಹೋದ ಘಟನೆಯಿಂದಾಗಿ ಮಾತ್ರ ಕ್ಷಮಾರ್ಹಗೊಳಿಸುತ್ತಾರೆಯೇ ಹೊರತು ಪ್ರಜ್ಞಾಪೂರ್ವಕವಾಗಿ ನಡೆಯಬಾರದೆಂಬುದನ್ನು ಆಕೆಯ ಪರಿತಪಿಸುವಿಕೆಯ ಮೂಲಕ ಪ್ರತಿಪಾದಿಸಿದ್ದಾರೆ.

'ವೆಂಕಟಿಗನ ಹೆಂಡತಿ' ಕತೆಯ ರಂಗಿ , 'ಆಂಗ್ಲನೌಕಾ ಕ್ಯಾಪ್ಟನ್' ಕತೆಯ ಹ್ಯಾರಿಯ ಹೆಂಡತಿ ನೆಲ್ ವಿಭಿನ್ನ ಸಂಸ್ಕೃತಿಯ ಘರ್ಷಣೆ ತೋರಿಸುತ್ತ ಪಾತಿವ್ರತ್ಯ ಪಾಲನೆಯನ್ನು ವಿಶ್ವಮಾನ್ಯವಾಗಿಸಿಬಿಡುವುದರ ಪ್ರತಿನಿಧಿಗಳಾಗಿದ್ದಾರೆ.

ಲೈಂಗಿಕ ಸ್ವಾತಂತ್ರ್ಯ ಪಡೆದ ಸ್ತ್ರೀಯರನ್ನೂ ಮಾಸ್ತಿ ಪರಿಚಯಿಸಿದ್ದಾರೆ. ಆದರೆ ಅದರ ಪರಿಣಾಮವಾಗಿ ನೆಮ್ಮದಿಯೇ ಕಳೆದುಕೊಳ್ಳುವ, ಪರಿತಪಿಸಬೇಕಾಗಿ ಬರುವ ಸಂದರ್ಭವನ್ನೂ ಚಿತ್ರಿಸಿ ಅಂಥ ಬದುಕನ್ನು ಆಯ್ದುಕೊಳ್ಳುವುದು ಸಹ್ಯವಲ್ಲ ಎಂದೇ ಮನದಟ್ಟು ಮಾಡಿಸುತ್ತಾರೆ.

ಗಂಡನೊಂದಿಗೆ ಮಾತ್ರವಲ್ಲದೆ ಇತರರೊಂದಿಗೆ ಕೂಡ ಸಂಬಂಧ ಬೆಳೆಸುವ ಸ್ವಾತಂತ್ರ್ಯವನ್ನು ಪ್ರಭುವಿ ಇರಿಸಿಕೊಂಡಿದ್ದಾಳೆ. ಪಾತಿವ್ರತ್ಯದ ನಂಬಿಕೆ ಮತ್ತು ನಿಲುವುಗಳನ್ನು ಮುರಿದು ಮನಸ್ಸು ಬಯಸಿದವರೊಂದಿಗೆ ಬಾಳ್ವೆ ಮಾಡುವುದು ಪ್ರಭುವಿ ಪಡೆದಿದ್ದ ಸ್ವಾತಂತ್ರ್ಯವನ್ನು ತೋರಿಸುತ್ತದೆ. ಆದರೆ ಆ ಬದುಕನ್ನು ಪರಿಚಯಿಸುವುದರ ಹಿಂದೆ ಅದಕ್ಕೆ ಸಂಪೂರ್ಣ ಸಮ್ಮತಿ ನೀಡಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಹೆಣ್ಣೊಬ್ಬಳು ಪ್ರೇಮಕ್ಕಾಗಿ ಆರಿಸಿಕೊಳ್ಳುವ ವಿಭಿನ್ನ ವ್ಯಕ್ತಿತ್ವದ ವಿಭಿನ್ನ ವ್ಯಕ್ತಿಗಳ ಆಯ್ಕೆಯ ಸ್ವಾತಂತ್ರವನ್ನು ಆಕೆ ಪಡೆದುಕೊಳ್ಳುತ್ತಾಳೆ. ಪ್ರೀತಿ ಕೇವಲ ಒಬ್ಬನಿಂದಲೇ ಪಡೆಯಬೇಕಾದದ್ದು ಎಂಬ ತತ್ವಕ್ಕೆ ಪ್ರಭುವಿ ಸಂಪೂರ್ಣ ತದ್ವಿರುದ್ಧವಾಗುತ್ತಾಳೆ. ಗಂಡಿನ ಆಯ್ಕೆಯ ಸ್ವಾತಂತ್ರ್ಯದ ಜೊತೆಜೊತೆಗೆ ದಿಟ್ಟತನದ ನಿಲುವು ಪಡೆದುಕೊಳ್ಳುವುದಕ್ಕೆ ಇಲ್ಲಿನ ಹೆಣ್ಣು ಹಿಂಜರಿಯುವುದಿಲ್ಲ. ಹಾಗೆ ಹಿಂಜರಿಯಬಾರದು ಎಂಬ ಅಭಿಪ್ರಾಯವನ್ನು ಇಲ್ಲಿ ಒಪ್ಪಿತಗೊಳಿಸಿದಂತೆ ಭಾಸವಾಗುವುದು ಅವಳ ಸ್ವತಂತ್ರ ಬಾಳಿನಲ್ಲಿ ಪ್ರವೇಶ ಪಡೆಯುವ ಮೂವರು ಪುರುಷರಿಂದ, ಅವರೊಂದಿಗೆ ಅವಳು ಕಳೆಯುವ ಬದುಕಿನ ರೀತಿಯಿಂದ.

'ವಿಚಿತ್ರ ಪ್ರೇಮ' ಕತೆಯ ಪ್ರಭುವಿ ಪರಿಚಿತಳಾಗುವುದೇ ಇತರ ಹೆಣ್ಣಿನಂತಲ್ಲ ಎಂದೇ. ಗಂಡ ಇದ್ದಾಗಲೂ ಇತರ ಇಬ್ಬರು ಪುರುಷರ ಜೊತೆಗೆ ಬಾಳಿದವಳು. ಹಾಗಂತ ಕಟ್ಟಿಕೊಂಡ ಗಂಡನಲ್ಲಿ ಆಕೆಗೆ ತತ್ಸಾರವಾಗಲಿ, ತಿರಸ್ಕಾರವಾಗಲೀ ಇಲ್ಲ. ತನಗೆ ತೃಪ್ತಿ, ನೆಮ್ಮದಿ ಸಿಗುವ ಕಡೆಗೆ ಅವಳ ಮನಸ್ಸು ಮುಖಮಾಡುತ್ತದೆ. ಅತಿ ಬುದ್ಧಿವಂತೆಯೂ ಆಗಿದ್ದ ಪ್ರಭುವಿ ಕೇವಲ ಕಾಮದಾಹದ ತೀರಿಕೆಗಾಗಿ ಮೂವರು ಮನುಷ್ಯರನ್ನು ಬಯಸುವುದಿಲ್ಲ. ಅವಳ ವ್ಯಕ್ತಿತ್ವ ಜ್ಞಾನ ಹಾಗೂ ಅನುಭವ ಸಂಪನ್ನತೆಗಾಗಿ ಸ್ನೇಹ ಮಾಡುವ ದಿಟ್ಟತನದ್ದಾಗಿದೆ. ತನ್ನ ವೈಚಾರಿಕ ಮನಸ್ಸು ಒಪ್ಪುವ ವ್ಯಕ್ತಿಯೊಂದಿಗೆ ಸ್ನೇಹ ಬೆಳೆಸಿದ ಆಕೆ ಅವರ ಒಂದು ಅಂಗವಾದ ಜೊತೆಯಲ್ಲಿ ಬಾಳುವ ಕ್ರಮವನ್ನು ಒಪ್ಪಿ ಮುಂದಾಗುತ್ತಾಳೆ. ಆದರೆ ಕಳೆದ ದಿನಗಳಲ್ಲಿ ಜೊತೆಗೆ ಕಳೆದಾತನನ್ನು ಮರೆಯುವ ತೆರನಾದ ಅಥವಾ ಅವನನ್ನು ಬಿಟ್ಟಿರಲಾರದಂತೆ ನೆನಪಿಸುವ ಭಾವುಕತನಕ್ಕೂ ತನ್ನನ್ನು ಅರ್ಪಿಸಿಕೊಳ್ಳದವಳಾಗಿ ವಿಶಿಷ್ಟವಾದವಳಾಗುತ್ತಾಳೆ. ವಾಲ್ಟರ್, ಪ್ರಭುವಿಯ ಕುರಿತು ಮೆಲುಕು ಹಾಕುತ್ತ ಪ್ರಭುವಿ ಇವನಿಗೆ ಜೀವ ತಣಿಸಿದ ನಲ್ಲೆ ಮಾತ್ರ ಆಗಿರಲಿಲ್ಲ.

ಇವನ ಮಾತನ್ನು ಕೇಳಿ ಮೆಚ್ಚಿದ್ದಳು, ಮಾತಿಗೆ ಸರಿಯಾಗಿ ಜಾಣ ಮಾತನ್ನು ಆಡಿದ್ದಳು. ಇದನ್ನು ಬರೆ, ಅದನ್ನು ಬರೆ ಎಂದು ಇವನಿಗೆ ಪ್ರೇರಣೆ ಮಾಡಿದ್ದಳು. ಬರೆದಾಗ ಆ ಬರಹವನ್ನು ಎಲ್ಲರಿಗಿಂತ ಮೊದಲು ಕೇಳಿ, ಈ ಮಾತು ಸೇರಿಸು, ಆ ಮಾತು ಬಿಡು ಎಂದು ಜಾಣಾಗಿ ಸೂಚಿಸಿದ್ದಳು. ಇವನು ನಡೆಸಬಯಸಿದ ಭೌತಶಾಸ್ತ್ರಪ್ರಯೋಗಗಳಿಗಾಗಿ ಅರಮನೆಯಲ್ಲಿ ಒಂದು ಪ್ರಯೋಗ ಶಾಲೆಯನ್ನು ಒದಗಿಸಿದ್ದಳು. ಅದರಲ್ಲಿ ಅವನೊಂದಿಗೆ ಇವಳೂ ಜೀವನ ನಡೆಸಿದ್ದಳು. ಕೆಲವು ವೇಳೆ ಇವನಿಗೆ ತೋರದ ಸಂಗತಿಗಳನ್ನು ತಾನು ಕಂಡು ಹಿಡಿದಿದ್ದಳು. ಇವರಿಬ್ಬರ ಜೀವನ ಬರಿಯ ಒಡಲ ಒಲವಿನದಾಗಿರಲಿಲ್ಲ. ಎರಡು ಮೈಯಲ್ಲಿ ನಿಂತ ಒಂದು ಚೇತನ ಎಂಬಂತೆ ಒಂದು ಜೀವನವಾಗಿ ಬೆರೆತೇ ನಡೆದಿತ್ತು' ಎಂದು ವಾಲ್ಟರ್‌ನೊಂದಿಗೆ ಆಕೆ ಕಳೆದ ದಿನಗಳನ್ನುನೆನಪಿಗೆ ತಂದುಕೊಳ್ಳುವುದು, ಲ್ಯಾಂಬರ್ಟ್ ಪ್ರಸ್ತುತಪಡಿಸಿದ್ದು, 'ಸಂಕೋಚವೇಕೆ? ಆಕೆ ನನಗೆ ಮುತ್ತಿಕ್ಕಿದ ಒಮ್ಮೊಮ್ಮೆಯೂ ಜೀವ ಸಾವಿಗೆ ಮುತ್ತು ಕೊಡುತ್ತದೆ ಎಂದೇ ನನಗೆ ತೋರುತ್ತಿತ್ತು. ಅದನ್ನು ನಾನು ಅವರಿಗೆ ಹೇಳುತ್ತಿದ್ದೆ. ಆ ಮಾತನ್ನು ಆಡಿದಿರೇ? ನನಗೆ ಆಕೆ ಉತ್ತರವಾಗಿ, ಜೀವ ಸಾವನ್ನಲ್ಲ, ಸಾಯುವ ಚೆಲುವು ಸಾಯದ ಚೆಲುವಿಗೆ ಮುತ್ತು ಕೊಡುತ್ತಿದೆ ಎನ್ನುತ್ತಿದ್ದರು. ಅದನ್ನು ಹೇಳಿದರೇ? ಹೌದು. ತನ್ನ ನನ್ನ ಚೆಲುವು ಜೇಡಿ ಮಣ್ಣಿನ ಚೆಲುವು, ನಿಮ್ಮ ಚೆಲುವು ಅವರ ಚೇತನದ ಚೆಲುವು, ಎನ್ನುವುದು ಅವರ ಕ್ರಮ' ಎಂದು ನೆನಪು ಮಾಡಿಕೊಳ್ಳುವುದು ಅವಳು ರೂಪಕ್ಕಲ್ಲದೆ ಪ್ರೀತಿಯಲ್ಲಿ ಆಕೆ ಜೀವಂತಿಕೆಯನ್ನು ಕಾಣುತ್ತಾಳೆ. ಅಲ್ಲಿ ಆಕೆ ಅದನ್ನು ವ್ಯಕ್ತಪಡಿಸುವುದಕ್ಕೆ ಯಾವುದೇ ಮುಜುಗರ ಪಡುವುದಿಲ್ಲ. ಅವಳ ಇಂಥ ನೇರ ನಡೆ-ನುಡಿಗಳಿಂದಾಗಿ ಅವಳ ನಡತೆ, ಬಿಚ್ಚುನುಡಿಯ ವ್ಯಕ್ತಿತ್ವದ ಪ್ರತಿನಿಧೀಕರಣವಿದೆ. ಇದು ತಪ್ಪೇ? ಸರಿಯೇ? ಎಂದು ಚರ್ಚಿಸುವುದಕ್ಕೆ ಇಲ್ಲಿ ಆಸ್ಪದ ಇಲ್ಲಎಂಬಂತೆ ಅವಳು ನಡೆಯುತ್ತಾಳೆ. ಅವರವರಿಗೆ ಸರಿಕಂಡಂತೆ ಅವರವರು ವರ್ತಿಸಬಹುದಾದ ವ್ಯಕ್ತಿಸ್ವಾತಂತ್ರ್ಯ ಪಡೆಯುವ ಸ್ತ್ರೀಯರನ್ನು ಅವಳು ಪ್ರತಿನಿಧಿಸುತ್ತಾಳೆ.

'ಗಂಡನ ಪ್ರೀತಿಯ ಜೊತೆಗೆ ವಾಲ್ಟೇರ್ ವಿವರಿಸಿದ ಸಂದರ್ಭದ ವಿವರಣೆಯೊಂದಿಗೆ ಮತ್ತೊಮ್ಮೆ ಪುಣ್ಯವಂತರ ಮಗಳಾಗಿ ಹುಟ್ಟಿ ಪುಣ್ಯವಂತರನ್ನು ಮದುವೆಯಾಗಿದ್ದಳು. ಗಂಡನಿಗೆ ಅವಳಿಗೆ ವಯಸ್ಸಿನಲ್ಲಿ ಹೆಚ್ಚಿನ ಅಂತರ. ಇವರ ಸಮಾಜದಲ್ಲಿ ಈ ಸಂದರ್ಭದಲ್ಲಿ ಹೆಂಡತಿ ತನ್ನಿಷ್ಟದ ಪರಪುರಷನೊಂದಿಗೆ ಸಲಿಗೆ ಬೆಳೆಸುವುದು ಅಪರಾಧವಲ್ಲ. ಜನಕಂಡಂತೆ ಅವಿವೇಕವಾಗಿ ನಡೆಯಬಾರದು ಅಷ್ಟೇ. ತಾನೇ ಕಂಡಂತೆ ಅವಳು ತನ್ನ ಗಂಡನಿಗೆ ಪ್ರೀತಿ ತೋರುತ್ತ ಅವನ ಪ್ರೀತಿಯನ್ನು ಉಳಿಸಿಕೊಂಡಿದ್ದಳು. ಹೀಗಿರುತ್ತ ತನ್ನನ್ನು ಒಲಿದು ಕೂಡಿದ್ದ ಇವನನ್ನು ಬಿಟ್ಟು ಈ ಸೆಯಿಂಟ್ ಲ್ಯಾಂಬರ್ಟಗೆ ಒಲಿದಿದ್ದಳು, ಈಗಲೂ ಗಂಡನ ಪ್ರೀತಿಯನ್ನು ಉಳಿಸಿಕೊಂಡಿದ್ದಳು. ಸತ್ಯವಾಗಿಯೂ ಅವಳು ಎಷ್ಟು ಚೆಲುವೆ, ಅಷ್ಟೂ ಚತುರೆ, ಅಷ್ಟೂ ಈ ಧೀರೆ' ಎನ್ನುವಲ್ಲಿಯೇ ಅವಳ ನಿರ್ಧಾರಗಳು ಇದೆಂಥಾ ವ್ಯಕ್ತಿತ್ವ ಎಂದು ಅಸಮಾಧಾನದಿಂದ ಹುಬ್ಬೇರಿಸಲು ಬಿಡುವುದಿಲ್ಲ. ಪ್ರಭುವಿ

ಇದು ಸ್ನೇಹ - ಸಂಬಂಧ ಇರಿಸಿಕೊಂಡ ಮೂವರು ವ್ಯಕ್ತಿಗಳ ಬಗೆಗೆ ಆಡುವ ಮಾತುಗಳಲ್ಲೇ ಅವಳ ನಿರ್ಧಾರದ ಸ್ಪಷ್ಟತೆಯಿದೆ. 'ನೀನು ಬುದ್ಧಿಯ ಖಂಡ. ನಿನಗೆ ಇದರಿಂದ ಪೋಟುಕೋಟಲೆ ಇಲ್ಲ. ಸೆಯಿಂಟ್ ಲ್ಯಾಂಬರ್ಟ್ ಹಸುಳೆಯಂಥ ಮನುಷ್ಯ. ತನ್ನ ಇಷ್ಟ ಅವನಿಗೆ ಇಷ್ಟ. ಅವನ ಮನಸ್ಸಿನಲ್ಲಿ ಸ್ವಾರ್ಥ ಇಲ್ಲ. ನನ್ನ ಪ್ರಭು ಉದಾರ ಚೇತನರು. ಮದುವೆಯಾದ ದಿನ ನನಗೆ ಅವರು ಹೇಳಿದರು. ಹೆಂಡಿರಾದವಳು ಬಂದಿಯೆಂದು ನಾನು ತಿಳಿದಿಲ್ಲ. ಗಂಡ ಹೆಂಡಿರ ಸಂಬಂಧದಲ್ಲಿ ಇವನಲ್ಲಿ ಸರಿ ಎನ್ನುವ ನಡತೆ ಅವಳಲಿಯ್ಯೂ ಸರಿ. ಇದು ನಮ್ಮ ಅಜ್ಜಿ ಹೇಳುತ್ತಿದ್ದ ಒಂದು ಸೂತ್ರ, ಇದು ನನಗೆ ಒಪ್ಪಿಗೆ, ಎಂದರು. ನಾನು ಸೂತ್ರ ನ್ಯಾಯ ಎಂದು ಕಾಣುತ್ತದೆ. ಹೆಣ್ಣು ಹೇಳಿದ್ದು ಹೆಣ್ಣಿಗೆ ಬೇರೆ ಹೇಗೆ ಕಂಡೀತು? ಅಂದರೆ ಗಂಡು ಇದನ್ನು ಒಪ್ಪಬಹುದೇ? ಎಂದೆನು. ಪ್ರಭು ಒಪ್ಪಿದ್ದೇನೆ, ಇಗೋ ಎಂದರು. ಕೈ ಮೇಲೆ ಕೈಹಾಕಿದರು. ನಾನು ಒಪ್ಪುವಷ್ಟು ಸುಲಭವೇ ಇದನ್ನು ನಡೆಸುವುದು? ಎಂದೆನು. ಪ್ರಭು, ಸುಲಭವಲ್ಲದಿರಬಹುದು, ಆದರೆ ನಡೆಸುತ್ತೇನೆ, ಎಂದು ಮತ್ತೆ ಕೈಮೇಲೆ ಕೈಹಾಕಿದರು.' ಎನ್ನುವ ಮಾತು ಮೂವರು ವ್ಯಕ್ತಿಗಳ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗುತ್ತದೆ. ಮತ್ತು ಅವಳ ನಿಲುವಿನ ಹಿಂದಿನ ಗಂಡಿನ ಮನಸ್ಥಿತಿಯ ಪ್ರತಿನಿಧೀಕರಣವೂ ಅಲ್ಲಿದೆ. ಆದುದರಿಂದಲೇ ಲಂಗುಲಗಾಮಿಲ್ಲದ ಜೀವನ ಅವಳದು ಎಂದು ಹೇಳುವಂತಿಲ್ಲ.

ಅವಳ ನಿಲುವಿನ ಬಗೆಗೆ ಅವಳೇ ತಳೆವ ನಿಲುವುಗಳು ಕೂಡ ಅವಳ ಬುದ್ಧಿವಂತಿಕೆಯ ಪರಾಕಾಷ್ಠೆಯನ್ನು ತೋರಿಸುತ್ತದೆ. ಮನುಷ್ಯತ್ವದ ಗುಣವನ್ನು ತೆರೆದಿಡುತ್ತದೆ. ಗಂಡು ಹೆಣ್ಣಿನ ಸಂಬಂಧ ಎಂದರೆ ಅವಳ ಪ್ರಕಾರ ಕಾಮ ತೀರಿಸುವುದಕ್ಕಷ್ಟೇ ಸೀಮಿತವಲ್ಲ. ಪರಸ್ಪರ ವಿಚಾರ ಹಂಚಿಕೊಳ್ಳುವ ಜ್ಞಾನ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಆ ಸಂಬಂಧಗಳು ಬೆಳೆಯುವುದು ಇನ್ನೊಂದು ವಿಶೇಷ.

'ನಾನು ಗಂಡನನ್ನು ವಂಚಿಸಿದ ಕುಲಟೆಯಲ್ಲ ಅವರು ಪತ್ನಿಯ ದುರ್ವರ್ತನೆಯನ್ನು ಅಸಹಾಯಕರಾಗಿ ಸಹಿಸಿಕೊಂಡ ಪತಿ ಅಲ್ಲ' ಎಂಬ ಮೂಲಕ ಪತಿ ಪತ್ನಿಯ ನಡುವೆ ಇದ್ದ ವೈಚಾರಿಕತೆ, ದೊಡ್ಡ ಮನಸ್ಸುಗಳು ಮುಖಾಮುಖಿಯಾಗುತ್ತವೆ. ಅಂದರೆ ಗಂಡನಿಗೆ ಗೊತ್ತುಮಾಡಿಯೇ ವಾಲ್ಟರ್‌ನೊಂದಿಗೆ ಬದುಕಿದ ಸಮಾಧಾನದೊಂದಿಗೆ ತಾನು ಕುಲಟೆ ಅಲ್ಲ ಎಂದು ಮಾಡಿಕೊಂಡಿರುವ ಸಮರ್ಥನೆಯಲ್ಲಿ ಆತ್ಮ ತೃಪ್ತಿ ಇದೆ. ಇನ್ನೂ ಒಂದು ಕಡೆ ಅವಳು ಹೇಳುವ ಈ ಮಾತು, 'ಅವರು ನನ್ನನ್ನು ಹೊರಕ್ಕೆ ಅಟ್ಟುತ್ತಿದ್ದರು ಎಂದಲ್ಲ, ಅದಕ್ಕೂ ಮೊದಲು ನಾನು ಹೊರಕ್ಕೆ ನಡೆಯುತ್ತಿದ್ದೆ' ಎನ್ನುವಲ್ಲಿ ಅವಳ ಸ್ವಾತಂತ್ರ್ಯ ಮತ್ತು ದಿಟ್ಟತನ, ತನ್ನತನ ಉಳಿಸಿಕೊಳ್ಳುವುದರ ಕಡೆಗೆ ತುಡಿಯುವುದು ಅರ್ಥವಾಗುತ್ತದೆ. ತನ್ನನ್ನು ಆಳುವ ಪ್ರವೃತ್ತಿಯನ್ನು ಆಕೆ ವಿರೋಧಿಸುತ್ತಾಳೆ. ಯಾರೇ ಸಣ್ಣ

ವ್ಯಕ್ತಿತ್ವದವರೊಂದಿಗೆ ಬಾಳುವುದಕ್ಕಿಂತ ಅವರಿಂದ ದೂರ ಇರುವುದೇ ಒಳಿತು ಎಂಬ ನಿಲುವು ತಳೆಯುತ್ತಾಳೆ. ಅಲ್ಲಿ ಹೊಂದಾಣಿಕೆಗೆ ಪ್ರಯತ್ನಿಸುವುದು ವ್ಯರ್ಥ ಎಂಬುದನ್ನು ಆಕೆ ಪ್ರತಿನಿಧಿಸುತ್ತಾಳೆ.

ಅಲ್ಲದೇ 'ಮಾನವ ಜಾತಿಯ ಸ್ತ್ರೀ ಮಾನವಿ, ನಾನು ಜಾತಿಯ ಹೆಣ್ಣಲ್ಲ. ಅವಳ ಸಲುವಾಗಿ ಪುರುಷರು ನಾಯಿಗಳಂತೆ ಕಚ್ಚಾಡುವುದು ತರ ಅಲ್ಲ' ಎನ್ನುವುದು ಹೆಣ್ಣನ್ನು ನೋಡುವ ಸಾಮಾನ್ಯ ಗಂಡಸರ ದೃಷ್ಟಿಕೋನಕ್ಕೆ ಕೊಡುವ ಚಾಟಿಯೇಟಿನ ಪ್ರತಿಕ್ರಿಯೆಯಾಗಿದೆ. ಜಾತಿಯ ಹೆಣ್ಣಲ್ಲ ಎಂಬಲ್ಲಿನ ಮಾತಿನ ಹಿಂದಿರುವ ಸೀಮಾತೀತವಾದ ಅರ್ಥ ಗಮನಿಸಲೇಬೇಕಾದಂಥದ್ದು. ಇಲ್ಲಿ ಜಾತಿಯ ಪ್ರಭೇದ ಒಪ್ಪಿಕೊಳ್ಳದ ಅವಳು, ತಾನು ಕೇವಲ ವ್ಯಕ್ತಿಯಾಗಿ ಗುರುತಿಸಿಕೊಳ್ಳುತ್ತಾಳೆ. ಮಾನವಳಾಗಿ ಕಾಣಿಸಿಕೊಳ್ಳುತ್ತಾಳೆ. ಹೊರತಾಗಿನ ಯಾವ ಪ್ರತ್ಯೇಕತೆಗೂ ಆಕೆ ಒಪ್ಪುವವಳಲ್ಲ. ಹೆಣ್ಣನ್ನು ಕೆಟ್ಟ ದೃಷ್ಟಿಯಿಂದ ನೋಡುವ ದುರ್ವರ್ತನೆಗೆ ಇಲ್ಲಿ ಅಸಹ್ಯವಾದ ಪ್ರತಿರೋಧವನ್ನು ಅವಳು ತೋರಿಸಿದ್ದಾಳೆ. ಇದು ಹೆಣ್ಣನ್ನು ನೋಡುವ ಗಂಡಿನ ದೃಷ್ಟಿಕೋನಕ್ಕೆ ಕೊಟ್ಟ ಛಾಟಿಯೇಟಿನ ಪ್ರತಿಕ್ರಿಯೆಯಾಗಿದೆ. 'ಜಾತಿ ಹೆಣ್ಣಲ್ಲ' ಎಂಬ ಪ್ರಯೋಗದ ಹಿಂದಿರುವ ಮೊನಚು ಅಂಥ ಕೀಳು ಮನಃಸ್ಥಿತಿಯವರನ್ನು ತಿವಿಯುತ್ತದೆ. ಇಲ್ಲಿ ಜಾತಿಯ ಪ್ರಭೇದ ಒಪ್ಪಿಕೊಳ್ಳದ ಆಕೆ ಕೇವಲ ಓರ್ವ ವ್ಯಕ್ತಿಯಾಗಿ ಗುರುತಿಸಿಕೊಳ್ಳುವುದಾಗಿದೆ. ಅಂದರೆ ಹೆಣ್ಣಿನ ಕುರಿತು ತಳೆವ ಪ್ರತ್ಯೇಕವಾದ ನಿಲುವನ್ನು ಒಪ್ಪಿಕೊಳ್ಳದಿರುವ ಮೂಲಕ ಅಂಥ ಅವೈಚಾರಿಕ ವಿಚಾರಗಳಿಗೆ ಯಾರೂ ಶರಣಾಗದಂತೆ ತಡೆಯುವ ಕೆಲಸವನ್ನು ಮಾಡುತ್ತಾಳೆ. ಸ್ತ್ರೀಯನ್ನು ಕೇವಲ ಮನುಷ್ಯಳಾಗಿ ಮಾತ್ರ ನೋಡಬೇಕು. ಆಗ ಅವಳ ಕುರಿತು ಸಮಾಜ ತಳೆದಿರುವ ಸಂಕುಚಿತ ನಿಲುವು, ದೃಷ್ಟಿಕೋನ ಬದಲಾಗಲು ಸಾಧ್ಯ ಎಂಬುದನ್ನು ಅವಳು ಪ್ರತಿಪಾದಿಸುತ್ತಾಳೆ.

ಅಲ್ಲದೇ ಪುರುಷಲೋಕ ಹೆಣ್ಣಿಗಾಗಿ ಹಾತೊರೆಯುವ, ಕಚ್ಚಾಡುವ ಕ್ರಿಯೆಯನ್ನು ಬಲವಾಗಿ ಪ್ರಭುವಿ ವಿರೋಧಿಸುವುದು ಇಲ್ಲಿ ಪ್ರಧಾನ ಅಂಶವಾಗಿದೆ. ಜಗತ್ತು ಹೆಣ್ಣನ್ನು ಕಾಣುತ್ತಿರುವ ಪರಿಯನ್ನು ಪರಿವರ್ತಿಸಬೇಕಾದ ಬಗೆಯನ್ನು ಹಾಗೂ ಪತಿ ಪತ್ನಿಯರ ನಡುವೆ ಇರಬೇಕಾದ ವೈಚಾರಿಕತೆ, ದೊಡ್ಡತನಗಳನ್ನು 'ಹೌದು, ನನ್ನ ಪ್ರಭು ಸಣ್ಣ ಮನಸ್ಸಿನ ಮನುಷ್ಯನಾಗಿದ್ದರೆ, ನನ್ನ ಜೀವನದ ರೀತಿ ಬೇರೆಯಾಗುತ್ತಿರಲಿಲ್ಲ. ಆದರೆ ನಾನು ಈ ಮದುವೆಯಾಗುತ್ತಿರಲಿಲ್ಲ, ಅವರು ನನ್ನನ್ನು ಹೊರಗೆ ಅಟ್ಟುತ್ತಿದ್ದರು ಎಂದಲ್ಲ, ಅದಕ್ಕೂ ಮೊದಲು ನಾನು ಹೊರಗೆ ನಡೆಯುತ್ತಿದ್ದೆ' ಎನ್ನುವ ಮಾತುಗಳು ತೆರೆದಿಡುತ್ತವೆ. ಅವಳ ಸ್ವಾತಂತ್ರ್ಯ ಮತ್ತು ಛಾತಿ ತನ್ನತನವನ್ನು ಉಳಿಸಿಕೊಳ್ಳುವುದರೆಡೆಗೆ ತುಡಿಯುವುದೂ ಇಲ್ಲಿ ಅರ್ಥವಾಗುತ್ತದೆ. ತನ್ನನ್ನು ಆಳುವ ಪ್ರವೃತ್ತಿಗೆ ವಿಧೇಯಳಾಗದ ಆಕೆ ಯಾವುದೇ ಸಣ್ಣ ಮನಸ್ಸಿನ ಮನುಷ್ಯನೊಂದಿಗೆ ಬಾಳುವುದಕ್ಕಿಂದ ಅವನಿಂದ ದೂರವಾಗುವುದೇ ಒಳಿತು. ಆದ್ದರಿಂದಲೇ ಇಂಥಲ್ಲಿ ಹೊಂದಾಣಿಕೆಗೆ ಪ್ರಯತ್ನಿಸುವುದೇ ವ್ಯರ್ಥ ಎಂದು ಧ್ವನಿಸುತ್ತಾಳೆ.

ಹೆಣ್ಣು ಜೀವ ಬಯಸಬಹುದಾದ ಒಳಿತನೆಲ್ಲ ತಾನು ಸಪಿದು ಆಯಿತು ಎನ್ನುವ ಅವಳು, 'ಅಲ್ಲಿ ಕಂಡ ತೃಪ್ತಿಯನ್ನು ತನ್ನ ಪ್ರಭು ನನಗೆ ತಂದುಕೊಟ್ಟರು. ನೀನು ಜಾಣನ ಒಲವನ್ನು ಕೊಟ್ಟೆ, ಸೈಂಟ್ ಲ್ಯಾಂಬರ್ಟ್ ರೂಪಿನ ಅನುಭವವನ್ನು ನೀಡಿದ. ನಾನು ತೃಪ್ತಳಾಗಿದ್ದೇನೆ' ಎಂದು ನೇರವಾಗಿಯೇ ಹೇಳುತ್ತಾಳೆ. ಅವಳಿಗೆ ತಾನು ನಡೆದ ರೀತಿ ನಿರ್ವಂಚನೆಯದ್ದು ಎಂಬ ದೃಢ ನಂಬಿಕೆ ಇದೆ. ಯಾರಿಗಾಗಿಯೂ ನಾವು ನಮ್ಮ ಸುಖ ತ್ಯಜಿಸಬೇಕಾದ, ಅಂಜಿ ನಡೆಯಬೇಕಾದ ಅಗತ್ಯವಿಲ್ಲದ್ದನ್ನು ಅವಳು ಹೇಳಿರುವಲ್ಲಿ ಅಲೌಕಿಕದ ಶಕ್ತಿಗೆ ಬಾಗುವ, ಲೌಕಿಕದ ಜನರಿಗೆ ಅಂಜದ ವಿಶಿಷ್ಟ ಛಾತಿಯುಳ್ಳ ಅವಳ ವ್ಯಕ್ತಿತ್ವ ಅನುಸರಿಸುವುದಕ್ಕೆ ಪ್ರೇರಕಿಯಾಗುತ್ತಾಳೆ.

'ಲ್ಯಾಂಬರ್ಟ್‌ನೊಂದಿಗೆ ನೀನು ಬುದ್ಧಿಯ ಖಂಡ. ನಿನಗೆ ಇದರಿಂದ ಪೋಟುಕೋಟಲೆ ಇಲ್ಲ. ಸೇಯಿಂಟ್ ಲ್ಯಾಂಬರ್ಟ್ ಹಸುಳೆಯಂಥ ವ್ಯಕ್ತಿ' ಎಂದಿರುವುದು ಇಡೀ ಕತೆಯ ಕೇಂದ್ರಬಿಂದುವಾಗುತ್ತದೆ. ಅದಕ್ಕೂ ಮಿಗಿಲಾಗಿ ಅವಳ ತೃಪ್ತಿ ಇರುವುದು, ತನಗೆ ತಿಳಿದ ಮಟ್ಟಿಗೆ 'ನಾನು ನಿರ್ವಂಚನೆಯಾಗಿ ನಡೆದಿದ್ದೇನೆ. ಸರಿಯಾಗಿ ಎನ್ನಲಾರೆ, ಸಮಾಜ ಅದನ್ನು ಸರಿ ಎನ್ನುವುದಿಲ್ಲ. ಆದರೆ ಲೋಕವನ್ನು ಮಾಡಿದ ಶಕ್ತಿ ನಮ್ಮನ್ನು ಹೀಗೆ ಮಾಡಿದೆ. ಸಮಾಜಕ್ಕೆ ಸರಿ, ಸಮಾಜಕ್ಕೆ ಸರಿ. ದೈವದ ಎದುರಿಗೆ ಒಂದೇ ಸರಿ ಸಾಧ್ಯ ಅದು ನಿರ್ವಂಚನೆ' ಎಂದು ಅವಳು ತಳೆದಿರುವ ದೃಢ ನಿಲುವು, ಅಚಲ ಆತ್ಮವಿಶ್ವಾಸ ಅವಳನ್ನು ಗೆಲ್ಲಿಸುತ್ತದೆ. ಇತರರಿಗಾಗಿ ತಮ್ಮ ಸುಖವನ್ನು ಬಲಿಕೊಡುವ ಹಾಗೂ ವ್ಯಕ್ತಿತ್ವನ್ನೇ ಕಳೆದುಕೊಳ್ಳುತ್ತ ಬದುಕುವುದನ್ನು ನಯವಾಗಿ ಬದಿಗೆ ತಳ್ಳುತ್ತಾಳೆ. ಇಲ್ಲಿ ವೈಚಾರಿಕತೆ, ಪ್ರಗತಿಪರ ಚಿಂತನೆ ಪ್ರತಿಪಾದಿತಗೊಂಡದ್ದಾಗಿ ಭಾಸವಾಗುತ್ತದೆ. ಸ್ತ್ರೀಪರ ಚಿಂತನೆ ಮೆರೆದಿದೆ ಎಂದೂ ಭ್ರಮೆ ಹುಟ್ಟಿಸುತ್ತದೆ. ಅವರವರ ವ್ಯಕ್ತಿತ್ವನ್ನು ತಿವುಚಿ ಹಾಕಲು ಒಪ್ಪದ ಮಾಸ್ತಿ ಆಯ್ಕೆಯ ಸ್ವಾತಂತ್ರ್ಯವನ್ನು ಹೆಣ್ಣಿಗೆ ಕೊಡುತ್ತಾರೆ.

ಸಮಾಜ ಒಪ್ಪಿಕೊಳ್ಳುವ ನಡತೆ, ನಡೆಯುವ ರೀತಿಗೆ ಅಲೌಕಿಕದ ಶಕ್ತಿಯನ್ನು ಹೊಣೆಯಾಗಿಸಿ, ಆಡುವವರ ಬಾಯಿಯನ್ನು ಮುಚ್ಚಿಸುತ್ತಾರೆ. ಆದರೆ ಆಕೆ ಬದುಕಿದ ರೀತಿಯಲ್ಲಿ ಮೂವರಿಗೂ ವಂಚಿಸದ ರೀತಿಯನ್ನು ವಿಜೃಂಭಿಸುವ ಮೂಲಕ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಬೇಕಾದ ಸಂದೇಶವನ್ನು ಅವಳ ಮೂಲಕ ನೀಡುತ್ತಾರೆ ಎಂದೂ ಅನ್ನಿಸುತ್ತದೆ. ಈ ಮೂಲಕ ಅದು ಲೌಕಿಕ ಮತ್ತು ಅಲೌಕಿಕದಲ್ಲಿ ಕ್ಷಮ್ಯವಾಗುವುದನ್ನು ಹೇಳುತ್ತಾರೆ. ಆದರೆ ಹೀಗೆ ಹೇಳುವುದು ಆಕೆಯ ಕೊನೆಗಾಲದಲ್ಲಿ. ಅಂದರೆ ಮಾಸ್ತಿ ಧೋರಣೆಯ ಹಿನ್ನೆಲೆಯಲ್ಲಿಯೇ ಪ್ರಭುವಿಯ ನಿರ್ಧಾರವನ್ನು ಚರ್ಚಿಸುವುದಾದರೆ ಅವಳು ಅಂತ್ಯ ಕಾಣುವುದೇ ಗಂಡನೊಂದಿಗೆ ನಿಷ್ಠೆಯಿಂದ ಬಾಳದೇ ಹೋದುದರಿಂದ ಎಂದೂ ನಿರ್ಧರಿಸಬಹುದಾಗಿದೆ. ಮೂಲ ಧರ್ಮಕ್ಕೆ ವಿರೋಧವಾಗಿ ಬದುಕುವ ಯಾರೇ ಆಗಲಿ ಬದುಕಗೊಡದಿರುವ ಸನ್ನಿವೇಶಗಳನ್ನು

ಅರ್ಥೈಸಿಕೊಂಡರೆ ಇಲ್ಲಿನ ಪ್ರಭುವಿಯ ಪರಿತಾಪ ಮತ್ತು ಸಾವು ಪಾತಿವ್ರತ್ಯ ಮೀರಿದ್ದರ ಫಲವೆಂಬುದನ್ನು ಮರೆಯುವಂತಿಲ್ಲ.

ರೋಮ್‌ನ ಪ್ರಜಾಪ್ರಭುತ್ವ ಪರಿಚಯಿಸುವ 'ಸಂಯಮಿ ಕೇಟೋ' ಕತೆಯ ಕೇಟೋ ತನ್ನ ಆಳ್ವಿಕೆಯ ಸಂದರ್ಭದಲ್ಲಿ ಎಷ್ಟು ಪ್ರಾಮಾಣಿಕ, ಉದಾರಿಯೋ ಅಂತೆಯೇ ಇನ್ನೊಬ್ಬರ ಅಭಿಪ್ರಾಯ, ತೀರ್ಮಾನಕ್ಕೆ ಬೆಲೆಕೊಡುವ, ತನ್ನ ಹಿತವನ್ನು ಅದಕ್ಕಾಗಿ ಬಲಿಕೊಡುವ ಮಾನವೀಯ ವ್ಯಕ್ತಿಯಾಗುತ್ತಾನೆ. ಹೆಣ್ಣೊಬ್ಬಳು ಪುರುಷ ಇಷ್ಟಪಟ್ಟಾಗ ಇಷ್ಟಪಟ್ಟವರೊಡನೆ ಬದುಕಬೇಕಾಗಿ ಬರುವ ಸಂದರ್ಭವನ್ನು ರೋಮ್ ದೇಶದ ಮರ್ಸಿಯಾ ಪ್ರತಿನಿಧಿಸಿದ್ದಾಳೆ. ಮರ್ಸಿಯಾ ವಿವಾಹಿತೆ. ಆದರೂ ಅವಳನ್ನು ಬಯಸಿದ ಇನ್ನೊರ್ವ ವ್ಯಕ್ತಿಯೊಂದಿಗೆ ಆಕೆ ಬಾಳಬೇಕಾಗುತ್ತದೆ. ಅದಕ್ಕೆ ಒಪ್ಪಿಗೆ ಕೊಡುವುದೂ ಪತಿಯೇ. ಆದರೆ ಆ ಒಪ್ಪಿಗೆಯನ್ನು ಇಲ್ಲಿ ಆಕೆ ವಿರೋಧಿಸುವ ಮನಸ್ಸನ್ನು ತೋರಿಸುವುದಿಲ್ಲ. ಇಲ್ಲಿ ಗಂಡಸರಿಬ್ಬರ ನಿರ್ಧಾರಗಳ ನಡುವೆ ಸ್ತ್ರೀ ಬದುಕನ್ನು ಬಂದಂತೆ ಸ್ವೀಕರಿಸಿದ್ದಾಗಿದೆ. ವಿವಾಹವಾದ ಪತ್ನಿಯನ್ನೇ ಏಕಾಂಗಿ, ವಯಸ್ಕ ಗೆಳೆಯ ತನಗಾಗಿ ಕೊಡುವಂತೆ ಪ್ರಾರ್ಥಿಸಿ, ಮರ್ಸಿಯಾಳ ಸ್ವಭಾವ ವರ್ಣಿಸುವಲ್ಲಿ 'ಮರ್ಸಿಯಾ ಎಲ್ಲರಂತೆ ಹೆಣ್ಣಲ್ಲ, ವಯಸ್ಸಾದನೆಂಬ ಕಾರಣದಿಂದ ಅವಳು ನನ್ನನ್ನು ಹಗುರವಾಗಿ ಕಾಣುವವಳಲ್ಲ. ತನ್ನ ನಡತೆಯಲ್ಲಿ ತಪ್ಪುವವಳಲ್ಲ, ನೀನು ಮನಸ್ಸು ಮಾಡಿ ಇವಳನ್ನು ಬಿಟ್ಟುಕೊಡುವುದಾದರೆ ನಾನು ಮದುವೆಯಾಗಬೇಕೆಂದು ಬಯಸಿದ್ದೇನೆ. ಆಸ್ತಿಗೆ ದಿಕ್ಕಾಗಿ, ಮನೆಗೆ ಹೊಸದಾಗಿ ಒಬ್ಬ ಮಗನೊ, ಮಗಳೋ ಆದರೆ ನನಗೆ ಚಿಂತೆ ಇಲ್ಲ' ಎನ್ನುವುದು ರೋಮ್ ಸಮಾಜದ ವಾಸ್ತವದ ನೆಲೆಯಲ್ಲಿಯೇ ಪರಿಚಿತಗೊಂಡಿದೆ ಸರಿ. ಆದರೆ ಅಲ್ಲಿ ಕೇಟೋ, 'ನಿನ್ನ ಅಪೇಕ್ಷೆ ತಪ್ಪಲ್ಲ ಮರ್ಸಿಯಾ ಅಡ್ಡಿ ಮಾಡದಿದ್ದರೆ ನಾನು ಅವಳನ್ನು ಬಿಟ್ಟುಕೊಡಲು ಸಮ್ಮತ. ಆಮೇಲೆ ನೀನು ಅವಳನ್ನು ಮದುವೆಯಾಗುವ ವಿಷಯವು ಅವಳ ತಂದೆಯ ಅಪ್ಪಣೆಯನ್ನು ಕೇಳಬೇಕು' ಎನ್ನುವಲ್ಲಿ ಹೆಣ್ಣಿನ ಮನಸ್ಸು ಅಭಿಪ್ರಾಯಗಳಿಗೆ ಮಾನ್ಯತೆ ನೀಡುವ, ಅದನ್ನು ವಿರೋಧಿಸದ ಮನಸ್ಥಿತಿಯನ್ನು ಗೌರವ ಪೂರ್ವಕವಾಗಿ ಚಿತ್ರಿಸಿದ್ದಾರೆ. ಅಲ್ಲದೇ ತನ್ನ ತಂಗಿ ಸೀಸರ್‌ನೊಂದಿಗೆ ಹೊಂದಿದ ಸಲುಗೆಯ ಸಂಬಂಧಕ್ಕೂ ವಿರೋಧಿಸದೇ 'ಅವಳ ತಿಳಿವಳಿಕೆಗೆ ಅವಳ ಆಸೆ, ಅವಳ ಯೋಗ್ಯತೆಯನ್ನು ಸರಿಸಿ, ಅವಳ ಬಾಳು ನಡೆಯಬೇಕು. ತಾನು ಹೇಳಿದರೆ ಕೇಳುವಳೇ? ತಡೆದರೆ ನಿಲ್ಲುವಳೇ?' ಎಂದು ಯೋಚಿಸಿ, ಅವಳ ಯೋಚನೆಗನುಸಾರ ಅವಳು ಬದುಕು ಕಾಣುವ ಸ್ವಾತಂತ್ರ್ಯ ಕೊಡುತ್ತಾನೆ. ಅಂತೆಯೇ ಹೋರ್ಟೆನ್ಸಿಯಸ್ ತೀರಿಕೊಂಡಾಗ ಒಂಟಿಯಾಗುವ ಮರ್ಸಿಯಾ ಕೇಟೋನ ಪತ್ನಿಯಾಗಿಯೇ ಬರುವುದು ಅವಳನ್ನು ಅವನು ಒಪ್ಪಿಕೊಳ್ಳುವುದು ಕೇಟೋನ ವಿಶಾಲ ಮನಸ್ಸು, ಸಂಯಮ ಪರಿಚಯಿಸುವುದು ಒಂದು ಉದ್ದೇಶವಾಗಿದೆ. ಇನ್ನೊಂದು ಉದ್ದೇಶ ಹೆಣ್ಣು ಗಂಡಿನ ಆಸರೆ ಇಲ್ಲದೆ ಬಾಳಲಾರಳು ಎಂಬುದನ್ನು ಹೇಳುವುದೂ ಆಗಿದೆ. ಅಲ್ಲದೆ ಮೊದಲ ಗಂಡ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಗ ಅವನನ್ನು ತೊರೆದು

ವಯಸ್ಕನಾದವನೊಂದಿಗೆ ಹೋದದ್ದು ಅವನನ್ನು ಕಳೆದುಕೊಳ್ಳುವಂತೆ ಮಾಡಿದೆ. ಈ ಮೂಲಕ ಮತ್ತೆ ಅವಳು ಹಳೇ ಗಂಡನ ಬಳಿಗೇ ಬರುವ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದ್ದಾರೆ.

ಪಾತಿವ್ರತ್ಯವನ್ನು ಅವಳಾಗಿಯೇ ಪಾಲಿಸಿದ್ದರೆ ಅವಳು ಈ ಸ್ಥಿತಿಯನ್ನು ಅನುಭವಿಸಬೇಕಾಗಿರಲಿಲ್ಲ. ಧೈರ್ಯಮಾಡಿಹೊರಡುವ ಪರಂಪರೆಯ ಹುಟ್ಟು, ಅನಿವಾರ್ಯತೆ ಮತ್ತು ಸಹಜತೆಗಳ ಮುಖ ತೆರೆದುಕೊಳ್ಳುತ್ತದೆ. ಜತೆಜತೆಗೇ ಮರ್ಸಿಯಾ ಮರಳಿ ಕೇಟೋನೊಂದಿಗೆ ಬದುಕು ಒಪ್ಪಿಕೊಳ್ಳುವುದು ಏಕಾಂತ ಬದುಕಿನ ಅಭದ್ರತೆಗೆ, ಏಕಾಂಗಿತನ ಅನುಭವದ ಭೀಕರತೆ ದೂರವಾಗಿಸುವುದಕ್ಕೆ. ಗಂಡಿನ ಆಸರೆ ಹೆಣ್ಣಿಗೆ ಅನಿವಾರ್ಯತೆ ಎಂಬುದನ್ನು ಪ್ರತಿಪಾದಿಸಿದ್ದಾಳೆ. ಆಕೆ ಹೋರ್ಟೆನ್ಸಿಯಸ್‌ನನ್ನು ಮದುವೆ ಆಗುವ ಸಂದರ್ಭದಲ್ಲಿ ಸ್ವಲ್ಪವೂ ಚಂಚಲಳಾಗದೇ ಒಪ್ಪಿಕೊಳ್ಳುವ ಮೂಲಕ ಮೂಲ ಪರಂಪರೆಗೆ ಬೆನ್ನು ಹಾಕಿದ ಮರ್ಸಿಯಾ ಮರಳಿ ಗಂಡನ ಅನಿವಾರ್ಯತೆಯನ್ನು ಮೌನವಾಗಿಯೇ ಪ್ರತಿಷ್ಠಾಪಿಸುತ್ತಾಳೆ. ಅಂದರೆ ಮಾಸ್ತಿ ವಿಶ್ವದ ವಿವಿಧೆಡೆಯ ಬದುಕನ್ನು ಪರಿಚಯಿಸುವಾಗ ಸ್ತ್ರೀಯರ ಧರ್ಮವನ್ನು ಸನಾತನ ಧರ್ಮದ ತತ್ವದೆಡೆಗೇ ಮಾಸ್ತಿ ಬಂಧಿಸಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಪಾತಿವ್ರತ್ಯದ ಪಾಲನೆ ಹೆಣ್ಣಿನ ಬದುಕಿನ ಗುರಿಯಾಗಿರುವಂತೆ ರೂಪಿಸಲಾಗಿದೆ. ಪುರುಷ ಪ್ರಧಾನವಾದ ಸಂಸ್ಕೃತಿ ರೂಪಿಸಿದ ಒಂದು ಗಂಡಿಗೆ ಒಂದು ಹೆಣ್ಣು ಎಂಬ ನಿಲುವನ್ನು ಮುರಿಯ ಹೊರಡುವ ಯಾವ ಸ್ತ್ರೀಯರೂ ಸುಖದ ಬದುಕು ಕಾಣಲಾರದೇ ಹೋಗುವುದನ್ನು ಮಾಸ್ತಿ ಪರಿಚಯಿಸುವ ಮೂಲಕ ಆ ಮೌಲ್ಯವನ್ನು ವಿಶ್ವವ್ಯಾಪಿಯಾಗಿಸುವಂತೆ ಸಂದೇಶ ನೀಡುತ್ತಾರೆ.

ಇದೇ ತೆರನಾದ ಇನ್ನೊಂದು ಸಂದರ್ಭದಲ್ಲಿ 'ಮುಪ್ಪಿನ ಚಪಲ' ಕತೆಯ ವಿವಾಹಿತೆ ಹ್ಯಾನಾಳನ್ನು ವೃದ್ಧ ಗಯಟೆ ವಿವಾಹವಾಗುವಂತೆ ಬಯಸಿದಾಗ ಆಕೆ ತೋರುವ ಪ್ರತಿರೋಧ ಸಾಂಪ್ರದಾಯಕವಾದ ಪಾತಿವ್ರತ್ಯವನ್ನು ಪಾಲಿಸುವುದೇ ಆಗಿದೆ.

ಮುಪ್ಪಿನ ಚಪಲದ ಹ್ಯಾನಾ, ಆಟಲೀಯರು ಇಲ್ಲಿ ಅವರದ್ದೇ ಸ್ವತಂತ್ರ ವ್ಯಕ್ತಿತ್ವ ಹೊಂದಿದವರು. ಮುಪ್ಪು ಆವರಿಸಿದ್ದರೂ ಕಿರು ಹರೆಯದ ಹ್ಯಾನಾಳನ್ನೂ ಕೂಡ ಸುಖಿಸುವ ಕಾತರ ಹೊಂದಿರುವ ಗಯಟೆಗೆ ಹ್ಯಾನಾ ಕೊಡುವ ಗೌರವ ತೆಗೆದುಕೊಳ್ಳುವುದಕ್ಕೆ, ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಹ್ಯಾನಾ ಅಪನ ಮನಗೆ ಬಂದರೂ ಸೊಸೆಯನ್ನು ಮಾತ್ರ ಮಾತನಾಡಿಸಿ ತೆರಳುತ್ತಾಳೆ. 'ನಾನು ನಿಮ್ಮ ಯಜಮಾನರ ಜೊತೆಗೆ ನಡೆದುಕೊಳ್ಳಬಲ್ಲ ಹೆಣ್ಣಲ್ಲ. ನಾನು ಅವರ ಹತ್ತಿರ ಹೋಗೋದಿಲ್ಲ. ಅವರನ್ನು ಮಾತನಾಡಿಸೋದಿಲ್ಲ' ಎಂದು ಗಂಡ ಎಕ್ಕರ್‌ಮನ್ ಗಯಟೆಯನ್ನು ಮಾತನಾಡಿಸುವಂತೆ ಹೇಳಿದಾಗ ಕೊಟ್ಟ ಉತ್ತರ ನೈತಿಕ ಕಟ್ಟುಪಾಡಿಗೆ ಒಳಗಾಗಿರುವುದೇ ಆಗಿದೆ. ಸಂಕುಚಿತ ಕಲ್ಪನೆಗಳನ್ನು ಅವಳು ಸ್ಪಷ್ಟವಾಗಿ ನಿರಾಕರಿಸುತ್ತಾಳೆ. ಆ ನಿರಾಕರಣೆಯ ಮೂಲಕ ಅವಳು ಇಡೀ ವಿಶ್ವದ ಹೆಣ್ಣುಗಳನ್ನು ಪ್ರತಿನಿಧಿಸುತ್ತಾಳೆ.

ವೃದ್ಧ ಗಯಟೆಗೆ ಕಿರು ಹರೆಯದ ಹ್ಯಾನಾಳನ್ನೂ ಪತ್ನಿಯಾಗಿ ಸ್ವೀಕರಿಸುವ ಚಪಲಕ್ಕೆ ಆಕೆ ಗಂಡನೊಂದಿಗೆ ನೇರವಾಗಿಯೇ 'ನಿಮ್ಮ ಯಜಮಾನರಿಗೆ ಇನ್ನೂ ಹೆಣ್ಣಿನ ಚಪಲ ಬಿಟ್ಟಿಲ್ಲ. ನೀನು ಅವರ ಹತ್ತಿರ ಕೆಲಸ ಮಾಡೋನು. ನಾನು ನಿನ್ನ ಹೆಂಡತಿ. ಅವರಿಗೆ ಮಗಳೋ, ಸೊಸೆಯೋ ಆಗಬಹುದು. ಹೆಂಡತಿ ಅಲ್ಲ. ಇರುತ್ತ ಈ ಮುದುಕನಿಗೆ ನಾನು ಹೆಂಡತಿ ಆಗಿದ್ದರೆ ಹ್ಯಾಗಿದ್ದಿತೋ ಅನ್ನೋ ಯೋಚನೆ' ಎನ್ನುವಲ್ಲಿ, 'ನೀನು ಸತ್ಯವಂತ. ಹೆರವರ ಹೆಣ್ಣು ಎದುರಿಗೆ ಕುಳಿತರೆ ಕೆಟ್ಟ ಯೋಚನೆ ಮಾಡಲಾರೆ. ನಿಮ್ಮ ಯಜಮಾನರು ಬೇರೆ ವಿಷಯಕ್ಕೆ ದೊಡ್ಡವರು. ಈ ವಿಷಯಕ್ಕೆ ನಿನ್ನಷ್ಟು ದೊಡ್ಡವರಲ್ಲ. ಆ ಹೊತ್ತು ಅವರ ಎದುರಿಗೆ ಕುಳಿತ ಆ ಐದು ನಿಮಿಷದಲ್ಲಿ ನನಗೆ, ಈ ನಿನ್ನ ಹಿರೀರು ನನ್ನ ಮೈಮೇಲಿದ್ದ ಬಟ್ಟೆಯನ್ನೆಲ್ಲ ಕಿತ್ತು ಎಸೆದು ನನ್ನ ಬರೀ ಮೈ ನೋಡತಾ ಇದ್ದಾರೆ ಅನ್ನಿಸಿತು. ಅವರ ಕಣ್ಣಿನ ನೋಟ ಅಂಥಾದ್ದು. ಅದಕ್ಕೇ ನಾನು ಬೇಗನೆ ಎದ್ದು ನನಗೆ ಕೆಲಸ ಇದೆ ಅಂತ ಹೇಳಿ ಎದ್ದು ಬಿಟ್ಟೆ' ಎಂದು ಕೊಡುವ ಸ್ಪಷ್ಟೀಕರಣ ಗಂಡಸು ಜಾತಿಯ ಎರಡು ಗುಣಗಳನ್ನು, ಮುಖಗಳನ್ನು ಪರಿಚಯಿಸುತ್ತದೆ. ಅವಳು ಇಲ್ಲಿ ಗಂಡಸಿನವರ್ತನೆಯ ಕುರಿತ ಎಚ್ಚರಿಕೆಯ ಕರೆಗಂಟೆಯಾಗಿಯೂ ಕೆಲಸ ಮಾಡುತ್ತಾಳೆ.

'ನೋಡು, ನಮ್ಮಮ್ಮ ನನ್ನನ್ನ ಮರ್ಯಾದೆ ಹೆಣ್ಣಾಗಿ ಬೆಳೆಸಿದ್ದಾಳೆ. ನೀನು ನನ್ನ ಗಂಡ. ನೀ ನನ್ನ ಹಾಗೆ ನೋಡಬೇಕು ಅಂತ ನನ್ನ ಆಸೆ. ಬೇರೆ ಯಾವ ಗಂಡೂ ನನ್ನನ್ನ ಹಾಗೆ ನೋಡೋದು ನನಗೆ ಇಷ್ಟ ಇಲ್ಲ. ನಿನ್ನ ಯಜಮಾನ ಅಲ್ಲ, ಅವರ ಯಜಮಾನ ನಿಮ್ಮ ಡ್ಯೂಕ್ ಇದ್ದಾರಲ್ಲ, ಅವರು ನನ್ನನ್ನ ಆ ನೋಟದಿಂದ ನೋಡುವುದಾದರೆ, ನಾನು ಅವರ ಎದುರಿಗೂ ಇರುವುದಕ್ಕೆ ಒಪ್ಪುವುದಿಲ್ಲ. ನನ್ನ ಮೈಮೇಲೆ ನನ್ನ ಬಟ್ಟೆ ಇರಬೇಕು' ಎಂದು ಕೊಡುವ ಛಾಟಿ ಏಟಿನ ಉತ್ತರದ ಮೂಲಕ ಹೆಣ್ಣು ಹೆಣ್ಣಾಗುವ ಪರಿ ಮತ್ತು ಅಂಥ ಧೈರ್ಯದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮಾಸ್ತಿ ಒತ್ತಾಸೆಯಾಗುತ್ತಾರೆ. ಈ ಪ್ರತಿಭಟನೆಯ ಧ್ವನಿ ಶೀಲವೇ ಮುಖ್ಯ ಅಂತಲ್ಲ . ಒಬ್ಬನಿಗೆ ತನ್ನನ್ನು ಒಪ್ಪಿಸಿಕೊಂಡು ಇನ್ನೊಬ್ಬನಿಗೆ ಇಷ್ಟವಿಲ್ಲದವನಿಗೆ ಕೂಡ ತನ್ನನ್ನು ಒಪ್ಪಿಸಿಕೊಳ್ಳುವುದು ಸಾಧ್ಯವಾಗದ ಮನಸ್ಸಿನ ನಿರ್ಧಾರಕ್ಕೆ ಸಂಬಂಧಿಸಿದ್ದಾಗಿದೆ. ವಯಸ್ಸಾದವರ ಚಪಲವನ್ನು ಪರಿಚಯಿಸುವುದರೊಂದಿಗೆ ಆ ಚಪಲ ತೀರಿಕೆಗೆ ಯಾರೇ ಆಗಲಿ ಆಸ್ಪದ ಕೊಡಬಾರದು. ಅಲ್ಲಿ ಯಾರೂ ಅಸಹಾಯಕರಾಗಬಾರದು. ದಿಟ್ಟ ನಿಲುವನ್ನು ಸಾಧಿಸಿ ಗೆಲ್ಲಬೇಕು ಎಂಬ ಸಂದೇಶ ಇಲ್ಲಿನದಾಗಿದೆ.

ಗಯಟೆ ಮುಪ್ಪು ಹಿಡಿದು ಬಾಳ ದಿನ ಸಾಗಿಸುತ್ತಿದ್ದರೂ ೧೮ರ ಹರೆಯದ ಹೆಣ್ಣನ್ನು ಬಯಸುವ ಅತಿ ಚಪಲದ ಹಿಂದೆ ಹೆಣ್ಣನ್ನು ಭೋಗದ ವಸ್ತುವಾಗಿ ಕಾಣುವ ಗಂಡು ದೃಷ್ಟಿಕೋನವಿದೆ. 'ತಾನು ಅಜ್ಜ. ಅದು ಮೊಮ್ಮಗಳೋ ಮರಿಮಗಳೋ. ಇಂಥ ಜನಕ್ಕೆ ಮೈಯ ಹಸಿವು, ಒಂದು ರೋಗ ಆಗಿ ನಿಂತಿರುತ್ತೆ. ಸತ್ತ ಮೇಲೆಯೇ ಇಂಥವರಿಗೆ ಮುಪ್ಪಿನ ಚಪಲ ಮುಗಿಯೋದು' ಎಂದು ಕಾಮದ ಚಪಲತೆಯನ್ನು ವಿರೋಧಿಸುವುದರ ಮೂಲಕ ಹೆಣ್ಣುಗಳಿಗೆ ಅನ್ಯಾಯ ಮಾಡುವ ಪರಿಯನ್ನು ವಿರೋಧಿಸಲಾಗಿದೆ.

'ವೆಂಕಟಿಗನ ಹೆಂಡತಿ' ಕತೆಯ ರಂಗಿ ಸಾಹುಕಾರತನಕ್ಕೆ ಮರುಳಾಗಿ ಗಂಡನನ್ನೇ ತೊರೆದು ನಡೆಯುತ್ತಾಳೆ. ಅಲ್ಲಿ ಬದುಕು ಸಹ್ಯವಾಗದಾಗ ಮರಳಿ ಗಂಡನ ಬಳಿಗೆ ಬರುತ್ತಾಳೆ. ದುರದೃಷ್ಟದ ಹೆಣ್ಣು ಷಂಡ ಗಂಡನ ಕುತಂತ್ರದಿಂದ ಪಾರಾಗುವುದಕ್ಕಾಗಿ ಇಷ್ಟ ಬಂದವನೊಂದಿಗೆ ಬಂದಿರುವುದು ಸಹಜ ಎಂಬಂತೆ ಮಾಸ್ತಿ ಪರಿಚಯಿಸಿದ್ದಾರೆ. ಇದು ಕಾಮ-ಪ್ರೇಮಗಳು ಜನಪದದ ಬದುಕಿನಲ್ಲಿಯಂತೆ ನಡೆದುಕೊಳ್ಳುವುದನ್ನು ಪರಿಚಯಿಸುತ್ತದೆ.

'ಪಕ್ಷಿಜಾತಿ' ಕತೆಯ ಸೋದರ-ಸೋದರಿಯರು ಒಂದೆಡೆ ಕೂಡುವುದು ಇಲ್ಲಿ ಅದಕ್ಕೆ ಪ್ರಬಲ ಸಾಕ್ಷಿ ನೀಡುತ್ತದೆ. ಒಂದೆಡೆಯಿಂದ ಅದು ಪ್ರಶ್ನಾರ್ಹವಾದರೂ ಅದು ತನಕ ಒಳಗೊಳಗೇ ನಡೆಯುತ್ತಿದ್ದ ಈ ಸಂಬಂಧ ಯಾರೂ ಕಾಣದೇ ಹೊದದ್ದರಿಂದ ಅದು ಸುದ್ದಿಯಾಗದೇ ಉಳಿದುಕೊಂಡದ್ದಕ್ಕೆ ಕಾರಣವಾಗುತ್ತದೆ. ಕಂಡಾಗ ಮಾತ್ರ ಪ್ರಶ್ನಿತವಾಗುವ ಇಂಥ ಸಂದರ್ಭಗಳನ್ನು ಕಾಣದೇ ನಡೆಯಬಹುದಾದ ಸಂಬಂಧಗಳ ರೀತಿಯ ಸಂಭವನೀಯತೆಯನ್ನು ನೆನಪಿಸುತ್ತದೆ.

ಪಾಶ್ಚಾತ್ಯ ಮೂಲದ ಹೆಣ್ಣು ಮಕ್ಕಳು ಮತ್ತು ಭಾರತೀಯ ಮೂಲದ ಹೆಣ್ಣು-ಮಕ್ಕಳ ಬದುಕಿನ ರೀತಿಯನ್ನು ತುಲನಾತ್ಮಕವಾಗಿ ನೋಡಿದಾಗ ಅಲ್ಲಿಗೆ ಸಹಜವೆಂದು ಕೊಂಡಿದ್ದ ನಡವಳಿಕೆಗಳನ್ನು ಭಾರತದಲ್ಲಿಯೂ ಸಹಜವೆಂಬಂತೆ ನೈತಿಕತೆಯ ಮೌಲ್ಯಾಧಾರಿತ ನಂಬಿಕೆಗಳನ್ನು ಅವರು ಅನುಸರಿಸುವಂತೆ ಒಪ್ಪಿಸಲಾಗಿದೆ. ಭಾರತೀಯ ನೈತಿಕತೆಯ ಬದುಕನ್ನು ಪಾಶ್ಚಾತ್ಯರಿಗೆ ಅನ್ವಯಿಸುವ ಮೂಲಕ ಅದನ್ನು ಅನುಷ್ಠಾನಗೊಳಿಸಿ ವಿಶ್ವಮಾನ್ಯಗೊಳಿಸಲಾಗಿದೆ. ಪಾಶ್ಚಾತ್ಯರ ಬದುಕಿನ ಕುರಿತ ಏಕದೃಷ್ಟಿಯ ತಿಳಿವಳಿಕೆಯನ್ನು ಬದಲಾಯಿಸುವಲ್ಲಿಸ್ತ್ರೀಯರು ಯಶಸ್ವಿಯಾಗಿದ್ದಾರೆ. ಪಾಶ್ಚಾತ್ಯ ಬದುಕಿನ ಅನುಕರಣೆಯ ಬದಲಾಗಿ ಭಾರತೀಯ ನೀತಿಯುತ ಬದುಕನ್ನೇ ಒಪ್ಪಿಕೊಂಡು ಬದುಕುವಂತೆ ಎಚ್ಚರವಹಿಸಲಾಗಿದೆ. 'ಬೇಬಿಲಾನ ಕುಮಾರಿ' ಕತೆಯ ಬೇಬಿಲಾನ್ ರಾಜಕುಮಾರಿಯಾಗಲೀ, 'ಸೋರಲೀ ಪ್ರಸಂಗ' ಕತೆಯ ಬೆಲ್ಲಾ ಆಗಲಿ, ವಿಚಿತ್ರ ಪ್ರೇಮ ಕತೆಯ ಪ್ರಭುವಿ ಆಗಲಿ ಪ್ರತಿಯೊಬ್ಬರೂ ಪ್ರತಿಪಾದಿಸುವುದು ನೈತಿಕತೆಯ ನಿಷ್ಠೆಯನ್ನು, ಶೀಲಕ್ಕೆ ಕೊಡಬೇಕಾದ ಗೌರವವನ್ನು. ಅದು ಅವರಿಗೆ ಮುಖ್ಯವಾಗುತ್ತದೆ. ತಮ್ಮ ಬದುಕಿನ ಆಯ್ಕೆಯಲ್ಲಿ ಸ್ವಾತಂತ್ರ್ಯವನ್ನು ಭಾರತೀಯರಿಗಿಂತ ಹೆಚ್ಚು ಪಡೆದಿರುವ ಅವರು ಇಷ್ಟವಿಲ್ಲದ ನಡವಳಿಕೆಗೆ ವಿರೋಧ ತೋರುತ್ತಾರೆ. ಸ್ವೇಚ್ಛಾ, ಲೈಂಗಿಕ ಪ್ರವೃತ್ತಿಗೆ ಅವರು ಬದ್ಧರಾಗುತ್ತಾರೆ ಎಂಬ ಸಾಮಾನ್ಯ ತಿಳಿವಳಿಕೆಗೆ ಇಲ್ಲಿ ನಕಾರಾತ್ಮಕ ಉತ್ತರ ಸಿಗುತ್ತದೆ. 'ಮುಪ್ಪಿನ ಚಪಲ' ಕತೆಯ ಹ್ಯಾನಾ ಕೂಡ ಈ ನಿಟ್ಟಿನಲ್ಲಿ ಪ್ರಮುಖಳಾಗಿದ್ದಾಳೆ. ಒಂದೆಡೆಯಲ್ಲಿ 'ವಿಚಿತ್ರ ಪ್ರೇಮ' ಕತೆಯ ಪ್ರಭುವಿ ಮೂವರೊಂದಿಗೆ ಬದುಕು ಕಳೆದದ್ದರಲ್ಲಿ, 'ಅರ್ವಾಚೀನ ಆಂಗ್ಲ ಶಕುಂತಲೆ' ಕತೆಯ ಜೆನ್ನಿ ವಿವಾಹಕ್ಕೂ ಮುನ್ನ ನಡೆದ ಪ್ರಣಯದಿಂದ ಬಸುರಾಗಿ ಸ್ವೇಚ್ಛೆಯಿಂದ ಮಗುವನ್ನು ಹೆತ್ತು ಸಲಹಲು ಮಗುವಿನ ಹುಟ್ಟಿಗೆ ಕಾರಣನಾದವನ ಹೆತ್ತವರಿಗೆ ಒಪ್ಪಿಸುವ ನಡವಳಿಕೆಯಲ್ಲಿ ಕೂಡ

ಒಂದು ತತ್ವದ ಅಳವಡಿಕೆ ಇರುವುದನ್ನು ಪರಿಚಯಿಸಿದ್ದಾರೆ. ಕಾಮವನ್ನು ಸಹಜ ಎಂದು ಒಪ್ಪಿಕೊಂಡ ಹಿನ್ನಲೆಯೊಂದಿಗೇನೇ ಅದು ನಡೆಯಬೇಕಾದ ಚೌಕಟ್ಟನ್ನು ಕೂಡ ಮಾಸ್ತಿ ಪರಿಚಯಿಸುತ್ತಾರೆ. ಹೆಣ್ಣು ಲೈಂಗಿಕ ಸಂಬಂಧಕ್ಕೆ ಒಳಗಾಗುವ ಹಾಗೂ ಅದರಿಂದಾಗಿ ವಿಧಿವಶಾತ್ ಸಂಭವಿಸುವ ಘಟಾನಾವಳಿಗಳಿಗೆ ಮುಂದೆ ಅನುಭವಿಸುವ ಪರಿಣಾಮಗಳೇ ಅವರ ನಡವಳಿಕೆಗಳ ಸರಿತಪ್ಪುಗಳನ್ನು ಸೂಚಿಸುತ್ತವೆ ಎಂಬುದನ್ನು ಮಾಸ್ತಿ ಇಲ್ಲಿ ನಿರೂಪಿಸಿದ್ದಾರೆ.

ಮುಖ್ಯವಾಗಿ ಅವೆರಲ್ಲರೂ ಭಾರತೀಯ ಸಂಸ್ಕೃತಿಯ ಪ್ರಕಾರ ಬದುಕುವ ಕ್ರಮವನ್ನು ಪ್ರೀತಿಯಿಂದ ಸ್ವೀಕರಿಸಿ ಬಾಳುವುದನ್ನು ಕಾಣುತ್ತೇವೆ. ಮಾಸ್ತಿ ಭಾರತೀಯ ಬದುಕಿನ ರೀತಿಯನ್ನು ಸಂಸ್ಕೃತಿಯನ್ನು ಆ ಮೂಲಕ ವಿಶ್ವಮಾನ್ಯವಾಗಿಸುವ ಪ್ರಯತ್ನ ಮಾಡಿದ್ದಾರೆ. ಅದು ನೈತಿಕ ವಿಷಯಕ್ಕೆ ಸಂಬಂಧಿಸಿದ ಲೈಂಗಿಕ ಚಟುವಟಿಕೆಗಳು, ಪತ್ನಿಯ ಕರ್ತವ್ಯ ವಿವರಿಸುವಲ್ಲಿ ತಾಯ್ತನದ ಜವಾಬ್ದಾರಿ ಹೊರುವುದನ್ನು ವಿಶ್ವಮಾನ್ಯವಾಗಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ಆ ಕಾರಣದಿಂದ ಅಲ್ಲಿಯ ಎಲ್ಲಾನಡಾವಳಿಗಳು ಕೂಡ ಸದ್ದಿಲ್ಲದೆ ಒಪ್ಪಿಕೊಳ್ಳಲಾಗುತ್ತದೆ. ಒಪ್ಪದೇ ಹೋದವರು ಬದುಕು ಕಳಕೊಳ್ಳುವ ಬಳಿಕ ಖೇದಿಸುವ ರೀತಿಗೆ ಒಳಗಾಗುತ್ತಾರೆ. ಇದೆಲ್ಲದರ ನಡುವೆಯೇ ಸೋರಲೀ ಪ್ರಸಂಗ ಕತೆಯ ಬೆಲ್ಲಾ, ಬೇಬಿಲಾನ್ ಕತೆಯ ಬೇಬೀಲಾನ್ ರಾಜಕುಮಾರಿಯರಿಗೆ ವಿವಾಹದ ಆಯ್ಕೆಯ ಸ್ವಾತಂತ್ರ್ಯ ಕೊಡುತ್ತಾರೆ. ಅಲ್ಲಿ ಸಂಸ್ಕೃತಿಯ ಪರಿಚಯ ವಿನಿಮಯಗೊಳ್ಳುವುದಕ್ಕೆ ಅವರ ಮೂಲಕ ಮಾಸ್ತಿ ಅವಕಾಶ ಕೊಡುತ್ತಾರೆಯೇ ವಿನಃ ವಿದೇಶಿ ಸಂಸ್ಕೃತಿಯೊಂದು ಇಲ್ಲಿ ಬೇರೂರಲು ಬಿಡುವುದಿಲ್ಲ. ಅದಕ್ಕಾಗಿಯೇ ವಿದೇಶಿಯರ ಮತ್ತು ಭಾರತೀಯರ ನಡುವೆ ವಿವಾಹ ಸಂಬಂಧ ನಡೆಯದಂತೆ ತಡೆಯುತ್ತಾರೆ. ಅದರ ಹಿಂದೆ ವಿದೇಶೀ ಸಂಸ್ಕೃತಿ ಇಲ್ಲಿ ನೆಲೆಯೂರದಂತೆ ವಹಿಸಿದ ಎಚ್ಚರವಿದೆ. ಆದರೆ ಭಾರತೀಯ ವೈದಿಕ ಸಂಸ್ಕೃತಿಯ ಬದುಕಿನ ರೀತಿ ವಿಶ್ವಾದ್ಯಂತ ಪ್ರಚಲಿತಕ್ಕೆ ಬರಬೇಕೆಂದೇ ಅಲ್ಲಿನ ಸ್ತ್ರೀಯರು ಭಾರತೀಯ ಮೂಲದ ಬದುಕಿನ ರೀತಿಯನ್ನು ಸ್ವೀಕರಿಸಲು ಸಜ್ಜಾಗಿದ್ದಾರೆ.

ವೈದಿಕರಿಗೆ ನೈತಿಕ ಅನ್ನಿಸಿದ್ದು ಅವೈದಿಕರಿಗೆ ಸಹಜ ಅನ್ನಿಸಿಕೊಳ್ಳುತ್ತದೆ. ಅದು ಅಲ್ಲಿ ಅವರಿಗೆ ನೈತಿಕವೇ ಆಗಿರುತ್ತದೆ. ಪಾಶ್ಚಾತ್ಯರು ಕಾಮವನ್ನು ಮುಕ್ತವಾಗಿ ತೀರಿಸಿಕೊಳ್ಳುವವರು, ಅವರಿಗೆ ಅದು ಸಹಜ ಅನ್ನಿಸುತ್ತದೆ. ಆದರೆ ನಿಜದಲ್ಲಿ ಹಾಗಿಲ್ಲ. ಕ್ಷಣಿಕ ನೆಮ್ಮದಿ, ಸಂತೋಷಗಳನ್ನು ಮಾತ್ರ ಈ ನಿಲುವುಗಳಿಂದ ನಡವಳಿಕೆಗಳಿಂದ ಪಡೆಯಬಹುದೇ ಹೊರತು ಜೀವನ ಸಫಲತೆ ಕಾಣುವುದಿಲ್ಲ. ಅದಕ್ಕೆ ಒಳಗಾಗಬೇಕಾಗಿ ಬರುವ ಸ್ತ್ರೀ ತನ್ನ ನಿರ್ಧಾರಗಳಿಂದ ತಲ್ಲಣಿಸಬೇಕಾಗುತ್ತದೆ, ಮಮ್ಮಲ ಮರುಗಬೇಕಾಗುತ್ತದೆ. ಮೂಲ ಸಂಸ್ಕೃತಿಗೇ ಶರಣಾಗಿ ಅದನ್ನೇ ಸ್ವೀಕರಿಸಿ ಬದುಕುವುದೇ ಸರಿಯಾದದ್ದು. ಸಂಸ್ಕೃತಿಗೆ ನಿಷ್ಠವಾಗಿ ಬದುಕಿದರೆ ಮಾತ್ರ ಜೀವನ ಸರಿಯಾದ ದಾರಿಯಲ್ಲಿ ಸುಗಮವಾಗಿ ಸಾಗುತ್ತದೆ ಎಂಬುದನ್ನು ತೋರಿಸಿಕೊಡುತ್ತಾರೆ. ಆದುದರಿಂದ ವೈದಿಕ ಸಂಸ್ಕೃತಿಯ

ಸಾರವನ್ನು ಹೇರಿದ ಪುರುಷ ಪ್ರಧಾನ ಸಂಸ್ಕೃತಿ ರೂಪಿಸಿದ ಸಂಸ್ಕೃತಿಯ ನೆಲೆಯಲ್ಲಿಯೇ ಸ್ತ್ರೀಯರು ಜೀವನ ಸಾಗಿಸಿದರೆ ಸುಖಿಗಳಾಗಿರುತ್ತಾರೆ ಎಂಬುದನ್ನು ಅವರು ಪ್ರತಿಪಾದಿಸಿದ್ದಾರೆ.

ವಿವಾಹದ ಚೌಕಟ್ಟನ್ನು ಮುರಿದು

ವಿವಾಹ ಸಂಸ್ಥೆಯೊಂದು ಪಾರಂಪರಿಕವಾಗಿ ಬೆಳೆದು ಬಂದುದನ್ನು ಹಾಗೆಯೇ ಮುಂದುವರಿಯಬೇಕೆನ್ನುವ ಆಶಯ ಮಾಸ್ತಿಯವರದು. ಅಲ್ಲಿ ಕಿಂಚಿತ್ತೂ ಬದಲಾವಣೆ ನಡೆಸುವುದು ಭಾರತೀಯ ನೆಲೆಯಲ್ಲಿ ಮಾತ್ರ ಅಲ್ಲ ವಿಶ್ವದ ನೆಲೆಯಲ್ಲೂ ಅವರಿಗೆ ಸಮ್ಮತವಾಗುವುದಿಲ್ಲ. ಸ್ತ್ರೀ ಸ್ವಾತಂತ್ರ್ಯದ ಕುರಿತಂತೆ ಪಾಶ್ಚಾತ್ಯ ವಲಯದಲ್ಲಿ ನಡೆಯುತ್ತಿದ್ದ ಚಳವಳಿ ಕೆಲವು ಸ್ತ್ರೀಯರ ಮಟ್ಟಿಗೆ ಅತಿಯಾದ ಸ್ವಾತಂತ್ರ್ಯ ಅದು ಲೈಂಗಿಕ ಸ್ವೇಚ್ಛೆಯಾಗಿ ಪರಿವರ್ತಿಸಿಕೊಂಡದ್ದನ್ನು ವಿರೋಧಿಸುವ ಕೆಲಸವನ್ನು ಅಥವಾ ಸ್ತ್ರೀ ಸ್ವಾತಂತ್ರ್ಯವೆಂದರೆ ಸ್ವೇಚ್ಛೆ ಅಲ್ಲ ಎಂಬುದನ್ನು ಹೇಳುವ ಕೆಲಸವನ್ನು ಮಾಸ್ತಿ ನಿರ್ವಹಿಸುತ್ತಾರೆ. ಇಲ್ಲಿ ಸ್ತ್ರೀಯು ಸ್ವಾತಂತ್ರ್ಯ ವೈಚಾರಿಕತೆಯನ್ನು ಯಾವತ್ತೂ ಮಾರಿಕೊಳ್ಳಬಾರದ ಎಚ್ಚರಿಕೆಯನ್ನು ನೀಡುತ್ತಾರೆ. ಜೊತೆಗೆ ತಾಯ್ತನದ ಆಯ್ಕೆಯ ಸ್ವಾತಂತ್ರ್ಯವನ್ನು ಪಡೆಯದಂತೆ ಕೂಡ ತಡೆಯಲಾಗಿದೆ. ಜೊತೆಗೆ ಮಗುವನ್ನು ಸಲಹುವ ಜವಾಬ್ದಾರಿಯನ್ನು ಹಾಗೂ ಕುಟುಂಬವನ್ನು ಅವಳು ಪೊರೆಯಬೇಕಾದ ಅನಿವಾರ್ಯತೆಯನ್ನು ಅವಳಾಗಿಯೇ ಒಪ್ಪಿಕೊಳ್ಳುವಂತೆ ಅತಿ ಜಾಣ್ಮೆಯಿಂದ ಮಾಸ್ತಿ ನೋಡಿಕೊಳ್ಳುತ್ತಾರೆ. ದುದರಿಂಪಲೇ ನರ್ತಕಿಯ ಪರಾಭವ ಕತೆಯ ಇಸಡೋರಾಳ ವೈಚಾರಿಕತೆಯನ್ನು ಅವಳ ಅಹಂಕಾರವಾಗಿ ಪರಿಚಯಿಸುತ್ತಾರೆ. ಮತ್ತು ಅವಳ ಆ ಸ್ವಭಾವ ಬದುಕಿನ ನೆಲೆಯನ್ನು ಮೀರಿದ್ದು ಎಂದೂ ವಿವರಿಸುತ್ತಾರೆ. ಅವಳ ಅಹಂಕಾರ ಯೋಚನೆ, ತರ್ಕ, ನಿರ್ಧಾರಗಳನ್ನು ಮುರಿಯುವುದಕ್ಕೆ ಭಾರತೀಯ ಗಂಡು ಎದುರಾಗುವುದು ಅಂದರೆ ಭಾರತೀಯ ಬದುಕಿನ ಸಾಂಪ್ರದಾಯಿಕ ನೆಲೆಗಳನ್ನು ವಿಶ್ವದ ನೆಲೆಗೂ ಬದ್ಧಗೊಳಿಸುವಂತೆ ಪ್ರೇರಿಸುವುದಾಗಿದೆ.

ಒಂದು ರೀತಿಯಲ್ಲಿ ಸ್ತ್ರೀವಾದಕ್ಕೆ ಮಾಸ್ತಿಯವರ ವಿರೋಧ ಪ್ರತಿಕ್ರಿಯೆ ಇಲ್ಲಿದೆ ಎನ್ನಬಹುದು. ವಾದವನ್ನೇ ಜೀವನಕ್ಕೆ ಅಳವಡಿಸಿಕೊಳ್ಳುವುದು ಸರಿಯಲ್ಲ. ಅದನ್ನು ಸರಿಯಾಗಿ ಅರ್ಥೈಸಿಕೊಂಡು ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಂಡು ಬಾಳಬೇಕು. ಜನರು ಒಪ್ಪುವಂತೆ ಆರೋಗ್ಯಕರವಾಗಿ ವ್ಯವಸ್ಥೆಯನ್ನು ಬದಲಾಯಿಸಬೇಕು. ಅದು ಎಲ್ಲರಿಂದಲೂ ಮಾನ್ಯವಾಗಬೇಕು ಎನ್ನುವುದೇ ಲೇಖಕರ ನಿಲುವಾಗಿದೆ.

ಸ್ವಾತಂತ್ರ್ಯ ಅಂದರೆ ಸ್ವೈರ ಅಲ್ಲ ಎಂಬುದನ್ನು ದೃಢಪಡಿಸುವುದಕ್ಕಾಗಿಯೇ ಇಸಡೋರಾಳ ಬದುಕು ಯಶಸ್ಸು ಕಾಣದಂತೆ ಚಿತ್ರಿಸಿದ್ದು ವೇದ್ಯವಾಗುತ್ತದೆ. ಕುಟುಂಬ ಮೌಲ್ಯವನ್ನು ಪ್ರತಿಷ್ಠಾಪಿಸುವುದು ಇಲ್ಲಿನ ಇನ್ನೊಂದು ಉದ್ದೇಶವೂ ಆಗಿದೆ. ಸ್ವೈರವನ್ನು ಸೀಮಿತಗೊಳಿಸಬಾರದು ಎಂಬ ಕಾಳಜಿಯ ಧ್ವನಿ ಇಲ್ಲಿ ಮೊಳಗಿದೆ. ಅದನ್ನು ಭಾರತೀಯ ಸ್ವಯಂವರ ಪದ್ಧತಿಯೊಂದಿಗೆ

ಹೋಲಿಸಿ, ಈಚೆಗಿನ ಸ್ವೈರ, ಮನಸ್ಸು ಬಯಸುವಷ್ಟು ದಿನ ಒತ್ತಟ್ಟಿಗಿದ್ದು ಅನಂತರ ಹೊರ ಬರುವ ರೀತಿಯನ್ನು ಮಾನ್ಯಮಾಡದೇ ಅದನ್ನು ದೂರ ತಳ್ಳುವ ಸುಪ್ತ ನಿರ್ಧಾರವನ್ನು ಪ್ರತಿಪಾದಿಸಿರುವುದನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಭಾರತದಲ್ಲೇ ಆಗಲಿ ಅಥವಾ ವಿಶ್ವದಲ್ಲೇ ಆಗಲಿ ಹೆಣ್ಣು ಗಂಡಿನ ಮಧ್ಯೆ ಇರಬೇಕಾದದ್ದು ಸ್ವಾತಂತ್ರ್ಯ. ಉತ್ತಮ ಸಂಬಂಧವನ್ನು ಬೆಳೆಸುವುದಕ್ಕೆ, ಗಟ್ಟಿಗೊಳಿಸುವುದಕ್ಕೆ, ಬದುಕು ಅಸಾಧ್ಯವಾದಾಗ ಹೊರಬರುವುದಕ್ಕೆ ಸ್ವಾತಂತ್ರ್ಯಬೇಕು ಹೊರತು ಅಗತ್ಯವಾಗಿ ಮನಸ್ಸು ಒಡೆದು ಹೊರಬಂದು ಇನ್ನೊಬ್ಬರೊಂದಿಗೆ ಕಾಮ ತೀರಿಸಿಕೊಳ್ಳುವ ಸ್ವೇಚ್ಛಾಚಾರದ ಪ್ರವೃತ್ತಿ ಹೆಣ್ಣಿಗೇ ಆಗಲಿ ಗಂಡಿಗೇ ಆಗಲಿ ತರವಲ್ಲ ಎನ್ನುವುದನ್ನು ಇಸಡೋರಾಳ ಬದುಕಿನ ದುರಂತದ ಮೂಲಕ ಹೇಳುವುದು ಉದ್ದೇಶವಾಗಿದೆ. ಅಂದರೆ ಶೀಲದ ಪ್ರಜ್ಞೆಯನ್ನು ಬಿತ್ತುವ, ಬೆಳೆಸುವ ಸನಾತನ ಧರ್ಮದ ಸ್ತ್ರೀಯ ಧರ್ಮವನ್ನು ರಕ್ಷಿಸುವ ಕಾಳಜಿಯನ್ನು ಇಲ್ಲಿ ಗಮನಿಸಬಹುದಾಗಿದೆ.

ಇಸಡೋರಾಳ ಪ್ರತಿಭೆ ಮೆಚ್ಚಿಕೊಳ್ಳುತ್ತಲೂ, ಅದನ್ನು ಅದ್ಭುತ ಎನ್ನುವಂತೆ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಅವಳ ಎಲ್ಲೆ ಮೀರಿದ ಕಾಮ ತೀರಿಕೆಗೆ ಆರಿಸಿಕೊಳ್ಳುವ ಗಂಡಸರೊಂದಿಗೆ ಆಕೆ ನಡೆದುಕೊಳ್ಳುವ ರೀತಿ ನೀತಿಯನ್ನು ಪರಿಚಯಿಸುತ್ತ ಅವಳ ನಡತೆಯನ್ನು ಯಾರೂ ಒಪ್ಪಿಕೊಳ್ಳದಂತೆ ತಡೆಯುವ ಕೆಲಸವನ್ನು ಮಾಸ್ತಿ ಎಚ್ಚರಿಕೆಯಿಂದ ನಿರ್ವಹಿಸಿದ್ದಾರೆ.

'ಸ್ವೈರ ಎನ್ನುವುದರಲ್ಲಿ ನಮ್ಮ ಅರ್ಥ ಸ್ಪಷ್ಟವಾಗಲಾರದು. ಗಂಡು ಹೆಣ್ಣಿನ ಸಂಬಂಧದಲ್ಲಿ ಈ ಸಮಾಜಗಳು ನಿಯಮಿಸಿರುವ ಕೆಲವು ನಿಬಂಧಗಳು ಅಳಿಯಬೇಕು ಎನ್ನುವುದು ನಮ್ಮ ಅಭಿಪ್ರಾಯ. ನಾವು ಅದನ್ನು ಪ್ರತಿಪಾದಿಸುತ್ತಿದ್ದೇವೆ ಎನ್ನುತ್ತಿರುವ ಈ ಪ್ರಣಯ ಕ್ರಮ ಹೆಣ್ಣಿಗೆ ಕೆಲವು ಸ್ವಾತಂತ್ರ್ಯ ಇರಬೇಕು ಎನ್ನುವ ಮೂಲ ಭಾವದಿಂದ ಬೆಳೆದಿದೆ. ಈಗ ಇರುವ ಸ್ಥಿತಿಯಲ್ಲಿ ಎಲ್ಲಾ ಸ್ವಾತಂತ್ರ್ಯವೂ ಗಂಡಿನದಾಗಿದೆ. ಹೆಣ್ಣಿಗೆ ಸ್ವಾತಂತ್ರ್ಯದ ಲವಲೇಶ ಇಲ್ಲ. ಈ ಸ್ಥಿತಿ ಹೆಣ್ಣು ಜಾತಿಯನ್ನು ತುಂಬ ಕಷ್ಟಕ್ಕೆ ಈಡುಮಾಡಿದೆ ಎಂದಿರುವಲ್ಲಿ ಸ್ವೈರದ ಕುರಿತ ಮಾಸ್ತಿ ಧೋರಣೆ ಏನೆಂಬುದು ಖಚಿತವಾಗುತ್ತದೆ.

ಜಾರ್ಜ್‌ಪಾನ್ ಅನುಭವದ ಮೇಲೆ ಮಂಡಿಸಿದ ವಿಚಾರ ಇಲ್ಲಿ ಚರ್ಚಿತವಾಗುತ್ತದೆ. ಅವಳ ವಾದವನ್ನು ತಪ್ಪಾಗಿ ಜನ ತಿಳಿದುಕೊಂಡುದರ ಬಗೆಗೆ ಪ್ರಸ್ತಾಪಿಸಿ ಅದರ ವಿಶಾಲತೆಯನ್ನು ಅರ್ಥೈಸಿಕೊಳ್ಳುವಂತೆ ಮಾಡುತ್ತಾರೆ. 'ಗಂಡು ಹೆಣ್ಣಿನ ಸಂಬಂಧವನ್ನು ಕುರಿತ ಮೂಲಭೂತ ಭಾವನೆಗಳು ಮದುವೆಯ ವ್ಯವಸ್ಥೆಗೆ ಕಾರಣ ಆದವು. ಆ ವ್ಯವಸ್ಥೆ ಆ ಭಾವನೆಗಳನ್ನು ಪೂರ್ಣವಾಗಿ ಸಾಧಿಸಿಲ್ಲ. ಸಾಧಿಸುವಂತೆ ಅದನ್ನು ಮಾರ್ಪಡಿಸಬೇಕಾಗಿದೆ. ಈಗ ಅದು ಪೂರ್ಣವಾಗಿ ಪವಿತ್ರ ಆಗಿಲ್ಲ. ಇನ್ನುಮೇಲೆ ಆಗಬೇಕು' ಎಂದು ನಟ ಸ್ಟೇನಿಸ್ ಲಾವಸ್ಕಿ ಹೇಳುವ ಮಾತು ಓಲ್ಗಾ ಮಂಡಿಸುವ ವಿಚಾರಗಳನ್ನು ಸ್ಪಷ್ಟಪಡಿಸುತ್ತದೆ. ಅವಳ ವಿಚಾರ ಮಂಡನೆ ಅವಳ ಅನುಭವದ್ದು, ಅನುಸರಣೀಯ ಕೂಡ ಎನ್ನುವುದನ್ನು ಮನಮುಟ್ಟಿಸುತ್ತಾರೆ. ಇನ್ನು ವಿಚಾರ ಸರಣಿಯ ಸೂಕ್ಷ್ಮತೆಗಳು ಚಿಂತನೆಗೆ

ಎಡೆಮಾಡಿಕೊಡುತ್ತವೆ. ಬದುಕಿಗೆ ಹತ್ತಿರವಾದ ನ್ಯಾಯಯುತ ನಡವಳಿಕೆಗಳನ್ನು ಪ್ರತಿಪಾದಿಸುತ್ತವೆ. ಮದುವೆಯ ವ್ಯವಸ್ಥೆಯಲ್ಲೂ ತಿದ್ದುಪಡಿ ಆಗಬೇಕಾಗಿದೆ. ಯಾವಯಾವ ವಿವರದಲ್ಲಿ ಹೇಗೆ ಹೇಗೆ ತಿದ್ದುಪಡಿ ಆಗಬೇಕೆಂದು ಪ್ರಾಜ್ಞಜನರು ಯೋಚಿಸಬೇಕು. ಗಂಡು, ಹೆಣ್ಣಿನ ಸ್ವಭಾವಗಳನ್ನು ಗ್ರಹಿಸಿ, ಗಂಡು ಹೆಣ್ಣು, ಎರಡೂ ಜಾತಿಯು ಶುಭಸಾಧಿಸುವ ಉದ್ದೇಶದಿಂದ ಅವಶ್ಯಕ ಎಂದು ಕಂಡ ಮಾರ್ಪಾಡುಗಳನ್ನು ಸರ್ವರ ಸಮ್ಮತಿಯಿಂದ ಮಾಡಬೇಕು. ಬಳಕೆಗೆ ತರಬೇಕು. ಜಾರ್ಜ್ ಪಾನ್‌ರ ಈ ಆಶಯ ಕೇವಲ ಸ್ತ್ರೀಯರ ಪರವಾದ ಮಾತು ಮಾತ್ರವಲ್ಲ ಅದನ್ನು ಅವರ ಮಿತ್ರ ಪ್ರಮುಖ ಲೇಖಕರೊಬ್ಬರು ಅನುಮೋದಿಸಿದರು, ತಾವೂ ಪ್ರತಿಪಾದಿಸಿದರು. ಕ್ಷುದ್ರರು, ಅಲ್ಪರು ದುರುಪಯೋಗ ಮಾಡುವರು ಎಂಬ ಕಾರಣದಿಂದ ಸುಧಾರಕರ ಆಶಯ ದುಷ್ಟ ಆಗುವುದಿಲ್ಲ. ಅದನ್ನು ಬಳಕೆಗೆ ತರುವ ವೇಳೆ ಎಚ್ಚರ ಅವಶ್ಯಕ ಎಂದಷ್ಟೇ ಗ್ರಹಿಸಬೇಕು. ಮದುವೆಯನ್ನು ಏರ್ಪಡಿಸಿದ್ದು, ಒಳ್ಳೆಯದಕ್ಕೇ ಎಂದು ಅದರ ದುರುಪಯೋಗ ನಡೆದಿದೆ. ಯಾವ ಒಳ್ಳೆಯ ಸೂತ್ರವನ್ನು ದುಷ್ಟ ಅಪೇಕ್ಷೆ ಒಂದಕ್ಕೆ ಸಾಧಕವಾಗಿ ಬಳಸುವುದು ಸಾಧ್ಯ. ಕಾಮವನ್ನೂ ಬೇಕಾದಲ್ಲಿ ತೀರಿಸಿಕೊಳ್ಳಬಹುದು ಎಂದು ಜಾರ್ಜ್‌ಪಾನ್‌ರ ಮಾತನ್ನು ತಮ್ಮತ್ತ ತಿರುಗಿಸುವರು ಇಂಥ ಜನ ಎಂಬಲ್ಲಿವಿವಾಹ ಸಂಸ್ಥೆಯ ಪ್ರತಿಪಾದನೆ ಮಾಡಲಾಗಿದೆ. ಯಾವುದೇ ವಾದವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಹುದಾದ್ದರ ಎಚ್ಚರಿಕೆಯ ನುಡಿಯನ್ನು ಹೇಳಿದ್ದಾರೆ.

ಸ್ಟೇನಿಸ್ ಲಾವಸ್ಕಿ ಮತ್ತು ಇಸಡೋರಾಳ ನಡುವೆ ನಡೆದ ವಾಗ್ವಾದ ಅವಳ ನಿಲುವನ್ನು ಅಭಿವ್ಯಕ್ತಿಸಿರುವಲ್ಲಿ ಆಧುನಿಕ ವಿಚಾರಧಾರೆಯಲ್ಲಿ ಪಾರಂಪರಿಕ ಮೌಲ್ಯಗಳನ್ನು ಬಾಳಿಸುವುದು ಇಸಡೋರಾಳ ತರ್ಕ, ನಿರ್ಧಾರಗಳನ್ನು ಸೋಲಿಸುವಲ್ಲಿ ಸಾಧ್ಯವಾಗಿಸಿದೆ. ಅರ್ಥಾತ್ ಅವಳು ತನಗೆ ಇಷ್ಟವಾದವರೊಂದಿಗೆಲ್ಲ ಬೇಕಾಬಿಟ್ಟಿ ಆಜ್ಞಾನುಸಾರ ತನ್ನ ಬುಟ್ಟಿಗೆ ಹಾಕಿಕೊಳ್ಳುವುದು, ಮಜಾ ಉಡಾಯಿಸುವುದು, ಬೇಡವೆಂದಾಕ್ಷಣ ದೂರತಳ್ಳುವುದು ಸರಿಯಲ್ಲ ಎಂದು ಆ ಸ್ವಭಾವನ್ನು ದೂರ ಮಾಡಿದೆ.

ಅವನೊಂದಿಗೆ ತಾತ್ಕಾಲಿಕ ಸಂಬಂಧ ಬೆಳೆಸುವ ಅವಳ ಕೋರಿಕೆಗೆ ಮಂಡಿಸುವ ಎರಡು ವಿಚಾರ, ಕೇಳುವ ಪ್ರಶ್ನೆ ಅವಳ ಇದುತನಕದ ನಿಲುವನ್ನು ಅಲ್ಲಾಡಿಸುತ್ತದೆ. 'ಸಹವಾಸ ಮಾಡಿ ನೀನು ನನಗೆ ಬೇಕಾದ ವಸ್ತು ಆದ ಮೇಲೆ ನೀನು ನನ್ನನ್ನು ಬಿಟ್ಟು ನಡೆಯಬಹುದು. ಆಗ ಆಗಬಹುದಾದ ನೋವನ್ನು ತಂದುಕೊಳ್ಳಲು ನನಗೆ ಇಷ್ಟವಿಲ್ಲ' ಎಂದು ಸ್ಟೇನಿಸ್ ಲಾವಸ್ಕಿ ಹೇಳುವ ಮೂಲಕ ಸ್ವೇಚ್ಛಾಚಾರಕ್ಕೆ ಬಲಿಯಾಗಲು ಒಪ್ಪಿ ತನ್ನ ವ್ಯಕ್ತಿತ್ವ ಕಳಕೊಳ್ಳದ ಮತ್ತು ಮನಸ್ಸು ಖಿನ್ನಗೊಳ್ಳುವ ರೀತಿಯಿಂದ ದೂರವಿರುವುದರ ಪ್ರತಿನಿಧಿ ಆಗುತ್ತಾನೆ. ಅದು ಹೆಣ್ಣಿಗೆ ಆಗಲಿ ಗಂಡಿಗೇ ಆಗಲಿ ಒಳಿತಲ್ಲ. ಅದಕ್ಕಾಗಿಯೇ ಆತ, ನೀನೇ ನನ್ನನ್ನು ಬಿಟ್ಟು ನಡೆಯಬಹುದಲ್ಲ ಎಂದು ಅವಳ ಮಾತಿಗೆ ಆತ ನಾನು ಆ ಸ್ವಭಾವದ ಗಂಡಲ್ಲ ಎನ್ನುವಲ್ಲಿ ಪಾರಂಪರಿಕ ಬದುಕನ್ನು ಪ್ರತಿಪಾದಿಸುವುದು ಸ್ಪಷ್ಟವಾಗುತ್ತದೆ.

ಕುಟುಂಬದ ವ್ಯವಸ್ಥೆಯನ್ನು ಪ್ರತಿಪಾದಿಸುವ ಅವನ ಇನ್ನೊಂದು ಮಂಡನೆ ‘ನಮಗೆ ಮುಂದೆ ಒಂದು ಮಗು ಆದರೆ ಅದರ ಮುಂದೆ ಹೇಗೆ?

ಆದಾಗ ಆ ಮಾತು

ನಾನು ಆ ಸ್ವಭಾವದ ಗಂಡೂ ಅಲ್ಲ. ನನ್ನ ಮಗುವಿಗೆ ಅದರ ತಾಯ ಒಲವು ಪೋಷಣೆ ಇರಬೇಕು. ಅದನ್ನು ನಾನೂ ನೋಡಿಕೊಳ್ಳಬೇಕು. ಇದು ಸಾಧ್ಯವೆನ್ನುವುದಾದರೆ ನಾನು ನಿಮ್ಮ ಸಲಹೆಗೆ ಮನಸ್ಸು ಕೊಟ್ಟೇನು. ಸಾಧ್ಯ ಅಲ್ಲ, ಆದುದರಿಂದ ಹಾಗೆ ಮನಸ್ಸು ಕೊಡಲಾರೆ’ ಎಂಬಲ್ಲಿ ಅವನ ದೃಢ ನಿಲುವನ್ನು ಮನಗಾಣಬಹುದಾಗಿದೆ. ಇಲ್ಲಿ ಕುಟುಂಬ ವ್ಯವಸ್ಥೆ ಸಾಗಬೇಕಾದ ಬಗೆಯ ಕುರಿತ ವಿವರವಿದೆ. ಇಂಥ ಸ್ವೇಚ್ಛಾಚಾರ ಯಾರಿಗೇ ಆಗಲಿ ಸಮ್ಮತವಲ್ಲ. ಲೋಕಕ್ಕೂ ಒಳಿತಲ್ಲ ಎಂಬ ಮಾಸ್ತಿಯವರ ನಿಲುವು ಇಲ್ಲಿ ಪ್ರತಿಧ್ವನಿತವಾಗಿದೆ.

ಆಧುನಿಕತೆಯ ಕುರಿತಂತೆ ಸ್ಟೇನಿಸ್ ವಿವರಿಸುವ ಮಾತುಗಳಲ್ಲಿ ಅದರ ಕುರಿತ ಸ್ಪಷ್ಟತೆ ಇದೆ. ‘ನನ್ನ ಮಗುವಿಗೆ ಅದರ ತಾಯ ಒಲವು ಪೋಷಣೆ ಇರಬೇಕು. ಅದನ್ನು ನಾನು ನೋಡಿಕೊಳ್ಳಬೇಕು. ಇದು ಸಾಧ್ಯ ಎನ್ನುವುದಾದರೆ ನಾನು ನಿಮ್ಮ ಸಲಹೆಗೆ ಮನಸ್ಸು ಕೊಟ್ಟೇನು. ಸಾಧ್ಯ ಅಲ್ಲ, ಆದುದರಿಂದ ಹಾಗೆ ಮನಸ್ಸು ಕೊಡಲಾರೆ, ಪೂರ್ಣ ಆಧುನಿಕ ಆದವರು ಜೊತೆಯ ಜನಕ್ಕೆ ಒಳ್ಳೆಯವರು, ಅಲ್ಲದವರು, ಇಂಥವರು, ಅಂಥವರು ಎಂದು ಬೆಲೆ ಕಟ್ಟುವುದಿಲ್ಲ. ‘ಅವರು ಹೇಗಿದಾರೆ ಹಾಗೆ ಅವರನ್ನು ಒಪ್ಪಿಕೊಳ್ಳುತ್ತಾರೆ. ಅವರು ಅವರಿಗೆ ಸರಿ ಎಂದು ಕಂಡಂತೆ ನಡೆಯಲು ಒಪ್ಪುತ್ತಾರೆ’ ಎಂದಿರುವುದು ಮಾಸ್ತಿಯವರ ಪಾರಂಪರಿಕ ಮನಃಸ್ಥಿತಿಗೆ ಸಾಕ್ಷಿಯಾಗುತ್ತದೆ. ಸ್ವೇಚ್ಛಾಚಾರದ ಬದುಕು ಯಾರಿಗೂ ಕೊನೆತನಕದ ಸುಖ-ನೆಮ್ಮದಿ ಕೊಡಲಾರದು. ಆ ಬಗೆಗೆ ಉತ್ತೇಜನ ಕೊಡುವುದೂ ತಪ್ಪು ಎಂಬುದನ್ನು ಮತ್ತು ಸ್ತ್ರೀ ಸ್ವಾತಂತ್ರ್ಯದ ಸರಿಯಾದ ಅರ್ಥವನ್ನು ಮನಗಾಣಿಸುವ ಕುರಿತ ಪ್ರಯತ್ನವನ್ನು ಇಲ್ಲಿ ನಡೆಸಿದ್ದಾರೆ. ಈ ಬಗ್ಗೆ ಶಾಲಿನಿ ರಘುನಾಥ್ ಅವರು ಪ್ರತಿಕ್ರಿಯಿಸಿ, ‘ಹೆಣ್ಣಿನ ಸ್ವೇಚ್ಛಾ ಪ್ರವೃತ್ತಿಯನ್ನೂ ಮಾಸ್ತಿ ಗಮನಿಸಿದ್ದಾರೆ. ಅದುವರೆಗೆ ಸೋಲನ್ನೇ ಕಾಣದ ಇಸಡೋರಾ, ಪ್ರಥಮ ಬಾರಿಗೆ ನಟ ಸ್ಟೇನಿಸ್ ಲಾವಸ್ಕಿಯಿಂದ ತಿರಸ್ಕೃತಳಾಗುತ್ತಾಳೆ. ಪತಿನಿಷ್ಠೆ ಮತ್ತು ಮಾತೃತ್ವ ಇವೆರಡನ್ನೂ ಇಚ್ಛಿಸದ ಹೆಣ್ಣು ಅವಳಾದ್ದರಿಂದ ಮಾಸ್ತಿ ಈ ಕತೆಯನ್ನು ನರ್ತಕಿಯ ಪರಾಭವ ಎಂದು ಕರೆದಿದ್ದಾರೆ. ನಿರ್ಲಿಪ್ತ, ನಿರುದ್ವಿಗ್ನ ಮನಸ್ಥಿತಿಯಲ್ಲಿ ಮಾಸ್ತಿ ಕತೆ ಬರೆಯುತ್ತಾರೆ ಎಂಬ ಅಭಿಪ್ರಾಯವಿದ್ದರೂ ಹೆಣ್ಣಿನ ಸಾರ್ಥಕ್ಯವನ್ನು ಅವರು ಯಾವುದರಲ್ಲಿ ಕಾಣಬಯಸುತ್ತಾರೆ ಎಂಬುದಕ್ಕೆ ಸೂಚನೆ ಈ ಕತೆಯಲ್ಲಿ, ಕತೆಯ ತಲೆ ಬರಹದಲ್ಲಿ ದೊರೆಯುತ್ತದೆ’ [೪] ಎಂದಿದ್ದಾರೆ.

ಮದುವೆಯ ಏರ್ಪಡಿಸುವಿಕೆಯ ಹಿಂದಿದ್ದ ಸಾಂಪ್ರದಾಯಿಕ ಹಂತಗಳು ಯಶಸ್ವಿಯಾಗುವ ಪೀಠಿಕೆಯಾಗಿ ‘ದಾಂಪತ್ಯದ ಸೊಸಪರಿ’ ಕತೆಯ ಜಯಮ್ಮ - ರಂಗಮ್ಮ ಅವರ ಸುಮಧುರ

---

೪ ಪ್ರ. ೪೯ ಮಾಸ್ತಿ ಅವರ ಕತೆಗಳಲ್ಲಿ ಮಹಿಳೆ, ಸಮನ್ವಿತ, ಶಾಲಿನಿ ರಘುನಾಥ ೧೯೯೪

ದಾಂಪತ್ಯವನ್ನು ಅಪರೂಪದ ಜೋಡಿಯಾಗಿ ಪರಿಚಯಿಸಲಾಗಿದೆ. ಸುಖವಾಗಿ ಬಾಳುವ ಅಪರೂಪದ ಜೋಡಿ ಎಂದು ಹೇಳಿರುವಲ್ಲಿ ಸಾಂಪ್ರದಾಯಿಕವೆಂದು ಒಪ್ಪಿ ನಡೆಸುವ ಮದುವೆಯೂ ಎಲ್ಲವೂ ಯಶಸ್ವಿಯಾಗುವುದಿಲ್ಲ ಎನ್ನುವ ವಾಸ್ತವತೆಯನ್ನು ಬಿಚ್ಚಿಬಿಡುವುದನ್ನು ಮರೆಯದ ವಾಸ್ತವವಾದಿತ್ವವನ್ನು ಗುರುತಿಸಬಹುದಾಗಿದೆ.

ಭಾರತೀಯ ವಿವಾಹ ಪದ್ಧತಿ ಕುಟುಂಬದ ಪರಿಚಯದೊಂದಿಗೆ ಅದನ್ನು ವಿದೇಶೀ ಮೂಲದ ಲೇಖಕ ಸಾಮರ್ಸೆಟ್ ಮಾಮ್ ಭಾರತೀಯ ಕುಟುಂಬ ಪದ್ಧತಿಯನ್ನು ಮೆಚ್ಚುವ ವಿದೇಶೀ ಹೆಣ್ಣು ಪಡೆದ ವೈವಾಹಿಕ ಸ್ವಾತಂತ್ರ್ಯವನ್ನು ಮನಬಂದಂತೆ ಉಪಯೋಗಿಸಿಕೊಳ್ಳುವ, ಒಳ್ಳೆಯ ಗಂಡನ ಮನಸ್ಸು ಕೆಡಿಸುವ ವೈರುಧ್ಯವನ್ನು ವಿವರಿಸುವಲ್ಲಿ ಭಾರತೀಯ ವಿವಾಹ ಸಂಸ್ಥೆಯ ಚೌಕಟ್ಟನ್ನು ಒಪ್ಪಿಕೊಳ್ಳಲಾಗಿದೆ. 'ಈ ಮುನ್ನ ಗಂಡು ಕೆಲವು ಸಮಯ ಅವಿವೇಕವಾಗಿ ನಡೆದರೆ ಹೆಣ್ಣು ಸಹಿಸಿಕೊಳ್ಳಬೇಕು ಎನ್ನುವುದು ಸೂತ್ರವಾಗಿತ್ತು. ಇದು ಒಂದು ಮೇರೆಯನ್ನು ಮೀರಿ, ಹೆಣ್ಣು ಸಹಿಸಿಕೊಳ್ಳಬೇಕಾಗಿಲ್ಲ ಎನ್ನುವ ಮಾತಿಗೆ ಬಂದಿತು. ಅಲ್ಲಿಂದ ಗಂಡಿಗೆ ಇರುವ ಎಲ್ಲ ಸ್ವಾತಂತ್ರ್ಯವೂ ಹೆಣ್ಣಿಗೆ ಇರಬೇಕು ಎನ್ನುವ ನೆಲೆಗೆ ಮುಟ್ಟಿತು. ಅಲ್ಲಿಂದ ತಿಳಿವಳಿಕೆವುಳ್ಳ ಗಂಡು ಹೆಣ್ಣು ಏನೇ ಮಾಡಿದರೂ ಗಂಡು ಅದನ್ನು ಸಹಾನುಭೂತಿಯಿಂದ ನೋಡಬೇಕು ಎನ್ನುವ ಸೂತ್ರ ರೂಪುಗೊಂಡಿದೆ. ಸೂತ್ರದಷ್ಟಕ್ಕೆ ಇದು ತಪ್ಪು ಎನ್ನಲಾಗದು. ನನ್ನ ಹೆಂಡತಿ ಎಂದ ಮಾತ್ರಕ್ಕೆ ಆ ಹೆಂಗಸಿನ ಮನಸ್ಸಿಗೆ ಸಂಕೋಲೆ ತೊಡಿಸಲು ಬರುವುದಿಲ್ಲ. ಆದರೆ ಸಂಕೋಲೆ ಇಲ್ಲ ಎಂಬ ಕಾರಣದಿಂದ ಹೆಣ್ಣು, ನಾನು ನನ್ನ ಮನಸ್ಸು ಹೋದಂತೆ ಹೋಗಲು ಬಿಡುತ್ತೇನೆ, ಎಂದಳಾದರೆ ಗಂಡ ಎಷ್ಟು ದೊಡ್ಡ ಮನುಷ್ಯನಾದರೆ ಅಷ್ಟು ಹೆಚ್ಚು ದುಃಖಕ್ಕೆ ಈಡಾಗುತ್ತಾನೆ. ನಮ್ಮ ಪ್ರಾಜ್ಞ ಸಮಾಜ ಹೀಗೆ ಈ ವಿಷಯದಲ್ಲಿ ದಾರಿ ಕಟ್ಟಿದೆ ಎಂದು ನನಗೆ ತೋರುತ್ತದೆ' ಎಂದಿರುವುದು ಇಡೀ ಸಾಂಪ್ರದಾಯಿಕ ಧೋರಣೆ ಮಾತ್ರವಲ್ಲ, ಮಾಸ್ತಿ ಕತೆಗಳಾದ್ಯಂತ ಈ ರೀತಿ ನಡೆದುಕೊಂಡ ಹೆಣ್ಣುಗಳನ್ನು ಕುರಿತು ಪರಿಚಯಿಸಿ ಆಡಿದ ನುಡಿಯಾಗಿರುತ್ತದೆ. ಅಂದರೆ ಗಂಡನ ಸೌಮ್ಯ ಸ್ವಭಾವವನ್ನು, ತನ್ನ ಸ್ವಾರ್ಥವನ್ನು ಸಾಧಿಸುವುದಕ್ಕೆ ಮನಬಂದವರೊಂದಿಗೆ ಕೂಡುವ ಮೂಲಕ ನೋಯಿಸುವ, ಉದ್ಧಟವಾಗಿ ವರ್ತಿಸಿ ಸಹನೆ ಪರೀಕ್ಷಿಸುವ ಪರಿ ಸಹ್ಯವಲ್ಲ ಎಂದೇ ಪ್ರತಿಪಾದಿಸಲಾಗಿದೆ.

ನ್ಯೂಜಿಲೆಂಡ್‌ನ ಲೇಖಕಿ ತನ್ನ ವಿವಾಹಕ್ಕೂ ಮುನ್ನ ಹಲವರನ್ನು ಪ್ರೀತಿಸಿದ್ದು, ಸಮಯ ಸಂದರ್ಭಕ್ಕೆ ಆ ಭಾವನೆಯನ್ನೇ ಬದಲಾಯಿಸುತ್ತಿದ್ದ ಆಕೆ ಸಂಗೀತಕಾರನ ಕೋರಿಕೆಗೆ ಒಪ್ಪಿ ವಿವಾಹವಾದರೂ ದೈಹಿಕ ಸಂಬಂಧಕ್ಕೆ ಒಪ್ಪದೇ ವಿರಸದಿಂದ ಹೊರಬರಬೇಕಾಯಿತು. ಇನ್ನೊಬ್ಬ ಸ್ತ್ರೀ ಸ್ವಾತಂತ್ರ್ಯವನ್ನು ಒಪ್ಪಿಕೊಂಡಿದ್ದ ವಿಚಾರವಂತ, ಸರಳ ಸ್ವಭಾವದ ವ್ಯಕ್ತಿಯನ್ನು ಹಠತೊಟ್ಟು

ವಿವಾಹವಾದರೂ ಕೆಲವು ಸಮಯದ ಬಳಿಕ ಪ್ಯಾರಿಸ್‌ನಲ್ಲಿ ಗಂಡನ ಸ್ನೇಹಿತರೊಂದಿಗೆ ಸ್ನೇಹ ಬೆಳೆಸಿ ಅವನೊಂದಿಗೆ ಇಂಗ್ಲೆಂಡಿಗೆ ಹೋಗುವುದು, ಮರಳಿ ಗಂಡನ ಬಳಿಗೇ ಬರುವ ತೀರ್ಮಾನ ಕೈಗೊಳ್ಳುವುದು, ನಿರ್ಮಲತೆಯಿಂದ ಅವನು ನಿರಾಕರಿಸದೇ ಸ್ವೀಕರಿಸುವುದು, 'ನಾನು ನಿನಗಾಗಿ ಬರಲಿಲ್ಲ, ಬೇರೆ ಎಲ್ಲೂ ಸ್ಥಳವಿಲ್ಲ, ಆದ್ದರಿಂದ ನಿನ್ನೊಡನೆ ಇರುತ್ತೇನೆ' ಎನ್ನುವಲ್ಲಿ ಗಂಡಿನ ತಾಳ್ಮೆಯ ಪರೀಕ್ಷೆ ಕುರಿತ ಹೆಣ್ಣಿನ ಸ್ವಾತಂತ್ರ್ಯದ ಪರಮಾವಧಿಯನ್ನು ಬೊಟ್ಟು ಮಾಡಿದ್ದಾರೆ. ಮತ್ತು ಅಂಥ ದುರಹಂಕಾರಕ್ಕೆ ಕ್ಷಯದ ಸಾವು ಅವಳನ್ನು ಬಲಿ ತೆಗೆದುಕೊಳ್ಳಬೇಕಾಗಿ ಬಂತು ಎಂಬುದನ್ನು ಚಿತ್ರಿಸಿದ್ದಾರೆ. ಈ ಮೂಲಕ ಅತಿಯಾದ ಸ್ವಾತಂತ್ರ್ಯವನ್ನು ಹೆಣ್ಣಾದವಳು ಪಡೆಯಬಾರದೆಂಬುದನ್ನು ತಿಳಿಸಿದ್ದಾರೆ.

ಪ್ರತಿಭಟನೆಯ ನೆಲೆಯಲ್ಲಿ

ಮಾಸ್ತಿ ಕತೆಗಳಲ್ಲಿ ಪ್ರತಿಭಟನೆ ಮಾಡುವ ಸ್ತ್ರೀಯರೂ ಕಾಣಸಿಗುತ್ತಾರೆ. ಅವರು ತೋರುವ ಪ್ರತಿಭಟನೆಗಳು ಯಾವವೂ ಅವಸರದ ನಿರ್ಧಾರದವುಗಳಲ್ಲ. ತಮಗೊದಗಿದ ಎಲ್ಲ ಕಷ್ಟಗಳನ್ನೂ ಸಹಿಸುತ್ತ ಹೋಗುತ್ತಾರೆ. ಸಹನೆಯ ಎಲ್ಲೆ ಮೀರಿದಾಗ, ಇನ್ನು ಸಹಿಸಿಕೊಳ್ಳುವುದು ಕಷ್ಟ ಎಂದು ತೋರಿದಾಗ ಮಾತ್ರ ಅವರು ಅಂಥ ಸಂದರ್ಭ ಮತ್ತು ಅದಕ್ಕೆ ಕಾರಣನಾದ ವ್ಯಕ್ತಿಯನ್ನು ವಿರೋಧಿಸುತ್ತಾರೆ. ಅವನೊಂದಿಗಿನ ಸಂಬಂಧವನ್ನು ತೊರೆದು ಬಾಳುವ ನಿರ್ಧಾರಕ್ಕೆ ಬರುತ್ತಾರೆ. ಇಲ್ಲಿ ಮಾಸ್ತಿ ಪ್ರತಿಪಾದಿಸುವುದು ಒಂದು ಹಂತದವರೆಗೆ ಪ್ರತಿಯೊಬ್ಬರೂ ಸಹನೆಯನ್ನು ತಂದುಕೊಳ್ಳಬೇಕು. ಅನಂತರವೂ ಸಹಿಸಲಾಗದ ಸನ್ನಿವೇಶಗಳಿಂದ ದೂರವಾಗಬಹುದು ಎಂಬುದನ್ನು. ಹಾಗಲ್ಲದೆ ಅವಸರದ ನಿರ್ಧಾರ ತೆಗೆದುಕೊಂಡವರ ಬದುಕು ದುರಂತ ಕಾಣುವುದನ್ನು ತೋರಿಸಿ ಹಾಗೆ ಮಾಡಬಾರದೆಂಬುದನ್ನು ಹೇಳುತ್ತಾರೆ. ಆದರೆ ಮೋಸ, ಹಿಂಸೆಗಳನ್ನೂ ಸಹಿಸಬೇಕಿಲ್ಲ, ಅದನ್ನು ಪ್ರತಿಭಟಿಸುವ ಸ್ವಾತಂತ್ರ್ಯ ಹೆಣ್ಣಿಗಿದೆ ಎಂದೂ ಅವರು ತೋರಿಸಿದ್ದಾರೆ .

ಮೋಸಕ್ಕೆ ಪ್ರತೀಕಾರ ಮಾಡುವ ಸ್ತ್ರೀಯರು ಮಾಸ್ತಿ ಕತೆಗಳಲ್ಲಿ ಕೆಲವು ಮಂದಿ ಕಾಣಸಿಗುತ್ತಾರೆ. ಅವರ ಪ್ರತೀಕಾರ ಮೋಸದ ವಿರುದ್ಧ ಇರುತ್ತದೆ. ಜೊತೆಜೊತೆಗೆ ಸಂಪ್ರದಾಯವನ್ನು ಉಳಿಸುವ ಕಡೆಗೂ ಅವರ ಮನಸ್ಸು ಕಾರ್ಯಪ್ರವೃತ್ತವಾಗಿ ಇರುತ್ತದೆ. ಈ ಹಿನ್ನೆಲೆಯಲ್ಲಿ ದುರದೃಷ್ಟದ ಹೆಣ್ಣು ಹಾಗೂ ಚೆನ್ನಮ್ಮ ಕತೆಗಳನ್ನು ಅಭ್ಯಸಿಸಬಹುದಾಗಿದೆ.

'ದುರದೃಷ್ಟದ ಹೆಣ್ಣು' ಕತೆಯಲ್ಲಿ ಬರುವ ದುರದೃಷ್ಟದ ಹೆಣ್ಣು ಹಳ್ಳಿಯ ಹುಡುಗಿ. ಷಂಡ ಗಂಡ ಮೋಸ ಮಾಡಿ ವಿವಾಹವಾದದ್ದಲ್ಲದೆ ವೇಶ್ಯಾವಾಟಿಕೆಗೆ ದೂಡಿ ಹಣ ಗಳಿಸುವ ದಂಧೆಗೆ ಒಳಪಡಿಸುವ

ಹುನ್ನಾರಕ್ಕೆ ತೊಡಗಿದವನೊಂದಿಗೆ ಹೊಂದಾಣಿಕೆಯ ಬಾಳ್ವೆಗೆ ಒಪ್ಪಿಕೊಳ್ಳದೇ ತನಗೆ ಇಷ್ಟಬಂದವನೊಂದಿಗೆ ಬದಕುವ ನಿರ್ಧಾರಕ್ಕೆ ಬರುತ್ತಾಳೆ. ಅದು ತನಗಾದ ಅನ್ಯಾಯಕ್ಕೆ ಆಕೆ ತೆಗೆದುಕೊಳ್ಳುವ ತೀರ್ಮಾನವಾಗುತ್ತದೆ. ತನ್ನ ಬದುಕನ್ನು ತನಗಿಷ್ಟವಾದಂತೆ ರೂಪಿಸಿಕೊಳ್ಳುವ ನೆಲೆಯಲ್ಲಿ ಅವಳು ತೋರುವ ಧೈರ್ಯ ಮುಖ್ಯದ್ದಾಗುತ್ತದೆ. ಹಳ್ಳಿಯ ಪರಿಸರದಿಂದ ಬಂದವಳಾದುದರಿಂದ ಮರ್ಯಾದೆಯ ಪ್ರಶ್ನೆ. ಹೆತ್ತವರ ಕುರಿತು ಚಿಂತೆ ಬೇರೆ. ಆದರೂ ಅಷ್ಟಾಗಿ ತಲೆಕೆಡಿಸಿಕೊಳ್ಳದೇ ನಿತ್ಯ ಕಣ್ಣೀರು ಹಾಕದೆ ಪರ್ಯಾಯ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಆಕೆ ಹೆದರುವುದಿಲ್ಲ.

ಹೆಣ್ಣುಗಳನ್ನು ಕೇವಲ ಭೋಗಕ್ಕಾಗಿ ಬಳಸಿ; ಆ ಮೂಲಕ ಧನ ಸಂಪಾದಿಸುವ ಮಂದಿಗಳ ಮುಖಗಳನ್ನು ದುರದೃಷ್ಟದ ಹೆಣ್ಣು ತನ್ನ ಅನುಭವದ ಮೂಲಕ ಪ್ರತಿನಿಧಿಸುತ್ತಾಳೆ.

ತಾನು ಮದುವೆಯಾಗುವ ಹೆಣ್ಣನ್ನೇ ಪರೋಕ್ಷವಾಗಿ ವೇಶ್ಯಾವಾಟಿಕೆಗೆ ಮನೆಯಲ್ಲಿ ಗಂಡನಾದವನು ನೂಕುವ ಅಮಾನವೀಯ ವರ್ತನೆಯನ್ನು ಮಾಸ್ತಿ ಮನನ ಮಾಡಿಸುತ್ತಾರೆ. ತಾನು ಷಂಡನಾಗಿದ್ದರೂ ಮೋಸದಿಂದ ಮದುವೆ ಆಗುವ ಗಂಡ ಯಾವುದೇ ಮುಲಾಜಿಲ್ಲದೇ ಹೆಂಡತಿಗೆ ಇನ್ನೊಬ್ಬನೊಂದಿಗೆ ಸೇರುವಂತೆ ಆಜ್ಞಾಪಿಸುವ, ಅದಕ್ಕೆ ಅವಕಾಶ ಕಲ್ಪಿಸಿಕೊಡುವ ಅವನ ಲಜ್ಜೆಗೇಡಿತನದ ಸ್ವಭಾವ ಪ್ರತಿಬಿಂಬಿಸಿದ್ದಾರೆ. ಅವಳ ಮುಗ್ಧತೆಯನ್ನು ಬಲಿಪಶುವಾಗಿಸುವ ಅವನ ವರ್ತನೆ ಅಂಥ ಸ್ವಭಾವ ಹೊಂದಿರುವ ಪುರುಷಲೋಕದ ಉದಾಹರಣೆಯಾಗಿದೆ.

'ಗಂಡನ ನಡವಳಿಕೆಯನ್ನು ಸಂದೇಹದಿಂದ ನೀ ಗಂಡನಲ್ಲವೇ? ನನ್ನನ್ನು ಇತರರಿಗೆ ಒಪ್ಪಿಸಿ ಅನ್ನ ಗಳಿಸೋಕೆ ಮದುವೆ ಆದಿಯಾ?' ಎಂದು ಪ್ರಶ್ನಿಸುವುದು ಅವರ ಸ್ವಂತಿಕೆಯನ್ನು ಸಾದರಪಡಿಸಿದ್ದಾಗಿದೆ. ಅದಕ್ಕೆ 'ನೀನು ಹೇಳುತ್ತಿರುವಂತೆ ನಡೆಯುವುದೇ ನನಗೆ ತೋರುತ್ತಿಲ್ಲ. ರಾತ್ರಿ ಕಳೆಯಲಿ, ಹೇಳುತ್ತೇನೆ' ಎನ್ನುವುದು, 'ಊರಿಗೆ ಹೋಗೋಣವೇ ಅಂದುಕೊಂಡೆ. ತಂದೆ ತಾಯಿಗೆ ದುಃಖ ಆಗುತ್ತೆ. ಜನ ನಗತಾರೆ ನನಗೆ ಈ ಎರಡೂ ಬೇಡ ಅನ್ನಿಸುತಾ ಇದೆ. ನೀನು ಹೇಳಿದಂತೆ ಬಾಳುತ್ತೇನೆ' ಎಂದು ಒಪ್ಪಿಕೊಳ್ಳುವ ರೀತಿಯಲ್ಲಿ ಜಾಣ್ಮೆ ಇದೆ. ವ್ಯಕ್ತಿತ್ವ ಉಳಿಸಿಕೊಳ್ಳ ಹೊರಡುವ ಅವಳ ಪ್ರಯತ್ನವಾಗಿ ನೀನು ಕಾಸಿನ ಆಸೆಗಾಗಿ ದಿನಾ ಒಬ್ಬನನ್ನು ಕರೆತರಬೇಡ, ನಾನು ಆಗಲಿ ಎಂದ ದಿನ ಒಬ್ಬನನ್ನು ಕರೆದು ತಾ' 'ನೀನು ಕರೆತಂದವರೆನ್ನಲ್ಲ ನಾನು ಒಪ್ಪಬೇಕು ಎನ್ನಬೇಡ. ಬಂದವನು ಬೇಡ ಎನಿಸಿದರೆ ನಾನು ನನ್ನ ಮೈಯಲ್ಲಿ ಚೆನ್ನಾಗಿಲ್ಲ ಅಂತೇನಿ, ನೀನು ಅವನನ್ನು ಹಿಂದಕ್ಕೆ ಕಳುಹಿಸಬೇಕು, ಬಲವಂತ ಮಾಡಕೂಡದು.' 'ಒಲ್ಲೆ ಅನ್ನಿಸಿದ ಗಂಡನ್ನು ನಾನು ನೆರೆಯಲಾರೆ' ಎಂದು ಖಡಾಖಂಡಿತವಾಗಿ ಹೇಳುತ್ತಾಳೆ. ಊರ ಹತ್ತು ಮಂದಿಗೆ ತನ್ನ ದೇಹವನ್ನು ಒಪ್ಪಿಸುವುದಕ್ಕೆ ಅವಳಿಗೆ ಅಸಹ್ಯವೆನ್ನಿಸುತ್ತದೆ. ಗಂಡನಾದವನೇ ಗಂಡನಾಗದಾಗ ಅವನಿಗೆ ಬೇಕಾದ ಬದುಕಿಗೆ ಹೊಂದಿಕೊಳ್ಳುವುದನ್ನು ಅವಳು ಮೌನವಾಗಿ ತಿರಸ್ಕರಿಸುತ್ತಾಳೆ. ಆಕ್ರೋಶವಿಲ್ಲದೇನೇ ಅದನ್ನು

ಮಾರ್ಮಿಕವಾಗಿ ಪ್ರತಿಭಟಿಸುತ್ತಾಳೆ. 'ಹಾಳೇನು ಮಾಡಿದೆ? ನಿನಗೇನು ಕಡಿಮೆಯಾಯಿತು? ದೊರೆಗಳನ್ನು ತಂದು ನಿನ್ನ ಕಾಲಮೇಲೆ ಹಾಕುತ್ತೇನೆ. ಅವರನ್ನು ಆಳು. ಬರೀ ನನ್ನ ಹೆಂಡತಿ ಆಗಿದ್ದರೆ ನೀನು ಕಾಣಬಹುದಾದ ವೈಭೋಗ ಏನು?' ಎಂದು ಕೇಳುವ ಪ್ರಶ್ನೆಯ ಹಿಂದೆ ಆತನ ಹಣದ ದಾಹದ ಸಂಪೂರ್ಣ ಪರಿಚಯ ಸಿಗುತ್ತದೆ. ಇಲ್ಲಿ ಅಸಹ್ಯ ಎನ್ನಿಸುವುದು ಅದಕ್ಕಾಗಿ ಹೆಂಡತಿಯನ್ನು ಬಳಸಿಕೊಳ್ಳುವ ಮೃಗೀಯ ವರ್ತನೆಗೆ. ಆದರೆ ಇಂಥ ಪೈಶಾಚಿಕ ಸ್ವಭಾವದ ಪತಿಯನ್ನು ಏಕಾಏಕಿ ಬಿಟ್ಟು ಹೋಗುವ ಧೈರ್ಯವನ್ನು ಹೆಣ್ಣಿಗೆ ಕೊಡುವುದಿಲ್ಲ. ಸಾಮಾನ್ಯವಾಗಿ ಹೆಣ್ಣು ಈ ತೆರನಾದ ಹಿಂಜರಿತಕ್ಕೆ ಒಳಗಾಗುವುದನ್ನೇ ಮಾಸ್ತಿ ತೋರಿಸಿಕೊಡುತ್ತಾರೆ. ಹಿಂದಿನ ಸಂತಸ ಸಡಗರಗಳಿಗೆ ಊರವರು ನಕ್ಕಾರು ಎನ್ನುವುದು ಅವಳು ಅವನನ್ನು ತೊರೆಯುವ ನಿರ್ಧಾರದಿಂದ ಹಿಂಜರಿಯುತ್ತಾಳೆ. ಅಸಹಾಯಕ ಬದುಕಿನ ನಡುವೆಯೂ ಗಂಡನನ್ನೇ ಸೌಮ್ಯವಾಗಿ ಎದುರಿಸುತ್ತಾಳೆ. ಮತ್ತು ತನ್ನ ಅಧೀನಕ್ಕೆ ಹಂತಹಂತವಾಗಿ ಒಳಗಾಗಿಸಿಕೊಳ್ಳುತ್ತಾಳೆ. ಆದರೆ ಗಂಡನ ಮಾತಿನ ಪೂರ್ತಿ ಹಣಕ್ಕಾಗಿ ಹಾತೊರೆವ ಅಮಾನವೀಯ ಮನಸ್ಸೇ ತಾಂಡವವಾಡುತ್ತದೆ. ಆದರೂ ಅದೇ ಹಣ ಪೂರಾ ಕೈತಪ್ಪಿಹೋಗಬಾರದೆಂದೇ ಅವಳ ಅಭಿಪ್ರಾಯಕ್ಕೂ ಕೊಂಚ ಒಪ್ಪಿಕೊಳ್ಳುತ್ತಾಳೆ. ಆ ಒಪ್ಪಿಕೊಳ್ಳುವಿಕೆಯೂ ಅವಳಿಗೆ ನೀಡಿದ ಸ್ವಾತಂತ್ರ್ಯವಾಗಿರದೆ ಹಣದ ಬೊಕ್ಕಸವನ್ನು ತುಂಬಿಸಿಕೊಳ್ಳಲು ಹಾಕಿಕೊಂಡ ಗಂಡನ ಕುತಂತ್ರದ ಸಮ್ಮತಿಯೂ ಆಗಿ ರಾರಾಜಿಸುತ್ತದೆ.

ತನಗೆ ಇಷ್ಟವಾದ ವ್ಯಕ್ತಿತ್ವದ ಗಂಡೊಬ್ಬನನನ್ನೇ ಸಮೀಪಕ್ಕೆ ಬರಮಾಡಿಕೊಳ್ಳುವ ಆಕೆ ಅವನಿಗೆ ಮನಃಪೂರ್ವಕ ಅರ್ಪಿಸಿಕೊಳ್ಳುತ್ತಾಳೆ. ಅವನನ್ನೇ ಮದುವೆಯಾಗುವಂತೆ ಕೇಳಿಕೊಳ್ಳುತ್ತಾಳೆ. ಇತರರಿಗೆ ಮೈ ಚೆನ್ನಾಗಿಲ್ಲ ಎಂಬ ನೆಪ ಒಡ್ಡತೊಡಗಿದ್ದಳು. ಗಂಡನೆನಿಸಿಕೊಂಡವ ಅವಳ ಬೇರೆ ಮದುವೆಗೆ ಅಡ್ಡಿಯಾದುದಕ್ಕೆ ಅವನನ್ನು ಕೊಲ್ಲುವುದಕ್ಕೆ ಹೆಣ್ಣು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಾರಣಳಾಗುತ್ತಾಳೆ.

ದುರದೃಷ್ಟದ ಹೆಣ್ಣನ್ನು ವಿವಾಹವಾದ ಗಂಡಸು ಮನುಷ್ಯತ್ವ ಇರುವ ವ್ಯಕ್ತಿಯಾಗಿ ಚಿತ್ರಿತಗೊಂಡಿದ್ದಾನೆ. ಕೇವಲ ದೈಹಿಕ ಕಾಮನೆಯ ತೀರಿಕೆಗಾಗಿ ಮಾತ್ರ ಆಕೆಯನ್ನು ಬಳಸಿಕೊಳ್ಳದೆ ಅವಳ ಮನಸ್ಸಿಗೆ, ಆಶೆಗಳಿಗೆ ಸ್ಪಂದಿಸುತ್ತಾನೆ. ತನ್ನ ಮನೆಗೇ ನೇರವಾಗಿ ಕರೆದೊಯ್ಯುವ ಮಾನವೀಯನಾಗುತ್ತಾನೆ. ಆದರೆ ಅವಳಿಂದ ತಿರಸ್ಕರಿಸಲ್ಪಟ್ಟ ಮೂರನೇ ವ್ಯಕ್ತಿ ಅವರಿಬ್ಬರ ಸಂಬಂಧಗಳಿಂದ ಉರಿದು ಬೀಳುತ್ತಾನೆ. ತನ್ನ ಕೈಗೆ ಆಕೆ ಸಿಗದ ಅವಮಾನ ಹಾಗೂ ಅಸಹಾಯಕತೆ ದ್ವೇಷವಾಗಿ ಮಾರ್ಪಟ್ಟು ಕೊಲೆ ಮಾಡಿದವರನ್ನು ಹಿಡಿದುಕೊಟ್ಟು ಕೊಲೆಗಾರನಿಗೆ ಶಿಕ್ಷೆ ಆಗುವಂತೆ ಮಾಡಿ ಸೇಡು ತೀರಿಸಿಕೊಳ್ಳುತ್ತಾನೆ.

ಇಲ್ಲಿ ಈತ ಹಾಗೂ ಗಂಡ ಅಮಾನುಷ ವ್ಯಕ್ತಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಇಡಿಯಾಗಿ ಯಾರೂ ಒಳ್ಳೆಯವರಲ್ಲ, ಯಾರೂ ಕೆಟ್ಟವರಲ್ಲ ಎಂದು ಮಾಸ್ತಿ ತೋರಿಸಿಕೊಡುವುದರ ಮುಖ್ಯ ಉದ್ದೇಶ

ಹೆಣ್ಣನ್ನು ನೋಡುವ ದೃಷ್ಟಿ ಹಾಗೂ ಅವಳನ್ನು ಗಂಡು ಶೋಷಿಸುವ ಪರಿಯನ್ನು ತೆರೆದಿಡುವುದಾಗಿದೆ. ಮತ್ತು ಅಂಥದ್ದನ್ನು ವಿರೋಧಿಸುವ, ಧೈರ್ಯದಿಂದ ಎದುರಿಸುವ ಇಷ್ಟಪಟ್ಟವರನ್ನು ಬದುಕಿಗೆ ಆಯ್ದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಮೂಲಕ ಆ ಛಾತಿ ಹೆಣ್ಣಿಗೆ ಸಾಧ್ಯವಾಗಬೇಕು ಎಂದು ಅವರು ಸಾರುತ್ತಾರೆ.

'ಈ ಕತೆ ನಗರದ ಬದುಕು ತಂದೊಡ್ಡುವ ಭ್ರಷ್ಟತೆ ಹಾಗೂ ಗಂಡೊಂದು ಹೆಣ್ಣಿನ ಮೇಲೆ ತೋರುವ ಹಬ್ಬಾಳಿಕೆಯನ್ನು ಪ್ರತಿಬಿಂಬಿಸುವದಕ್ಕಿಂತ ಮಿಗಿಲಾಗಿ ಮನುಷ್ಯ ತಾನಾಗಿಯೇ ಕಟ್ಟಿಕೊಂಡ ವ್ಯವಸ್ಥೆಯ ಹುಸಿತನವನ್ನು ಬಯಲು ಮಾಡುತ್ತದೆ. ಈ ವ್ಯವಸ್ಥೆಯಲ್ಲಿ ಅವಳ ಬಯಕೆಗಳು ಈಡೇರಲಾರದೇ ಹೋದಾಗ ಅವಳು ಒಪ್ಪಿಕೊಳ್ಳುವ ಪರ್ಯಾಯ ವ್ಯವಸ್ಥೆ ಅವಳಿಗೆ ಅಸಹ್ಯ ಎನಿಸುವುದಿಲ್ಲ. ಮಾಸ್ತಿ ಅವರಿಗೆ ಈ ಜೀವನ ವಿಧಾನದ ಬಗೆಗೆ ತಿರಸ್ಕಾರವಿಲ್ಲ. ಬದಲಾಗಿ ಆ ಸ್ಥಿತಿಗೆ ಅವಳನ್ನು ತಂದ ಕುರುಡು ವ್ಯವಸ್ಥೆಯ ಬಗೆಗೆ ತಿರಸ್ಕಾರವಿದೆ'[೫೪] ಎಂದು ಗಿರಿಜಾ ಶಾಸ್ತ್ರಿ ಅಭಿಪ್ರಾಯ ಪಟ್ಟಿದ್ದಾರೆ.

ವಸಾಹತುಶಾಹಿಯ ಆಗಮನದ ಛಾಯೆಯಿಂದ ಗಂಡನ ಹಿಂಸೆಗೆ 'ಚೆನ್ನಮ್ಮ' ಕತೆಯ ಚೆನ್ನಮ್ಮ ಒಳಗಾಗಿದ್ದಾಳೆ. ಗಂಡ ಮಾದಪ್ಪನ ನಗರದ ಉದ್ಯೋಗದ ಪ್ರಸ್ತುತತೆ, ಚೆನ್ನಮ್ಮ ಅದಕ್ಕೆ ಮನಸ್ಸು ಮಾಡದಿರುವಲ್ಲಿ ಸಾಂಪ್ರದಾಯಿಕತೆ ಆಧುನಿಕತೆಯ ಸಂಘರ್ಷ ಕೆಲಸ ಮಾಡಿದೆ. ಈ ಸಂಘರ್ಷದ ಪರಿಣಾಮವಾಗಿಯೇ ಚೆನ್ನಮ್ಮನ ದಾಂಪತ್ಯ ವಿರಸ ಅನುಭವಿಸುತ್ತದೆ ಮತ್ತು ಅಲ್ಲಿಂದ ಆಕೆ ಹೊರಬರುವುದಕ್ಕೆ ಸಾಧ್ಯವಾಗುತ್ತದೆ.

ಗಂಡಸಿನ ಮೋಸ - ದಗಲುಬಾಜಿತನ ಸ್ವಾರ್ಥಕ್ಕಾಗಿ ಹೆಂಡತಿಯ ಮನಸ್ಸನ್ನು ನಿರ್ಲಕ್ಷಿಸಿ, ಅವಳ ಮನಸ್ಸಿಗೆ ಬೆಲೆ ಕೊಡದೆ ತನಗೆ ಬೇಕಾದಂತೆ ಬಳಸಿಕೊಳ್ಳುವ ಗಂಡಸರ ಮನಸ್ಥಿತಿಗೆ, ವ್ಯಕ್ತಿತ್ವಕ್ಕೆ ಪ್ರತೀಕಾರ, ಪ್ರತಿಭಟನೆ ತೋರಿಸುವುದು ಪ್ರತಿನಿಧಿತವಾಗಿದೆ. ಹೆಣ್ಣು ಎಷ್ಟೇ ಕಷ್ಟ - ತೊಂದರೆಗೆ ಒಳಗಾದರೂ ವ್ಯವಸ್ಥೆ ರೂಪಿಸಿದ ಸಿದ್ಧಾಂತ ಆಕೆ ಆದದ್ದನ್ನೆಲ್ಲ ಮರೆತುಬಿಡಬೇಕು ಎಂದು. ಆದರೆ ಮಾಸ್ತಿ ಇಲ್ಲಿ ಅದಕ್ಕೆ ಅವಕಾಶ ಕೊಡುವುದಿಲ್ಲ. ಅತೀ ಸಹನೆಗೂ ಇಲ್ಲಿ ಅವಕಾಶವಿಲ್ಲ. ಪಟ್ಟಣಕ್ಕೆ ಹೊರಡುವುದೇ ಚೆನ್ನಮ್ಮನಿಗೆ ಸಹ್ಯವಾಗುವುದಿಲ್ಲ. ಲಕ್ಷಮ್ಮ ಮಾದವ್ವರಿಗೂ ಇಷ್ಟವಿಲ್ಲ. ಆದರೆ ರಾಮಪ್ಪನ ಒತ್ತಾಯ, ಆಧುನಿಕತೆಯ ಮಾರು ಹೋಗುವಿಕೆ ಅವಳನ್ನು ಬೆಂಗಳೂರಿಗೆ ಒತ್ತಾಯದಿಂದ ಕರೆತರುತ್ತದೆ. ಸ್ವಸ್ಥ ಮನಸ್ಸು ಅಸ್ವಸ್ಥತೆಯಲ್ಲಿ ಮುಳುಗುವುದಕ್ಕೆ ಕಾರಣವಾಗುತ್ತದೆ. ಇಲ್ಲಿ ಹೆಂಗಸರ ಪಾರಂಪರಿಕ ನಿಲುವಿಗೆ ಮಾನ್ಯತೆ ಸಿಗದೇಹೋಗುತ್ತದೆ. ಹೆರಿಗೆ ಬಾಣಂತನದವರೆಗೆ ಹಳ್ಳಿಯಲ್ಲೇ ಇರಗೊಡುವ ರಾಮಪ್ಪ ಅನಂತರ ಹಠಮಾರಿತನದಿಂದಲೇ ಬೆಂಗಳೂರಿನ ರೈಲು ಹತ್ತಿಸಿಯೇ ಬಿಡುತ್ತಾನೆ. ಅಲ್ಲಿನ ಇಡೀ ವಾತಾವರಣವೇ ಅವಳಿಗೆ ಅಸಹನೀಯತೆ ತಂದೊಡ್ಡುತ್ತದೆ. ರಾತ್ರಿ

---

೫೪ ಪು. ೪೬ ಕಥಾ ಮಾನಸಿ ಗಿರಿಜಾ ಶಾಸ್ತ್ರೀ ಡಾ. ೨೦೦೦

ಅದೆಷ್ಟೋ ಹೊತ್ತಿಗೆ ಬಂದ ಗಂಡನ ವಿಷಯದಲ್ಲಿ ಚೆನ್ನಮ್ಮನಿಗೆ ಅಸಮಾಧಾನ ಪಟ್ಟುಕೊಳ್ಳಲು ಇಷ್ಟವಿಲ್ಲ. ಇದು ನಮ್ಮ ಹೆಣ್ಣುಮಕ್ಕಳಲ್ಲಿ ಸಂಪ್ರದಾಯ ಸಾಮಾನ್ಯವಾಗಿ ಮೂಡಿಸುವ ದಾಕ್ಷಿಣ್ಯ. ಗಂಡಸು ಹತ್ತು ಕಡೆ ಹೋಗಬೇಕು, ಹತ್ತು ಜನವನ್ನು ಅನುಸರಿಸಬೇಕು. ಮಾಡ ಹೋದ ಕೆಲಸವನ್ನು ಮುಗಿಸಿಕೊಂಡು ಬರಬೇಕು. ಮನೆಯ ಹೆಂಗಸಿಗಾಗಿ ಅವರು ಆಡುತ್ತಿರುವ ಮಾತನ್ನು ಅರ್ಧದಲ್ಲಿ ಬಿಟ್ಟು, ಮಾಡುತ್ತಿರುವ ಕೆಲಸವನ್ನು ನಾಳೆಯ ದಿನಕ್ಕೆ ಉಳಿಸಿ, ಮನೆಗೆ ಮುಂದಾಗಿ ಓಡಿ ಬರುವುದಕ್ಕಾಗುವುದಿಲ್ಲ. ಇಷ್ಟಕ್ಕೆ ಅವನು ಈ ಕಷ್ಟವನ್ನೆಲ್ಲ ಪಡುವುದು ಯಾರಿಗಾಗಿ? ಮನೆಯ ಹೆಂಗಸಿಗಾಗಿ, ತಮ್ಮ ಮಕ್ಕಳಿಗಾಗಿ, ಅವನು ಬರುವ ಹೊತ್ತಿಗೆ ಸಮಾಧಾನವಾಗಿ ಇದ್ದು ಅವನನ್ನು ನೋಡಿಕೊಂಡು, ಅದೂ ಒಂದು ಮಗು ಎಂಬಂತೆ ಸಾಕುವುದು ಹೆಣ್ಣಿನ ಕೆಲಸ ಎಂದಿರುವಲ್ಲಿ ಸ್ತ್ರೀಯ ಬದುಕಿನ ಪ್ರತಿನಿಧೀಕರಣದ ಸ್ಪಷ್ಟತೆಯಿದೆ.

ಗಿರಣಿಯಲ್ಲಿ ಕೂಲಿ ಮಾಡಬೇಕೆಂಬ ಗಂಡನ ಕೋರಿಕೆ ಮುಜುಗರ ಹುಟ್ಟಿಸುತ್ತದೆ. ಅದಕ್ಕೆ ಮುಖ್ಯ ಕಾರಣ ಹೊಲಗದ್ದೆ ಉಳ್ಳ ತವರು, ಗಂಡನ ಪಾಲನೆ ಪಡೆದ ತಾನು ಕೂಲಿ ಮಾಡುವುದು ತರವೇ ಎಂಬುದು ಆಲೋಚನೆಯಾಗುತ್ತದೆ. 'ಈ ಪಟ್ಟಣದ ಜನ ಹೆಂಗಸರನ್ನು ಮರ್ಯಾದೆಯಿಂದ ಬಾಳಿಸುವುದಿಲ್ಲ' ಎಂಬುದು ಅವಳ ಇಡೀ ನಿರಾಕರಣೆಯ ಹಿಂದಿನ ಧ್ವನಿಯಾಗಿದೆ. ಅವಳ ಮನಪರಿವರ್ತನೆಗೆ, ಆಕರ್ಷಣೆಗೆ ಆತ 'ಏನು ಕೂಲಿ ಅಂದರೆ ಹೊಲದ ಕೂಲಿ ಅಂತ ತಿಳಿದಾ? ಗಿರಣಿಕೂಲಿ, ಬಿಸಿಲಿಗೆ ನಿಲ್ಲೋದಿಲ್ಲ, ಬಟ್ಟೆ ಮಾಸೋದಿಲ್ಲ. ಅಲ್ಲಿ ನಾಲ್ಕು ಗಂಡಾಳಿಗೆ ಕೊಡೋ ಕೂಲಿ ಇಲ್ಲಿ ಒಂದು ಹೆಣ್ಣಾಳಿಗೆ ಕೊಡುತ್ತಾರೆ. ಇಲ್ಲಿ ಕೂಲಿ ಮಾಡೋ ಹೆಣ್ಮಕ್ಕಳು ಉಡೋ ಬಟ್ಟೇನ ಹಳ್ಳೀಲಿ ಹತ್ತೆಕರೆ ಹೊಲದ ಯಜಮಾನಿ ಉಡೋಬಲ್ಲ; ಕೂಲಿ ಅಂದರೆ ಏನಾಯ್ತು?' ಎಂದು ಇಲ್ಲಿ ಆಕೆಯನ್ನು ಬಟ್ಟೆಯ ಆಕರ್ಷಣೆಯ ಹಿನ್ನೆಲೆಯಲ್ಲಿ ಬದಲಾಯಿಸುವುದಕ್ಕೆ ಪ್ರಯತ್ನಿಸಿದ್ದಾನೆ. ಮರ್ಯಾದೆಯ ನೆಪದಲ್ಲಿ ಅದನ್ನು ಅವಳು ಸಂಪೂರ್ಣ ನಿರಾಕರಿಸುವ ಧೈರ್ಯ ಮಾಡಿದ್ದು ಗಮನಾರ್ಹವಾಗುತ್ತದೆ.

ಹೊರಗೆ ಹೋಗಿ ದುಡಿಯಲಾರದ ಹೆಣ್ಣಿನ ಜಡ ನಿಲುವಿಗೆ ಆಕೆಯೂ ಇಂಬುಕೊಡುತ್ತಾಳೆ. ತನ್ನ ಸೌಖ್ಯ, ನೆಮ್ಮದಿ ಮನೆಯೊಳಗಿನ ಜೀವನದಲ್ಲಿ ದೊರೆಯುತ್ತದೆ ಎಂಬ ದೃಢನಂಬಿಕೆಯನ್ನು ಇನ್ನಷ್ಟು ದೃಢಗೊಳಿಸುತ್ತದೆ. ಅಲ್ಲದೆ ಶ್ರೀಮಂತಿಕೆಯ ಮನಃಸ್ಥಿತಿ ಇಲ್ಲಿ ದುಡಿದು ತಿನ್ನುವುದಕ್ಕೆ ಒಪ್ಪುವುದಿಲ್ಲ. ಅವರಿಗೆ ಅಲ್ಲಿ ಅಂತಸ್ತಿನ ಪ್ರಶ್ನೆ ಎದುರಾಗುತ್ತದೆ. ಗಂಡ ದುಡಿವ ಪ್ರವೃತ್ತಿಯನ್ನು ಮಾತ್ರ ಒಪ್ಪಿಕೊಂಡವ ಇಲ್ಲಿ ಅವಳನ್ನು ಕಳುಹಿಸುವುದಕ್ಕೆ ಶ್ರಮಿಸುವುದನ್ನು ಗಮನಿಸಬಹುದಾಗಿದೆ. ಪತ್ನಿಗೆ ಒಂದು ಜತೆ ಕಡಗ, ಮಗುವಿಗೆ ಹೊಸ ಅಂಗಿಬಟ್ಟೆ ತರುವುದು, ತನಗೆ ಇಂದಿನಿಂದ ನಾಲ್ಕಾಣೆ ಹೆಚ್ಚು ಕೂಲಿ ಎನ್ನುವುದು ಹಂತಹಂತವಾಗಿ ತನ್ನ ಕುರಿತು ಹೆಂಡತಿಯ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದಾಗಿದೆ. ಆದರೆ ಅತಿ ಸೂಕ್ಷ್ಮಮತಿಯಾದ ಆಕೆ ಗಂಡ ಕೆಲಸಗಾರನಾಗಿ ತನ್ನನ್ನು ಗುರುತಿಸಿಕೊಂಡಿದ್ದಾನೆಯೇ ಹೊರತು ಕೂಲಿಯಾಗಿ ಅಲ್ಲ.

ಒಂದು ರೀತಿಯಲ್ಲಿ ಹೆಣ್ಣನ್ನು ಮೋಸಗೊಳಿಸುವ ವಂಚಕ ಪ್ರವೃತ್ತಿಯನ್ನು ನಾವಿಲ್ಲಿ ಕಾಣುತ್ತೇವೆ. ಆದರೆ ಸೂಕ್ಷ್ಮಮತಿಯಾದ ಪತ್ನಿ ಇದು ಯಾತರದು ದಿನಕ್ಕೆ ಪಾವಲಿ ಅನ್ನೋದು? ನೀನು ಗಿರಿಣೀಲಿ ಕೂಲಿ ಆಗಿದ್ದಿಯಾ' ಎಂದು ಪ್ರಶ್ನಿಸುವುದು 'ಅದು ಹೆಂಗಾದಿತು? ದಿನಕ್ಕೆ ಲೆಕ್ಕ ಮಾಡಿದರೆ ದಿನಗೂಲಿ ಆಯ್ತು. ತಿಂಗಳ ಲೆಕ್ಕ ಮಾಡಿದರೆ ಸಂಬಳ. ಊರಾಗೆ ವರ್ಷೆಲ್ಲ ದುಡಿದು ಕಾಳುಕಂಬಳ ತಗೊಳ್ಳೊರಿನ ಜೀತ ಅಂತಾರೆ', ' ಇದು ಹಳ್ಳೀ ಮಾತು. ನೋಡು, ಮಾದಾವರದ ಲಿಂಗ ಇಲ್ಲಿ ಕೋರ್ಟಿನಾಗ ಆಳಾಗವನೆ. ಅವನಿಗೆ ತಿಂಗಳಿಗೆ ಹದಿನೈದು ರೂಪಾಯಿ ಬರುತ್ತದೆ. ಅವನದು ಕೂಲಿ ಅಲ್ಲ; ನೌಕರಿ. ನನಗೆ ತಿಂಗಳಿಗೆ ಮೂವತ್ಮೂರು ರೂಪಾಯಿ ಬರುತ್ತದೆ. ನಮ್ಮದು ಕೂಲಿ ಇದು ದೊಡ್ಡದೋ? ಅದು ದೊಡ್ಡದೋ?' ಎಂದು ಜಾಣತನದ, ಪಲಾಯನವಾದದ ಉತ್ತರ ಅವನ ಮೋಸಗಾರಿಕೆಗೆ ಉದಾಹರಣೆಯಾಗುತ್ತದೆ. ಅಷ್ಟೇ ಏಕೆ ಮಂದಿರದ ನೆಪದಲ್ಲಿ ಕುಡಿತದ ಕೆಟ್ಟ ಹವ್ಯಾಸ ರೂಢಿಸಿಕೊಂಡು ಮಾಡಿದ ಮೋಸ ದಿನೇ ದಿನೇ ಬೆಳೆದು ತೂರಾಡಿಕೊಂಡು ಬರುವಷ್ಟಕ್ಕೆ ಬೆಳೆದು ನಿಲ್ಲುತ್ತದೆ. ಗಿರಣಿಯ ಕೂಲಿಗಾಗಿ ಪತ್ನಿಯ ಮೇಲೆ ಒತ್ತಡ ಹೇರುವ ಮೂಲಕ ಅವಳಿಗೆ ಮನಸ್ಸಿಲ್ಲದಿದ್ದರೂ ಸೇರುವಂತೆ ಮಾಡುತ್ತಾನೆ. ಅದಕ್ಕೆ ಸ್ವಾರ್ಥಿ ಮೇಸ್ತ್ರಿಯೂ ಸೊಪ್ಪು ಹಾಕುತ್ತಾನೆ. ಅವಳ ಒಲ್ಲದ ಮನಸ್ಸು ಹೇಳುವ ಸಬೂಬುಗಳಿಗೆ ಆತ ಮಾಡಿದ ವ್ಯವಸ್ಥೆಯ ಪರಿಹಾರ ಹೇಳುತ್ತಾನೆ. ಕುಟುಂಬದಿಂದ, ಮನೆಯಿಂದ ಹೊರಬರುವುದಕ್ಕೆ ಒಪ್ಪದ ಹೆಣ್ಣಿನ ಸಾಂಪ್ರದಾಯಿಕ ಮನಸ್ಸನ್ನೇ ಈ ಇಬ್ಬರು ಗಂಡಸರು ಪರಿವರ್ತಿಸುವಲ್ಲಿ ಯಶಸ್ವಿಯಾಗುತ್ತಾರೆ.

ಊರಿನಲ್ಲಿ ಯಾರಿಗೂ ಈ ಸಂಗತಿ ತಿಳಿಸಬೇಡ ಎಂಬ ಷರತ್ತಿನೊಂದಿಗೆ ಆಕೆ ಅದಕ್ಕೆ ಒಪ್ಪುತ್ತಾಳೆ ಕೂಡ. ಹೊರಗೆ ದುಡಿಯುವ ಹೆಣ್ಣು ನೆಮ್ಮದಿಯಿಂದ ಇರುವುದಿಲ್ಲ ಎಂಬುದನ್ನು ಗಿರಿಣಿಯ ಮೇಸ್ತ್ರಿ ಅವಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸಿಸುವ ಮೂಲಕ ಮಾಸ್ತಿ ಸಾದರಪಡಿಸುತ್ತಾರೆ. ಮೇಸ್ತ್ರಿ ವಿಶ್ವಾಸಗಳಿಕೆಗೆ ಅತಿ ಗಾಂಭೀರ್ಯದಿಂದ ನಡೆದುಕೊಳ್ಳುವ ಮೂಲಕ ಸೋಗಿನ ಮುಖವಾಡ ಧರಿಸುತ್ತಾನೆ. ಅವನ ಕುರಿತು ಆಡುವ ಇತರರ ಮಾತುಗಳು ಅಸಹನೀಯವೆನ್ನಿಸುತ್ತದೆ. ಗಂಡ ಪರಂಗಿ ಹೆಂಗಸರನ್ನು ಇಟ್ಟುಕೊಂಡಿರುವುದು ಅವಳಿಗೆ ಮಾಡಿದ ಅನ್ಯಾಯದ ಪ್ರತೀಕವೇ. ಆದರೆ ಅವನ ಹಾದರವನ್ನು ಚೆನ್ನಮ್ಮ 'ಅವರವರಿಗೆ ಚಂದ ಕಂಡ ಹಾಗೆ ಅವರವರು ಇರಬೇಕು ತಾನೇ? ನಿನಗೆ ನಾನೀಗ ಮಾಡೋದೆಲ್ಲ ಚಂದಾಗಿ ಇರಬೇಕಲ್ಲ?' ಎಂದು ಪ್ರಶ್ನಿಸುವ ಎದೆಗಾರಿಕೆ ಪರಪುರುಷನ ಅತಿರೇಕದ ಸ್ವಾತಂತ್ರ್ಯವನ್ನು ಪ್ರಶ್ನಿಸುವುದಾಗಿದೆ.

ಪುರುಷನೊಂದಿಗೆ ತಪ್ಪಿ ನಡೆಯುವವಳು ಎಂಬ ಮಾತನ್ನು ಯಾರಾದರೂ ಆಡಿದ್ದರೆ ಅವಳು ಅದನ್ನು ಸಹಿಸುವುದಕ್ಕೆ ಸಿದ್ಧವಾಗಿರದ ಅವಳ ಈ ಪ್ರಶ್ನೆಯಲ್ಲಿ ಯಥಾರ್ಥತೆ ಇದೆ. ಲಿಂಗಪ್ಪನೊಂದಿಗೆ ಅವಳ ಸಂಬಂಧವನ್ನು ಕಲ್ಪಿಸಿ ರೇಗಿದಾಗ 'ಸರಸ ಯಾತರದು ನನಗೆ ಅವನೊಂದಿಗೆ? ಯಾರೋ

ಎಂದು ಸರಸ ಮಾಡೋಕೆ ಒಪ್ಪೊ ಹೆಣ್ಣಲ್ಲ ಇಲ್ಲಿ. ನಿನಗೆ ಅಂಜಿ ನಾ ಬಾಳತಾ ಇದೀನಾ? ಒಳ್ಳೆ ಅಪ್ಪ ಅಮ್ಮನಿಗೆ ಹುಟ್ಟಿದೋಳು. ಒಳ್ಳೆಯೋಳಾಗಿದ್ದೀನಿ. ನನ್ನ ನೀನು ಬೆದರಿಸಿ ಗರತಿ ಮಾಡತೀಯಾ?' ಎನ್ನುವುದು; 'ರಾತ್ರಿ ನಿಶಿ ಹೊತ್ತಿನಾಗೆ ಎಲ್ಲಿಂದ ಬರೋದು? ರಾತ್ರಿ ಎಲ್ಲ ಬರದೆ ಇದ್ದಾಗ ಎಲ್ಲ ಮಲಗಿರೋದು ಇದು ನಿನಗೇ ತಿಳಿದಿರಬೇಕಲ್ಲ' ಎಂದು ಮರುಪ್ರಶ್ನೆ ಹಾಕುವ ಮೂಲಕ ಅವಳು ರೂಢಿಗತ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ.

ಗಿರಣಿಯ ಮೇಸ್ತ್ರಿಯ ಕಿರುಕುಳದಿಂದ ರೋಸಿ ಹೋಗಿದ್ದರೂ ಗಂಡನಾದವ ಅದನ್ನು ಲಕ್ಷಿಸದೇ ಹೋಗುವುದು ಅವನ ಸ್ವಾರ್ಥದಿಂದಲೇ ಆಗಿದೆ. ಅವಳಿಗೆ ಕೊಡುವ ಪ್ರಮೋಷನ್ ತಿರಸ್ಕರಿಸುವುದು, ಕೂಲಿಯನ್ನೇ ತೊರೆಯುವುದು, 'ಇದೇನು ಹೀಗೆಇವನ ಪುಂಡನ್ನು ಸಹಿಸಿಕೊಳ್ಳುತ್ತೀಯಾ? ಗಂಡ ಕಾಪಾಡದಿದ್ದರೆ ಹೆಂಡರ ಮಾನ ಉಳಿಯೋದು ಹೇಗೆ?' 'ಬೇಕಾದ್ದು ತಾಳಿಕೊಂಡೇನು. ಅವ ಮುಟ್ಟೋಕೆ ಬಂದರೆ ಸುಮ್ಮನಿರಲಾ? ಏನು ನಿನ್ನ ಕಷ್ಟ ಹೇಳು, ಈ ಕಡಗ, ಈ ಸರ ಬೇಕಾದರೆ ಮಾರು. ಕೂಲಿಗೆ ಅಂತ ಮಾನ ತೆರಲಾರೆ' ಎಂದು ಹಠ ಮಾಡುವ ಮೂಲಕ ಒದಗಬಹುದಾದ ತೊಂದರೆಯಿಂದ ಪಾರಾಗುತ್ತಾಳೆ. ಗಂಡ ಕಷ್ಟದಲ್ಲಿದ್ದಾನೆ ಎಂದು ಅವನು ತಲೆ ಮರೆಸಿಕೊಳ್ಳುವುದಕ್ಕಾಗಿ ಪತ್ನಿಯಾಗಿ ಸಹಕರಿಸುತ್ತಾಳೆ. ಅವನ ನಡತೆಯ ಹಿಂದಿನ ದಂಧೆಗಳ ವೈಪರೀತ್ಯವನ್ನು ಅರಿಯದೇ ಹೋದ ಅವಳು ಅವನು ಮಿತಿಮೀರಿ ಮಾಡಿದ ಸಾಲಕ್ಕಾಗಿ ಪತಿ ಸತ್ತನೆಂದು ಮಾಡಿಸುವ ಸರ್ಟಿಫಿಕೆಟ್‌ಗೆ ಏನೂ ಅರಿಯದ ಅವಳಿಂದ ಸಹಿ ಹಾಕಿಸಿಕೊಂಡದ್ದು, ಆತ ಇಟ್ಟುಕೊಂಡ ಲೇಡಿ ಬಳಿ ಇದ್ದ ಇನ್ನೊಬ್ಬನೊಂದಿಗೆ ಹೊಡೆದಾಡಿದ್ದು, ಕೊಲೆಗೆ ಕಾರಣವಾಗುವುದು, ಹೆಬ್ಬೆಟ್ಟು ಗುರುತು ಆಧಾರದಲ್ಲಿ ಗಂಡ - ಮೇಸ್ತ್ರಿಯವರ ಹಣದ ದುರ್ಲಾಭಕ್ಕೆ ಬಳಸಿಕೊಂಡ ರೀತಿಗೆ ಈಕೆ ಅನ್ಯಾಯವಾಗಿ ಕಾನೂನು ಪ್ರಕಾರ ತಪ್ಪಿತಸ್ಥಳಾಗಿ ಜೈಲು ಸೇರುತ್ತಾಳೆ.

ಇದು ಒಂದು ರೀತಿಯಲ್ಲಿ ಅವಳ ವ್ಯಕ್ತಿತ್ವವನ್ನು ಬದಲಾಯಿಸುತ್ತದೆ. ತಾನು ಹೆಣ್ಣು, ಸಹನೆಯನ್ನು ಹೊಂದಿರಬೇಕೆಂಬ ಭಾವ ಕಳೆದುಕೊಳ್ಳುತ್ತಾಳೆ. 'ಅಯ್ಯೋ ನನ್ನಪ್ಪ, ನಾ ಹೆಣ್ ಹೆಂಗ್ಸು, ಇದೆಲ್ಲ ಏನು ಮಾಡಿಯೇನು? ದೇವರು ಮಾಡಿದ ಹಂಗಾಗತದೆ. ಮನೆ ಅನ್ನೋ ತಾವಕೆ ಹೋಗಬೇಡಿ ಗಂಡ ಬರೋತನಕ ದೀಪ ಅಚ್ಕೊಂಡಿರತೀನಿ. ಬೇರೆ ಎಂಥದಾದರೂ ಆದರೆ ದೇವರು ಕೊಟ್ಟದನ ಉಣ್ಣೋದು' ಎಂದು ಹಾಗೆ ಸಹಿಕೊಂಡ ಸ್ವಭಾವವೀಗ ಒಂದು ನಿರ್ಧಾರಕ್ಕೆ ಬರುತ್ತದೆ. ತಾನು ಜೈಲಿಗೆ ಸೇರುವ ಅವಸ್ಥೆ ತಂದೊಡ್ಡಿದ ಗಂಡನ ಮುಖ ನೋಡಲು ಅಸಹ್ಯ ಪಡುವಷ್ಟು ಕಠಿಣಳಾಗಿಬಿಡುತ್ತದೆ. ಇದು ತನಕ ಬಸವಳಿದು ಹೋಗಿದ್ದ ಅವಳು ಜೈಲಿಂದ ಹೊರಬಂದದ್ದೇ ಊರಿಗೆ ಹೊರಟದ್ದು ಕಂಡಾಗ 'ಹಂಗಾದರೆ ನೀನು ನನ್ನ ಬಿಟ್ಟುಬಿಡುವೆಯಾ?' ಎಂದು ಕೇಳುವ ಅವನ ಪ್ರಶ್ನೆಗೆ ನಿರ್ಲಕ್ಷ್ಯದ, ಅಷ್ಟೇ ಧಾರ್ಷ್ಟ್ಯದ, ಪುರುಷಶಾಹಿಯ ಎಲ್ಲೆ ಮೀರಿದ ಮಾತಿಗೆ ಗಂಡ ಹೆಂಡಿರನ್ನು ಬಿಡಬೌದಲ್ಲ. ಹೆಂಡರು ಗಂಡನ್ನ ಬಿಡೋದು ಅಂತ ಉಂಟಾ? ಈಗ ನಾನು ಏನೂ ಒಲ್ಲೆ.

ಊರಿಗೋಗಬೇಕು, ನಾ ತಿಂಗಳಲ್ಲೂ ಬರಲಾರಿ, ಎರಡು ತಿಂಗಳಲ್ಲಿ ಬರಲಾರಿ ಬರೋದಿಲ್ಲಾಂತೂ ಅನ್ನಲಾರಿ. ಊರಿಗೆ ಬಂದರೂ ಈಗ ನಾ ಬಾಳ್ವೆ ಮಾಡಲಾರಿ. ಈಗ ನಾ ಯಾವುದನ್ನೂ ಒಲ್ಲಿ. ನನ್ನ ಯಾಕ ಸುಮ್ಮನೆ ಕಾಡೋದು?' ಎಂಬ ಅವಳ ಕಠಿಣ ನಿಲುವಿಗೆ, 'ನನ್ನ ಹೆಂಡರು ನಾನವಳ ಪಾಲಿಗೆ ಇಲ್ಲಾಂತ ಇಟ್ಟುಕೊಳ್ಳಲಿ!' ಎಂಬ ಸೋಗಿನ ಕರಗುವಿಕೆಯ ನುಡಿಗೆ ಇಲ್ಲಿ ಆಕೆ ಬೆಲೆ ಕೊಡುವುದಿಲ್ಲ. ಸಹನೆಯ ಎಲ್ಲ ನಿಲುವು ನಿರ್ಧಾರಗಳಿಗೂ ಬೆಲೆ ಕೊಡದೇ ಹೋದಾಗ ಆಕೆ ಅವನನ್ನು ಬಿಟ್ಟು ನಡೆದು ಬದುಕುವ ಧೈರ್ಯ ತಳೆಯುವುದು ಅವಳ ಸಹನೆಯ ಮಂಜು ಈಗಶಿಲೆಯಾಗಿ ರುವುದನ್ನು ತೋರಿಸುತ್ತದೆ. ರೈಲು ಏರಿ ಕುಳಿತಿದ್ದ ಆಕೆಗೆ ಲಿಂಗಪ್ಪ ತರುವ ಸುದ್ದಿ ಯಾವುದೇ ರೀತಿಯಲ್ಲಿ ಶಾಕ್ ಕೊಡುವುದಿಲ್ಲ. ಮನಸ್ಸು ಎಳ್ಳಷ್ಟೂ ಕರಗುವುದಿಲ್ಲ. ಹೆಣ ನೋಡುವುದಕ್ಕೂ ಹೋಗದೇ 'ಅವ್ವ ಹೋಗೋದಾದರೆ ನೀ ಹೋಗಿ ಬಾರವ್ವ. ನಾ ಇಲ್ಲೇ ಇರತೇನೆ' ಎನ್ನುವಲ್ಲಿ ಅವಳ ರೋಸಿಹೋದ ಮನಸ್ಸು ಗುರುತಿಸಬಹುದಾಗಿದೆ. ಅದರೊಂದಿಗೇ ಬೆಳೆದುಬಂದಿರುವ ಧೈರ್ಯ, ತನ್ನ ವ್ಯಕ್ತಿತ್ವಕ್ಕೆ ಬೆಲೆ ಕೊಡದೇ ಹೋದ ಅವನಿಗಾಗಿ ಮರುಗುವ ಸಹನಶೀಲತೆ ಮೆರೆಯುವುದು ನಾಟಕವಾಗುತ್ತದೆ. ಅದು ಬೇಕಾಗಿಯೂ ಇಲ್ಲ ಎಂಬುದನ್ನೇ ಇಲ್ಲಿ ಪ್ರತಿಪಾದಿಸಲಾಗಿದೆ. ಅಲ್ಲದೆ 'ಕೋಪಾ ಅಲ್ಲವ್ವ, ಕೋಪಾ ಅಲ್ಲ. ಯಾರನ ಹೋಗಿ ನೋಡೋದು, ಅಂತ ಜೀವಕ್ಕೆ ಬೇಜಾರ, ಮೊಕ ಅದೆ, ಮನುಷಾ ಬೇರೆ. ಆವೊತ್ತೆ ಹೋದ ನಿನ್ನಳಿಯ ನನಿಗಿದೆಲ್ಲ ಆಗಿಬಿಟ್ಟಿತ್ತು. ಈ ತಾಳಿ ಒಂದಿಟ್ಟುಕೊಂಡು ಊರಿಗೆ ಹೋಗೋಣ ಅಂತಿದ್ದೆ. ಗಂಡನ್ನ ಬಿಟ್ಟು ತಾಳಿನೇನ್ ತಂದಿ ಅಂದ ಹನುಮಂತರಾಯ. ತಗೊಲ್ಲ, ಇದನೂ ಅದೇನಾರ ಮಾಡಿಬಿಡು ' ಹೀಗೆಂದು ತಾಳಿಕಿತ್ತು ಕೊಡುವುದು ಅವಳ ಇದುತನಕದ ಸಹನೆ ಕಟ್ಟೆಯೊಡೆದು ದ್ವೇಷ ಪ್ರತೀಕಾರವಾಗಿ ತಿರುಗುತ್ತದೆ. ಅವಳ ಈ ಪ್ರತಿಭಟನೆ, ಪ್ರತಿರೋಧ ಎಲ್ಲವೂ ಅವಳ ಅನುಭವದ ನೆಲೆಯಲ್ಲೇ ಹೊರಬಂದ ಸಹಜ ನೆಲೆಯದ್ದು, ಮತ್ತು ತನ್ನನ್ನೇ ಹಿಂಸಿಸಿದ, ತಾನು ಸಹಿಸಿದ ರೀತಿಗೂ ಕರಗದ ಪುರುಷಶಾಹಿಗೆ ಅವಳು ಕೊಡುವ ಈ ಉತ್ತರದಲ್ಲಿ ಶೋಷಣೆ ಎದುರಿಸುವ, ದಮನಿಸುವ ಸಾಮರ್ಥ್ಯದ ಸಂದೇಶವಿದೆ.

ಚೆನ್ನಮ್ಮನ ಈ ನಿಲುವಿಗೆ ಮಾದವ್ವ ತಾಯ್ತನದ ನೆಲೆಯಿಂದ ಕೊಂಚ ವಿಚಲಿತಳಾಗುತ್ತಾಳೆ. ಸಮಾಧಾನ ಪಡಿಸುವ ಮೂಲಕ ಮಗಳನ್ನು ಬದಲಾಯಿಸಲು ಪ್ರಯತ್ನಿಸುತ್ತಾಳೆ. ಕೊನೆಗೆ ಅವಳೂ ಮತ್ತೆ ಹೆಂಗಪ್ಪ ಇವಳು ಬರೋವಳಲ್ಲವೆ! ಇವಳನ್ನ ಕಂದನ್ನ ಬಿಟ್ಟು ನಾನು ಬಂದು ಮಾಡೋದು ಏನು? ಎಂದು ಯೋಚಿಸುವುದು ಅಮಾನವೀಯತೆಗೆ ಅವಳು ಬೆನ್ನು ಹಾಕಿದ್ದಾಗಿದೆ. ಈ ಮೂಲಕ ಮಾನವೀಯತೆ - ಅಮಾನವೀಯತೆಯ ಸಂಘರ್ಷವನ್ನು ಮುಂದಿಟ್ಟು ಮಾನವೀಯತೆ ಗೆಲ್ಲುವಂತೆ ಹೆಣ್ಣಿನಲ್ಲಿ ಛಾತಿ ತುಂಬಲಾಗಿದೆ. ತಕ್ಕ ನಿರ್ಧಾರ ತೆಗೆದುಕೊಳ್ಳುವಂತೆ ಮಾಡಲಾಗಿದೆ.

ಸತ್ಯನಾರಾಯಣ ಮಲ್ಲಿಪಟ್ಟಣ ಅವರು ಚೆನ್ನಮ್ಮಳ ಕುರಿತಂತೆ ನಳಿನಿಯ ತಂದೆ ಕತೆಯ ಲಕ್ಷ್ಮಿಯ ನಿರ್ಧಾರದೊಂದಿಗೆ ತುಲನೆ ಮಾಡಿ, 'ಲಕ್ಷ್ಮಿ ಮೇಲು ವರ್ಗದಿಂದ ಬಂದವಳು. ಚೆನ್ನಮ್ಮ

ಕೆಳವರ್ಗದಿಂದ ಬಂದವಳು. ಆದರೆ ಬದುಕಿನಲ್ಲಿ ತಮ್ಮ ಗಂಡಂದಿರ ವಿರುದ್ಧ ನಿರ್ಧಾರ ತೆಗೆದುಕೊಳ್ಳುವುದಲ್ಲಿ ಇಬ್ಬರೂ ಒಂದೇ ನಿಲುವಿಗೆ ಬರುತ್ತಾರೆ' ಎಂದಿದ್ದಾರೆ.[೬] ಅಂದರೆ ಆ ನಿಷ್ಠುರ ತೀರ್ಮಾನಕ್ಕೆ ಆಕೆಗೆ ಬರಲು ಸಾಧ್ಯವಾದದ್ದು ಕೆಳವರ್ಗದಿಂದ ಅಥವಾ ಅವೈದಿಕ ಪರಂಪರೆಯ ಹಿನ್ನೆಲೆಯಿಂದ ಎಂದಿರುವುದರಿಂದ ಅಲ್ಲಿನ ಜೀವನ ರೀತಿ ಸ್ಪಷ್ಟವಾಗುತ್ತದೆ. ಆದರೆ ಇಲ್ಲೂ ಆಕೆ ತೀರ್ಮಾನ ತೆಗೆದಕೊಳ್ಳುವುದು ಕೊನೆಯಲ್ಲಿ. ಯಾವುದೂ ಆತುರದ ನಿರ್ಧಾರವಾಗಿರಬಾರದು ಎಂಬುದನ್ನು ಇಲ್ಲಿ ತೋರಿಸಿಕೊಡಲಾಗಿದೆ. ಇಲ್ಲಿ ತಾಳ್ಮೆಗೆ, ಸಹನೆಗೆ ಬೆಲೆ ಕೊಡಲಾಗಿದೆ. ಆದರೆ ಈ ಪ್ರತಿಭಟನೆಯನ್ನು ಆಧುನಿಕತೆಯನ್ನು ಒಪ್ಪಿಕೊಳ್ಳಬಾರದ ನೆಲೆಯನ್ನು ಪ್ರತಿಪಾದಿಸುವುದಕ್ಕಾಗಿ ಮತ್ತು ಶೀಲದ ರಕ್ಷಣೆಗಾಗಿ ಆರಂಭಿಸಿದ್ದಳು. ಆದರೆ ಆ ಬಳಿಕ ಗಂಡ ತನಗೆ ಮಾಡಿದ ಮೋಸ, ನೀಡಿದ ಹಿಂಸೆಯನ್ನು ಪ್ರತಿರೋಧಿಸುತ್ತಾಳೆ. ಮತ್ತು ಆಧುನಿಕ ಜಗತ್ತಿನಿಂದ ದೂರ ಸರಿಯುವುದಕ್ಕಾಗಿ ಆಕೆ ಹಳ್ಳಿಗೇ ಹಿಂತಿರುಗುತ್ತಾಳೆ.

ಸಹನೆಯ ಒಂದು ಮಿತಿ ಮೀರಿದಾಗ ತಮಗೆ ಮಾಡುವ ಮೋಸಕ್ಕೆ ಪ್ರತೀಕಾರ ತೋರುವ ಮನಸ್ಸು ಮಾಡಿದ್ದರಿಂದಾಗಿ ಈ ಪ್ರತಿಕ್ರಿಯೆ ನೀಡಲು ಅವರಿಂದ ಸಾಧ್ಯವಾಗಿದೆ.

ವೇಶ್ಯಾವೃತ್ತಿಯಲ್ಲಿ

ವೇಶ್ಯಾವೃತ್ತಿಯಲ್ಲಿ ತೊಡಗಿದ ಇಬ್ಬರು ಸ್ತ್ರೀಯರನ್ನು ಮಾಸ್ತಿ ತಮ್ಮ ಕತೆಗಳಲ್ಲಿ ಪರಿಚಯಿಸಿದ್ದಾರೆ. ಒಬ್ಬಳು 'ಚಂದ್ರವದನಾ' ಕತೆಯ ಚಂದ್ರವದನಾ. ಇನ್ನೊಬ್ಬಳು 'ಬೀದಿಯಲ್ಲಿ ಹೋಗುವ ನಾರಿ' ಕತೆಯ ನಾಗರತ್ನ ಸಾನಿ. ಚಂದ್ರವದನೆ ಕಲಾವಿದೆ. ವಿವಾಹವಾಗದಿದ್ದರೂ ಮಗುವನ್ನು ಪಡೆಯಬೇಕೆಂದು ಹಟ ತೊಟ್ಟವಳು. 'ಚಂದ್ರವದನೆಯನ್ನು ಅಸಹ್ಯ ಹುಟ್ಟಿಸುವ ಅನುಕಂಪದಿಂದ ಮಾಸ್ತಿ ಪರಿಚಯಿಸಿಲ್ಲ. ಹೆಣ್ಣಿನ ಸಮಸ್ಯೆ, ಅದರಲ್ಲೂ ವೇಶ್ಯೆಯ ಸಮಸ್ಯೆಯನ್ನು ಅವಳ ಮೂಲಕ ತೆರೆದಿಡುವುದೇ ಮಾಸ್ತಿಯವರ ಉದ್ದೇಶವಾಗಿದೆ. ಚಂದ್ರವದನಾ ಅತ್ಯಂತ ಸುಂದರಿಯಾಗಿದ್ದು ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿ ನಾಟಕ ಕಂಪೆನಿಗೆ ಸಾವಿರಾರು ರೂಪಾಯಿ ಲಾಭಗಳಿಸಿಕೊಡುವವಳು. ಚೆಲುವೆ. ಹಣಕ್ಕೇನೂ ಕಮ್ಮಿಯಿಲ್ಲ. ಆದರೆ ಅವಳಿಗೆ ನೆಮ್ಮದಿ ಎನ್ನುವುದು ಇಲ್ಲದಿರುವುದನ್ನು ಬೊಟ್ಟು ಮಾಡುತ್ತಾರೆ. ಚಂದ್ರವದನೆಯ ಮನಸ್ಸು, ತೊಳಲಾಟ, ನಿರ್ಧಾರಗಳೆಲ್ಲವೂ ಸ್ತ್ರೀಗಿರಬೇಕಾದ ಸ್ಥೈರ್ಯದ ಬಗೆಗೆ ಮಾತನಾಡಿಸುತ್ತದೆ. ಅದನ್ನು ಅವಳೇ ಹಾಡಿಕೊಳ್ಳುವ ಅವಳ ಕುರಿತ ಹಾಡಿನಲ್ಲಿ ಬರುವ ನಾನು ಸರ್ಪಿಣಿ ಸ್ತ್ರೀಯಾದರೇನು,ನನಗೆ ಮೋಕ್ಷವಿಲ್ಲವೇ ಎಂದು ಕೇಳಿದ್ದರ ಮಾತಿನ ಹಿಂದೆಯೇ ಅವಳ ಮನಸ್ಥಿತಿಯನ್ನು ನಾವು ಅರಿತುಕೊಳ್ಳಬೇಕು. ಅವಳ ಚಿಂತನೆಗೆ ಬವಣೆಗೆ ಖೇದ ವ್ಯಕ್ತಪಡಿಸುವುದು, ಅವಳ ವೃತ್ತಿಯ ಕುರಿತ ಅನಿವಾರ್ಯತೆಗೆ ಚಿಂತಿಸಿ ಸಮಾಜ ಅವಳನ್ನು ಕಾಣುವ ರೀತಿಯ ಬಗೆಗಿನ ಹರಿತ ವ್ಯಂಗ್ಯ ಇಲ್ಲಿದೆ.

---

೬ ಪು.೮೯ ಶ್ರೀನಿವಾಸರ ಕಥಾ ಸಾಹಿತ್ಯ: ಒಂದು ಅಧ್ಯಯನ, ಅಪ್ರಕಟಿತ ಸಂಶೋಧನ ಪ್ರಬಂಧ ಕೆ. ಸತ್ಯನಾರಾಯಣ ೧೯೮೧

ಇಂಥ ಹೆಂಗಸರ ಪಾಡೇ ಇಷ್ಟು. ತಮ್ಮ ಸುಖದ ಬೇಕುಬೇಡಗಳನ್ನೆಲ್ಲ ಬದಿಗಿಟ್ಟು ಇನ್ನೊಬ್ಬರಿಗಾಗಿಯೇ ಜೀವ ಸವೆಸುವವರು. ಚಂದ್ರವದನಾ ಕೂಡ ಅಷ್ಟೆ. ಲೇಖಕರ ಅತ್ತೆಯೂ ಇಲ್ಲಿ ಒಬ್ಬ ಮಾತೃ ಹೃದಯವಾಗಿ ಅವಳಿಗೆ ತಾಯಾಗಿ ನಿಲ್ಲುವವರು. ಸ್ವಂತ ಅಕ್ಕ ಮತ್ಸರ ತೋರಿಸುವವಳೇ. ಮಾವ ಅತ್ತೆ ಅವಳ ಹೆರಿಗೆಗೆ ಅವಕಾಶ ಕೊಡುವುದಕ್ಕಾಗಿ ದೂರದೂರಿಗೆ ಕರೆದೊಯ್ಯಲು ನೆರವಾಗುವುದು, ಸಮಾಜದ ವಿರುದ್ಧ ಅವಳ ವರ್ತನೆಯನ್ನು ಪ್ರೋತ್ಸಾಹಿಸುವುದೇ ಆಗಿದೆ. ಆದರೆ ಚಂದ್ರವದನೆ ಅಕ್ಕ ತಂಗಿಯರ ಜಗಳದ ತಾಯಾಗುವುದು ಮತ್ತು ಮಾವನ ಹಣದಾಶೆಗೆ ಕೇವಲ ಬೊಂಬೆಯಾಗಿ ಜೀವ ಸವೆಸುವುದನ್ನು ಬಯಸದವಳು. ಅವಳ ಆಶೆ ತೀರಿಸಿಕೊಳ್ಳುವುದು, ಮತ್ತು ತನಗೆ ಬೇಕಾದದ್ದನ್ನು ಪಡೆಯಬೇಕಾದದ್ದು ಅವಳ ಹಠವಾಗಿತ್ತು. ಅದನ್ನು ಸಾಧಿಸಿಯೂ ಬಿಡುತ್ತಾಳೆ. ಎಲ್ಲರೂ ಅವಳು ತಾಯಿ ಆದದ್ದನ್ನು ಮೆಚ್ಚುವುದು ಪ್ರಗತಿಪರತೆಯ ದ್ಯೋತಕವಾಗಿದೆ.

ಇಲ್ಲಿ ತಾಯಿಯಾಗುವುದು ಇನ್ನೊಬ್ಬರ ಹಿಡಿತ ದೌರ್ಜನ್ಯದಿಂದಾಗಿ ತಾಯಿಯಾಗಬಾರದು ಎಂದು ತಡೆಹಿಡಿದವರ ವಿರುದ್ಧ ಅವಳು ಸಿಡಿದು ನಿಲ್ಲುವ ಪ್ರತಿಭಟನೆಯಾಗುತ್ತದೆ. ಅವಳ ವ್ಯಕ್ತಿತ್ವವನ್ನು ಅವಳು ಸ್ಥಾಪಿಸಿಕೊಳ್ಳುತ್ತಾಳೆ.

ಸೂಳೆಯೊಬ್ಬಳು ತಾಯಿಯಾಗುವುದನ್ನು ಜನ ಒಪ್ಪಿಕೊಂಡರೆ ಅವಳನ್ನು ತಾಯಿಯಾಗಿ ಮಾತ್ರ ಕಂಡರೆ ಕೊನೆಯಲ್ಲಿ ಅವಳು ತಾಯಿಯಾದ ಉದ್ದೇಶ ಪ್ರಸ್ತುತ ಪಡಿಸಲಾಗಿದೆ. ಹಾಗಾಗಬೇಕು ಎನ್ನುವ ಮಾಸ್ತಿ ಅವರ ನಿಲುವು ಈ ಮೂಲಕ ಪ್ರತಿನಿಧಿತವಾಗಿದೆ.

ಅಕ್ಕ, ತಂಗಿ, ನಿರೂಪಕರ ಅತ್ತೆ ಈ ಮೂವರ ಭಿನ್ನ ಭಿನ್ನ ವ್ಯಕ್ತಿತ್ವ ಕತೆಯಲ್ಲಿ ಪ್ರಧಾನವಾಗಿದೆ. ಚಂದ್ರವದನಾಳ ಅಕ್ಕನ ಪ್ರತಿಭೆ, ರೂಪ ಕುಗ್ಗುತ್ತಿದ್ದಂತೆ ಚಂದ್ರವದನಾಳ ಮೇಲೆ ತೋರಿಸುವ ಪ್ರತಿಭಾ ಮಾತ್ಸರ್ಯ ಚಂದ್ರಾಳನ್ನು ಇರಿಯುವಂತೆ ಮಾಡುತ್ತದೆ. ಇಬ್ಬರೂ ಕುಡಿತದ ಚಟಕ್ಕೆ ಅಂಟಿಕೊಂಡವರೇ. ಗಳಿಕೆಯ ಆಸೆ ಮಿತಿ ಮೀರಿದ್ದ ಮಾವನ ಶೋಷಣೆ ಅವಳನ್ನು ಹಿಂಸಿಸುವುದಕ್ಕೆ ತೊಡಗುತ್ತದೆ. ನಾನು ಇಲ್ಲಿಯೇ ಇದ್ದರೆ ಅವರು ನನಗೆ ಏನಾದರೂ ಮಾಡುವುದೇ ನಿಜ. ನಾನು ಇರುವುದಿಲ್ಲ ಎಂಬ ದೃಢ ನಿಲುವು ಅವಳನ್ನು ಅವಳು ಉಳಿಸಿಕೊಳ್ಳುವುದಕ್ಕೆ ಅವಳೇ ತೆಗೆದುಕೊಳ್ಳುವ ನಿರ್ಧಾರವಾಗುತ್ತದೆ. ಹೆಣ್ಣೇ ಹೆಣ್ಣನ್ನು ಸಹಿಸಿಕೊಳ್ಳದ, ಮತ್ಸರ ಪಡುವ ರೀತಿಗೆ ಅವಳು ಸಾಕ್ಷಿಯಾಗುತ್ತಾಳೆ.

ಮಾನಸಿಕ ಹಿಂಸೆ ಕೊಡುವ ಅಕ್ಕನ ಸ್ವಭಾವಕ್ಕೆಚಂದ್ರವದನಾ ತಾಯಿಯಾಗುವ ಹಂಬಲವನ್ನು ಮಗು ಪಡೆಯುವ ಮೂಲಕ ತೀರಿಸಿ ಉತ್ತರ ಕೊಡುವುದು ಮಹತ್ತರ ಪಾತ್ರ ವಹಿಸುತ್ತದೆ. ಮಗುವನ್ನು ಉಳಿಸಿಕೊಳ್ಳುವ ತಾಯ್ತನ ದುಡಿಮೆ ಬಿಟ್ಟು ದೂರ ಹೋಗುವ ಅವಳ ತೀರ್ಮಾನ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿಬಿಡುತ್ತದೆ. ಆದ್ದರಿಂದಲೇ ಮರಳಿ ಬಂದಾಗಲೂ ಆ ಪ್ರಕ್ರಿಯೆಯನ್ನು ಒಪ್ಪಿಕೊಳ್ಳುವಂತೆ ಮಾಡಲಾಗಿದೆ.

'ಸೂಳೆಯಾದರೇನು, ಅವಳೂ ಲೋಕದ ಬೆಳವಣಿಗೆಗಾಗಿ ಆದಿಶಕ್ತಿ ಧರಿಸಿರುವ ಒಂದು ದೇಹ. ತಾಯಿ ತಾಯಿಯಂತೆ ನಡೆದುಕೊಂಡಳು' ಎಂಬಲ್ಲಿಯೇ ತಾಯ್ತನದ ಮಹತ್ವ ಪ್ರತಿನಿಧೀಕರಣಗೊಂಡಿದೆ. ಇಲ್ಲಿ ತಾಯಿಯಾಗುವ ಪ್ರಕ್ರಿಯೆ ಮಾನ್ಯವಾಗುವುದು ಸೂಳೆಯಾದ್ದರಿಂದಲೇ. ಸಮಾಜ ರಚಿಸಿದ ಕಟ್ಟುಪಾಡುಗಳನ್ನು ಚಂದ್ರವದನಾ ತನಗಾಗಿ ಒಡೆದು ಮರು ಸಮಾಜವನ್ನು ಕಟ್ಟುವ ಕೆಲಸದಲ್ಲಿ ಯಶಸ್ವಿಯಾಗುತ್ತಾಳೆ. ಆಕೆ ದುಡಿಯುವುದು ತನಗಾಗಿ, ತನ್ನನ್ನು ಮೆಚ್ಚಿದ ರಂಗಾಸಕ್ತರಿಗಾಗಿ ಎನ್ನುವುದು ಬಹಳ ಮುಖ್ಯವಾದುದಾಗುತ್ತದೆ.

ಚಂದ್ರವದನಾ ರಂಗಾಸಕ್ತರಿಗಾಗಿಯೇ ಬದುಕನ್ನು ಸವೆಸುತ್ತಲೇ ವಿವಾಹದ ಚೌಕಟ್ಟಿಗೆ ಒಳಗಾಗದೆ ತಾಯ್ತನವನ್ನು ಅನುಭವಿಸಿದ್ದು ಅವಳು ಪಡೆದ ಸ್ವಾತಂತ್ರ್ಯವಾಗಿದೆ. ತಾಯ್ತನ ಪಾಲಿಸಬೇಕಾದುದು ಹೆಣ್ಣಿನ ಕರ್ತವ್ಯವಾದುದರಿಂದಲೂ ಮಗುವನ್ನು ಪಡೆದ ಚಂದ್ರವದನಾ ಮಾಸ್ತಿಯವರಿಂದ ವಿಶೇಷ ಮಾನ್ಯತೆ ಪಡೆದಿದ್ದಾಳೆ.

ಇನ್ನೊಬ್ಬಳು ವೇಶ್ಯೆಯಾಗಿ ಬದುಕನ್ನು ಸಾಗಿಸುವವಳು 'ಬೀದಿಯಲ್ಲಿ ಹೋಗುವ ನಾರಿ' ಕತೆಯ ನಾಗರತ್ನಸಾನಿ ಚಂದ್ರವದನಾಳಿಗೆ ಹತ್ತಿರವಾಗಿ, ಆದರೆ ಅವಳಿಗಿಂತ ಭಿನ್ನವಾಗಿ ನಡೆಯುವ ಸಂಪೂರ್ಣ ವೇಶ್ಯಾವಾಟಿಕೆಯನ್ನು ಪ್ರತಿನಿಧಿಸುತ್ತಾಳೆ. ಅವಳ ಚರ್ಯೆ, ನಡವಳಿಕೆ ಎಲ್ಲವೂ ಎಲ್ಲರೆದುರಿಗೂ ಅದಕ್ಕೆ ತಕ್ಕಂತೆಯೇ ಇದೆ. ಕತೆಯಾದ್ಯಂತ ಎಲ್ಲೂ ಅವಳ ಆ ವರ್ತನೆ, ಉದ್ಯೋಗದ ಬಗೆಗೆ ಅಸಹ್ಯ ಭಾವನೆ ತಳೆಯುವುದಿಲ್ಲ ಮತ್ತು ಓದುಗರಿಗೂ ಅಂಥ ಭಾವನೆ ಮೂಡಿಸುವುದಿಲ್ಲ. ಆದರೆ ಒಮ್ಮೆ ವೇಶ್ಯೆಯಾದರೆ ಅದೇ ಬದುಕಿಗೆ ಆಕೆ ಬದ್ಧಳಾಗುವುದನ್ನು ಪ್ರತಿಪಾದಿಸಲಾಗಿದೆ.

ಶ್ರೀನಿವಾಸಯ್ಯ ಹಾಗೂ ಆತನ ಗೆಳೆಯ ಮತ್ತು ಇತರರ ವ್ಯಕ್ತಿತ್ವದ ಬಗೆಗೂ ಹೇಳಿರುವಲ್ಲಿ ವಿಭಿನ್ನ ಮನಸ್ಸುಗಳ, ಸ್ವಭಾವದ ಚಿತ್ರಣವಿದೆ. ಶ್ರೀನಿವಾಸಯ್ಯ ಮುಗ್ಧ, ಉಪಕಾರಿ. ಅವನಿಗೆ ಸ್ತ್ರೀಯರಲ್ಲಿ ಗೌರವವಿದೆ. ತಾನು ಒಳ್ಳೆಯವ. ಆದರೆ ಇತರರಿಂದ ಅವಳಿಗೆ ತೊಂದರೆಯಾಗುತ್ತದೆಂಬ ಗುಮಾನಿಯಿಂದಾಗಿ ಅವಳ ರಕ್ಷಕನಾಗಿ ನಿಲ್ಲುವಲ್ಲಿನ ಅವನ ಮನಸ್ಸು, ಇತರರು ಅವನನ್ನು ಕಾಮುಕ ದೃಷ್ಟಿಯಿಂದ ಕಾಣುವ ಪ್ರವೃತ್ತಿಗಳ ವ್ಯಂಗ್ಯಗಳ ಮುಖಾಮುಖಿ ಗಮನಾರ್ಹವಾದವುಗಳು.

ಅವನ ಸಹೃದಯತೆ ಇಲ್ಲಿ ಅವಳಿಗೆ ಆಕರ್ಷಣೆಯ ಬಿಂದುವಾಗಿದ್ದರೆ ಅವನಲ್ಲೂ ಕಾಮ ಪೂರೈಸಿಕೊಳ್ಳುವ ಮತ್ತು ಅದಕ್ಕೆ ಶುಶ್ರೂಷೆಯ ನೆವದ ಲೇಪನ ಮಾಡಿ ಅದಕ್ಕೆ ಅನುವು ಮಾಡಿಕೊಡಿ ಎಂದು ಭಿನ್ನವಿಸುವುದು ವೇಶ್ಯಾವಾಟಿಕೆಯ ವ್ಯಾಪಾರ ಬುದ್ಧಿಯಿಂದ ಮಾತ್ರವೇ ಅಲ್ಲ. ಅವನ ಒಳ್ಳೆಯತನದಿಂದ ತನಗೆ ತೋರಿದ ಮಾನವೀಯತೆಗೆ ಪ್ರತಿ ಉತ್ತರ. ಹಣ ಬಯಸುವುದಿಲ್ಲ. ತನ್ನಿಂದ ಪ್ರಯೋಜನವಾಗಬಲ್ಲ ಯಾವುದನ್ನೇ ಆಗಲಿ ಆತ ಬಯಸಿದರೆ ಆಕೆ ಕೊಡಲು ಸಿದ್ಧ.

ತನ್ನ ತಂದೆಗೇ ಜನಿಸಿದ ಅವಳನ್ನು ತಂಗಿಯೆಂದೇ ಕರೆಯುವುದು, ಅವನ ನಡವಳಿಕೆ ಕೊಂಚಕಾಲಕ್ಕೆ ಅವಳ ಮನಸ್ಸಿನ ನಿಲುವನ್ನು ಬದಲಾಯಿಸುತ್ತದೆ. ಅವನ ಕಾಲಿಗೆರಗಬೇಕೆಂದು ಮನಸ್ಸು ಮಾಡಿದ್ದ

ಅವಳು ತನ್ನ ಗೆಳೆಯ ಬಂದಾಗ ಹಿಂದಿನ ಪ್ರವೃತ್ತಿಗೇ ಒಪ್ಪಿಕೊಳ್ಳುವುದು ಅವಳು ಹಾಗೆ ಬದುಕಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತದೆ. ಈ ಕುರಿತು ಎ.ಎನ್.ಮೂರ್ತಿರಾಯರು 'ನಾಗರತ್ನ ಸಾನಿಯ ಅನುಭವ ಭಂಡಾರಕ್ಕೆ ಅಂದು ಹೊಸ ಅಂಶವೊಂದು ಸೇರಿತು. ಆದರೂ ಅವಳು ವೇಶ್ಯೆಯಾಗಿಯೇ ಉಳಿದಳೆಂಬ ವಿಷಯದಲ್ಲಿ ಸಂದೇಹವಿಲ್ಲ. ಅವಳ ಜೀವನದಲ್ಲಿ ಮಾರ್ಪಾಟಾದರೆ ಎಷ್ಟು ಚೆನ್ನ ಎನ್ನುವುದು ಬೇರೆ ಮಾತು. ಸಾಮಾನ್ಯವಾಗಿ ಪ್ರಪಂಚದಲ್ಲಿ ಎನು ನಡೆಯುತ್ತದೆ ಎನ್ನುವುದನ್ನು ಮಾಸ್ತಿಯವರು ಮರೆತಿಲ್ಲ'[೭] ಎಂದು ವಿಮರ್ಶಿಸಿದ್ದಾರೆ.

ಮಾಸ್ತಿ ಇಲ್ಲಿ ಹೇಳ ಹೊರಟಿರುವುದು ವೇಶ್ಯೆಯರ ಬದುಕಿನ ರೀತಿ ಮತ್ತು ಅದಕ್ಕೆ ಅನಿವಾರ್ಯವಾಗಿ ಅಂಟಿಕೊಳ್ಳಬೇಕಾದ ಸ್ಥಿತಿಯನ್ನು. ಮತ್ತು ಹಾಗಿದ್ದಾಗಲೂ ಕೇವಲ ಅದರೊಳಗೆ ಗಿರಕಿ ಹೊಡೆಯುತ್ತ ಎಲ್ಲವನ್ನೂ ಮರೆಯುವ ವ್ಯಕ್ತಿತ್ವ ಅಲ್ಲಿನ ನಾಯಕಿಯದಲ್ಲ. ಅವಳಿಲ್ಲಿ ಅಸಹಾಯಕತೆಯನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಬದುಕಿನ ಅನಿವಾರ್ಯತೆಗೆ ತನ್ನದೇ ಆದ ಸ್ಥೈರ್ಯಧೈರ್ಯ ಪಡೆಯುತ್ತಾಳೆ. ತನ್ನ ಬದುಕು ಎಲ್ಲರಂತಿಲ್ಲವೆಂದು ಹಪಹಪಿಸುತ್ತ ಕೂರುವುದಿಲ್ಲ. ಆ ಮೂಲಕ ತನ್ನ ಬದುಕಿನ ದಾರಿಯನ್ನು ಅವಳು ಮುಂದುವರಿಸಿಕೊಂಡು ಹೋಗುತ್ತಾಳೆ. ಆದರೆ ಈ ದಂಧೆಯನ್ನು ಅವಳ ಬದುಕಿನಿಂದ ದೂರ ಮಾಡಿ ಹಸನಾದ ಬದುಕನ್ನು ಕೊಡಿಸುವಲ್ಲಿ ಮಾಸ್ತಿ ಕಿಂಚಿತ್ತೂ ಪ್ರಯತ್ನಿಸುವುದಿಲ್ಲ.

ಪ್ರತಿರೋಧದ ಸ್ಥಿತಿಯಲ್ಲಿ

ಮಾಸ್ತಿಕತೆಗಳ ಸ್ತ್ರೀಯರು ತಮಗೆ ಒದಗಿದ ಅನ್ಯಾಯಗಳಿಗೆ ಪ್ರತಿರೋಧ ತೋರುತ್ತಾರೆ. ಅದನ್ನು ಸಹಿಸಿಕೊಂಡು ಬಾಳುವುದಕ್ಕೆ ಅವರು ಸಿದ್ಧರಿರುವುದಿಲ್ಲ. ಅದು ಒಂದೋ ತಮ್ಮನ್ನು ಕೊಂದುಕೊಂಡು ಇಲ್ಲವೇ ಅದನ್ನು ವಿರೋಧಿಸಿ ನಿಲ್ಲುತ್ತಾರೆ. ಈ ನಿಟ್ಟಿನಲ್ಲಿ ಚಿಕ್ಕವ್ವ, ಪುತ್ರಕಾಮೇಷ್ಟಿ, ನಳಿನಿಯ ತಂದೆ ಕತೆಗಳ ಸ್ತ್ರೀಯರನ್ನು ಅಭ್ಯಸಿಸಬಹುದಾಗಿದೆ.

ಚಿಕ್ಕವ್ವ ಕತೆಯ 'ಚಿಕ್ಕವ್ವ' ವಂಚನೆಯ ಮಾರ್ಗಕ್ಕೆ ಉತ್ತರ ಕೊಡುತ್ತಾಳೆ. ಆಕೆ ತಾಯಿಯಾಗಿ ವ್ಯವಸ್ಥೆಯನ್ನು ಪಾಲಿಸುವುದರೊಂದಿಗೆ ವ್ಯವಸ್ಥೆಯ ಸ್ವಾರ್ಥವನ್ನು ಒಡೆಯುವವಳೂ ಆಗುತ್ತಾಳೆ. ೪೫ ವರ್ಷ ವಯಸ್ಸಾದ ಮುದುಕ ಅತ್ಯಂತ ಕಿರು ಹರೆಯದವಳನ್ನು ವಿವಾಹವಾಗುವುದಕ್ಕೆ ತೋರುವ ವಿರೋಧ ಪ್ರತಿಕ್ರಿಯೆಯಾಗಿ ಚಿಕ್ಕವ್ವ ನಡೆದುಕೊಳ್ಳುತ್ತಾಳೆ. ಏಧುರ ಮಗನಿರುವಾಗಲೂ ತಂದೆಯಾದವ ತಾಯಿಯ ಒತ್ತಾಯಕ್ಕೆ ಮಣಿದು ವಿವಾಹವಾಗುವುದು, ಇಲ್ಲಿ ಪ್ರತಿರೋಧಕ್ಕೊಳಪಡುವುದಿಲ್ಲ. ತಾಯಿ ಒತ್ತಾಯಿಸುವುದೂ ಇಲ್ಲಿ ಅಮಾನ್ಯವಾಗುವುದಿಲ್ಲ. ಇಲ್ಲಿ

೭ ಪ್ರ.೧೪, ಶ್ರೀ ಮಾಸ್ತಿಯವರ ಕಥೆಗಳು ಎ.ಎನ್.ಮೂರ್ತಿರಾವ್ ೧೯೯೯

ಪ್ರಶ್ನಾರ್ಹವಾಗುವುದು ನಲವತ್ತೈದು ವರ್ಷ ದಾಟಿದ ವೃದ್ಧಾಪ್ಯಕ್ಕೆ ಕಾಲಿಡುವ ವ್ಯಕ್ತಿ ಮಗಳ ಪ್ರಾಯದವಳನ್ನು ಎರಡನೇ ಹೆಂಡತಿಯಾಗಿ ಪಡೆದ ಆರು ವರ್ಷ ಪ್ರಾಯದ ಮಗುವನ್ನು ನೋಡಿಕೊಳ್ಳುವ ನೆವ ಹೂಡುವುದು. ಹಿರಿಯ ಮಗನಿರುವುದು ಗೊತ್ತೇ ಇದ್ದಿರದ ಹೊಸ ಪತ್ನಿ ಮದುವೆಯಾದ ದಿನವೇ ಅವನನ್ನು ಕಂಡು ನನಗೆ ಮಾಡಿದ ಅನ್ಯಾಯವನ್ನು ಗುರುತಿಸುತ್ತಾಳೆ. ಒಳಗೊಳಗೇ ಅದಕ್ಕೆ ಬೇಕಾದ ರೀತಿಯಲ್ಲಿ ಪ್ರತೀಕಾರ ತೋರುವ ರೀತಿಗಳನ್ನು ಲೆಕ್ಕಾಚಾರ ಹಾಕಿಕೊಳ್ಳುತ್ತಾಳೆ. ಮಗುವಿಗೆ ಸಂಪೂರ್ಣ ತಾಯಿಯಾಗಿ ಬಿಡುವ ಆಕೆ ಇಲ್ಲಿ ಗಂಡನಾದನೊಂದಿಗೆ ಸಂಬಂಧಕ್ಕೆ ಇಂಬುಕೊಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಅವನ ಕೋರಿಕೆಗೆ ಮಗುವಿನ ನೆವ ಹೂಡಿ ದೂರಸರಿಯುವುದು, ಆ ನೆವ ಹೂಡಿದ್ದಕ್ಕಾಗಿ ಹೇಳುವ ಛಾಟಿ ಏಟಿನ ಪ್ರತಿ ಉತ್ತರ.

ದೈಹಿಕ ಸಂಬಂಧದ ಅವನ ಕೋರಿಕೆಗೆ ಮಗುವಿನ ನೆವನ ಹೂಡಿ ದೂರ ಸರಿಯುವುದು ಅದನ್ನು ವಿರೋಧಿಸಿ ಪ್ರಶ್ನಿಸುವ ಮಾತಿಗೆ ಅವಳು ಕೊಡುವ ಛಾಟಿ ಏಟಿನ ಪ್ರತ್ಯುತ್ತರ, 'ಹಸು ಮಗು ಅಳದೆ ನನಗೇನು ದಿನ ಹೋಗಿರೋದು, ನಾನು ಪುಣ್ಯ ಮಾಡಿದ್ದರೆ ನಿಮ್ಮ ಮಗಳಾಗಿ ಹುಟ್ಟುತಾ ಇದ್ದೆ. ನಿಮ್ಮ ಮನೆಯಲ್ಲಿ ಮಗ ಇದ್ದಾನಲ್ಲ ಅವನ ತಂಗಿಯಾಗಿ ಇರ್ತಾ ಇದ್ದೆ. ಬೇರೆ ಮನೆ ಮಗು, ಕೈಹಿಡಿದು ಬಂದೆ. ತಿಳಿಯದವಳು ಅಂತ ಸಹಿಸಿಕೊಳ್ಳಿ' ಎನ್ನುವುದು,

'ನಾನು ಮನೆಗೆ ಬಂದದ್ದು ಮಗುವನ್ನು ನೋಡಿಕೊಳ್ಳಲಿಕ್ಕೆ ಅಂತ. ಅವನ್ನ ಅಜ್ಜಿ ಹತ್ತಿರ ಮಲಗಿಸೋದಾದರೆ ನನ್ನಾಕೆ ಕರೆತರಬೇಕಾಗಿತ್ತು. ಮದುವೆ ಮಾತನ್ನಾಡೋದಕ್ಕೆ ಬಂದಾಗ ನೀವು ಏನು ಹೇಳಿದಿರಿ, ಒಂದು ಸಣ್ಣ ಮಗು ಇದೆ, ಅದಕ್ಕೆ ದಿಕ್ಕಿಲ್ಲ, ಅಂತ ಅಲ್ಲವೇ. ಸಣ್ಣ ಮಗುವಿಗೆ ದಿಕ್ಕಾಗಿ ನಾನು ಬಂದೆ. ನಾನು ಅದನ್ನು ದೊಡ್ಡದು ಮಾಡ್ತೇನೆ. ನಿಮಗೂ ಅದೇ ಆಶೆ. ಇಬ್ಬರೂ ಅದನ್ನು ಸಾಕೋಣ' ಎಂದು ಹೇಳುವುದು,

'ನಾನು ಏನು ಆಡ್ತೇನೇಯೋ ನನಗೆ ತಿಳೀಲಿಲ್ಲ. ಆಡಬಾರದ ಆಟ ಯಾವುದು ನಾನು ಆಡಿದ್ದು, ನೀವು ದೊಡ್ಡವರು. ತಿಳಿಯದ ಹುಡುಗೀನ ಕಟ್ಟಿಕೊಂಡು ಬಾಳಿದ ಹೆಂಡತಿ ಹಾಗೆ ನಡೆ ಎಂದರೆ ನಾನು ಹ್ಯಾಗೆ ನಡೀಲಿ. ನಾನು ಏನು ಕಂಡೆ. ಆಡುವ ಹುಡುಗಿ. ನಿಮ್ಮೊಂದಿಗೇ ಹಸೆಮೇಲೆ ಕೂತು ಬಾಳುವ ಹೆಂಗಸಾದೆ. ನನಗೆ ಆರು ವರ್ಷದ ಮಗ, ನೋಡಿ. ನನಗಿಂತ ನಾಲ್ಕು ವರ್ಷ ದೊಡ್ಡವನಾದ ಮಗ ಒಬ್ಬವನಿದ್ದಾನೆ. ನಾನು ಹುಡುಗಿಯೂ ಅಲ್ಲ, ಮುದುಕಿಯೂ ಅಲ್ಲ. ನಾನೊಂದು ಇಬ್ಬಂದಿ. ಕೈ ಹಿಡಿದೋರು ನೀವು ನನ್ನ ಮೇಲೆ ಕೋಪ ಮಾಡಬೇಡಿ. ನಿಮ್ಮ ಮಗಳೋ, ನಿಮ್ಮ ಸೊಸೆಯೋ ಅನ್ನೊ ಹಾಗೆ ಮರುಕದಿಂದ ನೋಡಿಕೊಳ್ಳಿ' ಎನ್ನುವುದು ಅಂಥ ಪ್ರತಿಕ್ರಿಯೆಗೆ ತೋರುವ ವಿರೋಧವಾಗಿ ಕಾಣಿಸುತ್ತದೆ. ಈ ಪ್ರಕ್ರಿಯೆ ಅರ್ಥವಾಗಿಸಿಕೊಳ್ಳುವುದೇ ಬೇರೆ ತೆರನಲ್ಲಿ. ಅದು ಸತ್ವ ಪರೀಕ್ಷೆಯೂ ಆಗುತ್ತದೆ. ಅಪ್ಪನ ಆಣತಿಯಂತೆಯೇ ಮಗ ಅವಳ ಕೋಣೆಗೆ ಬರುವುದು, ಅವಳ ಅಸಮ್ಮತಿಗೆ , ತಾನು ತಾಯಿಯೇ ಎನ್ನುವುದನ್ನು ಜ್ಞಾಪಿಸುವುದು ಪ್ರಜ್ಞಾವಂತಿಕೆಯಿಂದಲೇ.

‘ಹೋಗಿ, ಹೋಗಿ. ಯಾಕೆ ಹೋಗೋದು ಅಣ್ಣಯ್ಯನ ಅಟ್ಟಿದೆಯಲ್ಲಾ ನಾ ಬರಲಿ ಅಂತ ಅಷ್ಟೇ, ತಾಯಿ ಮಗನ್ನ ಹೋಗಿ, ನಡೀರಿ ಅಂತಾರೋ, ನನ್ನ ಮಗ ಅಂತಲೇ ಎಣಿಸೋದಾದರೆ ಹೋಗು, ಬಾ ಎನ್ನಬೇಕು’ , ‘ನಾನು ಏನು ಅತಿ ಮಾಡಿದೆ? ನೀನು ಯಾಕೆ ಸಹಿಸಿಕೊಳ್ಳಬೇಕು? ಯಾಕೆ ಇದೆಲ್ಲ ಮಾತು? ನೀನು ಈ ಮನೆಗೆ ಹೆಜ್ಜೆ ಇಡುವ ಹೊತ್ತಿನಲ್ಲಿ ನನ್ನ ನೋಡಿದೆ. ಕಣ್ಣು ತಗ್ಗಿಸಿದೆ. ಅಣ್ಣಯ್ಯ ತಾಳಿ ಕಟ್ಟಿದ್ದು ನನಗಾಗಿ ಅಂತ ಇಟ್ಟುಕೋ. ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ. ನನ್ನ ಮಾತು ಕೇಳು’ ಎಂದು, ‘ನಿನ್ನೆ ಅಜ್ಜಿ ಹತ್ತಿರ ಹೇಳ್ತಾ ಇದ್ದರು. ಆ ಹೆಂಗಸನ್ನು ತಂದದ್ದಾಯಿತು. ಸೊಸೆ ಮಾಡಿಕೊಳ್ಳದೇ ನಾನೇ ಮದುವೆಯಾದೆ ಅಂತ ಅವಳಿಗೆ ಕೋಪ ಅಂತ ಕಾಣತ್ತೆ. ಕೆಟ್ಟ ಗಳಿಗೇಲಿ ಸಂಬಂಧ ಮಾಡಿದ್ದಾಯಿತು ಅಂದರು. ನಾನು ಇಲ್ಲಿಗೆ ಬರುವುದು ಅವರಿಗೆ ಗೊತ್ತು. ನೀವು ಸುಖವಾಗಿರಿ ಅಂತ ಬಾಯಲ್ಲಿ ಒಂದು ಹೇಳಲಿಲ್ಲ ಅಷ್ಟೇ’ ಎನ್ನುವುದು ಅವಳನ್ನು ತಪ್ಪಾಗಿಯೇ ತಿಳಿದುಕೊಂಡದ್ದರಿಂದಾಗಿ. ಜೊತೆಗೆ ಅಜ್ಜಿ ಕೂಡ ಚಿಕ್ಕವ್ವಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿಲ್ಲ. ಇದು ವ್ಯವಸ್ಥೆಯೆಂಬುದನ್ನೂ ಮಾಸ್ತಿ ಪರಿಚಯಿಸಿದ್ದಾರೆ. ಆ ವ್ಯವಸ್ಥೆಯಲ್ಲಿ ಶೀಲಕ್ಕಿರುವ ಪ್ರಾಧಾನ್ಯವನ್ನು ಉಳಿಸುವುದಕ್ಕೆ ಹೆಣ್ಣು ಪ್ರಯತ್ನಿಸುತ್ತಾಳೆ. ಹಾಗಾಗಿ ನೆಮ್ಮದಿಗೆ ಅಡ್ಡಿಯಾದ ವರ್ತನೆಯನ್ನು ವಿರೋಧಿಸುತ್ತಾಳೆ. ‘ಮನೆ ಮಗ ಕೆಟ್ಟ ಮಾತು ಆಡುವುದು ಬೇಡ. ನಾನು ತಾಯಿ ಅಂತ ಅನ್ನೋದು ಜ್ಞಾಪಕ ಇರಲಿ. ಈಗ ನಡೆಯಿರಿ ಆಚೆಗೆ. ಇದು ಯಾಕ್ಕೆ ನನ್ನ ಪ್ರಾಣ ತೆಗೀತೀರಿ? ಒಳ್ಳೆ ಮಾತಿನಲ್ಲಿ ದೂರ ಇರಿ. ಸೈರಿಸಿಕೊಂಡಿದ್ದೇನೆ ಅಂತ ಅತಿ ಮಾಡಬೇಡಿ’ ಎನ್ನುವಲ್ಲಿ ಅವಳು ಅನುಭವಿಸುತ್ತಿರುವ ಮನೋ ಹಿಂಸೆಯ ಹಾಗೂ ತಳೆದಿರುವ ಸಹನೆಯ ವೈಪರೀತ್ಯ ತೆರೆದುಕೊಂಡಿದೆ. ಪುರುಷ ಒಡೆತನ ನೀಡುವ ಕಿರುಕುಳವನ್ನು ಆಕೆ ಶೀಲ ಕಾಯ್ದುಕೊಳ್ಳುವ ನೆಲೆಯಲ್ಲಿಯೇ ವಿರೋಧಿಸುತ್ತಾಳೆ. ದನಿ ಎತ್ತಿ, ‘ನಡೀರ್ರಿ, ಊಂ ನಡೀರಿ’ ಎಂದು ಗದರುವ ಆಕೆಯ ಒಟ್ಟೂ ನಿಲುವು, ‘ಯಾರು ಏನು ಹೇಳುವುದು, ನಾನು ಏನು ಹೇಳುವುದು? ಇದೆಲ್ಲ ಯಾಕೆ ನಮಗೆ ಮಾತು? ಅವರವರಂತೆ ಅವರವರಿರಬೇಕು’ ಅನ್ನುವಲ್ಲಿ ಸ್ಪಷ್ಟವಾಗುತ್ತದೆ. ಆದರೆ ತನಗಿಷ್ಟವಿಲ್ಲದ ಪ್ರಕ್ರಿಯೆಗೆ ಒತ್ತಡ ಹೆಚ್ಚಿದಾಗ ಸೆಟೆದು ನಿಂತರೂ ಅದನ್ನು ಪ್ರತಿಭಟಿಸಿ ಗೆಲ್ಲಲಾದ ಪುರುಷ ಪ್ರಧಾನ ಸಮಾಜದಲ್ಲಿ ಅವಳಿರುವುದರಿಂದ ಅನಿವಾರ್ಯವಾಗಿ ತನ್ನನ್ನು ಕೊಂದುಕೊಳ್ಳುತ್ತಾಳೆ. ಅಂದರೆ ಶೀಲಕ್ಕೆ ಕುತ್ತು ಬಂದಾಗ ಅದಕ್ಕೆ ಕೊರಳು ಕೊಡಬಾರದು. ಬದಲು ಜೀವವನ್ನಾದರೂ ಬಲಿ ಕೊಡಬೇಕೆಂಬುದನ್ನು ಪ್ರತಿಪಾದಿಸಲಾಗಿದೆ.

‘ಪುತ್ರಕಾಮೇಷ್ಟಿ’ ಕತೆಯಲ್ಲಿ ಮಕ್ಕಳಾಗಲಿಲ್ಲ ಎಂಬ ಉದ್ದೇಶದಿಂದ ಎಲ್ಲರ ಒತ್ತಾಯಕ್ಕೆ ಮಣಿದು ಮುಪ್ಪಿನ ಹಾದಿ ಹಿಡಿದಿದ್ದ ಶಾಮಣ್ಣ ಮೂರನೇ ಮದುವೆ ಆಗುವ ತೀರ್ಮಾನಕ್ಕೆ ಬರುವುದು ಸೀತಮ್ಮ ಹಾಗೂ ಮೊದಲಿನ ಪತ್ನಿ ಮಗಳಿಗೆ ಮಾಡಿದ ವಂಚನೆಯೂ ಆಗುತ್ತದೆ. ಮಕ್ಕಳಾಗದೇ ಹೋದಾಗ ತಪಸ್ವಿಯ ಬಳಿಗೆ ಹೋಗಿ ಅವನ ಸೇವೆ ಮಾಡಿದರೆ ಗಂಡು ಸಂತಾನ ಪ್ರಾಪ್ತಿಯಾಗುತ್ತದೆ ಎನ್ನುವ ನಂಬಿಕೆ ಹಾಗೂ ಅದರ ಹಿಂದಿನ ಸತ್ಯಾಸತ್ಯತೆ, ಡಾಂಭಿಕ ಮುಖವಾಡಗಳನ್ನು ಇಲ್ಲಿ

ಬಯಲುಗೊಳಿಸಲಾಗಿದೆ. ಅದನ್ನು ಬಯಲಾಗಿಸುವಲ್ಲಿ ಸೀತಮ್ಮನ ಸೂಕ್ಷ್ಮಮತಿತ್ವ, ಜಾಗರೂಕತೆ ಕೆಲಸ ಮಾಡಿದೆ. ಮಕ್ಕಳಾಗದ ಹೆಣ್ಣನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಮೋಸದ ಜಾಲವನ್ನು ಬಣ್ಣಗೆಡಿಸಲಾಗಿದೆ. ಮೋಸಕ್ಕೆ ಹೆಣ್ಣೊಬ್ಬಳನ್ನು ಬಲಿಯಾಗಿಸುವ ಪರಿಗೆ ಈ ಮೂಲಕ ಇಲ್ಲಿ ಪ್ರಖರ ವಿರೋಧ ತೋರಲಾಗಿದೆ. ಅದು ಶೀಲವನ್ನು ಉಳಿಸಿಕೊಳ್ಳುವ ಹಾಗೂ ಪಾತಿವ್ರತ್ಯ ಪಾಲಿಸುವ ಮೌಲ್ಯದ ಪ್ರತಿನಿಧೀಕರಣವೂ ಆಗಿದೆ.

ಗಂಡಸಿನ ಮೋಸ, ದಗಲ್ಬಾಜಿತನಗಳನ್ನು ಮುಂದಿಡುತ್ತಾ ಹೆಣ್ಣು ಅದಕ್ಕೆ ಆಹುತಿ ಆಗುವುದನ್ನು ತಪ್ಪಿಸಲಾಗಿದೆ. ಹೆಣ್ಣಿಗೆ ಇಲ್ಲಿ ಮುಂದಾಲೋಚನೆ ಇದೆ, ಎಚ್ಚರವಿದೆ. ಹಾಗಾಗಿಯೇ ಸೀತಮ್ಮ ಸ್ವಾಮಿಯ ಸ್ವಾಮಿತ್ವವನ್ನು ಮೊದಲೇ ನಂಬಿರಲಿಲ್ಲ. ಅವನದು ಕಪಟತನವಿದ್ದರೂ ಇರಬಹುದೆಂಬ ಶಂಕೆ ಇರಿಸಿಕೊಂಡಿದ್ದಳು. ಗಂಡ ಅವನನ್ನು ನಂಬಿ ಬಿಡುವುದು ತಮ್ಮ ಸ್ವಾರ್ಥಕ್ಕೆ ಏನೇ ಮಾಡಿದರೂ ಅದು ಸರಿ ಎಂದು ತೀರ್ಮಾನಿಸಿ ಸೀತಮ್ಮನನ್ನು ಬಲಿಗೊಡ ಹೊರಡುತ್ತಾನೆ. ಅವಳ ಮೈಸಿರಿಯನ್ನುಅನುಭವಿಸಿ ತಾನು ಸುಖ ಪಡುವುದು ಇಂಥವರ ದುರುದ್ದೇಶವೂ ಆಗಿರುತ್ತದೆ. ತಾಯಿ ಎಂದೇ ಸ್ತ್ರೀಯರನ್ನು ಗೌರವದಿಂದ ಕರೆಯುವುದು ಅವರ ನಾಟಕವೇ. ಸೀತಮ್ಮ ಸ್ವಾಮಿಯ ಎಲ್ಲಾ ನಡವಳಿಕೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಅವರ ನೇರ ದೃಷ್ಟಿಯನ್ನು ಆಕ್ಷೇಪಿಸುತ್ತಾಳೆ. ಅವರ ಸ್ಪರ್ಶವನ್ನು ತಡೆದು, ಪ್ರಶ್ನಿಸಿ, ಪ್ರತಿಭಟಿಸಿ ಅಲ್ಲಿಂದ ಹೊರ ಬರುತ್ತಾಳೆ. ಹೆಣ್ಣಿಗೆ ಮಾಡುವ ಮೋಸ, ವಂಚನೆಗಳನ್ನು ಅವಳು ಇಲ್ಲಿ ತಡೆಯುತ್ತಾಳೆ. ಬಹುಶಃ ಅವಳ ಸಂದೇಹದ ನಡುವೆ ನಂಬಿಕೆಯ ನಟನೆ ಮಾಡುವ ಮೋಸಗಾರಿಕಾ ಪ್ರಪಂಚದ ಬಗೆಗೆ ಅವಳು ಎಚ್ಚರಿಕೆ ವಹಿಸಿದ್ದಾಳೆ. ಏನೇನೋ ಮಂತ್ರ ತಂತ್ರದ ನೆಪದಲ್ಲಿ ಪತ್ನಿಯನ್ನೇ ಜಪಕ್ಕೆ ಕೂರಿಸುವುದು, ಅವಳೊಬ್ಬಳೇ ಒಳಗಿರಬೇಕೆಂದು ಒಪ್ಪಿಸುವುದು, ಸನ್ಯಾಸಿ ಅವಳನ್ನು ಎವೆ ಇಕ್ಕದೆ ನೋಡುವುದು, ಅವಳಿಗೆ ಇರಿಸುಮುರಿಸು ಉಂಟು ಮಾಡುತ್ತದೆ. ಇದು ಅಂಥ ವರ್ತನೆಯನ್ನು ಸಹಿಸದಿರುವುದನ್ನು ತೋರಿಸುತ್ತದೆ. ಹೆಣ್ಣಿಗೆ ಮಾಡುವ ಮೋಸ ವಂಚನೆಗಳನ್ನು ಸೀತಮ್ಮ ಇಲ್ಲಿ ತಡೆಯುತ್ತಾಳೆ. ಸ್ವಾಮಿಯ ಮೋಸದ ಹಿಂದಿನ ಜಾಲ, ದುರುದ್ದೇಶದ ಹೊಳಹು ದಾಖಲಾಗುವುದು ಹೀಗೆ. 'ಸಾಮಾನ್ಯವಾಗಿ ನಾವು ಊರಿನಲ್ಲಿ ಇರುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ, ತಮ್ಮ ಗ್ರಾಮ ಈ ಊರಿನಷ್ಟು ದೊಡ್ಡದಲ್ಲವೆಂದು ತಿಳಿಯುತ್ತೇವೆ. ನಮಗೆ ಮುಖ್ಯವಾಗಿ ಜನ ಬಂದು ಹೋಗುವುದು ಬಹಳವಾಗಬಾರದು. ನಿಮ್ಮಷ್ಟಕ್ಕೆ ಹೇಳುವುದಾದರೆ, ನಾವಿರುವಲ್ಲಿ ಹೆಂಗಸರು ಬರುವುದು ಹೋಗುವುದು ಕ್ರಮಕ್ಕೆ ವಿರೋಧ. ಅದಕ್ಕಾಗಿ ಮಂಟಪ, ಗುಹೆ ಎಂದು ಯೋಚಿಸುತ್ತೇವೆ.' ಆಮೇಲೆ ಆ ತಾಯಿ ದಿನವೂ ಬಂದು ವಿಧ್ಯುಕ್ತ ರೀತಿಯಲ್ಲಿ ಪೂಜೆ ನಡೆಸಲಿ ಎನ್ನುವುದು, ಬನ್ನಿ ತಾಯಿ ಎಂದು ಸೀತಮ್ಮಳನ್ನು ಒಬ್ಬಳನ್ನೇ ಉಪಾಯದಿಂದ ಬರುವಂತೆ ಮಾಡಿ ಕರೆಯುವುದು, ಸುಮಾರು ೨೫ ದಿನಗಳವರೆಗೆ ಗಂಭೀರ ಮುಖವಾಡ ಧರಿಸಿದ್ದ ಸನ್ಯಾಸಿ ಸುಮ್ಮನೆ ನೋಡುತ್ತಾ ಕುಳಿತಿರುವುದು ಇಲ್ಲಿ ತಮ್ಮ ದಾಹದ ತೀರಿಕೆಗೆ ಮಾರು ವೇಷ ಹಾಕಿಕೊಂಡು

ವೇದಾಂತ ನಾಲ್ಕು ಮಾತುಗಳನ್ನಾಡುವ ಸೋಗಲಾಡಿತನದ ವಿಧಿ ವಿಧಾನಗಳನ್ನು ಇಲ್ಲಿ ಬಿತ್ತರಗೊಳಿಸಲಾಗಿದೆ. ತಮಗೆ ಬೇಕಾದಂತೆ ಕಾಮದ ಸೊಕ್ಕು ಇಳಿಸಲು ಬಳಸುವ ದಾರಿಯನ್ನು ಈ ಕತೆ ಮುಂದಿಡುತ್ತದೆ. ಗಂಡಿನ ಮೋಸದ ಬಲೆಗೆ ಹೆಣ್ಣು ಸಿಕ್ಕಿ ಹಾಕಿಕೊಳ್ಳದಂತೆ ಜಾಗ್ರತೆ ವಹಿಸಿಕೊಳ್ಳಲಾಗಿದೆ.

'ಮಕ್ಕಳಾಗದೆ ಇದ್ದರೆ ಬೇಡ ನಾನು ಈ ಜಪ ಮಾಡುವುದಿಲ್ಲ' ಎನ್ನುವುದು, 'ನಿಮ್ಮಸ್ವಾಮಿಗಳು ನಡೆದುಕೊಳ್ಳುವ ರೀತಿ ಚೆನ್ನಾಗಿಲ್ಲ,' 'ನಾನು ಜಪ ಮಾಡುತ್ತಾ ಇದ್ದರೆ ಒಳಗೇನೇ ಕುಳಿತು ಸುಮ್ಮನೆ ನನ್ನ ಕಡೆ ನೋಡುತ್ತಿದ್ದರು. ಈ ಹೊತ್ತು. ನಿನ್ನೆಯೂ ಹೀಗೆಯೇ ಮಾಡಿದರು. ಋಷಿಯಾಗಲಿ ಯಾರಾಗಲಿ, ಇದು ಒಳ್ಳೆಯದೇನು' ಎಂದು ಗಂಡನೊಂದಿಗೆ ನೇರವಾಗಿ ಹೇಳುವುದು ಗಂಡನ ದುರುದ್ದೇಶ ತಿಳಿಯದೆ. ಆದರೆ ಸ್ವತಃ ಗಂಡನೇ ಮಕ್ಕಳಾಗುವುದಾದರೆ ಹೇಗಾದರೂ ಆಗಲಿ ಎಂದು ಸನ್ಯಾಸಿಯ ಕೈಗೆ ಹೆಂಡತಿಯನ್ನು ಒಪ್ಪಿಸುವುದು ಹೆಣ್ಣಿನ ಮುಗ್ಧತೆಯನ್ನು ಬಲಿಕೊಡುವ ತೆರನ ಇನ್ನೊಂದು ಮುಖವಾಗಿದೆ. ಸನ್ಯಾಸಿಯ ನಾನಾ ವಿಧದ ಕೋರಿಕೆಗೆ ಆಕೆ ಸೆಟೆದು ನಿಲ್ಲುತ್ತಾಳೆ. ಹಾಗೂ ಪ್ರತ್ಯುತ್ತರ ಕೊಡುತ್ತಾಳೆ. ಇದು ಆಕೆ ಸಾಧ್ವಿತನವನ್ನು ಮೆರೆಸುವುದಾಗಿದೆ. ಸನ್ಯಾಸಿಯ ನಾನಾ ಥರದ ಮನವೊಲಿಸುವಿಕೆಯ ಮಾತು, ಚಿಂತನೆಗಳಿಗೆ ಕೊರಳೊಡ್ಡದ ಸೀತಮ್ಮ ಇಷ್ಟಾದರೂ ಗಂಡನನ್ನು ಬಿಟ್ಟು ಕೊಡದಿರುವ ಮೂಲಕ ಪಾತಿವ್ರತ್ಯ ಧರ್ಮವನ್ನು ಪಾಲಿಸಬೇಕಾದದರ ಪ್ರತಿನಿಧಿಯಾಗುತ್ತಾಳೆ. ಆದರೆ ಸನ್ಯಾಸಿಯ ದುರ್ವರ್ತನೆಗೆ ಹೇಸಿ ತಟ್ಟೆ ಹಿಡಿದುಕೊಂಡು ಹೊರ ಬರುವುದು, ಹಿಡಿದೆಳೆದ ಸೆರಗನ್ನು ಕೊಡವಿ ಹೊರಗೆ ಬರುವುದು, ಶೀಲಕ್ಕೆ ಕೊಡುವ ಪ್ರಾಧಾನ್ಯವೇ ಆಗಿದೆ. ಆದರೆ ಗಂಡನೂ ಸನ್ಯಾಸಿಯ ಕುತಂತ್ರಕ್ಕೆ ಇಂಬು ಕೊಡುವುದು ಅಧಿಕಾರ ಶಾಹಿತ್ವಕ್ಕೆ ಹಾಕಿದ ರುಜುವೇ ಆಗಿದೆ. ಆದರೆ ಅಲ್ಲಿ ಹೊರ ಬಂದ ಪ್ರಕ್ರಿಯೆ ಅಂಥ ಮನಸ್ಥಿತಿಗೆ ಮಟ್ಟುಗೋಲು ಹಾಕಿದೆ. ಸನ್ಯಾಸಿಯೇ ಆ ಊರು ಬಿಟ್ಟು ಹೋಗುವಂತೆ ಮಾಡಿದ್ದು ಅಂಥ ಅನಾಚಾರವೇ ಊರು ಬಿಟ್ಟು ಓಡಬೇಕು ಎಂಬ ಉದ್ದೇಶದಿಂದಲೇ ಹೆಣ್ಣು ತನ್ನ ಮೈ ಮುಟ್ಟಬಿಡದಿರುವ ಸಾಂಪ್ರದಾಯಿಕತೆಯನ್ನು ಈ ಮೂಲಕ ಪ್ರತಿಪಾದಿಸಲಾಗಿದೆ. ತನ್ನ ಮನಸ್ಸಿಗೆ ಒಪ್ಪದ, ಹಿಂಸೆ ಎನಿಸುವ ಪರಿಸರವನ್ನು, ಪರಿಸ್ಥಿತಿ ಸಂದರ್ಭಗಳನ್ನು ಮೆಟ್ಟಿ ನಿಲ್ಲಬೇಕು ಎಂಬ ಸಂದೇಶವನ್ನು ಮಾಸ್ತಿ ಈ ಮೂಲಕ ಕೊಟ್ಟಿದ್ದಾರೆ. 'ಅವರು ಇಷ್ಟ ಪಟ್ಟರೂ ನಾನು ಒಪ್ಪದೇ ನಿಮ್ಮ ಅಪೇಕ್ಷೆ ನಡೆಯುವುದಿಲ್ಲ' ಎನ್ನುವ ಮಾತು ಹೆಣ್ಣಿನ ಶೀಲದ ಪ್ರಜ್ಞೆಗೆ ಸಾಕ್ಷಿಯಾಗುತ್ತದೆ. ಮತ್ತು ಇಲ್ಲಿ ಹೆಣ್ಣಿನ ಒಪ್ಪಿಗೆ ಮುಖ್ಯ ಎಂಬುದನ್ನು ಪ್ರಸ್ತುತ ಪಡಿಸಿದ್ದಾರೆ. ಹೆಣ್ಣಿನ ಮನಸ್ಸಿಗೆ ಬೆಲೆ ಕೊಡಬೇಕು. ಅವಳ ಬಲಾತ್ಕಾರ ಸಲ್ಲದು ಎಂಬುದನ್ನು ಪ್ರತಿಪಾದಿಸಿದ್ದಾರೆ. ಹೆಣ್ಣಿನ ಶೀಲ ಪಾವಿತ್ರ್ಯ ಉಳಿಯಬೇಕಾದುದರ ಕಡೆಗೆ ಒತ್ತು ಕೊಡುವ ಮಾಸ್ತಿ ಅದನ್ನು ಪಾಲಿಸುವಂತೆ ಹೆಣ್ಣಿಗೆ ನೀತಿ ಹೇಳುತ್ತಾರೆ. ಆ ಮೂಲಕವೇ ಗಂಡಿನ ಕಾಮ ಲೋಲುಪತೆಯ ತೀರಿಕೆಗೆ ಹೆಣ್ಣನ್ನು ಬಳಸಿಕೊಳ್ಳುವ ಮಾರ್ಗಕ್ಕೆ ಅವಳು ಆಸ್ಪದ ಕೊಡಬಾರದು. ಅದನ್ನು ಪ್ರತಿಭಟಿಸುವುದಕ್ಕೆ ಧೈರ್ಯ

ತಂದುಕೊಳ್ಳಬೇಕು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಆದುದರಿಂದಲೇ ಗಂಡು ಸಾಮ್ರಾಜ್ಯದ ಆಳ್ವಿಕೆಯಲ್ಲಿ ಸೀತಮ್ಮನ ಅತ್ತಿಗೆ, ಮಗಳು ಸ್ವಾತಂತ್ರ್ಯ ಮೈಗೂಡಿಸಿಕೊಳ್ಳಲಾಗದೇ ಉಳಿದುಕೊಂಡವರಾದರೆ ಸೀತಮ್ಮ ಅವರಿಗಿಂತ ಭಿನ್ನವಾಗಿ ಉಸಿರಾಡುವ ಸ್ವಾತಂತ್ರ್ಯವನ್ನು ಅವಳೇ ತಂದುಕೊಳ್ಳುವಂತೆ ಮಾಡಿದ್ದಾರೆ.

ಹಿಂದೂ ವೈದಿಕ ಪರಂಪರೆ ಗಂಡನಿಗೆ ಅತ್ಯುನ್ನತ ಸ್ಥಾನವನ್ನು ಕೊಡುತ್ತದೆ. ಆತನೇ ದೇವರು ಎಂದು ನಂಬಿಸಿದ ಮೌಲ್ಯ ಮಾಸ್ತಿ ಕತೆಗಳಲ್ಲಿನ ಸ್ತ್ರೀಯರಲ್ಲಿ ಪತಿಭಕ್ತಿಗೆ ಅರ್ಪಿಸಿಕೊಂಡವರೇ ಬಹಳ ಮಂದಿ. ಗಂಡನ ಮೇಲೆ ನಿಷ್ಠೆಯಿದೆ. ಗಂಡನ ಹೊರತಾಗಿ ಬಾಳಿದರೆ ಸಮಾಜದಲ್ಲಿ ಗೌರವ ಇಲ್ಲ ಎಂದು ನಂಬಿ ಅದಕ್ಕೆ ಬದ್ಧರಾಗುತ್ತಾರೆ. ಪತಿಯೇ ತನ್ನನ್ನು ಸಲಹುವವ. ಅವನಿಗೆ ಎದುರಾಡುವುದು, ವಿರೋಧಿಸುವುದು ಅವಮಾನಕರ. ಅವನನ್ನು ಹೊರತಾದ ಹೆಣ್ಣು ಜೀವಕ್ಕೆ ಗೌರವವಿಲ್ಲದೇ ಹೋದುದರಿಂದ ಅಲ್ಲಿ ಪತಿಗಾಗಿ ಹಂಬಲಿಸುವ ಸ್ತ್ರೀಯರನ್ನು ಚಿತ್ರಿಸಿದ್ದಾರೆ. ಗಂಡ ಬಿಟ್ಟು ಹೋದಾಗ ಅವನದೇ ಧ್ಯಾನದಲ್ಲಿರುವುದು ಮರಳಿ ಬಂದಾಗ ಒಪ್ಪುವುದು, ದೂರ ಹೋದಾಗ ಹುಚ್ಚಿಯಾಗುವುದು ಈ ರೀತಿಯಿಂದಲೇ. ಆ ಒಂದು ಮೌಲ್ಯವನ್ನು ಹೇಳುವುದಕ್ಕಾಗಿಯೇ ಇಲ್ಲಿನ ಹಾಗೂ ಐತಿಹಾಸಿಕ, ಪೌರಾಣಿಕ ಸ್ತ್ರೀಯರು ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ಒಂದು ಸಂಸ್ಕೃತಿಯನ್ನು ಮಹತ್ವದ್ದನ್ನಾಗಿ ಗುರುತಿಸುವಂತೆ ಮಾಡುವುದು ಇಲ್ಲಿನ ಧ್ಯೇಯ ಉದ್ದೇಶವೂ ಹೌದು. ಆ ಉದ್ದೇಶ ಈಡೇರಿಸುವಲ್ಲಿ ಬಹಳ ಮಂದಿ ಸ್ತ್ರೀಯರು ಯಶಸ್ವಿಯಾಗಿದ್ದಾರೆ.

ಆದರೆ ಅಂಥ ಒಂದು ಮೌಲ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನಿಸಿದ 'ನಳಿನಿಯ ತಂದೆ' ಕತೆಯ ಲಕ್ಷ್ಮಿ ಗಂಡನ ಹಿಂಸೆ ತಾಳಲಾಗದಿದ್ದಾಗ ಅವನನ್ನು ದೂರಮಾಡಿ ಬದುಕುವ ದೈರ್ಯ ತಾಳುತ್ತಾಳೆ. ಬೆಳೆದು ಅನುಭವಿಸಿದ ಜೀವ ತೆಗೆದುಕೊಳ್ಳುವ ಈ ತೀರ್ಮಾನ ಅವಳ ಬದುಕಿನ ಸಂದರ್ಭದಲ್ಲಿ ಸರಿಯಾದ ತೀರ್ಮಾನವಾಗುತ್ತದೆ ಎಂಬುದನ್ನು ಮಾಸ್ತಿಯೂ ಅವಳ ಮೂಲಕ ಪ್ರತಿಪಾದಿಸಿದ್ದಾರೆ.

ಲಕ್ಷ್ಮಿ ಮನೆಬೆಳಗುವ ಪತಿವ್ರತೆ, ಗೃಹಿಣಿ ಆಗಿರುವುದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತ ಪ್ರತಿಭಟನೆ ಮಾಡಿ ವ್ಯಕ್ತಿತ್ವ ಉಳಿಸಿಕೊಳ್ಳುವವಳೇ. ಆಕೆ ಗಂಡನನ್ನು ಸರಿದಾರಿಗೆ ತರಲು ಪ್ರಯತ್ನಿಸಿ ಅವನೊಂದಿಗೆ ಹೊಂದಾಣಿಕೆಯ ಜೀವನ ನಡೆಸಲು ಪ್ರಯತ್ನ ಪಟ್ಟವಳೇ. ಹೊಂದಾಣಿಕೆ ಸಾಧ್ಯವಾಗದೇ ಹೋದಾಗ, ಗಂಡನ ಹಿಂಸೆ ಅತಿರೇಕಕ್ಕೆ ಹೋದಾಗಲೂ ಅಲ್ಲೇ ಬಾಳಬೇಕೆಂಬ ಪುರಾತನ ಸಂಸ್ಕೃತಿಯನ್ನೇ ಬೆಂಬಲಿಸುವುದು ಎಷ್ಟು ಸರಿ ಸಹಿಸಲಸಾಧ್ಯವಾದಾಗ ಗಂಡ ಅನಿವಾರ್ಯ ಅಲ್ಲ ಎಂಬ ನಿರ್ಧಾರಕ್ಕೆ ಬರಬೇಕು. ಹಾಗೆ ಬರುವುದು ಯಾವಾಗ ಸಾಧ್ಯ ? ಹೆಣ್ಣಿಗೆ ವಿದ್ಯೆ, ಉದ್ಯೋಗವಿದ್ದಾಗ ಮಾತ್ರ, ಹಾಗಾಗಿಯೇ ಇಲ್ಲಿನ ನಳಿನಿಯ ತಾಯಿ ಲಕ್ಷ್ಮಿಗಂಡನಿಂದ ದೂರವಾಗಿ

ಸ್ವತಂತ್ರವಾಗಿ ಬದುಕು ಸಾಧಿಸುವುದಕ್ಕೆ ಸಾಧ್ಯವಾಯಿತು. ಆದರೆ ಗಂಡನಿಗೆ ಜೀವನಕ್ಕೆ ದುಡ್ಡು ಕೊಡುವ ಮಾನವೀಯತೆ ತೋರುವುದನ್ನು ಮರೆಯುವುದಿಲ್ಲ. ಅದಕ್ಕಾಗಿ ಅವಳು ಎಷ್ಟಾದರೆ ಎಷ್ಟು, ತನ್ನ ಪಾಡು ಎನ್ನುವುದನ್ನು ತಾನೇ ನೋಡಿಕೊಳ್ಳಬೇಕು ಎಂಬ ದೃಢ ನಿಲುವಿಗೆ ಬರುತ್ತಾಳೆ.

ಅವಳ ಈ ನಿಲುವಿಗೆ ಕಾರಣಗಳು ಹಲವಾರು ಇವೆ. ಅವಳ ನಿಲುವಿಗೆ ಕಾರಣಗಳನ್ನು ತೋರಿಸಿಕೊಡುತ್ತಲೇ ಆ ನಿರ್ಧಾರಕ್ಕೆ ಬರುವುದನ್ನು, ಬರಬೇಕಾದ ಅನಿವಾರ್ಯತೆಯನ್ನು ಪ್ರತಿನಿಧಿಸಲಾಗಿದೆ.

'ಏನದು ಜೀತ ? ಅದು ಅವಳಿಗೇ ತಿಳಿಯದು. ಆದರೆ ಜೀತದ ಒಂದು ಭಾಗ ಇದು. ಜೀವನದಲ್ಲಿ ಗಂಡನಿಂದ ತಾನು ಸುಖವನ್ನು ನಿರೀಕ್ಷಿಸಬಾರದು. ಎಷ್ಟಾದರೆ ಆಷ್ಟು, ತನ್ನ ಪಾಡು ಎನ್ನುವುದನ್ನು ತಾನೇ ನೋಡಿಕೊಳ್ಳಬೇಕು' ಎನ್ನುವಲ್ಲಿ,

ಮತ್ತೆ ಕೆಲವು ದಿನ ಕಳದ ಮೇಲೆ ವಿಶ್ವನಾಥ ತನ್ನ ಸ್ನೇಹದ ಒಬ್ಬ ವೇಶ್ಯೆಗೆ ಕೆಲವು ಒಡವೆಗಳನ್ನು ಕೊಟ್ಟನೆಂದು ತಿಳಿಯಿತು. ಅವಳು ಅದನ್ನು ಒಂದು ದಿನ ರಾತ್ರಿ ಮೀನಾಕ್ಷಿದೇವಿಯ ಉತ್ಸವ ವಿಗ್ರಹಕ್ಕೆ ಧರಿಸಬೇಕೆಂದು ದೇವಸ್ಥಾನಕ್ಕೆ ತಂದಳಂತೆ. ಇಂಥ ಮಾತಿಗೆ ಮಧುರೆ ಸಣ್ಣ ಊರು. ಕತೆ ಬಾಯಿಯಿಂದ ಬಾಯಿಗೆ ಬಂದು ಲಕ್ಷ್ಮೀಯ ಕಿವಿಯನ್ನು ಮುಟ್ಟಿತು.

ಈ ಘಟನೆಯೇ ಆವಳ ವ್ಯಕ್ತಿತ್ವದ, ನಿಲುವಿನ ಬದಲಾವಣೆಗೆ ಕಾರಣವಾಗುತ್ತದೆ. ಬಂದದ್ದನ್ನು ಬಂದ ಹಾಗೇ ಎದುರಿಸುತ್ತಾ ಅನುಭವಿಸುತ್ತಾ ಬದುಕಬೇಕೆಂಬ ಭಂಡ ನಿಲುವನ್ನು ಸಾಧಿಸ ಹೊರಡುವ ಅವಳ ಎದೆಗಾರಿಕೆ ತನಗೆ ಮಾಡಿದ ಮೋಸಕ್ಕೆ ಪ್ರತೀಕಾರದ ತತ್ವವನ್ನೇ ತೆಗೆದುಕೊಳ್ಳುವುದಾಗಿದೆ. ಆ ನಿರ್ಧಾರದ ಹಿಂದೆ ಸಮಯ ಸಂದರ್ಭಗಳಿಗೆ ಹೆಣ್ಣೊಬ್ಬಳು ತೆಗೆದುಕೊಳ್ಳಬೇಕಾದ ಧೈರ್ಯದ ನಿಲುವನ್ನು ತನ್ನ ಬದುಕಿನ ಮೂಲಕ ಸಾರ್ವತ್ರಿಕಗೊಳಿಸುತ್ತಾಳೆ. ತನ್ನ ನೇರ ನಡೆನುಡಿಗಳ ನಡುವೆ ಗಂಡನೊಬ್ಬ ಅದರಿಂದ ಹೊರತಾಗಿರುವುದರಿಂದ ಆಗುವ ಹೆಣ್ಣಿನ ನೋವು ಕೂಡ ಇಲ್ಲಿ ಸ್ವಭಾವಯುತವಾದದ್ದು ಎಂಬುದು ಪ್ರತಿನಿಧಿತವಾಗಿದೆ. 'ನಾನು ನಿಮ್ಮೊಂದು ಮಾತು ಕೇಳುತ್ತೇನೆ. ನೀವು ನೇರವಾಗಿ ಉತ್ತರ ಕೊಡಬೇಕು, ನೀವು ನನ್ನ ಒಡವೆ ಕದ್ದು ವೇಶ್ಯೆಗೆ ಕೊಟ್ಟಿರಿ ಎಂದು ಜನ ಹೇಳುತ್ತಿದ್ದಾರೆ. ಇದು ನಿಜವೇ ?' ಎಂದು ಕೇಳುವ ಎದೆಗಾರಿಕೆ, ಜತೆಗೆ ತಿಂದ ಪೆಟ್ಟು ಅವಳನ್ನು ಘಾಸಿಗೊಳಿಸುವುದು ಅಸಹ್ಯ ವ್ಯಕ್ತಿತ್ವದವನನ್ನು ತೊರೆದು ಬಾಳುವ ಯೋಚನೆಗೆ ಇಂಬು ಕೊಡುತ್ತದೆ. ಇದು ಅವಳ ಸ್ವತಂತ್ರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂಬುದನ್ನು ಮಾಸ್ತಿ ಪರಿಚಯಿಸಿದ್ದಾರೆ.

'ಇನ್ನು ನೀವು ಈ ಮನೆಯಲ್ಲಿ ಇರಕೂಡದು. ನಮ್ಮ ನಿಮ್ಮ ಬಾಳು ಇಲ್ಲಿಗೆ ಮುಗಿಯಿತು. ಈ ಮಗು ತಾನು ನಿಮ್ಮಂಥವರ ಮಗಳೆಂದು ತಿಳಿಯುವುದು ಬೇಡ. ಇನ್ನು ನಮ್ಮ ಸಂಬಂಧ ಸಾಕು ಎನ್ನುವ, ನೀವು ನಾನು ಎಲ್ಲಿದ್ದೇನೆಂದು ವಿಚಾರಿಸಬಾರದು. ನಾನು ಇರೋ ಕಡೆಗೆ ಬರಬಾರದು. ನಾನು

ನಿಮ್ಮ ಹೆಂಡತಿ ಅಂತ ಹೇಳಬಾರದು. ಈ ಮಗಳು ನಿಮ್ಮ ಮಗಳೂ ಅಂತ ಹೇಳಬಾರದು. ಹೀಗೇನಾದರೂ ಮಾಡಿದರೆ ನಾನು ನಿಮಗೆ ಈ ಜೀವನಾಂಶಾನೂ ಕೊಡುವವಳಲ್ಲ. ಹೋಗಿ ಬನ್ನಿ' ಎಂಬ ಛಲದ ಹಿಂದಿನ ಆಕೆಯ ತಾತ್ಸಾರ, ನೋವು ಅರ್ಥವಾಗದೇ ಇರುವುದಿಲ್ಲ. ಇಲ್ಲಿ ಉದ್ಧಟತನವಿಲ್ಲ. ಹಿಂಸೆ ಸಹಿಸಿ ಬಾಳಬೇಕೆನ್ನುವ ಹಿತವಚನವೂ ಇಲ್ಲಿ ಇಲ್ಲ.

ಅವನಿಗೆ ಅನ್ನವಿಲ್ಲದಂತೆ ಮಾಡಬಾರದು, ಹೇಗೆ ನಡೆದರೂ ಮಗಳ ತಂದೆ ಎಂಬ ಕಾರಣದಿಂದ ದೂರವಿದ್ದರೂ ಅವನಿಗೆ ಜೀವನಾಂಶ ಕೊಡುವ ಈ ಪತ್ನಿಯ ವರ್ತನೆ ಗಂಡನ ದುರ್ಬಲತೆಯನ್ನು, ಹೆಣ್ಣಿನ ಸಬಲತೆ ಸಾಮರ್ಥ್ಯವನ್ನು ತೋರಿಸುವ ನಿಟ್ಟಿನಲ್ಲಿ ಬಹಳ ಮುಖ್ಯದ್ದಾಗುತ್ತದೆ.
ತಿರುಗಿ ತನ್ನ ಬಳಿಗೆ ಬಂದ ಗಂಡನನ್ನು ಲಕ್ಷ್ಮೀ ಸ್ವಾಗತಿಸುವುದಿಲ್ಲ. ಕಟುವಾಗಿಯೇ ಮಾತನಾಡುತ್ತಾಳೆ. ಅವನನ್ನು ಮಗಳಿಗೆ ಅಪ್ಪ ಎಂದು ಪರಿಚಯ ಮಾಡಿಕೊಡುವುದಕ್ಕೆ ಒಪ್ಪದ ಅವಳು ಅವನಿಂದ ಮಗಳಿಗೆ ಆಶೀರ್ವಾದ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾಳೆ. ಇದು ಹೆಣ್ತನ, ತಾಯ್ತನದ ನಿರ್ಧಾರ ಎನ್ನುವುದಕ್ಕಿಂತ ಮಾನವೀಯ ನಿಲುವು ಎನ್ನಬಹುದು. ಮಗಳಿಗೆ ತಂದೆಯನ್ನು ಯಾರೋ ಸನ್ಯಾಸಿಯನ್ನು ಪರಿಚಯಿಸಿದಂತೆ ಪರಿಚಯಿಸಿ ತಂದೆಯ ಆಶೀರ್ವಾದ ದೊರಕಿಸುತ್ತಾಳೆ. ಮಗಳಿಗೆ ತನ್ನನ್ನು ಅಪರಿಚಿತನಂತೆ ಪರಿಚಯಿಸಿ ಗೌರವಿಸುವಂತೆ ಮಾಡಿದ ನಟನೆಗೆ ಒಪ್ಪದ ಅವನ ಮನಸ್ಸಿಗೆ 'ನೋಡಿ, ಇದೆಲ್ಲ ನಾವೇ ಮಾಡಿಕೊಂಡ ತೊಡಕು' ಎಂದು ಸಾರಾಸಗಟಾಗಿ ಹೇಳುವಲ್ಲಿ ವ್ಯವಸ್ಥೆಯ ಅನಗತ್ಯ ನಿಯಮಗಳನ್ನು ಮುರಿಯುವ ಧ್ವನಿ ದಟ್ಟವಾಗಿದೆ. 'ಮಗಳನ್ನು ನೋಡಬೇಕೇ ಹೀಗಿದ್ದು ನೋಡಿ. ಹೀಗಿರೋಕ್ಕಾಗಲಿಲ್ಲ. ಅವಳ ದಾರಿಗೆ ಅಡ್ಡ ನಿಲ್ಲದೆ ಎತ್ತಲಾಗಾದರೂ ಇರಿ. ಅವಳಿಗೆ ಮದುವೆ ಆಗಿ ಅವಳು ಸುಖದಿಂದ ಬಾಳೋದನ್ನು ದೂರದಿಂದ ನೋಡಿ' ಎಂದು ಖಡಾಖಂಡಿತ ನಿಲುವನ್ನು ಬದಲಾಯಿಸದೇ ಹೇಳಿ ತನ್ನ ಸ್ವಾಭಿಮಾನದ ಬದುಕಿಗೆ ಅರ್ಥವನ್ನು ತಂದುಕೊಡುತ್ತಾಳೆ. ಆದರೆ ಈ ಸ್ವಭಾವ ಪ್ರತಿನಿಧಿತವಾದದ್ದು ಗಂಡನ ಹಿಂಸೆ ಸಹಿಸಲಾಗದ ಸಂದರ್ಭದ ಬಳಿಕ ಎನ್ನುವುದು ಮುಖ್ಯವಾಗಿದೆ. ಎಂಥದ್ದೇ ಪ್ರತೀಕಾರ, ಪ್ರತಿರೋಧ ತೋರುವುದಿದ್ದರೂ ಅದು ಸಹನೆಯ ಕೊನೆಯ ಘಟ್ಟದಲ್ಲಿ ಮಾತ್ರ ಎಂಬ ಮಾಸ್ತಿಯವರ ನಿಲುವನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

ಮಕ್ಕಳ ಪಾಲನೆಯಲ್ಲಿ

ಹೆಣ್ಣೊಬ್ಬಳು ತನ್ನ ಪ್ರೀತಿಯನ್ನು, ಗಂಡಿನ ವಿಷಯದ ಕುರಿತ ತನ್ನ ಅಭಿಪ್ರಾಯವನ್ನು ಬದಲಾಯಿಸುವ ಸ್ವಾತಂತ್ರ್ಯ ಪಡೆದುದನ್ನು ಮಾಸ್ತಿ ಪರಿಚಯಿಸುವಾಗ ತನಗೆ ಬೇಕಾದಾಗ ಬೇಕಾದವನೊಂದಿಗೆ ಪ್ರೀತಿ ಗಳಿಸಿ, ಬೇಡ ಎನ್ನಿಸಿದಾಗ ಇನ್ನೊಬ್ಬನೊಂದಿಗೆ ಸಂಬಂಧ ಬೆಳೆಸುವ ಮೇರಿಯ ನಿರ್ಧಾರವನ್ನು ಆಕೆಯ ಬದುಕಿನ ಸಾಧ್ಯತೆಗಳ ನೆಲೆಯಲ್ಲಿ ಒಪ್ಪಿಕೊಳ್ಳುತ್ತಾರೆ.

ಪೋಲೆಂಡ್ ದೇಶದ ವೃದ್ಧ ರಾಜ ಪುರುಷ ವ್ಯಾಲಿಸ್ಕನ ಹೆಂಡತಿಯಾಗಿದ್ದ ಮೇರಿ ನೆಪೋಲಿಯನ್‌ನನ್ನು ಪ್ರೇಮಿಸಿದ್ದಕ್ಕೆ ಪ್ರಬಲ ಕಾರಣವಾಗಿ ಕೊಡುವುದು ಒಂದು ನೆಪೋಲಿಯನ್ನನ ಹೆಸರು ಕೇಳಿದ ಕಾಗೆಗಳು ಅಷ್ಟರಿಂದಲೇ ತಲ್ಲಣಿಸುತ್ತಿದ್ದ ದಿನಗಳಲ್ಲಿ ತನ್ನ ಕೀರ್ತಿಗೆ ಹೆಣ್ಣುಗಳೆಲ್ಲರೂ ಮರಳಾಗುತ್ತಿದ್ದುದರಿಂದ ಎಂದು. ಅವಳ ಪತಿಗೆ ನೇರವಾಗಿ, 'ಕೌಂಟೆಸ್ ವ್ಯಾಲಿಸ್ಕ ಕೇಳು, ಚಕ್ರವರ್ತಿ ನಿನ್ನ ಪ್ರೇಮವನ್ನು ಬೇಡಿರುವುದು ನಮ್ಮ, ನಿನ್ನ ದೇಶದ ಪುಣ್ಯ. ನಿನ್ನ ದೇಶಕ್ಕೆ ಅವನ ನೆರವು ಬೇಕಾಗಿದೆ. ಅದನ್ನು ಗಳಿಸುವ ಭಾಗ್ಯ ನಿನ್ನ ಪಾಲಿಗೆ ಬಂದಿದೆ. ಅವನ ಇಷ್ಟದಂತೆ ನಡೆದು, ನಿನ್ನ ದೇಶಕ್ಕೆ ಅವನ ಸಹಾಯವನ್ನು ತರದ ರೀತಿ ನಿನ್ನನ್ನು ತಡೆಯುವ ಕಾರಣ ಏನಿದೆ. ಎಸ್ತರ್ ಮಹಿಳಾಮಣಿ ಚಕ್ರವರ್ತಿ ಅಹಸ್ವೇರಸ್ಸನ ಹಾಸಿಗೆಯನ್ನೇರಿ ತನ್ನ ಜನಮನವನ್ನು ರಕ್ಷಿಸಿದ ನಮ್ಮ ಧರ್ಮದ ಇತಿಹಾಸವನ್ನು ನೀನು ಕೇಳಲಿಲ್ಲವೇ. ನೀನು ಅವಳಂತೆ ನಡೆದು ನಿನ್ನ ಜನವನ್ನು ರಕ್ಷಿಸು, ಕೃತಾರ್ಥಳಾಗು ಎಂದು ಬರೆದ ಮೇಲೆ;ಯೇ ಅವನ ವಶಕ್ಕೆ ಬರುತ್ತಾಳೆ. ಇಲ್ಲಿ ತನ್ನ ಹರೆಯಕ್ಕೆ ಸರಿಯಾಗದ ವೃದ್ಧನನ್ನು ತೊರೆಯುವುದು ಹೊಸ ಆಕರ್ಷಣೆಯಿಂದಲೇ ಆಗಿದೆ. ಅವನೊಂದಿಗೆ ಕಳೆದ ಸಂಬಂಧದ ನೆನಪಿಗಾಗಿ ಆಕೆ ಗಂಡು ಮಗುವನ್ನು ಹೆತ್ತಿದ್ದಾಳೆ. ನೆಪೋಲಿಯನ್ ಸೆರೆಯಲ್ಲಿದ್ದ ಸಂದರ್ಭದಲ್ಲಿ ಆತನನ್ನು ವಿಚಾರಿಸುವ ಕರ್ತವ್ಯದಿಂದ ಭೇಟಿಯಾಗುತ್ತಾಳೆ.

ಆಕೆ ಆತನನ್ನು ಒಪ್ಪಿಕೊಂಡ ಕುರಿತ ನೆನಪುಗಳಲ್ಲಿ ಆಕೆ ಪತ್ರದಲ್ಲಿ ತೆರೆದಿಟ್ಟ ಸತ್ಯ

'ನೆಪೋಲಿಯನ್‌ನ್ನು ರಾಷ್ಟ್ರಕ್ಕೆ ಸಹಾಯ ಮಾಡುವನೆಂಬ ಕಾರಣದಿಂದ ಮಾತ್ರ ಒಪ್ಪಿಕೊಳ್ಳಲಿಲ್ಲ. ಅವನ ವಿಕ್ರಮಕ್ಕೆ ಅವನ ಕೀರ್ತಿಗೆ ಮರುಳಾಗಿ ಅವನ ವಶವಾದೆನು' ಎಂಬ ಮಾತುಗಳಲ್ಲಿ ಅದು ಸ್ಪಷ್ಟವಾಗಿದೆ. ಆದರೆ ಈಗ ಸೋತುಬಿಟ್ಟು ಎಲ್ಲ ಕೀರ್ತಿಯನ್ನು ಕಳೆದುಕೊಂಡಿರುವುದರಿಂದ ಆಕೆ ಅವನನ್ನು ತೊರೆಯುವುದಾಗುತ್ತದೆ.

ಅವಳ ರೂಪದ ಕುರಿತು 'ಅದೇನು ಅವಳ ಚೆಲುವು, ಅದೇನು ಅವಳ ನಿಲುವು! ಆ ಎಲ್ಲ ನಡೆಯ ಬೆಡಗು, ಆ ನೋಟದ ವೈಯ್ಯಾಗ ಮಾತನಾಡಿದರೆ ಮುತ್ತು ಸುರಿಯುವುದು ಎನ್ನುವ ಸಾಣ್ನುಡಿ ಅವಳಿಗೆ ಒಪ್ಪುತ್ತಿತ್ತು. ಎಂಥ ಚೆಲುವೆಯರ ಗುಂಪಿನಲ್ಲಿ ಇವಳು ಒಬ್ಬಳು. ಆದರೂ ಇವಳಿರುವಂದು ಅವರು ಯಾರೂ ಚಲುವೆಯರಲ್ಲ. ನಿನ್ನನ್ನು ಹೊರತು ಬೇರೆ ಜಿಟ್ಟ ಯಾರನ್ನೂ ನೋಡಿಲ್ಲ ಎಂದು ತಾನು ಬರೆದಿದ್ದ ಮಾತು ಅತಿಶಯದ ಮಾತಲ್ಲ, ಸತ್ಯ ಮಾತ್ರ' ಎಂದು ನೆನಪಿಸಿಕೊಳ್ಳು~~ಇಲ್ಲಿ ಅವಳು ಪರಿಚಿತಗೊಳ್ಳು~~ತ್ತಾಳೆ.

ನೆಪೋಲಿಯನ್‌ನ ಸೋಲಿನ ನಂತರ ಮೇರಿ ಆತನಿಂದ ದೂರವಾಗುವುದು 'ನನಗೆ ಇಲ್ಲಿ ದಿನ ಕಳೆದಂತೆ ಬಾಳುವುದು ಕಷ್ಟವಾಗುತ್ತಿದೆ. ನಿನ್ನ ಪ್ರೇಯಸಿ ಎಂಬ ಕಾರಣದಿಂದ ಇದುವರೆಗೆ ತಕ್ಕಷ್ಟು ಜನ ಒಂದು ರೀತಿಯಲ್ಲಿ ನಡೆಸಿಕೊಂಡು ಬಂದರು. ನೀನು ಇನ್ನು ಬರುವಂತಿಲ್ಲ. ದೊರೆಯಾಗುವಂತಿಲ್ಲ ಎಂದು ಅವರು ನನ್ನನ್ನು ಕಡೆಗಾಣಿಸಲು ತೊಡಗಿದ್ದಾರೆ. ಹುಡುಗನಿಗೆ

ಒಂದು ಗೌರವದ ಆಶ್ರಯಬೇಕು. ಇದನ್ನೆಲ್ಲ ಯೋಚಿಸಿ ನಿನ್ನ ದಳಪತಿಯಾಗಿದ್ದ ಕೌಂಟ್ ಡ ವರ್ನಾನೋ ನನ್ನನ್ನು ಮದುವೆಯಾಗುವೆನೆಂದಿದ್ದಾನೆ. ನಿನ್ನ ಪ್ರೇಯಸಿಯಾಗಿದ್ದು, ಮತ್ತೊಬ್ಬನನ್ನು ಸೇರುವುದು ನನಗೆ ಇಷ್ಟವಿಲ್ಲ. ಆದರೆ ವಿಧಿಯಿಲ್ಲ. ಅವನು ಈಗ ಒಂದು ಕೆಲಸಕ್ಕಾಗಿ ಇಟಲಿಗೆ ಹೋಗಿದ್ದಾನೆ. ಇಷ್ಟರಲ್ಲಿ ಬರುತ್ತಾನೆ. ಬರುವ ತಿಂಗಳ ಮೊದಲ ಗುರುವಾರ ನಾವು ನಮ್ಮ ಮದುವೆಯನ್ನು ನಡೆಸುತ್ತೇವೆ. ತಕ್ಕಷ್ಟು ದುಃಖದಲ್ಲಿರುವ ನಿನ್ನನ್ನು ಈ ಮಾತಿನಿಂದ ನೋಯಿಸಬಾರದಿತ್ತು. ಆದರೆ ತಿಳಿಸದೆಯೇ ಈ ಮದುವೆಯಾಗುವುದು ಸರಿಯಲ್ಲ ಎಂದು ತೋರಿ ಈ ಕಾಗದ ಬರೆದಿದ್ದೇನೆ. ನೀನು ಒಲಿದಿದ್ದ ಹೆಣ್ಣಿಗೆ ಈ ದಿನ ಕಳೆದ ಸಂಬಂಧ ತಕ್ಕಷ್ಟು ಸುಖವನ್ನು ತರಲೆಂಬ ನಿನ್ನ ಶುಭಾಶಯವನ್ನು ಕೋರುತ್ತಿರುವ, ನಿನ್ನ ಮೇರಿ' ಎಂದು ಬರೆದಿರುವಲ್ಲಿ ಅವಳ ಪ್ರಾಮಾಣಿಕತೆಯ ಜೊತೆಗೆ ಧೈರ್ಯವನ್ನು ಗ್ರಹಿಸಬಹುದಾಗಿದೆ. ತನ್ನ ಬದುಕಿನ ಭದ್ರತೆಗಾಗಿ ತಾನು ಇನ್ನೊಬ್ಬನೊಂದಿಗೆ ಬಾಳಬೇಕಾದ ಅನಿವಾರ್ಯತೆಯನ್ನು ಆಕೆ ಮುಂದಿಡುತ್ತಾಳೆ. ಅಲ್ಲಿ ತನ್ನ ಬದುಕಿನ ಸಾಧ್ಯತೆಗಳನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ತಂದುಕೊಳ್ಳುತ್ತಾಳೆ. ತನಗೆ ಬೇಕೆನ್ನಿಸಿದ ಕಾರಣಕ್ಕಾಗಿ ಮರು ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೆಣ್ಣಾದವಳು ಪಡೆದಿರುವುದರೊಂದಿಗೆ ಸಹನಶೀಲತೆಯನ್ನು, ಪಾತಿವ್ರತ್ಯವನ್ನು ಅಳವಡಿಸಿಕೊಳ್ಳದೇ ಬದುಕು ಸಾಗಿಸುವುದು ಇಲ್ಲಿ ಮುಖ್ಯವಾಗಿದೆ.

ಅವೈದಿಕ ಸ್ತ್ರೀಯರು ವೈದಿಕ ಸಂಸ್ಕೃತಿ ಹೇರಿದ ಕಟ್ಟಳೆಗಳನ್ನು ಮೀರಿ ನಡೆಯಲು ಹೊರಟದ್ದನ್ನು ಹಾಗೂ ಅದರಿಂದ ಅವರು ತಮ್ಮ ಬದುಕಿನಲ್ಲಿ ನೆಮ್ಮದಿಯನ್ನು ಕಳೆದುಕೊಂಡು ಪರಿತಪಿಸಿದ ಹಂತಗಳನ್ನು ಚರ್ಚಿಸಿದ್ದಾಯಿತು. ಜೊತೆಗೇ ಬದುಕಿನಲ್ಲಿ ನೋವನ್ನು ಸಹಿಸಿಕೊಳ್ಳುತ್ತ ಬದುಕಿದಾಗಲೂ ಹಿಂಸೆ ದಿನೇದಿನೇ ಹೆಚ್ಚಿದಂತೆ ಸಹನೆ ಸಾಧ್ಯವಿಲ್ಲ ಎಂದಾದಾಗ ಅಂಥ ಪರಿಸರವನ್ನು, ಸಂದರ್ಭವನ್ನು ಹಾಗೂ ವ್ಯಕ್ತಿಗಳನ್ನು ಪ್ರತಿಭಟಿಸಿ ಬದುಕುವ ಸ್ತ್ರೀಯರನ್ನೂ ಇಲ್ಲಿ ಅಭ್ಯಸಿಸಲಾಯಿತು. ಮುಂದಿನ ಅಧ್ಯಾಯದಲ್ಲಿ ಮಾಸ್ತಿ ಕತೆಗಳಲ್ಲಿ ಪ್ರತಿಪಾದಿತವಾದ ಆಶಯಗಳನ್ನು ಇತರ ಸಮಕಾಲೀನ ಕತೆಗಾರರ ಪ್ರಾತಿನಿಧಿಕ ಕತೆಗಳೊಂದಿಗೆ ಇರಿಸಿ ತೌಲನಿಕವಾಗಿ ಅಭ್ಯಸಿಸಲಾಗುತ್ತದೆ. ಇಲ್ಲಿ ಮಾಸ್ತಿ ಹಾಗೂ ಇತರ ಕತೆಗಾರರ ಕತೆಗಳಲ್ಲಿನ ಸ್ತ್ರೀಯರು ಪ್ರತಿನಿಧಿಸುವ ಆಶಯಗಳಲ್ಲಿನ ಭಿನ್ನತೆಯನ್ನು, ಸಾಮ್ಯಗಳನ್ನು ಕಂಡುಕೊಳ್ಳಬಹುದು.

ಅಧ್ಯಾಯ - ೫

ಮಾಸ್ತಿ ಮತ್ತು ಸಮಕಾಲೀನರಲ್ಲಿ ಸ್ತ್ರೀ ಪ್ರತಿನಿಧೀಕರಣ

ನವೋದಯರ ಆದರ್ಶದಲ್ಲಿ

ಪ್ರಗತಿಶೀಲರ ಸಾಮಾಜಿಕ ಅರಿವಿನಲ್ಲಿ

ನವ್ಯರ ಆಂತರಂಗಿಕ ತುಮುಲದಲ್ಲಿ

ಅಧ್ಯಾಯ - ೫

ಮಾಸ್ತಿ ಮತ್ತು ಸಮಕಾಲೀನರಲ್ಲಿ ಸ್ತ್ರೀ ಪ್ರತಿನಿಧೀಕರಣ

ನವೋದಯ ಪೂರ್ವದಿಂದಲೇ ಕತೆ ಬರೆಯತೊಡಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ನವೋದಯದ ಪ್ರಬಲ ಗಾಳಿ ಬೀಸತೊಡಗಿದ ೧೯೨೦ರ ಬಳಿಕವೂ ಅಧಿಕ ಕತೆಗಳನ್ನು ಬರೆದಿದ್ದಾರೆ. ಆ ಕಾರಣಕ್ಕಾಗಿ ಅವರ ಕತೆಗಳ ಸ್ತ್ರೀಯರು ಪ್ರತಿನಿಧಿಸುವ ಗುಣಗಳನ್ನು ನವೋದಯದ ಸಿದ್ಧಾಂತ-ತಾತ್ವಿಕತೆಗಳ ಆಧಾರದಲ್ಲಿ ಚರ್ಚಿಸಬಹುದಾಗಿದೆ. ಮಾಸ್ತಿ ತಮ್ಮ ನಂಬುಗೆಯ ಹಿನ್ನೆಲೆಯಲ್ಲಿ ಕತೆ ಬರೆದಿದ್ದರೂ ಅವರು ಬದುಕಿದ ಕಾಲಘಟ್ಟದಿಂದ ಹಿಡಿದು ನವ್ಯ ಪಂಥ ಪ್ರಖರತೆ ಕಳಚುವವರೆಗೂ ಕತೆಗಳನ್ನು ಬರದವರು. ಆದ್ದರಿಂದಲೇ ಅವರ ಕತೆಗಳನ್ನು ಕೇವಲ ನವೋದಯ ಕಾಲಕ್ಕಷ್ಟೇ ಸೀಮಿತಗೊಳಿಸುವಂತಿಲ್ಲ. ಎಲ್ಲ ಕಾಲಘಟ್ಟದ ಸಾಹಿತ್ಯ ಪಂಥಗಳ ಪ್ರವಾಹ ಶಕ್ತಿಗಳನ್ನು ಲೆಕ್ಕಿಸುತ್ತಲೇ ತಮ್ಮದೇ ಆದ ಆಲೋಚನೆ ಹಾಗೂ ನೆಲೆಗಟ್ಟಿನಲ್ಲಿ ಅವರು ಕತೆಗಳನ್ನು ಬರೆಯುತ್ತ ಬಂದವರು. ನವೋದಯದಲ್ಲಿ ಅತಿ ಮುಖ್ಯ ಕತೆಗಾರರಾಗಿಯೇ ಮಾಸ್ತಿಯವರು ಗೋಚರಿಸುತ್ತಾರೆ.

ಅವರು ತೆರೆದಿಟ್ಟ ಕತೆ ಹೆಣೆದ ರೀತಿ, ವಸ್ತುವಿನ ಆಯ್ಕೆ ಇತರರಿಗೂ ಪ್ರೇರಣೆ ನೀಡಿದೆ. ಸಾಂಸ್ಕೃತಿಕ, ರಾಜಕೀಯದ ಕುರಿತಂತೆ ಮಹತ್ತರವಾದ ಪರಿಣಾಮ ಬೀರಿದ ಬದಲಾವಣೆಗೆ ಒಳಗಾದ ಕತೆಗಳಿವೆ. ಆದರ್ಶ, ಸಾಂಪ್ರದಾಯಿಕ ಮನಃಸ್ಥಿತಿಯ ಮೌಲ್ಯ ಇಲ್ಲಿ ಎಡೆ ಪಡೆದಿವೆ. ಕುಟುಂಬ, ಗಂಡ-ಹೆಂಡತಿಯ ಪ್ರೇಮಗಳೆಲ್ಲ ಅಲ್ಲಿ ಪ್ರಾಧಾನ್ಯ ಪಡೆದಿವೆ. ಮಾನವೀಯತೆ, ಮಾನವೀಯ ಸಂಬಂಧ ಮೌಲ್ಯಕ್ಕೆ ಒತ್ತು ಕೊಡವುದು ನವೋದಯ ಕಾಲಘಟ್ಟದ ಪ್ರಧಾನ ಧ್ಯೇಯವಾಗಿದೆ. ಅದನ್ನು ಗಟ್ಟಿಗೊಳ್ಳುವಂತೆ ವ್ಯಾಖ್ಯಾನಿಸುವುದು ಪರಂಪರೆಯ ಹಾಗೂ ಸಾಂಪ್ರದಾಯಿಕ ಚೌಕಟ್ಟಿನ ಒಳಗೆ. ಮನುಷ್ಯತ್ವ ಮೆರೆವ ವ್ಯಕ್ತಿ ಬಾಳುತ್ತಾನೆ, ಅಲ್ಲದವ ಅಳಿಯುತ್ತಾನೆ. ಶಿಷ್ಟ ರಕ್ಷಣೆ, ದುಷ್ಟರ ಹರಣ ಮಾಡುವುದು ಅವರ ಧ್ಯೇಯ ಎಂಬುದನ್ನು ಕತೆಗಳು ತಿಳಿಸುತ್ತವೆ.

/ ಮಾಸ್ತಿ ಕತೆಗಳ ಅಧ್ಯಯನದ ಜೊತೆಗೆ ಅವರ ಸಮಕಾಲೀನ ಬರಹಗಾರರು ತಮ್ಮ ಧೋರಣೆಗಳನ್ನು ಪ್ರತಿಪಾದಿಸುವಲ್ಲಿ ಸ್ತ್ರೀಯರನ್ನು ಮುಂದುಮಾಡಿರುವ ನೆಲೆಯಲ್ಲಿ ಮಾಸ್ತಿಗಿಂತ ಹೇಗೆ ಭಿನ್ನ ರಾಗುತ್ತಾರೆ ಎಂಬುದನ್ನು ಸ್ಥೂಲವಾಗಿ ಅಭ್ಯಸಿಸುತ್ತ ಮಾಸ್ತಿ ಕೂಡ ಅವರಿಗಿಂತ ಹೇಗೆ ಭಿನ್ನರಾಗುತ್ತಾರೆ ಎಂದು ಚರ್ಚಿಸುವುದು ಪ್ರಸ್ತುತ ಅಧ್ಯಾಯದ ಉದ್ದೇಶವಾಗಿದೆ. ಇಲ್ಲಿ ನವೋದಯ, ಪ್ರಗತಿಶೀಲ, ನವ್ಯ ಪಂಥಗಳ ಧೋರಣೆಗಳ ಹಿನ್ನೆಲೆಯಲ್ಲಿ ಕತೆಗಾರರನ್ನು ಅಧ್ಯಯನ ಮಾಡುವುದು ಉದ್ದೇಶವಲ್ಲ. ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿರುವ ಮಾಸ್ತಿ ಕತೆಗಳ ಆಶಯಗಳ ಹಿನ್ನೆಲೆಯಲ್ಲಿ ಸಮಕಾಲೀನ ಬರಹಗಾರರು ಸ್ತ್ರೀಯನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಅಭ್ಯಸಿಸುವುದುದ ಇಲ್ಲಿ ಮುಖ್ಯವಾಗಿದೆ./

ನವೋದಯರ ಆದರ್ಶದಲ್ಲಿ

ನವೋದಯ ಸಾಹಿತ್ಯ ಪಾಶ್ಚಾತ್ಯ ಮೂಲದಿಂದಲೇ ದೇಶೀ ಸಾಹಿತ್ಯದೊಳಗೆ ಎಡೆ ಪಡೆಯುವುದರಿಂದ ಆ ತತ್ವ ಸಾರ್ವತ್ರಿಕ, ಸಾರ್ವಕಾಲಿಕ ಹಾಗೂ ವಿಶ್ವಮಾನ್ಯವಾಗುತ್ತದೆ. ಈ ವಿಶ್ವಮಾನ್ಯ ಸಂದೇಶದ ಪ್ರಾಧಾನ್ಯವೇ ಮಾಸ್ತಿ ಕತೆಗಳಲ್ಲಿ ಆವರಿಸಿಕೊಂಡಿದೆ. ಸ್ತ್ರೀ ಕೂಡ ಅಲ್ಲಿ ಎಡೆಪಡೆದಿರುವುದು ಪೂಜನೀಯ ಸ್ಥಾನದಿಂದಲೇ. ಈ ಪೂಜನೀಯತೆ ಮೆರೆಯುವುದು ಆಕೆ ಕುಟುಂಬದ ರಕ್ಷಕಿಯಾಗಿರುವಲ್ಲಿ, ಗಂಡ-ಹೆಂಡತಿಯಾಗಿ, ಮಗುವಿಗೆ ತಾಯಿಯಾಗಿ ಮೌಲ್ಯವನ್ನು ಸುಲಭದರಲ್ಲಿ ತಲುಪಿಸುವಂತೆ ಮಾಡುವುದಕ್ಕೆ ಮಾಸ್ತಿ ಸಣ್ಣಕತೆಗಳನ್ನು ಬಳಸಿಕೊಂಡಿದ್ದಾರೆ. ಆರಂಭಿಕ ಕಾಲದ ಸಾಮಾಜಿಕ ಸ್ಥಿತಿಗತಿಗಳೇ ನವೋದಯದ ಹುಟ್ಟಿಗೆ ಪ್ರಮುಖ ಕಾರಣಗಳಾಗಿವೆ. ಮಾನವೀಯ ಸಂಬಂಧ ಛಿದ್ರ ಛಿದ್ರಗೊಳ್ಳಬಾರದೆಂಬ ಕಾಳಜಿ ನವೋದಯದ್ದು. ಸಂಪ್ರದಾಯದ ಕಡೆಗೆ ಮುಖಮಾಡಿ ಹೆಣ್ಣಿಗೆ ಗೌರವ ಕೊಟ್ಟಿತು ನಿಜ. ಆದರೆ ಆಕೆಯ ಸ್ಥಾನ-ಮಾನವನ್ನು ಏರಿಸುವ ಪ್ರಯತ್ನವನ್ನು ಎಷ್ಟು ಪ್ರಾಮಾಣಿಕವಾಗಿ ನೆರವೇರಿಸಿದೆ? ಆಕೆಯ ವಿದ್ಯಾಭ್ಯಾಸ ಕೂಡ ಅಲ್ಲಿ

ಪ್ರಸ್ತಾಪಗೊಂಡಿದೆ. ಆಕೆಯ ಸ್ವಾತಂತ್ರ್ಯ ಕೂಡ ಚರ್ಚಿತವಾಗುತ್ತದೆ. ವಿಧವೆಯ ಸಮಸ್ಯೆ, ವಿಚ್ಛೇದನ ಸಮಸ್ಯೆ ಕೂಡ ಭಿನ್ನವಾಗಿ ಕಾಡಿದ್ದು ಅಲ್ಲಿನ ಮೌಲ್ಯದ ಹಿನ್ನೆಲೆಯಲ್ಲಿ ಪ್ರತಿನಿಧೀಕರಣಗೊಂಡಿದೆ.

ನವೋದಯದ ಸಂದರ್ಭದಲ್ಲಿ ಸಾಮಾಜಿಕ ಬದಲಾವಣೆಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಸ್ತ್ರೀಯ ಬದುಕಿನಲ್ಲಿ ಆಗುವ ಪಲ್ಲಟಗಳು ಕೂಡ ಅತ್ಯಂತ ಗಮನ ಸೆಳೆಯುತ್ತವೆ. ಬಾಲ್ಯವಿವಾಹ, ವಿಧವಾ ಸಮಸ್ಯೆ, ವಿಧವಾ ವಿವಾಹಗಳ ಕುರಿತಂತೆ ಆ ಕಾಲಘಟ್ಟದಲ್ಲಿ ಸುಧಾರಕರು, ವಿಚಾರವಾದಿಗಳು ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರಯತ್ನ ಮಾಡಿರುವುದು ಆ ಕಾಲದ ಸಾಹಿತ್ಯದಲ್ಲಿ ದಾಖಲಾಗಿದೆ. ಈ ಕುರಿತ ಪ್ರಕ್ರಿಯೆಯು ಆ ಕಾಲಘಟ್ಟದ ಇತರ ಬರಹಗಳ ಅಧ್ಯಯನದ ಆಧಾರದಲ್ಲಿ ಮಾಸ್ತಿ ಕತೆಗಳನ್ನು ಅಭ್ಯಸಿಸಿದಾಗ ಸ್ಪಷ್ಟವಾಗುತ್ತದೆ. ಅದರ ಛಾಯೆ ಅಥವಾ ಪ್ರತಿಕ್ರಿಯೆಯಾಗಲಿ ಅಥವಾ ಅದಕ್ಕಿಂತ ಭಿನ್ನವಾದ ದೃಷ್ಟಿಕೋನವನ್ನಾಗಲೀ ಅರ್ಥೈಸಿಕೊಳ್ಳುವುದಕ್ಕೆ ಸುಲಭ ಸಾಧ್ಯವಾಗುತ್ತದೆ.

ಇಡೀ ರಾಷ್ಟ್ರದ ನೆಲೆಯಿಂದಲೇ ಸ್ತ್ರೀಯ ಸ್ಥಾನಮಾನದ ಕುರಿತು ಅವಲೋಕಿಸಿದರೆ ಅಲ್ಲೆಲ್ಲ ಆಕೆಗೆ ಶಿಕ್ಷಣ ಕೊಡಿಸಬೇಕಾದ, ಆಕೆಯ ಬಾಲ್ಯ ವಿವಾಹ ನಿಲ್ಲಿಸಬೇಕಾದ ಒತ್ತಡವಿದ್ದುದ್ದು ಅರಿವಾಗುತ್ತದೆ. ವಿಶ್ವದಲ್ಲಿ ಕೂಡ ಸ್ತ್ರೀ ಮುಂದಿನ ಜನಾಂಗವನ್ನು ಚೆನ್ನಾಗಿ ರೂಪಿಸುವವಳಾದುದರಿಂದ ಆಕೆಗೆ ಶಿಕ್ಷಣ ಕೊಡಬೇಕು ಎಂಬ ತೀರ್ಮಾನಕ್ಕೆ ಬರಲಾಗಿದೆ. ಈ ವಿದ್ಯಾಭ್ಯಾಸವೇ ಮುಂದೆ ಆಕೆ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬಹುದಾದ ಕುರಿತಂತೆ ನಡೆಸುವ ಚರ್ಚೆಯಲ್ಲಿ ಆಕೆಯ ಪರವಾಗಿಯೇ ತೀರ್ಪು ನೀಡುತ್ತದೆ. ಆದರೆ ಕೆಲವು ಸಂದರ್ಭದಲ್ಲಿ ಅದು ಕೇವಲ ಚರ್ಚೆಗಷ್ಟೇ ಸೀಮಿತವಾಗಿ ಉಳಿದದ್ದೂ ಇದೆ.

ಸ್ತ್ರೀಗೆ ಗೌರವ ಕೊಡಬೇಕಾದ ಅನಿವಾರ್ಯತೆಯನ್ನು ಭಾರತದಲ್ಲಿ ಪ್ರತಿಪಾದಿಸುವುದಕ್ಕೆ ಪಾಶ್ಚಾತ್ಯರಲ್ಲಿನ ಸತಿಪತಿಯರ ನಡವಿನ ಸಮಾನತೆ ಕಾಯ್ದುಕೊಳ್ಳುವ ರೀತಿ ಪ್ರಚೋದನೆಯಾಗಿದೆ. ಅಂತಹ ಮೌಲ್ಯಗಳನ್ನು ಭಾರತೀಯ ಸಂದರ್ಭಕ್ಕೂ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ನಾನಾ ಸಂದರ್ಭಗಳಲ್ಲಿ ಪ್ರತಿಪಾದಿಸಲಾಗಿದೆ. ಮಧ್ಯಯುಗದ ಕಾಲದ ಸತಿ-ಪತಿ ಸಂಬಂಧ ಇಲ್ಲಿ ಬಾಳಿ ತೋರಿಸಬೇಕಾದ ರೀತಿಗೆ ಪ್ರೇರಣೆ ನೀಡುತ್ತದೆ. ಎಲ್ಲ ರೀತಿಯ ಬಂಧನಗಳಿಂದ ಸ್ತ್ರೀಯನ್ನು ಮುಕ್ತಿಗೊಳಿಸುವುದಕ್ಕೆ ಇಲ್ಲಿ ಚಾಲನೆ ದೊರಕಿಸಿಕೊಳ್ಳುವ ಪ್ರಯತ್ನ ನಡೆಸಿದ್ದನ್ನು ಕಾಣುತ್ತೇವೆ.

ಸ್ತ್ರೀ ಪರ ಕಾಳಜಿಯ ಚಿಂತನೆಗಳ ನಡುವೆಯೇ ಮಾಸ್ತಿ ಬರೆಯುತ್ತ ಬಂದವರು ನಿಜ. ಆದರೆ ಯಾವ ಸುಧಾರಕರ ವಿಚಾರದಿಂದಲೂ ಮಾಸ್ತಿ ತಮ್ಮ ಮನಸ್ಸು, ಧೋರಣೆಗಳನ್ನು ಬದಲಿಸಿದಂತಿಲ್ಲ. ಹೆಣ್ಣಿನ ಕುರಿತು ಅವರಿಗೆ ಅತಿಯಾದ ಗೌರವವಿದೆ. ಆದರೆ ಆಕೆ ಮನೆ ಬಿಟ್ಟು ಹೊರಗಿಳಿಯದಂತೆ ಮಾಸ್ತಿ ತೀರಾ ಎಚ್ಚರವಹಿಸುತ್ತಾರೆ. ಹೆಣ್ಣು ಕೇವಲ ಹೆಣ್ಣಾಗಿಯೇ ಬಾಳಬೇಕೆಂದು ಪ್ರೇರಿಸುವ ಹಿಂದೂ ವಾದಿಯಂತೆಯೇ ಉಳಿದು ಬಿಡುತ್ತಾರೆ. ಸ್ತ್ರೀಗೆ ವಿದ್ಯಾಭ್ಯಾಸ ಕೊಡುವುದನ್ನು ತೀರಾ ವಿರೋಧಿಸದ ಮಾಸ್ತಿ ಆಕೆ ದುಡಿಯ ಹೋಗುವುದನ್ನು ಒಪ್ಪುವುದಿಲ್ಲ. ಎಂದರೆ ಅವರು, ಅದು ಅವಳ

ಬದುಕಿನ ಭದ್ರತೆಯ ದೃಷ್ಟಿಯಿಂದ ಒಳಿತಲ್ಲ ಎಂಬ ಸಂಪ್ರದಾಯವಾದದ ನಿಲುವನ್ನೇ ತಳೆಯುತ್ತಾರೆ. ಸ್ತ್ರೀಗೆ ಅತಿಯಾದ ಗೌರವ ಕೊಡುವ ಮಾಸ್ತಿ, ಅವಳಿಗೆ ಅರಿವಾಗದ ರೀತಿಯಲ್ಲಿ ಅವಳನ್ನು ಪ್ರತಿಬಂಧಿಸುತ್ತಾರೆ. ಪ್ರಗತಿಪರ ವಿಚಾರವನ್ನು ಆಕೆ ಮೈಗೂಡಿಸಿಕೊಳ್ಳಲಾಗದಂತೆ ಎಚ್ಚರವಹಿಸುತ್ತಾರೆ. ಹೆಣ್ಣಿಗೆ ವಿವಾಹ ಕಡ್ಡಾಯವೆಂದು ಹೇಳುವ ಮಾಸ್ತಿಗೆ ಹೆಣ್ಣಿನ ಇತರ ಯಾವ ಸಮಸ್ಯೆಯೂ ಕಾಡದೇ ಹೋಗುತ್ತದೆ. ಆದ್ದರಿಂದಲೇ ಅವಳು ಹೊಸ್ತಿಲು ದಾಟುವುದನ್ನು ತಡೆಯುತ್ತಾರೆ.

ವಿಧವಾ ಸಮಸ್ಯೆಯೂ ಅವರನ್ನು ಕಾಡಿಲ್ಲ ಎನ್ನುವುದು ಅಚ್ಚರಿ ಹುಟ್ಟಿಸುತ್ತದೆ. ಮಾಸ್ತಿಯೊಳಗಿನ 'ಸಾಂಪ್ರದಾಯಿಕತೆ' ಎನ್ನುವುದು ಅದನ್ನು ತಡೆಹಿಡಿಯುತ್ತದೆ. ಆದರೆ 'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಬಾಲ್ಯವಿವಾಹ ನಡೆದಿದೆ. ಜೊತೆಗೆ ಬಾಲ ವಿಧವೆಯ ಆತ್ಮಾಹುತಿ ಕೂಡ ನಡೆದಿದೆ. ಬಾಲ್ಯವಿವಾಹವನ್ನು ತಡೆಹಿಡಿಸುವ ಪ್ರಯತ್ನವನ್ನು ಅಲ್ಲಿ ಮಾಡಲಾಗಿಲ್ಲ. ಜೊತೆಗೆ ವಿಧವೆಗೆ ಧೈರ್ಯ ಕೊಡುವ ಕೆಲಸವನ್ನೂ ಮಾಡಲಿಲ್ಲ. ಆಕೆಯ ಸಾವಿನಲ್ಲಿ ಅವಳ ಬದುಕಿನ ಭದ್ರತೆಯನ್ನು ಕಾಣಲಾಗಿದೆ. ತಾಯಿ ವಿಧವೆಯಾದರೂ ಆಕೆ ಬಾಳುತ್ತಾಳೆ. ಆದರೆ ಬಾಲಕಿಗೆ ಬದುಕುವ ಧೈರ್ಯ ಕೊಡದಿರುವುದು ಅಂದಿನ ಸಮಾಜದ ಭಯಾನಕ ಸ್ಥಿತಿಯಿಂದಲೂ ಇರಬಹುದು. ಅಂಥ ಸಂದಿಗ್ಧ ಪರಿಸ್ಥಿತಿಯ ನಡುವೆಯೂ ಬದುಕು ಸಾಗಿಸುವ ರೀತಿಯನ್ನು ಮಾಸ್ತಿ ಮುಂದಿಡುತ್ತಾರೆ. ಬದುಕು ಅವರಿಗೆ ಮುಖ್ಯವಾದುದರಿಂದ ಅದರ ನಿರ್ವಹಣೆಯ ಕುರಿತಂತೆ ಅತಿ ಕಾಳಜಿ ವಹಿಸುತ್ತಾರೆ. ಈ ಕಾಳಜಿಯ ಜೊತೆಗೆ ಹೆಣ್ಣಿನ ಸಮಸ್ಯೆಯ ಕಡೆ ಅವರು ತಲೆ ಹಾಕುವುದಿಲ್ಲ. ಅದಕ್ಕಿಂತ ಮುಖ್ಯವಾಗಿ ಗಂಡು ಹೆಣ್ಣಿನ ಬದುಕು ನೇರವಾಗಿ ಸಾಗಿಸಲು ಕಾಳಜಿ ವಹಿಸಬೇಕು. ಅಲ್ಲದೇ ಹೋದರೆ ಅದರಿಂದಾಗಿ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಮಾಸ್ತಿ ಅವರು ತಮ್ಮ ಕತೆಗಳ ಸ್ತ್ರೀಯರ ಬದುಕಿನ ಮೂಲಕವೇ ಪ್ರತಿಪಾದಿಸಿದ್ದಾರೆ.

ನವೋದಯ, ಪ್ರಗತಿ ಶೀಲ, ನವ್ಯ ಕಾಲಘಟ್ಟದಲ್ಲಿ ಕತೆ ಬರೆದ ಮಾಸ್ತಿ ಹಾಗೂ ಇತರ ಕತೆಗಾರರಲ್ಲಿ ಸ್ತ್ರೀ ಪ್ರತಿನಿಧೀಕರಣವನ್ನು ಅವಲೋಕಿಸುವಾಗ ಮಹಿಳೆಯರು ಬರೆದ ಕತೆಗಳನ್ನು ಪ್ರತ್ಯೇಕವಾಗಿ ಅಭ್ಯಸಿಸುವುದು ಅಗತ್ಯವಾಗುತ್ತದೆ. ಸ್ತ್ರೀ ಸಂವೇದನೆ ಮತ್ತು ಯುಗ ಮೌಲ್ಯದ ಜೊತೆಗೆ ಕಂಡ, ಕೇಳಿದ ಸಂಸ್ಕೃತಿಯನ್ನು ಮಾಸ್ತಿ ಕತೆಗಳಲ್ಲಿ ಪ್ರತಿನಿಧಿಸಿದ ರೀತಿಯ ಭಿನ್ನತೆಯನ್ನು ಚರ್ಚಿಸಲಾಗಿದೆ.

ಮಾಸ್ತಿಯವರ ಕತೆಗಳ ಸ್ತ್ರೀ ಪ್ರತಿನಿಧೀಕರಣವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಮಾಸ್ತಿಯವರು ಇತರ ಕತೆಗಾರರಿಗಿಂತ ಭಿನ್ನರಾಗಿ ನಿಲ್ಲುವುದು ಸ್ಪಷ್ಟವಾಗುತ್ತದೆ. ಮಾಸ್ತಿಯವರಿಂದ ಪ್ರೇರಿತವಾಗಿ ಸಮಾಜದ ಬದಲಾವಣೆ ಬಯಸಿ ಕತೆ ಬರೆದವರೂ ಇದ್ದಾರೆ. ಮಾಸ್ತಿ ಸಂಸ್ಕೃತಿಯನ್ನು ಬಾಳಿಸುವ ನೆಲೆಗೆ ಸ್ತ್ರೀಯರನ್ನು ಬದ್ಧಗೊಳಿಸುವುದಕ್ಕೇ ಹೆಚ್ಚು ಒತ್ತು ನೀಡುತ್ತಾರೆ. ಆದರೆ ಇತರ ಕತೆಗಾರರು ತಮ್ಮ ಕತೆಗಳಲ್ಲಿ ಬದುಕಿನ ವಿವಿಧ ಹಂತಗಳನ್ನು ಅನುಭವಿಸಿದ ಸ್ತ್ರೀಯರನ್ನು ಪರಿಚಯಿಸಿದ್ದಾರೆ. ಅವರು ಅನುಭವಿಸಿದ ಸಂಕಷ್ಟಗಳನ್ನು ಚಿತ್ರಿಸಿದ್ದಾರೆ. ಸಂಪ್ರದಾಯ ಉಳಿಸುತ್ತಲೇ ಅವರ ಬದುಕನ್ನು ಗಟ್ಟಿಗೊಳಿಸಿಕೊಳ್ಳಬೇಕಾದ ಬಗೆಯನ್ನು ತೆರೆದಿಟ್ಟಿದ್ದಾರೆ. ಕೆಲವು ಸಂದರ್ಭಗಳಲ್ಲಿ ಆದರೆ ಮಾಸ್ತಿಯವರು ಹೆಣ್ಣಿನ ಸಮಸ್ಯೆಯನ್ನು ಎಲ್ಲಿಯೂ ಪರಿಚಯಿಸುವುದಿಲ್ಲ. ಅವರು ಹೇಗೆ

ಬದುಕಬೇಕೆಂಬುದನ್ನು ತಿಳಿಸಿಕೊಡುವ ನೆಲೆಯಲ್ಲಿ ಮುಖ್ಯರಾಗುತ್ತಾರೆ. ಅಂದರೆ ಆದರ್ಶಯುತ ಬದುಕನ್ನು ಕಟ್ಟುವುದು ಅವರಿಗೆ ಮುಖ್ಯವಾಗಿದೆ. ಈ ಸಂದರ್ಭದಲ್ಲಿ ಅವರು ಅಂಥ ಆದರ್ಶ ಬದುಕು ಕಾಣಲು, ಆರೋಗ್ಯಕರ ಸಮಾಜ ಕಟ್ಟಲು ಸ್ತ್ರೀ ತನ್ನ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಪರಿಚಯಿಸುವ ಕೆಲಸವನ್ನು ಮಾಡುತ್ತಾರೆ. ಈ ನೆಲೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಇತರ ಕತೆಗಾರರಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಸ್ತ್ರೀಯರ ಕುರಿತು ಅಪಾರ ಗೌರವ ಹೊಂದಿರುವ ಮಾಸ್ತಿ ಅವರನ್ನು ಗೌರವಿಸುವ ನೆಲೆಯಲ್ಲಿಯೇ ಪ್ರೇರಣೆ ನೀಡುತ್ತಾರೆ. ಆದರೆ ಅದೇ ಗೌರವದ ಮುಖವಾಡ ಹೆಣ್ಣನ್ನು ಕುಗ್ಗಿಸುತ್ತಿರುವ ಬಗೆಗೆ ಅವರಿಗೆ ಏನೂ ಅನ್ನಿಸದಿರುವುದು ಮಾತ್ರ ಅಚ್ಚರಿಯನ್ನು ಹುಟ್ಟಿಸುತ್ತದೆ. ಮಾಸ್ತಿಯವರ ಪಾತ್ರಗಳಿಗೆ ಅವರ ಮನಸ್ಸಿನ ಸ್ತ್ರೀ ಸ್ವಭಾವವನ್ನು ತಳುಕು ಹಾಕಿಕೊಂಡು ವಿಶ್ಲೇಷಿಸಲಾಗಿದೆ. ಹಾಗೆ ನೋಡುವುದರಿಂದಲೇ ಹೆಣ್ಣೊಬ್ಬಳು ಎದುರಿಸುವ ಮಾರ್ಮಿಕ ಸಮಸ್ಯೆಗಳು ಇಲ್ಲಿ ತೆರೆದುಕೊಂಡಿರುವುದನ್ನು ವಿಶ್ಲೇಷಿಸಬಹುದಾಗಿದೆ.

ಮಾಸ್ತಿಯವರೊಳಗಿನ ಹೆಣ್ತನ, ತಾಯ್ತನದ ನೆಲೆಯಿಂದಲೇ ಅವರ ಕತೆಗಳು ಸಿದ್ಧಗೊಂಡಿವೆ. ಆ ನೆಲೆಯಿಂದಲೇ ಅಲ್ಲಿನ ಸ್ತ್ರೀಯರೂ ಪರಿಚಿತರಾಗಿದ್ದಾರೆ. ಮಾಸ್ತಿಯವರೊಳಗಿನ ಅದಮ್ಯ ಸ್ತ್ರೀತ್ವದ ಶಕ್ತಿಯಿಂದಾಗಿಯೇ ಅಲ್ಲಿ ಜೀವಸೆಲೆಯಿಂದ ಪುಟಿಯುವ ಜೀವದಾನ ಮಾಡುವ ಗೌರವವನ್ನು ಉನ್ನತಿಗೇರಿಸಲಾಗಿದೆ. ಪತ್ನಿಯಾಗಲೀ, ಮಗಳಾಗಲೀ, ಅವರೆಲ್ಲ ಅವರವರ ನೆಲೆಯಲ್ಲಿ ಜೀವಂತಿಕೆಯನ್ನು ಪಡೆದಿದ್ದಾರೆ. ಅವರ ಅನುಭವದ ನೆಲೆಯಲ್ಲಿ ಅವರು ಶಕ್ತರಾಗಿದ್ದಾರೆ. ಒಂದು ಕುಟುಂಬದ ಒಟ್ಟೂ ಹೊಣೆ ಹೊತ್ತದ್ದೇ ಹೆಣ್ಣು. ಅವಳ ಹಿಂದಿರುವುದು ಯಾವತ್ತೂ ಉಳಿಯುವ ಹಾಗೂ ಉಳಿಯಬೇಕಾದ ಮನುಷ್ಯ ಸಂಬಂಧಗಳ ಕುರಿತ ಕಾಳಜಿಯಾಗಿದೆ. ಅದನ್ನು ಸಾಧಿಸುವುದು ಮುಖ್ಯವಾಗಿ ಹೆಣ್ಣೇ ಎನ್ನುವುದು ಅವರ ನಂಬಿಕೆಯಾಗಿದೆ. ಈ ನಂಬಿಕೆಯ ಹಿಂದಿರುವ ಅಪಾರ ಗೌರವದ ಹಿನ್ನೆಲೆಯಲ್ಲಿ ಆಕೆಯ ಅನುಭವವನ್ನು ತನ್ನದಾಗಿಸಿಕೊಳ್ಳುವುದನ್ನು ಅಭ್ಯಸಿಸುವುದು ಮುಖ್ಯವಾಗಿದೆ. ಅಲ್ಲಿ ಕಳೆದು ಹೋಗಲಾರದ ಸಂಸ್ಕೃತಿಯನ್ನು ಸ್ತ್ರೀಯ ಮೂಲಕವೇ ಕಟ್ಟಿಸಿ ಭದ್ರಗೊಳಿಸುವ ಆಲೋಚನೆಯನ್ನು ಅವರು ಮಾಡಿದ್ದಾರೆ.

ಓರ್ವ ತಾಯಿ, ಪತ್ನಿ, ಸೊಸೆಯ ಸಂದರ್ಭಗಳಲ್ಲಿ ಆಯಾಯ ವ್ಯಕ್ತಿಯೂ ಆಗಿ ಕರ್ತವ್ಯಗಳನ್ನು ನೆರವೇರಿಸುತ್ತಾರೆ. ಒಂದು ಪರಿಸ್ಥಿತಿಯನ್ನು ತಿಳಿಯಪಡಿಸುವ ರೀತಿಯಲ್ಲೇ ಮಾಸ್ತಿ ಅವರು ಓರ್ವ ತಾಯಿಯಂತೆ ಕೆಲಸ ಮಾಡುತ್ತಾರೆ. ಅವರ ತಾಯ್ತನದಲ್ಲಿಯೇ ಹೆಣ್ಣಿಗೂ ಉಪದೇಶವಿದೆ. ಆಕೆ ಕೌಟುಂಬಿಕವಾದ ಯಾವುದೇ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಬಾರದೆಂದೇ ಸಾರುತ್ತಾರೆ. ಕುಟುಂಬ ಬಿಡಬಾರದ ಸತ್ಯವನ್ನು 'ಮೊಸರಿನ ಮಂಗಮ್ಮ' ಕತೆಯ ಮಂಗಮ್ಮ ಕುಟುಂಬ ಬಿಟ್ಟು ಬಂದ ಬಳಿಕ ಅನುಭವಿಸಿದ ಇಕ್ಕಟ್ಟಿನ ಸಂದರ್ಭದ ಮೂಲಕ ಕಟ್ಟಿಕೊಡುತ್ತಾರೆ. 'ಗೌತಮಿ ಹೇಳಿದ ಕತೆ' ಯ ಗೌತಮಿ ವಿವಾಹದ ಅನಿವಾರ್ಯತೆಯನ್ನು ಅರ್ಥಮಾಡಿಸುವಲ್ಲಿ ಮೆರೆಯುವ ತಾಯ್ತನವನ್ನು

ಭಾರತೀಯ ಬದುಕಿನ ವಸ್ತುಸ್ಥಿತಿಯಾಗಿ ಕಾಣಿಸುತ್ತಾರೆ. ಪತ್ನಿಯಾಗಿ ಕರ್ತವ್ಯ ನಿಭಾಯಿಸಬೇಕಾದ ಸಂದೇಶಗಳನ್ನು ಪ್ರಸ್ತುತ ಪಡಿಸುವಲ್ಲಿ ಆ ಕುರಿತ ವ್ಯಥೆಯನ್ನು ವ್ಯಕ್ತಪಡಿಸದೇ ಇರುವ ಸಂದರ್ಭವನ್ನು ಸಾದರಪಡಿಸದೇ ತೆಪ್ಪಗುಳಿಯುವಲ್ಲಿ ಯಾಕೆ ಮಾಸ್ತಿ ಅವರಿಗೆ ಆ ವೇದನೆ ಅರ್ಥವಾಗಲಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಗಂಡನನ್ನು ಕಳೆದುಕೊಂಡಾಗ, ತಾನು ತಪ್ಪು ಮಾಡಿ ಗಂಡನ ಪ್ರೀತಿಯಿಂದ ದೂರವಾಗುವ, ವ್ಯಥಿಸುವ ಹೆಣ್ಣಿನ ಮನೋ ವ್ಯಾಕುಲದಷ್ಟು ಹೆಣ್ಣು ಗಂಡನಿಂದ ಅನುಭವಿಸಿದ ಕಷ್ಟದ ವಿವರ ಕೊಡುವಲ್ಲಿ ಹಿಂದೆ ಬೀಳುತ್ತಾರೆ. ಅಲ್ಲಿ ಮಾಸ್ತಿ ಹೆಣ್ಣಿನ ಮೇಲೆ ಗೌರವವಿಡುತ್ತಲೇ ಅವಳ ಸಂವೇದನೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಆ ನೆಲೆಯಲ್ಲಿ ಮಾಸ್ತಿ ಪುರುಷವಾದಿಯೇ ಆಗುತ್ತಾರೆ. ಹೆಣ್ಣೇ ಹೊಂದಿಕೊಂಡು ಕುಟುಂಬ ನಡೆಸುತ್ತಾ ಹೋಗಬೇಕೆಂಬ ನಂಬಿಕೆಯ ಹಿಂದೆ ಒಂದು ರೀತಿಯ ಒತ್ತಡವನ್ನು ಕೂಡ ನಯವಾಗಿಯೇ ಹೇರುವುದನ್ನು ಕಾಣುತ್ತೇವೆ. ಒಂದು ಸಂಸ್ಕೃತಿಯನ್ನು ಅರ್ಥೈಸಿಕೊಂಡು ಒಪ್ಪಿಕೊಳ್ಳುವ ಮಾಸ್ತಿ ಆ ಸಂಸ್ಕೃತಿಯೊಂದಿಗಿನ ಸಂಬಂಧ ಬೆಳೆಸಿಕೊಳ್ಳುವುದನ್ನು ಒಪ್ಪದಿರುವುದು ಸಾಂಪ್ರದಾಯಕ ದೃಷ್ಟಿಕೋನದಿಂದಲೇ.

ಹೆಣ್ಣಿನ ಅದಮ್ಯ ಶಕ್ತಿಯನ್ನು ನೆಚ್ಚಿಕೊಂಡ ಅವರು ಹೆಣ್ಣಿನ ಒಳತೋಟಿಯನ್ನು ಅರ್ಥಮಾಡಿಕೊಳ್ಳದೇ ಇರುವುದು ಯಾಕಾಗಿ? ಸಮಕಾಲೀನವಾದ ಎಲ್ಲ ದೃಷ್ಟಿಕೋನಗಳ ಪ್ರಬಲ ಚಳವಳಿಗಳ ನಡುವೆಯೂ ಯಾಕೆ ಮಾಸ್ತಿಯವರಿಗೆ ಅದು ಮುಖ್ಯವಾಗಲಿಲ್ಲ ಎಂಬ ಪ್ರಶ್ನೆಗೆ ಪ್ರತಿಭಟನೆಯ ಉತ್ತರ ಯಾವುದಕ್ಕೂ ಸಮಜಾಯಿಸಿ ನೀಡುವುದಿಲ್ಲ ಎಂದು ನಂಬಿದ್ದರು. ಹಾಗೆ ನೋಡಿದರೆ ಮಾಸ್ತಿ ಯಾವುದೇ ಸಮಸ್ಯೆಯನ್ನು ಇಲ್ಲಿ ಚರ್ಚಿಸುವುದೇ ಇಲ್ಲ ಎನ್ನುವುದು ಇನ್ನಷ್ಟು ಅಚ್ಚರಿ ಹುಟ್ಟಿಸುತ್ತದೆ. ಅವರೊಳಗಿನ ಹೆಣ್ತನ ಬಯಸುವುದು ಗಂಡು-ಹೆಣ್ಣು ಎಂಬ ಜೀವಾತ್ಮಗಳು ಪರಸ್ಪರ ಚೆನ್ನಾಗಿ ಅರಿತು ಅರ್ಥಮಾಡಿಕೊಂಡು ಸ್ನೇಹಜೀವಿಗಳಂತೆ ಬಾಳಿದರೆ ಯಾವ ಸಮಸ್ಯೆಯೂ ಸೃಷ್ಟಿಯಾಗುವುದಿಲ್ಲ ಎಂಬುದನ್ನು. ಅದನ್ನೇ ಕತೆಗಳ ಮೂಲಕ ಸಾದರಪಡಿಸಿದ್ದಾರೆ. ಚಳವಳಿ, ಸಮಸ್ಯೆ, ತರತಮತೆ ಹುಟ್ಟು ಹಾಕುವುದು ಪರಸ್ಪರರ ನಡುವಿನ ತಪ್ಪುಗ್ರಹಿಕೆ, ಮೇಲುಕೀಳು ಎಂಬ ಭ್ರಮೆಯಿಂದ. ಅದು ಭ್ರಮೆಗಳನ್ನು ಒಡೆದು ಮನುಷ್ಯ ಸಂಬಂಧವನ್ನು ಮಾತ್ರ ಅರಿತಿರಬೇಕು. ಅಂಥ ಸಂದರ್ಭ ಯಾವ ನಿಷ್ಠುರ ಕ್ರಿಯಾಚರಣೆಗಳಾಗಲೀ, ಒತ್ತಡಗಳಾಗಲೀ ನಡೆಯುವುದಕ್ಕೆ ಆಸ್ಪದವಿರುವುದಿಲ್ಲ ಎಂಬ ಮಹಾನ್ ಸಂದೇಶವನ್ನು ಕೊಟ್ಟಿರುವುದನ್ನು ಅರಿತುಕೊಳ್ಳಬೇಕಾಗುತ್ತದೆ. ಈ ವಿಶ್ವಮಾನವ ಸಂದೇಶದ ಹುರುಳೇ ಅವರ ಹೆಣ್ತನದ ಆಲೋಚನೆಗಳಲ್ಲಿ ಅಡಗಿದೆ. ಆ ನೆಲೆಯಲ್ಲಿ ಗಂಡು ಹಿಂಸೆ ಕೊಡಬಾರದು ಎಂಬ ಧ್ಯೇಯದಿಂದಲೇ ಉದಾರವಾದಿ ಗಯಟೆಯವರನ್ನು ಮುಪ್ಪಿನ ಚಪಲ ಕತೆಯಲ್ಲಿ ಪರಿಚಯಿಸಿದ್ದಾರೆ.

'ಚೆನ್ನಮ್ಮ' ಕತೆಯ ಚೆನ್ನಮ್ಮಳಾಗಲೀ, 'ನಳಿನಿಯ ತಂದೆ' ಕತೆಯ ಲಕ್ಷ್ಮೀಯಾಗಲೀ, 'ದುರದೃಷ್ಟದ ಹೆಣ್ಣು' ಕತೆಯ ದುರದೃಷ್ಟದ ಹೆಣ್ಣಾಗಲೀ ತೆಗೆದುಕೊಳ್ಳುವ ಗಡಸು ತೀರ್ಮಾನಗಳನ್ನು ಮಾಸ್ತಿ ಇಲ್ಲಿ

ಗೌರವಿಸುತ್ತಾರೆ. ಅಂದರೆ ಅವರದು ಅವಸರದ ತೀರ್ಮಾನವಾಗಿರದೇ ಇರುವುದು ಇಲ್ಲಿ ಮೆಚ್ಚುಗೆಗೆ ಕಾರಣವಾಗುತ್ತದೆ. ಸಹನೆಯ ತುದಿಯನ್ನು ತಲುಪಿ ಮತ್ತೆ ಅದಕ್ಕೆ ಎಡೆಯೇ ಇಲ್ಲ ಎಂದಿರುವಾಗ ಸ್ಫೋಟವಾಗುವ ಪ್ರವೃತ್ತಿ ಇಲ್ಲಿ ಮುಖ್ಯದ್ದಾಗುತ್ತದೆ. ಆದರೆ ಹಠಮಾಡುವ 'ಆಚಾರ್ಯರ ಪತ್ನಿ' ಕತೆಯ ಆಚಾರ್ಯರ ಪತ್ನಿ, 'ಸನ್ಯಾಸ ಅಲ್ಲದ ಸನ್ಯಾಸ' ಕತೆಯ ನರಸಮ್ಮ, 'ಮುನೀಶ್ವರನ ಮರ' ಕತೆಯ ರಾಜಮ್ಮ ನೋವುಣ್ಣುವುದು, ಅವರ ನಿರ್ಲಕ್ಷ್ಯಸ್ವಭಾವದಿಂದಾಗಿಯೇ ಎಂಬುದನ್ನು ತೋರಿಸಿದ್ದಾರೆ. ಮಾಸ್ತಿ ಯಾವ ಹೆಣ್ಣನ್ನೂ ತುಚ್ಛವಾಗಿ ಕಂಡವರಲ್ಲ. ವೈಯಕ್ತಿಕ ಬದುಕಿನಲ್ಲೂ ಹೆಣ್ಣನ್ನು ಅಪಾರವಾಗಿ ಗೌರವಿಸಿದ ಮಾಸ್ತಿ ಹೆಂಡತಿಯನ್ನು ನೀವು ಎಂದೇ ಕರೆಯುತ್ತಿದ್ದರಂತೆ. ಹೆಣ್ಣೊಂದು ಸರಕಲ್ಲ. ಆಕೆ ವ್ಯಕ್ತಿ ಎಂಬುದನ್ನು ವೈಯಕ್ತಿಕವಾಗಿ ನಂಬಿದ್ದರಿಂದಲೇ ಕತೆಯಲ್ಲೂ ಅವರಿಗೆ ಅಷ್ಟು ಗೌರವ ಕೊಡುವುದಕ್ಕೆ ಸಾಧ್ಯವಾಯಿತು.

ವಿದೇಶಿ ಸಂಸ್ಕೃತಿಯನ್ನು ಪರಿಚಯಿಸಿಕೊಳ್ಳುವ ಅದನ್ನು ವಿಶ್ವವ್ಯಾಪಿಯಾಗಿಸುವ ನಿಟ್ಟಿನಿಂದಲೇ ' ಮುಪ್ಪಿನ ಚಪಲ' ಕತೆಯ ಗಯಟೆಯ ಹೆಣ್ಣಿನ ಚಪಲಕ್ಕೆ ಆ್ಯನಾ ತೋರುವ ತಿರಸ್ಕಾರದ ಪ್ರತಿಕ್ರಿಯೆ, 'ಪೋಲೋನಿಯಾ ಹೇಳಿಕೆ' ಕತೆಯಲ್ಲಿನ ಗಟ್ರೂರ್ಡ್‌ಳ ಆಂತರ್ಯದ ನೋವಿನ ಪರಿಚಯಿಸುವಿಕೆಯಲ್ಲಿ ಭಾರತೀಯ ಹೆಣ್ಣಿನ ಉಸಿರಿದೆ. ' ಲಿಯರ್ ದೊರೆಯ ಮಗಳುದಿರು' ಕತೆಯಲ್ಲಿನ ದುರಂತದ ಮೂಲವನ್ನು ಅರಸುವ ಚಿಕ್ಕಮ್ಮ , ಹೆಣ್ಣುಮಕ್ಕಳ ಸ್ವಭಾವವನ್ನು ಚೆನ್ನಾಗಿಯೇ ವಿವರಿಸಿ ದೊರೆಗೆ ಮನದಟ್ಟು ಮಾಡಿ ತಿದ್ದುವುದಕ್ಕೆ ಮುಂದಾಗುವುದು ಭಾರತೀಯ ಸಂಸ್ಕೃತಿಯ ಮೂಲ ನೆಲೆಯಿಂದಲೇ. ಆಕೆ ಹೇಳುವ ಪ್ರತಿಯೊಂದು ಬುದ್ಧಿಮಾತಿನಲ್ಲಿ ಕೂಡ ತಾಯ್ತನದ ಜೀವಸೆಲೆ ಪುಟಿಯುತ್ತದೆ. ಅದು ನಡೆಯುವುದು, ನಡೆಸುವುದು ಹೆಣ್ಣಿನಿಂದಲೇ ಎನ್ನುವುದು ಮುಖ್ಯವಾಗುತ್ತದೆ. ಅಂಥ ಒಂದು ನೈತಿಕ ಬದುಕಿನ ಪ್ರತಿಷ್ಠಾಪನೆಗೆ ಹೆಣ್ಣು ಹೇಗೆ ಮಾರ್ಗದರ್ಶಕಳಾಗಬಲ್ಲಳು ಎಂಬುದನ್ನು ತೋರಿಸುವುದೇ ಮಾಸ್ತಿಯವರ ಉದ್ದೇಶವಾಗಿದೆ. ಅಲ್ಲಿನ ಸ್ತ್ರೀತ್ವವು ಸ್ತ್ರೀಯಾತ್ಮಕವಾಗಿ ತುಡಿಯುವುದನ್ನು ಈ ನೆಲೆಯಲ್ಲಿ ಕಾಣಬಹುದಾಗಿದೆ.

ಹಾಗೆ ನೋಡಿದರೆ ಮಾಸ್ತಿ ವೈದಿಕ ಪರಂಪರೆಯ ಸ್ತ್ರೀಯರಿಗಿಂತಲೂ ಹೆಚ್ಚು ಗೌರವ ಕೊಡುವುದು ವೈದೀಕೇತರ ಸ್ತ್ರೀಯರು ಮಾಡುವ ತಪ್ಪುಗಳಿಗೆ. ಅಲ್ಲಿ ಗಂಡು ಕ್ಷಮೆ ಕೊಡುವವನಾಗಿರುವುದಿಲ್ಲ. ಅವರ ನಡತೆಯನ್ನು ಅಲ್ಲಿ ಯಾರೂ ಹೀಯಾಳಿಸುವುದಿಲ್ಲ. ಅವರ ವ್ಯಕ್ತಿತ್ವಕ್ಕೆ ಗೌರವ ಕೊಡುವುದು ಸ್ಪಷ್ಟವಾಗುತ್ತದೆ. ಆದರೆ ವೈದಿಕ ಮಹಿಳೆಯರ ಸಣ್ಣ ತಪ್ಪಿಗೂ ಗಂಡಂದಿರು ಹೆಂಡತಿಯನ್ನು ತಿರಸ್ಕರಿಸುವ ಶಿಕ್ಷೆಯನ್ನೇ ಕೊಟ್ಟು ಬಿಡುತ್ತಾರೆ. ಅಂದರ ಒಂದು ಮಾದರಿಯುತ ಬದುಕನ್ನು ಬದುಕಲೇಬೇಕಾಗಿದ್ದ ಮೇಲ್ವರ್ಗವೇ ತಪ್ಪಿ ನಡೆದರೆ ಅನುಸರಿಸುವ ಬದುಕು ಸರಿಹಾದಿಯಲ್ಲಿ ಸಾಗುವುದು ಹೇಗೆ ? ಅದು ಸಲ್ಲದು. ಆದ್ದರಿಂದಲೇ ಅವರಿಗೆ ಕಠಿಣ ಶಿಕ್ಷೆ ವಿಧಿಸಿದ್ದಾಗಿದೆ. ಆದರೆ ಕೆಳವರ್ಗದವರ ಬದುಕು ಮಾದರಿಯಾಗಬೇಕಾಗಿಲ್ಲ. ಅವರು ತೆಗೆದುಕೊಳ್ಳುವ ನಿರ್ಧಾರ ಒಂದು

ಹಂತಕ್ಕೆ ಸರಿಯಾದರೂ ಕೊನೆಗೆ ಹಳೇ ಬದುಕಿಗೆ ಮರಳಿ ಬರುವುದು ಅವರ ಆತುರದ ನಿರ್ಧಾರದ ಫಲಿತಾಂಶವನ್ನು ಕೊಡುತ್ತದೆ.

ಆದರೆ 'ಚಂದ್ರವದನಾ' ಕತೆಯ ಚಂದ್ರವದನಾ, 'ದುರದೃಷ್ಟದ ಹೆಣ್ಣು' ಕತೆಯ ದುರದೃಷ್ಟದ ಹೆಣ್ಣು, 'ಚೆನ್ನಮ್ಮ' ಕತೆಯ ಚೆನ್ನಮ್ಮ 'ಅರ್ವಾಚೀನ ಆಂಗ್ಲ ಶಕುಂತಲೆ' ಕತೆಯ ಜೆನ್ನಿಯರಂಥ ಬಂಡಾಯಗಾರ್ತಿಯರಿಗೆ ಕೂಡ ರಕ್ಷಣೆ ಕೊಡುವುದು, ಮಾಸ್ತಿಯವರ ಸ್ತ್ರೀ ಪರವಾದ ಕಾಳಜಿ ಸಂಪ್ರದಾಯ ಮೀರುವುದಕ್ಕೆ ಅವಕಾಶಕೊಡುತ್ತದೆ. ಆದರೆ ಬಂಡಾಯಕ್ಕೆ ತೆರೆದುಕೊಳ್ಳುವ ಅವಕಾಶ ವೈದಿಕೇತರ ವರ್ಗಗಳಿಗೆ ಮಾತ್ರ ಒದಗಿಸುವುದನ್ನು ಪ್ರಮುಖವಾಗಿ ಅಭ್ಯಸಿಸಬೇಕು. ಆ ನೆಲೆಯನ್ನು ಮೀರಿ ಯೋಚಿಸಿದರೆ ಅದು ಹೆಣ್ಣಿನ ಸೀಮಿತ ಪರಿಧಿ ಮೀರುವ ಅವಕಾಶ ಕೊಟ್ಟು ವ್ಯವಸ್ಥೆಯ ಸಡಿಲಿಸುವಿಕೆಯ ಸಾಧ್ಯತೆಯನ್ನು ತೋರಿಸಿಕೊಟ್ಟದ್ದಾಗಿ ಗಮನಿಸಬಹುದು.

ವಿಧವೆಗೆ ಮರು ಮದುವೆಯ ಅವಕಾಶ ಕೊಡುವುದಿರಲಿ, ವಿಧವೆಗೆ ಬದುಕನ್ನು ಕೂಡ ಕೊಡದಷ್ಟು ಕೂಡ ಮಾಸ್ತಿ ಯಾಕೆ ಕಟುವಾಗುತ್ತಾರೆ ಎಂಬ ಪ್ರಶ್ನೆ 'ಕೃಷ್ಣಮೂರ್ತಿಯ ಹೆಂಡತಿ' ಕತೆಯ ಸಂದರ್ಭದಲ್ಲಿ ಕಾಡುತ್ತದೆ. ಅಲ್ಲಿ ಮಗಳು ಕಿರುಹರೆಯದವಳಾದುದರಿಂದಲೇ ಅವಳಿಗೆ ಬದುಕು ಕೊಡಲಾಗುತ್ತಿಲ್ಲ ಎಂಬುದು ಅಂದಿನ ಸಮಾಜದ ದುಷ್ಟ ಕಣ್ಣುಗಳ ಗಂಡಸರ ನಡಾವಳಿಗಳನ್ನು ಆ ಸಂದರ್ಭದಿಂದ ಅರ್ಥಮಾಡಿಕೊಳ್ಳಬೇಕೇ ಹೊರತು ಕತೆಯಲ್ಲಿ ಅದರ ಛಾಯೆ ಇಲ್ಲ. ಅಲ್ಲಿ ಹಾಗೆ ಒಮ್ಮೆ ಆಕೆಗೆ ಬದುಕು ಕೊಟ್ಟು ದಿನೇ ದಿನೇ ಕೊಲ್ಲುವುದಕ್ಕಿಂತ ಆಗಲೇ ಸತ್ತು ನೆಮ್ಮದಿ ಕಾಣುವುದು ಮುಖ್ಯ ಎನ್ನುವ ನಿರ್ಧಾರಕ್ಕೆ ಬರುವಲ್ಲಿ ಹೆಣ್ಣಾಗಿ ಆಲೋಚಿಸಿ ಕೆಲಸ ಮಾಡಿದ್ದಾರೆ. ಈ ಎಲ್ಲ ಸಾಧ್ಯತೆಗಳನ್ನು ಕೂಡ ಮಾಸ್ತಿ ಹೆಣ್ಣಿನ ಕಣ್ಣಲ್ಲಿಯೇ ಕಂಡು ತಾವೇ ಹೆಣ್ಣಾಗಿರುವ ಮೂಲಕ ಅಲ್ಲಿನ ಸಂದರ್ಭಗಳಿಗೆ ಜೀವ ತುಂಬಿದ್ದಾರೆ. ಈ ಜೀವ ತುಂಬುವಿಕೆಯಿಂದಲೇ ಆ ವ್ಯಕ್ತಿತ್ವ ಗೌರವ ಪೂರ್ಣವಾಗಿ ಕಾಣುತ್ತದೆ. ಅಲ್ಲಿನ ಮಾಸ್ತಿತನದ ಹಿಂದಿರುವ ತಾಯ್ತನ, ಜೀವಸತ್ವದ ಹೆಣ್ತನಕ್ಕೆ ಕೊಡುವ ಸಂದೇಶವನ್ನು ಅರ್ಥಮಾಡಿಸುತ್ತದೆ. ಅದನ್ನು ಅವರು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಅಲ್ಲಿನ ನಿರುದ್ವಿಗ್ನತೆ ಶಾಂತತೆಯೇ ಮಾಸ್ತಿಯೊಳಗಿನ ಹೆಣ್ತನವನ್ನು ಪರಿಚಯಿಸುತ್ತದೆ. ಅಲ್ಲಿನ ಹೆಣ್ತನದ ಮನಸ್ಸು ಹಾಗೂ ಕಣ್ಣು ಹೆಣ್ಣನ್ನು ನೋಡಿದ, ಅರ್ಥೈಸಿಕೊಂಡ ರೀತಿಯಿಂದಲೇ ಅಲ್ಲಿನ ಸ್ತ್ರೀಯರು ಮುಖ್ಯರಾಗುತ್ತಾರೆ.

ಈ ಹಿನ್ನೆಲೆಯಲ್ಲಿ ಡಿ. ಎಸ್. ನಾಗಾಭಾರಣ ಅವರು 'ಶ್ರೇಷ್ಠ ಸಾಹಿತ್ಯದ ಶಕ್ತಿ ಇರುವುದು ಅದರ ತಾಯ್ತನದಲ್ಲಿ ಎಂದು ನನ್ನ ನಂಬಿಕೆ. ಓದುವವರೆಲ್ಲರನ್ನೂ ಅದು ತಾಯಿಯಂತೆ ಸಾಂತ್ವನಗೊಳಿಸುತ್ತದೆ. ಶ್ರೇಷ್ಠ ಸಾಹಿತ್ಯದ ಗುರಿ, ಬದುಕಿನ ಚೆಲುವಿನ ಮೂಲಕ ಅದರಲ್ಲಿ ಪ್ರೀತಿ-ವಿಶ್ವಾಸ ಹುಟ್ಟಿಸುವುದು, ದೈನಂದಿನ ಅಲ್ಲೋಲಕಲ್ಲೋಲಗಳನ್ನು ಅದರ ವಿವರಗಳನ್ನು ಹುಟ್ಟುವ, ನೋವು ವಿಷಾದಗಳನ್ನು ಕತೆಗಾರ ತಾಯಿಯಂತೆ ಮೈದಡವಿ, ಮರೆಸಿ ಈ ಬದುಕನ್ನು ಚೆಲುವಾಗಿಸಿಕೊಳ್ಳಲು ಹೇಗೆ

ದುಡಿಯುತ್ತದೆ ನೋಡಿ ಎಂದು ಕತೆಯ ಕೊನೆಯಲ್ಲಿ ದರ್ಶನ ಕೊಡುವ ಮೂಲಕ ಮನುಷ್ಯನನ್ನು ಎತ್ತರಕ್ಕೆ ಕರೆದೊಯ್ಯುವ ಮಾರ್ಗವನ್ನು ಮಾಸ್ತಿಯವರು ತೋರುತ್ತಾರೆ. ಉದಾತ್ತತೆಯಲ್ಲಿರುವ ಪರಮೋತ್ಕೃಷ್ಟ ಸಾರವನ್ನಷ್ಟೇ ನಾವು ಏಕಾಗ್ರತೆಯಿಂದ ಹೀರಬೇಕು ಎನ್ನುವ ಜೀವನ ಧೋರಣೆ ಅವರ ಬದುಕು ಮತ್ತು ಬರಹಗಳನ್ನು ಬೆಸೆದಿವೆ. ಈ ಧೋರಣೆಯನ್ನು ಒಪ್ಪಿದವರಿಗೆ ಮಾಸ್ತಿಯವರ ಕತೆಗಳು ಹೊಸ ಲೋಕವನ್ನು ತೆರೆಯುತ್ತವೆ.[1] ಎಂದಿರುವುದು ಈ ನಿಟ್ಟಿನಲ್ಲಿ ಪ್ರಸ್ತುತವೂ ಹೆಚ್ಚು ಒಪ್ಪಿತವೂ ಆಗಿದೆ.

ಸ್ತ್ರೀ ಲೋಕವನ್ನು ತೆರೆದಿಟ್ಟ ಮಾಸ್ತಿ ಬರೆಯುತ್ತಿದ್ದ ಸಂದರ್ಭದ ಲೇಖಕರ ಕತೆಗಳ ಸ್ತ್ರೀ ಪ್ರತಿನಿಧೀಕರಣವನ್ನು ಸ್ಥೂಲವಾಗಿ ಸಮೀಕ್ಷಿಸುವುದು ಅಗತ್ಯವಾಗಿದೆ. ಮಾಸ್ತಿಯವರು ಸಮಕಾಲೀನ ಸಮಸ್ಯೆಗಳು ಕಂಡ ಬಗೆಗೆ, ಅವರು ಸ್ಪಂದಿಸಿದ ರೀತಿಯ ವ್ಯತ್ಯಾಸಗಳನ್ನು ಗಮನಿಸುವ ದೃಷ್ಟಿಯಿಂದ ಸೂಕ್ತವಾಗುತ್ತದೆ. ಇಲ್ಲಿ ಮಾಸ್ತಿಯವರ ಹೆಣ್ಣು ಲೋಕ ಎಲ್ಲರಿಗೂ ಪ್ರೇರಣೆಯಾಗುತ್ತದೆ. ಆದರೆ ಅದೇ ಕಾಲಕ್ಕೆ ಸ್ತ್ರೀಯ ಕುರಿತಂತೆ ಸ್ತ್ರೀ ಸಂವೇದನೆಯಿಂದಲೇ ಅಭಿವ್ಯಕ್ತವಾದ ಬದುಕಿನ ರೀತಿಯ ಕುರಿತು ಮಾಸ್ತಿಕತೆಗಳ ಕಿರು ಅವಲೋಕನದ ಮೂಲಕ ತಳುಕು ಹಾಕಲಾಗಿದೆ. ಅಲ್ಲದೆ ಮಾಸ್ತಿಯವರ ಹಾಗೂ ಇತರ ಕತೆಗಾರರ ಕತೆಗಳಲ್ಲಿನ ಸ್ತ್ರೀಯರ ಬದುಕನ್ನು, ಬದುಕಿನ ವಿಭಿನ್ನತೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ನವೋದಯ ಕಾಲಘಟ್ಟದಲ್ಲಿ ನಿಂತ ಮಾಸ್ತಿ ಅಲ್ಲಿನ ತಾತ್ವಿಕತೆಯಲ್ಲಿ ಒಂದಾದ ಪ್ರೀತಿ-ಪ್ರೇಮದ ಕುರಿತ ಬದುಕಿಗೆ ಹತ್ತಿರವಾಗಿ ತಮ್ಮದೇ ಆದ ನೆಲೆಯಲ್ಲಿ ತರ್ಕಿಸುತ್ತಾರೆ. ಎಲ್ಲ ಸುಧಾರಣೆಗಳ ತೀವ್ರತೆಯ ನಡುವೆಯೂ ಅವರು ಮೌನವಾಗೇ ಇದ್ದು ಬದುಕು ಇರಬೇಕಾದ ರೀತಿಯನ್ನು ಪ್ರಸ್ತುತ ಪಡಿಸುವ ಕುರಿತು ಒತ್ತುಕೊಡುತ್ತಾರೆ.

ಮಾಸ್ತಿ ಅವರಿಗೆ ಭಾರತೀಯ ಸನಾತನ ಸಂಸ್ಕೃತಿ ಕಳೆದು ಹೋಗುತ್ತಿರುವ ಕುರಿತು ಖೇದವಿದೆ. ಅದನ್ನು ಸ್ತ್ರೀಯಿಂದಲೇ ಉಳಿಸುವ ಪ್ರಯತ್ನವನ್ನು ಅವರು ಮಾಡಹೊರಡುತ್ತಾರೆ. ಸಂಸ್ಕೃತಿ ಕಳೆದುಹೋಗುವುದರ ಕುರಿತು ಅವರಿಗಿರುವ ಕಳವಳ ಪರಿಚಿತವಾಗುವುದು 'ಮಸುಮತ್ತಿ' ಕತೆ. 'ಅಣ್ಣಾ ಈ ಜನ ಭಾರತ ಮಾತೆ ಅನ್ನುತ್ತಾರಲ್ಲ ಆ ಸುಂದರಿ ಸನ್ನಿಯಿಂದ ಮಲಗಿದ್ದಾಳೆ. ಮಕ್ಕಳು ಹತ್ತಿರ ಕುಳಿತು ಅಮ್ಮಾ ಎಂದು ಅಳುತ್ತಿವೆ. ದೇಹವನ್ನು ನೋಡಿದರೆ ಜೀವ ಇನ್ನು ಈಗಲೋ ಆಗಲೋ ಮತ್ತು ಬರುತ್ತೆ ಅನ್ನು ಹಾಗೆ ಕಳೆ ಇದೆ. ಇಂಥಾ ಸಮಯದಲ್ಲಿ ನಾವು ಈ ಮೈಯ್ಯ ಮೇಲಿರುವ ಬಳೆ ಉಂಗುರ ಮೂಗುತಿಗಳನ್ನು ತೆಗೆದುಕೊಂಡು ಹೋಗಿ ಅದನ್ನು ವಿರೂಪ ಮಾಡಿದರೆ ಜೀವ ಬಂದಾಗ್ಯೆ ಅದಕ್ಕೆ ದೇಹದ ಗುರುತು ಸಿಕ್ಕದೆ ಹೋಗುವುದು. ದೇಹವನ್ನು ತೆಗೆದುಕೊಂಡು ಹೋದರೂ ಹಾಗೆಯೇ ಅಮ್ಮಾ ಎಂದು ಮಕ್ಕಳು ಮೊರೆಯತ್ತಾ ಇವೆ. ಅಳುವುದಲ್ಲಾ ಎಂದು ಎಲ್ಲೋ ಹೋಗಿರುವ ತಾಯಿ

---

೧ ಪ್ರ... ಅಂಕಣ, ಮೇ-ಜೂನ್ [illegible]

ಜೀವ ಅಲೆದು ಅಲೆದು ಹಿಂತಿರುಗಿ ಬರಬಹುದು. ಬಂದಾಗ್ಯೆ ಸೇರುವುದಕ್ಕೆ ದೇಹವಿಲ್ಲದೆ ಹೋಗಿ ಅದು ಎಲ್ಲಾದರೂ ಕ್ಷೋಭೆಗೆ ಸಿಕ್ಕೀತು ಅಣ್ಣಾ ನಾನಿದನ್ನು ಮಾಡಬಾರದು' ಎನ್ನುವಲ್ಲಿ ಸಂಸ್ಕೃತಿಯನ್ನು ವಿರೂಪಗೊಳಿಸಬಾರದ ವಾಸ್ತವತೆಯನ್ನು ಗ್ರಹಿಸಬಹುದಾಗಿದೆ.

ಇಡೀ ಕತೆ ಸಾಗುವುದೇ ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪರಿಚಯಿಸುವ ನೆಲೆಯಿಂದಲೇ. ಅದಕ್ಕಾಗಿ ಬಳಸಿಕೊಳ್ಳುವುದು ಶಿಲ್ಪಕಲೆ ಹಾಗೂ ಚಿತ್ರಕಲೆಯ ಶ್ರೀಮಂತಿಕೆಯನ್ನು. ಅಲ್ಲಿ ಸಂಸ್ಕೃತಿಯ ನೆಲೆಗಟ್ಟನ್ನು ಸ್ಪಷ್ಟವಾಗಿ ಹಿಡಿದಿಟ್ಟದ್ದು ಕಾಣುತ್ತೇವೆ. ಅದೂ ಕೂಡ ತೀರಾ ಹಾಳಾಗಿ ಹೋದ ಮಸುಮತ್ತೆ ಊರಿನೊಳಗಿನ ಚಿತ್ರಕಲೆಯ ಚಿತ್ರಕಲೆ ಸಂಪತ್ತಿನಿಂದ ವಿವರಿಸುತ್ತಾರೆ. ಇವರ ಹಿಂದೆ ನಶಿಸಿಹೋಗುತ್ತಿರುವ ಸಂಸ್ಕೃತಿಯ ತಳಪಾಯವನ್ನು ಮುಂದಿಡುವ ಉದ್ದೇಶವೇ ಅಡಗಿದೆ. ಹಳೆಯದಾದ ಚಿತ್ರವನ್ನು ತಗೆದು ನೋಡುವುದಕ್ಕೆ ಆಸಕ್ತರಾದವರು ಎಮಿಲಿ ಫರ್‍ಕು ವಿದೇಶಿಯರು. ಅಲ್ಲದೆ ಆ ಹಳೆ ಚಿತ್ರ ಬರೆದವರು ಅಜ್ಜ ಎನ್ನುವಲ್ಲಿ ಸಂಸ್ಕೃತಿಯ ಹಳೆಯ ತಲೆಮಾರನ್ನು ಇಲ್ಲಿ ಪ್ರತಿನಿಧಿಸಿದ್ದಾಗಿದೆ. ಮತ್ತು ಅವರನ್ನು ಬಹಳಷ್ಟು ಗಟ್ಟಿಗರು' ಎಂದು ಗುರುತಿಸುವಲ್ಲಿಯೇ ಅದರ ಗಟ್ಟಿತನ ಪ್ರತಿಪಾದಿತವಾಗಿದೆ. ಅಲ್ಲದೆ ಫರ್‍ಕುವಿನ 'ಅಯ್ಯಾ ನೀವು ಈ ಪಟವನ್ನು ನನಗೆ ಬೆಲೆಗೆ ಕೊಡುವುದಾದರೆ, ತೆಗೆದುಕೊಂಡು ಹೋಗಿ ನಮ್ಮ ಸೀಮೆಯಲ್ಲಿ ನಿಮ್ಮ ತಾತನವರ ಹೆಸರನ್ನು ಪ್ರಸಿದ್ಧವಾಗುವ ಹಾಗೆ ಮಾಡುತ್ತೇವೆ. ಕೊಡುವಿರಾ' ಎಂದು ಕೇಳುವ ಸ್ಥಿತಿಯ ಹಿಂದೆ ನಮ್ಮ ಶ್ರೀಮಂತ ಕಲೆ, ಸಂಸ್ಕೃತಿ ನಮ್ಮ ದೇಶಕ್ಕೆ ಮೌಲ್ಯಯುತವಾದದ್ದಾಗಿ ಕಾಣದೆ, ಅದಕ್ಕೆ ಬೆಲೆಕೊಡಿಸಲು ವಿದೇಶಿಯರು ಬರಬೇಕಾದ ಹಾಗೂ ಆ ಕುರಿತು ಅವರೇ ಮನಸ್ಸು ಮಾಡಬೇಕಾದ ಸನ್ನಿವೇಶ ಬಂದದ್ದರ ಕುರಿತು ವಿಷಾದವಿದೆ. ಅಲ್ಲದೆ ಪುಷ್ಕರಣಿಯ ಅಭಿವೃದ್ಧಿಕಡೆಗೆ ಕೂಡ ಅವರು ಗಮನಹರಿಸಿ 'ಅಣ್ಣಾ ಅವರು ಮಾಡುವ ಕೆಲಸವನ್ನೇ ನಾವು ಮಾಡಬೇಕೆಂದಿದ್ದೇವಲ್ಲ, ನೋಡು ಈಗ ಇದರಲ್ಲಿ ನೀರಿಲ್ಲ ಹೋಗಲಿ, ಕಟ್ಟಡ ಚೆನ್ನಾಗಿದೆ. ಸೊಪ್ಪುಸೆದೆ ತೆಗದುಹಾಕಿ ಸರಿಯಾಗಿ ನೋಡಿಕೊಂಡರೆ ನೀರು ಇಂದಿಲ್ಲದಿದ್ದರೆ ನಾಲ್ಕು ವರ್ಷದ ಮೇಲೆ ಬಂದಾಗ್ಯೆ ಇದು ಒಳ್ಳೆಯ ಕೊಳ. ನನಗೆ ಈಗ ಮನಸ್ಸಿನಲ್ಲ. ಹಿಂದೆ ನೀರಿಗೆ ಸೋಪಾನದಿಂದ ಇಳಿದು ಹೋದ ಈಊರ ಹುಡುಗಿಯರ ಕಾಲಂದಿಗೆಯ ಶಬ್ದ ಕೇಳಿಸುತ್ತಿದೆ.

ಅವರು ಇಳಿದೂ ಹತ್ತಿ ಇನ್ನೂ ನಡೆಯುತ್ತಿರುವರೋ ಎನ್ನುವಂತಿದೆ. ಕೊಳವಿದ್ದರೆ ನೀರು ಬರಬಹುದು, ಸುಂದರಿಯರು ಬರಬಹುದು, ಎಲ್ಲವೂ ಬರಬಹುದು. ಕಲ್ಲನ್ನು ಕಳಚಿಕೊಂಡು ಹೋಗುವವರು ಹೋಗಿ ಕೆಟ್ಟು ಹೋದ ಬಾವಿ ಎಂದು ಬಾವಿಯನ್ನು ಎಲ್ಲರೂ ಅಷ್ಟಷ್ಟು ಕೆಡಿಸಿದರೆ ನೀರು ಬಂದಾಗ್ಯೆ ಕೊಳವಿಲ್ಲ ಅಣ್ಣಾ!' ಎಂದು ಹೇಳುವಲ್ಲಿ ಸಂಸ್ಕೃತಿಯ ಶ್ರೀಮಂತಿಕೆಯ ನೆನಪು ಉಳಿಸಿಕೊಳ್ಳಬೇಕಾದ ವಸ್ತುಸ್ಥಿತಿಯನ್ನು ಈ ಮೂಲಕ ಮುಂದಿಡಲಾಗಿದೆ. ಇಲ್ಲಿ ವಿರೋಧವಿರುವುದು ಉದ್ಧಾರದ ನೆಪದಲ್ಲಿ ಮಾಡುವ ಸಂಸ್ಕೃತಿಯ ವ್ಯಾಪಾರಕ್ಕೆ. ಪಟವನ್ನು ಅಲ್ಲೇ ಬಿಡುವುದು ಸಂಸ್ಕೃತಿಯ

ಶ್ರೀಮಂತಿಕೆಯನ್ನು ಮನನ ಮಾಡಿಸುವಷ್ಟು ಅವರಿಗೆ ಮುಖ್ಯವೇ ಹೊರತು ಅದನ್ನು ಕೊಡುವುದಕ್ಕೆ ಅಲ್ಲಎಂಬುದು ಸ್ಪಷ್ಟಗೊಳಿಸುತ್ತದೆ. ಸಂಸ್ಕೃತಿಯನ್ನು ಬಿಟ್ಟುಕೊಡಬಾರದು ಎಂಬ ಕಾಳಜಿಯ ಸಂದೇಶ ಇಲ್ಲಿನದ್ದಾಗಿದೆ. ಅಂದರೆ ವಿದೇಶಿ ಸಂಸ್ಕೃತಿ ಹಾಗೂ ಅಲ್ಲಿನ ಸಾಹಿತ್ಯದಿಂದ ದೊರಕಿದ ಜ್ಞಾನದ ಹಿನ್ನೆಲೆಯಲ್ಲಿಯೇ ಅವರು ಭಾರತೀಯ ಸಂಸ್ಕೃತಿಯ ಹಿರಿತನವನ್ನು ಉದಾತ್ತತೆಯನ್ನು ಪರಿಚಯಿಸುವ ಕೆಲಸ ಮಾಡುತ್ತಾರೆ. ಸಮಕಾಲೀನ ಸಂದರ್ಭದ ವ್ಯಕ್ತಿಗಳನ್ನು ಬದುಕಿಸುವ ರೀತಿಯಲ್ಲಿ ಅವರು ತಳೆಯುವ ಅಭಿಪ್ರಾಯಗಳ ನೆಲೆಯಿಂದ ಅದನ್ನು ಒಪ್ಪಿಸುವ ಕೆಲಸವನ್ನು ಮಾಸ್ತಿ ಅವರು ಕತೆಗಳಲ್ಲಿ ಸಾಧಿಸಿದ್ದಾರೆ. ಅಲ್ಲಿನ ಬದುಕಿನ ಸಾರಸತ್ವಗಳನ್ನು ಆ ಮೂಲಕ ಪರಿಚಯಿಸುವ ಮಾಸ್ತಿ ಅದನ್ನು ಸಾರ್ವಕಾಲಿಕ ಹಾಗೂ ಸಾರ್ವತ್ರಿಕಗೊಳಿಸುವ ನೆಲೆಯಲ್ಲಿ ತುಡಿದದ್ದು ಸ್ಪಷ್ಟವಾಗುತ್ತದೆ.

ವಾಸ್ತವವಾದಿಯಾಗಿ ಬಿಡುವ ಮಾಸ್ತಿ ತಮ್ಮ ಕತೆಗಳಲ್ಲಿ ಪರಂಪರಾಗತ ನಂಬಿಕೆಗಳನ್ನು ಮೈಗೂಡಿಸಿಕೊಂಡು ಬಂದ ಸ್ತ್ರೀಯರನ್ನೇ ಮಾದರಿಯಾಗಿ ಚರ್ಚಿಸುತ್ತಾರೆ. ಇಲ್ಲಿಯೇ ಸಮಾಜದ ಉಳಿವಿನ ಕುರಿತ ಕಾಳಜಿಯ ದರ್ಶನವಾಗುತ್ತದೆ. ಸಮಾಜವೊಂದನ್ನು ಉಳಿಸುವುದಕ್ಕೆ ಹೆಣ್ಣು ಕಾರಣಳಾಗಬೇಕಾದ ರೀತಿಯನ್ನು ಅವಳ ಬದುಕಿನ ಮೂಲಕ ಮುಂದಿಡುತ್ತಾರೆ. ಕೈಗಾರಿಕೀಕರಣದಿಂದಾಗಿ ಭಾರತದ ಜನಜೀವನದ ರೀತಿ ಬದಲಾಗಿದೆ. ಅಲ್ಲಿ ಇಂಗ್ಲೀಷ್ ಕಲಿಕೆಗೆ ಒಳಗಾದವರನ್ನು ಕಾಣುತ್ತೇವೆ. ಅದನ್ನು 'ರಂಗನ ಮದುವೆ' ಕತೆಯಲ್ಲಿನ ರಂಗನ ವಿದ್ಯಾಭ್ಯಾಸ, ಆತ ಊರಿಗೆ ಮರಳಿದ ಸಂದರ್ಭ ಜನರು ಕುತೂಹಲದಿಂದ ಅವನನ್ನು ನೋಡಲು ಬರುವುದು ಅದನ್ನು ಸ್ಪಷ್ಟಪಡಿಸುತ್ತದೆ. ಬಾಲ್ಯವಿವಾಹದಿಂದಾಗಿ ದೂರ ಉಳಿದು ಬಿಡುತ್ತದೆ ಎನ್ನುವ ಗಂಡ ಹೆಂಡಿರ ಸರಸಸಲ್ಲಾಪ ಮಾಸ್ತಿಯವರ 'ರಂಗಪ್ಪನ ಕೋರ್ಟ್ ಷೀಪ್' ಕತೆ ಜೀನವನಾನುಭವ'ದ ಹಿನ್ನೆಲೆಯಲ್ಲಿಯೇ ತೆರೆದುಕೊಂಡಿದೆ. ರಂಗಪ್ಪ ಹಾಗೂ ರತ್ನಮ್ಮ ನಡುವಿನ ಪತ್ರ ಮುಖೇನ ನಡೆಸುವ ಸಂಭಾಷಣೆಯೇ ಅವರ ನಡುವಿನ ಬಾಂಧವ್ಯವನ್ನು ಹೆಚ್ಚಿಸಿದ್ದು ತಿಳಿಸುತ್ತದೆ. ಅದಕ್ಕೂ ಮುನ್ನ ಮದುವೆಯದಿನ ಆಕೆ ಹಾಡಿದ, ಗಂಡನನ್ನು ತಮಾಷೆ ಮಾಡಿದ ರೀತಿಯೂ ವಿಶೇಷದ್ದೇ ಆಗುತ್ತದೆ. ಅಲ್ಲದೆ ಬಾಲ್ಯವಿವಾಹದ ತೀವ್ರತೆ ಇದ್ದದ್ದು ಮತ್ತು ಅದನ್ನು ವಿರೋಧಿಸುವ ವರ್ಗಗಳ ನಡುವೆ ನಿಂತ ಮಾಸ್ತಿ ಮಾಡುವ ಚರ್ಚೆ 'ರಂಗನ ಮದುವೆ' ಕತೆಯಲ್ಲಿ ಉತ್ತರ ನೀಡುತ್ತದೆ.

'ನನಗೆ ಸರಿಯಾದ ಉತ್ತರ ಸಿಕ್ಕಬೇಕು. ನಮ್ಮ ಸಾಹೇಬರು ಒಬ್ಬರು ಇದ್ದಾರೆ. ಅವರು ಮದುವೆ ಮಾಡಿಕೊಂಡುದು ಆರು ತಿಂಗಳ ಹಿಂದೆ. ಅವರಿಗೆ ಸುಮಾರು ಮೂವತ್ತು ವರ್ಷ, ಅವರ ಹೆಂಡತಿಗೆ ಇಪ್ಪತ್ತೈದು ವರ್ಷವಂತೆ. ಅವರು ಪ್ರೇಮವಾಗಿ ಮಾತನಾಡಿಕೊಳ್ಳಬಲ್ಲರು. ನಾನು ಒಬ್ಬ ಸಣ್ಣ ಹುಡುಗಿಯನ್ನು ಮದುವೆ ಮಾಡಿಕೊಂಡೆನೆನ್ನಿ. ಏನಾದರೂ ಪ್ರೇಮದ ಮಾತನ್ನಾಡಿದರೆ ಅವಳು ಬೈದನೆಂದೇ ತಿಳಿದುಕೊಳ್ಳಬಹುದು. ಮದುವೆಯಾದರೆ ವಯಸ್ಸಾದ ಹುಡುಗಿಯನ್ನೇ ಮಾಡಿಕೊಳ್ಳಬೇಕು, ಇಲ್ಲದಿದ್ದರೆ ಸುಮ್ಮನೆ ಇರಬೇಕು. ಅದಕ್ಕಾಗಿ ನಾನು ಬೇಗ ಮಾಡಿಕೊಳ್ಳುವುದಿಲ್ಲ.'

'ನಾವೇ ಮೆಚ್ಚಿ ಮದುವೆ ಮಾಡಿಕೊಳ್ಳುವಂತಿರಬೇಕು' ಎಂದು ಯೋಚಿಸುವ ಆಧುನಿಕತೆಯ ವಿಚಾರಧಾರೆಯ ಪ್ರಭಾವಕ್ಕೊಳಗಾದ ಮನಸ್ಸು ತೊಡುವ ನಿರ್ಧಾರಕ್ಕೆ ಸಾಂಪ್ರದಾಯಿಕ ಮನಸ್ಸು ಒಪ್ಪಿಕೊಳ್ಳುವುದಿಲ್ಲ. ಹನ್ನೊಂದು ವರ್ಷದ ಹುಡುಗಿ ರತ್ನಮ್ಮ ಹಾಗೂ ಆಕೆಯ ಹಾಡಿಗೆ ಮರುಳಾಗಿ ಅವಳೊಂದಿಗೆ ವಿವಾಹವಾಗುವ ಹಿರಿಯ ರಂಗಪ್ಪ ಪ್ರೀತಿ ಹಾಗೂ ಸಂಸಾರಕ್ಕೆ ವಯಸ್ಸಿನ ತೊಂದರೆಯಾಗುವುದಿಲ್ಲ ಎಂದು ಹೇಳುವ ಮೂಲಕ ಮಾಸ್ತಿ ಸುಧಾರಣಾವಾದಿಗಳ ಆಧುನಿಕ ವಿಚಾರಧಾರೆಗಳನ್ನು ಅಲ್ಲಗಳೆಯುತ್ತಾರೆ.

ಅದೇ ಕಾಲಘಟ್ಟದಲ್ಲಿ ಬರೆದ ಕಾರಂತ ಹಾಗೂ ಕುವೆಂಪು ಅವರ ಸಾಹಿತ್ಯದ ಸ್ತ್ರೀಯರು ಪ್ರತಿನಿಧಿಸಿದ ಮೌಲ್ಯಗಳು ಮಾಸ್ತಿ ಕತೆಗಳಲ್ಲಿ ಸ್ತ್ರೀ ಪ್ರತಿನಿಧಿಸುವ ಮೌಲ್ಯಗಳಿಗಿಂತ ತೀರಾ ಭಿನ್ನವಾಗಿವೆ. ಸ್ತ್ರೀಯರನ್ನು ಮಾಸ್ತಿ ಕೇವಲ ಸಾಂಪ್ರದಾಯಕ ಚೌಕಟ್ಟಿನೊಳಗೇ ಚಿತ್ರಿಸಿದರೆ, ಕಾರಂತರು ಮನುಷ್ಯ ಸಹಜ ಅಲೋಚನೆಯ ನೆಲೆಯಲ್ಲಿ ಚಿತ್ರಿಸುತ್ತಾರೆ.

ಸ್ತ್ರೀಯರ ಕುರಿತಂತೆ ಕಾರಂತರಿಗೆ ಬಹಳವಾಗಿ ಕಾಡಿದ್ದು ಗಂಡನಿಗೆ ಪತ್ನಿಯಾಗಿ ಬಾಳುವ, ಕಷ್ಟ ಸವೆಸುವ, ಕುಟುಂಬ ಮುನ್ನಡೆಸುವ ಹೆಣ್ಣುಗಳ ಹಾಗೂ ವೇಶ್ಯಾವಾಟಿಕೆಗೆ ಒಡ್ಡಿಕೊಂಡ, ಲೈಂಗಿಕ ಸ್ವಾತಂತ್ಯ್ರ ಪಡೆದುಕೊಂಡ ಸ್ತ್ರೀಯರು. ಸ್ವತಂತ್ರ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದುಕೊಂಡ ಸ್ತ್ರೀಯರನ್ನು ಪರಿಚಯಿಸುವಲ್ಲಿ ಕಾರಂತರು ಮಾಸ್ತಿಗಿಂತ ಭಿನ್ನರಾಗುತ್ತಾರೆ. ಸ್ತ್ರೀಯರು ಗರತಿಯರಾಗಿ ಬದುಕಬೇಕೆಂಬುದನ್ನು ಪ್ರತಿಪಾದಿಸುವ ನೆಲೆಯಲ್ಲಿ ಕಾರಂತರು ಮಾಸ್ತಿಯವರಿಗೆ ಹತ್ತಿರವಾಗುತ್ತಾರೆ. ಜೊತೆಗೆ ವೇಶ್ಯೆಯರ ಬದುಕನ್ನು ಕೂಡ ವಿವರಿಸುತ್ತಾರೆ. ಅಲ್ಲೆಲ್ಲ ಅವರ ಕಾಳಜಿ ತುಂಬಿರುವುದು ಮಾನವೀಯತೆಯ ಕುರಿತು. ವೇಶ್ಯೆಯರ ಸಮಸ್ಯೆಗಳನ್ನು ಕಾರಂತರು ಮುತುವರ್ಜಿಯಿಂದ ಪರಿಚಯಿಸುತ್ತಾರೆ. ಅವರು ಅನುಭವಿಸಿದ ಕಷ್ಟದ ಜೀವನವನ್ನು ತೆರೆದಿಡುತ್ತಾರೆ. 'ಸರಸಮ್ಮನ ಸಮಾಧಿ' ಕಾದಂಬರಿ ವಿವಾಹದ ಸಾಂಸ್ಥಿಕ ಕ್ರಿಯಾಚರಣೆಯ ವಿವಿಧ ಮಜಲುಗಳನ್ನು ದಾಖಲಿಸುತ್ತದೆ. ದಾಂಪತ್ಯ ಸುಖ ಅನುಭವಿಸದ ಅತ್ತೆಯ ಶೋಷಣೆ ಸಹಿಸಿ ಸಹಿಸಿ ಬೆಂಡಾದ ಸ್ವಾಭಿಮಾನಿ, ಬುದ್ಧಿವಂತೆ ಸುನಾಲಿನಿ ಸರಸಮ್ಮನ ಗುಡಿಗೆ ತೆರಳುತ್ತಾಳೆ. ಗಂಡ ಕೊಡುವ ಹಿಂಸೆಯನ್ನು ಸಹಿಸಲಾಗದೆ ತವರು ಮನೆ ಸೇರುವ ಆಕೆ ತನ್ನ ಪತಿ ಮರಣ ಹೊಂದಿದಾಗ ತಾನು ಸಾಂಸಾರಿಕ ಸುಖ ಅನುಭವಿಸದೇ ಹೋದದ್ದರಿಂದಾಗಿ ಸಹಗಮನ ವನ್ನು ಅನುಸರಿಸುತ್ತಾಳೆ. ಲೌಕಿಕವಾಗಿ ದೊರೆಯದ ಸುಖವನ್ನು ಪಾರಲೌಕಿಕದಲ್ಲಿ ಅರಸುತ್ತಾಳೆ. ಈ ರೀತಿಯಲ್ಲಿ ಸಮಾಧಿ ಹೊಂದಿದ ಅವೈಚಾರಿಕ ಆಲೋಚನೆಯನ್ನು ತೆರೆದಿಡಲಾಗಿದೆ. ಅಲ್ಲಿ ಸರಸಮ್ಮನ ನಿಧನದ ಹಿಂದೆ ಒಂದು ಸಾಂಪ್ರದಾಯಕ ನಿಲುವಿದೆ. ಲೌಕಿಕದ ಕಾಲಕ್ಕೆ ಪಾರಲೌಕಿಕದಲ್ಲಿ ಸುಖ ಹುಡುಕುವ ಮೂಲಕ ಸಮಾಜದ ಮಧ್ಯೆ ಅಂಥ ಅವೈಜ್ಞಾನಿಕ ಹಾಗೂ ಅವೈಚಾರಿಕ ನಿಲುವುಗಳಿಗೆ ಒಗ್ಗಿ ಹೋಗಿದ್ದ ಹೆಣ್ಣುಗಳನ್ನು ಸರಸಮ್ಮ ಪ್ರತಿನಿಧಿಸುತ್ತಾಳೆ. ಇದನ್ನು ಪರಿಚಯಿಸುವಲ್ಲಿ ಸಹಗಮನದ

ಕುರಿತಾಗಿ ಇರುವ ಅವೈಚಾರಿಕ ನಂಬಿಕೆಗಳನ್ನು ದೂರಮಾಡಬೇಕೆನ್ನುವ ಕಾಳಜಿ ಕಾರಂತರಿಗಿರುವುದು ಸ್ಪಷ್ಟವಾಗುತ್ತದೆ. ಈ ಆಶಯದಲ್ಲಿ ಮಾಸ್ತಿ ಸಂಪೂರ್ಣ ಭಿನ್ನರಾಗುತ್ತಾರೆ. ಅವರಿಗೆ ಸಹಗಮನ ಪದ್ಧತಿ ಅವೈಚಾರಿಕ ಎಂದು ಅನ್ನಿಸುವುದಿಲ್ಲ. ಅದು ಮೌಲ್ಯಯುತವಾದದ್ದು ಎಂದು 'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಪ್ರತಿಪಾದಿಸಿದ್ದಾರೆ. ಕಾರಂತರೂ ಬಹಳಷ್ಟು ಮಂದಿ ಕುಟುಂಬ ನಿರ್ವಹಣೆಯಿಂದ ನೊಂದ ಹೆಣ್ಣುಮಕ್ಕಳನ್ನು ಚಿತ್ರಿಸುತ್ತಾರೆ. ಸಾಂಪ್ರದಾಯಕ ನಿಯಮ, ನಡವಳಿಕೆಗಳೊಂದಿಗೆ ಅವುಗಳನ್ನೇ ಅನುಸರಿಸುತ್ತ ಬಂದ ಸ್ತ್ರೀಯರನ್ನು ಪರಿಚಯಿಸಿ ಅಂಥ ಸಮಾಜದ ಪ್ರತಿನಿಧಿಗಳಾಗಿ ಅವರನ್ನು ನಿಲ್ಲಿಸುತ್ತಾರೆ. ಇಲ್ಲಿ ಮೇಲ್ವರ್ಗದ ಮಹಿಳೆಯರು ಕುಟುಂಬ ಕಟ್ಟುವ ಕೆಲಸದಲ್ಲೇ ಮಗ್ನರಾಗಿ ಸವೆಯ ಬೇಕಾದದನ್ನು ಪ್ರತಿನಿಧಿಸಿದ್ದಾರೆ. ಆದರೆ ಕೆಳವರ್ಗದವರು ಈ ಕುಟುಂಬ ಕಟ್ಟುವ ಹಾಗೂ ಒಡೆಯುವ ಕಡೆಗೆ ಹೆಚ್ಚು ಚಿಂತಿಸದೇ ತಮ್ಮ ನೆಮ್ಮದಿ, ಬೇಕು ಬೇಡಗಳನ್ನು ಪೂರೈಸುವವರಾಗಿ ಬಾಳುತ್ತಾರೆ. ಆ ಬಾಳ್ವೆಯಲ್ಲಿ ತಮ್ಮತನವನ್ನು ಒಂದೇ ನೆಲೆಯಲ್ಲಿ ಬಳಸಿಕೊಳ್ಳಲು ಅವರು ಪ್ರಯತ್ನಿಸುವವರಾಗಿರುತ್ತಾರೆ. ಅಲ್ಲಿ ಲೈಂಗಿಕ ಸಂಬಂಧವಿರಬಹುದು, ವೈವಾಹಿಕ ಸಂಬಂಧವಿರಬಹುದು ಅದು ಅತ್ಯಂತ ಪಾತಿವ್ರತ್ಯದಿಂದ ಕಂಗೊಳಿಸುವಂಥದ್ದಲ್ಲ.

ಕಾರಂತರ 'ಕುಡಿಯರ ಕೂಸು' ಕಾದಂಬರಿಯ ಗಿಡ್ಡಿ ಹಾಗೂ ಕೆಂಪಿ ಎದುರಿಸುವ ಸಮಸ್ಯೆಗಳು ಒಂದೇ ಆದರೂ ಪರಿಣಾಮ ವಿಭಿನ್ನವಾಗುತ್ತದೆ. ಆಧುನಿಕತೆ ಹಾಗೂ ಪಾರಂಪರಿಕ ನಂಬಿಕೆಗಳ ಹೊಯ್ದಾಟ ಹಾಗೂ ಪರಂಪರೆಯೇ ಗೆಲ್ಲುವುದಕ್ಕೆ ಗಿಡ್ಡಿ ತಿರುಮಲ ಭಟ್ಟರ ಆಕ್ರಮಣದಿಂದ ತಪ್ಪಿಸಿಕೊಳ್ಳುತ್ತಾಳೆ. ಕೆಂಪಿ ಆಧುನೀಕರಣಕ್ಕೆ ಎದುರಾಗಿ ಅವನ ದೇಹಸುಖ ತೀರಿಕೆಗೆ ಒಳಗಾಗುತ್ತಾಳೆ. ಗಿಡ್ಡಿಯ ಜಯ ಆಕೆಯ ಬದುಕಿನ ಹಿನ್ನೆಲೆಯದ್ದೂ ಆಗಿರುತ್ತದೆ. ತಾಯ್ತನ, ಕುಟುಂಬ ಮುಂದುವರಿಸುವ ಕರ್ತವ್ಯದ ಹೆಣ್ಣಾಗಿ ಪರಿಚಿತಗೊಳ್ಳುವ ಇನ್ನೊಬ್ಬ ಪ್ರಮುಖ ಹೆಣ್ಣು 'ಚೋಮನದುಡಿ' ಕಾದಂಬರಿಯಲ್ಲಿ ತಾಯಿ, ಮಗಳು, ಅಕ್ಕ, ತಂಗಿಯಾಗಿ ಕರ್ತವ್ಯ ನಿರ್ವಹಿಸಿದ ಬೆಳ್ಳಿ ಕುಟುಂಬದ ಪೋಷಕಿ-ಪಾಲಕಿಯಾಗಿ ಭಾರತೀಯ ನಾರೀತ್ವದ ಸಾಕ್ಷಾತ್ಕಾರ ಮಾಡಿಸುತ್ತಾಳೆ. ಆದರೆ ಪರಿಸ್ಥಿತಿ, ಗಂಡಸಿನ ಸ್ವಾರ್ಥದಾಸೆಗೆ ಅವಳ ಬದುಕೇ ಮುದುಡಿಬಿಡುವ ಪ್ರಸ್ತಾಪವನ್ನು ಇಲ್ಲಿ ಮುಂದಿಡಲಾಗಿದೆ. ಇಲ್ಲಿ ಲೈಂಗಿಕ ಸ್ವೇಚ್ಛೆಗೆ ಅವಕಾಶವಿಲ್ಲ. ಆದರೆ ಅದು ಪರಸ್ಪರರ ಒಪ್ಪಿಗೆ ಇದ್ದರೆ ಮಾತ್ರ ಸಹ್ಯವಾಗುತ್ತದೆ.

ದುಡಿಮೆಯನ್ನೇ ಒಂದು ಮುಖ್ಯ ಅಂಗವಾಗಿ ಸ್ವೀಕರಿಸಿ ಬದುಕುವ ಅಲ್ಲಿನ ಸ್ತ್ರೀಯರು ಬದುಕನ್ನು ಗೆಲ್ಲುವುದನ್ನು ಕಾಣುತ್ತೇವೆ. ಬೆಳ್ಳಿ ಶ್ರಮಜೀವಿ. ಅಂತೆಯೇ ಗಿಡ್ಡಿ ಕೂಡ. ಅವರಂಥರವರೇ ಕಾದಂಬರಿಗಳಲ್ಲಿ ಪ್ರಮುಖ ಸ್ಥಾನ ಪಡೆಯುತ್ತಾರೆ. ಆಧುನಿಕತೆಗೆ ಒಳಗಾಗುವುದನ್ನು ಮಾಸ್ತಿ ಅವರಂತೆ ಕಾರಂತರು ವಿರೋಧಿಸುತ್ತಾರೆ.

ಮಾಸ್ತಿ ಅವರ ಚೆನ್ನಮ್ಮ ಕಥೆಯಲ್ಲಿ ಆಧುನಿಕತೆಗೆ ಮುಖಮಾಡಿ ಬದುಕನ್ನು ಅಭ್ಯಾಸ ಮಾಡಿಕೊಂಡದ್ದರಿಂದ ದೇಶಿ ಸಂಸ್ಕೃತಿಗೆ ಯಾವತ್ತೂ ಬದ್ಧರಾಗಿರಬೇಕೆಂಬುದನ್ನು ಮಾಸ್ತಿ ತಿಳಿಸಿದಂತೆಯೇ ಕಾರಂತರು ಈ ಎರಡೂ ಕಾದಂಬರಿಗಳಲ್ಲೂ ಅದನ್ನೇ ಪ್ರತಿಪಾದಿಸಿದ್ದಾರೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿವಿವಾಹವಾದ ಹೆಣ್ಣನ್ನು ನಿಯಂತ್ರಿಸುವ ರೀತಿ, ಆಕೆಯ ಒಟ್ಟಾರೆ ಬದುಕಿನ ರೀತಿಯನ್ನು ಪ್ರತಿನಿಧಿಸುತ್ತದೆ. ಅಲ್ಲಿ ರಾಮ ಐತಾಳ-ಪಾರೋತಿಯ ಮದುವೆ ಹಾಗೂ ಆಕೆಯ ಜೀವನ ಹಾಗೂ ಅನುಭವಿಸಿದ ಯಾತನೆಗಳ ಪರಿಚಯವಿದೆ. ಆಕೆ ಕಷ್ಟದ ನಡುವೆಯೂ ಮಗು ಕೊಡಲಾಗದೇ ಹೋದಾಗ ಗಂಡನ ಮರುಮದುವೆಯನ್ನುತಡೆಯಲಾಗದಷ್ಟು ದುರ್ಬಲಳಾಗಬೇಕಾಗುತ್ತದೆ. ಸೀತಾದೇವಿಯಂತೆ ಪರಿಚಿತಗೊಳ್ಳುವ ಪಾರೋತಿ ಕಷ್ಟಗಳ ಸರಮಾಲೆಯನ್ನು ಅನುಸರಿಸುತ್ತಾ ಬಂದವಳು. ಅಂತೆಯೇ ಅಲ್ಲಿನ ನಾಗವೇಣಿ ಕೂಡ. ಅವಳು ಅಕ್ಷರಸ್ಥೆ ಆದರೂ ಬದುಕಿನ ನೋವುಣ್ಣುವುದು ತಪ್ಪಲಿಲ್ಲ. ಎಷ್ಟೇ ಕಷ್ಟ ಬಂದರೂ ಅವರು ದೂರ ಹೋಗದಿರುವುದು ಇಲ್ಲಿ ಹೆಣ್ಣು ಗಂಡನ ಮನೆ ಬಿಡಬಾರದ ನಂಬಿಕೆಯ ಮೌಲ್ಯವನ್ನು ಎತ್ತಿ ಹಿಡಿಯುವುದಕ್ಕೇ ಆಗಿದೆ. ದುಡಿಮೆಯಿಂದ ಸರಸೋತಿ-ಪಾರೋತಿಯರು ಜೀವ ಸವೆಸಿದರೆ ನಾಗವೇಣಿ ಇತರ ಹವ್ಯಾಸಗಳಿಂದ ಪರಿಚಿತಗೊಳ್ಳುತ್ತಾಳೆ. ಇನ್ನೊಬ್ಬಳು ಸತ್ಯಭಾಮೆ ಕೂಡ ಕಷ್ಟ ಜೀವಿಯೇ. ಆದರೆ ಅವರ್ಯಾರೂ ಪ್ರತಿಭಟಿಸುವುದೇ ಇಲ್ಲ. ಆದರೆ ಕಾರಂತರು ಅದನ್ನು ಒಪ್ಪುವುದಾಗಲಿ ನಿರಾಕರಿಸುವುದಾಗಲೀ ಇಲ್ಲ. ಒಂದು ರೀತಿಯಲ್ಲಿ ವ್ಯವಸ್ಥೆಯ ಕನ್ನಡಿಯಾಗಿ ಅವರು ಕಾಣಿಸಿಕೊಳ್ಳುತ್ತಾರೆ. ಇವರು ಹೆಣ್ಣಿಗೆ ಹೇರಿದ ಸಂಪ್ರದಾಯದ ಮೌಲ್ಯವನ್ನು ಬಾಳಿಸುವ ನಿಟ್ಟಿನಲ್ಲಿ ತಮ್ಮ ಕಷ್ಟಗಳನ್ನು ಮರೆತು ಬದುಕುವ ಮಾಸ್ತಿ ಕತೆಗಳ 'ವೇಲೂರಿನ ಲಕ್ಷ್ಮಮ್ಮ' ಕತೆಯ ಲಕ್ಷ್ಮಮ್ಮ, ಸಾರಿಪುತ್ರನ ಕಡೆಯ ದಿನಗಳು ಕತೆಯ ವೇದಾವತಿಯರನ್ನು ನೆನಪಿಸುತ್ತಾರೆ. ಅದು ಹೆಣ್ಣನ್ನು ನಡೆಯಿಸಿಕೊಳ್ಳಬೇಕಾದ ರೀತಿಯನ್ನು ಮುಂದಿಡುವುದೂ ಆಗಿದೆ. ಆದರೆ ಈ ಎಲ್ಲಾ ಕಾದಂಬರಿಗಳಿಗಿಂತ ವಿಭಿನ್ನವಾದ ಹಾಗೂ ವಿಶಿಷ್ಟವಾದ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿಮಾತ್ರ ಕಾರಂತರು ಮಾತನಾಡುವುದು ಬೇರೆಯೇ ರೀತಿಯಲ್ಲಿ. ಅಲ್ಲಿವೇಶ್ಯೆಯ ಬದುಕು, ಮನಸ್ಸು ಹಾಗೂ ದೇಹದ ನಡುವಿನ ಸಂದರ್ಭದ ಕುರಿತು ಅರ್ಥವತ್ತಾದ ಚರ್ಚೆ ನಡೆಸಿದ್ದಾರೆ. 'ಕನ್ಯಾಬಲಿ' , 'ಸೂಳೆಯ ಸಂಸಾರ' ಗಳಲ್ಲಿವೇಶ್ಯೆಯ ಬದುಕನ್ನುಮಾತ್ರ ಚಿತ್ರಿಸಿದ್ದಾರೆ. ಆದರೆ ' ಮೈಮನಗಳ ಸುಳಿಯಲ್ಲಿ' ಕೃತಿಯಲ್ಲಿಮನಸ್ಸು ಪ್ರಾಧಾನ್ಯ ಪಡೆಯುತ್ತದೆ. ಆಕೆಯ ವ್ಯಕ್ತಿತ್ವಕ್ಕೆ, ಮಾತಿಗೆ , ನಿರ್ಧಾರಕ್ಕೆ, ಬಯಕೆಗೆ ಬೆಲೆ ಕೊಡಲಾಗಿದೆ. ಮೈಮಾರುವ ಕಸುಬನ್ನು ಪಾಲಿಸಿಕೊಂಡು ಬರುವ ಮಂಜುಳೆಗೆ ಮನಸ್ಸಿನ ಮೇಲೆ ನಿಗ್ರಹವಿದೆ. ಆ ನಿಗ್ರಹದಿಂದಲೇ ಆಕೆ ಮೈ ಮಾತ್ರ ಮಾರುವ, ಮನಸ್ಸುಮಾರದ ಆತ್ಮಬಲವುಳ್ಳವಳಾಗುತ್ತಾಳೆ. ಆ ಕಸುಬು ಸಹಜವೆಂಬಂತೆ ಸ್ವೀಕರಿಸಿದರೂ ಮನಸ್ಸು ತಮಗೆ ಬೇಕಾದುದಕ್ಕೆ ಮಾತ್ರ ಬಾಗುತ್ತದೆ. ತಾಯಿ ಭವಾನಿ ಕೂಡ ಅದೇ ನೆಲೆಯಲ್ಲಿ ಬದುಕಿದ

ಸ್ವಾಭಿಮಾನಿಯಾಗಿದ್ದಾಳೆ. ತನ್ನ ಬಾಳಿಗೆ ತನಗೆ ಬೇಕಾದವನನ್ನು ಮಾತ್ರ ಆರಿಸಿ ನಿಷ್ಠೆಯಿಂದ ಬದುಕಿದಳು. ಆದರೆ ಮಂಜುಳೆ ಅವಳಿಗಿಂತಲೂ ಗಟ್ಟಿಗಿತ್ತಿ. ತನ್ನ ಮನಸ್ಸು ಒಪ್ಪದ ವ್ಯಕ್ತಿಗೆ ಮೈಯನ್ನು ಒಪ್ಪಿಸಿಕೊಳ್ಳದಂತೆ ಕಟ್ಟುನಿಟ್ಟು ಹಾಕಿಕೊಂಡು ಯಶಸ್ವಿಯಾಗುತ್ತಾಳೆ. ಅಲ್ಲಿ 'ಮರ್ಯಾದೆ'ಯ ಲೇಪನವನ್ನು ಚಂದ್ರಿಯ ಮನದ ಆಲೋಚನೆಯ ಮೂಲಕ ಹೊರಿಸಲಾಗುತ್ತದೆ. ವೇಶ್ಯೆಯ ಬದುಕು ಅಸಹ್ಯಕರವೆನ್ನಿಸಬಾರದು, ಅದು ಅಸ್ಪೃಶ್ಯವಾಗಬಾರದು. ಮರ್ಯಾದೆಯ ನೆರಳಿನಲ್ಲಿ ಬಾಳಬೇಕು ಎಂಬ ಕಾಳಜಿ ಇಲ್ಲಿ ದಟ್ಟವಾಗಿ ಮೇಳೈಸಿದೆ. ಕಾರಂತರು ವೇಶ್ಯೆಯ ಮನಸ್ಸಿಗೆ ಪ್ರಾಮುಖ್ಯ ನೀಡಿ ಅವರ ಬದುಕಿನ ಬದಲಾವಣೆಗೆ ಅನುವು ಮಾಡಿಕೊಡುತ್ತಾರೆ. ಆದರೆ ಮಾಸ್ತಿ ವೇಶ್ಯೆ ವೇಶ್ಯೆಯಾಗಿಯೇ ಬದುಕಬೇಕು ಆಕೆಯ ಮನಪರಿವರ್ತನೆ ಹಾಗೂ ಬದುಕಿನ ಬದಲಾವಣೆ ಸಾಧ್ಯವೇ ಇಲ್ಲ ಎಂಬುದನ್ನು ಬೀದಿಯಲ್ಲಿ ಹೋಗುವ ನಾರಿ ಹಾಗೂ ಚಂದ್ರವದನೆ ಕತೆಯ ಮೂಲಕ ಪರಿಚಯಿಸಿದ್ದಾರೆ. ಕುಟುಂಬ ಜೀವನ ನಡೆಸುವ ಹಾಗೂ ವೇಶ್ಯಾವೃತ್ತಿ ನಡೆಸುವ ಹೆಣ್ಣುಮಕ್ಕಳ ಮನಸ್ಸನ್ನು ಹತ್ತಿರವಾಗಿಯೇ ನಿಂತು ನೋಡುವ ಮಾಸ್ತಿ ಹಾಗೂ ವೇಶ್ಯೆಯರ ಮನಸ್ಸಿನ ಒಳತೋಟಿಗಳನ್ನು ತೆರೆದಿಡುವ ಕಾರಂತರೂ ಸಂಘರ್ಷ ಪ್ರಿಯರಲ್ಲ. ಆದುದರಿಂದಲೇ ಅಲ್ಲಿ ತಾಕಲಾಟ, ಪ್ರತಿಭಟನೆಗಳು ವಿಜೃಂಭಿಸುವುದಿಲ್ಲ.

ಮಾಸ್ತಿ ಮತ್ತು ಕಾರಂತರು ಕುಟುಂಬದ ನಂಬಿಕೆಯ ದೃಷ್ಟಿಯಿಂದ ಸಾಹಿತ್ಯ ರಚಿಸಿದವರು. ಆದರೆ ಹೆಣ್ಣಿನ ಒಳತೊಟಿಯನ್ನು ಕಾರಂತರೇ ಮಾಸ್ತಿಗಿಂತ ಸಮರ್ಥವಾಗಿ ಹಿಡಿದಿಡುತ್ತಾರೆ. ಮಾಸ್ತಿ ಅವರು ಹೆಣ್ಣು ತಪ್ಪಿ ನಡೆಯಬಾರದ ರೀತಿಗೆ ಒತ್ತು ನೀಡುತ್ತಾರೆ. ಕಾರಂತರು ಹೆಣ್ಣಿನ ಬದುಕು ಸಾಗುತ್ತಿರುವ ನೋವಿನ ಹಾದಿಯನ್ನು ಮುಖ್ಯವಾಗಿ ಗ್ರಹಿಸುತ್ತಾರೆ. ಮಾಸ್ತಿಗೆ ವೇಶ್ಯೆಯರ ಆಂತರಿಕ ವೇದನೆ, ಬದುಕು ಮುಖ್ಯವಾಗುವುದಿಲ್ಲ. ವೇಶ್ಯೆಯೊಬ್ಬಳು ವೇಶ್ಯೆಯೇ ಆಗಿರುವ ಮೌಲ್ಯ ಪ್ರತಿಪಾದಿಸಿದ್ದಾರೆ.

ಕುವೆಂಪು ಸಾಹಿತ್ಯದ ಸಂದರ್ಭವನ್ನು ಭಿನ್ನವಾಗಿಯೇ ಗ್ರಹಿಸಬೇಕಾಗುತ್ತದೆ. ಅವೈದಿಕ ಮನೆತನದ ಕುವೆಂಪು ಅವರ ಸಂವೇದನಾಶೀಲತೆ, ವೈಚಾರಿಕ ಮನಸ್ಸು ತೆರೆದುಕೊಳ್ಳುವ ರೀತಿಯೇ ಭಿನ್ನವಾದುದಾಗಿದೆ. ಅವರ ಕಾದಂಬರಿಗಳಲ್ಲಿ ಮೇಲ್ವರ್ಗ ಹಾಗೂ ಕೆಳವರ್ಗದ ಹೆಣ್ಣು ಮಕ್ಕಳ ಬದುಕು ಮಾಸ್ತಿ ಅವರ ಕತೆಗಳಲ್ಲಿ ತೆರೆದುಕೊಂಡ ಹೆಣ್ಣು ಮಕ್ಕಳ ಬದುಕಿಗಿಂತ ಭಿನ್ನವಾಗಿ ಪರಿಚಿತಗೊಳ್ಳುತ್ತದೆ. ಮಾಸ್ತಿ ಅವರ ಕತೆಗಳ ಸ್ತ್ರೀಯರಂತೆಯೇ ಕುವೆಂಪು ಅವರ ಕಾದಂಬರಿಗಳಲ್ಲೂ ಕುಟುಂಬ ನಡೆಸುವ ಹೆಣ್ಣು ಮಕ್ಕಳು ಎದುರಾಗುತ್ತಾರೆ. ಹಳ್ಳಿಯ ಹೆಣ್ಣಾಗಿ ಕಾಣಿಸಿಕೊಳ್ಳುವ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಸುಬ್ಬಮ್ಮ ಆ ಕಾಲದ ಹೆಣ್ಣಿನ ನಡವಳಿಕೆಯನ್ನು ಪ್ರತಿನಿಧಿಸುತ್ತಾಳೆ.

ಸುಬ್ಬಮ್ಮನ ಮುಗ್ಧತೆಯಲ್ಲಿ, ನಡವಳಿಕೆಯಲ್ಲಿ ಹೆಣ್ತನವನ್ನು ಮಾತ್ರ ಕಾಣಲಾಗುತ್ತದೆ. ಆಕೆ ಹುಟ್ಟಿ ಬೆಳೆದ ಪರಿಸರ ಕೂಡ ಆ ವರ್ತನೆಗೆ ಕಾರಣವಾಗಿರುವ ವಾಸ್ತವ ಸತ್ಯವನ್ನು ತೆರೆದುಕೊಟ್ಟಿವೆ.

ಅದೇ ನೆಲೆಯಲ್ಲಿ ಸೀತೆಯ ಪಾತ್ರ ಕೂಡಾ ಚಿತ್ರಣಗೊಂಡಿದೆ. ಆಕೆ ಬೆಳೆದ ಹಳ್ಳಿಯ ಸಂಸಾರದ ಬದುಕು ನಾಗರಿಕತೆಯ ಪ್ರಭಾವಕ್ಕೊಳಗಾದ ವ್ಯಕ್ತಿಯೊಂದಿಗಿನ ಬದುಕಿನೊಂದಿಗೆ ತಳುಕು ಹಾಕಿಸಿಕೊಳ್ಳುವ ರೋಮಾಂಚನಕ್ಕೆ ಒಳಗಾಗುತ್ತದೆ. ಆದರೆ ಆಕೆಯ ಆ ಉದಾತ್ತ ಪ್ರೀತಿ, ಅವಳ ಸ್ವಂತಿಕೆ ಪಡೆಯುವ ಸ್ಥಾನವೇ ಅತಿ ಉನ್ನತವಾದದ್ದು. ಆ ಪ್ರೀತಿಯಲ್ಲಿ ಕೇವಲ ದೈಹಿಕ ಸುಖದ ಬಯಕೆ ಅಡಗಿಲ್ಲ. ಅದರ ಜತೆ ಜತೆಗೇನೇ ಪ್ರೀತಿಯಿಂದ ಬದುಕುವುದು ಅಲ್ಲಿ ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಸೀತೆ ಸನ್ಯಾಸಿನಿಯಂತೆ ಬದುಕುವುದು ಮನುಷ್ಯ ಸಹಜ ಕ್ರಿಯೆಗಳಿಂದಾಗಿ ದೂರವಾಗುವುದೂ ಆಗುತ್ತದೆ. ಒಂದು ನೆಲೆಯಲ್ಲಿ ಸಂಬಂಧದ ಸಹಜತೆಯನ್ನು ತೋರಿಸಿಕೊಡುವ ಇಲ್ಲಿನ ಸ್ತ್ರೀಯರು ಮತ್ತೊಂದೆಡೆ ಅದರಿಂದ ಅತೀತವಾಗಿ ಬಿಡುವ ಸಾಧ್ಯತೆಗಳನ್ನೂ ತೋರಿಸಿಕೊಡುತ್ತಾರೆ.

ಲೈಂಗಿಕ ಸಂಬಂಧಗಳ ವಾಸ್ತವತೆಯನ್ನು ಬಿಚ್ಚಿಡುವ ಕುವೆಂಪು ಅದನ್ನು ಸಹಜಗೊಳಿಸುತ್ತಾರೆ. ಕೆಳಜಾತಿಯ ಸ್ತ್ರೀಯರು ಅದಕ್ಕೆ ಬಲಿಯಾಗುವುದನ್ನು ಸೂಚಿಸುತ್ತದೆ. ಅಂದರೆ ಇಲ್ಲಿ ಸಿದ್ಧ ಬದುಕಿಗೆ ಅಥವಾ ವ್ಯವಸ್ಥೆಗೆ ಕೆಳವರ್ಗದ ಸ್ತ್ರೀಯರು ಬಲಿಯಾಗುವ ಸತ್ಯವನ್ನು ಹೇಳಿದ್ದಾರೆ. ಆದರೆ ಮಾಸ್ತಿ ಅವರು ಶೂದ್ರ ಸಮುದಾಯದ ಗಂಡು ಹೆಣ್ಣಿನ ನಡುವೆ ನಡೆಯುವ ಲೈಂಗಿಕ ಕ್ರಿಯೆಯನ್ನು ಮಾತ್ರ ಚಿತ್ರಿಸುತ್ತಾರೆ. ಮತ್ತು ಗಂಡನ ಹೊರತಾಗಿ ಅನ್ಯ ಗಂಡಿನೊಂದಿಗೆ ನಡೆಯುವ ಲೈಂಗಿಕ ಸಂಬಂಧವನ್ನು ಅನೈತಿಕ ಎಂದು ಮೆಲುದನಿಯಲ್ಲಿ ತಿವಿಯುತ್ತಾರೆ. ಅಂದರೆ ಮೇಲ್ವರ್ಗದ ಗಂಡು ಬಯಸುವ ಸುಖಕ್ಕೆ ಅವರು ಒಳಗಾಗುತ್ತಾರೆ. ಆದರೆ ತಿಮ್ಮ ಹಾಗೂ ಗುತ್ತಿಯರ ನಡುವೆ ನಡೆದ ಲೈಂಗಿಕ ಸಂಬಂಧವನ್ನು ಸಹಜಗೊಳಿಸುವುದು ಕೆಳವರ್ಗದ ಸ್ವತಂತ್ರ ಬದುಕಿಗೆ ಸಲ್ಲುವ ಮರ್ಯಾದೆಯಾಗಿದೆ. ಆದರೆ ಜೀತದಾಳುಗಳು ಪ್ರೀತಿ, ಸಂಬಂಧ, ವೈವಾಹಿಕ ಸ್ವಾತಂತ್ರ್ಯ ಪಡೆದವರಾಗಿರುವುದಿಲ್ಲ. ಮಾಸ್ತಿ ಕತೆಗಳ ಸ್ತ್ರೀಯರಿಗೆ ಹತ್ತಿರವಾಗಿಯೇ ಅವರ ಸಮಕಾಲೀನರ ಕತೆಗಳ ಸ್ತ್ರೀಯರು ಕಾಣಿಸಿಕೊಳ್ಳುತ್ತಾರೆ. ಗಂಡನಿಗೆ ನಿಷ್ಠೆಯ ಹೆಂಡತಿಯಾಗಿಯೇ ಬದುಕುವುದು ಮುಖ್ಯವಾಗುತ್ತದೆ. ಅಲ್ಲಿ ವಿದ್ಯಾವಂತೆಯರು ಕಾಣಸಿಗುವುದು ಕಡಿಮೆಯೇ. ಪುರುಷರ ವಿದ್ಯಾಭ್ಯಾಸ ಕೂಡ ನಡೆದಿದ್ದು ಆಧುನೀಕರಣದ ಪ್ರವೇಶದಿಂದಲೇ. ಪಾರಂಪರಿಕ ನಂಬಿಕೆಯ ಬದುಕಿಗೇ ಒಡ್ಡಿಕೊಂಡ ಹೆಣ್ಣುಗಳನ್ನು ಅವರೆಲ್ಲರೂ ಪರಿಚಯಿಸುವಲ್ಲಿ ಬದ್ಧರಾಗಿದ್ದಾರೆ. ಅಲ್ಲಿನ ಹೆಣ್ಣುಗಳು ಅಂಥ ಬದುಕನ್ನೇ ಹೆಚ್ಚು ಸಂಸ್ಕಾರಯುತವಾದದ್ದು ಎಂಬುದನ್ನು ಬಾಳಿ ತೋರಿಸುತ್ತಾರೆ. ಆದರೆ ಅದರಿಂದಾಗುವ ಸಾಧಕ-ಬಾಧಕಗಳನ್ನು ನೋಡುವ ಕಣ್ಣು ಹುಡುಕಬೇಕು.

ನವೋದಯ ಕಾಲಘಟ್ಟದ ಸಂದರ್ಭದಲ್ಲಿ ಆದ ಸುಧಾರಣೆಗಳಿಗೆ ಅಂದಿನ ಕತೆಗಾರರಾದ ಎಂ. ಎನ್. ಕಾಮತ್, ಕೆರೂರು ವಾಸುದೇವಾಚಾರ್ಯರು, ಪಂಜೆ ಮಂಗೇಶರಾವ್ ಪ್ರಭಾವಿತರಾಗಿದ್ದಾರೆ. ಆದರೆ ಅದನ್ನು ಕತೆಗಳಲ್ಲಿ ನಿರ್ದಿಷ್ಟವಾಗಿ ದಾಖಲಿಸಿ ವಿವರಿಸುವ, ಪರ್ಯಾಯ

ಬದುಕನ್ನು ಪರಿಚಯಿಸುವ ಕೆಲಸಕ್ಕೆ ತೊಡಗುವುದಿಲ್ಲ. ಕೊನೆಗೂ ಅವರು ತಾನು ಬದುಕಿದ ಸಂದರ್ಭದಲ್ಲಿ ಹೆಣ್ಣು ಬಾಳುತ್ತಿರುವ ಸಾಂಪ್ರದಾಯಿಕ ಬದುಕಿನ ರೀತಿಯಲ್ಲಿ ಅವಳನ್ನು ಕಟ್ಟಿಹಾಕುತ್ತಾರೆ. ಬಾಲ್ಯ ವಿವಾಹ ನಿರ್ಮೂಲನ ಮಾಡುವುದು, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಕೊಡುವುದು ಸ್ತ್ರೀಗೆ ಶಿಕ್ಷಣ ನೀಡುವುದು ಅವರ ಮನದ ಆಲೋಚನೆ. ಅದರಲ್ಲೂ ಭಾರತೀಯ ಸ್ತ್ರೀಯರ ಮೌಲ್ಯವನ್ನು ದೂರವಾಗಿಸುವುದಿಲ್ಲ. ಅದನ್ನು ಪ್ರತಿಷ್ಠಾಪಿಸುವುದಕ್ಕೆ ಇತಿಹಾಸದ ಸ್ತ್ರೀಯರನ್ನು ಬಳಸಿಕೊಳ್ಳುತ್ತಾರೆ. ಅದು ಪಂಜೆಯವರ ಕತೆಗಳಲ್ಲಿನ ಹೆಣ್ಣುಮಕ್ಕಳ ಚಿತ್ರಣದಲ್ಲಿ ಸ್ಪಷ್ಟವಾಗುತ್ತದೆ. ಇಲ್ಲಿನ ಸ್ತ್ರೀಯರು ವೀರ ಮಹಿಳೆಯರು, ಜೊತೆಗೆ ಪಾವಿತ್ರ್ಯ ರಕ್ಷಣೆಗಾಗಿ ಪಣತೊಟ್ಟು ನಡೆಯುವವರು. ಈ ಮೂಲಕ ಅವರು ಪಾರಂಪರಿಕ ಮೌಲ್ಯವನ್ನು ಬದುಕನ್ನು ಎತ್ತಿಹಿಡಿಯುತ್ತಾರೆ. ಅವರು ಪಾವಿತ್ರ್ಯದ ಹೆಸರಿನಲ್ಲಿ ಪತಿಭಕ್ತಿ ಹಾಗೂ ಶೀಲದ ಹೆಸರಿನಲ್ಲಿ ಹೆಣ್ಣನ್ನು ಬಂಧಿಸುವ ರೀತಿಯನ್ನು ತೋರಿಸಿಕೊಡುತ್ತಾರೆ. ನಿಜದಲ್ಲಿ ಇದು ಲೇಖಕರ ಮನಸ್ಸಿನ ಅಭಿವ್ಯಕ್ತಿಯೇ ಆಗಿದೆ. ಈ ಸಂದರ್ಭದಲ್ಲೇ ಸಹಗಮನವನ್ನು ಕೂಡ ವೈಭವೀಕರಿಸಲಾಗಿದೆ. ರಜಪೂತ ಮಹಿಳೆಯರ ಆತ್ಮತ್ಯಾಗ, ಆತ್ಮಾಹುತಿಗಳು ನಡೆದದ್ದು ತಮ್ಮ ಮೇಲಿನ ಪುರುಷ ಆಕ್ರಮಣ ತಪ್ಪಿಸುವುದಕ್ಕೆ. ಪಂಜೆ ಅವರು ಬರೆದ 'ಪೃಥುಲಾ' ಕೆರೂರು ವಾಸುದೇವಾಚಾರ್ಯರು ಬರೆದ 'ಬೆಳಗಿದ ದೀಪಗಳು' ಹಾಗೂ 'ಪ್ರೇಮ ವಿಜಯ' ಕತೆಗಳ ಸ್ತ್ರೀಯರು ಆ ವಸ್ತುಸ್ಥಿತಿಯನ್ನು ಮುಂದುರಿಸುವವರಾಗಿದ್ದಾರೆ. ನೈತಿಕ ಮೌಲ್ಯಗಳನ್ನು ರಕ್ಷಿಸುವ ಇಲ್ಲಿನ ಸ್ತ್ರೀಯರು ಸಹಗಮನಕ್ಕೆ ಸಿದ್ಧರಾಗಬೇಕಾದದ್ದು, ಒಲ್ಲದ ಗಂಡನಿಗೆ ಪತ್ನಿಯಾಗಿರಬೇಕಾದ ಅನಿವಾರ್ಯತೆಗೆ ಬದ್ಧರಾಗುವಂತಾದದ್ದು ಅಂದಿನ ಮೌಲ್ಯವನ್ನು ತೋರಿಸಿಕೊಡುತ್ತವೆ. ಆ ಮೂಲಕ ಅಂದಿನ ಹೆಣ್ಣು ಮಕ್ಕಳ ಬದುಕಿನ ದಾರುಣ ಸ್ಥಿತಿ ಪ್ರತಿನಿಧಿತವಾಗಿವೆ.

ಪಂಜೆ ಮಂಗೇಶರಾಯರ ಕತೆಗಳಲ್ಲಿನ ಸ್ತ್ರೀಯರೂ ಮಾಸ್ತಿ ಕತೆಗಳ ಸ್ತ್ರೀಯರಂತೆ ಸಾಮಾಜಿಕವಾಗಿ ಅಸ್ತಿತ್ವ ಪಡೆದುಕೊಂಡವರಲ್ಲ. ಅವರು ಹೊರಗೆ ತೋರಿಸಿಕೊಳ್ಳುವುದಕ್ಕೆ ಇಷ್ಟಪಡದವರು. ಆದರೆ 'ನನ್ನ ಚಿಕ್ಕ ತಾಯಿ', 'ನನ್ನ ಹೆಂಡತಿ' ಕತೆಗಳ ಸ್ತ್ರೀಯರು ವಿಭಿನ್ನರಾಗುತ್ತಾರೆ. ಅಲ್ಲಿ ಅವರು ಗಟ್ಟಿಗಿತ್ತಿಯರಾಗಿದ್ದಾರೆ. ಹೊಸ ಸಾಧ್ಯತೆಗಳಿಗೆ ತೆರೆದುಕೊಂಡ ಸಂದರ್ಭದಲ್ಲಿ ಬರೆದ ಪಂಜೆಯವರ ಕತೆಗಳ ಸ್ತ್ರೀಯರೂ ಆ ಕಾಲದ ಪ್ರತಿರೂಪವೇ ಆಗಿದ್ದಾರೆ. ಭೋಗಕ್ಕಾಗಿ ಹೆಣ್ಣನ್ನು ಸೀಮಿತಗೊಳಿಸಿದ ರೀತಿಗೆ ಪಂಜೆಯವರು ಅಸಮಾಧಾನ ಪಡುತ್ತಾರೆ. ಹೆಣ್ಣಿನ ವ್ಯಕ್ತಿತ್ವ, ಮನಸ್ಸನ್ನು ಮುಖ್ಯವಾಗಿ ಗಣಿಸದೇ ದೇಹ ಸುಖಕ್ಕೆ ಮಾತ್ರ ಅವಳನ್ನು ಬಳಸಿಕೊಳ್ಳುವ ರೀತಿಯನ್ನು ಹೇಳುತ್ತಾರೆ. ಮಾಸ್ತಿ ಅವರಿಗೆ ಅದು ಸಹ್ಯವಾಗುವುದಿಲ್ಲ.

ಆದರೆ ಕೆರೂರರು ಬರೆದ ಕತೆಗಳಲ್ಲಿನ ಸ್ತ್ರೀಯರೂ ಮಾಸ್ತಿ ಕತೆಗಳ ಸ್ತ್ರೀಯರಂತೆ ಪರಂಪರೆಯ ಕುರಿತು ನಿಷ್ಠೆ ಇರುವವರು, ಸಣ್ಣತನಗಳನ್ನು ಮೀರುವವರಾಗಿದ್ದಾರೆ. ಪಾತಿವ್ರತ್ಯದ ಪರಿಪಾಲನೆಗೆ

ಅಲ್ಲಿನ ಸ್ತ್ರೀಯರು ಒಳಗಾಗಿದ್ದಾರೆ. ಒಂದೆಡೆಯಲ್ಲಿ ಆಧುನೀಕರಣದ ಗಾಳಿಗೆ ಕತ್ತುಕೊಡಬೇಕಾದ, ಪಾರಂಪರಿಕ ಆಚರಣೆ ಬಿಡಲಾರದ ಇಲ್ಲಿನ ಹೆಣ್ಣುಮಕ್ಕಳು ಒಂದು ಸ್ವತಂತ್ರ ಅಥವಾ ಸ್ಥಿರವಾದ ಬದುಕಿಗೆ ಒಳಗಾದವರಾಗುವುದಿಲ್ಲ.

ಮಾಸ್ತಿಯವರ ಕತೆಗಳಲ್ಲಿ ಕಾಣದ ವಿದ್ಯಾವಂತ, ಉದ್ಯೋಗಸ್ಥ ಸ್ತ್ರೀಯರು, ಸಮಾಜ ಸುಧಾರಕಿಯರು ಕೆರೂರು ಅವರ ಕತೆಗಳಲ್ಲಿಯೂ ಕಾಣಿಸಿಕೊಳ್ಳುತ್ತಾರೆ. ಸುಧಾರಣೆಯ ಪ್ರತಿಫಲವಾಗಿ ಅವರು ಸ್ಥಾನ ಪಡೆದುಕೊಳ್ಳುವುದನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಕೆಳವರ್ಗಕ್ಕೆ ಸೇರಿದ ಸ್ತ್ರೀಯರು ಎಲ್ಲ ಹಿಡಿತಗಳಿಂದ ಬಿಡಿಸಿಕೊಂಡವರು. ತಮ್ಮ ವೈವಾಹಿಕ ಬದುಕಿನ ಆಯ್ಕೆಯ ಸ್ವಾತಂತ್ರ್ಯ ಪಡೆದುಕೊಂಡದ್ದು ಇಲ್ಲಿ ದಾಖಲಾರ್ಹವಾಗುತ್ತದೆ. ಆಧುನಿಕ ಬದುಕಿಗೆ ಒಳಗಾಗದ ಸ್ತ್ರೀಯರು ಇಲ್ಲಿ ಇದ್ದರೂ ಆಧುನಿಕ ಬದುಕಿಗೆ ಬಗ್ಗದವರು ಬದುಕಿನಲ್ಲಿ ಗೆಲ್ಲುವುದಿಲ್ಲ. ಸಾಂಪ್ರದಾಯಿಕ ಬದುಕಿನ ಉಳಿವು ಪರಮಧ್ಯೇಯವಾಗಿರುವ ಕೆರೂರು ಅದನ್ನು ಕತೆಗಳಲ್ಲಿನ ಸ್ತ್ರೀಯರಿಂದ ಸಾಧ್ಯವಾಗಿಸುತ್ತಾರೆ. (ತೊಳೆದ ಮುತ್ತು, ಪ್ರೇಮ ವಿಜಯ, ಬೆಳಗಿದ ದೀಪಗಳು- ೧೯೫೨)

ಎಂ.ಎನ್.ಕಾಮತ್ ಅವರು ವೈಚಾರಿಕ ಹಾಗೂ ಸಾಂಪ್ರದಾಯಿಕ ನಿಲುವುಗಳನ್ನು ತೋರಿಸಿಕೊಡುವವರು. ಅವರಿಗೆ ವರದಕ್ಷಿಣೆಯಂಥ ಸಮಸ್ಯೆಯನ್ನುಅಂತ್ಯಗೊಳಿಸಬೇಕೆಂಬ ಕಾಳಜಿಯಿದೆ. ಆ ಕಾಳಜಿಯ ಹಿಂದೆ ಆಕೆ ಪತಿಭಕ್ತಿಯನ್ನು ಪಾಲಿಸುವವಳಾಗಿರಬೇಕು ಎಂಬ ಸಂದೇಶವಿದೆ. ಮಾಸ್ತಿಯವರ ಸಣ್ಣಕತೆಗಳಲ್ಲಿ ಕಾಣಿಸಿಕೊಂಡ ವೈದಿಕ ಸ್ತ್ರೀಯರ ಪತಿಭಕ್ತಿ, ನಿಷ್ಠೆ ಇಲ್ಲಿ ಭಿನ್ನ ನೆಲೆಯಲ್ಲಿ ಗುರುತಿಸಿಕೊಂಡಿದೆ. ಕಳ್ಳತನದ ಆರೋಪಕ್ಕೆ ಗುರಿಯಾದ ಹೆಂಡತಿಯನ್ನು ಶಿಕ್ಷಿಸುವುದನ್ನು ಎಂ.ಎನ್. ಕಾಮತ್ ಅವರ ಕದ್ದವರು ಯಾರು ಕತೆ ತೆರೆದಿಡುತ್ತದೆ. ಆ ಶಿಕ್ಷೆ ಎದುರಿಸಲಾರದೇ ಹೋದರು ಸಹಿಸಿ ಗಂಡನ ನೆರಳಿನಲ್ಲಿಯೇ ಬದುಕುವವರ ಮೂಕವೇದನೆಗೆ ಸಾಕ್ಷಿನುಡಿಯುವುದನ್ನು 'ಜೀವಿಸಿರುವ ಭಾಗ್ಯ' ಕತೆಯಲ್ಲಿ ಕಾಮತ್ ತೆರೆದಿಟ್ಟಿದ್ದಾರೆ.

ಇಲ್ಲಿನ ಸ್ತ್ರೀ-ಪುರುಷರ ಎಲ್ಲ ಬಗೆಯ ದೌರ್ಬಲ್ಯಗಳಿಗೆ ತನ್ನನ್ನು ಇಡಿಯಾಗಿ, ಮೌನವಾಗಿ ಒಪ್ಪಿಸಿಕೊಂಡುಬಿಟ್ಟಿದ್ದಾಳೆ. ಮಾಸ್ತಿಯವರ ಕತೆಗಳ ಸ್ತ್ರೀಯರೂ ಅದೇ ತೆರನಾದ ಜೀವನ ಸಾಗಿಸಿದವರೇ ಆಗಿದ್ದಾರೆ.

ಮಾಸ್ತಿ ಕತೆಗಳಲ್ಲಿನ ಸ್ತ್ರೀಯರು ವಿದ್ಯಾಭ್ಯಾಸ ಪಡೆದವರಲ್ಲ ಜೊತೆಗೆ ಆ ಕಡೆ ಅತಿಯಾದ ಚಿಂತೆ ಮಾಡಿದವರೂ ಅಲ್ಲ. ಗೃಹಕೃತ್ಯಗಳಿಗಷ್ಟೇ ಸೀಮೀತವಾಗಿದ್ದ ಅವರಿಂದ ಬೇರೇನೂ ಸಾಧನೆ ಸಾಧ್ಯವಾಗುವುದಿಲ್ಲ. ಆದರೆ ಕಾಮತ್ ತಮ್ಮ ಕತೆಗಳ ಸ್ತ್ರೀಯರನ್ನು ಗೃಹಕೃತ್ಯಗಳಿಗಷ್ಟೇ ಸೀಮಿತವಾಗಿರಿಸಿಲ್ಲ. ಅವರ ಕತೆಗಳಲ್ಲಿನ ಸ್ತ್ರೀಯರು ವಿದ್ಯಾವಂತೆಯರು. ಬರಹಗಾರ್ತಿಯರೂ ಆಗಿದ್ದಾರೆ. ಆದರೆ ಅದೇ ಬರಹಗಾರ್ತಿಯರು ಬರೆಯುವ ಶಕ್ತಿಯನ್ನೇ ಕಸಿದುಕೊಂಡ ಸ್ವಾರ್ಥ ಗಂಡಸರ ನಡುವೆ ನಡುಗಿ ನಲುಗಿ ತಮ್ಮತನ ಕಳೆದುಕೊಳ್ಳಬೇಕಾದ ದುರಂತ ಪ್ರತಿನಿಧಿಸುತ್ತಾರೆ. ಗಂಡಸಿನ ಸ್ವಾಭಿಮಾನದಿಂದ ಸ್ತ್ರೀ ಬೆಳೆಯಲಾಗದ ವಸ್ತು ಸ್ಥಿತಿಯನ್ನು ಅವರು ಮುಂದಿಟ್ಟಿದ್ದಾರೆ.

ಮಾಸ್ತಿಯವರ ಸಮಕಾಲೀನರ ಕತೆಗಳಲ್ಲಿ ಕೆಳವರ್ಗದ ಸ್ತ್ರೀಯರು ಶಕ್ತರಾಗಿ ಬದುಕಿದವರಾಗಿದ್ದಾರೆ, ಮಧ್ಯಮ ಹಾಗೂ ಮೇಲ್ವರ್ಗದವರಿಗಿಂತ ಭಿನ್ನವಾಗಿ ಸ್ವತಂತ್ರ ಬದುಕನ್ನು ಪಡೆಯುವವರಾಗಿದ್ದಾರೆ. ಮಾಸ್ತಿಯವರ ಕತೆಗಳಲ್ಲಿ ಕೆಳವರ್ಗದ ಹೆಣ್ಣು ಪಡೆದ ಜೀವನಾನುಭವದ ವಿವರಗಳಿಲ್ಲ. ಇದ್ದರೂ ಅದು ಪರಿಚಿತವಾಗುವದು ಭಿನ್ನರೀತಿಯಲ್ಲಿ.ಅವರ 'ವೆಂಕಟಿಗನ ಹೆಂಡತಿ' , 'ಪಕ್ಷಿಜಾತಿ' 'ದುರದೃಷ್ಟದ ಹೆಣ್ಣು' ಮೊದಲಾದ ಕತೆಗಳಲ್ಲಿ ಬರುವ ರಂಗಿ, ಈರವ್ವ, ದುರದೃಷ್ಟದ ಹೆಣ್ಣುಗಳು ತೆಗೆದುಕೊಂಡಿರುವ ತೀರ್ಮಾನಕ್ಕೆ ಸಮೀಪವರ್ತಿಯಾಗುವ ಹೆಣ್ಣು ಮಕ್ಕಳು ಇತರರಲ್ಲಿ ಕಾಣಿಸುವುದಿಲ್ಲ. ಇತರ ಕತೆಗಾರರಲ್ಲಿ ಅವರ ಧೈರ್ಯ, ಎದೆಗಾರಿಕೆ, ಛಾತಿ ತೋರಿಸುವಲ್ಲಿ ಮಾಸ್ತಿ ಕತೆಗಳ ಸ್ತ್ರೀಗಿಂತ ತುಸು ಭಿನ್ನವಾದವರೇ ಆಗಿ ಗುರುತು ಪಡೆಯುತ್ತಾರೆ. ಇಲ್ಲಿನ ಸ್ತ್ರೀಯರು ಜೀವಂತಿಕೆಯಿಂದ ನಳನಳಿಸುವವರಾಗಿದ್ದಾರೆ. ತಮ್ಮ ಅಭಿಪ್ರಾಯವನ್ನು ಹೆಣ್ತನದ ಸೌಕುಮಾರ್ಯವನ್ನು ಪಾಲಿಸುತ್ತ ಬರುವಲ್ಲೇ ಮಗ್ನರಾಗುವ ಅವರಲ್ಲಿ ಛಲವಿದೆ, ಎದೆಗಾರಿಕೆಯಿದೆ, ಪ್ರತಿಭಟಿಸುವ ಛಾತಿ ಇದೆ. ಮುಗ್ಧತೆಯ ಬದುಕಿನ ನಡುವೆಯೂ ತಮ್ಮತನ ಉಳಿಸಿಕೊಳ್ಳುವ ಪ್ರಬಲ ಶಕ್ತಿ ಉಳ್ಳವರಾಗಿದ್ದಾರೆ. ಅವರಿಗೆ ಮುಖ್ಯವಾಗುವುದು ದುಡಿಮೆ. ಅದಕ್ಕೆ ಬೇಕಾದ ಬಲವಿದೆ. ಆತ್ಮಸ್ಥೈರ್ಯವೂ ಅವರಲ್ಲಿದೆ. ತಮ್ಮತನದ ಉಳಿವಿಗಾಗಿ ಹೋರಾಡುವ ಅವರು ಬೀದಿಗಿಳಿಯುವುದಕ್ಕೂ, ಹೇಸುವವರಲ್ಲ. ಜಗಳ-ಗಲಭೆಗಳ ಮೂಲಕವಾದರೂ ಜಯಗಿಟ್ಟಿಸಿಕೊಳ್ಳುವ ಗಟ್ಟಿಗಿತ್ತಿಯರಾಗಿ ಅವರು ಪ್ರಧಾನರಾಗುತ್ತಾರೆ. ನವೋದಯ ಕಾಲಘಟ್ಟದ ಬರಹಗಾರರು ಕೆಳವರ್ಗದ ಹೆಣ್ಣುಮಕ್ಕಳನ್ನು ಒಂದು ಆದರ್ಶವಾಗಿಟ್ಟುಕೊಂಡು ಅವರ ಬದುಕನ್ನು ಕೆದಕ ಹೋಗಿದ್ದಾರೆ.

ನವೋದಯ ಕಾಲಘಟ್ಟದ ಕತೆಗಳಲ್ಲಿ ಬೆಟಗೇರಿ ಕೃಷ್ಣ ಶರ್ಮ ಅವರ ಕತೆಗಳು ಪ್ರಮುಖ ಸ್ಥಾನವನ್ನು ಪಡೆಯುತ್ತವೆ. ಅವರ ಕತೆಗಳಲ್ಲಿ ವೇಶ್ಯೆಯರುಸ್ವಾತಂತ್ರ್ಯ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುವವರು. ನವಿಲುಗರಿ ಸಂಕಲನದ 'ಮಾಲಿ ಹಕ್ಕು' ಕತೆಯಲ್ಲಿ ಬದುಕಿನ ಏರುಪೇರಿನ ನಿರ್ವಹಣೆ ಸಂದರ್ಭ ಹೆಣ್ಣೇ ನಿರ್ಧಾರ ತೆಗೆದುಕೊಳ್ಳುವಷ್ಟು ಸತ್ವಶಾಲಿ ಹಾಗೂ ಸ್ವತಂತ್ರಳಾಗಿದ್ದಾಳೆ. ಹಕ್ಕಿನ ಚಲಾವಣೆ ಕುರಿತು ತನ್ನದೇ ಆದ ನೆಲೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಅಂದಿನ ಸಮಾಜಕ್ಕೆ ಒಪ್ಪಿತವಾದ ಮೌಲ್ಯವಾಗಿತ್ತು.

ಟೇಂಗ್ಸೆ ಗೋವಿಂದ ರಾಯರ 'ದಾಸರ ಹುಡುಗಿ ಮತ್ತು ಇತರ ಕತೆಗಳು' ಸಂಕಲನದ ಕತೆಗಳ ಸ್ತ್ರೀಯರೂ ಗಂಡುಬೀರಿತನ, ಧೈರ್ಯ ಮೈಗೂಡಿಸಿಕೊಳ್ಳುವಿಕೆಯ ನಡುವೆ ಬದುಕು ಕಟ್ಟಿಕೊಳ್ಳುವ ಅವರು ಯಾವುದರಲ್ಲೂ ಕಡಿಮೆ ಅಲ್ಲದಂತೆ ಬಾಳಿದವರು. ಅವರ 'ಗಂಗೆಯ ಗುತ್ತಿಗೆ' ಕತೆಯ ಗಂಗೆಯ ಸ್ವಭಾವ ವಿಶಿಷ್ಟವಾದುದಾಗಿ ಕಾಣುತ್ತದೆ. ಸ್ವಾಭಿಮಾನಿಯಾಗಿ ಹಾಗೂ ಗಂಡಿಗೆ ಸಮಾನವಾಗಿ ಬದುಕುವತ್ತ ಬಂದ ಹೆಣ್ಣು ಹೆಣ್ಣಿನ ಕುರಿತ ಪಾರಂಪರಿಕ ನಂಬಿಕೆಯನ್ನು ಮುರಿಯುವವಳಾಗುತ್ತಾಳೆ. ಲಜ್ಜೆ, ನಾಚಿಕೆಗಳನ್ನು ಮೀರಿದ, ಗಂಡಿನೊಂದಿಗೆ ಸಲೀಸಾಗಿ ಮಾತನಾಡುವ, ಲೇವಡಿ ಮಾಡುವ, ಕಿಚಾಯಿಸುವ ಸ್ವಭಾವಗಳನ್ನು

ಧಾರಳವಾಗಿ ಮೈಗೂಡಿಸಿಕೊಂಡವಳಾಗುತ್ತಾಳೆ. ಗಂಡನೊಂದಿಗೆ ಅವಳ ಬದುಕು ಕೂಡ ಗಂಡುತನದ್ದೇ ಆಗಿ ಮೆರೆಯುತ್ತದೆ. ಅವಳ ಶಕ್ತಿಯ ಪ್ರಖರತೆಯಿಂದಾಗಿ ಗಂಡ ದುರ್ಬಲನಾಗಿ ಕಾಣುವಂತಾಗುತ್ತದೆ.

ನವೋದಯುದವರಲ್ಲಿ ಸ್ತ್ರೀಯರು ಪರಿಚಿತಗೊಳ್ಳುವುದೇ ಆಧುನೀಕರಣಕ್ಕೆ ತೆರೆದುಕೊಂಡವರಾಗಿ. ಆ ಮೌಲ್ಯಗಳ ನಡುವೆ ಪರಂಪರೆ ಉಳಿಸಿಕೊಳ್ಳುವ ಆಧುನಿಕತೆ ಪ್ರತಿನಿಧಿಸುತ್ತಿರುವವರ ನಡುವೆ ಹಣಾಹಣಿ ನಡೆಸಿ ಬದುಕುವವರು ಪರಿಚಿತರಾಗುತ್ತಾರೆ. ಗಂಡು ಪಡೆಯುವ ಎಲ್ಲ ಸವಲತ್ತುಗಳನ್ನು ಅವನಿಗೇ ಬಿಟ್ಟುಕೊಡುವ ತ್ಯಾಗಮಯಿಯಾಗಿ, ಗಂಡನ ಉಪಚಾರ ಮಾಡಲು ಮಾತ್ರ ಸೀಮಿತವಾಗುವ ಮಮತಾಮಯಿಯಾಗಿ ಉಳಿದು ಬಿಡಬೇಕಾದದ್ದನ್ನು ಸ್ತ್ರೀಯರು ತೋರಿಸಿಕೊಡುತ್ತಾರೆ. ಇವರು ಗಂಡನ ಪ್ರೀತಿ ಸಂಪಾದನೆಯೊಂದನ್ನೇ ಪರಮ ಗುರಿಯಾಗಿಸಿಕೊಂಡವರಾಗುತ್ತಾರೆ. ಸ್ವತಂತ್ರ ವಿಚಾರಧಾರೆಯಾಗಲೀ, ಕನಸುಗಳಾಗಲೀ ಇಲ್ಲಿ ಮೊಳೆಯುವುದು, ಬೆಳೆಯುವುದು ಇಲ್ಲವಾಗಿದೆ. ದಾಂಪತ್ಯ ಬದುಕಿನ ಮೌಲ್ಯದ ಅನುಭವವನ್ನೇ ಮುಂದಿಡುತ್ತ ಅಂತೆಯೇ ಬಾಳುವುದನ್ನು ಪ್ರೇರೇಪಿಸಲಾಗುತ್ತದೆ. ಅದೇ ಅವಳ ಧರ್ಮ ಎಂಬುದನ್ನು ಸಾರುತ್ತದೆ. ಮಾಸ್ತಿ ಅದನ್ನು ಮಧ್ಯಮ ವರ್ಗದವರಿಂದ ಹಾಗೂ ವೈದಿಕ ಮನೆತನದ ಸ್ತ್ರೀಯರಿಂದ ಸಾಧ್ಯವಾಗಿಸುತ್ತಾರೆ. ಅದನ್ನು ಮೀರಿದ ಹೆಣ್ಣಿನ ಬದುಕು ದಿಕ್ಕುತಪ್ಪುವ ನೆಲೆಯನ್ನು ಅವರ ಕತೆಗಳು ಪರಿಚಯಿಸುತ್ತವೆ. ಕೆಳವರ್ಗದ ಹೆಣ್ಣುಮಕ್ಕಳ ಸ್ವತಂತ್ರ ತೀರ್ಮಾನದ ನಂತರ ಬದಲಾಗುವ ಗೊಂದಲ ಗೋಜಲಿನ ಬದುಕು ಮತ್ತೆ ಮೊದಲ ದಾಂಪತ್ಯ ಸ್ವೀಕರಿಸಿದ ರೀತಿ ಬದುಕಿನ ಸಾಗುವಿಕೆಯ ದಿಕ್ಕನ್ನು ಪರಿಚಯಿಸುತ್ತದೆ. ಅದೇ ನೆಲೆಯಲ್ಲಿ ಅವರ ನಂತರದ ಕತೆಗಳಲ್ಲಿನ ಸ್ತ್ರೀಯರೂ ಕೂಡ ಪರಿಚಿತರಾಗುತ್ತಾರೆ. ಉದ್ಯಮಕ್ಕೆ ಎಡೆಪಡೆಯದ ಅವರು ಗಂಡನಿಗೆ ಹೆಂಡತಿಯಾಗಿಯೇ ಇದ್ದು ಬಗ್ಗಿ ನಡೆಯುವ ಮೂಲಕ ದಿನ ಕಳೆಯುವುದರಲ್ಲಿಯೇ ಒಂದು ಮೌಲ್ಯವಿದೆ ಎಂದು ಹೇಳುವ ಯುಗ ಮೌಲ್ಯವನ್ನು ಪ್ರತಿನಿಧಿಸುತ್ತಾರೆ.

ಗಂಡನಿಗಾಗಿ ಬದುಕಿನ ಆಶೋತ್ತರಗಳನ್ನು ತ್ಯಾಗ ಮಾಡುವ ಮಹಿಳೆಯರು ಈ ಕಾಲಘಟ್ಟದ ಪ್ರಮುಖ ಮೌಲ್ಯವಾಗಿ ಮೆರೆಯಿಸಿಕೊಂಡದ್ದಾಗಿದೆ. ಗಂಡನ ಎಲ್ಲ ನಿಲುವುಗಳಿಗೆ ತಲೆಯೊಡ್ಡಬೇಕಾಗಿದ್ದ ಹೆಣ್ಣು ಅದನ್ನೇ ಅನುಸರಿಸುತ್ತ ಬರಬೇಕಾದ ಸಂದೇಶ ಸಾರುವುದು ಅಂದಿನ ತುರ್ತು ಆಗಿತ್ತು. ಆಧುನೀಕರಣದ ಪ್ರಭಾವದಲ್ಲಿ ಆಕೆ ಕರಗಿ ಹೋಗದಂತೆ ತಡೆಯುವ ನೆಲೆಗಟ್ಟಿನಲ್ಲಿಯೇ ಆಕೆಯ ತಪ್ಪುಗಳನ್ನು ಇಲ್ಲಿ ಹೆಚ್ಚಾಗಿ ದಾಖಲಿಸಲಾಗಿದೆ. ಆ ನೆಲೆಯಲ್ಲಿ ತಮ್ಮತನ ಕಳೆದುಕೊಳ್ಳುವ ಸಹನಶೀಲೆಯರು ಮಿಡಿಯುವುದು ಇಲ್ಲಿ ಪರಿಚಿತವಾಗುತ್ತದೆ.

ಅದೇ ಮಾದರಿಯಲ್ಲಿ ಕಡೆಂಗೋಡ್ಲು ಶಂಕರ ಭಟ್ ಅವರು ಈ ರೀತಿಯ ಪರಿಸ್ಥಿತಿಗೆ ಒಳಗಾದ ಹೆಣ್ಣು ಮಕ್ಕಳನ್ನು ವಿಶಿಷ್ಟ ರೀತಿಯಲ್ಲಿ 'ಹಿಂದಿನ ಕತೆಗಳು' ಸಂಕಲನದಲ್ಲಿ ಚಿತ್ರಿಸುತ್ತಾರೆ. ಅವರು

ಹೆಣ್ಣಿನ ಎದೆಗಾರಿಕೆಯನ್ನು ಪರಿಚಯಿಸುತ್ತಾರೆ. ಈ ಪರಿಚಯಿಸುವಿಕೆಯ ಹಿಂದೆ ವಿಡಂಬನೆ, ವ್ಯಂಗ್ಯ ಅಡಕಗೊಂಡಿದ್ದೈಗಂಡ ಹೆಂಡತಿಯ ಎದುರು ಕುಬ್ಜನಾಗಿಬಿಟ್ಟರೆ ಅವಳ ಆಡಳಿತದ ಹಿಂದೆ ಕುಟುಂಬ ಪಾಲನೆ, ಸಮಯ ಪ್ರಜ್ಞೆಕೂಡ ಜೊತೆ ಜೊತೆಯಾಗಿಯೇ ಕೆಲಸಮಾಡುತ್ತಿರುತ್ತದೆ. ಆದರೆ ಎ. ಆರ್. ಕೃಷ್ಣ ಶಾಸ್ತ್ರಿ (ಶ್ರೀಪತಿ) ಅವರ 'ಶ್ರೀಪತಿಯ ಕತೆಗಳು' ಸಂಕಲನದ ಕತೆಗಳ ಸ್ತ್ರೀಯರು ಭಿನ್ನರಾಗುತ್ತಾರೆ. ಅವರು ಎದೆಗಾರ್ತಿಯರ ಬದಲಾಗಿ ಇಲ್ಲಿ ಜಗಳಗಂಟಿಯರಾಗಿ ಕಾಣಿಸಿಕೊಳ್ಳುತ್ತಾರೆ. ಸಾಂಪ್ರದಾಯಕ ಬದುಕೇ ಮುಂದುವರಿಯಬೇಕೆಂದು ನಂಬಿದ ಶಾಸ್ತ್ರಿ ಅವರಿಗೆ ಅಂಥ ಸ್ತ್ರೀಯರ ಸ್ವಭಾವ ಸಹ್ಯವಾಗುವುದಿಲ್ಲ. ಅವರ ಕಿರುಕುಳ ಸ್ವಭಾವ ಹೆಣ್ತನಕ್ಕೆ ಹೇಳಿಸಿದ್ದಲ್ಲ. ಅದರ ಹೊರತಾಗಿ ಸಹನೆ, ಸೌಮ್ಯ ಸ್ವಭಾವವನ್ನು ಮೈವೆತ್ತಿಕೊಂಡು ಬದುಕಬೇಕು ಎಂದೇ ಸಾರುತ್ತಾರೆ.

ವ್ಯವಸ್ಥೆಯೊಳಗೆ ಸಿಲುಕಿಬಿದ್ದ ಮಹಿಳೆಯರ ಬದುಕನ್ನು ಚಿತ್ರಿಸುವ, ಧರ್ಮ ಬದ್ಧಗೊಳಿಸುವ ಉದ್ದೇಶದ ನವೋದಯ ಕತೆಗಾರರು ಪ್ರಾಮುಖ್ಯ ಕೊಡುವುದು ಅವರು ಬಾಳಬೇಕಾದ ರೀತಿಗೆ. ಅದರಲ್ಲೂ ನೈತಿಕ ಬದುಕು ಸಾಗಿಸುವ ಹೆಣ್ಣಿಗೇ ಗೌರವ, ಮನ್ನಣೆ ಪ್ರಾಪ್ತವಾಗಬೇಕಾದದ್ದು. ಅಂದಿನ ಕಟ್ಟುಪಾಡು ಮಾನವೀಯ ನೆಲೆಯಲ್ಲಿ ಹೆಣ್ಣಿಗೆ ವೈಯಕ್ತಿಕ ಸ್ಥಾನ ಕೊಡುವುದಕ್ಕೆ ಮನಸ್ಸು ಮಾಡುವುದಿಲ್ಲ. ಆಧುನಿಕರಣದ ಗಾಳಿ ಸೋಂಕಿದರೂ ಹೆಣ್ಣಿನ ಬದುಕಿಗೆ ಅದನ್ನು ಅಳವಡಿಸಲು ಪುರುಷ ಪ್ರಾಧಾನ್ಯ ಸಮಾಜ ಒಪ್ಪುವುದಿಲ್ಲ.

ಕೆಲವು ಸಂದರ್ಭಗಳಲ್ಲಿ ಅನ್ಯಾಯಕ್ಕೆ ಒಳಗಾದ ಹೆಣ್ಣಿಗೆ ನ್ಯಾಯ ಕೊಡುವುದಕ್ಕೆ ಮುಂದಾದವರೂ ಇದ್ದಾರೆ. ಆದರೆ ಅದಕ್ಕೂ ಹೆಚ್ಚಾಗಿ ಹೆಣ್ಣು ಹೊರಗೆ ಹೆಜ್ಜೆ ಇಟ್ಟರೆ ಅವಳು ಬಾಳುವುದೇ ಅನಗತ್ಯ ಎಂಬ ನಿರ್ಧಾರಕ್ಕೆ ಬಂದು ಬಿಟ್ಟಿದ್ದಾರೆ. ಆದ್ದರಿಂದಲೇ ಅವರು ಸುಧಾರಣೆಯ ಕಡೆಗೆ ಗಮನ ಹರಿಸುವುದಿಲ್ಲ. ಓರ್ವ ಹೆಣ್ಣಿನ ಸಮಸ್ಯೆಯನ್ನು ಅವಳೇ ಪರಿಹರಿಸಿಕೊಳ್ಳಬೇಕಾದ ನಿರ್ಧಾರಕ್ಕೆ ಬಂದುಬಿಡುತ್ತಾರೆ. ವೇಶ್ಯೆಯರೇ ಸಮಸ್ಯೆಕಂಡುಕೊಂಡರೂ ಅಲ್ಲಿ ಅವಳ ಪರಿಸ್ಥಿತಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಿಲ್ಲ. ಬದಲಾಗಿ ಅದನ್ನು ಹಾಗೆಯೇ ಬಿಟ್ಟು ಬಿಡುವ ಅಥವಾ ಅವನನ್ನೇ ಇಲ್ಲವಾಗಿಸುವ ಸೋದರ ಸಂಬಂಧದ ಕಟ್ಟಳೆಗೆ, ಬಂಧಿಸಿ ಅಲ್ಲಿಂದ ದೂರಮಾಡುವ ಮನಃಸ್ಥಿತಿಗೆ ಒಳಗಾಗುತ್ತಾರೆ. ಮಾಸ್ತಿಯವರ 'ಬೀದಿಯಲ್ಲಿ ಹೋಗುವ ನಾರಿ' ಕತೆಯಲ್ಲಿ ವ್ಯಕ್ತಿಯೊಂದಿಗೇ ಸಂಬಂಧ ಬೆಳೆಸ ಹೊರಡುವುದು ಆಕೆಗೆ ತಿಳಿಯದಿರುವ ಹಂತದಲ್ಲಿ ಶ್ರೀನಿವಾಸಯ್ಯ ಪ್ರೀತಿಯಿಂದ ತಂಗಿ ಎಂದು ಕರೆದು, ಮುತ್ತಿಡುತ್ತಾನೆ. ಆಕೆಯೂ ಅವನನ್ನು ಅಣ್ಣ ಎಂದು ಒಪ್ಪಿಕೊಳ್ಳುವ ಹಂತಕ್ಕೆ ಬಂದು ತನ್ನ ಪ್ರಿಯಕರ ಬಂದೊಡನೆಯೇ ಅವನೊಂದಿಗೆ ತೆರಳಿ ಶ್ರೀನಿವಾಸಯ್ಯನನ್ನು ಮುಚ್ಚ ಎಂದು ಕರೆಯುವ ಮೂಲಕ ಅವಳು ಹೊಂದಿಕೊಂಡಿದ್ದ ಸ್ಥಿತಿಯಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಅಲ್ಲಿಂದ ಹೊರಬಾರದಂತೆ ಅವಳನ್ನು ತಡೆಯಲಾಗಿದೆ. ಒಂದೋ ಆ ವ್ಯವಸ್ಥೆಯನ್ನು ಬದಲಾಯಿಸುವ ಕಾರ್ಯ ಮಾಡಬಹುದಿತ್ತು. ಆದರೆ ಮಾಸ್ತಿ ಅದಕ್ಕೆ ಅಂಟಿಕೊಂಡ ಹೆಣ್ಣು ಬದಲಾಗಲು ಸಾಧ್ಯವೇ ಇಲ್ಲ

ಎಂಬುದನ್ನು ಪ್ರತಿಪಾದಿಸುತ್ತಾರೆ. ಆದರೆ ಕತೆಗಾರ ಆನಂದ ಅವರು 'ನಾನುಕೊಂದ ಹುಡುಗಿ'ಯ ಮೂಲಕ ದೇವದಾಸಿ ಪದ್ಧತಿಯನ್ನು ಸಾಯಿಸಲು ಹೊರಡುತ್ತಾರೆ. ಆದರೆ ಲೇಖಕರು ನಾಯಕಿಗೆ ಆ ನೆಲೆಯಲ್ಲಿ ಪಶ್ಚಾತ್ತಾಪ ಉಂಟಾಗುವಂತೆ ಮಾಡಿದ್ದಾರೆಯೇ ಹೊರತು ದೇವದಾಸಿ ಪದ್ಧತಿಯನ್ನು ತೊರೆಯುವುದಕ್ಕೆ ಹೊರಡಲಿಲ್ಲ. ಅದನ್ನು ಪ್ರತಿಭಟಿಸುವ, ಅಲ್ಲಿಂದ ಹೊರಬಂದು ಬದುಕುವ ಧೈರ್ಯವನ್ನು ಇಲ್ಲಿ ಕೊಡಲಾಗಿಲ್ಲ. ಬದಲಾಗಿ ನಿರೂಪಕ ಮೇಲ್ವರ್ಗದವರು. ಚೆನ್ನಿ ಕೆಳವರ್ಗದವಳು. ಆತ ಉಪದೇಶ ಮಾಡುವ ವರ್ಗದವ, ಆಕೆ ಕೇಳುವ ವರ್ಗದವಳು. ಆ ಬುದ್ಧಿವಾದ ಆಕೆಯ ಮನಃ ಪರಿವರ್ತನೆ ಮಾಡಿಸದೇನೆ ಪಶ್ಚಾತ್ತಾಪ , ನೋವಿನ ಅನುಭವ ಮೂಡಿಸುತ್ತದೆ ಮತ್ತು ಜೀವನವನ್ನೇ ಬಲಿತೆಗೆದುಕೊಳ್ಳುವಂತೆ ಮಾಡುತ್ತದೆ.

ಕೆ. ಗೋಪಾಲಕೃಷ್ಣ ರಾಯರ 'ನಟಿ' ಕತೆಯು ಮಾಸ್ತಿಯವರ 'ಬೀದಿಯಲ್ಲಿ ಹೋಗುವ ನಾರಿ' ಕತೆಗೆ ಸಮೀಪವಾಗಿಯೇ ಬಿತ್ತರಗೊಂಡಿದೆ. ವೇಶ್ಯೆಯೊಬ್ಬಳ ಮಗಳು ಬೆಳೆಯುವುದಕ್ಕೆ ಬ್ರಾಹ್ಮಣ ತರುಣನೂ ಕಾರಣನಾಗುತ್ತಾನೆ. ಅವಳನ್ನು ಆತ ಶ್ರೇಷ್ಠ ನಟಿಯಾಗಿಸುತ್ತಾನೆ. ಆದರೆ ಆಕೆಯ ಮನದ ಭಾವನೆಗಳಿಗೆ ಸ್ಪಂದಿಸುವುದಿಲ್ಲ. ಅವಳೊಂದಿಗೆ ಅವನಿಗೆ ಬಾಳ್ವೆ ಬೇಕಿಲ್ಲ. ಅವಳ ಪ್ರೇಮಕ್ಕೆ ಮಾತ್ರ ಸಹೋದರತೆಯ ಲೇಪನ ಹಾಕುತ್ತಾನೆ. ಅದರೊಂದಿಗೆ ಬಂಧಿಸಿಬಿಡುತ್ತಾನೆ. ಇಲ್ಲಿ ಆಕೆಯ ನಿರ್ಧಾರ ಸೋಲುವುದು ಗಮನಿಸಬೇಕಾಗುತ್ತದೆ. 'ಪ್ರತೀಕಾರ' ಕತೆಯಲ್ಲಿ ಗಂಡನ ವ್ಯಭಿಚಾರವನ್ನು ಪ್ರಶ್ನಿಸಿದ ಅವನ ವಿರುದ್ಧ ಸೇಡು ತೀರಿಸಲು ತೊಡಗಿಕೊಂಡ ಹೆಣ್ಣು ಬದುಕು ಪಡೆಯದೇ ಹೋದದ್ದನ್ನು ಕಾಣುತ್ತೇವೆ. ಗಂಡನನ್ನು ಎದುರಿಸುವ ಜೀವ, ಉಸಿರು ಕಳಕೊಳ್ಳುವ ಹೀನ ಪಾಡು ಅನುಭವಿಸಬೇಕಾಗುತ್ತದೆ. ತಾನೇ ಪ್ರಧಾನವೆಂದು ನಂಬಿದ ಪುರುಷ ದುರ್ಬಲ ಎಂದು ಪರಿಗಣಿಸಲಾಗಿರುವ ಸ್ತ್ರೀಯರ ಮೇಲೆ ತನ್ನ ಶಕ್ತಿಯನ್ನು ಪ್ರಯೋಗಿಸ ಬಯಸುವ ಭಂಡ ಶೂರತ್ವ ಮೆರೆಯುತ್ತಾನೆ. ಆಧುನಿಕತೆ, ಆದರ್ಶ ಹಾಗೂ ಬದುಕು ಮೂರರ ತಳುಕಿನೊಂದಿಗೆ ಎಂದು ಗೊಂದಲ ಹುಟ್ಟಿಸುವಂತೆ ಮಾಡಿದರೂ ಬದಲಾಗದೆ ಅಹಂನಿಂದಾಗಿ ಗಂಡು ಸ್ತ್ರೀಯರನ್ನು ನಡೆಸಿಕೊಳ್ಳುವ ರೀತಿಯ ಬದಲಾವಣೆಗೆ ತೊಡಗುವಂತೆ ಮಾಡಿದೆ. ಆದರೂ ಪ್ರತಿಷ್ಠೆ ಉಳಿಸುವುದು ಹೆಣ್ಣಿನ ಧರ್ಮದ ನೆಲೆಯಿಂದಲೇ ಎಂದು ನಂಬಿದ್ದು ಇಲ್ಲಿ ವಿಧಿತವಾಗುತ್ತದೆ.

ಸಾಮಾಜಿಕ ಸುಧಾರಣಾ ಚಳವಳಿಯ ಪ್ರಬಲ ಗಾಳಿಗೆ ನವೋದಯ ಲೇಖಕರು ಒಳಗಾಗಿದ್ದರು. ಆದರೆ ಮಾಸ್ತಿ ಮಾತ್ರ ಅದಕ್ಕೆ ವಾಲಿದಂತಿಲ್ಲ. ಸಂಪೂರ್ಣ ಬದುಕಿನ ಆಧಾರದಲ್ಲಿಯೇ ಎಲ್ಲವನ್ನು ತೂಗಿನೋಡುವ ಅವರಿಗೆ ಹೆಣ್ಣಿನ ವಿದ್ಯಾಭ್ಯಾಸ ಉದ್ಯೋಗ ಮುಖ್ಯವಲ್ಲ. ಅದು ಆಕೆಯ ಸುರಕ್ಷಿತತ್ವಕ್ಕೆ ಸರಿಯಾದ ತಾಣವಲ್ಲ. ಆಕೆ ನೆಮ್ಮದಿಯಿಂದ ನಿರ್ಭಿಡೆಯಿಂದ ಬದುಕುವುದು ಮನೆಯೊಳಗೆ ಮಾತ್ರ ಎಂದು ನಂಬಿದವರು. ಆದರೆ ಬಹುತೇಕ ನವೋದಯದ ಕತೆಗಾರರಿಗೆ ಸುಧಾರಣಾ ಚಳವಳಿ ಅತ್ಯಂತ ಹುರುಪು ನೀಡಿದೆ. ಬರವಣಿಗೆಗೆ ವಸ್ತುವಾಗಿದೆ. ಈ ನಡುವೆ ಪಾಶ್ಚಾತ್ಯ ಸಂಸ್ಕೃತಿಗಳನ್ನು ಕಲೆ ಹಾಕುತ್ತ,

ಕೆಲಸವನ್ನು ಸ್ವೀಕರಿಸುತ್ತ ಬಾಳುತ್ತ ಬಂದುದಕ್ಕೆ ಆ ಪ್ರೇರಣೆಯಿಂದ ರಚಿತವಾದ ಕತೆಗಳು ಸಾಕ್ಷಿ ಹೇಳುತ್ತವೆ. ಸುಶಿಕ್ಷಿತ, ಪ್ರಗತಿಪರ ಹಾಗೂ ವೈಚಾರಿಕ ಆಯಾಮಗಳು ಅವಳ ಅಸ್ತಿತ್ವದ ವಿವರವನ್ನು ಕೊಡುತ್ತವೆ.ಅಲ್ಲಿ ಅವಳೊಳಗಿನ ವ್ಯಕ್ತಿತ್ವ ಪ್ರಕಟಗೊಳ್ಳುತ್ತವೆ. ಅಲ್ಲಿನ ಸ್ತ್ರೀಯರು ಶೋಷಣೆಗೆ ಪ್ರತೀಕಾರ ತೋರುತ್ತಾರೆ. ಪ್ರತಿಭಟನೆ ಮಾಡುತ್ತಾರೆ. ತಿರಸ್ಕಾರ ತೋರುತ್ತಾರೆ. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಧೈರ್ಯ ತೋರುತ್ತಾರೆ. ಅಲ್ಲಿನ ಸ್ತ್ರೀಯರಿಗೆ ಭಾರತೀಯ ನಾರೀತ್ವವನ್ನು ಧಿಕ್ಕರಿಸಿ ಬದುಕು ಕಂಡುಕೊಳ್ಳುವ ಛಾತಿ ಇದೆ. ಅದು ಸಾಧ್ಯವಾದದ್ದೇ ಸುಧಾರಣೆಯ ಅಂಶಗಳಿಂದ, ಆ ಧೈರ್ಯದಿಂದ.

ಎಚ್. ಪಿ. ಜೋಶಿ ಮುಖ್ಯರಾಗುವುದು ಅವರ ಕತೆಗಳಲ್ಲಿನ ಸ್ತ್ರೀಯರ ವಾಸ್ತವ್ಯ ಪ್ರಜ್ಞೆಗೆ ಹಾಗೂ ಜೀವನ ನಿರ್ವಹಣೆ ರೀತಿಯಲ್ಲಿ ಸಾಧಿಸುವ ಯಶಸ್ಸಿಗೆ. ಸ್ತ್ರೀ ಕೇಂದ್ರಿತ ಕತೆಗಳಲ್ಲಿ ವಿಧವೆಯರ ಕುರಿತ ಸಮಸ್ಯೆಗಳಿವೆ. ವಿಧವೆಯ ಯಾತನಾಮಯ ಬದುಕನ್ನು ಅವರು ತೆರೆದಿಡುತ್ತಾರೆ. ಕಷ್ಟ ಸಹಿಸಲಾಗದೇ ಓಡಿ ಹೋಗುವ, ಮರಳಿ ಬರುವ ಕ್ರಿಯೆಗಳ ನಡುವೆ ಚರ್ಚಿತವಾಗುವುದು ತಡೆಹಿಡಿಯುವ ಸಹಜವಾದ ಕಾಮನಿಗ್ರಹದ ಕುರಿತು. ಅದು ಪ್ರಕೃತಿ ಸಹಜವಾದುದಾದರೂ ನಿಯಂತ್ರಣಕ್ಕೆ ಒಳಗಾಗುವ ಕ್ರಿಯೆಯನ್ನು ಇಲ್ಲಿ ಚರ್ಚೆಗೊಡ್ಡಲಾಗಿದೆ. 'ತಾಯಮ್ಮ' ಕತೆಯಲ್ಲಿ ಮೇಲ್ವರ್ಗದವರನ್ನು ಗಂಡನನ್ನಾಗಿ ಬಯಸಿ ಹಂಬಲಿಸುತ್ತಿರುವ ನಾಯಕಿ ಪರಿಚಿತಗೊಂಡಿದ್ದಾಳೆ. ಇಲ್ಲಿ ಹೆಣ್ಣು ಅಸಹಾಯಕಿ ಅಲ್ಲ ಎಂಬುದು ಪ್ರತಿನಿಧಿತವಾಗಿದೆ. ಆದರೆ ಅಂದಿನ ವಾಸ್ತವವನ್ನು ಅರಿತುಕೊಂಡಾಗ ಈ ಅಸಹಾಯಕತೆ ಮೌನ ಅರ್ಥವಾಗದೇ ಇರುವುದಿಲ್ಲ. ಸಾಂಪ್ರದಾಯಿಕತೆ ಹಾಗೂ ಆಧುನಿಕತೆಯ ನಡುವೆ ಚರ್ಚೆಗೊಳಗಾಗುವ ಲೈಂಗಿಕ ಕ್ರಿಯೆ ಹಾಗೂ ಅನೈತಿಕ ಸಂಬಂಧ, ಕಳಚಿಕೊಳ್ಳುವ ಬಾಂಧವ್ಯ, ಗಂಡನನ್ನು ಪ್ರಶ್ನಿಸುವ ಧೈರ್ಯ ತೋರುವುದು, ಇನ್ನೊಂದೆಡೆ ಅಂಥ ನಿಲುವಿಗೆ ಶಿಕ್ಷೆ ಪಡೆಯುವುದು, ಗಂಡನನ್ನು ಕ್ಷಮಿಸುವುದು, ಭಾರತೀಯ ಮೌಲ್ಯಯುತ ನಾರೀತ್ವದ ಪರಿಪಾಲನೆ ಮಾಡಬೇಕಾದ ದ್ವಂದ್ವ ಆಧುನಿಕತೆ ಹಾಗೂ ಪರಂಪರೆಯ ನಡುವಿನ ಸಂಘರ್ಷದಿಂದಾಗಿ ಎಡೆ ಪಡೆದದ್ದಾಗಿದೆ. ಪುರುಷ ಪ್ರಾಧಾನ್ಯ ವ್ಯವಸ್ಥೆ ಪುರುಷನೊಂದಿಗೆ ಹೆಣ್ಣು ಸಮಾನಳಾಗುವುದಕ್ಕೆ ಬಿಡದಂತೆ ವಹಿಸುವ ಎಚ್ಚರಿಕೆ ಬಹುತೇಕ ಮಂದಿಯದೂ ಆಗಿರುತ್ತದೆ. ಅದರ ಪ್ರತಿನಿಧಿಯಾಗಿಯೇ ಅವರ ಬದುಕು ತೆರೆದುಕೊಂಡಿದೆ.

ಬೆಟಗೇರಿ ಕೃಷ್ಣ ಶರ್ಮ ಅವರ ಕೃತಿಗಳ ಸ್ತ್ರೀಯರ ಸಮಸ್ಯೆಗಳೂ ಕೂಡ ಪುರುಷ ಪ್ರಾಧಾನ್ಯ ಸಂಸ್ಕೃತಿಯ ಮನಃಸ್ಥಿತಿಯ ಪ್ರತಿರೂಪವೇ ಆಗಿ ರೂಪುಗೊಂಡಿವೆ. ಆಧುನಿಕತೆಯ ಪರಿಣಾಮವಾಗಿ ಪಡೆದುಕೊಂಡ ವೈಚಾರಿಕತೆಯಿಂದ ಸ್ತ್ರೀಯರು ಪ್ರಾಧಾನ್ಯ ಪಡೆದಿದ್ದಾರೆ. ಆದರೆ ಅದೇ ಶಿಕ್ಷಣ ಪಡೆದ ಮಾತ್ರಕ್ಕೆ ಗಂಡನನ್ನು ತಾತ್ಸಾರದಿಂದ ಕಾಣುವ, ಕೆರಳುವ ರೀತಿಯನ್ನು ಚಿತ್ರಿಸುವುದು ಸ್ತ್ರೀ ಪಡೆದ ವಿದ್ಯಾಭ್ಯಾಸದ ಪರಿಣಾಮದ ಬೆಳವಣಿಗೆಯನ್ನು ಆ ಮೂಲಕ ಹೇಳುವುದಾಗಿದೆ. ಅಲ್ಲಿ ಋಣಾತ್ಮಕಕ್ಕಿಂತ ಹೆಚ್ಚಾಗಿ ಧನಾತ್ಮಕ ಭಾವನೆ ಇದೆ ಎನ್ನಬಹುದು.

ನವೋದಯದ ಕತೆಗಾರ್ತಿಯರು ಆರಂಭಿಕ ಹಂತದಲ್ಲಿ ಆರ್. ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬ ಅವರ ಚಳುವಳಿ, ಸ್ತ್ರೀಪರ ಚಿಂತನೆಯ ಕಾಳಜಿ, ಚಟುವಟಿಕೆಗಳಿಂದ ಪ್ರಭಾವಿತರಾದರು. ಈ ಹಂತದಲ್ಲಿ ಒಳತೋಟಿಗಳನ್ನೆಲ್ಲ ತೆರೆದಿಡುವ ನಿಟ್ಟಿನಲ್ಲಿ ವಿಶೇಷವಾಗಿ ಸ್ಪಂದಿಸಿದವರು. ತಮ್ಮೊಳಗಿನ ವೈಚಾರಿಕತೆ, ಹೆಣ್ಣಿನ ನೋವು-ನಲಿವುಗಳನ್ನು ತಾವೇ ಆಗಿ ಸ್ವೀಕರಿಸಿಕೊಂಡು ಬರೆದವರನ್ನು ಕಾಣುತ್ತೇವೆ. ಹೆಣ್ಣು ಬರೆದ ಕತೆಗಳಲ್ಲಿ ಪುರುಷ ಪ್ರಧಾನ ಆಲೋಚನೆ ಒಪ್ಪಿಕೊಂಡು ಭಿನ್ನರಾಗುವವರು ಹಾಗೂ ಅದನ್ನು ಧಿಕ್ಕರಿಸಿ ಬರೆಯುವ ವಿಭಾಗಗಳ ಹಿನ್ನೆಲೆಯಲ್ಲಿ ಕತೆಗಳನ್ನು ಅಭ್ಯಸಿಸುವುದು ಹೆಚ್ಚು ಪ್ರಸ್ತುತವಾಗುತ್ತದೆ. ಆದರೆ ಈ ಚರ್ಚೆಯನ್ನು ಕೆಲವು ಕತೆಗಾರ್ತಿಯರ ಕೆಲವು ಕತೆಗಳ ಹಿನ್ನೆಲೆಯಲ್ಲಿ ಮಾತ್ರ ಮಾಡಲಾಗುತ್ತದೆ.

ನವೋದಯದ ಕತೆಗಾರ್ತಿಯರಲ್ಲಿ ಪ್ರಮುಖರಾದವರು ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಸರಸ್ವತಿ ದೇವಿ, ಎಚ್. ವಿ. ಸಾವಿತ್ರಮ್ಮ, ಸರಸ್ವತಿ ರಾಜವಾಡೆ, ಲೀಲಾಬಾಯಿ ಕಾಮತ್, ಆನಂದಿ ಸದಾಶಿವ ರಾವ್. ಅವರೆಲ್ಲರೂ ಬರೆಯಲಾರಂಭಿಸಿದ್ದು ಪುರುಷ ಕೇಂದ್ರಿತವಾದ ಸಮಾಜದೊಳಗಿದ್ದೇ ಉಸಿರಾಡುತ್ತಿದ್ದ ಬಿಗಿ ವಾತಾವರಣದಲ್ಲಿ. ಹೆಣ್ಣೆಂದರೇನೇ ಒಂದು ಸರಕಾಗಿ ಗುರುತಿಸುವ ಪುರುಷ ಆಲೋಚನೆಯೊಂದಿಗೆ ಏಗಬೇಕಾದ ಪರಿಸರದಿಂದ ಬಂದವರೇ ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ತೊಳಲಾಡುವ ಹೆಣ್ಣಿನ ಕುರಿತು ಬರೆಯಲಾರಂಭಿಸಿದರು. ಅವರಿಗೆ ಮುಖ್ಯವಾದದ್ದು ಹೆಣ್ಣಿನ ವೇದನಾಮಯ ಬದುಕನ್ನು ತೆರೆದಿಡಬೇಕೆಂಬ ಉದ್ದೇಶ. ಆ ಮೂಲಕ ತಮ್ಮ ಅನುಭವದ ನೆಲೆಯೊಳಗೆ ಅವಳ ನೋವನ್ನು ಸ್ವಂತ ಅನುಭವದ ನೆಲೆಯಾಗಿ, ಇನ್ನೊಂದು ಹೆಣ್ಣಿನ ನೋವನ್ನು ತನ್ನದೇ ಅನುಭವವಾಗಿ ಎಲ್ಲ ಹೆಣ್ಣುಮಕ್ಕಳೂ ತಾವೇ ಆಗಿ ಅಭಿವ್ಯಕ್ತಿಸಿದ್ದು ಮುಖ್ಯವಾಗುತ್ತದೆ. ಆಗತಾನೇ ಹೆಣ್ಣು ಹೊರಕ್ಕೆ ಹೊರಟ ಸಂದರ್ಭದಲ್ಲಿಯೇ ಯಾಜಮಾನ್ಯ ಶಾಹಿತ್ವದ ಪ್ರತಿನಿಧಿಯಾದ ಗಂಡಸು ವರ್ತಿಸುವ ರೀತಿಯಿಂದ ಅವಳು ನೊಂದುಕೊಳ್ಳಬೇಕಾದ ಪರಿಯನ್ನು ಚಿತ್ರಿಸುವುದು ಅವರಿಗೆ ಮುಖ್ಯವಾಗಿದೆ. ಅಲ್ಲಿ ಸುಧಾರಣಾವಾದಿಗಳಿಂದಾದ ಪ್ರಭಾವ ಹಾಗೂ ಆಗಬೇಕಾದ ಬದಲಾವಣೆಯ ಧ್ವನಿಯನ್ನು ಪ್ರತಿಪಾದಿಸಲಾಗಿದೆ. ಆದರೆ ಆ ಧ್ವನಿಯಲ್ಲಿ ಗಟ್ಟಿತನವಿಲ್ಲ. ಸಿದ್ಧವಾದ ಬದುಕಿನ ಮೌಲ್ಯವನ್ನು ಅವರು ಒಪ್ಪಿಕೊಂಡವರೇ ಆಗಿರುತ್ತಾರೆ. ಆ ಒಪ್ಪಿತ ಮೌಲ್ಯ ಆಚರಣೆಗಳ ಕುರಿತ ಪ್ರಶ್ನಿಸುವಿಕೆ ಇಲ್ಲಿ ನಡೆಯುತ್ತದೆ. ಸ್ತ್ರೀ ಕುರಿತ ಕಾಳಜಿಯ ಪರಿಕಲ್ಪನೆಯನ್ನು ಗಟ್ಟಿಗೊಳಿಸುವ ನೆಲೆಯಲ್ಲಿ ಅವರ ಕತೆಗಳು ಕೆಲಸ ಮಾಡುತ್ತವೆ. ಅಲ್ಲಿ ತಮ್ಮದೇ ಆದ ನೆಲೆಯಲ್ಲಿ ಮಹಿಳೆಯರ ಲೋಕವನ್ನು ತೆರೆದಿಡುವ ನಿಟ್ಟಿನಲ್ಲಿ ದುಡಿದವರು. ವಿವಾಹ, ವಿವಾಹೇತರ ಸಂಬಂಧ, ನೈತಿಕ-ಅನೈತಿಕ ಜಗತ್ತಿನ ವಿವರಗಳು, ಲೈಂಗಿಕ ಸ್ವೇಚ್ಛಾಚಾರ, ಸಮಾಜದ ತರತಮಗಳ ಕುರಿತು ವಿಡಂಬನಾತ್ಮಕವಾಗಿ ಪರಿತಪಿಸಿದ್ದೇ ಅಲ್ಲಿ ಮುಖ್ಯವಾಗುತ್ತದೆ. ಕ್ರಿಯಾತ್ಮಕ ರಚನೆಗೆ ತೊಡಗಿಸಿಕೊಂಡ ಈ ಕತೆಗಾರ್ತಿಯರಲ್ಲಿ ಶ್ಯಾಮಲಾದೇವಿ ಸಮಾಜದೊಳಗೆ ಹೆಣ್ಣು ತನ್ನದೇ

ಆದ ನೆಲೆಯಲ್ಲಿ ಮಹಿಳೆಯರ ಲೋಕವನ್ನು ತೆರೆದಿಡುವ ನಿಟ್ಟಿನಲ್ಲಿ ದುಡಿದವರು. ವಿವಾಹ, ವಿವಾಹೇತರ ಸಂಬಂಧ, ನೈತಿಕ-ಅನೈತಿಕ ಜಗತ್ತಿನ ವಿವರಗಳು, ಲೈಂಗಿಕ ಸ್ವೇಚ್ಛಾಚಾರ, ಸಮಾಜದ ತರತಮಗಳ ಕುರಿತು ವಿಡಂಬನಾತ್ಮಕವಾಗಿ ಪರಿತಪಿಸಿದ್ದೇ ಅಲ್ಲಿ ಮುಖ್ಯವಾಗುತ್ತದೆ. ಕ್ರಿಯಾತ್ಮಕ ರಚನೆಗೆ ತೊಡಗಿಸಿಕೊಂಡ ಈ ಕತೆಗಾರ್ತಿಯರಲ್ಲಿ ಶ್ಯಾಮಲಾದೇವಿ ಸಮಾಜದೊಳಗೆ ಹೆಣ್ಣು ತನ್ನನ್ನು ತೊಡಗಿಸಿಕೊಂಡು ಉತ್ತರವಾದದ್ದನ್ನು ಮುಂದಿಟ್ಟಿರುವುದನ್ನು ಗಮನಿಸಬೇಕು. ಜನಪದರ ಕುಟುಂಬದ ರೀತಿಯ ತೆರೆದ ಬದುಕಿಗೆ ಒಪ್ಪಿಕೊಂಡ ಹೆಣ್ಣುಮಕ್ಕಳ ಎದೆಗಾರಿಕೆ ಹಾಗೂ ಸ್ವಾತಂತ್ರ್ಯವನ್ನು ಅಭಿವ್ಯಕ್ತಿಸುತ್ತಾರೆ. ಬಲವಂತದ ವೇಶ್ಯಾವಾಟಿಕೆ, ಮದುವೆಗೆ ಒಪ್ಪಿಕೊಳ್ಳುವ ವೇಶ್ಯೆ, ಒಲ್ಲದ ಗಂಡನಿಗಿಂತ ಪ್ರೇಮಿಯೊಂದಿಗೆ ಸಂಬಂಧ ಮುಂದುವರಿಸುವ ಧೈರ್ಯದ ಹೆಣ್ಣಿನ ತೀರ್ಮಾನಗಳು ಅನಿವಾರ್ಯವೆಂಬಂತೆ ಒಪ್ಪಿಕೊಂಡದ್ದನ್ನು ಶ್ಯಾಮಲಾ ಅವರು ಆ ಕಾಲದ ಸಂದರ್ಭಗಳಿಗೆ ಹೆಣ್ಣು ಪ್ರತಿಕ್ರಿಯಿಸಿದ ಹಾಗೂ ಪ್ರತಿಕ್ರಿಯಿಸಬೇಕಾದ ರೀತಿಯನ್ನು ಪರಿಚಯಿಸಿದ್ದಾರೆ. (ಹೂ ಬಿಸಿಲು, ಹೊಂಬಿಸಿಲು) ಕೊಡಗಿನ ಗೌರಮ್ಮ ಅವರ ಕತೆಗಳ ಸ್ತ್ರೀಯರು ಯುಗಮೌಲ್ಯವನ್ನು ಪ್ರತಿನಿಧಿಸಿದ್ದಾರೆ. ಹೆಣ್ಣನ್ನು ಸಮಾಜ ನಿಕೃಷ್ಟವಾಗಿ ನೋಡುವುದನ್ನು ಕಂಡರಿಸಿ ಅದನ್ನು ದೂರಮಾಡಬೇಕಾದ ಕಾಳಜಿಯನ್ನು ತಮ್ಮ ಕತೆಗಳಲ್ಲಿ ತೆರೆದಿಟ್ಟಿದ್ದಾರೆ. ಸ್ತ್ರೀ ಪರವಾದ ದೃಷ್ಟಿಕೋನದ ಪ್ರಮುಖ ಕತೆಗಾರ್ತಿ ಎಚ್. ವಿ. ಸಾವಿತ್ರಮ್ಮ ಅವರನ್ನು ಕೂಡ ಹೆಣ್ಣಿನ ವಿಭಿನ್ನ ಸಮಸ್ಯೆಗಳು ಕಾಡಿವೆ. ಆ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮೂಲಕ ಮನಃ ಪರಿವರ್ತನೆ ಮಾಡುವುದು ಅವರ ಉದ್ದೇಶವಾಗಿತ್ತು. ಜೊತೆಗೆ ಅಂತರ್ಜಾತೀ ವಿವಾಹವನ್ನು ಕೂಡ ಪ್ರತಿಪಾದಿಸುವುದು ಅವರ ಪ್ರಗತಿಶೀಲತೆಯ ಮೈಲಿಗಲ್ಲಾಗುತ್ತದೆ. ಈ ಆಲೋಚನೆಗಳನ್ನು ಅವರ ನಿರಾಶ್ರಿತೆ, ಮರುಮದುವೆ ಕಥಾಸಂಕಲನಗಳಲ್ಲಿ ಕಾಣುವುದು ಸಾಧ್ಯವಾಗುತ್ತದೆ.

ಸಬಿಹಾ ಭೂಮಿ ಗೌಡ ಅವರು ಸರಸ್ವತಿಬಾಯಿ ರಾಜವಾಡೆ ಹಾಗೂ ಲೀಲಾಬಾಯಿ ಕಾಮತ್‌ರ ಕತೆಗಳನ್ನು ಜೊತೆಗಿಟ್ಟು ವಿಮರ್ಶಿಸುತ್ತ, 'ನವೋದಯದ ಒಟ್ಟು ಸಂದರ್ಭದಲ್ಲಿ ಬರೆಯುತ್ತಿದ್ದ ಪುರುಷ ಮತ್ತು ಸ್ತ್ರೀಯ ಸೃಜನಶೀಲ ನೆಲೆಗಳಲ್ಲಿ ಬಹಳವಾದ ವ್ಯತ್ಯಾಸವೇನೂ ಇದ್ದಂತಿಲ್ಲ. ಸರಸ್ವತಿಬಾಯಿ ರಾಜವಾಡೆ ಮತ್ತು ಲೀಲಾಬಾಯಿ ಕಾಮತರು ಒಟ್ಟು ನವೋದಯದ ಧೋರಣೆಗಳಿಗೆ ಬದ್ಧರಾಗಿದ್ದರೂ ಅಲ್ಪಸ್ವಲ್ಪ ಭಿನ್ನತೆಯನ್ನು ತೋರಿಸಿದ್ದರಿಂದ ಅಭ್ಯಾಸಯೋಗ್ಯರಾಗುತ್ತಾರೆ. ನಮ್ಮ ರಾಷ್ಟ್ರೀಯ ಹೋರಾಟ ರೂಪಿಸಿದ ಧೋರಣೆಗಳನ್ನು ಒಪ್ಪಿಯೂ ಇವರು ಸ್ವಂತ ಸ್ವರ ಹೊರಡಿಸಲು ಯತ್ನಿಸಿದ್ದಾರೆ. ಕರಾವಳಿಯ ಮೊದಲ ಹಂತದ ಕತೆಗಾರ್ತಿಯರಲ್ಲಿ ಇವರು ಮುಖ್ಯರಾಗುವುದು ಈ ಕಾರಣಕ್ಕೆ. ಇವರಿಬ್ಬರ ಕತೆಗಳಲ್ಲಿ ಮಹಿಳೆಗೆ ವಿಶಿಷ್ಟವಾದ ಕೆಲ ಅನುಭವಗಳ, ಸಂವೇದನೆಗಳ ಅಭಿವ್ಯಕ್ತಿಯಿದೆ. ಪುರುಷರು ಗುರುತಿಸಲಾಗದ ಇಲ್ಲವೆ ಅಷ್ಟಾಗಿ ಪ್ರಾಮುಖ್ಯತೆ ನೀಡದ ಅಂಶಗಳು ಇವರ ಕತೆಗಳ ವಸ್ತುಗಳಾಗಿವೆ. ಈ ಅರ್ಥದಲ್ಲಿ ಇವರ ಕತೆಗಳಿಗೆ ನಮ್ಮ ಅನುಭವ ವಲಯವನ್ನು ವಿಸ್ತರಿಸುವ ಶಕ್ತಿಯಿದೆ'[೨] ಎಂದಿದ್ದಾರೆ.

೨ ಪು.೩೩ ಹೆಣ್ಣು ಹೇಳಿದ ಕತೆಗಳು, ಬಗೆ, ಸಬಿಹಾ ಭೂಮಿ ಗೌಡ, ೨೦೦೧

ಈ ಸಂದರ್ಭದಲ್ಲಿಯೇ ಗ್ರಹಿಸಬಹುದಾದದ್ದು ಶ್ಯಾಮಲಾ ಮತ್ತು ಗೌರಮ್ಮರಂತೆ ಸ್ತ್ರೀಯಾತ್ಮಕತೆಗೆ ತೆರೆದುಕೊಂಡವರು ಉಳಿದವರಾಗಲಿಲ್ಲ ಎಂಬುದನ್ನು. ಅವರು ಪುರುಷ ಕೇಂದ್ರೀಯ ನಿಲುವಿನಿಂದ ಹೊರಬಂದೇ ಬರವಣಿಗೆಯಲ್ಲಿ ತೊಡಗಿದವರಾಗಿದ್ದರು. ಪುರುಷನ ಆಕ್ರಮಣತ್ವ, ಮೃಗೀಯತ್ವದ ವ್ಯಭಿಚಾರಗಳ ಧಾರ್ಷ್ಟ್ಯಗಳ ಪರಿಚಯವನ್ನು ಕೊಡುತ್ತಲೇ ಅದನ್ನು ತಡೆಯುವ ಪ್ರಯತ್ನ ಮಾಡುವ ಹೆಣ್ಣು ಸೋಲುವುದು, ಹಾದಿತಪ್ಪಿದ ಹೆಣ್ಣಿಗೆ ಬಹಿಷ್ಕಾರ ಹಾಕುವುದು, ಗಂಡಿಗೆ ಅದರ ಸೀಮಿತತೆಯೇ ಇಲ್ಲದಿರುವುದು ಇಲ್ಲಿ ಚರ್ಚಿತವಾಗದೇ ಉಳಿದಿರುವುದರ ಕುರಿತು ಶಾಂತಾದೇವಿ ಮಾಳವಾಡರಿಗೆ, ಗೀತಾ ಕುಲಕರ್ಣಿಯವರಿಗೆ ಬಹುಮುಖ್ಯವಾಗಿ ಕಾಡುತ್ತದೆ.

ಸಬಿಹಾ ಅವರು ಗುರುತಿಸಿರುವಂತೆಯೇ ನವೋದಯ ಕಾಲದ ಕತೆಗಾರರನ್ನು ಕಾಡಿದ ಸಮಸ್ಯೆಗಳೇ ಇಲ್ಲಿನ ಕತೆಗಾರ್ತಿಯರನ್ನು ಕಾಡಿವೆ. ಕತೆಗಾರರು ಅದನ್ನು ಅಭಿವ್ಯಕ್ತಿಸಿದ ರೀತಿಗಿಂತ ಕೊಂಚ ಭಿನ್ನವಾಗಿ ಅದರ ಮೂಲ ಕೆದಕಿ ಪ್ರತಿನಿಧಿಸ ಹೊರಟದ್ದು ಅವರ ವಿಶೇಷತೆಯಾಗಿದೆ. ಅಲ್ಲಿ ಅವರ ಅಸ್ತಿತ್ವದ ಶೋಧನೆಯ ತೊಡಗುವಿಕೆಯ ಛಾಯೆಯನ್ನು ಕಾಣುತ್ತೇವೆ. ಅದುವೇ ಸಮಸ್ಯೆಯನ್ನು ಕೆದಕಿ, ಪರಿಹಾರ ಸೂಚಿಸುವ ನಿಟ್ಟಿನಲ್ಲಿ ಮುಖಮಾಡುವುದಕ್ಕೆ ಸಾಧ್ಯವಾಯಿತು. ಗಂಡು ಹೆಣ್ಣಾಗಿ ಹೆಣ್ಣನ್ನು ಕಾಣುವುದಕ್ಕಿಂತ ಭಿನ್ನವಾಗಿ ಹೆಣ್ಣೇ ಹೆಣ್ಣಿನ ಅಂತರಂಗ ಶೋಧಿಸುವ ಪ್ರಯತ್ನ ವನ್ನು ಅವರು ಮಾಡಿದ್ದಾರೆ. ಆದರೆ ಕತೆ ರಚನೆಯಲ್ಲಿ ಈ ರೀತಿಯ ಒಡೆಯುವಿಕೆಯ ವಿಶ್ಲೇಷಣೆ ಅನಗತ್ಯ ಅನ್ನಿಸುತ್ತದೆ. ನಿಜವಾದ ಬಹರಗಾರನ ಸಂವೇದನೆಯ ಹಿಂದೆ ಮಾನವೀಯ ಪರ ಚಿಂತನೆ, ತೀರ್ಮಾನಗಳು ಜನ್ಮಿಸುತ್ತವೆ. ಅಲ್ಲಿ ಗಂಡು ಹೆಣ್ಣು ಎಂಬ ಭೇದ ಇರುವುದಿಲ್ಲ ಎನ್ನಬಹುದಾದರೂ ತನ್ನ ಅನುಭವದ ನೆಲೆಯಲ್ಲಿ ಬಿಚ್ಚಿಡುವ ಘಟನೆ, ವಿವರಗಳು ತನ್ನದೇ ಆದ ಅನುಭವಕ್ಕೆ ಹತ್ತಿರವಾಗಿಸಿ ಬರೆಯುವುದಾಗಿದೆ. ಆದರೆ ಸಂವೇದನೆಯ ನೆಲೆಗಟ್ಟನ್ನು ಪುರುಷ- ಸ್ತ್ರೀ ಎಂದು ಒಡೆಯುವುದು ಬೇಕಾಗಿಲ್ಲ. ಅಲ್ಲಿನ ಹೆಣ್ಣು ಅದೇ ಪುರುಷನನ್ನು ಪರಿಚಯಿಸುವ ರೀತಿಯನ್ನು ಮಾಸ್ತಿಯವರು ಅಷ್ಟೇ ಶಕ್ತಿಯುತವಾಗಿ ತೆರೆದಿಡುತ್ತಾರೆ. ಹೆಣ್ಣಿನ ನೋವು ಯಾತನೆ ಅರ್ಥೈಸುವಲ್ಲಿ ಮಾಸ್ತಿ ಹೆಣ್ಣೇ ಆಗಿ ಬಿಡುತ್ತಾರೆ. ಆದರೆ ನೋವನ್ನು ಅನುಭವಿಸುವ ಸ್ತ್ರೀಯರು ಪ್ರತ್ಯುತ್ತರ ಕೊಡುವುದಕ್ಕೆ ತೆಗೆದುಕೊಳ್ಳುವ ತೀರ್ಮಾನಕ್ಕೆ ಕೊನೇವರೆಗೆ ಕಾಯುವ ತಾಳ್ಮೆ ವಹಿಸುವುದು ಬದುಕಿನ ನೆಲೆಯಿಂದ ಉತ್ತಮವೇ. ಎಲ್ಲ ಕಷ್ಟಗಳನ್ನು ಸಹಿಸಿಯೂ ತಮಗೆ ಸಹ್ಯವಾಗದೇ ಹೋದಾಗಲೇ ಸ್ಫೋಟಿಸುವುದು ಹೆಚ್ಚು ಸಮ್ಮತವಾಗುತ್ತದೆ. ಅದೇ ಸ್ಫೋಟಗುಣ ಹೆಣ್ಣೇ ಬರೆಯುವ ಕತೆಗಳಲ್ಲಿಯೂ ಪ್ರತಿನಿಧೀಕರಣಗೊಂಡಿಗೆ. ಅಲ್ಲಿ ಹೆಚ್ಚು ಕಾತರವಿದೆ, ಉದ್ದೇಶವಿದೆ, ನಿಲುವಿದೆ, ಆಕ್ರೋಶವಿದೆ, ಹಟವಿದೆ. ಆದರೆ ಮಾಸ್ತಿ ಅಂಥ ಸಂದರ್ಭಗಳನ್ನು ಸಂಯಮದಿಂದ ಅಭಿವ್ಯಕ್ತಿಸುತ್ತಾರೆ.

ಮಾಸ್ತಿ ಹಾಗೂ ನವೋದಯದ ಕತೆಗಾರ್ತಿಯರು ಭಿನ್ನವಾಗುವುದು ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವ ವಿಧಾನದಲ್ಲಿ, ಮಾಸ್ತಿಯನ್ನು ನವೋದಯದ ಸಂದರ್ಭ ತಟ್ಟಿದ ವೇಶ್ಯೆಯ ಬದುಕನ್ನೇ

ತೆಗೆದುಕೊಂಡರೆ ಶ್ಯಾಮಲಾ ಅವರು ಅವರನ್ನು ನೋಡಿದ ದೃಷ್ಟಿಯೇ ಭಿನ್ನವಾಗಿದೆ. ಮಾಸ್ತಿ ಅವರನ್ನು ಬದಲಾಗುವುದಕ್ಕೆ ಅವಕಾಶ ಕೊಡುವುದಿಲ್ಲ. ಹೊಸಬದುಕಿಗೆ ಒಪ್ಪಿಕೊಳ್ಳುವುದು ವೇಶ್ಯೆಯರಿಂದ ಸಾಧ್ಯವಾಗುವುದಿಲ್ಲ. ಒಂದು ಬದುಕಿಗೆ ಒಡ್ಡಿಕೊಂಡ ಅವರು ಅಲ್ಲಿಗೇ ಸೀಮಿತಗೊಳ್ಳುತ್ತಾರೆ. ಬದಲಾಗಬೇಕೆಂದು ತೋರಿದರೂ ಮನಃ ಪರಿವರ್ತನೆ ಮಾಡುವ ಶ್ರೀನಿವಾಸನಂಥವರೇ ಬಂದರೂ ವೃತ್ತಿ ಸೇವೆ ಬಯಸುವ ಗಂಡು ಬಂದಾಗ ತಕ್ಷಣವೇ ತನ್ನ ಬದಲಾವಣೆಯ ನಿರ್ಧಾರ ಬದಲಿಸಿ ಅಲ್ಲಿಗೆ ತೆರಳುವ ಚಿತ್ರಣ ನೀಡಿ ಅದು ಹಾಗೆಯೇ ಮುಂದುವರಿಸಿಕೊಂಡು ಹೋಗುವ ಪ್ರವೃತ್ತಿಯನ್ನು ಬಿಂಬಿಸುತ್ತಾರೆ. ಆದರೆ ಶ್ಯಾಮಲಾದೇವಿ ಅವರಿಗೆ ವೇಶ್ಯಾವಾಟಿಕೆಯಿಂದ ಹೊರಬಂದು ಇಷ್ಟವಾದವರೊಂದಿಗೆ ಬದುಕುವ ಸ್ವಾತಂತ್ರ್ಯ ಪಡೆದದ್ದನ್ನು ತನ್ನ ಶೋಷಣೆಯನ್ನು ಎದುರಿಸುವ ಪ್ರತಿಭಟಿಸುವ ಛಾತಿ ಇದ್ದುದನ್ನು ಕತೆಗಳಲ್ಲಿನ ಸ್ತ್ರೀಯರು ಪರಿಚಯಿಸುತ್ತಾರೆ. 'ನಡೆದುಬಂದ ಲಕ್ಷ್ಮೀ' ಕತೆಯನ್ನೇ ಈ ನಿಟ್ಟಿನಲ್ಲಿ ವಿಶ್ಲೇಷಿಸುವುದಾದರೆ ಅಲ್ಲಿ ವೇಶ್ಯೆಯಾದವಳು ಪುರುಷನದ್ದೇ ಆಲೋಚನೆಯ ಸೆಲೆಯನ್ನು ಅನುಸರಿಸಿ ಬಂದವಳಾಗಿದ್ದಾಳೆ.

ಕತೆಗಾರ್ತಿಯರ ಕತೆಯೊಳಗೆ ಬರುವ ಕೆಳವರ್ಗದ ಮಹಿಳೆಯರು, ಸ್ವತಂತ್ರರು. ತಲೆ ಎತ್ತಿ ನಡೆಯುವಷ್ಟು ಧೈರ್ಯವಂತೆಯರು. ದುಡಿಮೆಗೇ ತಮ್ಮನ್ನು ಒಡ್ಡಿಕೊಂಡು ಪುರುಷನಿಗೇ ಸವಾಲೆಸೆದು ಬದುಕುವ ಅವರು ಆರ್ಥಿಕ ಸಮಾನತೆಯನ್ನು ಸಾಧಿಸುವವರು. ಅಲ್ಲಿ ಅವರು ಒಂದು ಸಂಸ್ಕೃತಿಯನ್ನು ಕಟ್ಟುವಲ್ಲಿ ಉಳಿಸುವಲ್ಲಿ ಅವಳನ್ನು ಮುಖ್ಯವಾಗಿ ಬಳಸಿಕೊಂಡಿದ್ದಾರೆ. ಅಲ್ಲಿ ಆಕೆಯ ಪ್ರಾಮುಖ್ಯವನ್ನು ನಾನಾ ಹಂತಗಳಲ್ಲಿ ಅವಳ ಬದುಕಿನ ರೀತಿಯಿಂದಲೇ ಪ್ರತಿಪಾದಿಸುತ್ತ ಬಂದಿದ್ದಾರೆ. ಅಲ್ಲಿ ಮಾಸ್ತಿಗೆ ಅವರ ಸಮಸ್ಯೆ ಮುಖ್ಯವೇ ಆಗಲಿಲ್ಲ. ಬದುಕನ್ನು ಹೇಗೆ ಸಾಗಿಸಬೇಕು ಎಂಬುದೇ ಅವರ ಚಿಂತನೆಯಾಗಿತ್ತು. ಆ ನೆಲೆಯಲ್ಲಿ ಬದುಕಬೇಕಾದ ರೀತಿಯ ಕಡೆಗೆ ಒಲವು ತೋರಿಸಿ ಆ ನೆಲೆಯಲ್ಲಿ ಕತೆ ಹೆಣೆಯುತ್ತ ಬಂದಿದ್ದಾರೆ.

ಲೇಖಕಿಯರಿಗೆ ಹೆಣ್ಣಿನ ಬದುಕಿನ ಸಮಸ್ಯೆ ಕಾಡುತ್ತದೆ. ಪುರುಷನ ಯಜಮಾನಿಕೆಯ ಕುರಿತು ಜಾಗೃತಿ ಮೂಡಿಸುವುದು ಅವರಿಗೆ ಮುಖ್ಯವಾಯಿತು. ಕೆಳವರ್ಗದ ಹೆಣ್ಣು ಮಕ್ಕಳು ಮಧ್ಯಮ ವರ್ಗದವರ ಹಾಗೂ ವಿಧವೆಯರ ಕುರಿತಂತೆ ಅವರ ಸಮಸ್ಯೆಗಳಿಗೆ ಬದುಕಿನ ಬಗೆಗೆ ಅವರು ಕಾಳಜಿ ವಹಿಸಿದ್ದು ಕಂಡು ಬರುತ್ತದೆ. ಶ್ಯಾಮಲಾದೇವಿ ಅವರು 'ಹೂಬಿಸಿಲು' ಹಾಗೂ 'ಹೊಂಬಿಸಿಲು' ಎರಡೇ ಕಥಾ ಸಂಕಲನಗಳನ್ನು ಹೊರತಂದರೂ ಅಲ್ಲಿನ ಅವರ ಸಂವೇದನೆಯ ತೀವ್ರತೆಯನ್ನು ಅರಿತುಕೊಳ್ಳಬಹುದಾಗಿದೆ. ಅಲ್ಲಿ ಹೆಣ್ಣನ್ನು ಶೋಷಣೆಗಳಿಂದ ಮುಕ್ತವಾಗಿಸಬೇಕೆಂಬ ಛಲ, ಧ್ಯೇಯವಿದೆ. ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವಿದೆ. ಆ ಪ್ರಯತ್ನದ ಫಲವಾಗಿಯೇ ಅವರು ವ್ಯವಸ್ಥೆಯ ಕಟ್ಟುಪಾಡುಗಳನ್ನು ಮೀರಿ ತಮ್ಮತನ ಮೆರೆಯುವ ಮಹಿಳೆಯರನ್ನು ಪರಿಚಯಿಸುತ್ತಾರೆ. ಅವರು ಧೀರ, ದುಡಿಯುವ ಸ್ವಾತಂತ್ರ್ಯ ಕಂಡುಕೊಂಡಿರುವುದನ್ನು ಒಂದು ಆದರ್ಶವಾಗಿಯೇ

ಕಾಣಿಸುತ್ತಾರೆ. ಹಾಗೆ ನೋಡಿದರೆ ಅಲ್ಲಿ ಪರಿಚಿತವಾಗುವ ವೇಶ್ಯೆಯರು ಅದನ್ನೊಂದು ವೃತ್ತಿಯಾಗಿ ಸ್ವೀಕರಿಸಿ ತೆಪ್ಪಗಿರುವರು. ಅವರು ಮದುವೆ ಶಾಸ್ತ್ರಕ್ಕೆ ಕೂಡ ತಮ್ಮನ್ನು ಒಡ್ಡಿಕೊಳ್ಳುವಷ್ಟರ ಮಟ್ಟಿಗೆ ಮುಂದುವರಿಯುವವರಿದ್ದಾರೆ. ಆದರೆ ಬಲವಂತವಾಗಿ ಅಥವಾ ಅವರಿಗೆ ಅರಿವಾಗದಂತೆ ವೇಶ್ಯಾವಾಟಿಕೆಗೆ ತೊಡಗಿಸುವ ಸಂದರ್ಭದಲ್ಲಿ ಕಾಣುತ್ತೇವೆ. ಮುಖ್ಯವಾಗಿ ಶ್ಯಾಮಲಾ ಅವರ ಕತೆಗಳ ಸ್ತ್ರೀಯರು ಈ ನಿಟ್ಟಿನಲ್ಲಿ ಮುಖ್ಯವಾಗುತ್ತಾರೆ. 'ಕಂತಿಯ ದೇಶಾಂತರ' ಕತೆಯ ಕಂತಿ ಕುಡುಕ ಗಂಡನನ್ನು ಸಲಹುವ ಮತ್ತು ಕುಡಿತದ ಚಟಕ್ಕೆ ಪ್ರತಿಭಟನೆ ಎಂಬಂತೆ ಅವನನ್ನು ತೊರೆದು ಊರು ಬಿಟ್ಟೇ ಹೋಗುತ್ತಾಳೆ. ಅದು ಆಕೆಯ ಎದೆಗಾರಿಯಿಂದ ಸಾಧ್ಯವಾದದ್ದಾಗಿದೆ. ಅಂತೆಯೇ ಮುಂದೆ ತನ್ನ ಆರ್ಥಿಕ ಸಬಲೀಕರಣವನ್ನು ತಂದುಕೊಳ್ಳುತ್ತಾಳೆ. ಬಳಿಕ ಇನ್ನೊಬ್ಬನೊಂದಿಗೆ 'ಉಡಿಕೆ' ಮಾಡಿಸಿಕೊಂಡು ಸಂಸಾರ ಹೂಡುತ್ತಾಳೆ. ಇದು ಸಮಾಜ ಹೆಣ್ಣಿಗೆ ಹಾಕಿಕೊಟ್ಟ ಪರಿಧಿಯನ್ನು ಮುರಿದದ್ದಾಗಿದೆ. ಆಕೆ ಕೊಡುವ ಪ್ರತಿಕ್ರಿಯೆಯು ವ್ಯವಸ್ಥೆಗೆ ಹಾಕಿದ ತಿರುಗುಬಾಣವಾಗಿದೆ. ಆಕೆಯ ಧೈರ್ಯದಿಂದಾಗಿಯೂ ಮುಂದೆ ಆಕೆಯ ನಡವಳಿಕೆ ಪ್ರಶ್ನಿತವಾಗುವುದಿಲ್ಲ. ಅದಕ್ಕಿಂತಲೂ ಆಚೆಗೆ ಆಕೆ ತೆಗೆದುಕೊಂಡ ತೀರ್ಮಾನ ಆಕೆ ಕೆಳವರ್ಗದವಳಾದುದರಿಂದ ಅಷ್ಟಾಗಿ ಅಚ್ಚರಿ ಮೂಡಿಸುವುದಿಲ್ಲ. ಅದು ಅಲ್ಲಿಗೆ ಸಹಜ ಎಂಬಂತೆ ಮಾನ್ಯವಾಗಿ ಬಿಡುತ್ತದೆ. ಮಾಸ್ತಿಯವರ ಕತೆಗಳಲ್ಲಿ ಈ ತೆರನಾದ ಸ್ತ್ರೀಯರು ಕಾಣಿಸಿಕೊಳ್ಳುವುದಿಲ್ಲ. ಅಲ್ಲಿ ಬರುವ ವೇಶ್ಯೆ ಅಲ್ಲಿಯೇ ಉಳಿಯುವಂತೆ ಮಾಡುವುದನ್ನು 'ಬೀದಿಯಲ್ಲಿ ಹೋಗುವ ನಾರಿ' ಕತೆಯ ನಾಗರತ್ನಸಾನಿ ಪರಿಚಯಿಸುತ್ತಾಳೆ. ಅಂದರೆ ಮಾಸ್ತಿ ಅವರು ಆ ಪದ್ಧತಿಯಿಂದ ಆಕೆ ಬದಲಾಗುವುದನ್ನು ಇಷ್ಟಪಡದೆ ಹಾಗೇ ಬಿಟ್ಟುಬಿಡುತ್ತಾರೆ. ಆದರೆ ಅದೂ ಅವರ ಬದುಕಿನ, ತೀರ್ಮಾನದ ಒಂದು ಮುಖ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಂದರೆ ಅವಳೇ ಆ ಬದುಕಿಗೆ ಒಗ್ಗಿಹೋಗಿರುವುದರಿಂದ ಆಕೆಗೆ ಸಂಬಂಧಗಳ ಪರಿಧಿ ಅರ್ಥವಾಗುವುದಿಲ್ಲ. ಆ ಸಂಬಂಧ ಪರಿಚಯಿಸುವವರು ಅವಳಿಗೆ 'ಹುಚ್ಚ'ರಾಗಿ ಕಾಣುತ್ತಾರೆ.

ಗೃಹಿಣಿಯಂತೆ ಬಾಳಿದ, ಮೈಮುರಿದು ದುಡಿದು ಹೊಟ್ಟೆಹೊರೆದು ಕೊಳ್ಳುವ ಪ್ರವೃತ್ತಿಯ ಕುರಿತ ವಿವರದಲ್ಲಿ ದ್ಯಾಂವಕ್ಕ ಸ್ವತಂತ್ರ ವ್ಯಕ್ತಿತ್ವದ ಪರಿಚಯವಿದೆ. ಅಲ್ಲಿನ ದ್ಯಾಂವಕ್ಕ ಓರ್ವ ವೇಶ್ಯೆಯಾದರೂ ಗಂಡನೊಂದಿಗೆ ಬದುಕಿ 'ಹೆಂಡತಿ'ಎಂಬ ಪಟ್ಟವನ್ನು ಕೂಡ ಪಡೆದು ಬದುಕುವ ರೀತಿಯನ್ನು ಪ್ರತಿಭಟನೆಯಾಗಿಯೇ ಕಾಣಬಹುದಾಗಿದೆ. ಹಾಗೆ ನೋಡಿದರೆ ಈ ಪ್ರತಿಭಟನೆ ಸ್ವೀಕೃತವಾದ ಭಾರತೀಯ ಪರಂಪರೆಯ ವೈವಾಹಿಕ ಸಂಬಂಧದ ಔನ್ನತ್ಯ ಹಾಗೂ ಆ ಕುರಿತ ಗೌರವವನ್ನು ಮರಳಿ ಪ್ರತಿಷ್ಠಾಪಿಸುವುದಾಗಿದೆ. ಅಲ್ಲಿ ಮತ್ತೆ ಪರಾಧೀನತೆ ಇದೆ. ಆದರೆ ಅದೇ ದಾಂಪತ್ಯ ಗಂಡನಿಂದ ತಳ್ಳಲ್ಪಟ್ಟ, ಹಿಂಸೆಗೆ ಒಳಗಾದಾಗ ಅವನನ್ನು ಧಿಕ್ಕರಿಸುವ ರೀತಿ ಅವಳ ಧೀರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗುತ್ತದೆ. 'ಬೇಡ'ರ ಕುಲದ ಹೆಣ್ಣುಮಗಳಾಗಿ ಹುಟ್ಟಿದ ಆಕೆ ಅವನನ್ನು ತಿರಸ್ಕರಿಸುವ ರೀತಿಯಲ್ಲಿಯೇ ತನ್ನತನವನ್ನು ಉಳಿಸಿಕೊಳ್ಳುವುದನ್ನು ಕಾಣುತ್ತೇವೆ. 'ರಟ್ಯಾನ ಬಲಾ ಇರೋತನಕ ಕೈಯಾಗ ನಾ ರೊಕ್ಕ

ಮಾಡಿಕೊಂಡ ಮಗ್ಗ ಆಟ ಇದ್ಯೇನ ಕಲಿಸಿ ಮುಪ್ಪಿನಾಗ ಸುಕಾ ಉಣ್ಣೇನಿ' ಎಂದು ಪಣತೊಡುವ, ಎದೆಗಾರಿಕೆಯಿಂದ ನಿರ್ಧಾರ ಮಾಡುವ ಆಕೆಯ ದುಡಿಮೆ ಆರ್ಥಿಕ ಗಟ್ಟಿತನವನ್ನು ಪ್ರತಿಪಾದಿಸುತ್ತದೆ. ಅದುವೇ ಹೆಣ್ಣಿಗೆ ಕೊಡುವ ಧೈರ್ಯ ಆತ್ಮವಿಶ್ವಾಸ ಹಾಗೂ ಗಂಡಿಗೆ ಬಗ್ಗಿಯೇ ಇರಬೇಕಾದ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಆರ್ಥಿಕ ಸಬಲೀಕರಣ ಹೆಣ್ಣನ್ನು ಓರ್ವ ವ್ಯಕ್ತಿಯಾಗಿ ರೂಪತಳೆಯಬಹುದಾದ ಸಂದರ್ಭದಲ್ಲಿ ಗಂಡಿನ ಅಹಮಿಕೆಗೆ ಕೊರಳೊಡ್ಡಬೇಕಾಗಿಲ್ಲ ಎಂಬುದನ್ನು ನಡುವೆಯೇ 'ಗರತಿ'ಯಾಗಿಯೇ ಬಾಳುತ್ತೇನೆಂದು ಪ್ರತಿಜ್ಞೆತೊಡುವಲ್ಲಿ 'ಗರತಿ'ಯ ಕುರಿತ ಭಾರತೀಯ ಪರಿಕಲ್ಪನೆ ಗೌರವಯುತ ಭಾವನೆಯನ್ನು ಮರಳಿ ಸ್ಥಾಪಿಸುವ ಸುಪ್ತ ಪ್ರಜ್ಞೆಯೊಂದು ಇಲ್ಲಿ ತೆರೆದುಕೊಳ್ಳುತ್ತದೆ. ವೇಶ್ಯೆಯೂ 'ಗರತಿ'ಯಾಗಿ ಬಾಳುವುದಕ್ಕೆ ಸಾಧ್ಯ ಎಂಬುವುದನ್ನು ತೋರಿಸಿಕೊಡುವುದು ಇಲ್ಲಿನ ಉದ್ದೇಶವಾಗಿದ್ದರೂ ಭಾರತೀಯ ವೈದಿಕ ಪರಂಪರೆ ಸ್ಥಾಪಿಸಿದ ಪರಿಕಲ್ಪನೆಯನ್ನು ದೂರಮಾಡಲಾಗದಂತೆ ಕಾಳಜಿ ವಹಿಸಿದ್ದನ್ನು ಇಲ್ಲಿ ಚರ್ಚಿಸಬಹುದು. ಆಕೆಗೆ ಗಂಡನ ದಬ್ಬಾಳಿಕೆ ಪ್ರತಿಭಟಿಸಿ ಸ್ವತಂತ್ರ ದುಡಿಮೆಯಿಂದ ಬದುಕುವ ಅವಕಾಶವಿದೆ. ಆದರೆ ಬೇರೊಬ್ಬನೊಂದಿಗೆ ಬಾಳ್ವೆ ಮಾಡುವ ಅವಕಾಶ ಪಡೆದಿಲ್ಲ. ಆದರೆ ಕಂತಿಯ ದೇಶಾಂತರದ ಕಂತಿ ಕುಡುಕ ಗಂಡನನ್ನು ತೊರೆದು ಬೇರೊಬ್ಬನೊಂದಿಗೆ 'ಉಡಿಕೆ' ಮಾಡಿಕೊಳ್ಳುವ ಸ್ವಾತಂತ್ರ್ಯ ಪಡೆಯುವಂತೆ ಮಾಡುವುದು ಕೆಳವರ್ಗದವರಲ್ಲಿ ವಿಶೇಷವಾಗಿದ್ದ 'ಉಡಿಕೆ' ಪದ್ಧತಿಯನ್ನು ಪ್ರತಿನಿಧಿಸುವುದಾಗಿದೆ. ಜನಪದರ ಬದುಕಿನಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವ 'ಉಡಿಕೆ' ಪದ್ಧತಿ ಹೆಣ್ಣಿನ ಸ್ವಾತಂತ್ರ್ಯಕ್ಕೆ ಸಿಕ್ಕಿದ ಮಾನ್ಯತೆಯಾಗಿದೆ. ಅವಳ ಬದುಕಿನ ವಿಕಸನಕ್ಕೆ ಅದೊಂದು ವಿಶಿಷ್ಟವಾದ ಹಾದಿಯನ್ನು ಹಾಕಿಕೊಟ್ಟಿರುವುದು ಅಲ್ಲಿ ಕಂಡು ಬರುತ್ತದೆ.

ಶ್ಯಾಮಲಾರ 'ವಧುಪರೀಕ್ಷೆ' ಕತೆ ಮದುವೆ ಕುರಿತ ಡಾಂಭಿಕತೆಯನ್ನು ತೆರೆದಿಡುತ್ತದೆ. ಹೆಣ್ಣೊಬ್ಬಳು ಮದುವೆಗಾಗಿ ಸಿದ್ಧಳಾಗುವ, ಪರೀಕ್ಷೆಗಳಿಗೆ ಒಳಗಾಗುವ ವಿವರಗಳನ್ನು ಹೊತ್ತ ಪರಿಸ್ಥಿತಿಯ, ಆಕೆಯ ಬದುಕಿನ ಸಂದರ್ಭಗಳನ್ನು ತೆರೆದಿಡುತ್ತದೆ. ಜನಪದರು ಸಮಾಜದ ನಿಯಮಾವಳಿ ಮೀರಿ ನಡೆಯುತ್ತಾರಾದರೆ ಮಧ್ಯಮ ವರ್ಗದರು ಅದನ್ನು ನಿರ್ಲಕ್ಷಿಸಿ ಬದುಕಲು ಪ್ರಯತ್ನಿಸುತ್ತಾರೆ. ಅದನ್ನು ಶ್ಯಾಮಲಾದೇವಿ ಹಿಡಿದಿಡುತ್ತಾರೆ. ಅದೇ ನೆಲೆಯಲ್ಲಿ ನವೋದಯದ ಕತೆಗಾರ್ತಿಯರಲ್ಲಿ 'ಕೊಡಗಿನ ಗೌರಮ್ಮ' ಮುಖ್ಯರಾಗುತ್ತಾರೆ. ಅವರ ಕತೆಗಳಲ್ಲಿ ಹೆಣ್ಣೊಬ್ಬಳು ಪ್ರತಿಭಟಿಸುವ ಧೈರ್ಯ ತೋರುವುದನ್ನು ಪ್ರತಿನಿಧಿಸುತ್ತಾಳೆ. ಒಂದು ಸಮಾಜದ ಕಟ್ಟುಕಟ್ಟಳೆಗಳನ್ನು ಪ್ರಶ್ನಿಸುವ ಎದೆಗಾರಿಕೆಯ ಹೆಣ್ಣುಮಕ್ಕಳನ್ನು ಸಿದ್ಧಪಡಿಸುವ ಮೂಲಕ ಅಂಥ ವಾತಾವರಣದ ಹುಟ್ಟಿಗೆ ಪ್ರೇರಣೆ ನೀಡುವವರಾಗುತ್ತಾರೆ. ಅವರ 'ಕರುಳ ಕತ್ತರಿ' ಯಂಥ ಪರಿಣಾಮಕಾರಿ ಕತೆಯಲ್ಲಿ ಹೆಣ್ಣಿನ ಶೋಷಣೆಯ ಭಿನ್ನನೆಲೆಯೊಂದು ತೆರೆದುಕೊಳ್ಳುತ್ತದೆ. ಹೆತ್ತವರಿಂದಲೇ ನೋವುಣ್ಣುವ ನಾಯಕಿ ಶ್ಯಾಮಲಾ ತಂದೆಯಿಂದಲೇ ವೇಶ್ಯಾವಾಟಿಕೆಗೆ ತಳ್ಳಿಸಿಕೊಳ್ಳುವುದು ಅದಕ್ಕೆ ಸಾಕ್ಷಿ ಹೇಳುತ್ತದೆ. ತವರಿನ ಕ್ರೌರ್ಯ, ಶೋಷಣೆಯ

ನಡುವೆಯೂ ವೇಶ್ಯಾವಾಟಿಕೆಯಿಂದ ಹೊರಬಂದು ಸ್ವಂತ ಮನೆ ಮಾಡಿ ಬದುಕಿ ಗೌರವ ಪಡೆದುಕೊಳ್ಳುವ ಮಟ್ಟಿಗೆ ಆಕೆ ಗೆಲ್ಲುತ್ತಾಳೆ. ಗೌರಮ್ಮ ಗಂಡು ಹೆಣ್ಣಿನ ಸಂಬಂಧದ ಕುರಿತು ಚಿಂತಿಸುವ ಹಾಗೂ ಕಟ್ಟನಿಟ್ಟಿನ ಕಟ್ಟಳೆಗಳನ್ನು ಮೀರುವ ನೆಲೆಯಲ್ಲಿ ಧೈರ್ಯ ತೋರುತ್ತಾರೆ. ಗೌರಮ್ಮ ಅವರಿಗಿದ್ದ ಇಂಗ್ಲಿಷ್ ಓದಿನ ಜ್ಞಾನ, ಕಥಾ ಪ್ರಪಂಚದ ಕುರಿತ ತಿಳಿವಳಿಕೆಗಳ ಹಿನ್ನಲೆಯಲ್ಲಿ, ಆಧುನಿಕ ನೆಲೆಗಟ್ಟಿನಲ್ಲಿ ವೈಚಾರಿಕತೆ, ಸೈದ್ಧಾಂತಿಕ ನಿಲುವುಗಳ ಕುರಿತ ಘೋಷಣೆಗಳು ಸಹಜವಾಗಿಯೇ ಬಂದಿವೆ. ಅಲ್ಲಿ ಅಸಮಾನತೆ ಕುರಿತ ಸಿಟ್ಟು, ಬೇಸರವಿದೆ.

ಆದರೆ ಸರಸ್ವತಿ ದೇವಿ ರಾಜವಾಡೆ ಅವರ ಕತೆಗಳಲ್ಲಿನ ಸ್ತ್ರೀಯರು ಯಾವುದೇ ಪ್ರತಿಭಟನೆಗೆ ಹೊರಡುವವರಲ್ಲ. ಮಾಸ್ತಿಯವರಿಗೆ ಹತ್ತಿರವಾಗಿ ಕತೆ ಬರೆಯುವ ರಾಜವಾಡೆ ಅವರಿಗೆ ಹೆಣ್ಣಿನ ಕಷ್ಟದ, ಗೋಳಿನ ಅರಿವಿದೆ. ಆದರೆ ಅದನ್ನು ಪರಿಚಯಿಸುವಲ್ಲಿ ಆ ಕುರಿತ ಸಂವೇದನೆ ಇರುವುದನ್ನು ಗುರುತಿಸಬಹುದಾಗಿದೆ. ಹೆಣ್ಣಿನ ಕುರಿತು ಸಮಾಜ ಇಟ್ಟಿರುವ ದೃಷ್ಟಿ, ಅಸಮಾನತೆಗಳು ಅವರನ್ನು ತಟ್ಟಿವೆ. ಇದರ ಪರಿಣಾಮವಾಗಿ ಮಧ್ಯಮ ವರ್ಗದ ಹೆಣ್ಣಿನ ಎಲ್ಲ ಸಮಸ್ಯೆ, ನೋವುಗಳನ್ನು ಪರಿಚಯಿಸುವ ಬಹುಮುಖ್ಯ ಕತೆ 'ಆಹುತಿ'. ಅದು ಬಂಜೆ ಹೆಣ್ಣೊಬ್ಬಳ ವ್ಯಥೆ, ಆಕೆಯನ್ನು ಹಿಂಸಿಸುವ ಘಟನೆ ನಡೆಯುವುದು ಬಂಜೆಯ ಕುರಿತ ಸಂದರ್ಭದಲ್ಲಿ. ಅಲ್ಲಿನ ನಾಯಕಿ ಗಂಡನನ್ನು ಅತ್ಯಂತ ಗೌರವದಿಂದಲೇ ಕಾಣುತ್ತಾಳೆ. ಇಲ್ಲಿ ಗಂಡನಿಗೆ ಕೊಡುವ ಗೌರವವನ್ನು ಒಪ್ಪಿಕೊಂಡುದರ ಕುರುಹು. ಇದು ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿರುವುದೂ ಆಗುತ್ತದೆ. ಮಾಸ್ತಿ ಪ್ರತಿಷ್ಠಾಪಿಸುವ ಗಂಡ-ಹೆಂಡಿರ ಸಂಬಂಧ, ಸಂತಾನ ಮುಂದುವರಿಕೆಯ ಪ್ರಾಶಸ್ತ್ಯ ಇಲ್ಲಿ ಪ್ರೇರಣೆಯಾಗಿದೆ. ಅಲ್ಲಿ ಆಕೆ ಅದನ್ನು ಪ್ರಶ್ನಿಸುವುದೂ ಕೂಡ ಇಲ್ಲ. ಈ ಒಪ್ಪಿಗೆಯಲ್ಲಿ ವ್ಯವಸ್ಥೆಯನ್ನು ಇದ್ದಂತೆಯೇ ಒಪ್ಪಿಕೊಳ್ಳುವುದನ್ನು ಇಲ್ಲಿ ಕಾಣುತ್ತೇವೆ. ಅಂದರೆ ಮಧ್ಯಮವರ್ಗದ ಹೆಣ್ಣು ವ್ಯವಸ್ಥೆಯನ್ನು ಅಷ್ಟಾಗಿ ಮೀರಲಾಗದ ಮತ್ತು ಅದನ್ನು ಇರುವಂತೆಯೇ ಒಪ್ಪಿಕೊಳ್ಳಬೇಕಾದ ಸಂದರ್ಭದ ವಾಸ್ತವವನ್ನು ಮುಂದಿರಿಸುವ ಪ್ರಯತ್ನ ಕೂಡ ಅಲ್ಲಿದೆ.

ನವೋದಯದ ಬಹುಮುಖ್ಯ ಕತೆಗಾರರನ್ನು ಕಾಡಿರುವುದು ವಿಧವೆಯರ ಸಮಸ್ಯೆ. ಅದು ಆ ಕಾಲಘಟ್ಟದ ಬಹುಮುಖ್ಯ ಸಮಸ್ಯೆಯಾಗಿ ಕಾಡುತ್ತಿತ್ತು. ಕೆರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ, ಗುಲ್ವಾಡಿ ವೆಂಕಟರಾಯರಿಗೆ ಕಾಡಿದ ವಿಧವಾ ಸಮಸ್ಯೆ ಕತೆಗಾರರ ಕತೆಗಳಿಗೆ ವಸ್ತುವಾಗುತ್ತ ಬಂದಿದೆ. ಅದೇ ನೆಲೆಯಲ್ಲಿ ಕತೆಗಾರ್ತಿಯರೂ ಕೂಡ ಆ ಕಡೆಗೆ ಸ್ಪಂದಿಸ ತೊಡಗಿದರು. ವಿಧವೆಯರ ದುರಂತ ಬಾಳು ಕೊನೆಯಾಗಬೇಕು ಎಂಬುದೇ ಅವರ ಧ್ಯೇಯವಾಗಿದೆ. ವಿಧವೆಯೊಬ್ಬಳ ಆತ್ಮಾಹುತಿಯ ವೈಭವೀಕರಣ, ವಿರೂಪಗೊಳಿಸುವುದು. ಬದುಕೇ ದುರ್ಭರ ಎನ್ನಿಸುವಂತೆ ಮಾಡಿಸಿ ಬಿಡುವ ಕ್ರೌರ್ಯದ ಪ್ರತಿನಿಧಿಯಾಗಿ ಕೊಡಗಿನ ಗೌರಮ್ಮ ಅವರು ಕತೆಗಳನ್ನು ಬರೆದಿದ್ದಾರೆ. ಅವರಲ್ಲಿ ಬಹುಮುಖ್ಯವಾದದ್ದು 'ವಾಣಿಯ ಸಮಸ್ಯೆ' ಕತೆ. ಅಲ್ಲಿ ಆಧುನಿಕ ವಿಚಾರಧಾರೆಯಿದೆ.

ವಿಧವೆಯಾದರೂ ಇಂದು ಕೂಡ ಸ್ವತಂತ್ರ ಬದುಕನ್ನು ಕಂಡುಕೊಳ್ಳುವವಳಾಗಿದ್ದಾಳೆ. ಯಾವುದರ ಬೆಲೆಯನ್ನು ಅರಿಯದ ಪ್ರಾಣಿಗೆ ಎಲ್ಲವನ್ನು ಕೊಟ್ಟ ದೇವರು ತನ್ನ ಜೀವನವನ್ನೇಕೆ ಅಂಧಕಾರಮಯವನ್ನಾಗಿ ಮಾಡಿದ ? ಎಂದು ಪ್ರಶ್ನಿಸುತ್ತ ವೃದ್ಧಿಸುವುದೇ ಅವಳ ಪಾಲಿಗೆ ಬಂದೆರಗಿದ ಸತ್ಯವಾಗಿತ್ತು. ಎಲ್ಲ ಮನರಂಜನೆಗಳನ್ನು ಕೂಡ ಬದಿಗೊತ್ತಿ ಮನೆಯಲ್ಲಿ ಕೆಲಸ ಕಳೆಯುವ ಇಂದು ತನ್ನ ನೋವನ್ನು ಒಳಗೊಳಗೆ ನುಂಗುತ್ತ ವ್ಯಥಿಸುತ್ತಾ ಬರುವವಳಾಗಿದ್ದಾಳೆ. ತವರ್ಮನೆ ಬಿಟ್ಟಿದ್ದ ಇಂದು ಮರಳಿ ಅಲ್ಲಿಗೆ ಬರುವುದು ಆಕೆಯ ಸಂದರ್ಭಕ್ಕೆ ಅನಿವಾರ್ಯವೂ ಆಗಿತ್ತು. ಆ ಅನಿವಾರ್ಯತೆ ಪ್ರಾಪ್ತವಾದದ್ದು ಕೇವಲ ವಿಧವೆ ಎಂಬ ಒಂದೇ ಒಂದು ಕಾರಣಕ್ಕೆ. ಅಲ್ಲಿಯೂ ಮನಸ್ಸಿನ ನೋವಿನ ಹತೋಟಿಯನ್ನುಕೂಡ ಆಕೆ ಕಳಕೊಳ್ಳಬೇಕಾದ ಸಂದರ್ಭ ಅವಳ ಪಾಲಿಗೆ ಬಂದೊದಗಿದೆ. ಆಕೆಯ ಮನೋಗತವೇ ಅವಳ ಸ್ಥಿತಿಯನ್ನು ಮುಂದಿಡುತ್ತದೆ. ಹಗಲುಗನಸು ಕಾಣುವ ಮಟ್ಟಕ್ಕೆ ಹೋಗಿ ಕಣ್ಣೀರು ಹಾಕುವ ಆಕೆ ಸಮಾಜದ ನಿಲುವಿಗೆ ಕೈಗನ್ನಡಿಯಾಗುತ್ತಾಳೆ. ಬದುಕಿನ ನಿರ್ಧಾರಗಳು ಸೋಲುವ ಸನ್ನಿವೇಶದ ಮೂಲಕ ವ್ಯವಸ್ಥೆಯನ್ನು ಪ್ರತಿಬಿಂಬಿಸಲಾಗಿದೆ. ಅಂತೆಯೇ 'ಅವಳ ಉದ್ಧಾರ' ತೆರೆದುಕೊಳ್ಳುವುದನ್ನು ಕತೆಯಲ್ಲಿ ನೋಡಬಹುದಾಗಿದೆ. ಅಲ್ಲಿಯೂ ವಿಧವಾ ಸಮಸ್ಯೆ ತೆರೆದುಕೊಂಡಿದೆ. ಆದರೆ ಅದೇ ಆಶ್ರಮದ ಕುರಿತಂತೆ ಕತೆಯ ಆರಂಭದಲ್ಲಿ 'ಭಗಿನಿ ಸಂಕೋಚಪಡಬೇಡ, ಬಾ ಒಳಗೆ ಬಾ ನಿನ್ನ ಮನೆಯೇ ಎಂದು ತಿಳಿ. ಸಮಾಜರೂಪಿ ಕರಾಳ ರಾಕ್ಷಸನಿಂದ ನಿಮ್ಮಂಥವರನ್ನು ರಕ್ಷಿಸಲೆಂದೇ ಈ ಆಶ್ರಮದ ಸ್ಥಾಪನೆಯಾಗಿರುತ್ತದೆ' ಎಂದು ಹೇಳುವ ಮೂಲಕ ವಿಧವೆಯರನ್ನು ಕರೆಯಿಸಿಕೊಳ್ಳುವ ಆಶ್ರಮದ ಮುಖವಾಡ ಗೋವಿನದ್ದು. ಅಂತರಾಳ ಮಾತ್ರ ವ್ಯಾಘ್ರನದ್ದಾಗಿದೆ. ವ್ಯವಸ್ಥಾಪಕರು ಆಕೆಯ ಬಲಾತ್ಕಾರದ ಬಸುರನ್ನು ತಿಳಿದು ಮಂದಿರದಲ್ಲಿ ತಂಗಲು ವ್ಯವಸ್ಥೆ ಮಾಡಿಸುತ್ತಾರೆ. ಅದೇ ಆಶ್ರಮಕ್ಕೆ ಆಗಮಿಸುವ ಮುದುಕನಿಗೆ ದುಡ್ಡಿನ ಆಸೆಗೆ ಮರುಳಾಗಿ ಇದೇ ಆಗ ತಾನೇ ಸೇರಿಕೊಂಡಿದ್ದ ವಿಧವೆಯನ್ನೇ ಒತ್ತಾಯಪೂರ್ವಕವಾಗಿ ವಿವಾಹ ಮಾಡಿಕೊಡುವ ಪ್ರಯತ್ನ ಮಾಡಲಾಗುತ್ತದೆ. ಮಕ್ಕಳಾಗದೇ ಹೋದುದಕ್ಕೆ ಗೊಡ್ಡು ಎಂದು ಜರೆದ ಮಂದಿ ತಾನು ಈ ಮೊದಲು ಹೆತ್ತಿರುವ ಸತ್ಯವನ್ನು ರಾಚಿ ತಾನು ಗೊಡ್ಡು ಅಲ್ಲ ಎಂಬುದನ್ನು ಸಾಬೀತು ಪಡಿಸಿದ ರೀತಿ ಆಕೆಯ ಧೀರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಅಲ್ಲಿಂದ ಹೊರಬಂದ ಆಕೆ ಮತ್ತೆ ಸಿಕ್ಕಿಬೀಳುವುದು ವೇಶ್ಯಾವಾಟಿಕೆಯ ದಂಧೆ ನಡೆಸುವ ಕೇಂದ್ರದಲ್ಲಿ. ಒಂದೆಡೆಯಿಂದ ತಪ್ಪಿಸಿಕೊಂಡ ಹೆಣ್ಣು ಮತ್ತೊಂದೆಡೆಯಿಂದ ಕಂದಕಕ್ಕೆ ಬೀಳುವಂಥಾದ ವಾಸ್ತವ ಮನೆಯ ದಿಕ್ಕಿಲ್ಲದ ಹೆಣ್ಣಿನ ಬಾಳಿನಗೋಳನ್ನು ಪರಿಚಯಿಸುವುದು ಲೇಖಕಿಯ ಉದ್ದೇಶವಾಗಿದೆ. ಜೊತೆಗೆ ವಿಧವೆಯರ ಕುರಿತು ಕಾಳಜಿ ವಹಿಸುವ ಸಂಘ ಸಂಸ್ಥೆಗಳ ಮೋಸಗಾರಿಕೆಯ ಪ್ರಪಂಚವನ್ನು ಕೂಡ ಆಕೆ ಆ ಮೂಲಕ ತೋರಿಸಿಕೊಟ್ಟಿದ್ದಾರೆ. ವ್ಯವಸ್ಥೆಯೊಂದಕ್ಕೆ ಒತ್ತುಕೊಡುವ ಧೈರ್ಯ ಮಾಡಿದ್ದು ಆಕೆ ಮತ್ತೆ ಸಮಸ್ಯೆಯ ಸುಳಿಗೆ ಸಿಲುಕುವ ವ್ಯಕ್ತಿತ್ವ, ಬದುಕು ಕಳೆದು ಕೊಳ್ಳುವಂತಾದದ್ದು ಸ್ಪಷ್ಟವಾಗುತ್ತದೆ.

ವಿಧವಾಶ್ರಮದ ಮೋಸಗಾರಿಕೆಯನ್ನು ಬಯಲಿಗೆಳೆಯುವುದೇ ಕತೆಯ ಉದ್ದೇಶವಾಗಿದೆ. ಅದೇ ನೆಲೆಯಲ್ಲಿ ವೈಧವ್ಯದ ಬಾಳಿನ ಭೀಕರತೆಯನ್ನು ಪರಿಚಯಿಸುವ 'ವಿಧವೆಯ ಬಾಳು' ಕತೆಯಲ್ಲಿ, ಲೀಲಾಬಾಯಿ ಕಾಮತ್ ಕಿರುಕುಳ ತಪ್ಪಿಸಿಕೊಳ್ಳಲು ಹೋಗುವ ವಿಧವೆ ಗುಲಾಬಿಯನ್ನು ಪರಿಚಯಿಸುತ್ತಾರೆ. ಅಲ್ಲಿ ಗುಲಾಬಿ ಸಮಾಜ ಕೊಡುವ ಹಿಂಸೆಯನ್ನು ಅನುಭವಿಸುತ್ತಿರುವುದನ್ನು ತೋರಿಸಿಕೊಡುತ್ತಾಳೆ. ಆಕೆಯ ಅಸಹಾಯಕತೆಯಿಂದಾಗಿ ಆಕೆ ಕ್ರೌರ್ಯದ ಪರಮಾವಧಿಯನ್ನು ಅನುಭವಿಸುತ್ತಾಳೆ. ಗಂಡಸಿನ ಅನ್ಯಾಯದ ಜಾಲಕ್ಕೆ ಬಲಿಯಾಗುವ ಗುಲಾಬಿ ಆ ಕಾಲದ ಮೋಸದ ಜಾಲದೊಳಗೆ ಸಿಲುಕಿ ನಲುಗಿದ ವಿಧವೆಯನ್ನು ಪರಿಚಯಿಸುವುದಾಗಿದೆ. ತರತಮತೆಯ ಬದುಕಿನಲ್ಲಿ ಸಿಕ್ಕಿದ ಹೆಣ್ಣು ತನ್ನದಲ್ಲದ ತಪ್ಪಿಗೂ ಶಿಕ್ಷೆ ಅನುಭವಿಸಬೇಕಾದ ಪರಿಸ್ಥಿತಿಯನ್ನು ಆಕೆ ಪ್ರತಿಭಟಿಸುತ್ತಾಳೆ.

ಗೌರಮ್ಮನವರ 'ಪುನರ್ವಿವಾಹ' ಕತೆ ಬಾಲವಿಧವೆಯ ಬದುಕನ್ನು ಪರಿಚಯಿಸುವ ಕತೆಯಾಗಿ ಪ್ರಾಧಾನ್ಯ ಪಡೆಯುತ್ತದೆ. ಬಾಲವಿಧವೆಯು ವಿವಾಹವಾದ ವಿಧುರನ ಶೋಷಣೆಗಳಿಗೆ ತೆಪ್ಪಗಿರುವುದಿಲ್ಲ. ತನ್ನ ವೈಧವ್ಯವನ್ನು ತಾತ್ಸಾರದಿಂದ ಕಾಣುವ ಅವನನ್ನು ವಿದುರನೆಂದು ನೆನಪಿಸಿ ತೆಪ್ಪಗಾಗುವಂತೆ ಮಾಡಿಸುವುದು ಆ ಸಂದರ್ಭದಲ್ಲಿ ಕಂಡು ಬಂದ ವಿದ್ಯಾಭ್ಯಾಸ ಹಾಗೂ ಕಾಲದ ಬದಲಾವಣೆಯನ್ನು ತಿಳಿಸುತ್ತದೆ. ಹೀಗೆ ತಿಳಿಸುವಲ್ಲಿ ಹೆಣ್ಣು ತನ್ನನ್ನು ತಾನು ಕೊಂಡೊಯ್ಯುವ ಊರ್ಧ್ವಮುಖತ್ವವನ್ನು ಮುಂದಿಡುವುದಾಗಿದೆ. ಇಲ್ಲಿ ತನ್ನ ವ್ಯಕ್ತಿತ್ವವನ್ನು ಪ್ರತಿಷ್ಠಾಪಿಸುವುದರ ಕಡೆ ಕತೆಗಾರ್ತಿಯರ ಸ್ತ್ರೀಯರು ತಮ್ಮನ್ನು ತೆರೆದುಕೊಂಡಿರುವುದು ಬಹುಮುಖ್ಯವಾಗುತ್ತದೆ. ಬಾಲ ವಿಧವೆಯ ಬಾಳಿನ ಪ್ರೀತಿ ಹಾಗೂ ಪ್ರತಿಭಟನೆಯ ಬೆಳವಣಿಗೆ ಇಲ್ಲಿ ಪ್ರಾಮುಖ್ಯ ಪಡೆಯುತ್ತದೆ. ಮಾಸ್ತಿಗೆ ಅದು ಎಲ್ಲೂ ಮುಖ್ಯವಾಗುವುದಿಲ್ಲ. ಪ್ರೀತಿ-ಗಂಡನನ್ನು ಬಿಟ್ಟಿರಲಾಗದ ಹಳಹಳಿಕೆ, ಸಮಾಜದ ಕುರಿತ ಭಯದಿಂದಾಗಿ ಅವರ ಕತೆಗಳಲ್ಲಿ ಬಾಲವಿಧವೆ-ಆತ್ಮಾಹುತಿಮಾಡಿಕೊಳ್ಳುತ್ತಾಳೆ. ಆದರೆ ಅದರ ತೀವ್ರತೆಯನ್ನು ಅರಿತುಕೊಂಡ ಕತೆಗಾರ್ತಿಯರು ಅವರಿಗೆ ಬದುಕು ಕೊಡುವ ನೆಲೆಯಲ್ಲಿ ಅವರ ಮೇಲಿನ ಶೋಷಣೆಯನ್ನು ಪರಿಚಯಿಸಿ ಅದನ್ನು ತಡೆಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ಆಧುನಿಕತೆಯ ದಟ್ಟ ಪರಿಣಾಮದಿಂದಾಗಿ ಅವರೆಲ್ಲ ಅಂಥ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ.

ವಿಧವೆಯರ ಜೊತೆಜೊತೆಗೆ ಇನ್ನಿತರ ಸಾಮಾಜಿಕ ಅನ್ಯಾಯಕ್ಕೆ ಒಳಗಾದ ವಿವಿಧ ಮಹಿಳೆಯರೂ ಕೂಡ ಈ ಸಂದರ್ಭದ ಕತೆಗಾರ್ತಿಯರಲ್ಲಿ ಎಡೆಪಡೆದು ಅನ್ಯಾಯದ ಕುರಿತು ಪ್ರತಿಭಟನೆಯ ದನಿ ಎತ್ತಿ ಬದುಕ ಹೊರಡುತ್ತಾರೆ. ಈ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕೆ ಹಾಗೂ ಪ್ರತಿಭಟಿಸುವುದಕ್ಕೆ ಅವರಿಂದ ಸಾಧ್ಯವಾದದ್ದು ವಿದ್ಯಾಭ್ಯಾಸ, ಸುಧಾರಣಾ ಚಳವಳಿಯ ಪರಿಣಾಮದಿಂದಾಗಿ. ಆದರೆ ಮಾಸ್ತಿಯವರ ಕತೆಗಳ ಸ್ತ್ರೀ ಈ ಆಧುನೀಕರಣಕ್ಕೆ ಒಳಗಾಗುವುದಿಲ್ಲ.

ಈ ಕಾಲದ ಕತೆಗಾರ್ತಿಯರ ಕತೆಗಳ ಹೆಣ್ಣು ಮಕ್ಕಳು ಪ್ರತಿನಿಧಿಸಿದ್ದೇ ಅಸಮಾನತೆಯ ದೃಷ್ಟಿಕೋನವನ್ನು ಹಾಗೂ ಅದನ್ನು ಪ್ರತಿಭಟಿಸುವ ಶಕ್ತಿ ಬೆಳೆಸಿಕೊಂಡದ್ದನ್ನು . ಆದರೆ ಅವರು ಭಾರತೀಯ ಕೌಟುಂಬಿಕ ಚೌಕಟ್ಟಿನೊಳಗೇ ನಿಂತು ಮುಂದೆ ಬಂದವರಾಗಿದ್ದಾರೆ. ಆದರೆ ಅದರೊಳಗೆ ಇರುವ ವಿಷಮತೆಯನ್ನು ಒಪ್ಪಿಕೊಂಡೇ ವಿರೋಧಿಸಿ ಬದುಕುವವರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ಧೈರ್ಯ ಮೈಗೂಡಿಸಿಕೊಳ್ಳುವಲ್ಲಿ ಅದರ ಅನಿವಾರ್ಯತೆಯನ್ನು ಹಾಗೂ ಧೈರ್ಯವನ್ನು ವೈದಿಕೇತರ ಮಹಿಳೆಗೆ ಕೊಡುತ್ತಾರೆ. ಮಾಸ್ತಿಯವರ ಕತೆಗಳಲ್ಲಿನ ಸ್ತ್ರೀಯರ ಜೀವನ ಪ್ರೀತಿ ಬದುಕಿನ ವೈವಿಧ್ಯಮಯ ಇಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಪ್ರತಿಭಟನೆ, ಪ್ರಶ್ನಿಸುವಿಕೆಯ ಸಮಾಜದ ವಿವಿಧ ವಿಷಯಗಳನ್ನು ವಿಭಿನ್ನ ನೆಲೆಗಳಲ್ಲಿ ಪ್ರಸ್ತುತ ಪಡಿಸುವಲ್ಲಿ ವಸ್ತುವಿನ ಆಯ್ಕೆಯಲ್ಲಿ ಏಕತಾನತೆ ಕೂಡ ಕಂಡುಬರುತ್ತದೆ. ಭಾರತೀಯತೆ ಕಾಯ್ದುಕೊಳ್ಳುವಂತೆ ಕಟ್ಟೆಚ್ಚರ ವಹಿಸುವ ಮಾಸ್ತಿ ಹಾಗೂ ಅವರ ಕತೆಗಳ ಸ್ತ್ರೀಯರಿಗಿಂತ ಭಿನ್ನವಾಗಿ ಗೌರಮ್ಮನವರ 'ಬಹಿಷ್ಕೃತೆ' ಕತೆ ಮುಖ್ಯವಾಗುತ್ತದೆ. ಬಹಿಷ್ಕೃತೆಯಾದ ವಿಧವೆಯ ಮಗಳನ್ನು ಹಿಂದೂ ಯುವಕರು ವಿವಾಹವಾಗಲು ಮುಂದೆ ಬಾರದೇ ಹೋದಾಗ ಕ್ರಿಶ್ಚಿಯನ್ ಗಂಡಿಗೆ ಮದುವೆ ಮಾಡಿಕೊಡುವುದು ಸಂಸ್ಕೃತಿಯ ಕುಬ್ಜತೆಗೆ ಕೊಟ್ಟ ಪ್ರತ್ಯುತ್ತರವಾಗುತ್ತದೆ. ಅಂತರ್ ಧರ್ಮೀಯ ವಿವಾಹ ನಡೆಯದಂತೆ ತಡೆದರೆ ಮರುಮದುವೆ ಕತೆಯೊಳಗಿನ ನಾಯಕಿ ತೊರೆದು ಹೋದ ಗಂಡನ ಬಳಿಗೆ ಮರಳಿ ಬರುವ ಅಸಹಾಯಕತೆಯ ವ್ಯವಸ್ಥೆಯ ಕ್ರೌರ್ಯ ಹೆಣ್ಣನ್ನು ಪುರುಷನ ಅಧೀನಕ್ಕೆ ಒಳಪಡಿಸಿದ್ದು, ಅದನ್ನು ಮೀರಿದವಳ ಬದುಕು ಹಳಿತಪ್ಪುವಂತೆ ಮಾಡಿಬಿಡುವ ವಾಸ್ತವವನ್ನು ತೆರೆದಿಡುವುದಾಗಿದೆ.

ಪ್ರಗತಿಶೀಲರ ಸಾಮಾಜಿಕ ಅರಿವಿನಲ್ಲಿ

ಪ್ರಗತಿಶೀಲ ಸಾಹಿತ್ಯ ಹುಟ್ಟಿಕೊಂಡದ್ದೇ ನವೋದಯದ ಸಾಧಕ-ಬಾಧಕಗಳ ವಿಮರ್ಶಾತ್ಮಕ ಹಾಗೂ ಪ್ರತಿಭಟನಾತ್ಮಕ ಉತ್ತರವಾಗಿ. ಜಾತಿ-ವರ್ಗ-ಲಿಂಗಗಳ ಅಸಮಾನತೆಯನ್ನು ಮೀರುವುದು, ಮನುಷ್ಯ ಸಂಬಂಧವನ್ನು ಗಟ್ಟಿಗೊಳಿಸುವುದು ಅವರ ಧ್ಯೇಯವಾಗಿದೆ. ಸಾಂಪ್ರದಾಯಿಕ ನಂಬಿಕೆಗಳ ಆಧಾರದ ಬದುಕನ್ನು ತಡೆಯುವುದು ಅವರ ಉದ್ದೇಶವಾಗಿತ್ತು. ವೈಚಾರಿಕತೆಯ ಪ್ರಖರತೆಯೊಂದಿಗೆ ಅದನ್ನು ಬಿತ್ತಿ ಬೆಳೆಸುವ ಉದ್ದೇಶದಿಂದ ಹುಟ್ಟಿಕೊಂಡ ಪ್ರಗತಿಶೀಲತೆ ಬದುಕಿನ ದಿಕ್ಕನ್ನೇ ಬದಲಾಯಿಸ ಹೊರಡುತ್ತದೆ. ನವೋದಯ ಸಾಹಿತ್ಯ ವೈಚಾರಿಕತೆ ಮೂಡಿಸುವಲ್ಲಿ ವಿಫಲವಾಯಿತು. ಆದರ್ಶದ ಬೆನ್ನು ಹತ್ತಿ ವಿಶಾಲವಾದ ಬದುಕನ್ನು ಕಂಡ ಆ ಸಾಹಿತ್ಯಕ್ಕಿಂತ ಭಿನ್ನವಾಗಿ ವೈಚಾರಿಕತೆ ಮೂಡಿಸಿ ಬದುಕುವುದಕ್ಕೆ ಪ್ರೇರಣೆ ನೀಡಿತು.

ಪುರುಷ ಪ್ರಧಾನ ವ್ಯವಸ್ಥೆಯ ಅತಿರೇಕಗಳ ನಡುವೆ ಬಂಡವಾಳಶಾಹಿ, ವಸಾಹತುಶಾಹಿ, ಕೈಗಾರಿಕೀಕರಣದತ್ತ ಹೊರಳಿದ ಸ್ವಾತಂತ್ರ್ಯಯುಕ್ತ ಬದುಕಿನ ಒಳಗಿನಿಂದ ಪ್ರಗತಿಪರ ಸಾಹಿತ್ಯ ಜನ್ಮ

ಪಡೆದಿದೆ. ವಸಾಹತುಶಾಹಿಯ ವಿರುದ್ಧದ ದೇಶೀ ಹೋರಾಟಗಳು, ರೈತರ, ಕಾರ್ಮಿಕರ ಪರವಾದ ವಿಚಾರಶೀಲತೆಯಿಂದ ಹುಟ್ಟಿಕೊಂಡದ್ದಾಗಿದೆ. ಸ್ತ್ರೀಯರ ಸಮಸ್ಯೆಗಳನ್ನು ಕೆದಕುವ ಹಾಗೂ ಪರಿಹಾರದ ದಾರಿ ತೋರಿಸಿ ಬದುಕುವುದಕ್ಕೆ ಪ್ರೇರಿಸುವ ಮಹತ್ತರ ಕೆಲಸವನ್ನು ಇವು ನಿರ್ವಹಿಸಿವೆ. ಒಂದು ರೀತಿಯ ಹೋರಾಟ, ಚಳುವಳಿಗೆ ತೊಡಗಿಸಿಕೊಂಡ ಪ್ರಗತಿಶೀಲರು ಹೆಣ್ಣಿನ ಪ್ರತಿಯೊಂದು ಸಮಸ್ಯೆಗೂ ಸ್ಪಂದಿಸಿದ್ದು ಮುಖ್ಯವಾಗಿದೆ. ಪ್ರಗತಿಶೀಲರೆಂದು ಕರೆಯಿಸಿಕೊಳ್ಳುವ ಈ ವರ್ಗದ ಬರಹಗಾರರು ಆ ಸಂದರ್ಭ ಕವಲೊಡೆದ ಹೋರಾಟಗಳನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ ಆ ಪ್ರತಿಪಾದಿಸುವಿಕೆಯ ತಿರುಳು ಕೆಳವರ್ಗ, ಮಧ್ಯಮ ವರ್ಗದವರ ಪರವಾಗಿಯೇ ಎನ್ನುವುದು ಮುಖ್ಯವಾಗುತ್ತದೆ. ಅವಮಾನಿತ, ನೊಂದ ಹೆಣ್ಣಿನ ಬದುಕನ್ನು ನವೋದಯದವರಿಗಿಂತ ಭಿನ್ನವಾಗಿ ತೆರೆದಿಡುವುದಕ್ಕೆ ಪ್ರಗತಿಶೀಲರು ಪ್ರಯತ್ನಿಸಿದ್ದಾರೆ. ಅದನ್ನು ತೆರೆದಿಡುವಲ್ಲಿ ಅವರಿಗೆ ಸಂಯಮದ ಭಾಷೆ ಸಾಕಾಗಲಿಲ್ಲ. ನೇರವಾಗಿ ರಾಚುವುದು ಮುಖ್ಯವಾಗಿತ್ತು. ವೈಚಾರಿಕತೆಯ ಪ್ರಖರತೆಯಿಂದ ಸಮಸ್ಯೆಯ ತಳ ಕೆದಕಿ ಅದನ್ನು ತೋರಿಸುವ ಮತ್ತು ಅದಕ್ಕೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ಬರಹಕ್ಕೆ ಒಡ್ಡಿಕೊಂಡವರಾಗಿದ್ದರು.

ಪ್ರಗತಿಶೀಲರು ತಮ್ಮೊಳಗೆ ಇಟ್ಟುಕೊಂಡಿದ್ದ ಆಕ್ರೋಶ, ಸಿಟ್ಟನ್ನು ಹೆಣ್ಣಿನ ಹೀನಾಯ ಬದುಕಿನ ಕುರಿತು ಪ್ರಶ್ನಿಸುವ ಮೂಲಕ ಹೊರಗೆಡಹುತ್ತಾರೆ. ಅವರ ಸಮಸ್ಯೆಗಳನ್ನು ಸರಿಪಡಿಸುವ ಕಾಳಜಿ ವಹಿಸಿ ತುಡಿದಿದ್ದಾರೆ. ಕೈಗಾರಿಕೀಕರಣದಿಂದಾಗಿ ಜನಜೀವನದಲ್ಲಾದ ಅಸ್ತವ್ಯಸ್ತತೆ, ಗೊಂದಲ ಗೋಜಲುಗಳನ್ನು ಹಿಡಿದುಕೊಡುವುದು ಅವರಿಗೆ ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಹೆಣ್ಣು ಕಂಡುಕೊಂಡ ಬದುಕು, ಬದುಕಿನ ಅನಿವಾರ್ಯತೆಗಾಗಿ ವೇಶ್ಯೆಯರಾಗಬೇಕಾದ ಪರಿಸ್ಥಿತಿಯ ನಡುವೆ ಅವರು ಎದುರಿಸಬೇಕಾಗಿ ಬಂದ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಅವರೊಳಗಿನ ಮನುಷ್ಯತ್ವವನ್ನು ತೆರೆದಿಡುವಲ್ಲಿ ಪ್ರಯತ್ನಿಸಿದ್ದಾರೆ. ಅವರ ಮೇಲೆ ಅನುಕಂಪ ಹುಟ್ಟಿಸುವ ಬದಲು ಅವರನ್ನು ಮನುಷ್ಯರನ್ನಾಗಿ ಕಾಣಿಸುವಂತೆ ಪ್ರಯತ್ನಿಸುತ್ತಾರೆ. ಇಲ್ಲಿಯೇ ನಾವು ನವೋದಯ ಹಾಗೂ ಪ್ರಗತಿಶೀಲರ ತಾತ್ವಿಕ ಅಭಿಪ್ರಾಯಗಳ ಭಿನ್ನತೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಹೆಣ್ಣು ಕುಟುಂಬ ನಡೆಸುವವಳಾಗಿ ಕಾಣಿಸಿಕೊಂಡು ಅನುಭವಿಸಿದ ಯಾತನೆ ಇಲ್ಲಿ ದಾಖಲಿಸಲಾಗಿದೆ. ವಿಧವೆಯರು, ವೇಶ್ಯೆಯರು ಕುಟುಂಬದಿಂದ ಹೊರಬರಲು ಪ್ರಯತ್ನಿಸುವ ಗೃಹಿಣಿಯರು, ಪ್ರೀತಿ ಪ್ರೇಮಕ್ಕೆ ಒಳಗಾದ ಹೆಣ್ಣು ಮಕ್ಕಳು ಎಲ್ಲರೂ ಇಲ್ಲಿ ಅವರವರದೇ ಸಮಸ್ಯೆ ಹೊತ್ತು ಪ್ರವೇಶ ಪಡೆದಿದ್ದಾರೆ.

ಪ್ರಗತಿಶೀಲರಲ್ಲಿ ಪ್ರಮುಖವಾಗಿ ಗುರುತಿಸಿಕೊಳ್ಳುವವರು ಅನಕೃ, ತರಾಸು, ನಿರಂಜನ, ಚದುರಂಗ, ಬಸವರಾಜು ಕಟ್ಟೀಮನೆ, ವ್ಯಾಸರಾಯ ಬಲ್ಲಾಳರು. ಈ ಎಲ್ಲ ಕತೆಗಾರರ ಕತೆಗಳಲ್ಲಿ ಕಾಣಿಸುವ ವೈವಿಧ್ಯಮಯ ಸ್ತ್ರೀಯರು ಮಾಸ್ತಿಯರ ಕತೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಕಾಣಿಸಿಕೊಂಡರೂ ಅದು ಒಂದು ಸೀಮಿತ ಅಭಿಪ್ರಾಯದ ನಡುವೆ ಮುದುಗಿ ಹೋಗುತ್ತದೆ. ಸನಾತನ ಪರಂಪರೆಯ ಬದುಕಿನ ಅನುಸರಣೆ ಯಾಕೆ ಬೇಕೆಂಬ ಹಿನ್ನೆಲೆಯಲ್ಲಿ ಅಂಥ ಸಮಸ್ಯೆಗಳಿಗೆ ಸ್ಪಂದಿಸಿ ಅಲ್ಲಿಂದ ಹೊರಡುವಂತೆ ಮಾಡುವ ಕಾಳಜಿ ಕಾಣುತ್ತೇವೆ. ಮಾಸ್ತಿಯವರ ಚೆನ್ನಮ್ಮ ಕತೆಯ ಚೆನ್ನಮ್ಮ ಆಧುನಿಕತೆಯ ಪರಿಣಾಮವಾಗಿಯೇ ಮನೆಯಿಂದ ಹೊರಗೆ ಕಾಲಿಡಬೇಕಾಗಿ ಬಂತು. ಅಲ್ಲಿಂದ ರಕ್ಷಣೆ ದೊರೆಯದೇ ಹೋಗುವುದು ಚಿತ್ರಿತಗೊಂಡಿದೆ. ಅವರ ವೈಚಾರಿಕ ಮನಸ್ಸು ಅದನ್ನು ಪರಿಚಯಿಸುವುದೇ ಬೇರೆ ನೆಲೆಯಲ್ಲಿ.

ಅನಕೃ ಸಾಹಿತ್ಯದ ಬಗೆಗೆ ಬಿ.ಎನ್.ಸುಮಿತ್ರಾಬಾಯಿ ಅವರು ಒಟ್ಟಾರೆಯಾಗಿ ನೋಡಿದಾಗ (ಕೆಲವು ನಾಟಕಗಳಲ್ಲಿ ಬಿಟ್ಟರೆ) ಅನಕೃ ಎತ್ತಿ ಹಿಡಿಯುವುದು ಊಳಿಗಮಾನ್ಯ ವ್ಯವಸ್ಥೆಯ ಲಿಂಗಾಧಾರಿತ ಮೌಲ್ಯಗಳನ್ನೇ. ಈ ಅಂಶ ಅವರ ಐತಿಹಾಸಿಕ ರಚನೆಗಳಲ್ಲಿ ಪುರೋಗಾಮಿತ್ವದ ಪರದೆಯನ್ನು ಸರಿಸಿಟ್ಟು ಸ್ಪಷ್ಟವಾಗುವುದು ಆಶ್ಚರ್ಯದ ಮಾತಲ್ಲ. ಸಾಮಾಜಿಕವೆನಿಸಿಕೊಂಡ ರಚನೆಗಳಲ್ಲೂ ಇರುವ ಅಂಶವೇ ಅದು ಎಂದು ವಿಮರ್ಶಿಸಿರುವುದನ್ನು ಅಲ್ಲಗಳೆಯುವಂತಿಲ್ಲ.[೩]

ಅನಕೃ ಅವರು ಎಲ್ಲ ರೀತಿಯ ವಂಚನೆಗೆ ಒಳಗಾದ ಹೆಣ್ಣನ್ನು ಪರಿಚಯಿಸುವುದಕ್ಕೆ ಕತೆಗಳನ್ನು ಬರೆದಿದ್ದಾರೆ. ಹೆಣ್ಣಿನ ಬದುಕಿನ ರೀತಿ - ನೀತಿ ಕಟ್ಟುಪಾಡುಗಳ ಕುರಿತಂತೆ ಅವರು ಪುನರ್ವಿಮರ್ಶೆಗೆ ಒಡ್ಡಿದ್ದು ಕತೆಗಳ ಮೂಲಕ ಸಾಬೀತಾಗಿದೆ. ಪುರುಷ ಮೇಲ್ಮೆಯನ್ನು ಒಪ್ಪಿಕೊಳ್ಳುತ್ತಲೇ ಅವರ ಕೃಪೆಗೆ ಸ್ತ್ರೀಯರು ಒಳಗಾಗುವಂತೆ ಮಾಡಿ ಅವರೊಂದಿಗೆ ಮಾತ್ರ ಲೈಂಗಿಕ ಸಂಬಂಧದ ತೃಪ್ತಿ ಪಡೆಯದಿರುವುದನ್ನು ಪರಿಚಯಿಸುತ್ತಾರೆ. ಅವರ 'ಸಮಾಗಮ' ದ ವಿವಾಹಿತ ಮಹಿಳೆಯ ಅನೈತಿಕ ಲೈಂಗಿಕ ಸಂಬಂಧಗಳ ಕುರಿತಂತೆ ಅವರ ಕತೆಗಳು ವಿವರಿಸುತ್ತವೆ. ಆದರೆ ಅದು ತಪ್ಪೆಂದು ಸಾರುವುದು ಆಕೆ ಮಾಡಿಕೊಳ್ಳುವ ಆತ್ಮಹತ್ಯೆಯಿಂದ. 'ಅನ್ನದ ಕೂಗು', 'ದೊಡ್ಡ ಮನುಷ್ಯ' ಕತೆಗಳ ನಾಯಕರೂ ಉನ್ನತ ವ್ಯಕ್ತಿತ್ವದವರೇ ಆಗಿರುತ್ತಾರೆ. ಒಂದು ನೆಲೆಯಲ್ಲಿ ಇಲ್ಲಿನ ಪುರುಷರು ಸ್ತ್ರೀಯರು ಮಾಡುವ ತಪ್ಪುಗಳಿಗೆ ಕ್ಷಮೆ ಕೊಡುವ ಉದಾರವಾದಿಗಳಾಗಿ ಮೆರೆಯುವುದನ್ನು ಕಾಣುತ್ತೇವೆ.

ಮಾಸ್ತಿಯವರ 'ವೆಂಕಟಿಗನ ಹೆಂಡತಿ' , 'ಆಂಗ್ಲ ನೌಕಾ ಕ್ಯಾಪ್ಟನ್' ಗೆ ಹತ್ತಿರವಾಗುವ ಇಲ್ಲಿನ ಪಾತ್ರಗಳು ದೊಡ್ಡವರಾಗಿ ಹೆಣ್ಣಿನ ಬದುಕಿಗೆ ಕೃಪೆ ತೋರುವವರಾಗುತ್ತಾರೆ. ಹೆಣ್ಣಿನ ಸಮಸ್ಯೆಗಳನ್ನು ಚರ್ಚಿಸುವುದು ಅನಕೃ ಅವರ ಮುಖ್ಯ ಉದ್ದೇಶವಾಗಿದೆ. ಆದರೆ ಆ ಸಮಸ್ಯೆಗಳನ್ನು ಪರಿಹರಿಸುವ ಸಂದರ್ಭ ವ್ಯಕ್ತಿಯ ಉನ್ನತೀಕರಣ ನಡೆಯುತ್ತದೆ. ಆದರೆ ತರಾಸು ಅವರು ಸಾಹಿತ್ಯ ರಚನೆ ಸಂದರ್ಭ ಪ್ರಗತಿ ಪರತೆಗೆ ಒತ್ತು ಕೊಟ್ಟರು. ಜನಪರ ಅಭಿಮತಗಳನ್ನು ಕತೆಯ ಮೂಲಕ ಕೊಡುತ್ತಾ ಬಂದರು. ಅಲ್ಲಿ ರಮ್ಯ ಲೋಕದ ಚಿತ್ರಣ, ಶೃಂಗಾರ ವಿಚಾರಗಳೂ ಮೈವೆತ್ತಿವೆ.

---

೩. ಪ್ರಬಂಧ ಪ್ರಗತಿಶೀಲ ಸಾಹಿತ್ಯದಲ್ಲಿ ಸ್ತ್ರೀ ಮತ್ತು ಸಾಮಾಜಿಕ ಸಮಸ್ಯೆಗಳ ಅಭಿವ್ಯಕ್ತಿ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ವಿವಿಧ ಲೇಖಕರು, [illegible]

ನಿರಂಜನರು ಈ ಎಲ್ಲ ಕತೆಗಾರರಿಗಿಂತ ಭಿನ್ನರಾಗುತ್ತಾರೆ. ಅವರು ತೀರಾ ವಾಸ್ತವವಾದಿಗಳಾಗಿ ಬಿಡುವುದು ನಿರಂಜನತನವನ್ನು ವಿಜೃಂಭಿಸುತ್ತದೆ. ಇವರು ನಿಜವಾದ ಪ್ರಗತಿಪರತೆಯ ಪ್ರಖರ ವೈಚಾರಿಕತೆ ಬೆಳಗಿಸಿದವರು. ಅವರ ವೈಚಾರಿಕತೆ ಬೆಳಗುವುದೇ ಜೀವಪರ ವಿಚಾರಗಳ ಹಿನ್ನೆಲೆಯಲ್ಲಿ. ಅವರು ಸಮಾಜದ ಎಲ್ಲ ತೆರವಾದ ಶೋಷಣೆಗಳನ್ನು ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿ ಚರ್ಚಿಸಿದವರು.

ನಿರಂಜನ ಅವರ 'ಕೊನೆಯ ಗಿರಾಕಿ' ಕತೆ ಸಾಹಿತ್ಯ ಪ್ರಕಾರದಲ್ಲಿಯೇ ಪ್ರಮುಖ ಸ್ಥಾನ ಪಡೆದಿದೆ. 'ನಾಸ್ತಿಕ ಕೊಟ್ಟ ದೇವರು', 'ಸಂಧಿಕಾಲ', 'ರಕ್ತಸರೋವರ' ಕೂಡ ಈ ನಿಟ್ಟಿನಲ್ಲಿ ಪ್ರಮುಖವಾದ ಕೃತಿಗಳೇ ಆಗಿವೆ. ಚದುರಂಗ 'ಕ್ವಾಟೆ', 'ಸ್ವಪ್ನಸುಂದರಿ ಮತ್ತು ಇತರ ಕಥೆಗಳು', 'ಬಣ್ಣದ ಬೊಂಬೆ ಮತ್ತು ಇತರಕಥೆಗಳು' ಕಥಾ ಸಂಕಲನಗಳು ಬಸವರಾಜ ಕಟ್ಟೀಮನಿ ಅವರ ಗುಲಾಬಿ ಹೂ , ಕಾರವಾನ್ ಕತೆಗಳಲ್ಲಿ ನವೋದಯಕ್ಕೆ ಹತ್ತಿರವಾಗುವ ರಮ್ಯತೆಯನ್ನು ಕಾಣುತ್ತೇವೆ.

ಪ್ರಗತಿ ಶೀಲರಲ್ಲಿ ವೇಶ್ಯೆಯರ ಕುರಿತ ಜಾಗೃತಿ ಮೂಡಿಸುವಂತೆ ಮಾಡಿರುವುದು ಗಮನಾರ್ಹವಾಗಿದೆ. ಅವರ ಬದುಕಿನ ನೋವು ಸಂಕಷ್ಟಗಳನ್ನು ಪರಿಚಯಿಸುವುದಕ್ಕೆ ಕತೆಗಳು ಬಹುತೇಕ ಅವಕಾಶ ಕೊಟ್ಟಿವೆ. ಹೊಟ್ಟೆಪಾಡಿನ ಉದ್ದೇಶದಿಂದ ಮೈಮಾರಬೇಕಾಗಿ ಬಂದ ಅವರ ಮನೋವೇದನೆಗೆ ಇಲ್ಲಿ ಸ್ಪಂದಿಸಲಾಗಿದೆ. ಆ ಸ್ಪಂದನದ ಹಿಂದೆ ಅವರ ಮೈಮಾಟಗಳ ವರ್ಣನೆಗೂ ಕೊಂಚ ಸ್ಥಾನ ಕೊಡಲಾಗಿದೆ. ಆದರೆ ನಿರಂಜನರು ಈ ನಿಟ್ಟಿನಲ್ಲಿ ತೀರಾ ಭಿನ್ನರಾಗಿ ವಸ್ತುಸ್ಥಿತಿಯನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದ್ದಾರೆ.'ಕೊನೆಯ ಗಿರಾಕಿ' ಕತೆಯೂ ಮೂಕಿ ವೇಶ್ಯೆಯ ಸಂವೇದನೆಯನ್ನು ಅಭಿವ್ಯಕ್ತಿಸುತ್ತದೆ. ಹೊಟ್ಟೆಪಾಡಿಗಾಗಿ ವೇಶ್ಯೆಯಾಗಬೇಕಾದ ಆಕೆ ಯಜಮಾನನ ಹಟಮಾರಿತನಕ್ಕೆ ತನ್ನ ಮೈಮಾರಬೇಕಾದ ಅಸಹನೀಯತೆಗೆ ಒಳಗಾಗಬೇಕಾಗುತ್ತದೆ. ಆಕೆಯ ಮೂಕರೋದನವು ಮನಸ್ಸು ಕಲಕುತ್ತದೆ. ತಾನು ಬಯಸುವ ಮೊಂಡುಕೈಯ್ಯವನನ್ನು ನೆನಪಿಸುವ ಅವಳು ಮನಸ್ಸು ಒಪ್ಪಿದವರಿಗೆ ಮಾತ್ರ ಮೈಕೊಡುವ ಪ್ರವೃತ್ತಿಗೆ ಒಳಗಾದವಳು. ಅವಳ ವೇದನೆ ಅರ್ಥವಾಗದ ಮೃಗೀಯ ಯಜಮಾನನ ಹಿಡಿತ ಅವಳಿಗೆ ನುಂಗಲಾರದ ತುತ್ತಾಗಿದೆ. ಆಕೆ ಅಲ್ಲಿಂದ ತಪ್ಪಿಸಿಕೊಂಡು ಬೀದಿಪಾಲಾಗುವ ರೀತಿಯೂ ಹೃದಯ ವಿದ್ರಾವಕವೇ. ಯಾರ್‍ಯಾರಿಂದಲೋ ಉಗುಳಿಸಿಕೊಳ್ಳುವ ರೀತಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಹೊಡೆತ ತಿಂದು ಮೇಲೇಳದಂತೆ ಮಾಡುವ ಅನಾಗರಿಕ ದಮನಕಾರೀ ಪ್ರವೃತ್ತಿಗೆ ಒಳಗಾಗುತ್ತಾಳೆ. ಅಲ್ಲಿಗೇ ಉಸಿರು ಕಳೆದುಕೊಳ್ಳುವ ಮೂಕಿ ಕಾಣೆಯ ಕಳೇಬರದ ಮೇಲೆ ಗಿಡುಗ ಸುತ್ತು ಬರುವುದು ಹಾಗೂ ಅವಳೆಡೆಗೇ ಇಳಿದು ಬರುವುದು ಸತ್ತ ಮೇಲೂ ಎರಗುವ ದುಷ್ಟ ಮನಃಸ್ಥಿತಿಯನ್ನು ಪುರುಷನ ಆಕ್ರಮಣದ ಕುರಿತ ವ್ಯಂಗ್ಯವನ್ನು ಪ್ರಸ್ತುತ ಪಡಿಸುತ್ತದೆ.

ವೇಶ್ಯೆಯ ಇನ್ನೊಂದು ಮುಖವಾದ ಅವಳ ಮಾತೃತ್ವದ ಬಯಕೆಯನ್ನು ಪರಿಚಯಿಸುವುದು 'ಬದುಕುವ ಬಯಕೆ' ಕತೆ. ವೇಶ್ಯೆಯರ ಸಮಸ್ಯೆಯನ್ನು ವಿವರಿಸುವಲ್ಲೇ ಅವರು ನಿಂತು ಬಿಡುವುದಿಲ್ಲ. ಆ ವೇದನೆಯ ಹಿಂದೆ ಅದಕ್ಕೆ ಕಾರಣವಾದ ಸಮಾಜವನ್ನು ಪರಿಚಯಿಸುತ್ತದೆ. ಇಲ್ಲಿ ಮಾತೃತ್ವದ ಬಯಕೆಗೆ ಅವಕಾಶವಿಲ್ಲದಂತೆ ತಡೆಯಲಾಗಿದೆ. ನಿರೂಪಕ ಹಾಗೂ ಅವನ ಪತ್ನಿ ಮಾತನಾಡಿಕೊಳ್ಳುವಲ್ಲಿ ವೇಶ್ಯಾವಾಟಿಕೆ ನಡೆಸುವ, ಪೋಷಿಸುವ ಸಮಾಜದ ಸಣ್ಣತನದ ಪರಿಚಯವಿದೆ. ಇಲ್ಲಿ ನಿರೂಪಕ ದಂಪತಿಯ ಮಗು ವೇಶ್ಯೆಯ ಮನೆಗೆ ಹೋಗಿಬರುವುದರಲ್ಲಿ ನಿಷೇಧ ಹೇರದೇ ಇರುವುದು ವಿಡಂಬನೆಗ ಒಳಗಾಗುತ್ತಿರುವುದರ ಸೂಚನೆಯನ್ನು ಗಮನಿಸಬಹುದಾಗಿದೆ. ಅಂಥ ಮನಃಸ್ಥಿತಿ ಬಲಗೊಳ್ಳಬೇಕಾದ ಸಂದೇಶ ಕೂಡ ಇಲ್ಲಿದೆ.

ಅನಕೃ ಅವರೂ ಇದೇ ತೆರನಾದ ದೃಷ್ಟಿಯಿಂದ ಕತೆ ರಚನೆ ಮಾಡಿದ್ದಾರೆ. ಲೈಂಗಿಕತೆಯ ಕುರಿತು ಮಡಿವಂತಿಕೆ ಇಲ್ಲದ ಅವರು ಅದು ಸಾಂಪ್ರದಾಯಿಕ ನೆಲೆಯಲ್ಲೇ ಮುಂದುವರಿಯಬೇಕಾದ ರೀತಿಗೆ ಹೆಚ್ಚು ಒತ್ತು ಕೊಡುತ್ತಾರೆ. ಹೆಣ್ಣು ತಾನಾಗಿ ಆ ಕ್ರಿಯೆಗೆ ಒಳಗಾಗದಂತೆ ಎಚ್ಚರ ವಹಿಸುತ್ತಾರೆ. ಹಾಗೆ ಮುಂದುವರಿದ ಹೆಣ್ಣು ಬದುಕಿನಲ್ಲಿ ಸೋಲು ಕಾಣುವ ಮೂಲಕ ಅದು ಅಪರಾಧ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಗಂಡು ಆ ನೆಲೆಯಲ್ಲಿ ಮುಂದುವರಿಯುವುದು, ಹೆಂಡತಿಗೆ ನ್ಯಾಯ ಒದಗಿಸುವುದು ವೇಶ್ಯಾ ಪ್ರವೃತ್ತಿಗೆ ಒಡ್ಡಿಕೊಂಡವಳಿಗೆ ನೆಲೆ ಇಲ್ಲದಂತೆ ಮಾಡುತ್ತದೆ. ಅದು ಅಂಥ ವ್ಯವಸ್ಥೆ ಇಲ್ಲವಾಗಬೇಕೆಂಬ ಕಾಳಜಿಯನ್ನೂ ಮುಂದಿಡುತ್ತದೆ. ಇಲ್ಲಿ ವೇಶ್ಯೆ ಪ್ರವೃತ್ತಿ ಬದಲಾಯಿಸಲು ಸಾಧ್ಯವಿರುವುದನ್ನು ಪ್ರತಿಪಾದಿಸಲಾಗಿದೆ. ಸಮಾಜದ ಕಂಟಕಿಯಾಗುವ ವೇಶ್ಯೆ ಇಲ್ಲಿ ನಾಯಕಿಯಾಗುತ್ತಾಳೆ. ಜೊತೆಗೆ ಅನುಕಂಪಕ್ಕೂ ಒಳಗಾಗುತ್ತಾಳೆ. ಹೆಣ್ಣಿನ ಸಮಸ್ಯೆಯನ್ನು ವೈಯಕ್ತಿಕ ನೆಲೆಯಿಂದ ನೋಡಿರುವುದರಿಂದ ಅದನ್ನು ಬಿಡಿಸುವ ನಾಯಕ ಉದಾತ್ತನಾಗಿ ಕಾಣಿಸಿಕೊಳ್ಳುತ್ತಾನೆ. ಮತ್ತು ಆಕೆಯ ಸಮಸ್ಯೆ ಸಾಮಾಜೀಕರಣಕ್ಕೆ ಒಳಗಾಗದೇ ಪ್ರತ್ಯೇಕವಾಗಿ ನಿಲ್ಲುತ್ತದೆ. ಸಮಾಜದ ವ್ಯವಸ್ಥೆಯನ್ನು ಇಲ್ಲಿ ಪ್ರಶ್ನಿಸುವುದಿಲ್ಲ.

ಮಾಸ್ತಿ ಕತೆಗಳ ಸ್ತ್ರೀಯರ ಸಮಸ್ಯೆ ಕೂಡ ವೈಯಕ್ತಿಕ ನೆಲೆಯಲ್ಲಿಯೇ ನಿಂತುಬಿಡುತ್ತದೆ. ಅವಳ ಸಮಸ್ಯೆ ಸ್ತ್ರೀಯದೇ ನೆಲೆಯೊಳಗಿನದಾದುದರಿಂದ ಅವಳ ಸಮಸ್ಯೆ ಅಲ್ಲಿಗೇ ನಿಂತು ಬಿಡುತ್ತದೆ. ಅದು ಅವಳು ಬದುಕಬೇಕಾದ ರೀತಿಯನ್ನು ಸಾರುತ್ತದೆ. ಆದರೆ ಅವಳ ಅಂಥ ಸ್ಥಿತಿಗೆ ಕಾರಣವಾದ ವ್ಯವಸ್ಥೆ ಹಾಗೂ ವರ್ಗದ ಕುರಿತು ಯಾವುದೇ ಸೋಲು ಕೂಡಾ ಅಲ್ಲಿ ವ್ಯಕ್ತವಾಗುವುದಿಲ್ಲ. ಅಂಥ ವ್ಯವಸ್ಥೆಯ ಬದಲಾವಣೆಗೆ ಆಗಬೇಕಾದ ವ್ಯವಸ್ಥೆಯ ಕುರಿತು ಚರ್ಚೆ ನಡೆಯುವುದಿಲ್ಲ.

ಪ್ರಗತಿಶೀಲರಲ್ಲಿ ಸ್ತ್ರೀಯರು ಪುರುಷ ಪ್ರಧಾನ ಚೌಕಟ್ಟಿನೊಳಗೇನೇ ಬದುಕು ಸಾಗಿಸುವವರು. ಅವರ ಆಲೋಚನೆಗಳಾಚೆಗೆ ಸ್ತ್ರೀ ಹೆಜ್ಜೆ ಇಡುವಂತಿಲ್ಲ. ಅನುಕಂಪದ ನೆಲೆಯಲ್ಲಿ ಅವಳ ಬದುಕು ಪುರುಷ ತೀರ್ಮಾನದ ನಡುವೆಯೇ ನಲುಗಬೇಕಾಗಿದೆ.

ಹಾಗೆ ನೋಡಿದರೆ ಅನಕೃ ಅವರ ಕತೆಗಳ ಸ್ತ್ರೀಯರು ಉಸಿರಾಡುವ ಪರಿಸರಗಳು, ಸಂದರ್ಭಗಳು ಯಾಜಮಾನ್ಯ ಶಾಹಿತ್ವದ್ದೇ ಆಗಿದೆ. ಅವರು ಹೆಣ್ಣಿಗೆ ಲೈಂಗಿಕ ಸ್ವಾತಂತ್ರ್ಯ ಕೊಡುವುದಿಲ್ಲ. ಅದು ನಡೆದರೆ ಪಾಪಪ್ರಜ್ಞೆ ಕಾಡುವಂತೆ ಮಾಡಿದ್ದಾರೆ. ಮಾತ್ರವಲ್ಲ ಪುರುಷನನ್ನು ವಂಚಿಸುವ ಪ್ರವೃತ್ತಿಯಿಂದಾಗಿ ಹೆಣ್ಣು ಇಲ್ಲಿ ಸಾವನ್ನು ಸ್ವೀಕರಿಸಬೇಕಾಗಿಯೂ ಬರುತ್ತದೆ ಎಂಬುದನ್ನು ತೋರಿಸಿದ್ದಾರೆ. 'ಸಮಾಗಮ' ದಲ್ಲಿ ಓಡಿ ಹೋದ ಹೆಂಡತಿ ಆಕೆ ಬಯಸಿದವರೊಂದಿಗೆ ಬಾಳುವ ಅವಕಾಶ ಕಲ್ಪಿಸುವ ಉದಾತ್ತ ಗಂಡು ಚಿತ್ರಿತವಾಗುವುದು ಗಂಡಸಿನ ದೊಡ್ಡತನದ ನಡುವೆ ಹೆಣ್ಣು ಬದುಕು ಕಂಡುಕೊಳ್ಳುತ್ತಿರುವುದನ್ನು ತೋರಿಸುತ್ತದೆ. ಪುರುಷ ಪ್ರಾಧಾನ್ಯದ ನಡುವೆ ನಲುಗುವ ಸ್ತ್ರೀ ಮರ್ಯಾದಸ್ಥ ಕುಟುಂಬದೊಳಗಿನವಳೇ ಆಗಿರಲಿ, ವೇಶ್ಯೆಯೇ ಆಗಿರಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಿರುವ ವಾಸ್ತವವನ್ನು ಇಲ್ಲಿ ಅ.ನ.ಕೃ ಕಂಡರಿಸಿದ್ದಾರೆ. ಕುಟುಂಬಸ್ಥ ಹೆಣ್ಣುಮಕ್ಕಳು ಗಂಡಿನ ಜಾಲಕ್ಕೆ ಸಿಲುಕಿಕೊಳ್ಳಬೇಕಾದ ಸ್ಥಿತಿ ಎದುರಿಸಿದರೆ ವೇಶ್ಯೆಯರು ಹೊಟ್ಟೆಪಾಡಿಗಾಗಿ ಆ ಸಿಕ್ಕಿನೊಳಗೆ ಸಿಲುಕಬೇಕಾಗಿ ಬರುವ ಸಮಯ ವಾಸ್ತವದ ನಡುವೆ ಅವರು ವಿಲಿ ವಿಲಿ ಒದ್ದಾಡುವುದನ್ನು ಚಿತ್ರಿಸುತ್ತಾರೆ. ಮುಖ್ಯವಾಗಿ ತರಾಸು ಅವರ 'ರೂಪಸಿ ಮತ್ತು ಇತರ ಕತೆಗಳು' 'ಏಕೆ ಬರಲಿಲ್ಲ' 'ಸಾಕ್ಷತ್ಕಾರ' ಕತೆಗಳು ಕಾಮುಕತನದ ಪ್ರವೃತ್ತಿಗೆ ಹೆಣ್ಣು ಒಳಗಾಗುವುದನ್ನು ಮುಂದಿಡುತ್ತವೆ.

ಆದರೆ ಇಲ್ಲಿ ಸ್ತ್ರೀ ಅಂಥ ಗಂಡಸರನ್ನು ತೀವ್ರವಾಗಿ ವಿರೋಧಿಸುವ ಹಾಗೂ ಅವರ ಮನಸ್ಸನ್ನು ಬದಲಾಯಿಸಿ ಬದುಕಿಸುವ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ.

ತ.ರಾ.ಸು. ಅವರ ಕತೆಗಳಲ್ಲೂ ಹೆಣ್ಣು ಕಾಮದ ಗೊಂಬೆಯಾಗಿಯೇ ಕಾಣಿಸಿಕೊಳ್ಳುತ್ತಾಳೆ. ಪ್ರಗತಿಪರ ವೈಚಾರಿಕ ಚಿಂತನೆಯ ಪ್ರಭಾವದ ಹಿನ್ನಲೆಯಲ್ಲಿಯೇ ಭೋಗದ ವಸ್ತುವಾಗಿ ಕೂಡ ಆಕೆ ಗುರುತಿಸಿಕೊಳ್ಳುತ್ತಾಳೆ. ಹೆಣ್ಣು ವಿಲಾಸದ ವಸ್ತುವಲ್ಲ , ಭೋಗ ಸಾಧನವಲ್ಲ , ಆಕೆ ಶುದ ತ್ಯಾಗಮೂರ್ತಿ ಎಂದು ಹೆಣ್ಣಿನ ಬಗೆಗೆ ಗೌರವದ ಮಾತುಗಳನ್ನೇ ಮುಂದಿಡುವ 'ಸಾಕ್ಷಾತ್ಕಾರ' ಕತೆಯಲ್ಲಿ ಆಧುನಿಕ ವಿಚಾರಧಾರೆ ಅಡಗಿದೆ. ಆದರೆ ಈ ನಡುವಿನ ಗೊಂದಲ ಹೆಣ್ಣಿನ ಬದುಕಿನ ಸಮಸ್ಯೆಯ ಪರಿಹಾರದ ಕುರಿತು ಮಾತನಾಡುವುದಿಲ್ಲ. ಸಮಸ್ಯೆಯ ಯಥಾವತ್ತು ಚಿತ್ರಣ ಎಂಬ ನೆಲೆಯಲ್ಲಿ ಆ ಸಮಾಜದ ಪ್ರತಿಬಿಂಬವೂ ಆಗುತ್ತದೆ.

ಬಸವರಾಜ ಕಟ್ಟೀಮನಿ ಅವರಿಗೆ ಮುಖ್ಯವಾಗುವುದು ಮಧ್ಯಮವರ್ಗದ ಮಹಿಳೆ . ಅವರ ಕತೆಗಳ ಸ್ತ್ರೀ ಗಂಡಿನ ನಡುವೆ ಸಿಲುಕಿ ಬದುಕುತ್ತಾಳೆ.

ಚದುರಂಗ ಅವರ ಕತೆಗಳಿಗೂ ಮಧ್ಯಮ ವರ್ಗದ ಸ್ತ್ರೀಯರ ಬದುಕು ವಸ್ತುವಾಗುತ್ತದೆ. ಆದರೆ ಹೆಣ್ಣಿನ ಸಮಸ್ಯೆಗಳನ್ನು ವಿಶ್ಲೇಷಿಸುವ ಹಾಗೂ ಅತಿ ಕಾಳಜಿಯಿಂದ ಚರ್ಚಿಸುವ ಕೆಲಸಕ್ಕೆ ತೊಡಗುತ್ತದೆ. ಹೆಣ್ಣಿನ ರೂಪಕ್ಕಾಗಿ ಹಪಹಪಿಸುವ ಮತ್ತು ಆಕೆಯನ್ನು ಭೋಗ ವಸ್ತುವನ್ನಾಗಿ

ಕಾಣುವ ರೀತಿಗೆ ವ್ಯಂಗ್ಯವಾಡುವುದು 'ಸ್ವಪ್ನ ಸುಂದರಿ' ಕತೆ. ಸುಂದರವಾಗಿರುವುದು ಅದು ಹೆಣವಾಗಿದ್ದರೂ ಅದನ್ನು ಕೂಡುವ ವಿವೇಚನಾಶೂನ್ಯ ಲಂಪಟತನವನ್ನು ಇಲ್ಲಿ ಲೇವಡಿ ಮಾಡಲಾಗಿದೆ.

ಸ್ತ್ರೀ ಕುರಿತ ಸ್ಪಂದನ, ಸಂವೇದನೆ ಅಲ್ಲಿ ದಟ್ಟೈಸಿದ್ದೆ. ಲೈಂಗಿಕ ಶೋಷಣೆಯನ್ನು ವಿವರಿಸುವ 'ಕ್ವಾಟೆ' ಕತೆ ಆ ನಿಟ್ಟಿನಲ್ಲಿ ಪ್ರಾಧಾನ್ಯ ಪಡೆಯುವುದು ನಾಯಕಿ ಕದ್ದು ಮುಚ್ಚಿ ಲೈಂಗಿಕ ಸುಖ ಪಡೆಯುವುದು ಇಲ್ಲಿ ಸ್ವಾಭಾವಿಕವಾಗುತ್ತದೆ. ಅದರಿಂದ ವಂಚಿತೆಯಾದ ಹೆಣ್ಣಿಗೆ ? ಸಹಜಗೊಳಿಸಿ ಒಪ್ಪಿತವಾಗಿಸಿದ್ದು ಒಂದು ರೀತಿಯಲ್ಲಿ ವೈಚಾರಿಕತೆಯ ಚಿಂತನೆಯಿಂದಲೇ. ವಿಧವೆ, ವೇಶ್ಯೆಯಾಗುವವರು, ಬಂಜೆಯರು, ಮಾನಸಿಕರೋಗಿಗಳು ಅಲ್ಲಿ ಪ್ರವೇಶ ಪಡೆದಿದ್ದಾರೆ. ಈ ಎಲ್ಲ ಸ್ತ್ರೀಯರ ಬದುಕು, ಬವಣೆಗಳಿಗೆ ಸ್ಪಂದಿಸುವ ಲೇಖಕರ ಮನಸ್ಸು ಅವರ ಪರವಾಗಿರುತ್ತದೆ ಮತ್ತು ಅವರ ಸದ್ಯದ ಸ್ಥಿತಿಯನ್ನು ಪರಿಚಯಿಸುವುದೂ ಆಗಿರುತ್ತದೆ. ಇಲ್ಲಿಯೇ ಅವರ ಕುರಿತ ಕಾಳಜಿಯನ್ನು ಕಾಣುತ್ತೇವೆ. 'ನಾಲ್ಕು ಮೊಳ ಭೂಮಿಯಲ್ಲಿ' ನಿರೂಪಕನ ಹೆಂಡತಿ ಕತೆಗಾರ್ತಿಯಾಗಿ ಪಡೆಯುವ ಸ್ಥಾನ ಹೆಣ್ಣಿನ ಜೀವನದ ವಿಕಸನದ ಪರಿಯನ್ನು ತೋರಿಸುತ್ತದೆ. ಆದರೆ ಕೊನೆಯಲ್ಲಿ ಮೆಚ್ಚುಗೆಯನ್ನು ಆಕೆಯ ಕೃತಿಚೌರ್ಯದ ಸತ್ಯ ಒಡೆದು ಬಿಡುತ್ತದೆ. ಸ್ವತಂತ್ರ ಅಭಿವ್ಯಕ್ತಿ ಪಡೆಯಬಾರದು ಎಂಬುದು ಇಲ್ಲಿನ ಉದ್ದೇಶವಿರಬಹುದೇ ಅನ್ನಿಸುತ್ತದೆ. ಕತೆಯ ಉದ್ದೇಶದ ಅರಿವು ಮೂಡಿಸುವುದಕ್ಕಾಗಿ ಆಕೆಯನ್ನು ಬಳಸಿಕೊಳ್ಳುವಲ್ಲಿ ಅವಳ ವ್ಯಕ್ತಿತ್ವವನ್ನು ಮರೆಯಾಗಿಸಬಾರದ್ದೆಂಬುದನ್ನು ಎಚ್ಚರಿಕೆಯಿಂದ ಕಾಯ್ದುಕೊಳ್ಳಲಾಗಿದೆ.

ವ್ಯಾಸರಾಯ ಬಲ್ಲಾಳರು ಸಾಮಾಜಿಕ ಅಸಮಾನತೆಯನ್ನು ಕ್ರುದ್ಧರಾಗಿಯೇ ಪ್ರಶ್ನಿಸುತ್ತಾರೆ. ಕುರೂಪದಿಂದ ತಿರಸ್ಕೃತರಾದ ಹೆಣ್ಣು ಮಕ್ಕಳನ್ನು ಆತ್ಮೀಯ ತೆಕ್ಕೆಗೆ ತೆಗೆದುಕೊಂಡು ಅವರ ಅಪಮಾನದ ಬೇಗುದಿಗಳನ್ನು ಪರಿಚಯಿಸುವ ಕತೆಗಳಾಗಿ 'ನಿವೃತ್ತಿ' ಹಾಗೂ 'ಅವಿವಾಹಿತೆ' ಕತೆಗಳು ನಿಲ್ಲುತ್ತವೆ. ಪುರುಷ ಹೆಣ್ಣಿನ ರೂಪಕ್ಕೆ ಬಲಿಯಾಗಿ ಸುಂದರಿಯರನ್ನು ಮಾತ್ರವೇ ಬಯಸುವ, ಆದರೆ ಹೆಣ್ಣಾಗಿದ್ದು ಕುರೂಪವಿರುವವರನ್ನು ತಿರಸ್ಕರಿಸುವ ಸಮಾಜದ ಸಣ್ಣತನದ ಮನಸ್ಸಿಗೆ ಬೆನ್ನು ಹಾಕಿ ಅಂಥ ಮನಸ್ಥಿತಿಗೆ ವಿರೋಧವಾಗಿಯೇ, ಈ ಕತೆಗಳು ರಚಿತವಾಗಿವೆ. ಬಲ್ಲಾಳರ ಕತೆಗಳಲ್ಲಿ ಮಾಸ್ತಿ ಕತೆಗಳಲ್ಲಿ ಸ್ತ್ರೀ ಪ್ರತಿನಿಧಿಸಿದ ಮೌಲ್ಯಗಳಿಗೆ ಹತ್ತಿರವಾದ ಮೌಲ್ಯವನ್ನು ಸ್ತ್ರೀ ಪ್ರತಿನಿಧಿಸುತ್ತಾಳೆ. ಮಾಸ್ತಿ ಅತ್ಯಂತ ಗೌರವದಿಂದ ಹೆಣ್ಣನ್ನು ಕಂಡ ಕಣ್ಣಲ್ಲಿಯೇ ಬಲ್ಲಾಳರೂ ಕಾಣುತ್ತಾರೆ. ತಮ್ಮ ಕಾಲದ ಸ್ಥಿತಿ-ಗತಿ ಹಾಗೂ ಸಮಾಜದಲ್ಲಿ ಆಕ್ರಮಣಕ್ಕೊಳಗಾದ ಹೆಣ್ಣಿನ ಚಿತ್ರಣಗಳೆರಡನ್ನೂ ಜೊತೆ ಜೊತೆಯಾಗಿಯೇ ಇಟ್ಟುಕೊಂಡು ಸ್ತ್ರೀಯನ್ನು ಪರಿಚಯಿಸುತ್ತಾರೆ.

ಹೆಣ್ಣನ್ನು ಇಲ್ಲಿ ಆಕರ್ಷಕಳನ್ನಾಗಿ ಕಾಣಿಸಿ ಮೋಹಕ್ಕೆ ಬಳಸುವ ಭೋಗ ವಸ್ತುವಾಗಿ ಗುರುತಿಸುವುದಿಲ್ಲ. ಅವರು ಕ್ರಿಯಾಶೀಲರಾಗಿರುವಂತೆ ಕಾಣಿಸಿದ್ದಾರೆ. ಆ ನೆಲೆಯಲ್ಲಿ 'ಸಂಪಿಗೆ

ಯ ಹೂ' ಕತೆ ಪ್ರಾಮುಖ್ಯ ಪಡೆಯುತ್ತದೆ. ಇಲ್ಲಿನ ಯಶೋದೆಯ ಸಂಯಮ ಮುರಿಯುವುದು ಹಾಗೂ ಆಕೆಯ ಮನಸ್ಸಿನ ತಾಕಲಾಟಗಳನ್ನು ಪರಿಚಯಿಸುವುದು ಕತೆಯ ಉದ್ದೇಶವಾಗಿದೆ. ಯಶೋದೆಯ ದ್ವಂದ್ವ, ನಿರುದ್ವಿಗ್ನತೆ ಸ್ವಭಾವ ಮಾಸ್ತಿ ಕತೆಗಳ ಸಹನಶೀಲತೆಯನ್ನು ಮೈವೆತ್ತ ಸ್ತ್ರೀಯರ ಸ್ವಭಾವಕ್ಕೆ ಹತ್ತಿರವಾಗಿವೆ. ವಿಧವೆಯಾದ ಆಕೆಯನ್ನು ವಿರೂಪಗೊಳಿಸುವ ಸಂದರ್ಭದಲ್ಲಿ, ಅವಳಿಗೆ ರೂಪವತಿಯಾಗಿ ಕಾಣಿಸಿಕೊಳ್ಳುವ ಹಂಬಲಗಳ ನಡುವಿನ ಗೊಂದಲ, ಪ್ರಶ್ನೆಗಳು ಅಂಥ ಸಾಂಪ್ರದಾಯಿಕ ನಡಾವಳಿಗಳನ್ನು ಮುರಿಯಲು ಬೇಕಾದ ಸತ್ಯವನ್ನು ಲೆಕ್ಕ ಹಾಕುತ್ತವೆ. 'ಹೊಸಹಗಲು'ವಿನಲ್ಲಿ ವಿವಾಹಕ್ಕೂ ಮುನ್ನ ತಾಯಾಗುವ ಸುನಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿ ಬರುವುದು ಅಲ್ಲಿನ ಸಮಾಜದ ದುಃಸ್ಥಿತಿಯ ಹಿನ್ನೆಲೆಯಿಂದಲೇ.

ಪ್ರಗತಿಶೀಲರಲ್ಲಿ ಕೂಲಿಗೆ ತೆರಳುವ ಸ್ತ್ರೀಯರು ಬದುಕಿನ ಅನಿವಾರ್ಯತೆಗಾಗಿ ದುಡಿಮೆಗೆ ಒಡ್ಡಬೇಕಾದ ವಾಸ್ತವವನ್ನು ತೋರಿಸಿಕೊಡುತ್ತಾರೆ. ನಿರಂಜನರು ಬರೆದ ' ನಂ. ೨೦೪ ಮತ್ತು ನೀಲಿ ಬುಶ್ ಕೋಟು' ಕತೆ ಕಾರ್ಮಿಕ ಲೋಕದ ಹೆಣ್ಣನ್ನು ಪರಿಚಯಿಸುವ ಪ್ರಮುಖ ಕತೆಯಾಗಿದೆ. ಅಲ್ಲಿನ ಶಾರದಾ ನೋವು ಅನುಭವಿಸುತ್ತ, ಅವಮಾನಗಳ ನಡುವೆ ಹೋರಾಡುತ್ತ ಬಡತನಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾಳೆ. ಆ ಹಿನ್ನೆಲೆಯಿಂದಲೇ ಆಕೆಯ ತ್ಯಾಗದ ಹೆಸರಿನ ಅಸಹಾಯಕತೆಗೆ ಒಳಗಾದದ್ದು ಕಾಣುತ್ತೇವೆ. ಕಟ್ಟುನಿಟ್ಟಿನ ಅವರ ವಿಚಾರಗಳನ್ನು ಒಪ್ಪಿಕೊಳ್ಳುವಂತೆ ಸಿದ್ಧರಾಗಿರುವುದು ಹಾಗೆ ಸಿದ್ಧಗೊಳಿಸಿದ ಪುರುಷ ಸಮಾಜವನ್ನು ಪ್ರತಿನಿಧಿಸುವುದಾಗಿದೆ. ಅಲ್ಲಿ ಅದನ್ನು ಒಪ್ಪಿಕೊಳ್ಳುವಂತೆ ಮಾಡಿರುವಲ್ಲಿ ಅವರ ಮನಸ್ಸು, ಆಶೆ, ಆಕಾಂಕ್ಷೆಗಳು ಇಲ್ಲಿ ಯಾರಿಗೂ ಮುಖ್ಯವಾಗುವುದಿಲ್ಲ. ಅವರು ಯಾವ ಸ್ವತಂತ್ರ ವ್ಯಕ್ತಿತ್ವವನ್ನೂ ಪಡೆದವರಾಗಿಲ್ಲ. ನಾಯಕನ ಆದರ್ಶ ಹಾಗೂ ನಂಬಿಕೆಗಳಿಗೆ ಸ್ತ್ರೀ ತನ್ನನ್ನು ಅರ್ಪಿಸಿಕೊಂಡು ನಡೆಯಬೇಕಾದ ಸಂದರ್ಭಕ್ಕೆ ಒಡ್ಡಿಕೊಂಡವರಾಗಿ ಕಾಣಿಸುತ್ತಾರೆ. ವ್ಯಾಸರಾಯ ಬಲ್ಲಾಳ್‌ರ ಕತೆಗಳಲ್ಲಿ ಸ್ತ್ರೀಯರು ಜೀವನವನ್ನು ಅತೀ ಗಂಭೀರವಾಗಿ ತೆಗೆದುಕೊಂಡು ದುಡಿಮೆಗೆ ಒಡ್ಡಿಕೊಳ್ಳುತ್ತಾರೆ. ಗಂಡಿಗೆ ಸಮವಾಗಿ ದುಡಿಯುವುದು ಹಾಗೂ ದ್ವಂದ್ವಗಳಿಗೆ ಒಳಗಾಗುವುದು ಅವಳ ಬದುಕಿನ ಇಕ್ಕಟ್ಟಿನ ಸ್ಥಿತಿಯನ್ನು ತೆರೆದಿಡುವುದಾಗಿದೆ. ಆದರೆ ಇಲ್ಲಿ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ನೆಲೆ ಮುಖ್ಯವಾಗಿದೆ. ವಾತ್ಸಲ್ಯ ಪರೀಕ್ಷೆ ಈ ನಿಟ್ಟಿನಲ್ಲಿ ಪ್ರಧಾನ ಕತೆಯಾಗಿದೆ. ಈ ನೆಲೆಯಲ್ಲಿಯೇ ಅವರು ಬದುಕಿಗಾಗಿ ಹೋರಾಟಕ್ಕೆ ಕೂಡ ಇಳಿಯುವುದು ಅನಿವಾರ್ಯವಾಗಿಸಿದೆ. ಇಲ್ಲಿ ಬದುಕಿನ ದುರಂತಕ್ಕೆ ಹೆಣ್ಣು ಬಲಿಯಾಗುವ ಅಸಹಾಯಕತೆಯಿದೆ. ಈ ನಿಟ್ಟಿನಲ್ಲಿ ಕಟ್ಟೀಮನಿಯವರ 'ಕಾರವಾನ್' ಬಹಳ ಪ್ರಮುಖ ಕತೆಯಾಗಿದ. ಬದುಕಿನಲ್ಲಿ ನೋವನ್ನೇ ಅನುಭವಿಸಿ ಕಂಗೆಟ್ಟು ಹೋದ ತಾಯಿ ಹಸಿವಿನ ತೀವ್ರತೆಯನ್ನು ಅನುಭವಿಸಿ ಹೆತ್ತ ಮಗುವಿಗೆ ಎದೆ ಹಾಲು ಕೊಡದಷ್ಟು ಎದೆ ಬತ್ತಿ ಹೋಗಿದೆ. ಸ್ವತಃ ತಿನ್ನುವುದಕ್ಕೆ ಆಹಾರವಿಲ್ಲದಿರುವಾಗ ಹಾಲಾದರೂ ಹೇಗೆ ಉತ್ಪತ್ತಿಯಾದೀತೆಂದು ವ್ಯಗ್ರಳಾಗುವ ತಾಯಿ ತನ್ನ ಎಳೇ ಮಗುವನ್ನೇ ಕೊಂದು ಬಿಡುತ್ತಾಳೆ. ಇಂಥ

ಪ್ರತಿಕ್ರಿಯೆಯನ್ನು ತೋರಿರುವಲ್ಲಿ ನೊಂದ ಹೆಣ್ಣಿನ ವೇದನೆಯಿದೆ, ಅಂತರಂಗದ ಅಭಿವ್ಯಕ್ತಿಯಿದೆ. ಆದರೆ ಮಾಸ್ತಿ ಅವರ ಕತೆಗಳಲ್ಲಿ ಕಾರ್ಮಿಕ ಲೋಕದ ಸ್ತ್ರೀಯರು ಕಾಣಸಿಗುವುದಿಲ್ಲ. ಹೆಣ್ಣು ಹೊರಗೆ ದುಡಿಯುವುದನ್ನು ಅವರು ಒಪ್ಪಿಕೊಳ್ಳುವುದಿಲ್ಲ.

ಪ್ರಗತಿಶೀಲರ ಕತೆಗಳಲ್ಲಿ ಕಾಣಿಸಿಕೊಳ್ಳುವ ಸ್ತ್ರೀಯರು ಮಾಸ್ತಿ ಕತೆಗಳ ಸ್ತ್ರೀಯರ ಬದುಕಿನ ಜೀವ ಸೆಲೆಗೆ ಹತ್ತಿರವಾಗುತ್ತಾರೆ. ಅವರೂ ಭಾರತೀಯ ವೈದಿಕ ಪರಂಪರೆಯನ್ನು ಬದುಕಿ ಬಾಳಿದ ಹೆಣ್ಣಿನ ಬದುಕಿನ ಉದಾತ್ತತೆಗಳನ್ನು ಒಪ್ಪಿಕೊಂಡೇ ಇರುವವರು. ಅಲ್ಲಿನ ಮೌಲ್ಯವನ್ನು ಉಳಿಸುವ ನಿಟ್ಟಿನಲ್ಲಿ ಅವರ ಪ್ರವೃತ್ತಿಗಳು ನಡೆಯುತ್ತವೆ. ನೈತಿಕ - ಅನೈತಿಕ ವಿಚಾರಣೆಗಳು ಪ್ರತಿಯೊಬ್ಬರಿಗೂ ಒಂದೇ ನೆಲೆಯಲ್ಲಿ ಅನ್ವಯವಾಗುವಂತೆ ಎಚ್ಚರ ವಹಿಸಲಾಗಿದೆ. ಆದರೆ ಮಾಸ್ತಿ ಭಾರತೀಯ ಪಾರಂಪರಿಕ ಬದುಕಿನ ಮೌಲ್ಯಗಳನ್ನು ಸಾರುವ ಉದ್ದೇಶವಾಗಿ ಹೆಣ್ಣಿನ ಔದಾರ್ಯವನ್ನು ಚಿತ್ರಿಸುತ್ತಾರೆ. ಅವಳು ಬದುಕಬೇಕೆಂಬ ರೀತಿಗೆ ಒತ್ತು ಕೊಡುತ್ತಾರೆ. ಪ್ರಗತಿಶೀಲ ಕತೆಗಾರರು ಸಾಮಾಜಿಕ ಅಸಮತೋಲನವನ್ನು ತೆರೆದಿಡುತ್ತಾರೆ. ಅವೈಚಾರಿಕ ಚಿಂತನೆ, ಶೋಷಣೆಗಳನ್ನು ಬಯಲಿಗೆಳಿಸುವ ನಿಟ್ಟಿನಲ್ಲಿ ಅವರು ತೆರೆದುಕೊಳ್ಳುತ್ತಾರೆ.

ಪ್ರಗತಿಶೀಲ ಪಂಥದ ಕತೆಗಾರ್ತಿಯರಲ್ಲಿ ಮುಖ್ಯರಾದವರು ತ್ರಿವೇಣಿ, ವಾಣಿ ಹಾಗೂ ಅನುಪಮಾ ನಿರಂಜನ ಅವರು. ತ್ರಿವೇಣಿ ಅವರಿಗೆ ಬಹುಮುಖ್ಯವಾಗಿ ಕಾಡಿದ್ದು ಪುರುಷರ ಯಜಮಾನಿಕೆಯೊಳಗೆ ನಲುಗಿ ಮಾನಸಿಕ ಖಿನ್ನತೆಗೆ ಒಳಗಾಗುವ ಹೆಣ್ಣು ಹಾಗೂ ಅಂಥ ಪದ್ಧತಿಯೊಂದನ್ನು ತಿರಸ್ಕರಿಸಿ ಅದನ್ನು ದಾಟಿ ಬದುಕುವ ಹೆಣ್ಣುಮಕ್ಕಳು. ಈ ಪರಿಚಯಿಸುವಿಕೆಯ ಹಿಂದೆ ಅಲ್ಲಿನ ಸ್ತ್ರೀಯರು ವ್ಯವಸ್ಥೆಯೊಳಗೆ ಸಿಲುಕಿ ಪೇಚಾಡುತ್ತಿರುವ, ಲೈಂಗಿಕ ಅಸಮಾನತೆಯೊಳಗೆ ತೊಳಲಾಡುತ್ತಿರುವ ಸಂದರ್ಭವನ್ನೂ ಕೂಡ ಅವರು ವಿಭಿನ್ನ ಮಾದರಿಯಲ್ಲೇ ಪ್ರಸ್ತುತ ಪಡಿಸಿದ್ದಾರೆ. 'ಎರಡು ಮನಸ್ಸು', 'ಸಮಸ್ಯೆಯ ಮಗು', 'ಹೆಂಡತಿಯ ಹೆಸರು' ಸಂಕಲನಗಳಲ್ಲಿನ ಸ್ತ್ರೀಯರು ತೆರೆದಿಡುವ ಸಮಸ್ಯೆಗಳೇ ಅಂದಿನ ಸಾಮಾಜಿಕ ಪರಿಸರದಲ್ಲಿ ಹೆಣ್ಣು ಉಸಿರಾಡಿದ ರೀತಿಯನ್ನು ಪ್ರಸ್ತುತ ಪಡಿಸುತ್ತವೆ.

ವಾಣಿಯವರ 'ಕಸ್ತೂರಿ' 'ಬಾಬು ಬರ್‍ತಾನೆ' , ಅನುಪಮಾ ನಿರಂಜನ ಅವರ 'ಕಣ್ಮಣಿ' 'ರೂವಾರಿಯ ಲಕ್ಷ್ಮಿ' ಕಥಾ ಸಂಕಲನಗಳಲ್ಲಿ ಹೆಣ್ಣಿನ ಜೀವನ ರೀತಿಯ ವೈವಿಧ್ಯವಿದೆ. ಅವರೆಲ್ಲರಿಗೂ ಕಾಡಿದ್ದು ಗಂಡ ಹೆಂಡಿರ ನಡುವಿನ ಸಮಾನತೆ ಸಾಧಿಸಲಾಗದ ಸಂಬಂಧ. ಆ ಪರಿಣಾಮವಾಗಿ ಗಂಡನ ಪ್ರೀತಿ ಕಳೆದುಕೊಳ್ಳುವ ಹೆಂಡತಿಯರು ಕಾಣಿಸಿಕೊಳ್ಳುತ್ತಾರೆ. ಪತಿಯೇ ಪರದೈವ ಎಂದು ತೀರಾ ನಂಬದೆ ತಮ್ಮ ಪ್ರೀತಿಗೆ ಬೆಲೆ ಸಿಗದೇ ಹೋದಾಗ, ಅವನು ಇನ್ನೊಬ್ಬಳನ್ನು ಆರಿಸಿಕೊಂಡಾಗ ಹುಲ್ಲುಗಿಂಜುತ್ತ ಸಹನೆಯ ನೆಪದಲ್ಲಿ ಅಲ್ಲೇ ಬಾಳುವೆ ಮಾಡದೇ ಹೊರಬಂದು ಜೀವಿಸುವ ತಮ್ಮತನ ಮೈಗೂಡಿಸಿಕೊಂಡದ್ದನ್ನು ಕಾಣುತ್ತೇವೆ. ಒಂದು ಕುಟುಂಬದೊಳಗೆ ಹೆಣ್ಣು ಇರಬೇಕಾದ ಚೌಕಟ್ಟು

ಪಾಲಿಸುತ್ತ ಅಲ್ಲಿ ಸಿಗದ ಪ್ರೀತಿ-ನ್ಯಾಯಗಳಿಗಾಗಿ ತಡಕಾಡುವವಳಾಗಿ ವ್ಯವಸ್ಥೆಯನ್ನು ತೀವ್ರವಾಗಿ ಪ್ರಶ್ನಿಸುವ ಹೆಣ್ಣು ಮಕ್ಕಳು ಅಲ್ಲಿ ಕಾಣಿಸಿಕೊಳ್ಳುತ್ತಾರೆ. ಆ ಪ್ರಶ್ನಿಸುವಿಕೆಯಲ್ಲಿ ವ್ಯವಸ್ಥೆಯ ತರತಮತೆಯ ಬದುಕಿಗೆ ಕೊರಳೊಡ್ಡದೆ ಸ್ವಂತಿಕೆ ತೋರಿಸುವುದನ್ನು ಕಾಣುತ್ತೇವೆ.

ಮಾಸ್ತಿಯವರ ಕತೆಗಳಲ್ಲಿ ತೆರೆದಿಡುವ ವೈವಿಧ್ಯಮಯ ಬದುಕು ಹಾಗೂ ವಿಭಿನ್ನ ವ್ಯಕ್ತಿತ್ವದ ಮಹಿಳೆಯರು ಪ್ರಗತಿಶೀಲ ಕತೆಗಾರ್ತಿಯರ ಕತೆಗಳಲ್ಲಿ ಕಾಣಿಸುವುದಿಲ್ಲ. ಸಾಂಪ್ರದಾಯಿಕ ಬದುಕನ್ನು ಒಗ್ಗಿ ಕೊಳ್ಳುವ ಹಾಗೂ ಸಾಂಪ್ರದಾಯಿಕ ಬದುಕಿನಿಂದ ಹೊರಬಂದು ವ್ಯವಸ್ಥೆ ಮುರಿಯುವ ಸ್ತ್ರೀಯರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಸಮಾಜದ ಸ್ಥಿತ್ಯಂತರ ಹಾಗೂ ಬದುಕು, ಬದಲಾಗದ ಮನಃಸ್ಥಿತಿಗಳು ಇಲ್ಲಿ ದಾಖಲಾಗಿವೆ.

ಹೆಣ್ಣಾಗಿ ಹುಟ್ಟಿದ್ದರಿಂದಾಗಿ ಅನುಭವಿಸಬೇಕಾದ ಕೌಟುಂಬಿಕ ಸಮಸ್ಯೆಗಳು ಪ್ರಧಾನವಾಗಿ ಎಡೆಪಡೆದಿವೆ. ಗಂಡು ನೋಡಿ ತಿರಸ್ಕೃತರಾಗಿ, ವ್ಯಕ್ತಿತ್ವ ಕಳಕೊಳ್ಳುವವರು, ಬಂಜೆಯರ ವೇದನೆಯ ಪಾಡು, ಮದುವೆಯಾಗದೇ ಬಾಳಿದ ಹೆಣ್ಣು ಮಕ್ಕಳು, ಸಮಾಜದ ಕುತ್ಸಿತ ದೃಷ್ಟಿಯಿಂದ ತಪ್ಪಿಸಿಕೊಳ್ಳಲಾರದೇ ಮರುಗುವವರು, ಅತ್ಯಾಚಾರಕ್ಕೆ ಒಳಗಾಗಿ ಕೊರಗುವರು ಇದ್ದಾರೆ. ಎಲ್ಲದಕ್ಕೂ ಕಾರಣ ಪುರುಷ, ಆತನ ನಿಯಮಾವಳಿ ಮೀರದ ಸಮಾಜ ಎಂಬುದನ್ನು ಸಾಬೀತು ಪಡಿಸಲಾಗಿದೆ. ಅಲ್ಲಿಯೂ ಪತ್ನಿ ತಾಯಿಯಾಗಿಯೂ ಕರ್ತವ್ಯ ನಿರ್ವಹಿಸಬೇಕಾದ ನೆಲೆಗಳನ್ನು ತೋರಿಸಿಕೊಡುತ್ತಾರೆ. ತಾಯ್ತನದ ಹಿರಿತನವನ್ನು ನವೋದಯದ ಮಾದರಿಯಲ್ಲಿ ಕೊಂಚ ಭಿನ್ನ ನೆಲೆಯಲ್ಲಿ ಪರಿಚಯಿಸಲಾಗಿದೆ. ಹೆತ್ತರೆ ಮಾತ್ರ ತಾಯಿಯಾಗುವುದಿಲ್ಲ ಎಂಬ ನೆಲೆಯಲ್ಲಿಯೇ ಹೆಣ್ಣು ಹುಟ್ಟಿನೊಂದಿಗೆ ಹೊತ್ತು ತಂದ ತಾಯ್ತನವನ್ನು ಅನುಪಮಾ ನಿರಂಜನ ಅವರು ಪ್ರಸ್ತುತ ಪಡಿಸಿದ ರೀತಿ ಕಥಾ ಲೋಕದಲ್ಲಿ ಅನನ್ಯ ಸ್ಥಾನ ಪಡೆಯುವುದು ಕಾಣುತ್ತೇವೆ. ಅವರ 'ರೂವಾರಿಯ ಲಕ್ಷ್ಮಿ' ಹಾಗೂ 'ವಿಳಾಸವಿಲ್ಲದ ಮಗು' ಕತೆ ಈ ನಿಟ್ಟಿನಲ್ಲಿ ಮುಖ್ಯವಾಗುತ್ತದೆ. ಅಲ್ಲಿನ ನಾಯಕಿಯರೂ ಮಗು ಹೆತ್ತೇ ತಾಯಿಯಾದವರಲ್ಲ. ಆದರೆ ಅವರು ತಾಯ್ತನವನ್ನು ಮೈಗೂಡಿಸಿಕೊಂಡು ಪ್ರೀತಿಯ ಮೂಲಕ ಅದನ್ನು ಸ್ಥಾಪಿಸುವವರಾಗಿದ್ದಾರೆ. ಗಂಡನ ನಿರೀಕ್ಷೆಯಲ್ಲಿರುವ ಹೆಂಡತಿ 'ಒಂಟಿ ಹಾಯಿ'ಯಲ್ಲಿ ಎದುರಾಗುತ್ತಾಳೆ. ಇಷ್ಟವಲ್ಲದ ಗಂಡನೊಂದಿಗೆ ಏಗಬೇಕಾದ 'ಏಳುಸುತ್ತಿನ ಮಲ್ಲಿಗೆ' ಕತೆಯ ನಾಯಕಿ, 'ಈಸಬೇಕು ಜೈಸಬೇಕು' ಕತೆಯ ನಾಯಕಿ ಬಂಜೆಯೆನ್ನಿಸಿಕೊಂಡು ಬೇಯುತ್ತ ಗಂಡ ಹಾಗೂ ಅತ್ತೆಯರಿಂದ ತಿರಸ್ಕೃತಳಾಗುವುದು. ಪುರುಷ ಪ್ರಾಧಾನ್ಯ ವ್ಯವಸ್ಥೆಯ ಮನಃಸ್ಥಿತಿಯನ್ನು ಮುಂದಿರಿಸುತ್ತದೆ. ಇಲ್ಲಿನ ಸಮಸ್ಯೆಗಳು ಹೆಣ್ಣನ್ನು ಕುಬ್ಜಳನ್ನಾಗಿಸುವ, ಅವಳನ್ನು ಮುಂದೆ ಬಾರದಂತೆ ತಡೆಯುವ ರೀತಿ ಕತೆಯಾದ್ಯಂತ ತೆರೆದುಕೊಂಡಿದೆ. ಆದರೆ ಅದೇ ಸಮಸ್ಯೆಯನ್ನು ಸಮಸ್ಯೆಯಾಗಿಯೇ ಮುಂದಿಡುತ್ತಾರೆ. ಆ ಮೂಲಕವಾಗಿ ಅದರ ತೀವ್ರತೆಯನ್ನು ಹಾಗೂ ಅದರಿಂದಾಗಿ ಹೆಣ್ಣಿನ ಬದುಕಿನ ದುರಂತವನ್ನು ಮನದಟ್ಟು ಮಾಡಿಸುವಲ್ಲೇ ಆಗಬೇಕಾದ ಮನಸ್ಥಿತಿಯ ಬದಲಾವಣೆಯನ್ನು

ಪ್ರಚುರಪಡಿಸುತ್ತಾರೆ. ನೊಂದ ಹೆಣ್ಣಿನ ಚಿತ್ರಣವೇ ಇಲ್ಲಿ ಅಂಥ ವ್ಯವಸ್ಥೆಯ ಬದಲಾವಣೆಗೆ ಕರೆಕೊಡುವ ಕೆಲಸ ಮಾಡುತ್ತದೆ. ಆದ್ದರಿಂದಲೇ ಅವರು ಅವಳ ಬದುಕಿನ ದುರಂತದ ಅಂತ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಕುರಿತು ಮಾತನಾಡದೇ ಉಳಿಯುತ್ತಾರೆ.

ಪ್ರಗತಿಶೀಲ ಪಂಥದ ಬೆಳವಣಿಗೆಯ ಸಂದರ್ಭದಲ್ಲಿ ಬರೆದ ವಾಣಿ ಅವರಿಗೆ ಮಹಿಳೆಯರ ಸಮಸ್ಯೆಗಳು ಗೃಹಿಣಿಯರ ಹತಾಶೆಗಳು ಮುಖ್ಯವಾಗುತ್ತವೆ. ಸ್ತ್ರೀಪರವಾದ ಅವರ ಕಾಳಜಿಯ ಹಿಂದೆ ಪುರುಷ ದೃಷ್ಟಿಕೋನದ ಸ್ಪಷ್ಟ ಚಿತ್ರಣ ತೆರೆದುಕೊಳ್ಳುತ್ತದೆ. ಅಲ್ಲಿ ಪುರುಷ ಪ್ರಧಾನ ಸಂಸ್ಕೃತಿ ಅನುಸರಿಸುವ ಸಾಂಪ್ರದಾಯಿಕ ಸ್ತ್ರೀಯರು ಪರಿಚಿತರಾಗುತ್ತಾರೆ. ‘ಅದು ನಾಣಿಯಮದುವೆ’, ‘ಕಸ್ತೂರಿ’, ‘ಬಾಬು ಬರ್ತಾನೆ’, ಸಂಕಲನದ ಕತೆಗಳಲ್ಲಿ ತೆರೆದುಕೊಳ್ಳುತ್ತವೆ. ಇಲ್ಲಿ ಸಾಂಪ್ರದಾಯಕ ಬದುಕನ್ನು ಸ್ತ್ರೀ ಪ್ರಶ್ನಾರ್ಹವಾಗಿ ನೋಡುತ್ತಾಳೆ. ವ್ಯವಸ್ಥೆಯ ತರತಮತೆಯನ್ನು ಪ್ರಶ್ನಿಸುವ ಗಟ್ಟಿಗಿತ್ತಿಯರೂ ಪ್ರಗತಿಶೀಲ ಲೇಖಕಿಯರ ಕತೆಗಳಲ್ಲಿ ಮುಖಾಮುಖಿಯಾಗುತ್ತಾರೆ. ಪುರುಷನ ಅಧಿಕಾರ ಹಾಗೂ ಪುರುಷ ಮೌಲ್ಯಗಳನ್ನು ಅನುಸರಿಸುವಂತೆ ಮಾಡಿದ ದೃಷ್ಟಿಕೋನವನ್ನು ನಿರ್ಭಿಡೆಯಿಂದ ಬಯಲಿಗೆಳೆದು ಚರ್ಚಿಸುತ್ತಾರೆ.

ವ್ಯಕ್ತಿತ್ವ ಕಳಕೊಂಡ ಹೆಣ್ಣಿನ ಶಕ್ತಿ-ಸಾಮರ್ಥ್ಯಗಳು ಗಂಡಿನ ಆಧಿಕ್ಯದಿಂದ ಮರೆಯಾಗಿರುವ ಸತ್ಯವನ್ನು ಹೇಳುವ ನೆಲೆಯಲ್ಲಿ ಸಮರ್ಥವಾಗಿ ತೊಡಗಿಸಿಕೊಂಡವರು ತ್ರಿವೇಣಿ ಅವರು. ಅವರ ಕತೆಗಳ ಹೆಣ್ಣು-ಮಕ್ಕಳು ಧೈರ್ಯವಾಗಿ ವ್ಯವಸ್ಥೆಯನ್ನು ಪ್ರಶ್ನಿಸುವ ಛಾತಿ ತೋರುತ್ತಾರೆ. ಸ್ತ್ರೀಪರವಾದ ಚಿಂತನೆಯಿಂದಲೇ ಅವರು ಕತೆಗಳನ್ನು ಬರೆಯುವುದಕ್ಕೆ ತೊಡಗಿಸಿಕೊಂಡವರು.

ಸ್ತ್ರೀ ಪುರುಷರ ನಡುವಿರುವ ಅಂತರ-ತಾರತಮ್ಯ ನಿಲುವು ಪ್ರಶ್ನಿತವಾಗುವುದು ‘ಬೆಡ್ ನಂ. ೭’ ಕತೆಯಲ್ಲಿ ಲಲಿತಾ ಪತಿನಿಷ್ಠೆ ತೋರಿ ಗಂಡನ ಉಪಚಾರದಲ್ಲಿಯೇ ಬದುಕು ಕಳೆದರೂ ಆತ ಅವಳನ್ನು ತಿರಸ್ಕರಿಸಿ ಬೇರೊಬ್ಬಳನ್ನು ಪತ್ನಿಯಾಗಿ ಸ್ವೀಕರಿಸಿದ ರೀತಿಯನ್ನು ಪರಿಚಯಿಸಿದ್ದಾರೆ. ಹೆಣ್ಣಿನ ಗುಣ ಹಾಗೂ ಪುರುಷನ ವಿರುದ್ಧ ಸ್ವಭಾವಗಳನ್ನು ಮುಖಾಮುಖಿಯಾಗಿಸಿ ಗಂಡಿನ ಅಮಾನವೀಯ ಸ್ವಭಾವವನ್ನು ಅಸಹ್ಯ ಎಂಬಂತೆ ಇಲ್ಲಿ ಮುಂದಿಟ್ಟಿದ್ದಾರೆ. ‘ಸೇರದ ದಾರಿ’ ಕತೆ ಅದಕ್ಕಿಂತಲೂ ಕೊಂಚ ಭಿನ್ನ ನೆಲೆಯಲ್ಲಿ ಸಾಗುತ್ತದೆ. ಅಲ್ಲಿ ಪ್ರತಿಭಟನಾತ್ಮಕವಾದ ಅಂಶಗಳು ತೆರೆದುಕೊಳ್ಳುತ್ತವೆ. ಹೆಂಡತಿಯನ್ನು ಬಿಟ್ಟು ಮತ್ತೊಂದು ಹೆಣ್ಣಿನೊಂದಿಗೆ ವಿವಾಹವಾಗುವ ಪ್ರಕ್ರಿಯೆಯನ್ನು ನಾಯಕಿ ವಿರೋಧಿಸುತ್ತಾಳೆ. ಆ ವಿರೋಧ ಕೇವಲ ಹಳಹಳಿಕೆ, ಅಸಹನೆ, ವೇದನೆಗಳಲ್ಲಿ ನಿಲ್ಲದೇನೇ ಪ್ರತಿಭಟಿಸುವವರೆಗೂ ಮುಂದುವರಿಯುತ್ತದೆ. ಗಂಡನನ್ನು ಕ್ಷಮಿಸದೆ ಆತನನ್ನು ಬಳಿಗೆ ಸೇರಿಸಿಕೊಳ್ಳದೇ ವ್ಯಕ್ತಿತ್ವ ಉಳಿಸಿಕೊಳ್ಳಬೇಕಾದುದನ್ನು ಪ್ರತಿಪಾದಿಸಿದ್ದಾರೆ. ‘ಆಕರ್ಷಣೆ’ ತ್ರಿವೇಣಿ ಅವರ ಪ್ರಮುಖ ಪ್ರಗತಿಪರ ಆಶಯದ ಕತೆಯಾಗಿ ಗಮನ ಸೆಳೆಯುತ್ತದೆ. ಅಲ್ಲಿನ ಸ್ತ್ರೀಯರು ಗಂಡನನ್ನು ದೇವರಾಗಿ ನೋಡದೇ ತನ್ನನ್ನು ಹಿಂಸಿಸುವ ರೀತಿಯನ್ನು ಹೊರಗಟ್ಟುವ, ಬದಲಿಸುವ ರೀತಿಯನ್ನು ಒಪ್ಪಿಕೊಂಡ ವಿಶೇಷತೆಗೆ ಒಳಗಾಗಿದ್ದಾರೆ. ದಾಂಪತ್ಯ ಹಾಗೂ

ಕುಟುಂಬದೊಳಗಿನ ಸಮಸ್ಯೆಗಳು ತ್ರಿವೇಣಿ ಅವರಿಗೆ ಮುಖ್ಯವಾಗಿ ಕಾಡಿವೆ. ಕುಟುಂಬದೊಳಗಿನ ಹೆಣ್ಣಿನ ಬದುಕು ಎದುರಿಸುವ ಗಂಡಿನ ಅಧಿಕಾರಶಾಹಿ ಧೋರಣೆ, ಹಿಂಸೆಯ ಮುಖಗಳನ್ನು ಅನಾವರಣ ಮಾಡುವುದು ಅವರಿಗೆ ಮುಖ್ಯವಾಗಿತ್ತು.

ವಾಣಿ ಅವರೂ ಈ ನೆಲೆಯಲ್ಲಿ ಭಿನ್ನವಾಗಿ ಸಂವೇದಿಸುತ್ತಾರೆ. ಗಂಡ ಇನ್ನೊಬ್ಬಳು ಹೆಣ್ಣಿನೆಡೆಗೆ ಆಕರ್ಷಿತಳಾಗುವ ಸಮಸ್ಯೆ ವಾಣಿ ಅವರನ್ನು ತೀವ್ರವಾಗಿ ಕಾಡಿದೆ. ಆದರೆ ಆ ಪರಿಸ್ಥಿತಿಯ ಕುರಿತು ಅವರು ವ್ಯಥೆ ಅಥವಾ ಸಂಕಟದ ಅನುಭವ ಮಾತ್ರ ಹೆಣ್ಣಿಗೆ ಮಾಡಿಸುವುದಿಲ್ಲ. ಬದಲಾಗಿ ದೂರವಾದ ಗಂಡನಿಗಾಗಿ ಬೇಸರಗೊಳ್ಳುತ್ತಾರೆ. ಆದರೆ ಅವರೇ ಮರಳಿ ಕರೆದಾಗ ಬದುಕಲು ಒಪ್ಪದ ಪ್ರತಿರೋಧ ತೋರುತ್ತಾರೆ. ಅದು ಹೆಣ್ಣಿನೊಂದಿಗೆ ಲಘುವಾಗಿ ವರ್ತಿಸುವ ಪ್ರತಿಕ್ರಿಯೆಯಾಗಿದೆ. ವ್ಯವಸ್ಥೆಗೆ ಕೊಟ್ಟ ಪ್ರತಿಕ್ರಿಯೆಯಾಗಿದೆ. ಆ ಪ್ರತಿಕ್ರಿಯೆ ಪತಿವ್ರತಾ ತತ್ವವನ್ನು ನಿರಾಕರಿಸುವುದಾಗಿದೆ. ಈ ನಿಟ್ಟಿನಲ್ಲಿ 'ತುಂಗಭದ್ರ ಕತೆ' ಪ್ರಾಮುಖ್ಯ ಪಡೆಯುತ್ತದೆ. 'ಪಯಣ' ಕೂಡ ಅದೇ ನೆಲೆಯಲ್ಲಿ ಮುಖ್ಯವಾದ ಕತೆ. ಇಲ್ಲಿ ನಾಯಕಿ ಪ್ರತಿಭಟನೆಯ ಮೂಲಕ ಸ್ವಂತಿಕೆ ಮೆರೆಯುತ್ತಾಳೆ. ಗಂಡಿನ ಸ್ವಾರ್ಥ, ಲೋಲುಪತೆಯನ್ನು ಬಿಡದೆ ಪ್ರಶ್ನಿಸಿ ವೈಚಾರಿಕತೆ ಮೆರೆಯುತ್ತಾಳೆ. ಲಿಂಗ ತರತಮತೆಯ ನಡುವೆ ನರಳುವ ಹೆಣ್ಣು ಇಲ್ಲಿ ಅದರಾಚೆಗೆ ತನ್ನ ಸ್ಥಾನ ಪಡೆಯಲು ತಲೆಎತ್ತಿ ನಿಲ್ಲುವ ಕುರಿತ ಪ್ರಗತಿಪರತೆಗೆ ತೆರೆದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಪ್ರಗತಿಶೀಲ ಕತೆಗಾರ್ತಿಯರಲ್ಲಿ, ಸುಶೀಲಾ ಕೇಪು ಅವರದೂ ಕೂಡಾ ಬಹುಮುಖ್ಯ ಹೆಸರು. ಆಕೆ ಇತರ ಕತೆಗಾರ್ತಿಯರಿಗಿಂತ ಭಿನ್ನವಾಗಿ ಸಂವೇದನೆಯನ್ನು ತೆರೆದಿಟ್ಟು ಹೆಣ್ಣಿನ ಬದುಕಿನ ವಿವಿಧ ಮಜಲುಗಳ ಸಮಸ್ಯೆಗಳು ಅವರನ್ನು ಬಹುವಾಗಿ ಕಾಡಿದ್ದನ್ನು ಅವರ 'ಲೇಖಕನ ಹೆಂಡತಿ ಮತ್ತು ಇತರ ಕತೆಗಳು' ಸಂಕಲನದ ಕತೆಗಳಲ್ಲಿ ಕಾಣಬಹುದು. ಗಂಡ ಹೆಣ್ಣಿನ ಕುರಿತು ತಾಳಿದ ಡಾಂಭಿಕ ನಂಬಿಕೆಯ ಹೇಳಿಕೆ ಹಾಗೂ ಬದುಕಿನ ರೀತಿಯ ನಡುವಿನ ವ್ಯತ್ಯಾಸವನ್ನು ಅವನ ನಡವಳಿಕೆಯನ್ನು ಪರೀಕ್ಷಿಸುವ ಮೂಲಕ ತೆರೆದಿಡಲಾಗಿದೆ. ಆದರೆ ಹೆಣ್ಣೊಬ್ಬಳ ಪ್ರಶ್ನಿಸುವಿಕೆ, ಗಂಡನ ತಾತ್ವಿಕತೆ ಹಾಗೂ ಬದುಕಿನ ರೀತಿಯ ವಿರೋಧಾಭಾಸಗಳನ್ನು ತೆರೆದಿಡುವಲ್ಲಿ ಪ್ರಗತಿಪರತೆಯ ಛಾಯೆ ಪ್ರಖರಗೊಂಡಿರುವುದು ಸ್ಪಷ್ಟವಾಗುತ್ತದೆ. ಹೆಣ್ಣಿನ ಹೆಣ್ತನದ ಮೂಲಕ ಕಟ್ಟಿಹಾಕಲಾದ ಆಕೆಯ ಪ್ರಭಾವವನ್ನು ಆಕೆ ಕಳಚಿಕೊಳ್ಳುವುದು ಇಲ್ಲಿ ತಿಳಿದುಬರುತ್ತದೆ.

ಮಾಸ್ತಿ ಅವರೂ ಕೂಡ ಹೆಣ್ಣಿಗೆ ಅಂಥ ಶಕ್ತಿಯನ್ನು ಕೊಡುತ್ತಾರೆ. ಆದರೆ ಅದು ಸಾಂಪ್ರದಾಯಕ ಬದುಕನ್ನು ಬದುಕುತ್ತಾ ಹೋದಾಗಲೂ ಹೆಣ್ಣಿಗೆ ಆದ ಅನ್ಯಾಯದ ಪರಮಾವಧಿಯ ಸಂದರ್ಭವನ್ನು ಮಾತ್ರ ಪ್ರತಿಭಟಿಸುವ ಅವಕಾಶ ಕೊಡುತ್ತಾರೆ. ಅಲ್ಲಿ ಗಂಡಿನ ಶೋಷಣೆಯ ಅರಿವಾಗುತ್ತಿದ್ದಂತೆಯೇ ಅದನ್ನು ಪ್ರತಿಭಟಿಸುವುದು ನಡೆಯುವುದಿಲ್ಲ. ಆದರೆ ಸಹನೆಯ ಕಟ್ಟೆ ಒಡೆಯುವ ಬಳಿಕ ಗಂಡನ ವರ್ತನೆಯನ್ನು ವಿರೋಧಿಸುವ, ಪ್ರಶ್ನಿಸುವ ಹಾಗೂ

ಪ್ರತಿಭಟಿಸುವ ಅವಕಾಶ ಕೊಡಲಾಗಿದೆ. ಆ ಪ್ರತಿಭಟನೆಯ ಸ್ವಭಾವದಿಂದ ಗಂಡನ ಹೆಣ ನೋಡಲೂ ಅಸಹ್ಯ ಪಟ್ಟು ಮತ್ತು ತಾಳಿಕಿತ್ತೆಸೆಯುವವರೆಗೂ ಚೆನ್ನಮ್ಮ ಕತೆಯ ಚೆನ್ನಮ್ಮ ಮುಂದುವರಿಯುತ್ತಾಳೆ.

ಮಾಸ್ತಿಯವರ ಕತೆಗಳ ಸ್ತ್ರೀಯರು ಹಾಗೂ ಪ್ರಗತಿಶೀಲ ಪಂಥದ ಕತೆಗಾರ್ತಿಯರ ಕತೆಗಳಲ್ಲಿನ ಸ್ತ್ರೀಯರು ಪ್ರತಿಪಾದಿಸುವ ಮೌಲ್ಯಗಳಲ್ಲಿ ವ್ಯತ್ಯಾಸವಿದೆ. ಮಾಸ್ತಿಯವರ ಕತೆಗಳಲ್ಲಿನ ಬದುಕಿನ ಹರಹು ಪ್ರಗತಿಶೀಲರನ್ನು ವ್ಯಾಪಿಸಿಕೊಂಡಿಲ್ಲ. ದಾಂಪತ್ಯ ಗಂಡು, ಹೆಣ್ಣಿನ ನಡುವಿನ ಗೊಂದಲ, ಅಸಮಾಧಾನಗಳು ಪ್ರಗತಿಶೀಲ ಕತೆಗಳಲ್ಲಿ ತೆರೆದುಕೊಂಡಿವೆ. ಆದರೆ ಮಾಸ್ತಿಯವರ ಸ್ತ್ರೀ ಪಾತ್ರ ವಿಭಿನ್ನ ಮುಖಗಳು ಪ್ರಗತಿಶೀಲರಲ್ಲಿ ಕಾಣದೇ ಹೊದರೂ ಕೂಡ ಸಿದ್ಧಸಾಂಪ್ರದಾಯಕ ನೆಲೆಯ ಹೆಣ್ಣಿನ ಸ್ವಭಾವ ಬದಲಾವಣೆಗೆ ಒಳಗಾಗಿ ಗಂಡಿನ ಧಮನ ನೀತಿಯಿಂದ ಪಾರಾಗುವ ಮಟ್ಟಿಗೆ ತನ್ನನ್ನು ರಕ್ಷಿಸಿಕೊಳ್ಳುವಲ್ಲಿ ಸಿದ್ಧಗೊಂಡದ್ದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ.

ನವ್ಯರ ಆಂತರಂಗಿಕ ತುಮುಲದಲ್ಲಿ

ಇದುವರೆಗಿನ ಸಾಂಪ್ರದಾಯಿಕ ಮೌಲ್ಯಗಳ ಪಾಲನೆಯಲ್ಲಿ ಹುದುಗಿದ್ದ ನವೋದಯ ಹಾಗೂ ಪ್ರಗತಿ ಶೀಲರ ಸ್ತ್ರೀಯರಿಗಿಂತ ಭಿನ್ನವಾಗಿ ನವ್ಯದ ಸಂದರ್ಭದ ಸ್ತ್ರೀಯರು ಬದುಕಿನ ವಿವಿಧ ಮಜಲುಗಳನ್ನು ಶೋಧಿಸತೊಡಗಿದವರು. ಇಲ್ಲಿನ ಬರಹಗಾರರ ದೃಷ್ಟಿ ಭಿನ್ನವಾದುದರಿಂದಲೇ ಇಲ್ಲಿ ಸ್ತ್ರೀ ಜೀವಂತ ವ್ಯಕ್ತಿಯಾಗಿ ನಳನಳಿಸುತ್ತಾರೆ. ಹೆಣ್ಣನ್ನು ಕಾಣುವ ಕಣ್ಣು ಸಂಪೂರ್ಣವಾಗಿ ಬದಲಾವಣೆಗೆ ಒಳಗಾದುದನ್ನು ನವ್ಯದ ಸಂದರ್ಭದಲ್ಲಿ ಗುರುತಿಸಬಹುದಾಗಿದೆ. ಸಮಾಜದ ಹಿನ್ನೆಲೆಯಲ್ಲಿಯೇ ಹೆಣ್ಣನ್ನು ಕಾಣುವ ನವ್ಯ ಸಾಹಿತ್ಯ ಸಮಸ್ಯೆಗಳನ್ನು ವಿಶ್ಲೇಷಿಸುವ ನೆಲೆ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ಪರಂಪರೆ ಹಾಗೂ ಅದರ ಬಗೆಗಿನ ವಿರೋಧಗಳ ಹಿನ್ನೆಲೆಯಲ್ಲಿ ಕೂಡ ನವ್ಯ ಮುಖ್ಯದ್ದಾಗುತ್ತದೆ. ನವ್ಯವೂ ಪರಂಪರೆ ಹಾಗೂ ಸಂಪ್ರದಾಯನನ್ನು ವಿರೋಧಿಸುತ್ತದೆ. ಅದನ್ನು ಪ್ರಶ್ನಿಸುತ್ತ, ವಿಮರ್ಶಿಸುತ್ತ ತನ್ನದೇ ಆದ ಆಲೋಚನೆಯ ಹಿನ್ನೆಲೆಯಲ್ಲಿ ಹೆಣ್ಣಿನ ಬದುಕನ್ನು ವಿಶ್ಲೇಷಿಸುತ್ತದೆ. ಈ ನೆಲೆಯಲ್ಲಿ ಕಥಾಪ್ರವಾಹದ ದಿಕ್ಕನ್ನು ಬದಲಾಯಿಸಿದವರಲ್ಲಿ ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ರಾಮಚಂದ್ರ ಶರ್ಮ, ಕೆ. ಸದಾಶಿವ, ರಾಘವ, ಲಂಕೇಶ್ ಮೊದಲಾದವರು ಮುಖ್ಯರಾಗುತ್ತಾರೆ.

ನವ್ಯದ ಕತೆಗಾರರ ಪ್ರಮುಖ ವಾಹಿನಿಯಲ್ಲಿ ಕಥಾ ಸಾಹಿತ್ಯದ ಹೊಸ ಹುಟ್ಟಿನ ಪ್ರವಾಹಕ್ಕೆ ಕಾರಣರಾದವರು ಯು. ಆರ್. ಅನಂತಮೂರ್ತಿ ಅವರು. ಕತೆ ಬರೆಯುವ ತಂತ್ರಗಾರಿಕೆಯಲ್ಲಿ ಇರಬಹುದು, ಬಳಸಿರುವ ಪಾತ್ರಗಳು, ತೆರೆದಿಟ್ಟ ಸಮಸ್ಯೆಗಳ ನೆಲೆಯಿಂದ ಇರಬಹುದು ಅಲ್ಲಿ

ಬದಲಾವಣೆಯನ್ನು ತಂದ ಹರಿಕಾರರು ಅವರು. ನವ್ಯದ ಪ್ರಧಾನ ಲಕ್ಷಣವಾದ ಕಾಮದ ಕುರಿತ ವಿವರ, ಸಂಕೇತ, ಪ್ರತಿಭಟನೆಗಳ ಮೂಲಕವೇ ಸ್ತ್ರೀಯ ಬದುಕನ್ನು ಅಲ್ಲಿ ನೋಡುತ್ತಾ ಬಂದಿದ್ದಾರೆ. ಬ್ರಾಹ್ಮಣ ಕೇಂದ್ರಿತ ವಲಯದ ಬದುಕಿನೊಂದಿಗೇ ಅಲ್ಲಿನ ಸ್ತ್ರೀಯರು ಪ್ರವೇಶ ಪಡೆಯುವುದಲ್ಲದೆ ಅವರೇ ಕತೆಗಳಾದ್ಯಂತ ಉಳಿದುಕೊಳ್ಳುತ್ತಾರೆ. ಅವರ ಸಮಸ್ಯೆ, ಜೀವನ ರೀತಿಯ ವಿವರಗಳ ಸುತ್ತುವರಿಕೆಯಿಂದ ಇಲ್ಲಿ ಕೆಳವರ್ಗದ ಹೆಣ್ಣುಗಳ ಬದುಕಿನ ಲೋಕ ತೆರೆದುಕೊಳ್ಳುವುದಿಲ್ಲ. ಅನಂತಮೂರ್ತಿ ಬ್ರಾಹ್ಮಣ ವಲಯದ ಹೆಣ್ಣಿನ ಮೂಲಕವೇ ಬದುಕಿನ ಮಜಲುಗಳನ್ನು ಕಾಣಿಸ ಹೊರಡುತ್ತಾರೆ. ಇಲ್ಲಿ ಬರುವ ಬ್ರಾಹ್ಮಣ ಸ್ತ್ರೀಯರು ಬದುಕನ್ನು ಸಾಗಿಸುವ ನಿಟ್ಟಿನಲ್ಲಿ ಮುಖ್ಯರಾದವರಾಗಿ ಕಾಣಿಸಿಕೊಳ್ಳುತ್ತಾರೆ. ಕೆಳವರ್ಗದವರ ಬದುಕಿನ ಮುಖಗಳ ಚಿತ್ರಣವೂ ಕತೆಗಳಲ್ಲಿ ಸಾಕಷ್ಟಿವೆ. ಕತೆಗಳಲ್ಲಿ ಕಾಣಿಸಿಕೊಳ್ಳುವ ಅಬ್ರಾಹ್ಮಣ ವರ್ಗದ ಮಹಿಳೆಯರು ಬ್ರಾಹ್ಮಣ ಗಂಡಸರ ಕಾಮತೀಟೆ ಪೂರೈಸುವ ಸದೃಢ ದೇಹದವರಾಗಿ ಬಳಕೆಯಾಗುವುದು ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಬ್ರಾಹ್ಮಣ ಹಾಗೂ ಅಬ್ರಾಹ್ಮಣ ವರ್ಗದ ಮಹಿಳೆಯರ ವರ್ಣನೆಯಲ್ಲಿ ಅಸಮಾನತೆ ಇರುವುದನ್ನೂ ತೆರೆದಿಡುತ್ತಾರೆ. ಅಬ್ರಾಹ್ಮಣ ವರ್ಗದ ಮಹಿಳೆಯರು ಕುಟುಂಬ ನಡೆಸುವಲ್ಲಿ ಬಹುಮುಖ್ಯರಾಗುತ್ತಾರೆ. ಆದರೆ ಬ್ರಾಹ್ಮಣ ವರ್ಗದ ಮಹಿಳೆಯರು ಆ ನೆಲೆಯಲ್ಲಿ ಮುಖ್ಯವಾಗದೇ ಉಳಿದು ಬದುಕುವುದು ಅಸಮತೋಲನವನ್ನು ತೋರಿಸಿಕೊಡುತ್ತದೆ. ಆದರೆ ಅಲ್ಲಿಯೂ ಬ್ರಾಹ್ಮಣ ಅಬ್ರಾಹ್ಮಣ ಮಹಿಳೆಯರು ಕೇವಲ ಕಷ್ಟ ಅನುಭವಿಸುವುದಕ್ಕೆ ಸೀಮಿತವಾಗಿ ಉಳಿದುಬಿಡುವುದರ ವಾಸ್ತವ ಚಿತ್ರಣವಿದೆ.

ಕತೆಗಳಲ್ಲಿ ಬರುವ ಲೈಂಗಿಕಾಸಕ್ತಿ, ಅದಕ್ಕೆ ಬಳಕೆಯಾಗುವ ಹೆಣ್ಣು ಹಾಗೂ ಅವಳನ್ನು ಬಳಸುವ ಗಂಡು ಇಲ್ಲಿ ಪರಿಚಿತರಾಗುವ ಸಂದರ್ಭಗಳೇ ತೀರಾ ಹೊಸತನದ್ದು. ಅದು ತನಕ ಮುಚ್ಚಿಡಲಾಗಿದ್ದ ಲೈಂಗಿಕ ವಿಚಾರಗಳಿಗೆ ಇಲ್ಲಿ ತೆರೆ ಸರಿಸಲಾಗಿದೆ. ಆ ನಿಟ್ಟಿನಲ್ಲಿಯೇ ಹೆಣ್ಣಿನ ದೇಹದ ಕುರಿತು ಅತಿಯಾದ ವಿಶ್ಲೇಷಣೆ ನಡೆಯುತ್ತದೆ. ಅಲ್ಲಿ ಅದು ಜಾನಪದ ಲೋಕದ ಸಂಬಂಧಕ್ಕೆ ಹತ್ತಿರವಾಗಿ ಮಾನವ ಸಹಜ ಕ್ರಿಯೆಯಾಗಿ ಕಾಣಲಾಗಿದೆ. ಮಾಸ್ತಿ ಅದನ್ನು ಪರಿಚಯಿಸುವುದು ಅವೈದಿಕ ಕುಟುಂಬದವರ ನಡುವೆಯೇ. ಆದರೆ ನವ್ಯದ ಅನಂತ ಮೂರ್ತಿಯವರು ಅದನ್ನು ಸೀಮಿತಗೊಳಿಸುವುದಿಲ್ಲ. ಒಂದು ಸಂಸ್ಕೃತಿಯ ಅಂಥ ನಂಬಿಕೆಗಳಾಚೆಗಿನ ಬದುಕಿನ ಸಾಧ್ಯತೆಗಳನ್ನು ತೆರೆದಿಡುವುದಕ್ಕೆ ಹೊರಡುವುದು ನವ್ಯದ ಪ್ರಯತ್ನವಾಗುತ್ತದೆ. ಆದರೆ ಅದರ ಮಧ್ಯೆಯೇ ಹೆಣ್ಣು ಕೇವಲ ಗಂಡಿನ ಭೋಗಕ್ಕೆ ಮಾತ್ರ ಒಳಗಾಗುವವರಾಗಿ ಬಿಡುವುದನ್ನು ಪರಿಚಯಿಸುತ್ತದೆ. ದೇಹ ಹಾಗೂ ಆತ್ಮದ ವಿಭಜನೆಯಿಂದ ಹೆಣ್ಣು ಅಪಾಯಕಾರಿ ನೆಲೆ ಮುಟ್ಟಿದ್ದಾಳೆ ಎಂದು ಭಾವಿಸಿ ಅವೆರಡನ್ನೂ ಒಂದೇ ಚೌಕಟ್ಟಿನೊಳಗೆ ಸೇರಿಕೊಂಡು ಹೆಣ್ಣನ್ನು ನೋಡಬೇಕು ಎಂಬ ಹೊಸ ದೃಷ್ಟಿ ಕೋನವಿದ್ದರೂ ಮರಳಿ ಹೆಣ್ಣನ್ನು ಕೇವಲ ದೇಹ ಭೋಗಕ್ಕೆ ಸೀಮಿತಗೊಳಿಸುವ ಅಪಾಯಕಾರಿ ಬೆಳವಣಿಗೆ ಗಳು 'ಕ್ಲಿಪ್ ಜಾಯಿಂಟ್'ದಂಥ ಕತೆಗಳಲ್ಲಿ ಸಮರ್ಥವಾಗಿ

ತೆರೆದುಕೊಳ್ಳುತ್ತವೆ. ಈ ಹಿನ್ನೆಲೆಯಿಂದಲೇ ಕುಟುಂಬದೊಳಗಿನ ಸ್ತ್ರೀಯರೂ ಕುಟುಂಬ ಕಟ್ಟುವ ನೆಲೆಯಲ್ಲಿ ಪರಿಚಿತರಾಗುತ್ತಾರೆ. ಮನೆಯೊಳಗೆ ಹೆಂಡತಿಯಾಗಿ ಜೀವನ ನಡೆಸುವ ಹೆಣ್ಣು ಅನಂತ ಮೂರ್ತಿ ಅವರಲ್ಲಿ ಬುದ್ಧಿಹೀನೆಯಾಗಿರುತ್ತಾಳೆ. ಗಂಡನನ್ನು ಸಮಾಧಾನಪಡಿಸುವ ವ್ಯಕ್ತಿತ್ವ ಕಳೆದುಕೊಂಡವಳಾಗುತ್ತಾಳೆ. ಆದುದರಿಂದಲೇ ಅಲ್ಲಿ ವೇಶ್ಯೆ ಪ್ರಾಧಾನ್ಯ ಪಡೆಯುತ್ತಾಳೆ. ಪುರುಷ ಪ್ರಧಾನವಾದ ಬದುಕಿನ ನೆಲೆಯಲ್ಲಿ ಪುರುಷ ತೆಗೆದುಕೊಂಡ ತೀರ್ಮಾನವೇ ಅಂತಿಮವಾದುದರಿಂದ ಅದರಿಂದ ಹೆಣ್ಣು ಜಾರಿಕೊಳ್ಳುವಂತೆಯೇ ಇಲ್ಲ. ಮತ್ತು ಅದು ಮುಂದಿನ ಜನಾಂಗಕ್ಕೂ ಕೂಡ ಬಳುವಳಿಯಾಗಿ ಮುಂದುವರಿಯುತ್ತದೆ ಎಂಬುದನ್ನು ಸಾದರ ಪಡಿಸುತ್ತದೆ. ಆ ಆಲೋಚನೆಗಳ ನಡುವೆ ಹೆಣ್ಣು ತನ್ನ ಸ್ವಂತಿಕೆಯನ್ನು ಇಲ್ಲಿ ಕಳೆದುಕೊಂಡದ್ದನ್ನು ಕಾಣುತ್ತೇವೆ. ಕುಟುಂಬದ ಹೆಣ್ಣು ಮನೆಯ ಪುರುಷರಿಂದ ದೊರಕುವ ಸುಖ ನೆಮ್ಮದಿ ಏನೆಂದು ಅರಿಯದೇ ಹೋದರೆ ಇನ್ನೊಂದು ನೆಲೆಯಿಂದ ಶೂದ್ರ ಹೆಣ್ಣನ್ನು ಅವರಿಬ್ಬರೂ ಅವಳ ಇಷ್ಟ, ಒಪ್ಪಿಗೆ ಇಲ್ಲದೆ ಬಳಸಿಕೊಳ್ಳುವಲ್ಲಿ ಅವಳ ಮನಸ್ಸಿಗೆ ಬೆಲೆ ಕೊಡದೇ ಇರುವ ಸ್ಥಿತಿಯನ್ನು ಮುಂದಿಡುತ್ತದೆ. ಈ ನಿಟ್ಟಿನಲ್ಲಿ 'ಕಾರ್ತಿಕ' ಕತೆ ಮುಖ್ಯದ್ದಾಗುತ್ತದೆ. ದಾಂಪತ್ಯದ ಎಲ್ಲ ಮುಖಗಳನ್ನು ತೆರೆದಿಡುವ 'ಪ್ರಶ್ನೆ' ಕತೆ ಸಮಾನತೆಯೆಡೆಗೆ ತುಡಿಯುತ್ತದೆ.

ಬ್ರಾಹ್ಮಣ ಸಂಸ್ಕೃತಿಯ ಆಚಾರ ವಿಚಾರಗಳನ್ನು ಮುಂದಿಡುವ ನೆಲೆಯಲ್ಲಿ ಅನಂತಮೂರ್ತಿ ಅವರ 'ಘಟ ಶ್ರಾದ್ಧ' ಕತೆ ಪ್ರಾಮುಖ್ಯ ಪಡೆಯುತ್ತದೆ. ಅಲ್ಲಿನ ಯಮುನಕ್ಕ ವಿಧವೆ ಆದರೂ ಕಾಮದ ಪ್ರವಾಹಕ್ಕೆ ಕೊಚ್ಚಿಹೋಗಿ ಬಸುರಾಗುವುದು ಬ್ರಾಹ್ಮಣ ಸಮಾಜದೊಳಗೆ ಅಕ್ಷಮ್ಯ ಅಪರಾಧವಾಗುತ್ತದೆ. ಗರ್ಭಪಾತ ಮಾಡಿಸಿಕೊಳ್ಳುವ ಆಕೆ ಬಹಿಷ್ಕಾರಕ್ಕೆ ಒಳಗಾಗಿ 'ಘಟ ಶ್ರಾದ್ಧ' ಮಾಡಿಸಿಕೊಳ್ಳಬೇಕಾದದ್ದು ಅರ್ಥಹೀನ ಆಚರಣೆಗಳನ್ನು ಮುಂದಿಡುವುದಾಗಿದೆ. ಹೆಣ್ಣೊಬ್ಬಳು ಕ್ರೂರ ಆಚರಣೆಗೆ ಒಳಗಾಗಿ ತನ್ನನ್ನು ತಾನು ನಿಗ್ರಹಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುದು ಇಲ್ಲಿ ಪ್ರತಿನಿಧಿತವಾಗಿದೆ. ಅರ್ಥಹೀನ ಆಚರಣೆಗಳು ಇಲ್ಲಿ ಪ್ರಶ್ನಿಸಲಾಗದ ಹಾಗೂ ಮುರಿದು ಬೀಳುವ ರೀತಿಯಿಂದ ಈ ಕತೆ ಪ್ರಾಮುಖ್ಯ ಪಡೆದುಕೊಳ್ಳುತ್ತದೆ. ಇದಕ್ಕಿಂತ ಕೊಂಚ ಭಿನ್ನವಾಗಿ ಸಂಪ್ರದಾಯದ ಎಲ್ಲ ಆಚರಣೆಗಳನ್ನು ಕೊಡವಿ ಹೊಸತನ್ನು ಅರಸುತ್ತಾ ಹಳೆ ಹಾಗೂ ಹೊಸತರ ಅಂಚಿನಲ್ಲಿ ನಿಲ್ಲುವ ಮಂದಾಕಿನಿ ಶಾಂತಿನಾಥ ದೇಸಾಯಿ ಅವರ 'ಕ್ಷಿತಿಜ' ಕತೆಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಅದು ಸ್ಥಿರೀಕೃತ ಸಂಸ್ಕೃತಿಯನ್ನು ಮುರಿದು ಹೊಸತೇ ಆದ ಬದುಕಿನ ನೆಲೆಗಟ್ಟನ್ನು ಅರಸುತ್ತಾ ಸ್ಥಾಪಿಸುವುದಕ್ಕೆ ಹೊರಡುತ್ತದೆ. ಅಲ್ಲಿ ಉತ್ಸಾಹವಿದೆ, ಕಾತರವಿದೆ. ಆಕೆ ಹಡಗನ್ನು ಏರಿ ವಿದೇಶದೆಡೆಗೆ ಪಯಣಿಸುವಲ್ಲೇ ದೇಶೀಯ ಜಡ ಸಂಸ್ಕೃತಿಯ ಬಂಧನವನ್ನು ತೊರೆದು ಹೊಸತನ್ನು ಸ್ವೀಕರಿಸುವಲ್ಲಿ ಇರುವ ಉತ್ಸುಕತೆಯನ್ನು ಕಾಣುತ್ತೇವೆ.

ಸಂಕ್ರಮಣ ಸ್ಥಿತಿಗೆ ಬಂದು ನಿಂತಿರುವ ಒಂದು ಮನಸ್ಸಿನ ಏಕಾಂಗಿತನಕ್ಕೆ, ಉದ್ವೇಗಕ್ಕೆ, ಒಂದುರೀತಿಯ ಭಯಕ್ಕೆ ಸಿದ್ಧಪಡಿಸಿದ ಭೂಮಿಕೆ ಅದು. ಒಟ್ಟಿನಲ್ಲಿ ಕಥಾ ಕಲ್ಪಲತೆಯನ್ನು ಹೊಂದಿರುವ

ಚಿತ್ರಣ ಕ್ಷಿತಿಜದಲ್ಲಿದೆ ಎಂದು ಹುಲಿಶೇಖರ್ ಕಂಡರಿಸಿದ್ದಾರೆ.[೪]

ನವ್ಯದ ಸ್ತ್ರೀಯರ ನಿರ್ಭೀತಿ, ನೇರವಾದ - ನುಡಿಗಳ ಅಭಿವ್ಯಕ್ತಿ ಕೊಂಚ ಮಟ್ಟಿಗೆ ನವೋದಯದ ಕೆಳವರ್ಗದ ಸ್ತ್ರೀಯರನ್ನು ನೆನಪಿಸುತ್ತದೆ. ಆದ್ದರಿಂದಲೇ ದೇವಿಯಂಥ ಉದಾತ್ತ ಪಾತ್ರಗಳನ್ನು ಪರಿಚಯಿಸುವುದಕ್ಕೆ ಲಂಕೇಶರಿಗೆ ಸಾಧ್ಯವಾಗಿದೆ. ಆದರೆ ' ರೊಟ್ಟಿ' ಕತೆಯಂತೂ ಹೆಣ್ಣಿನ ಅಸಹಾಯಕತೆ, ನೋವು, ಹತಾಶೆಗಳನ್ನು ಕರಾಳ ಮುಖವನ್ನು ಪ್ರತಿನಿಧಿಸುವುದಾಗಿದೆ. 'ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ'ಯಲ್ಲಿ ಹೆಣ್ಣೊಬ್ಬಳು ಮಗನ ವಿದ್ಯಾಭ್ಯಾಸಕ್ಕಾಗಿ ಎಲ್ಲವನ್ನೂ ಕಳೆದುಕೊಳ್ಳುತ್ತಾಳೆ. ಎಲ್ಲ ಚೌಕಟ್ಟುಗಳನ್ನೂ ಧಿಕ್ಕರಿಸುತ್ತಾಳೆ. ಲಂಕೇಶರಿಗಿಂತ ಭಿನ್ನ ನೆಲೆಯಲ್ಲಿ ಸ್ತ್ರೀಯರು ತೆರೆದುಕೊಳ್ಳುವುದು ತೇಜಸ್ವಿಯರ 'ಕಿರಗೂರಿನ ಗಯ್ಯಾಳಿಗಳು' ಸಂಕಲನದಲ್ಲಿ ಅಲ್ಲಿನ ವಿಭಿನ್ನ ನೆಲೆಯ ಎದೆಗಾರಿಕೆಯ ಮಹಿಳೆಯರು ಬಿತ್ತರಗೊಂಡಿದ್ದಾರೆ. ಅಲ್ಲಿನ ಗಟ್ಟಿಗಿತ್ತಿ ಹೆಣ್ಮಕ್ಕಳು ತಮ್ಮ ಶೋಷಣೆಗೆ ಸವಾಲೆಸೆಯುತ್ತಾರೆ. ಗಂಡಂದಿರ ಅಸಹಾಯಕ ಲೋಕದ ವಿರುದ್ಧ ಸಿಡಿದೇಳುವ ಇಲ್ಲಿನ ಸ್ತ್ರೀಯರು ಕತಾಲೋಕದೊಳಗೆ ವಿಶಿಷ್ಟಮೈಲಿಗಲ್ಲುಗಳಾಗಿದ್ದಾರೆ. ಈ ಇಬ್ಬರೂ ಕತೆಗಾರರ ಕತೆಗಳಲ್ಲಿ ಕಾಣಿಸಿಕೊಂಡ ಸ್ತ್ರೀಯರ ಚಾಣಾಕ್ಷತೆ, ಜೀವಂತಿಕೆ, ಸ್ವತಂತ್ರ ಅಭಿವ್ಯಕ್ತಿ, ಧೈರ್ಯಗಳೆಲ್ಲವೂ ಅನನ್ಯತೆಯನ್ನು ಪಡೆದುಕೊಂಡು ನವ್ಯಕತಾ ಮಾದರಿಯಲ್ಲಿ ವಿಶಿಷ್ಟ ಸ್ಥಾನಗಳನ್ನು ಪಡೆದಿದ್ದಾರೆ. ಅವರ ಜೀವಂತಿಕೆ, ಪ್ರತಿಭಟನೆಗಳು ಪುರುಷಕೇಂದ್ರಿತ ಆಲೋಚನೆಯ ಚೌಕಟ್ಟನ್ನು ಮುರಿಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿವೆ.

ಟಿ. ಜಿ. ರಾಘವ ಅವರ ಕತೆಗಳಲ್ಲಿ ಸ್ತ್ರೀಯರು ಪುರುಷ ಪ್ರಧಾನ ವ್ಯವಸ್ಥೆಯ ನೆಲೆಯೊಳಗೆ, ಅವರ ಅಧೀನದಲ್ಲಿಯೇ ಉಸಿರಾಡುವವರಾಗಿ ಕಾಣಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ನೆಲೆಯೊಳಗೆ ಬೆಳೆದುಬಂದ ಹೆಣ್ಣು ಇಲ್ಲಿ ಗಂಡಿನ ಭೋಗದ ವಸ್ತುವಾಗಿ ಕಾಣಿಸಿಕೊಳ್ಳುವಂತೆ ಪ್ರಸ್ತುತಪಡಿಸುತ್ತಾರೆ. ಹೆಣ್ಣೆಂದರೆ ಹೀಗೆ, ಇಷ್ಟು ಎಂದು ನಂಬಿದ ಮೌಲ್ಯವೊಂದನ್ನು ಬದುಕಿಸುವ ಕೆಲಸವನ್ನು ರಾಘವ ಅವರು ಮಾಡಿರುವುದನ್ನು ಅವರ ಕತೆಗಳ ಸ್ತ್ರೀಯರಿಂದ ತಿಳಿದುಕೊಳ್ಳಬಹುದಾಗಿದೆ. ' ಶ್ರಾದ್ಧ' ಕತೆಯಲ್ಲಿ ಪಿತೃಪ್ರಧಾನ ಮೌಲ್ಯದ ಕೈಕೆಳಗೆ ಗಂಡನಿಂದ ನರಳುವ ತಾಯಿ ಕಾಣಿಸುತ್ತಾಳೆ.

'ಮನುಷ್ಯ ಸತ್ತೊಡನೆ ಜನ ಏಕೆ ಅವನನ್ನು ಕ್ಷಮಿಸಿಬಿಡುತ್ತಾರೆ? ಏಕೆ? ಇಷ್ಟೆಲ್ಲ ನಮ್ಮ ಮೇಲೆ ದ್ವೇಷ ಕಾರೋ ಇವರಿಗೆ ಸಾಯೋವಾಗ ಬಾಯಲ್ಲಿ ಒಂದು ತೊಟ್ಟು ನೀರು ಹಾಕೋರು ಯಾರೂ ಇರೋದಿಲ್ಲ. ನೋಡ್ತಿರು' ಎಂದು ಅಮ್ಮ ಹೇಳುವಲ್ಲಿ ಅಪ್ಪನ ಶೋಷಣೆಗೆ ತೋರಿಸುವ ಹಳಹಳಿಕೆಯೇ ಉತ್ತರವಾಗಿದೆ. ಸಾಂಪ್ರದಾಯಕ ನೆಲೆಯನ್ನು ಮುರಿದು ಹೊರಡುವ ಮಗ,

---

೪ ಪು.೧೮೬ ಶಾಂತಿನಾಥ ದೇಸಾಯಿ ಅವರ ಕ್ಷಿತಿಜ , ಅನ್ಯ ಜ್ಞಾನಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ ಸಂ.ಕೆ.ವಿ.ನಾರಾಯಣ, ಬಿ.ಕೃಷ್ಣಮೂರ್ತಿ, ೧೯೯೨

ಗಂಡನಿದ್ದಾಗ ತಿಂದೇ ಜೀವನ ಸಾಗಿಸಿದ ತಾಯಿಯ ಕ್ರಿಯಾಚರಣೆಗಳ ನಡುವೆ ಆತನ ವಿಚಾರಗಳು ವಿಸ್ತಾರವಾಗಿಯೇ ಉಳಿದುಬಿಡುತ್ತವೆ. ತಾಯಿ ಸತ್ತಾಗ ಮಗ ಉತ್ಸುಕವಾಗಿ ಕ್ರಿಯಾಚರಣೆಗಳನ್ನು ಮಾಡಹೊರಡುವುದು ಅಂಥ ಸಂಪ್ರದಾಯವನ್ನು ಉಳಿಸುವ ನಿಟ್ಟಿನಿಂದ.

ಶಾಂತಿನಾಥ ದೇಸಾಯಿಯವರ 'ಕ್ಷಿತಿಜ' ದಲ್ಲಿ ಮಂದಾಕಿನಿ ದೇಶೀ ತಾತ್ವಿಕತೆಯನ್ನು ಬಿಟ್ಟು ಮುಂದುವರಿದಲ್ಲಿ ಅಲ್ಲಿನ ಜಳ್ಳನ್ನು, ಪ್ರಗತಿವಿರೋಧಿಯಾದ ತತ್ವಗಳನ್ನು ಮುರಿಯುವುದು ಆಕೆಗೆ ಮುಖ್ಯವಾಗಿದೆ. ಜೀವನ ಉಪಭೋಗಿಸಬೇಕೆಂಬ ಮುದುಕನ ಮಾತಿಗೆ 'ಅಂದರೆ ಡಾನ್ಸ್, ಡ್ರಿಂಕ್ಸ್ ಮತ್ತು ಲವ್ ತಾನೇ ' ಎಂದು ನಕ್ಕು ಬಿಡುವುದು, ' ನೋಡಿ, ನಾನು ಇಂಡಿಯನ್ ಹೆಣ್ಣು, ಹಿಂದೂ ಹೆಂಗಸು. ನಾವು ಈಗ ತಾನೇ ಅಡಿಗೆ ಮನೆಯಿಂದ ಹೊರಗೆ ಬಂದಿದ್ದೇವೆ. ನಮಗೆ ಒಂದು ಹೊಸ ವಿಶ್ವ, ಬರಿ ಪುಸ್ತಕ ಪಿಕ್ಚರ್‌ಗಳಲ್ಲಿ ಕಲ್ಪನೆಗಳಲ್ಲಿ ವಿಶ್ವ ಎಂಬಲ್ಲಿ ಹೆಣ್ಣು ಆಗಷ್ಟೇ ಹೊರಲೋಕಕ್ಕೆ ಕಾಲಿಡಲಾರಂಭಿಸಿದ ವಾಸ್ತವದ ಪರಿಚಯವಿದೆ ಎನ್ನುತ್ತಾಳೆ. ಲೈಂಗಿಕ ಸ್ವೇಚ್ಛಾಚಾರ, ಬಲಾತ್ಕಾರಗಳಿಗೆ ಕೂಡ ಬಗ್ಗದ ಆಕೆ ಕೊನೆ ಕೊನೆಗೆ ತನ್ನೆಲ್ಲ ಅಭಿಪ್ರಾಯಗಳನ್ನು ಬದಲಾಯಿಸುತ್ತ ಬಂದದ್ದು ಆಕೆಯ ಹೊರ ಪ್ರಪಂಚದ ಅನುಭವದ ವಿಚಾರವಾಗಿಯೇ ಎಂಬುದಾಗಿ ಅರ್ಥೈಸಿಕೊಳ್ಳಬಹುದು. ಎಲ್ಲವನ್ನೂ ಆಕೆ 'ಇಂಟರೆಸ್ಟ್' ಆಗಿ ತೆಗೆದುಕೊಳ್ಳುವಲ್ಲಿಗೆ ಬರುವುದು ಬದಲಾವಣೆಯ ಸ್ಪಷ್ಟ ಚಿತ್ರಣವಾಗಿದೆ. ಹೊಸ ಬದುಕು, ಆಲೋಚನೆಗಳಿಗೆ ಹೆಣ್ಣೊಬ್ಬಳು ತೆರೆದುಕೊಳ್ಳುವ ನೆಲೆಯಲ್ಲಿ 'ಕ್ಷಿತಿಜ' ಕತೆ ಮುಖ್ಯದ್ದಾಗುತ್ತದೆ. ಬದುಕು ಹೊಸ ಸಾಧ್ಯತೆಗಳತ್ತ ತೆರೆದುಕೊಳ್ಳುವುದನ್ನು ಇಲ್ಲಿ ಕಾಣ ಬಹುದಾಗಿದೆ.

ಕೆ. ಸದಾಶಿವ ಅವರ 'ನಲ್ಲಿಯಲ್ಲಿ ನೀರು ಬಂತು' ಕತೆಯ ನೀರು ಬರುವಿಕೆ ಹೊಸತರ ಆಗಮನದ ಸಂಕೇತವಾಗಿದೆ. ಹೆಂಗಸರ ನಡುವಿನ ಸಂಘರ್ಷ, ಅನುಕಂಪ, ಮರುಕದ ನಡುವೆಯೇ ಸಂಘರ್ಷಕ್ಕೆ ಇತಿಶ್ರೀ ಹಾಡುವ ನೆಲೆಯಿಂದಲೇ ಪ್ರಾಮುಖ್ಯ ಪಡೆಯುವಂತೆ ಅಲ್ಲಿ ನಲ್ಲಿಯಲ್ಲಿ ನೀರು ಬರುತ್ತದೆ. ಹೊಸದಾದ ಸಂದರ್ಭ, ಸಂಬಂಧಗಳ ದಿಕ್ಕನ್ನು ಬದಲಾಯಿಸುವ ಒಂದು ಹೊಸ ತಿರುವನ್ನು ಅಲ್ಲಿ ಕಾಣುತ್ತೇವೆ. ' ರಾಮನ ಸವಾರಿ ಸಂತೆಗೆ ಹೋದದ್ದು' ಕತೆಯಲ್ಲಿ ಪಾರ್ವತಿ ಗಂಡನನ್ನು ಬಿಟ್ಟು ತವರಿಗೆ ಬಂದ ಕುರಿತು ಮಂಜಯ್ಯ ಗುಡುಗುವುದು ' ಇಗೋ ನೋಡು, ಸದಾನಂದ ನನಗೆ ಇವೆಲ್ಲ ಇಷ್ಟವೆಂದು ತಿಳಿದೆಯಾ ? ಇವೆಲ್ಲ ಗೊತ್ತಿಲ್ಲವೆಂದೂ ತಿಳಿದೆಯಾ ? ಈ ಇವಳು ಬೇವರ್ಸಿ, ಲಗ್ನವಾದ ಮೂರೇ ಮೂರು ದಿನಕ್ಕೆ ನಮ್ಮಿಂದಾಗದು ಎಂದು ಅವನ ಮನೆಯಿಂದ ಓಡಿ ಬಂದಳಲ್ಲವೇ. ನಾನು ಸಾವಿರ ಸರ್ತಿ ಹೇಳಿದೆ ಇದು ಆಗದು, ಇದು ಕೂಡದು - ಬಂದು ಇವಳು ಅತ್ತಳು. ಅವಳು ಒಬ್ಬಳು ಮಲಗಿದ್ದಾಳಲ್ಲ ಇವಳ ಅಮ್ಮ - ಇವಳು ಆಡಿದ್ದಕ್ಕೆಲ್ಲ ಸೈ ಎಂದು ತಕಪಕ ಕುಣಿದಳು. ಒಮ್ಮೆ ಹೀಗಾದದ್ದು ಉದ್ದಕ್ಕೂ ಆಯಿತಷ್ಟೇ. ಈ ರಾಮನ ಬಸುರಲ್ಲಿ ಬಂದೇ ಬಿಟ್ಟಳು. ಮತ್ತೆ ಅಲ್ಲಿಗೆ

ಹೋಗುವುದಿಲ್ಲವೆಂದು, ನನ್ನ ಮಗಳು ನನಗೆ ಹೊರೆಯಲ್ಲ ಎಂದಳು ಅವಳು. ಬೀದಿಯಲ್ಲಿ ಓಡಿಯಾಡ ಬೇಕಾದವನು ನಾಸಪ್ಪೇ. ಈ ಮೂರು ಕಾಸಿನ ಹೆಂಗಸಿಗೆ ಏನು ? ಎನ್ನುವುದು, ಅದಕ್ಕೆ ಪ್ರತಿಯಾಗಿ 'ಅಪ್ಪಯ್ಯ ನೀವು ಹಾಗೆಲ್ಲ ಯಾಕೆ ಮಾತನಾಡುತ್ತೀರಿ ? ಅವರೊಟ್ಟಿಗೆ ಇರುವುದು ಬೇಡವೆಂದು ಬಂದೆನೆ ? ಅವರು ಕೊಟ್ಟ ಕಿರುಕುಳ ಒಂದೇ ಎರಡೇ ? ನಾನೇ ಏನು - ಯಾವ ಹೆಣ್ಣಾದರೂ ಅವರೊಟ್ಟಿಗೆ ಇರುವುದಕ್ಕೆ ಬಂದೀತೇ ? ಈಗ ಯಾಕೆ - ಕಾಲ ಬಂದೀತು ಅವರವರ ತಪ್ಪು ಅವರವರಿಗೆ ತಿಳಿದೀತು ' ಎಂದು ಗಳಗಳ ಅಳುವುದು ಆಕೆ ಅನುಭವಿಸಿದ ಯಾತನೆಯನ್ನು ವಿವರಿಸುತ್ತದೆ. ಆದರೆ ಗಂಡನ ಹಿಂಸಾ ಪ್ರವೃತ್ತಿ ಪುರುಷ ಪ್ರಾಧಾನ್ಯ ವ್ಯವಸ್ಥೆಯಿಂದಾಗಿ ದೊಡ್ಡ ಸಂಗತಿಯಾಗುವುದಿಲ್ಲ.

ನವ್ಯ ಬರೆಯುವ ಸಂದರ್ಭದಲ್ಲಿ ಕತೆ ತೊಡಗಿಕೊಂಡವರು ರಾಜಲಕ್ಷ್ಮೀ ಎನ್. ರಾವ್., ವೀಣಾ ಶಾಂತೇಶ್ವರ, ವೈದೇಹಿ ಮುಖ್ಯರಾದವರು. ಸ್ತ್ರೀವಾದದ ಪ್ರಖರ ಛಾಯೆ ಅವರ ಕೃತಿಗಳಲ್ಲಿ ಎಡೆಪಡೆಯತೊಡಗಿದ್ದನ್ನು ತೋರಿಸುತ್ತದೆ. ಅದು ಸ್ತ್ರೀಯ ಒಳತೋಟಗಳನ್ನು ನಿಖರವಾಗಿ ಬಿಂಬಿಸುತ್ತ ಪುರುಷ ರೂಪಿಸಿದ ಬದುಕಿನ ದಾರಿಗಳನ್ನು ತೊರೆದು ಅವರ ಮೇಲೆ ಹೆಣ್ಣು ಸ್ವಾತಂತ್ರ್ಯ ಪಡೆದು ಹೊಸ ಬದುಕು ಕಟ್ಟಿಕೊಳ್ಳುವಲ್ಲಿ ಗೆಲ್ಲುತ್ತಾಳೆ. ತಮಗಿರುವ ಎಲ್ಲೆಗಳನ್ನು ದಾಟುವ ಧೈರ್ಯಗಳನ್ನು ಈ ಸಂದರ್ಭದ ಮಹಿಳೆಯರು ತೋರುವ ಮೂಲಕ ತಮ್ಮ ವ್ಯಕ್ತಿತ್ವವನ್ನು ಪ್ರತಿಷ್ಠಾಪಿಸುತ್ತಾರೆ. ಈ ಮೂಲಕ ಸಾಂಪ್ರದಾಯಿಕ ಕಟ್ಟಳೆಗಳ ಜಳ್ಳು ನಂಬಿಕೆಗಳನ್ನು ಒಡೆಯುತ್ತಾರೆ ಇದು ಪುರುಷನ ಅಹಮ್ಮನ್ನು ಒಡೆಯುವುದೂ ಆಗಿದೆ. ಶೋಷಣೆಗಳನ್ನು ಮೆಚ್ಚುವ ಆತುರ ಅವರಲ್ಲಿದೆ. ಅದಕ್ಕೇ ಹೆಣ್ಣಿನ ಭಾವನೆಗಳನ್ನು ಅವಳ ಮನದ ಮಾತುಗಳನ್ನು ಇಲ್ಲಿ ಹೇಳಿಕೊಳ್ಳುವ ಅವಕಾಶ ಕೊಡಲಾಗಿದೆ. ಅಲ್ಲದೆ ಕೊನೆಗೆ ಅದನ್ನು ಪ್ರತಿಷ್ಠಾಪಿಸುವ ಅವಕಾಶ ದೊರಕಿಸಲಾಗಿದೆ.

ಪ್ರಗತಿಶೀಲರ ಕತೆಗಾರ್ತಿಯರ ಕತೆಗಳಲ್ಲಿಯೇ ಜೀವ ಪಡೆದುಕೊಡಿದ್ದ ಶೋಷಣೆಯ ವಿರುದ್ಧದ ಪ್ರತಿಭಟನೆ ನವ್ಯದ ಕತೆಗಾರ್ತಿಯರಲ್ಲಿ ಗಟ್ಟಿನೆಲೆಯನ್ನು ಪಡೆಯಿತು. ಇಲ್ಲಿ ಹೆಣ್ಣಿನ ಒಳತೋಟಿ, ಕಾಮನೆಗಳನ್ನು ಕೂಡ ನಿರ್ಭಿಡೆಯಿಂದ ತೆರೆದಿಡುವ ನೆಲೆಗೆ ಕತೆಗಾರ್ತಿಯರು ಒಡ್ಡಿಕೊಂಡವರು. ಸಾಂಪ್ರದಾಯಿಕ ಬದುಕಿನೊಳಗೆ ನೆಲೆಪಡೆದು ಬಸವಳಿದು ಹೋಗಿದ್ದ ಹೆಣ್ಣು ಅದರ ಪಾಲಕಿಯಾಗಿ ಬಾಳುವ ರೀತಿಯಲ್ಲೇ ಪರಿಚಯಿಸಿದ್ದಾರೆ. ಹೊಸ ಕಾಮನೆಗಳ ಕನಸಿನ ಭ್ರಮಾಲೋಕದಲ್ಲಿ ವಿಹರಿಸಿ ನೆಮ್ಮದಿ ಪಡೆಯುವಲ್ಲಿಗೆ ಇಲ್ಲಿನ ಹೆಂಗಸರು ಮನದ ಕಾಮನೆಗಳನ್ನು ವ್ಯಕ್ತಪಡಿಸುವ ಕಡೆ ತುಡಿಯುತ್ತಾರೆ. ಈ ಆಶಯ ಮಾಸ್ತಿ ಕತೆಗಳಲ್ಲಿ ಕಾಣುವುದಿಲ್ಲ.

ಬರವಣಿಗೆಯ ಶೈಲಿಯಲ್ಲಿ ನವ್ಯಕ್ಕೆ ಹತ್ತಿರವಾಗುವ ವೈದೇಹಿ ಅವರ ಕತೆಗಳು ಸ್ತ್ರೀಯಾತ್ಮಕ ಅಭಿವ್ಯಕ್ತಿಯಲ್ಲಿ ವಿಶೇಷ ಪ್ರಾಧಾನ್ಯ ಪಡೆಯುತ್ತವೆ. ಹೆಣ್ಣಿನ ಒಂದೊಂದು ವ್ಯಕ್ತಿತ್ವವೂ ಸ್ವತಃ ತಾನೇ ಆಗಿ ಹೆಣ್ಣಿನ ಎಲ್ಲ ನೋವು - ನಲಿವು ಹಿಂಸೆಗಳನ್ನು, ಲಿಂಗ ತಾರತಮ್ಯದ ಎಲ್ಲ

ಅಸಮಾನತೆಗಳನ್ನು ಅನುಭವಕ್ಕೆ ತಂದುಕೊಂಡು ಪ್ರಸ್ತುತ ಪಡಿಸುತ್ತಾರೆ. ಹೆಣ್ಣಿನ ವಿಸ್ತಾರವಾದ ಬದುಕಿನ ವಿವಿಧ ಮಜಲುಗಳನ್ನು ವೈದೇಹಿ ಅವರ ಕತೆಗಳ ಸ್ತ್ರೀಯರು ನಿರೂಪಿಸುತ್ತಾರೆ. ಅದು ಅವರ ಕಾಲಘಟ್ಟದ ಬದುಕಿನ ಸ್ಥಿತಿಗತಿಯನ್ನೇ ಪ್ರಸ್ತುತ ಪಡಿಸುವುದೇ ಆಗಿದೆ. ಲಿಂಗ ತರತಮದ ನಡುವೆ ಹೆಣ್ಣು ಅದನ್ನು ಈಗಲೂ ಪರಿಪಾಲಿಸುತ್ತಿರುವ ಸೂಕ್ಷ್ಮಾತಿ ಸೂಕ್ಷ್ಮ ಹಂತಗಳನ್ನು ಕೂಡ ಅಲ್ಲಿನ ಸ್ತ್ರೀಯರು ಅತಿ ಜಾಗರೂಕತೆಯಿಂದ ಪರಿಚಯಿಸುತ್ತಾರೆ. ಆ ಮೂಲಕ ಹೆಣ್ಣಿಗೆ ವಿಮೋಚನೆಯಾಗುತ್ತದೆ. ಪುರುಷಾಧಿಕ್ಯದ ವಿವಿಧ ಪದರಗಳನ್ನು ಕಳಚಿ ಬದುಕಬೇಕೆಂಬುದನ್ನು ಪ್ರತಿಪಾದಿಸುತ್ತಾರೆ.

ಭಾರತೀಯ ಸಂಸ್ಕೃತಿಯ ಸಂಪ್ರದಾಯ, ನಿರ್ಬಂಧಗಳೊಳಗೆ ಹೆಣ್ಣು ಬದುಕಬೇಕಾದ ವಾಸ್ತವ ಸ್ಥಿತಿಯನ್ನು ಅಲ್ಲಿನ ಸ್ತ್ರೀಯರು ಹೊರಗೆಡಹುತ್ತಾರೆ. ಹೊರಗೆ ಮೆರೆಯುವ ಹೆಣ್ಣು ಮನೆಯೊಳಗೆ ಕೂಲಿಗಿಂತ ಕಡೆಯಾಗಿ ಬಾಳಬೇಕಾದ ನಿಸರ್ಗದತ್ತವಾದ ಎಲ್ಲ ಪ್ರಕ್ರಿಯೆಗಳನ್ನು ಒಪ್ಪಿಕೊಳ್ಳುತ್ತಲೇ ಅದಕ್ಕೆ ಪುರುಷ ಹಾಕಿದ ನಿರ್ಬಂಧಗಳನ್ನು ಮಾತ್ರ ಅನುಭವಿಸಲಾರದೆ ತೊಳಲಾಡುವ ಸ್ತ್ರೀಯರ ಮೂಲಕ ಪರಿಚಯಿಸಲಾಗಿದೆ.

ವೈದೇಹಿ ಸಂಸ್ಕೃತಿಯನ್ನು ಅಪಾರವಾಗಿ ಪ್ರೀತಿಸುವವರು. ಅಲ್ಲಿ ಜೀವನ ಪ್ರೀತಿಯ ಸೆಲೆಯಿದೆ. ಅದುವೇ ಬದುಕಿನ ವಿಕಾಸಕ್ಕೆ ಹಾದಿ ಎಂದು ನಂಬಿದವರು ಅವರು. ಆ ಹಿನ್ನೆಲೆಯಲ್ಲಿಯೇ ತಾಯ್ತನವನ್ನು ಕುಟುಂಬವನ್ನು ಅವರು ಆಪ್ತವಾಗುವಂತೆಯೇ ಪರಿಚಯಿಸುತ್ತಾರೆ. ಸಂಪ್ರದಾಯವನ್ನು ಬಾಳಿಸುವ ಮನೋಧರ್ಮವೇ ವೈದೇಹಿ ಅವರ ಕತೆಗಳಲ್ಲೂ ಪ್ರತಿಬಿಂಬಿತವಾಗಿವೆ. ಮಾಸ್ತಿ ಅವರಂತೆ ಸಂಪ್ರದಾಯಕ್ಕೆ ಬದ್ಧವಾಗಿದ್ದೇ ಹೆಣ್ಣು ತಾಯ್ತನವನ್ನ ಪಾಲಿಸಿ ಕುಟುಂಬವನ್ನು ಪೋಷಿಸುತ್ತಾ ಬದುಕಬೇಕೆಂಬುದನ್ನೇ ಅನರು ಪ್ರತಿಪಾದಿಸುತ್ತಾರೆ. ಹೆಣ್ಣೊಬ್ಬಳಿಗೆ ಮಾನಸಿಕ ಬಯಕೆಗಳು ಸಹಜ. ಆದರೆ ಅದನ್ನು ಪೂರೈಸಿಕೊಳ್ಳಲು ಬಿಡದ ಸಮಾಜದ ಚಿತ್ರಣದಲ್ಲಿ ಬದಲಾವಣೆ ಕುರಿತ ಅವರ ಕಾಳಜಿ ಕತೆಗಳಲ್ಲಿ ವ್ಯಕ್ತವಾಗುತ್ತದೆ.

'ಗುಲಾಬಿಯ ಮೃದು ಪಾದಗಳು' ಕತೆಯ ನಾಯಕಿ ಮಗುವಿಗಾಗಿ ಹಂಬಲಿಸುವ, ಮೃದು ಪಾದ ಮಾತ್ರವೇ ನೋಡಿ ಪುಳಕಿತಳಾಗುವ, ಮಗುವನ್ನು ನೋಡಲು ಹಾತೊರೆಯುವ ಅವಳು ಒಣಹಾಕಿದ ಮಗುವಿನ ಅಂಗಿ ವಸ್ತ್ರಗಳ ಹರಗುವಿಕೆಯಲ್ಲಿಯೇ ಅದರ ಬೆಳವಣಿಗೆಯನ್ನು ಗುರುತಿಸಿ ಗ್ರಹಿಸಿಕೊಳ್ಳುವ ಆಕೆಯ ಮನದ ತಾಕಲಾಟದಲ್ಲಿ ತಾನೂ ತಾಯಾಗಬೇಕೆಂಬ ಹಂಬಲ ಹುದುಗಿದೆ. ಇದು ಎಲ್ಲ ಹೆಣ್ಣು ಮಕ್ಕಳ ಮನಸ್ಸಿನ ಭಾವನೆಯನ್ನು ಪ್ರತಿನಿಧಿಸುವುದಾಗಿದೆ. 'ಭೂತ' ಹಾಗೂ 'ಅಕ್ಕು' ಕತೆಗಳಲ್ಲಿ ಸಮಾನತೆ ಸಾಧಿಸುವ ಕಾಳಜಿಯಿಂದ ಸ್ತ್ರೀಯರ ಕುರಿತ ಕೆಟ್ಟ ಆಲೋಚನೆಗಳನ್ನು ದೂರ ಮಾಡುವ ತುಡಿತವಿದೆ. ಆದುದರಿಂದಲೇ ಅವು ವಿಶಿಷ್ಟವಾಗುತ್ತದೆ.

'ಗೂಡಿನೊಳಗಿನ ಒಂದು ಹಕ್ಕಿ' ಕತೆ ವಿಭಿನ್ನ ನೆಲೆಯಲ್ಲಿ ಗುರುತು ಪಡೆಯುತ್ತದೆ. ಎಲ್ಲವನ್ನೂ

ಬಿಚ್ಚಿ ಬೆತ್ತಲಾಗಿಸುವ ಪ್ರಕ್ರಿಯೆ, ಅದರಿಂದಾಗಿ ಆದ ಇರಿಸು ಮುರಿಸು ಸ್ತ್ರೀವಾದದ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡು ಒಂದು ವರ್ಗದ ಪ್ರವೃತ್ತಿಯನ್ನು ತೆರೆದಿಡುತ್ತಾರೆ. ಗಂಡು-ಹೆಣ್ಣಿನ ನಡುವಿನ ತಾರತಮ್ಯ ಮನೋಭಾವ ಹಾಗೂ ಅಲ್ಲಿನ ಅಸಮಾನತೆ ದೂರವಾಗಿರುವ ಮನುಷ್ಯ ಮನುಷ್ಯ ಸಂಬಂಧದ ನೆಲೆಯಲ್ಲಿ ಅದು ಪ್ರತಿಷ್ಠಾಪಿತಗೊಳ್ಳಬೇಕೇ ಹೊರತು ಸಿದ್ಧಾಂತದ ನೆಲೆಯಿಂದ ಅಲ್ಲ ಎಂಬುದನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ವೈದೇಹಿ ಅವರು ವಿಭಿನ್ನ ಸ್ತರಗಳ ಹೆಣ್ಣುಗಳನ್ನು ಪರಿಚಯಿಸುವುದು ಅವರವರದೇ ಪರಿಸರದ ಮಂದಿಗಳ ಮಾನವೀಯತೆ ಮುಖ್ಯ ಎಂಬುದನ್ನು ಸಾರುತ್ತಾರೆ.

ಮಾಸ್ತಿ ಮತ್ತು ಸಮಕಾಲೀನ ಇತರ ಕತೆಗಾರರು 'ಸ್ತ್ರೀ' ಯನ್ನು ಪ್ರತಿನಿಧೀಕರಿಸಿದ ಕುರಿತು ಇಲ್ಲಿಯವರೆಗೆ ವಿಶ್ಲೇಷಿಸಲಾಯಿತು. ಸಮಕಾಲೀನ ಇತರ ಕತೆಗಾರರ ನಡುವೆ ಮಾಸ್ತಿ ಸ್ತ್ರೀ ಪ್ರತಿನಿಧೀಕರಣದ ರೀತಿ ವಿಶಿಷ್ಟವಾಗಿದೆ. ಇತರ ಕತೆಗಾರರು ಸಮಕಾಲೀನ ವಾಸ್ತವದ ನಡುವೆ ಸ್ತ್ರೀಯನ್ನು ಕಂಡರೆ ಮಾಸ್ತಿ ತಾನು ನಂಬಿದ ಸಂಸ್ಕೃತಿಯ ನೆಲೆಯಲ್ಲಿ ವಾಸ್ತವಗೊಳ್ಳುವಂತೆ ಸ್ತ್ರೀಯನ್ನು ಕಾಣುತ್ತಾರೆ. ಆಗೆಲ್ಲ ಸಮಕಾಲೀನ ಕತೆಗಾರರ ಲಕ್ಷ್ಯವಿರುವುದು ಬಹುತೇಕ ಸ್ತ್ರೀಯರ ಸಮಸ್ಯೆಗಳೆಡೆಗಾದರೆ ಮಾಸ್ತಿ ಅವರ ಲಕ್ಷ್ಯ ಆರೋಗ್ಯಕರ, ಸುಖೀ ಸಮಾಜದೆಡೆಗೆ. ಸಮಾಜದಲ್ಲಿ ಸಂಘರ್ಷವಿಲ್ಲದೇ ಬದುಕು ಹಸನಾಗಲು ಬೇಕಾದ ನಿಲುವುಗಳ ನೆಲೆಯಿಂದಲೇ ಮಾಸ್ತಿ ಅವರ ಕಥಾ ಪಾತ್ರಗಳು ಮೈನೆಡೆಯುತ್ತವೆ. ಹಾಗಾಗಿ ಮಾಸ್ತಿ ಅವರಿಗೆ ಸ್ತ್ರೀ ಪಾತ್ರಗಳು ಪುರಾಣಗಳಲ್ಲಿ, ವೈದಿಕ ಸಂಸ್ಕೃತಿಯ ಚೌಕಟ್ಟಿನಲ್ಲಿ ಸಿದ್ಧ ಮಾದರಿಯಲ್ಲಿ ದೊರೆಯುತ್ತವೆ. ಸಮಕಾಲೀನ ಸಾಮಾಜಿಕ ವಾಸ್ತವದ ನಡುವೆ ಸಾಹಿತ್ಯಿಕವಾಗಿ ಕಟ್ಟಿಕೊಡುವ ಮಾಸ್ತಿ ಅವರ ಸ್ತ್ರೀ ಪಾತ್ರಗಳು ಹೆಚ್ಚಾಗಿ ಆದರ್ಶದ ನೆಲೆಯಲ್ಲಿಯೇ ನಿಂತುಬಿಡುತ್ತವೆ.

ಅಧ್ಯಾಯ - ೬

ಸಮಾರೋಪ

ಸ್ತ್ರೀ ಪ್ರತಿನಿಧೀಕರಣ ಮಾಸ್ತಿ ಚಿಂತನೆಗೊಂದು ಅನನ್ಯ ನೆಲೆಗಟ್ಟು

ಅಧ್ಯಾಯ - ೬

ಸಮಾರೋಪ

ಸ್ತ್ರೀ ಪ್ರತಿನಿಧೀಕರಣ ಮಾಸ್ತಿ ಚಿಂತನೆಗೊಂದು ಅನನ್ಯ ನೆಲೆಗಟ್ಟು

ಮಾಸ್ತಿಯವರು ಕತೆಗಳ ಮೂಲಕ ಸ್ತ್ರೀ ಪ್ರತಿನಿಧೀಕರಣಗೊಳಿಸಿದ ಬಗೆಯನ್ನು ಇದುವರೆಗೆ ಅಧ್ಯಯನ ಮಾತಲಾಯಿತು. ಒಟ್ಟು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳನ್ನು ಪ್ರಸ್ತುತ ಸಮಾರೋಪದಲ್ಲಿ ಕ್ರೋಢೀಕರಿಸಬಹುದು.

ಸನಾತನ ವೈದಿಕ ಪರಂಪರೆಯ ನಂಬಿಕೆ, ನಡವಳಿಕೆಗಳನ್ನೇ ಮಾಸ್ತಿ ಅವರು ತಮ್ಮ ಕತೆಗಳಲ್ಲಿನ ಸ್ತ್ರೀಯರ ಮೂಲಕ ಪ್ರತಿನಿಧೀಕರಣಗೊಳಿಸಿದ್ದಾರೆ. ಸಂಸ್ಕೃತಿಯೊಂದು ಶಾಶ್ವತವಾಗುವುದು ಸ್ತ್ರೀಯ ನಿಲುವು, ನಡವಳಿಕೆಗಳಿಂದಲೇ ಎಂಬುದನ್ನು ಅಲ್ಲಿನ ಸ್ತ್ರೀಯರ ಮೂಲಕ ಮಾಸ್ತಿ ಪ್ರತಿಪಾದಿಸಿದ್ದಾರೆ. ಸ್ತ್ರೀಯೊಬ್ಬಳು ತನ್ನ ಆಲೋಚನೆಗೆ ತಕ್ಕಂತೆ ನಡೆದುಕೊಂಡದ್ದೇ ಆದರೆ ಅದು ತಪ್ಪಾಗುತ್ತದೆ. ಆದ್ದರಿಂದಲೇ ಆಕೆ ಸುಖೀ ಬದುಕನ್ನು ಕಳೆದುಕೊಳ್ಳುತ್ತಾಳೆ.

ಪ್ರಗತಿಪರ ಚಿಂತನೆಯ ಪ್ರಭಾವವೋ ಎಂಬಂತೆ ಕೆಲವು ಸ್ತ್ರೀಯರ ನಡವಳಿಕೆಗಳನ್ನು ಪರಿಚಯಿಸುವ ಬೆನ್ನಲ್ಲೇ ಕತೆಗಳು ಕಾಣುವ ಅಂತ್ಯವು ಮಾತ್ರ ಸಂಪ್ರದಾಯಬದ್ಧವೇ ಆಗಿದೆ. ಮಾಸ್ತಿ ಕ್ರಾಂತಿಕಾರಿಗಳಲ್ಲ. ಯಾವುದೇ ಚಳವಳಿಗಳೊಡನೆ ಗುರುತಿಸಿಕೊಂಡವರೂ ಅಲ್ಲ. ಆದರೆ ತಮ್ಮದೇ ಆದ ನಿಲುವುಗಳಿಗೆ, ಧೋರಣೆಗಳಿಗೆ ಬದ್ಧರಾದವರು. ದೇಶೀ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳದಂತೆ ಇಲ್ಲಿ ಎಚ್ಚರಿಕೆ ವಹಿಸಲಾಗಿದೆ. ಪಾಶ್ಚಾತ್ಯ ಸಂಸ್ಕೃತಿಯನ್ನು ದೂರಮಾಡುವ ಹಾಗೂ ದೇಶೀ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಜಾಗೃತಗೊಂಡು ಅದನ್ನು ಪೂರೈಸುವಲ್ಲಿ ಕರ್ತವ್ಯ ನಿಷ್ಠಳಾಗಬೇಕಾದ ಪರಿಯನ್ನು ಪುರಾಣ ಹಾಗೂ ಇತಿಹಾಸದ ಸ್ತ್ರೀಯರು ಪ್ರತಿನಿಧಿಸಿದ್ದಾರೆ. ಅದರೊಟ್ಟಿಗೆ ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯವನ್ನು ಮೆಚ್ಚಿಕೊಳ್ಳುವ ಔದಾರ್ಯವನ್ನು ರಾಣಿಯು ಸ್ವತಃ ತೋರುವುದರೊಂದಿಗೆ ಪ್ರಜೆಗಳೂ ಒಪ್ಪಿಕೊಳ್ಳುವುದಕ್ಕೆ ಪ್ರೇರಣೆಯಾಗುತ್ತಾಳೆ.

ಮಾಸ್ತಿ ಅವರಿಗೆ ಪುರುಷನಿಷ್ಠ ಸಮಾಜದೊಳಗೆ ಸ್ತ್ರೀ ನಲುಗುತ್ತಿರುವುದು ಅಷ್ಟಾಗಿ ಕಾಡುವುದಿಲ್ಲ, ಅದು ಅವರಿಗೆ ಮುಖ್ಯವಾಗುವುದೂ ಇಲ್ಲ. ಅವಳು ಸಿದ್ಧ ಮೌಲ್ಯದ ಬದುಕಿನ ಪರಿಪಾಲಕಳಾಗಿರಬೇಕೆಂಬುದನ್ನೇ ಪ್ರತಿನಿಧೀಕರಣಗೊಳಿಸಿದ ವಿವಿಧ ಸಂದರ್ಭಗಳನ್ನು ಚರ್ಚಿಸಲಾಗಿದೆ.

ಪ್ರಧಾನವಾಗಿ ಅಧ್ಯಯನ ಸಂದರ್ಭದಲ್ಲಿ ಮಾಸ್ತಿ ಪ್ರತಿಪಾದಿಸಿದ ಮೌಲ್ಯ ವಿಶ್ವ ವ್ಯಾಪಿಯಾಗಿಸುವುದನ್ನು ವಿಮರ್ಶಿಸಲಾಗಿದೆ. ಶೀಲದ ಕುರಿತು ಮಾಸ್ತಿ ಕಟ್ಟೆಚ್ಚರವಹಿಸಿದ್ದು ಅಲ್ಲಿನ ಸ್ತ್ರೀಯರಿಂದಲೇ ನಿಖರವಾಗುತ್ತದೆ. ಅಂಥ ಶೀಲದ ಕುರಿತ ಕಾಳಜಿಯಿಂದಾಗಿಯೇ ಹೆಣ್ಣಿಗೆ ವಿವಾಹದ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವಂತೆ ಸ್ತ್ರೀಯರ ಮೂಲಕ ಪ್ರತಿನಿಧೀಕರಣಗೊಳಿಸಿದ್ದು ಖಚಿತವಾಗುತ್ತದೆ. ನೈತಿಕ-ಅನೈತಿಕತೆಯ ಸಂಬಂಧದ ಪರಿಣಾಮವೂ ಇಲ್ಲಿ ಸ್ಪಷ್ಟವಾಗುತ್ತದೆ. ವಿವಾಹಪೂರ್ವ ಪ್ರಣಯ, ತಾಯ್ತನದ ಸಮಸ್ಯೆ ತಪ್ಪಿಸುವುದಕ್ಕೆ ಇಲ್ಲಿ ಪ್ರಯತ್ನಿಸಲಾಗಿದೆ.

ಸಮಾಜವೊಂದನ್ನು ಕಟ್ಟುವ ಇಡೀ ಹೊಣೆಗಾರಿಕೆಯನ್ನು ಸ್ತ್ರೀಯ ಮೇಲೆ ಹೇರಿದ ಪುರುಷ ಕೇಂದ್ರಿತ ಸಮಾಜದಲ್ಲಿ ಆಕೆ ತಾಯಿಯಾಗುವುದು ಅನಿವಾರ್ಯವಾಗುತ್ತದೆ. ಅದೊಂದು ಪವಿತ್ರ ಕ್ರಿಯೆಯೆಂಬುದನ್ನು ಇದಿರಾಡದೆ ಒಪ್ಪಿಕೊಳ್ಳುವಂತೆ ಇಲ್ಲಿ ಮಾಡಲಾಗಿದೆ. ಎಂದರೆ ಸ್ತ್ರೀಯರಿಂದಲೇ ಅದನ್ನು ಪ್ರತಿಪಾದಿಸುವ ಉಪಾಯ ಮಾಸ್ತಿಯವರದ್ದಾಗಿದೆ. ಅದುದರಿಂದಲೇ ವೇಶ್ಯೆಗೂ ತಾಯ್ತನದ ಅನುಭವ ದಕ್ಕಿಸಲಾಗುತ್ತದೆ. ಎಲ್ಲ ಹೆಂಗಸರಿಗೂ ಅದೊಂದು ಪರಮ ಭಾಗ್ಯವೆಂದೇ ಒಟ್ಟಾರೆಯಾಗಿ ಸ್ಥಾಪಿಸಲಾಗುತ್ತದೆ.

ಅದಲ್ಲದೇ ಅನ್ಯ ಗಂಡಿನೊಂದಿಗೆ ದೈಹಿಕ ಸಂಬಂಧ ಬೆಳೆಸಬಾರದ ನೀತಿಯೂ ಪ್ರತಿಪಾದಿತಗೊಂಡಿದೆ.

ಮಾಸ್ತಿ ಅವರ ಕತೆಗಳಲ್ಲಿ ಶಿಕ್ಷಣ ಪಡೆದ ಸ್ತ್ರೀಯರೂ ಕಡಿಮೆ ಮಂದಿ. ಉದ್ಯೋಗಕ್ಕೆ ಹೋಗುವವರೂ ತೀರಾ ವಿರಳರು. ಒಂದೊಮ್ಮೆ ಉದ್ಯೋಗಕ್ಕೆ ಹೋದರೂ ಅಲ್ಲಿ ಲೈಂಗಿಕ, ಮಾನಸಿಕ ಕಿರುಕುಳಕ್ಕೆ ಒಳಗಾಗಿ ನೆಮ್ಮದಿ ಕಳೆದುಕೊಳ್ಳುವುದು ನಡೆದುಬಿಡುತ್ತದೆ. ಕೆಲವೇ ಸಂದರ್ಭಗಳಲ್ಲಿ ಮಾತ್ರ ಸ್ತ್ರೀ ಉದ್ಯೋಗ ಮಾಡಿ ತನ್ನ ಬದುಕನ್ನು ತಾನು ನಿರ್ವಹಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಈ ರೀತಿ ಸಮಾಜ ನಿರ್ಧರಿಸಿದ ಮೌಲ್ಯದ ಪ್ರತಿನಿಧೀಕರಣವಾಗುತ್ತದೆ.

ತನ್ನ ತಪ್ಪಿಗೆ ಸ್ತ್ರೀ ಪಶ್ಚಾತ್ತಾಪ ಪಟ್ಟು ಪರಿತಪಿಸಿ ಕ್ಷಮೆ ಕೇಳಿ ಕೊರಗುವುದು ಅವಳು ಮೊದಲ ದಿನಗಳಲ್ಲೇ ಎಚ್ಚರಿಕೆಯಿಂದ ವರ್ತಿಸಬೇಕಾದ ಮೌಲ್ಯವನ್ನು ಪ್ರತಿನಿಧಿಸುವುದಾಗಿದೆ. ವಿವೇಚನಾಯುಕ್ತ ತೀರ್ಮಾನ ತೆಗೆದುಕೊಳ್ಳುವುದನ್ನು ಇದು ಪ್ರೇರಿಸುವುದಾಗಿದೆ.

ಪುರಾಣದ ಸ್ತ್ರೀಯರು ಇಲ್ಲಿ ಚಿತ್ರಣಗೊಂಡಿರುವುದು ಭಾರತೀಯ ಮೌಲ್ಯದ ಬದುಕನ್ನು ಅನುಸರಿಸಬೇಕಾದ ತತ್ವವನ್ನು ಪ್ರತಿನಿಧಿಸುವುದಕ್ಕಾಗಿಯೇ ಸ್ತ್ರೀಯಾದವಳು ಸಹನೆ, ಲಜ್ಜೆ ಹಾಗೂ ಶೀಲವನ್ನು ಮೈಗೂಡಿಸಿಕೊಂಡೇ ಬದುಬೇಕಾದ ತುರ್ತನ್ನು ಇಲ್ಲಿ ಪ್ರತಿನಿಧೀಕರಣಗೊಳಿಸಲಾಗಿದೆ. ನಾಡನ್ನು ಆಳುವ ಐತಿಹಾಸಿಕ ಸ್ತ್ರೀಯರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರೂ ಶೀಲ ಹಾಗೂ ನಾಡನ್ನು ಉಳಿಸುವ ಮೌಲ್ಯವನ್ನು ಪ್ರತಿಪಾದಿಸುತ್ತಾರೆ. ಪುರುಷ ವೇಷವನ್ನು ತೊಟ್ಟು ಪುರುಷರೇ ಎಂಬ ಭ್ರಮೆಯಿಂದ ಆಳುವುದೂ ಒಂದು ಮೌಲ್ಯವಾಗಿ ಪ್ರತಿನಿಧೀಕರಣಗೊಂಡಿದೆ. ಆದರೆ ಅದೇ ಸ್ತ್ರೀ ಕೊನೆಯಲ್ಲಿ ತನಗೆ ಸಾಮಾನ್ಯರಂತೆ ಬಾಳಲಾಗದ್ದಕ್ಕಾಗಿ ವ್ಯಥಿಸುವುದು ಸನಾತನ ಕುಟುಂಬ ಪದ್ಧತಿ ಮತ್ತು ಆರ್ಯ ನಾರಿತ್ವದ ಎಲ್ಲ ಗುಣಗಳನ್ನು ಸ್ತ್ರೀ ತಾನಾಗಿಯೇ ಸ್ವೀಕರಿಸಿಕೊಳ್ಳುವಂತೆ ಪ್ರೇರಿಸುವ ಪ್ರತಿನಿಧಿಗಳಾಗಿ ಅವರು ಪರಿಚಯಗೊಳ್ಳುತ್ತಾರೆ.

ಸಜ್ಜನ ಹಾಗೂ ಗೌರವಾರ್ಹ ಸಾಹಿತಿಯಾಗಿಯೂ ಗುರುತಿಸಲಾಗುವ ಮಾಸ್ತಿ ಕತೆಗಳ ಸ್ತ್ರೀಯರಲ್ಲಿ ಉದಾರವಾದಿ ಧೋರಣೆಗಳನ್ನು ಶಕುಂತಲೆ, ರುಕ್ಮಿಣಿಯಂಥವರು ಪ್ರತಿನಿಧಿಸುತ್ತಾರೆ. ಅವರು ಮಾನವೀಯ ಸಂಬಂಧವನ್ನು ಗಟ್ಟಿಗೊಳಿಸುವ ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇಲ್ಲಿನ ಕತೆಗಳಲ್ಲಿನ ಗಂಡಂದಿರು ಸ್ತ್ರೀಯರ ತಪ್ಪುಗಳನ್ನು ಸಹಿಸುವ, ಕ್ಷಮಿಸುವ, ಔದಾರ್ಯ ಉಳ್ಳವರಾಗುತ್ತಾರೆ. ಇದು ಗಂಡಸರ ಉದಾರವಾದೀ ನಿಲುವು ಆಗಿದೆ. ಮತ್ತು ಸಹನೆ ಔದಾರ್ಯ ಹೆಣ್ಣಿಗೆ ಮಾತ್ರವಲ್ಲ ಗಂಡಿಗೂ ಭೂಷಣವಾದುದೇ ಎಂಬ ಧೋರಣೆಯೇ ಇಲ್ಲಿ ಮೈಗೊಂಡಿದೆ. ಇದು ಮಾಸ್ತಿಯವರ ಉದಾರೀಕರಣವೂ ಆಗುತ್ತದೆ. ಆದಾಗ್ಯೂ ಸ್ತ್ರೀ ಗಂಡನಲ್ಲಿ ಶರಣು ಹೋದಾಗ ಮಾತ್ರ ಆಕೆಗೆ ಬದುಕು ದಕ್ಕಿರುವುದನ್ನು ಇಲ್ಲಿ ಗಮನಿಸಲಾಗಿದೆ.

ಹೀಗೆ ಸ್ತ್ರೀ ಸಂವೇದನೆಯಿಂದಲೇ ಹೊರಬಂದ ಕತೆಗಳಲ್ಲಿನ ಸ್ತ್ರೀ ಪ್ರತಿನಿಧೀಕರಣದ ಬಗೆ ಹಾಗೂ ಮಾಸ್ತಿಯವರ ಕತೆಗಳ ಕೇಂದ್ರ ಬಿಂದುವಾದ ಸ್ತ್ರೀ ಪ್ರತಿನಿಧೀಕರಣದ ತೌಲನಿಕ ಚಿಂತನೆಗಳನ್ನು ಮಾಡಲಾಗಿದೆ. ಅಲ್ಲಿನ ಭಿನ್ನತೆಗಳನ್ನು ಸಮಾಜ, ವ್ಯಕ್ತಿತ್ವ, ಚಿಂತನೆ ಸಂದರ್ಭಗಳ ಹಿನ್ನೆಲೆಯಲ್ಲಿ

ಚರ್ಚಿಸಲಾಗಿದೆ. ಇಲ್ಲಿಯೇ ಮಾಸ್ತಿ ಚಿಂತನೆ, ಸಮಕಾಲೀನ ಸ್ಥಿತಿಗತಿ, ಸಮಕಾಲೀನರ ಮನಸ್ಥಿತಿ ಚಿಂತನೆಗಳಲ್ಲಿನ ವ್ಯತ್ಯಾಸಗಳನ್ನು ಮುಖಾಮುಖಿಯಾಗಿಸಲಾಗಿದೆ.

ಹಿಂಸೆ ಸಹಿಸಲಾಗದಾಗ ಮಾತ್ರ ಗಂಡನನ್ನು ತೊರೆದು ಬಾಳುವಲ್ಲಿ ಸ್ತ್ರೀ ತೆಗೆದುಕೊಂಡ ಸ್ವಾತಂತ್ರ್ಯವು ಕೂಡ ಒಂದು ಮೌಲ್ಯದ ಪ್ರತಿನಿಧೀಕರಣವೇ ಆಗಿದೆ. ಕೆಲವು ಪ್ರಸಂಗಗಳು ಮಾಸ್ತಿ ಕತೆಗಳಲ್ಲಿ ದೊರಕುತ್ತವೆ. ಆದರೆ ಅದೇ ಸ್ತ್ರೀಗೆ ತನ್ನ ಮಕ್ಕಳ ಬದುಕನ್ನು ಹಸನಾಗಿಸುವ ನಿಟ್ಟಿನಲ್ಲಿ ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿರುವುದೂ ಇದೆ.

ಸ್ವೇಚ್ಛಾ ಪ್ರವೃತ್ತಿ ಹೆಣ್ಣಿಗೆ ಕಂಟಕಕಾರಿಯೆಂದೂ ಕತೆ ಕಿವಿ ಮಾತು ಕೇಳುತ್ತದೆ. ಸ್ವೇಚ್ಛಾ ವರ್ತನೆಗೆ ಒಳಗಾದ ಹೆಣ್ಣು ಕೊನೆಯ ದಿನಗಳಲ್ಲಿ ಅನುಭವಿಸಬೇಕಾದ ಅತಂತ್ರ ಸ್ಥಿತಿ ಅವಮಾನ ಇತ್ಯಾದಿಗಳನ್ನು ಕತೆ ಹಿಡಿದುಕೊಡುತ್ತದೆ. ಇಲ್ಲಿಯೂ ಮಾಸ್ತಿಯವರು ಚಿಂತನೆ, ನಿಲುವು, ಧೋರಣೆಗಳೇ ಪ್ರತಿನಿಧೀಕರಣಗೊಂಡದ್ದು ಸ್ಪಷ್ಟವಾಗುತ್ತದೆ.

ಸನಾತನ ವೈದಿಕ ಪರಂಪರೆಯ ಪ್ರತೀಕವಾದ ಸದ್ಗೃಹಿಣಿಯ ಜೊತೆಗೆ ಪಾತಿವ್ರತ್ಯದ ಪ್ರತಿನಿಧೀಕರಣವೂ ಇದೆ . ಸ್ತ್ರೀಗೆ ಆರೋಪಿತವಾದ ಯಾವುದೊಂದು ನಿಬಂಧನೆಯನ್ನೂ ಯಾವ ಸ್ತ್ರೀಯೂ ಸಂದೇಹಾತ್ಮಕವಾಗಿ ನೋಡುವುದಿಲ್ಲ, ಪ್ರಶ್ನಿಸುವುದಿಲ್ಲ. ಪ್ರತಿಭಟಿಸುವುದೂ ಕಡಿಮೆಯೇ. ಬಹುತೇಕ ಸ್ತ್ರೀಯರೂ ಮೌಲ್ಯದ ಹೆಸರಿನಲ್ಲಿ ಹೇರಿದ ಕಟ್ಟುಪಾಡುಗಳನ್ನು ಪಾಲಿಸುತ್ತ ಬರಬೇಕಾದ ಅನಿವಾರ್ಯತೆಯನ್ನೇ ಪ್ರತಿನಿಧಿಸುತ್ತಾರೆ.

ವೇಶ್ಯೆಯರ ಸಮಸ್ಯೆಗಳು ಮಾಸ್ತಿಯವರನ್ನು ಕೆಣಕಿಯೇ ಇಲ್ಲ, ಕಲಕಿಯೇ ಇಲ್ಲ. ಆದುದರಿಂದಲೇ ಅವುಗಳ ಕತೆಗೆ ಅವರ ಮನಸ್ಸು ಹರಿಯುವುದಿಲ್ಲ. ಅವರ ಕತೆಗಳಲ್ಲಿ ಪ್ರತಿನಿಧೀಕರಣಗೊಂಡಿರುವುದು ವೇಶ್ಯೆಗೆ ಸಹಜ ಬದುಕು ಎಂಬುದು ಅಸಾಧ್ಯ ಎಂದು. ಅಂದರೆ ಸ್ತ್ರೀಗೆ ಪರ್ಯಾಯ ಬದುಕೇ ಇಲ್ಲ ಎಂದೇ ಇದು ಪ್ರತಿಪಾದಿಸುತ್ತದೆ. ಇದು ಸ್ತ್ರೀ ವಿರೋಧಿ ನಿಲುವು ಆಗಿದೆ.

ವಿಶ್ವದೆಲ್ಲೆಡೆಗೂ ಭಾರತೀಯ ಮೌಲ್ಯಯುತ ಸಂಸ್ಕೃತಿಯ ಜೀವನ ಪದ್ಧತಿಯೇ ಹಬ್ಬಿಕೊಳ್ಳಬೇಕೆಂಬ ಮಾಸ್ತಿಯವರ ಮಹದಾಸೆಯನ್ನೇ ಕತೆಗಳು ಅನುಕರಿಸಿವೆ. ಪೂರಕವಾಗಿ ವಿದೇಶೀ ಸ್ತ್ರೀಯರೂ ಆ ನೆಲೆಯಲ್ಲಿ ಶ್ರದ್ಧೆ ವಹಿಸುವಂತೆ ಎಚ್ಚರ ವಹಿಸಲಾಗಿದೆ. ವೈದಿಕ ಸಂಸ್ಕೃತಿಯನ್ನೇ ಸಾರ್ವತ್ರಿಕಗೊಳಿಸಬೇಕೆಂಬ ಮಾಸ್ತಿ ಅವರ ಹಿತಾಸಕ್ತಿಯೇ ಹೆಚ್ಚಿನ ಕತೆಗಳಲ್ಲಿ ಕಾಣುತ್ತದೆ. ಈ ಕುರಿತು ಸುಧೀರ್ಘವಾಗಿ ವಿವೇಚಿಸಲಾಗಿದೆ.

ಎಷ್ಟೇ ಹಿಂಸೆ ಅನುಭವಿಸಿದರೂ ಗಂಡನಿಂದ ಹೆಂಡತಿಯಾದವಳಿಗೆ ವಿಚ್ಛೇದನ ಪಡೆಯಲು ಇಲ್ಲಿ ಅವಕಾಶ ಕೊಡಲಾಗಿಲ್ಲ. ಗಂಡನ ಹೊರತಾಗಿ ಇನ್ನೊಬ್ಬನೊಂದಿಗೆ ಹೆಣ್ಣು ಬಾಳಬಾರದೆಂಬುದು ಇಲ್ಲಿನ ಮೌಲ್ಯವಾಗಿದೆ. ಗಂಡನನ್ನು ತ್ಯಜಿಸಿ ಹೋದರೂ ಅವಕ್ಕಾಗಿ ಬೇದಿಸಿ ಮರಳಿ ಗಂಡನನ್ನು

ಸೇರುವಂತೆ ಮಾಡಿರುವುದು ಮಾಸ್ತಿಯವರ ಕೈವಾಡವಾಗಿದೆ. ಮೌಲ್ಯದ ಹೆಸರಿನಲ್ಲಿ ನಡೆಯುವ ತನ್ನ ಮೇಲಿನ ಎಲ್ಲ ದಬ್ಬಾಳಿಕೆ, ಹಿಂಸೆ, ಒತ್ತಡಗಳನ್ನೆಲ್ಲ ಮೌನವಾಗಿ ಸಹಿಸುತ್ತಾ ಬಂದ ಹೆಣ್ಣಿನ ಸಹನೆಯ ವೈಭವ ಪ್ರತಿನಿಧೀಕರಣಗೊಂಡಿರುವುದರ ಹಿಂದೆ ಮರೆಯಾಗಿರುವ ಸ್ತ್ರೀಯ ಹಳಹಳಿಕೆಯ ಸಂಭವನೀಯತೆಯನ್ನು ಚರ್ಚಿಸಲಾಗಿದೆ.

ಮಾಸ್ತಿ ತಮ್ಮ ಕತೆಗಳಲ್ಲಿ ಭಾರತೀಯ ಸಂಸ್ಕೃತಿಗೆ ಅಪಾಯ ಬರಬಾರದೆಂದೇ ಅದನ್ನು ಉನ್ನತೀಕರಿಸುವುದಕ್ಕಾಗಿಯೇ ಅಂತರ್ ಧರ್ಮೀಯ ಹಾಗೂ ಅಂತರ್ಜಾತೀಯ ವಿವಾಹಗಳನ್ನು ಆಗಗೊಡುವುದಿಲ್ಲ. ಇಲ್ಲಿ ಅದನ್ನು ತಡೆಯುವ ಪ್ರಬಲ ವ್ಯಕ್ತಿಯಾಗಿ ಕೆಲಸ ನಿರ್ವಹಿಸುವವಳೂ ಸ್ತ್ರೀಯೇ ಆಗಿರುತ್ತಾಳೆ. ಇಲ್ಲಿನ ತಾಯಿ ಸಂಸ್ಕೃತಿಯನ್ನು, ಜಾತೀಯತೆಯನ್ನು ಹಾಗೇ ಉಳಿಯಗೊಡುವುದರ ಪ್ರತಿನಿಧಿಯಾಗುತ್ತಾಳೆ.

ಇಲ್ಲಿನ ಮಾನವೀಯತೆಯೂ ಧರ್ಮ ಹಾಗೂ ಜಾತೀಯ ಚೌಕಟ್ಟುಗಳನ್ನು ಮೀರಿ ವರ್ತಿಸುವುದಿಲ್ಲ. ಧರ್ಮ ಹಾಗೂ ಜಾತಿಗಳನ್ನು ಉಳಿಸಿಕೊಳ್ಳುವ ಸಂಪ್ರದಾಯಸ್ಥ ಮನಸ್ಸೇ ಇಲ್ಲಿ ಆಳಿಕೊಳ್ಳುತ್ತದೆ. ಎಂದರೆ ಮಾಸ್ತಿಯವರ ಸಂಕುಚಿತತೆಯೇ ಇಲ್ಲಿ ದುಡಿದುಕೊಳ್ಳುತ್ತದೆ.

ಪೌರಾಣಿಕ ಸ್ತ್ರೀ ಸಹಿತ ಸಾಮಾನ್ಯ ವರ್ಗದ ಸ್ತ್ರೀಯರೆಲ್ಲರೂ ಮನೆವಾರ್ತೆ ನೋಡಿಕೊಳ್ಳುವ ಗೃಹಿಣಿಯರಾಗಿಯೇ ಇರಬೇಕೆಂಬುದೂ ಹಿಂದೂ ಸಂಸ್ಕೃತಿಯ ಮೌಲ್ಯದ ಪ್ರತಿನಿಧೀಕರಣವೇ ಆಗಿದೆ.

ಅದೇ ರೀತಿ ಸ್ವದೇಶ ಬಿಟ್ಟು ಬದುಕಬಾರದೆಂಬುದೂ ಒಂದು ಮೌಲ್ಯ ಆಗಿದೆ. ಪ್ರೀತಿಗಾಗಿ ಎಲ್ಲವನ್ನೂ ತ್ಯಾಗ ಮಾಡುವ ಮತ್ತು ಪ್ರೀತಿಸಿದವನನ್ನೇ ಮದುವೆಯಾಗುವ ನಿಟ್ಟಿನಲ್ಲಿ ಪ್ರಯತ್ನಿಸುವುದೂ ಇಲ್ಲಿ ನಡೆಯುತ್ತದೆ. ಆದರೆ ಅಲ್ಲಿನ ಯಶಸ್ಸು ಯಶಸ್ಸು ಅಲ್ಲವೆಂದೂ, ಪರಿಣಾಮದಲ್ಲಿ ಅದು ಹಿಂಸೆಯಾಗಿ ಕಾಡುವುದೆಂದೂ ದುಃಖದ ಮಡುವಿನಲ್ಲಿ ಕೆಡಹುವುದೆಂದೂ, ಆದುದರಿಂದ ಆತುರದ ನಿರ್ಧಾರಗಳು ತಪ್ಪೆಂದೂ ಕತೆಗಳು ಧ್ವನಿಸುತ್ತವೆ. ಹಿಂಸೆಯನ್ನು ಅನುಭವಿಸಿ ಹೊರ ಬರುವುದು, ಹಳೆಯ ಗಂಡನನ್ನೇ ಸೇರಿ ಬದುಕುವುದು, ಮದುವೆಯಾದ ಗಂಡನನ್ನು ತೊರೆದು ಹೋದರೆ ಸುಖವಿಲ್ಲ. ತೊರೆಯಬಾರದು ಎಂಬ ಮೌಲ್ಯವನ್ನೇ ಪ್ರತಿನಿಧೀಕರಿಸಿದ್ದಾಗಿದೆ. ಅಂದರೆ ಮಾಸ್ತಿಯವರ ಕತೆಗಳ ಉಚ್ಚ ವರ್ಣದ ಸ್ತ್ರೀ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳುವುದು ಸಂಸ್ಕೃತಿಯನ್ನು ಹಾಗೆ ಉಳಿಸಿಕೊಳ್ಳುವ ಸಲುವಾಗಿದೆ. ಎಂದರೆ ನೈತಿಕತೆಯ ಪ್ರತಿಷ್ಠಾಪನೆಯನ್ನೇ ಈ ಮೂಲಕ ಪ್ರತಿನಿಧೀಕರಿಸಿದ್ದಾಗಿದೆ.

ವಿಧವೆಗೆ ಮರು ವಿವಾಹವಿಲ್ಲದಿರುವುದು, ಬಾಲ ವಿಧವೆಗೂ ಆ ಅವಕಾಶ ಕೊಡದಿರುವುದೂ ಜಾತಿ ಪ್ರತಿಷ್ಠೆಯ, ಹುಸಿ ಮೌಲ್ಯದ ಪ್ರತಿನಿಧೀಕರಣವಾಗಿದೆ. ಹಿಂದೊಮ್ಮೆ ಮರು ವಿವಾಹ ನಡೆದರೂ ನೆಮ್ಮದಿಯಿಂದ ವಂಚಿತರಾಗುವುದು, ಕುಟುಂಬ ಕಲಹದಿಂದ ಬೆಂದು ಹೋಗುವುದು

ತನ್ನ ಮೊದಲ ಗಂಡನ ಸಂತಾನದಿಂದಲೇ ಸಮಸ್ಯೆಗೆ ಒಳಗಾಗುವುದು ನಿತ್ಯ ಗೋಳಾಗುತ್ತದೆ. ಎಂದರೆ ಇದೆಲ್ಲ ಮಾಸ್ತಿ ಒಪ್ಪಿಕೊಂಡ ಸಂಸ್ಕೃತಿಯ ಒಳಹುವೇ ಆಗಿದೆ. ಇಂಥ ಸಂಸ್ಕೃತಿ ಹೆಣ್ಣು ಮಕ್ಕಳನ್ನು ಸನಾತನ ಧರ್ಮದ ಮೌಲ್ಯದ ಹೆಸರಿನಲ್ಲಿ ಮಹಿಳೆಯರನ್ನು ಸದಾ ವಿಧವೆ ಪಟ್ಟದಲ್ಲಿಟ್ಟೇ ಕೊಲ್ಲುವುದಾಗಿದೆ.

ಆದರೆ ವಿಧುರನಿಗೆ ವಿವಾಹ ಮಾಡಿಕೊಳ್ಳುವಲ್ಲಿ ಮಾಸ್ತಿ ಸ್ವೀಕರಿಸಿದ ಸಂಸ್ಕೃತಿ ಅಡ್ಡಿಯುಂಟು ಮಾಡುವುದಿಲ್ಲ. ವಯಸ್ಸಿಗೆ ಬಂದ ಮಕ್ಕಳಿದ್ದಾಗಲೂ ಮರು ವಿವಾಹ ಮಾಡಿಕೊಳ್ಳುವುದು, ಅದರಲ್ಲಿ ಕಿರು ಹರೆಯದವರನ್ನೇ ಮಾಡಿಕೊಳ್ಳುವುದು ಪುರುಷ ವರ್ಗದ ಸೊಕ್ಕೇ ಆಗಿದೆ. ಆದರೆ ಮಾಸ್ತಿ ಕತೆಯಲ್ಲಿ ಅಂಥ ಮುದಿಯನೊಂದಿಗೆ ಬಾಳಲು ಸಿದ್ಧಳಾಗದೇ ಆತ್ಮಹತ್ಯೆ ಮಾಡಿಕೊಂಡು ಅಂಥ ಅಮಾನವೀಯ ಸಂಬಂಧವನ್ನು ಪ್ರತಿಭಟಿಸುವ ಮೌಲ್ಯವೂ ಪ್ರತಿನಿಧೀಕರಣಗೊಂಡಿದೆ. ಮಾಸ್ತಿಯವರ ಮಾನವಾಂತಃಕರಣವನ್ನು ಇಲ್ಲಿ ಗಮನಿಸಬೇಕಾಗಿದೆ.

ಪಾಶ್ಚಾತ್ಯ ಸಂಸ್ಕೃತಿ ಎಂದರೆ ಸ್ವೇಚ್ಛೆಗೆ ಒತ್ತುಕೊಡುವುದು, ಬೇಕಾಬಿಟ್ಟಿಯಾಗಿ ಬದುಕುವುದು ಎಂಬ ಗೃಹಿಣಿಗೆ ಹೊಡತ ಕೊಡುವ ರೀತಿಯಲ್ಲಿ ಅಲ್ಲಿನ ಸ್ತ್ರೀಯರು ಭಾರತದ ಉಚ್ಚವರ್ಣದ ಮೌಲ್ಯವನ್ನು ಪ್ರತಿನಿಧೀಕರಿಸುತ್ತಾರೆ. ಅಂದರೆ ಅನೇಕ ಪಾಶ್ಚಾತ್ಯ ಮಹಿಳೆಯರು ಭಾರತದ ಉಚ್ಚ ವರ್ಗದ ಮೌಲ್ಯಗಳ ಪ್ರಮುಖ ಪ್ರತಿನಿಧಿಗಳಾಗಿ ಕಾಣಿಸಿಕೊಂಡಿದ್ದಾರೆ. ಮಾಸ್ತಿ ಪಾಶ್ಚಾತ್ಯರ ಸ್ವೀಕಾರದ ಮೂಲಕವಾಗಿ ಉಚ್ಚವರ್ಣೀಯರ ಸಂಸ್ಕೃತಿಯನ್ನು ಇನ್ನಷ್ಟು ಮೆರೆಯಿಸುತ್ತಾರೆ. ಇದು ಪಾಶ್ಚಾತ್ಯರ ಔದಾರ್ಯವಾಗಿರದೇ ಮಾಸ್ತಿಯವರಲ್ಲಿನ ಸಂಸ್ಕೃತಿ ಕುರಿತ ಅತ್ಯಭಿಮಾನದ ಪ್ರಕಟಣೆಯೇ ಆಗಿದೆ.

ಮಾಸ್ತಿ ಪ್ರತಿಭಟನೆಯನ್ನೂ ಒಂದು ಮೌಲ್ಯವಾಗಿ ಸ್ವೀಕರಿಸಿದ್ದೂ ಉಂಟು. ಅದನ್ನು ಹೆಚ್ಚಾಗಿ ಪ್ರತಿನಿಧಿಸುವವದು ಅವೈದಿಕರಲ್ಲಿ ಹುಟ್ಟಿ ಬೆಳೆದ ಸ್ತ್ರೀಯರು. ಅವರು ಸಹನೆ, ಲಜ್ಜೆ, ಶೀಲ ಇತ್ಯಾದಿಯನ್ನು ವಿನಾ ಕಾರಣ ಆರೋಪಿಸಿಕೊಳ್ಳಲಾರರು. ಅನಗತ್ಯವಾದಲ್ಲಿ ಅವುಗಳ ವಿರುದ್ಧ ಹೋರಾಡಬಲ್ಲರು. ತಮ್ಮ ಸ್ವಂತಿಕೆಗೆ ವಿರೋಧವಾಗಿ ಬಂದಾಗ ಅಂತಹ ವ್ಯವಸ್ಥೆಯನ್ನು ಧಿಕ್ಕರಿಸುವ ಸ್ತ್ರೀಯರನ್ನು ಅಧ್ಯಯನ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಲಾಗಿದೆ.

ವೈದಿಕರಲ್ಲಿ ಪರಮಾವಧಿ ಮಟ್ಟದಲ್ಲಿ ಸಹನೆ ತೋರಲಾಗುವುದು. ಅಷ್ಟಾಗಿಯೂ ಬದುಕಲು ಅಸಾಧ್ಯವೆಂದಾಗ ವ್ಯವಸ್ಥೆಯನ್ನು ಭೇದಿಸಿ ಹೊರಬರುವುದು ಸಂಗತವಾಗುತ್ತದೆ. ಆದರೆ ಅವೈದಿಕ ಮಹಿಳೆಯ ಮೇಲೆ ದೌರ್ಜನ್ಯ ನಡೆಸುವುದಕ್ಕೆ ಆಸ್ಪದವನ್ನೇ ಕೊಡುವುದಿಲ್ಲ. ಗಂಡ ಷಂಡನಾದಾಗ, ಪೀಡಕನಾದಾಗ ಸಿಡಿದು ಹೊರಬರುವುದಕ್ಕೆ ಹಿಂದೆ-ಮುಂದೆ ನೋಡದ ಸ್ವಾಭಿಮಾನಿ, ಧೈರ್ಯಶಾಲಿ ಸ್ತ್ರೀಯರು ಜನಪದರ ಬದುಕನ್ನು ಪ್ರತಿನಿಧಿಸುವುದಾಗಿದೆ. ಅದು ಅಲ್ಲಿಗೆ ಅತ್ಯಂತ ಸಹಜವಾದ ಬದುಕಾಗಿದೆ. ತೆರೆದ ಸಂಸ್ಕೃತಿಯನ್ನು ಪ್ರತಿನಿಧಿಸುವ ಅವೈದಿಕ ಕುಟುಂಬದ ಹೆಣ್ಣು ತೋರುವ ಪ್ರತಿಭಟನೆ ಆ ನೆಲೆಯಿಂದ ಒಪ್ಪಿತವಾಗುತ್ತದೆ.

ಮತ್ತೆ ಕೆಲವು ಸ್ತ್ರೀಯರು ಗಂಡ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಗಲೇ ಇನ್ನೊಬ್ಬನ ಬದುಕಿಗೆ ಮಾರು ಹೋಗಿ ಅವನೊಂದಿಗೆ ತೆರಳುವುದೂ ಇದೆ. ಅಲ್ಲಿ ನೈತಿಕತೆಯ ಕಟ್ಟುಪಾಡು ಮುಖ್ಯವಾಗದೇ, ಸ್ತ್ರೀಯ ಆಕಾಂಕ್ಷೆ, ಅಭಿಲಾಷೆಯೇ ಒಂದು ಮೌಲ್ಯವಾಗಿ ಪ್ರತಿನಿಧಿತವಾಗುತ್ತದೆ.

ಒಟ್ಟಿನಲ್ಲಿ ಮಾಸ್ತಿ ಕತೆಗಳ ಸ್ತ್ರೀಯರನ್ನು ವೈದಿಕ ಸಂಸ್ಕೃತಿಯ ನೆಲೆಯಲ್ಲಿ ಹಾಗೂ ಅವೈದಿಕ ಸಂಸ್ಕೃತಿಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ವೈದಿಕ ಸಂಸ್ಕೃತಿಯ ಸ್ತ್ರೀಯರು ಅಲ್ಲಿನ ನಂಬಿಕೆ, ಮೌಲ್ಯಗಳನ್ನು ಹಾಗಯೇ ಉಳಿಸುವುದಕ್ಕೆ ತಮ್ಮನ್ನು ಒಪ್ಪಿಸಿಕೊಂಡು ವಿವಾಹ ಸಂಸ್ಥೆ ಕಾಯ್ದುಕೊಳ್ಳುವ, ಜಾತಿ-ಧರ್ಮದ ಅಂತರ ಮುಂದುವರಿಸುವ, ತಾಯ್ತನವನ್ನು ಪಾಲಿಸುವ, ಕುಟುಂಬ ಪೋಷಿಸುವ, ಸಹನೆ ಲಜ್ಜೆ, ಶೀಲಗಳನ್ನು ಮೈಗೂಡಿಸಿಕೊಂಡು ಪತಿವ್ರತೆಯಾಗಿ, ಅನುಪಮ ಉದಾರವಾದಿಗಳಾಗಿ ಬದುಕುತ್ತ ಬರುತ್ತಾರೆ. ಅಂದರೆ ಮಾಸ್ತಿ ಅವರು ವೈದಿಕ ಸಂಸ್ಕೃತಿಯ ಸ್ತ್ರೀಯರನ್ನು ಸಂಪ್ರದಾಯದ ಚೌಕಟ್ಟಿನೊಳಗೆ ಬಂಧಿತರನ್ನಾಗಿಸಿ ಅಲ್ಲಿಂದ ಹೊರಬರಲಾರದಂತೆ ತಡೆಯುತ್ತಾರೆ. ಮತ್ತು ಅವರು ಬದುಕಿದ ರೀತಿಯನ್ನು ಮಾದರಿಯದ್ದಾಗಿ ಪರಿಚಯಿಸಿದ್ದಾರೆ. ಇತರರಿಗೆ ಆದರ್ಶಪ್ರಾಯರಾಗಿ ಬದುಕಬೇಕಾಗಿರುವುದರಿಂದ ವೈದಿಕ ಸ್ತ್ರೀಯರು ತಪ್ಪಿ ನಡೆಯುವುದನ್ನು ಮಾಸ್ತಿ ಎಲ್ಲಿಯೂ ಪರಿಚಯಿಸುವುದಿಲ್ಲ.

ಅವೈದಿಕ ಸಂಸ್ಕೃತಿಯ ಸ್ತ್ರೀಯರು ವೈದಿಕ ಸಂಸ್ಕೃತಿಯ ಸ್ತ್ರೀಯರು ಬಾಳಿಸಲು ಪ್ರಯತ್ನಿಸಿದ ಎಲ್ಲ ಮೌಲ್ಯಗಳನ್ನು ಮೀರಿ ನಡೆಯಲು ಪ್ರಯತ್ನಿಸುತ್ತಾರೆ. ಮದುವೆಗೂ ಮುನ್ನ ತಾಯಿಯಾಗಿ, ಪಾತಿವ್ರತ್ಯವನ್ನು ಮೀರಿ, ವಿವಾಹದ ಚೌಕಟ್ಟನ್ನು ಮುರಿದು ಬದುಕಲು ಪ್ರಯತ್ನಿಸುತ್ತಾರೆ. ಆದರೆ ಈ ತೀರ್ಮಾನ ಅವರ ಬದುಕನ್ನು ಸುಗಮವಾದ ಹಾದಿಯಲ್ಲಿ ಕೊಂಡೊಯ್ಯುವುದಿಲ್ಲ. ತಮ್ಮ ಸ್ವತಂತ್ರ ನಿಲುವುಗಳಿಂದ ಅವರು ನೆಮ್ಮದಿಯನ್ನೇ ಕಳೆದುಕೊಳ್ಳಬೇಕಾಗಿ ಬರುತ್ತದೆ. ಮಾನಸಿಕ ವೇದನೆಯನ್ನು ಸಹಿಸಲಾಗದ ಪರಿಣಾಮವಾಗಿ ಅವರು ಮರಳಿ ವೈದಿಕ ಸಂಸ್ಕೃತಿಯ ರೀತಿ ನೀತಿಗಳನ್ನೇ ಅನುಸರಿಸಿ ಮೂಲ ಸಂಸ್ಕೃತಿಗೇ ಬದ್ಧರಾಗಿರಬೇಕೆಂಬುದನ್ನು ಸಾರುವ ಕೆಲಸ ನಿರ್ವಹಿಸಿದ್ದನ್ನು ಈ ಸಂದರ್ಭದಲ್ಲಿ ಚರ್ಚಿಸಲಾಗಿದೆ. ಅವೈದಿಕರದು ಆದರ್ಶದ ಬದುಕಲ್ಲ ಎಂಬುದನ್ನು ತೋರಿಸುವ ಮಾಸ್ತಿ ವೈದಿಕರ ಬದುಕಿನ ಮಾರ್ಗವನ್ನು ಅವರು ಅನಿವಾರ್ಯವಾಗಿ ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಅಲ್ಲದೆ ಇದೇ ಅಧ್ಯಾಯದ ಸಂದರ್ಭದಲ್ಲಿ ಮಾಸ್ತಿ ಕತೆಗಳ ಸ್ತ್ರೀಯರಲ್ಲಿ ಕೆಲವರು ಸಹನೆಯ ಮಿತಿ ಮೀರಿದಾಗ ಶೋಷಣೆಯನ್ನು ವಿರೋಧಿಸಿ ಸ್ವತಂತ್ರ ಬದುಕು ಕಾಣುವ, ಪ್ರತಿಭಟನೆಯನ್ನು ತೋರುವ ವಿಭಿನ್ನ ಮನಃಸ್ಥಿತಿಯ ಸ್ತ್ರೀಯರನ್ನು ಅಭ್ಯಸಿಸಲಾಗಿದೆ.

ಸಮಕಾಲೀನ ಕತೆಗಾರರು ಸ್ತ್ರೀಯನ್ನು ಚಿತ್ರಿಸಿರುವ ಬಗೆಗಿಂತ ಮಾಸ್ತಿ ಹೇಗೆ ಭಿನ್ನರಾಗುತ್ತಾರೆ ಎಂಬುದನ್ನು ಮಾಸ್ತಿ ಅವರ ಕತೆಗಳ ಹಾಗೂ ಇತರ ಕತೆಗಾರರ ಕೆಲವು ಕತೆಗಳ ಆಶಯದ ಹಿನ್ನೆಲೆಯಿಂದಲೇ ಚರ್ಚಿಸಲಾಗಿದೆ. ಮಾಸ್ತಿ ಕೇವಲ ಸಂಸ್ಕೃತಿಯನ್ನು ಬಾಳಿಸಬೇಕಾದ ನಿಟ್ಟಿನಲ್ಲಿ

ಸ್ತ್ರೀಯನ್ನು ಚಿತ್ರಿಸಿದರೆ ಇತರ ಕತೆಗಾರರು ಸಂಸ್ಕೃತಿ-ಸಂಪ್ರದಾಯ ಉಳಿಸುವುದರ ಜೊತೆಗೇ ಸ್ತ್ರೀಯರ ಸಮಸ್ಯೆಗಳಿಗೆ ಸ್ಪಂದಿಸಿದ ಬಗೆಯನ್ನೂ, ಆಶಯಗಳ ಭಿನ್ನತೆಗಳನ್ನೂ ಸ್ಥೂಲವಾಗಿ ಅಭ್ಯಸಿಸಲಾಗಿದೆ. ಬಾಲ್ಯ ವಿವಾಹ, ವಿಚ್ಛೇದನ, ಮರು ವಿವಾಹಕ್ಕೆ ಸಂಬಂಧಿಸಿದಂತೆ ಮಾಸ್ತಿ ಮೌನ ತಳೆದಿರುವ ಸಂದರ್ಭಗಳನ್ನು ಅವರ ಸಮಕಾಲೀನ ಕತೆಗಾರರ ಕತೆಗಳ ಸ್ತ್ರೀಯರ ಬದುಕು ಪ್ರತಿನಿಧಿಸಿದ ಮೌಲ್ಯಗಳನ್ನು ಹಾಗೂ ಆಯಾ ಸಂದರ್ಭಗಳಲ್ಲಿ ಪ್ರಚಾರದಲ್ಲಿದ್ದ ಸುಧಾರಣಾವಾದ ಚರ್ಚೆ, ಪ್ರಗತಿಪರ ಆಲೋಚನೆ, ಸಾಂಪ್ರದಾಯಕ ನಂಬಿಕೆ, ಪ್ರತಿಭಟನೆ, ನವ ಆಲೋಚನಾ ಮಾರ್ಗ ಸ್ತ್ರೀಯ ಬದುಕಿನ ಬದಲಾವಣೆ ಕುರಿತು ತೆರೆದಿಡುವ ಕಾಳಜಿಯುತ ಚಿಂತನೆಗಳನ್ನು ಪರಾಮರ್ಶೆಗೆ ಅಳವಡಿಸಲಾಗಿದೆ. ಮಾಸ್ತಿಯವರ ಕತೆಗಳ ಸ್ತ್ರೀಯರು ಪ್ರತಿನಿಧಿಸಿದ ಮೌಲ್ಯಗಳೊಟ್ಟಿಗೆ ಇತರ ಕತೆಗಾರರ ಸ್ತ್ರೀಯರು ಪ್ರತಿನಿಧಿಸಿದ ಮೌಲ್ಯಗಳನ್ನಿಟ್ಟು ಮಾಸ್ತಿಯವರ ಮಹತ್ವ ಮತ್ತು ಮಿತಿಗಳನ್ನು ಶೋಧಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಸ್ತ್ರೀ ಸಂವೇದನೆಯಿಂದಲೇ ಹೊರಬಂದ ಕಥೆಗಳಲ್ಲಿನ ಸ್ತ್ರೀ ಪ್ರತಿನಿಧೀಕರಣದ ಬಗೆ ಹಾಗೂ ಮಾಸ್ತಿಯವರ ಕಥೆಗಳ ಕೇಂದ್ರ ಬಿಂದುವಾದ ಸ್ತ್ರೀ ಪ್ರತಿನಿಧೀಕರಣದ ಕುರಿತ ತೌಲನಿಕ ಚಿಂತನೆಗಳನ್ನೂ ಮಾಡಲಾಗಿದೆ.

ಅಲ್ಲಿನ ಭಿನ್ನತೆಗಳನ್ನು ಸಮಾಜ, ವ್ಯಕ್ತಿತ್ವ, ಚಿಂತನೆ, ಸಂದರ್ಭಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇಲ್ಲಿಯೇ ಮಾಸ್ತಿ, ಚಿಂತನೆ, ಸಮಕಾಲೀನ ಸ್ಥಿತಿಗತಿ, ಸಮಕಾಲೀನರ ಮನಃಸ್ಥಿತಿ, ಚಿಂತನೆಗಳಲ್ಲಿ ಮುಖಾಮುಖಿಯಾಗುತ್ತಾರೆ. ಈ ಕಾರಣಕ್ಕಾಗಿಯೇ ಮಾಸ್ತಿ ಕತೆಗಳ ಸ್ತ್ರೀ ಪ್ರತಿನಿಧೀಕರಣ ಅಧ್ಯಯನಕ್ಕೆ ಪ್ರಸಕ್ತಿ ಇದೆ ಎಂದು ಭಾವಿಸಲಾಗಿದೆ.

ಅನುಬಂಧ

ಮೂಲ ಆಕರ ಪತ್ಯಗಳು

ಪರಾಮರ್ಶನ ಕೃತಿಗಳು

ಅನುಬಂಧ

ಮೂಲ ಆಕರ ಪಠ್ಯಗಳು

ಕಥಾ ಸಂಕಲನಗಳು

೧. ಅನಂತಮೂರ್ತಿ ಯು.ಆರ್. - ಎರಡು ದಶಕದ ಕಥೆಗಳು, (೧೯೫೫ - ೧೯೭೦), ಅಕ್ಷರ ಪ್ರಕಾಶನ ಸಾಗರ, ೧೯೯೩

೨. ಅನಂತಮೂರ್ತಿ ಯು.ಆರ್. - ಐದು ದಶಕದ ಕಥೆಗಳು, (ಸಮಗ್ರ ಕಥಾಸಂಕಲನ ೧೯೯೩ ರಿಂದ ೨೦೦೧ರ ವರೆಗಿನ ಎಲ್ಲ ಕಥೆಗಳು), ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ , ೨೦೦೧

೩. ಅನುಪಮ ನಿರಂಜನ - ಕಣ್ಮಣಿ, ಡಿ.ವಿ.ಕೆ. ಮೂರ್ತಿ: ಮೈಸೂರು ೧೯೯೨ (ಮರು ಮುದ್ರಣ)

೪. ಅನುಪಮ ನಿರಂಜನ - ರೂಪಾರಿಯ ಲಕ್ಷ್ಮಿ, ಡಿ.ವಿ.ಕೆ. ಮೂರ್ತಿ: ಮೈಸೂರು ೧೯೯೨ (ಮರು ಮುದ್ರಣ)

೫. ಆನಂದ - ಭವತಿ ಭಿಕ್ಷಾಂದೇಹಿ ಮತ್ತು ಇತರ ಕಥೆಗಳು, ಡಿ.ವಿ.ಕೆ. ಮೂರ್ತಿ : ಮೈಸೂರು, ೧೯೩೦

೬. ಆನಂದ-ಮಾಟಗಾತಿ ಮತ್ತು ಇತರ ಕಥೆಗಳು, ಡಿ.ವಿ.ಕೆ. ಮೂರ್ತಿ : ಮೈಸೂರು , ೧೯೩೯

೭. ಆನಂದ-ಸಂಸಾರಶಿಲ್ಪ ಮತ್ತು ಇತರ ಕಥೆಗಳು, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೫೨

೮. ಆನಂದಕಂದ - ನಮ್ಮ ಬದುಕು ಸ್ವತಂತ್ರ ಪ್ರಕಟಣೆ, ಧಾರವಾಡ, ೧೯೩೯

೯. ಕಾಳೇಗೌಡ ನಾಗವಾರ ಡಾ. (ಸಂ) - ಜೀವನ ಪ್ರೀತಿ ಕೊಡಗಿನ ಗೌರಮ್ಮ ಬರೆದ ಎಲ್ಲ ಕಥೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, ೨೦೦೨

೧೦. ಕೃಷ್ಣರಾಯರು ಅ.ನ. - ಕಿಡಿ, ಅನ್ನಪೂರ್ಣ ಪ್ರಕಾಶನ, ಬೆಂಗಳೂರು ೧೯೪೭

೧೧. ಕೃಷ್ಣರಾಯರು ಅ.ನ. - ಮಿಂಚು ಒಂಬತ್ತು ಸಣ್ಣ ಕಥೆಗಳು, ಮಾಧವ ಸನ್ಸ್ ಬೆಂಗಳೂರು, ೧೯೪೭

೧೨. ಗೋಪಾಲಕೃಷ್ಣ ಭಟ್ ತೆಕ್ಕುಂಜೆ (ಸಂ) - ಯಶೋಧರ ಚರಿತೆ, (ಜನ್ನ), ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೬

೧೩. ಚಂದ್ರಶೇಖರ ಐತಾಳ ಗುಂಡ್ಮಿ (ಸಂ)- ದುರ್ಗ ಸಿಂಹನ ಕರ್ನಾಟಕ ಪಂಚತಂತ್ರ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೭೭.

೧೪. ಚದುರಂಗ - ಸಮಗ್ರ ಕಥೆಗಳು, ಅಭಿರುಚಿ ಪ್ರಕಾಶನ, ಮೈಸೂರು, ೧೯೯೯

೧೫. ಚಿತ್ತಾಲ ಯಶವಂತ (ಸಂ) - ಮಾಸ್ತಿ ಮೂವತ್ತು ಕಥೆಗಳು, ಪ್ರಿಸಂ ಬುಕ್ಸ್ ಪ್ರೈ. ಲಿ. ಬೆಂಗಳೂರು ೧೯೯೯

೧೬ ಚಿತ್ತಾಲ ಯಶವಂತ - ಯಶವಂತ ಚಿತ್ತಾಲರ ಕಥೆಗಳು, ಪ್ರಜಾಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು, ೧೯೮೩

೧೭ ತರಾಸು - ತರಾಸು ಸಮಗ್ರ ಕಥೆಗಳು, ಎಚ್.ವೆಂಕಟರಾಮಯ್ಯ ಏಂಡ್ ಸನ್ಸ್ ವಿದ್ಯಾನಿಧಿ ಬುಕ್ ಡಿಪೋ ಮೈಸೂರು ೧೯೮೫

೧೮ ತ್ರಿವೇಣಿ - ಎರಡು ಮನಸ್ಸು, ಸಾಯಿಗೀತ ಪ್ರಕಾಶನ, ಮೈಸೂರು, ೨೦೦೩(ಮರು ಮುದ್ರಣ)

೧೯ ತ್ರಿವೇಣಿ - ಸಮಸ್ಯೆಯ ಮಗು, ರವಿ ಪಬ್ಲಿಕೇಷನ್ಸ್, ಮೈಸೂರು, ೨೦೦೩(ಮರು ಮುದ್ರಣ)

೨೦ ತ್ರಿವೇಣಿ - ಹೆಂಡತಿಯ ಹೆಸರು, ಸಾಯಿಗೀತ ಪ್ರಕಾಶನ, ಮೈಸೂರು, ೨೦೦೩(ಮರು ಮುದ್ರಣ)

೨೧ ದಿವಾಕರ್ ಎಸ್. (ಸಂ) - ಶತಮಾನದ ಸಣ್ಣಕತೆಗಳು (ಕಳೆದ ನೂರು ವರ್ಷಗಳ ಕನ್ನಡ ಸಣ್ಣಕತೆಗಳ ಪ್ರಾತಿನಿಧಿಕ ಸಂಕಲನ), ಪ್ರಿಸಂ ಬುಕ್ಸ್ ಪ್ರೈ ಲಿ. ಬೆಂಗಳೂರು, ೧೯೯೭

೨೨ ನಾಯಕ್ ಜಿ. ಎಚ್. (ಸಂ) - ಕನ್ನಡ ಸಣ್ಣಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಹೊಸ ದೆಹಲಿ, ೧೯೯೧

೨೩ ಪದ್ಮಾವತಿ (ಚಿನ್ನಪ್ಪ) - ಕೊಡಗರ ಹೆಣ್ಣು ಮುತ್ತಮ್ಮ ಮತ್ತು ಇತರ ಕಥೆಗಳು, ಸತ್ಯ ಶೋಧನ ಪ್ರಕಟನ ಬೆಂಗಳೂರು ನಗರ ೧೯೮೮

೨೪ ಪಂಜೆ ರಾಮ ರಾಯ (ಸಂ) - ಪಂಜೆಯವರ ಕೃತಿಗಳು, ಸಂ. ೩ ಸಣ್ಣಕಥೆಗಳು ಮತ್ತು ಕಾದಂಬರಿಗಳು, ಓರಿಯಂಟ್ ಲಾಂಗ್ ಮನ್ ಲಿಮಿಟೆಡ್ ಮುಂಬಯಿ, ಕಲ್ಕತ್ತ, ಬೆಂಗಳೂರು, ಮದರಾಸ್, ನವದೆಹಲಿ, ೧೯೭೩

೨೫ ಪೂರ್ಣಚಂದ್ರ ತೇಜಸ್ವಿ - ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಎಲ್ಲ ಕಥೆಗಳು, ಪತ್ರಿಕೆ ಪ್ರಕಾಶನ, ೧೯೮೩

೨೬ ಪೂರ್ಣಚಂದ್ರ ತೇಜಸ್ವಿ - ಕಿರಗೂರಿನ ಗಯ್ಯಾಳಿಗಳು, ಪುಸ್ತಕ ಪ್ರಕಾಶನ, ಮೈಸೂರು ೧೯೯೧

೨೭ ಮಾಲಿನಿ ಮಲ್ಯ ಬಿ. (ಸಂ) - ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೨೦೦೧

೨೮ ಮೇವುಂಡಿ ಮಲ್ಲಾರಿ ಕುಲಕರಣಿ ದತ್ತಾತ್ರೇಯ (ಸಂ) - ಆರತಿ ಹೆಣ್ಣು ಮಕ್ಕಳ ಕಥಾ ಸಂಕಲನ, ಮನೋಹರ ಗ್ರಂಥ ಭಂಡಾರ ಧಾರವಾಡ, ೧೯೪೧

೨೯ ರಾಜಲಕ್ಷ್ಮಿ ಎನ್. ರಾವ್. - ಸಂಗಮ, ವಿಶ್ವ ಕನ್ನಡ ಸಮ್ಮೇಳನ ಗ್ರಂಥಮಾಲೆ ಬೆಂಗಳೂರು, ೧೯೮೫

೩೦ ರಾಘವೇಂದ್ರ - ಶಾಸನೀಸರ ಕಥೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೯೯೪

೩೧ ರಾಮರಾವ್ ಜಿ. - ಸತ್ಯರಾಜ, ಪೂರ್ವದೇಶ, ೧೮೯೯

೩೨ ಲಂಕೇಶ್ ಪಿ. - ಕಲ್ಲು ಕರಗುವ ಸಮಯ, `ಪತ್ರಿಕೆ' ಪ್ರಕಾಶನ, ೧೯೯೦

೩೩ ಲಂಕೇಶ್ ಪಿ. - ಸಮಗ್ರ ಕಥೆಗಳು, ಪತ್ರಿಕೆ ಪ್ರಕಾಶನ ಬೆಂಗಳೂರು, ೧೯೯೨

೩೪ ಲೀಲಾಬಾಯಿ ಕಾಮತ್ - ನಮ್ಮೂರ ಶಿವ ಪಾರ್ವತಿ ಹಾಗೂ ಹಾರಿ ಹೋದ ಹಕ್ಕಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೯೪

೩೫ ಲೀಲಾ ಭಟ್ ಬಿ. (ಸಂ) - ಎಮ್. ಎನ್. ಕಾಮತ್ ಕೃತಿಗಳು ಸಂ. ೩, ಕರ್ನಾಟಕ ಸಂಘ ಪುತ್ತೂರು ದ.ಕ.., ೧೯೯೩

೩೬ ವೆಂಕಟರಮಣ ಶಾಸ್ತ್ರಿ ಸಿ. - ನನ್ನ ಸಂಸಾರ, ಕಾದಂಬರಿ ಗ್ರಂಥ ಮಾಲೆ, ೧೯೧೫

೩೭ ವಾಣಿ - ಕಸ್ತೂರಿ, ಡಿ.ವಿ.ಕೆ. ಮೂರ್ತಿ, ಮೈಸೂರು ೪, ೧೯೯೮ (ಮರು ಮುದ್ರಣ)

೩೮ ವಾಣಿ - ಬಾಬು ಬರ್‍ತಾನೆ, ಡಿ.ವಿ.ಕೆ. ಮೂರ್ತಿ, ಮೈಸೂರು ೪, ೨೦೦೨ (ಮರು ಮುದ್ರಣ)

೩೯ ವೈದೇಹಿ - ಮರ ಗಿಡ ಬಳ್ಳಿ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೭೯

೪೦ ವೈದೇಹಿ - ಅಂತರಂಗದ ಪುಟಗಳು, ಡಿ.ವಿ.ಕೆ. ಮೂರ್ತಿ, ಮೈಸೂರು ೪, ೧೯೮೪

೪೧ ವೈದೇಹಿ - ಗೋಲ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೮೬

೪೨ ವೈದೇಹಿ - ಆಯ್ದ ಕಥೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೯೦

೪೩ ಶಾಂತಾದೇವಿ ಕಣವಿ - ಬಯಲು-ಆಲಯ, ಸುರುಚಿ ಪ್ರಕಾಶನ, ಮೈಸೂರು ೧೯೭೫ (ಮರು ಮುದ್ರಣ)

೪೪ ಶಾಂತಿನಾಥ ದೇಸಾಯಿ (ಡಾ.)-ಸಮಗ್ರ ಕಥೆಗಳು, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೦೧

೪೫ ಶ್ರೀಕಂಠ ಶಾಸ್ತ್ರಿ - ಚಂದ್ರಮತಿ, ಕರ್ನಾಟಕ ಗ್ರಂಥ ಮಾಲೆ, ೧೯೧೦

೪೬ ಶ್ರೀನಿವಾಸ - ಸಣ್ಣಕಥೆಗಳು ಸಂ.೧, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೮೯ (ಮರುಮುದ್ರಣ)

೪೭. ಶ್ರೀನಿವಾಸ - ಸಣ್ಣಕಥೆಗಳು ಸಂ.೨, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೯ (ಮರುಮುದ್ರಣ)

೪೮ ಶ್ರೀನಿವಾಸ, ಸಣ್ಣಕಥೆಗಳು ಸಂ.೩, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೦ (ಮರುಮುದ್ರಣ)

೪೯ ಶ್ರೀನಿವಾಸ - ಸಣ್ಣಕಥೆಗಳು ಸಂ ೪, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು, ೧೯೯೦ (ಮರುಮುದ್ರಣ)

೫೦ ಶ್ರೀನಿವಾಸ - ಸಣ್ಣಕಥೆಗಳು ಸಂ.೫, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು, (ಮರುಮುದ್ರಣ)

೫೧ ಶ್ರೀನಿವಾಸ - "ಸುಬ್ಬಣ್ಣ", ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು, ೧೯೯೭

೫೨ ಶ್ರೀವಳ್ಳಿ ಟಿ. ಎಸ್. (ಸಂ) - ಗಿರಿಬಾಲೆ ಸಾಹಿತ್ಯ ವಾಚಿಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೪

೫೩. ಶ್ರೀವಳ್ಳಿ ಟಿ.ಎಸ್. (ಡಾ.) (ಸಂ) - ಸರಸ್ವತಿ ಬಾಯಿ ರಾಜವಾಡೆ, ಶಿವರಾಮ ಕಾರಂತ ಅಧ್ಯಯನ ಕೇಂದ್ರ ವಿವೇಕಾನಂದ ಕಾಲೇಜು ಪುತ್ತೂರು ದ.ಕ., ೨೦೦೦

೫೪ ಶ್ಯಾಮಲಾದೇವಿ ಬೆಳಗಾಂವ್‌ಕರ್ - ಹೂಬಿಸಿಲು, ಜಯಕರ್ನಾಟಕಾಲಯ ಧಾರವಾಡ, ೧೯೩೬

೫೫ ಶ್ಯಾಮಲಾದೇವಿ ಬೆಳಗಾಂವ್‌ಕರ್ - ಹೊಂಬಿಸಿಲು, ಮನೋರಂಜನ ಸಮಿತಿ ಧಾರವಾಡ, ೧೯೪೩

೫೬ ಸಬಿಹಾಭೂಮಿ ಗೌಡ (ಸಂ) - ಸರಸ್ವತಿ ಬಾಯಿ ರಾಜವಾಡೆಯವರ ಆಯ್ದ ಕತೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೪

೫೭ ಸದಾಶಿವ ಕೆ. - ಅಪರಿಚಿತರು, ಅಕ್ಷರ ಪ್ರಕಾಶನಸಾಗರ ಮೈಸೂರು, ೧೯೭೧

ಕಾದಂಬರಿಗಳು

೧ ಅನಂತ ನಾರಾಯಣ ಶಾಸ್ತ್ರೀ (ಅನು)- ಸತ್ಯವತಿ ಚರಿತ್ರೆ, ಕರ್ನಾಟಕ ಗ್ರಂಥ ಮಾಲೆ, ಮೈಸೂರು ೧೮೯೭

೨ ಕಲ್ಯಾಣಮ್ಮ ಆರ್. - ಪ್ರಿಯಂವದಾ, ಶಾರದಾ ಗ್ರಂಥ ಮಾಲಾ, ಬೆಂಗಳೂರು, ೧೯೧೭

೩ ಕಲ್ಯಾಣಮ್ಮ ಆರ್. - ನಿರ್ಭಾಗ್ಯವನಿತೆ ಶಾರದಾ ಗ್ರಂಥ ಮಾಲಾ, ಬೆಂಗಳೂರು, ೧೯೨೪

೪ ಕಲ್ಯಾಣಮ್ಮ ಆರ್. - ಸುಖಲತಾ, ಶಾರದಾ ಗ್ರಂಥ ಮಾಲಾ, ಬೆಂಗಳೂರು, ೧೯೨೭

೫ ಕುವೆಂಪು - ಕಾನೂರು ಹೆಗ್ಗಡಿತಿ, ಉದಯ ರವಿ ಪ್ರಕಾಶನ ವಾಣೀ ವಾಸಪುರಂ, ಮೈಸೂರು, ೨೦೦೦ (ಮರು ಮುದ್ರಣ)

೬ ಕುವೆಂಪು - ಮಲೆಗಳಲ್ಲಿ ಮದುಮಗಳು, ಉದಯ ರವಿ ಪ್ರಕಾಶನ ವಾಣೀ ವಾಸಪುರಂ, ಮೈಸೂರು, ೨೦೦೧(ಮರು ಮುದ್ರಣ)

೭ ಗಳಗನಾಥ (ಅನು)- ಕಮಲ ಕುಮಾರಿ, - ೧೯೧೦

೮ ಗುಲ್ವಾಡಿ ವೆಂಕಟರಾವ್ - ಇಂದಿರಾಬಾಯಿ , ಕನ್ನಡ ಪ್ರಪಂಚ ಪ್ರಕಾಶನ ಮಂಗಳೂರು, ೧೮೯೯

೯ ದಾಮೋದರ ಸದಾಶಿವ ದೇಶಪಾಂಡೆ - ಸಮಾಜ ರಹಸ್ಯ, ಬಲಭೀಮ ವಾಚನಾಲಯ ಮದಬಾಲ, ೧೯೧೮

೧೦ ಪುಟ್ಟಣ್ಣ ಎಂ.ಎಸ್. - ಮಾಡಿದ್ದುಣ್ಣೋ ಮಹರಾಯ, ೧೯೨೮

೧೧ ಬಾಲ ಸರಸ್ವತಿ - ವಿಯೋಗಿನಿ, ದಿ. ಜನರಲ್ ಏಜನ್ಸಿ ಮೈಸೂರು, ೧೯೦೯

೧೨ ವಾಸುದೇವಾಚಾರ್ಯ ಕೆರೂರು - ಇಂದಿರಾ, ಉಷಾ ಸಾಹಿತ್ಯ ಮಾಲೆ ಮೈಸೂರು, ೧೯೦೮

೧೩ ವಿಜಯಾ ದಬ್ಬೆ - ಪಿತೃಪಿಣಿಯ ಹೆಜ್ಜೆಗಳು (ನಂಜನ ಗೂಡು ತಿರುಮಲಾಂಬಾ ಅವರ ಸಾಹಿತ್ಯದ ವಾಲಿಕೆ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೧೯೯೨

೧೪ ವೆಂಕಟಾಚಾರ್ಯ - ವಿಷ ವೃಕ್ಷ, ಸಾಹಿತ್ಯ ಮಂದಿರ, ಬೆಂಗಳೂರು, ೧೯೧೨

೧೫ ಶಿವರಾಮ ಕಾರಂತ ಕೆ. - ಕುಡಿಯರ ಕೂಸು, ರಾಜಲಕ್ಷ್ಮಿ ಪ್ರಕಾಶನ. ಬೆಂಗಳೂರು ೧೯೫೬

೧೬ ಶಿವರಾಮ ಕಾರಂತ ಕೆ. - ಮರಳಿ ಮಣ್ಣಿಗೆ, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೬ (ಮರುಮುದ್ರಣ)

೧೭ ಶಿವರಾಮ ಕಾರಂತ ಕೆ. - ಸರಸಮ್ಮನ ಸಮಾಧಿ, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೭ (ಮರುಮುದ್ರಣ)

೧೮ ಶಿವರಾಮ ಕಾರಂತ ಕೆ. - ಮೈಮನಗಳ ಸುಳಿಯಲ್ಲಿ, ಎಸ್.ಎಸ್.ಬಿ.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೮ (ಮರುಮುದ್ರಣ)

೧೯ ಶ್ರೀ ಬಸವಾರ್ಯ - ಮನೋಹರಿ, ಬೂದಹಾಳ ಮಠ, ೧೯೨೬

೨೦ ಹನುಮಂತ ವೆಂಕಟೇಶ - ಭೀಷಣ ಚಿತ್ರ, ಕರ್ನಾಟಕ ವಾಙ್ಮಯ ವರ್ಧಕ ಗ್ರಂಥ ಮಾಲೆ, ೧೯೧೯

ಕಾವ್ಯಗಳು

೧ ಅಮೃತ ಸೋಮೇಶ್ವರ (ಸಂ) - ತುಳುಪಾಡ್ದನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭

೨ ಅಣ್ಣಿಗೇರಿ ಎಂ. ಎಂ., ಶೇಷಶಾಸ್ತ್ರಿ ಆರ್. (ಸಂ) - ಶಾಸನ ಸಂಗ್ರಹ, ಕಸಾಪ ಚಾಮರಾಜಪೇಟೆ, ಬೆಂಗಳೂರು ೧೯೮೨

೩ ಕಮಲಾ ಹಂಪನಾ, (ಸಂ) - ಚಾವುಂಡರಾಯ ಪುರಾಣ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೮೩

೪ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ) - ಕರ್ಣಾಟ ಭಾರತ ಕಥಾ ಮಂಜರಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಲಾಯ ಬೆಂಗಳೂರು ೧೯೮೫

೫ ಕೇಶವ ಭಟ್ಟ ಟಿ.,(ಸಂ) - ವಡ್ಡಾರಾಧನೆ (ಶಿವಕೋಟ್ಯಾಚಾರ್ಯ), ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ೧೯೭೬

೬ ಕೋತಿನ ಎಂ.ಎಸ್. (ಸಂ) - ಮೋಹನ ತರಂಗಿಣಿ, ಕ.ಸಾ.ಪ. ಬೆಂಗಳೂರು ೧೯೭೭

೭ ದೇವೀರಪ್ಪ ಎಚ್., ದೇಜಗೌ (ಸಂ) - ರನ್ನ ಕವಿಯ ಅಜಿತ ತೀರ್ಥಂಕರ ಪುರಾಣತಿಲಕಂ, ಜೈನ ಸಾಹಿತ್ಯ ಪ್ರಚಾರ ಸಂಘ ಮತ್ತು ಜೈನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು, ೧೯೬೫

೮ ದೇವೀರಪ್ಪ ಎಚ್.(ಸಂ) - ನಂಜುಂಡ ಕವಿ ವಿರಚಿತ ರಾಮನಾಥ ಚರಿತ(ಸಂ.೨), ಪ್ರಾಚ್ಯ ಸಂಶೋಧನಾಲಯ ಮೈಸೂರು ವಿ ವಿ ಮೈಸೂರು, ೧೯೬೫

೯ ದೇವೀರಪ್ಪ ಎಚ್., ಪದ್ಮನಾಭ, ಶರ್ಮ ಎಂ.ಸಿ. - ಜನ್ನಕವಿಯ ಅನಂತ ತೀರ್ಥಂಕರ ಪುರಾಣ ಪ್ರಾಚ್ಯ ಸಂಶೋಧನಾಲಯ ಮೈಸೂರು, ೧೯೭೨

೧೦ ನಂಜುಂಡಾರಾಧ್ಯ ಎಂ.ಜಿ.-ಗಿರಿಜಾ ಕಲ್ಯಾಣ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು. ೧೯೭೭

೧೧ ನಾಗರಾಜಯ್ಯ ಹಂಪ.(ಅನು) - ನೇಮಿನಾಥ ಪುರಾಣ (ಸಂ.೧-೨), ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ೧೯೮೧

೧೨ ನಾಯಕ ಎನ್. ಆರ್. (ಡಾ.) (ಸಂ) - ಕಾರವಾರ ಜಿಲ್ಲೆಯ ಜನಪದ ಗೀತೆಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ೧೯೮೨

೧೩ ನಾಯಕ ಎನ್. ಆರ್. (ಸಂ) - ಪಾಠಾಂತರ ಕಥನ ಕವನಗಳು - ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೭

೧೪ ಪುಟ್ಟಪ್ಪ ಕೆ.ವಿ.,(ಸಂ) - ಪಂಪಭಾರತ ಎಂಬ ವಿಕ್ರಮಾರ್ಜುನ ವಿಜಯಂ, ಪ್ರಸಾರಾಂಗ ಮೈಸೂರು ವಿಶ್ವ ವಿದ್ಯಾನಿಲಯ ಮೈಸೂರು, ೧೯೭೭

೧೫ ಬಸವರಾಜು ಎಲ್.(ಸಂ)-ಪಂಪನ ಆದಿಪುರಾಣ, ಗೀತಾ ಬುಕ್ ಹೌಸ್ ಮೈಸೂರು, ೧೯೭೬

೧೬ ಬಸವಾರಾಧ್ಯ ಎನ್., ಪಂಡಿತ ಬಸಪ್ಪ ಎಸ್. (ಸಂ) - ರಾಘವಾಂಕನ ಹರಿಶ್ಚಂದ್ರ ಕಾವ್ಯಂ, ಪ್ರಾಚ್ಯಕಾವ್ಯ ಪ್ರಕಾಶ ಮಂದಿರ ಮೈಸೂರು, ೧೯೭೫

೧೭ ಮಲ್ಲಾರ ಬಿ.ವಿ. - ಹರಿಹರನ ರಗಳೆಗಳು, ಸಮಾಜಪುಸ್ತಕಾಲಯ ಧಾರವಾಡ, ೧೯೬೮

೧೮ ಮಂಜುನಾಥ ಜಿ.ಜಿ.(ಸಂ) - ಸನತ್ಕುಮಾರ ಚರಿತೆ, ಕ.ಅ. ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೭೦

೧೯ ವಿವೇಕ ರೈ ಬಿ. ಎ. (ಸಂ)- ನಡುಗನ್ನಡ ಕಾವ್ಯ ಸಂಕಲನ, ಪ್ರಸಾರಾಂಗ, ಮಂಗಳೂರು ವಿಶ್ವ ವಿದ್ಯಾನಿಲಯ,೧೯೯೨

೨೦ ವೆಂಕಟರಾಮಪ್ಪ ಕೆ., ಜವರೇಗೌಡ ದೇ(ಸಂ) - ನೇಮಿಚಂದ್ರನ ಲೀಲಾವತಿ ಪ್ರಬಂಧಂ, ಶಾರದಾ ಮಂದಿರ ಮೈಸೂರು ೧೯೬೬

೨೧ ವೆಂಕಟರಾಮಪ್ಪ ಕೆ. - ನಯಸೇನನ ಧರ್ಮಾಮೃತಂ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೭೭

೨೨ ಶ್ರೀನಿವಾಸ ಅಯ್ಯಂಗಾರ್ ಜಿ.ಆರ್.(ಸಂ) - ಚೌಂಡರಾಜ ವಿರಚಿತ ಅಭಿನವ ದಶಕುಮಾರ ಚರಿತೆ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೭೭

೨೩ ಸುಂಕಾಪುರ ಎಂ.ಎಸ್.(ಸಂ.೩) - ಸಕಲಪುರಾತನರ ವಚನಗಳು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೨೪ ಹಿರೇಮಠ ಆರ್.ಸಿ.(ಸಂ) - ರಾಘವಾಂಕನ ಸೋಮನಾಥ ಚರಿತೆ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೭

೨೫ ಹಿರೇಮಠ ಆರ್.ಸಿ., ಕುಲಕರ್ಣಿ ಬಿ.ಎಸ್.(ಸಂ) - ನೇಮಿನಾಥ ಪುರಾಣಂ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ, ೧೯೬೮

೨೬ ಹಿರೇಮಠ ಆರ್.ಸಿ. (ಸಂ) - ಸಕಲಪುರಾತನರ ವಚನಗಳು, ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ, ವಿಶ್ವವಿದ್ಯಾಲಯ ಧಾರವಾಡ, ೧೯೬೮

೨೭ ಹಿರೇಮಠ ಆರ್.ಸಿ.(ಸಂ) - ಹರಿಹರ ದೇವಕೃತ ಪುರಾತನರ ರಗಳೆಗಳು, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ , ೧೯೭೩

೨೮ ಹೆಗಡೆ ಎಲ್. ಆರ್.(ಡಾ.) (ಸಂ) - ಸುಪ್ವಿ ಸುಪ್ವಿ ಸುವ್ವಾಲೆ, ಸಮಾಜ ಪುಸ್ತಕಾಲಯ ಧಾರವಾಡ , ೧೯೭೧

೨೯ ಹೆಗಡೆ ಎಲ್. ಆರ್.(ಡಾ.) (ಸಂ) - ಹಾಲಿನ ತೆನೆ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ , ೧೯೭೭

ಪರಾಮರ್ಶನ ಸಾಹಿತ್ಯ

೧ ಅನಂತಮೂರ್ತಿ ಯು.ಆರ್. - ಸಮಕ್ಷಮ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ೧೯೮೦

೨ ಆತ್ಮಾರಾಮ - ಗರತಿ, ಸದ್ಗುರುಸೇವಾ ಸಾಹಿತ್ಯ ಮಾಲೆ, ಪರಮಾನಂದ ಮಠ, ಶೀಗೇಹಳ್ಳಿ, ಸಿರಸಿ ೧೯೫೧

೩ ಆರ್ಕೆ (ಡಾ.) - ಸಾಹಿತ್ಯ ಪ್ರಕ್ರಿಯೆ (ವಿಮರ್ಶಾ ಲೇಖನಗಳು), ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೫

೪ ಇಂದಿರಾ ಆರ್. - ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ ಮೈಸೂರು, ೧೯೯೯

೫ ಇನಾಂದಾರ್ ವಿ. ಎನ್. - ಶ್ರೀರಾಮ ಪಟ್ಟಾಭಿಷೇಕ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು, ೧೯೮೦

೬ ಕರೀಗೌಡ ಬೀಚನಹಳ್ಳಿ (ಡಾ.) - ವ್ಯಷ್ಟಿ ಮತ್ತು ಸಮಷ್ಟಿ (ಕನ್ನಡ ನವ್ಯ ಕಥೆಗಳ ಅಧ್ಯಯನ), ಅಜಂತ ಪ್ರಕಾಶನ ಬೆಂಗಳೂರು, ೧೯೯೧

೭ ಕೀರ್ತಿನಾಥ ಕುರ್ತಕೋಟಿ - ನೂರು ಮರ ನೂರು ಸ್ವರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ವಿದ್ಯಾರಣ್ಯ ಕಮಲಾಪುರ, ೧೯೯೮

೮ ಕೇಶವ ಶರ್ಮ ಕೆ. - ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ, ಅಪ್ರಕಟಿತ ಸಂಶೋಧನ ಪ್ರಬಂಧ ೧೯೮೮

೯ ಕೇಶವ ಶರ್ಮ ಕೆ., (ಸಂ) - ಸಾಹಿತ್ಯ ವಿಮರ್ಶೆ ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೭

೧೦ ಗಿರಡ್ಡಿ ಗೋವಿಂದರಾಜ - ಸಣ್ಣಕತೆಯ ಹೊಸ ಒಲವುಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ ೧೯೭೮

೧೧ ಗಿರಡ್ಡಿ ಗೋವಿಂದರಾಜ - ಸಾಹಿತ್ಯ ಮತ್ತು ಪರಂಪರೆ, ಅಭಿಜಾತ ಗ್ರಂಥಮಾಲೆ ಬೆಂಗಳೂರು ೧೯೮೧

೧೨ ಗಿರಡ್ಡಿ ಗೋವಿಂದರಾಜ, (ಸಂ) - ಕಥೆಗಳು ೧೯೮೧, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೩

೧೩ ಗಿರಿಜಾ ಶಾಸ್ತ್ರಿ (ಡಾ.) - ಕಥಾ ಮಾನಸಿ (ಆಧುನಿಕ ಕನ್ನಡ ಸಣ್ಣಕಥೆಗಳ ಸ್ತ್ರೀ ವಾದಿ ಅಧ್ಯಯನ), ಸಾಹಿತ್ಯ ಪ್ರಕಾಶನ ಮುಂಬಯಿ, ೨೦೦೦

೧೪ ಜ್ಯೋತ್ಸ್ನಾ ಕಾಮತ್ (ಡಾ.) - ಮಹಿಳೆ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ, ೧೯೯೯

೧೫ ತಿಪ್ಪೇರುದ್ರಸ್ವಾಮಿ ಎಚ್. (ಡಾ.) - ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೯೭.

೧೬ ದೇವಿಪ್ರಸಾದ್ ಚಟ್ಟೋಪಾಧ್ಯಾಯ - ಅನು : ಡಿ. ಕುಮಾರಪ್ಪ ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪ್ರಕಾಶನ, ೧೯೯೭

೧೭ ದೇಶ ಕುಲಕರ್ಣಿ - ಅಂತರ (ವಿಮರ್ಶೆ), ಅನುಭವ ಮಂಟಪ ಬೆಂಗಳೂರು, ೧೯೯೪

೧೮ ನಂಜುಂಡಸ್ವಾಮಿ ಎಚ್.ಎಸ್. - ಸ್ತ್ರೀ ಪ್ರಪಂಚ, ಗೌತಮ ಇಂಟರ್ ನ್ಯಾಷನಲ್ಸ್ ಬೆಂಗಳೂರು, ೧೯೯೩

೧೯ ನಾಗರಾಜ್ ಡಿ. ಆರ್. - ಅಮೃತ ಮತ್ತು ಗರುಡ, ಪುಸ್ತಕ ಚಂದನ, ವಿಜಯನಗರ ಬೆಂಗಳೂರು, ೧೯೮೩

೨೦ ನಾಗಭೂಷಣ ಡಿ.ಎಸ್., ರಾಘವೇಂದ್ರ ಪಾಟೀಲ, ಸ.ಉಷಾ (ಸಂ) - ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ, ಸಂವಾದ ಪ್ರಕಾಶನ, ಮಲ್ಲಾಡಿ ಹಳ್ಳಿ, ೧೯೯೨

೨೧ ನಾರಾಯಣ ಕೆ. ವಿ. (ಡಾ.), ಬಿ. ಕೃಷ್ಣಮೂರ್ತಿ (ಡಾ.)(ಸಂ) - ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೨

೨೨ ನಾಯಕ ಜಿ.ಎಚ್. - ನಿರಪೇಕ್ಷ(ಸಾಹಿತ್ಯವಿಮರ್ಶೆ), ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ೧೯೮೪

೨೩ ನಾಯಕ ಜಿ.ಎಚ್. - ನಿಜದನಿ (ಸಾಹಿತ್ಯವಿಮರ್ಶೆ) ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ೧೯೮೮

೨೪ ನಾಯಕ ವಿ.ಗ. - ಒರೆಗಲ್ಲು, ಸ್ಮೃತಿ ಪ್ರಕಾಶನ ಅಡ್ಯನಡ್ಕ ದ.ಕ., ೧೯೯೩

೨೫ ನಾಯಕ ವಿ.ಗ. - ಪ್ರತಿಸ್ಪಂದನ, ಸ್ಮೃತಿ ಪ್ರಕಾಶನ ಅಡ್ಯನಡ್ಕ ದ.ಕ., ೧೯೯೭

೨೬ ನಾಯಕ ಹಾ. ಮಾ. (ಡಾ.)(ಸಂ) - ಶ್ರೀನಿವಾಸ ಸಾಹಿತ್ಯ - ಮಾಸ್ತಿ ಸಾಹಿತ್ಯ ಸಮೀಕ್ಷೆ, ಮಾಸ್ತಿ ಸನ್ಮಾನ ಸಮಿತಿ ಮೈಸೂರು, ೧೯೭೪

೨೭ ನಾಯಕ ಹಾ.ಮಾ. (ಸಂ)-ಶ್ರೀನಿವಾಸ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಮೈಸೂರು ಪ್ರಕಾಶನ, ೧೯೭೪

೨೮ ನಿಸಾರ್ ಅಹಮದ್ ಕೆ. ಎಸ್. (ಪ್ರ. ಸಂ.) ಎಲ್. ಎಸ್.ಶೇಷಗಿರಿರಾವ್, ಗಿರಡ್ಡಿ ಗೋವಿಂದ ರಾಜ, ಕೆ.ವಿ.ನಾರಾಯಣ (ಸಂ) - ದಶವಾರ್ಷಿಕ ವಿಮರ್ಶೆಗಳು ೧೯೭೪ - ೮೩, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೬

೨೯ ಪ್ರಭಾವತಿ ಎಸ್.ವಿ.(ಡಾ.) - ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದೀ ನೆಲೆಗಳು, ಬೆಂಗಳೂರು, ೨೦೦೨

೩೦ ಪ್ರಹ್ಲಾದ್ ನರೆಗಲ್ಲು, ವೆಂಕಟೇಶ ಮಳಿಯೆ (ಅನು) - ಸ್ತ್ರೀಯರ ಸಮಸ್ಯೆಗಳು, ಪಾಂಡೇಶ್ವರ ಸುಬ್ಬರಾಯರು, ಪಾರ್ಕ್ ವ್ಯೂ ಬೆಂಗಳೂರು, ೧೯೫೫

೩೧ ಪುರುಷೋತ್ತಮ ಬಳಿಮಲೆ (ಡಾ.) - ಶಿಷ್ಟ, ಪರಿಶಿಷ್ಟ, ಮದಿಪು ಪ್ರಕಾಶನ ಮಂಗಳ ಗಂಗೋತ್ರಿ ಮಂಗಳೂರು, ೧೯೯೩

೩೨ ಪ್ರೋ. ಲಂಕಿ ರಾಮಮೂರ್ತಿ (ಡಾ.) - ಸೀತಾಯಣ, ಮಿಹಾರಿ ಪ್ರಕಾಶನ, ಶಿವಮೊಗ್ಗ, ೧೯೮೬

೩೩ ಬರಗೂರು ರಾಮಚಂದ್ರಪ್ಪ (ಸಂ) - ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕ. ಸಾ. ಪ. ಬೆಂಗಳೂರು, ೧೯೯೩

೩೪ ಬಸವರಾಜು ಸಬರದ (ಡಾ.) - ಹೊಸದಿಕ್ಕು, ಪಲ್ಲವಿ ಪ್ರಕಾಶನ ಬೀದರ್, ೧೯೯೦

೩೫ ಬುದ್ದಣ್ಣ ಹಿಂಗಮಿರೆ, (ಸಂ) - ಸಾಹಿತ್ಯ ವಿಮರ್ಶೆ ೧೯೮೭, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೮

೩೬ ಭಗವಾನ್, (ಸಂ) - ಸಾಹಿತ್ಯ ವಿಮರ್ಶೆ ೧೯೮೫, ಕರ್ನಾಟಕ ಸಾಹಿತ್ಯಅಕಾಡೆಮಿ ಬೆಂಗಳೂರು, ೧೯೮೬

೩೭ ಮಣಿಮಾಲಿನಿ ವಿ.ಕೆ. (ಡಾ.) - ದ್ರೌಪದಿ ಸಮೀಕ್ಷೆ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ, ಮುಂಬಯಿ ೧೯೯೬

೩೮ ಮಹೇಶ್ವರಿ ಯು. - ಇದು ಮಾನುಷಿಯ ಓದು, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು, ದ.ಕ. ೨೦೦೧

೩೯ ಮಂಗಳ ಚಿ.ನ. - ಮಾತೃಪೂಜೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೪

೪೦ ಮಾವಿನ ಕರೆ ರಂಗನಾಥನ್ (ಸಂ) - `ಶ್ರೀನಿವಾಸ' ಪುರೋಗಾಮಿ, ಸಾಹಿತ್ಯಸಂಘ ಬೆಂಗಳೂರು, ೧೯೭೨

೪೧ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಆರಂಭದ ಆಂಗ್ಲಸಾಹಿತ್ಯ, ಜೀವನ ಕಾರ್ಯಾಲಯ ಟ್ರಸ್ಟ್ ಬೆಂಗಳೂರು, ೧೯೮೭ (ಮರು ಮುದ್ರಣ)

೪೨ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಭಾವ-೧, ಯುವಲೋಕ ಪ್ರಕಾಶನ ಶ್ರೀನಗರ ಧಾರವಾಡ, ೧೯೯೦ (ಮರು ಮುದ್ರಣ)

೪೩ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಭಾವ -೨, ಯುವಲೋಕ, ಪ್ರಕಾಶನ ಶ್ರೀನಗರ ಧಾರವಾಡ, ೧೯೯೦, (ಮರು ಮುದ್ರಣ)

೪೪ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಭಾವ -೩, ಯುವಲೋಕ ಪ್ರಕಾಶನ ಶ್ರೀನಗರ ಧಾರವಾಡ, ೧೯೯೦ (ಮರು ಮುದ್ರಣ)

೪೫ ಮಾಸ್ತಿ ವೆಂಕಟೇಶ ಅಯ್ಯಂಗಾರ್ - ಅಂತರಗಂಗೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ ಬೆಂಗಳೂರು, ೨೦೦೦ (ಮರು ಮುದ್ರಣ)

೪೬ ಮೂರ್ತಿರಾವ್ ಎ. ಎನ್. - ಶ್ರೀ ಮಾಸ್ತಿಯವರ ಕಥೆಗಳು (ವಿಮರ್ಶೆ), ಕಾವ್ಯಾಲಯ ಪ್ರಕಾಶಕರು ಜಯನಗರ ಮೈಸೂರು, ೧೯೯೯

೪೭ ರಘುನಾಥ ರಾವ್ ಡಿ. - ಸಮ್ಮುಖ ವಿಮರ್ಶಾ ಸಂಕಲನ, ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲಅಂಕೋಲಾ, ೧೯೯೭

೪೮ ರಹಮತ್ ತರೀಕೆರೆ, (ಸಂ) - ಕನ್ನಡ ಸಾಹಿತ್ಯ ಮೀಮಾಂಸೆ ಸಂ. ೧, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ. ೨೦೦೧

೪೯ ರಾಜೇಂದ್ರ ಚೆನ್ನಿ - ಅಧ್ಯಯನ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, -

೫೦ ರಾಜೇಂದ್ರ ಚೆನ್ನಿ (ಸಂ) - ಸಾಹಿತ್ಯ ವಿಮರ್ಶೆ ೧೯೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೯

೫೧ ರಾಮರಾವ್ ಆರ್. ಎಸ್. - ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ೧೯೯೪

೫೨ ವಿಜಯಾ ದಬ್ಬೆ - ನಾರಿ : ದಾರಿ - ದಿಗಂತ, ರಚನಾ ಪ್ರಕಾಶನ ಮೈಸೂರು, ೧೯೯೭

೫೩ ವಿವಿಧ ಲೇಖಕರು - ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೩

೫೪ ವೆಂಕಟರಾಮಪ್ಪ ಕೆ. ಎಸ್. - ಸ್ತ್ರೀ ಮತ್ತು ಸಮಾಜ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ. ವಿ. ಮೈಸೂರು, ೧೯೭೧

೫೫ ವೆಂಕಟವಿಶ್ವನಾಥ ಎಸ್. - ಉಪಾಧ್ಯೇಯ, ರಸಿಕ ರಂಗ ಪ್ರಕಾಶನ ಬೆಂಗಳೂರು, ೧೯೮೪

೫೬ ಶರ್ಮ ತಿ.ತಾ. - ಮಾಸ್ತಿಯವರ ಮನೋಧರ್ಮ, ಕಜನಾಶ್ರಯ, ಬೆಂಗಳೂರು, ೧೯೭೦

೫೭ ಶಾಲಿನಿ ರಘುನಾಥ (ಡಾ.) - ಸಮನ್ವಿತ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ೧೯೯೪

೫೮ ಶಿವರಾಮ ಪಡಿಕ್ಕಲ್ - ನಾಡು ನುಡಿಯ ರೂಪಕ ಆಧುನಿಕತೆ ಮತ್ತು ಕನ್ನಡದ ಮೊದಲ ಕಾದಂಬರಿಗಳು, ಪ್ರಸಾರಾಂಗ, ಮಂಗಳೂರು ವಿಶ್ವ ವಿದ್ಯಾನಿಲಯ, ಮಂಗಳ ಗಂಗೋತ್ರಿ, ೨೦೦೧

೫೯ ಶಿವರುದ್ರಪ್ಪ ಜಿ. ಎಸ್. - ಗತಿಬಿಂಬ, ಸುರುಚಿ ಪ್ರಕಾಶನ, ಮೈಸೂರು, ೧೯೭೯

೬೦ ಶಿವರುದ್ರಪ್ಪ ಜಿ. ಎಸ್. (ಸಂ) - ಮಹಿಳೆ ಮತ್ತು ಕನ್ನಡ ಸಾಹಿತ್ಯ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಯ, ೧೯೭೯

೬೧ ಶಿವರುದ್ರಪ್ಪ ಜಿ. ಎಸ್. (ಸಂ) - ಸಾಹಿತ್ಯ ವಾರ್ಷಿಕ ೧೯೭೯, ಪ್ರಸಾರಾಂಗ ಬೆಂಗಳೂರು ವಿಶ್ವ ವಿದ್ಯಾನಿಲಯ ಬೆಂಗಳೂರು, ೧೯೮೧

೬೨ ಶಿವರುದ್ರಪ್ಪ ಜಿ. ಎಸ್. (ಸಂ) - ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೯

೬೩ ಶಿವರುದ್ರಪ್ಪ ಜಿ. ಎಸ್. (ಸಂ) - ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, ಪ್ರಸರಾಂಗ ಬೆಂಗಳೂರು ವಿಶ್ವ ವಿದ್ಯಾನಿಲಯ ಬೆಂಗಳೂರು, ೧೯೯೭

೬೪ ಶ್ರೀನಿವಾಸ ಹಾವನೂರು (ಡಾ.) - ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

೬೫ ಶೇಷಗಿರಿರಾವ್ ಎಲ್.ಎಸ್. - ಮಾಸ್ತಿ ವೆಂಕಟೇಶ ಅಯ್ಯಂಗಾರ್, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ. ಎಂ.ಜಿ.ಎಂ. ಕಾಲೇಜು ಉಡುಪಿ, ೧೯೫೭

೧೬ ಶೇಷಗಿರಿ ರಾವ್ ಎಲ್. ಎಸ್. - ಹೊಸಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೮

೧೭ ಸತ್ಯನಾರಾಯಣ ಕೆ. - ಆಸಕ್ತಿ, ಹಂಸಧ್ವನಿ ಪ್ರಕಾಶನ ಬೆಂಗಳೂರು, ೧೯೯೧

೧೮ ಸತ್ಯನಾರಾಯಣ ಮಲ್ಲಿಪಟ್ಟಣ - ಶ್ರೀನಿವಾಸರ ಕಥಾಸಾಹಿತ್ಯ: ಒಂದು ಅಧ್ಯಯನ (ಅಪ್ರಕಟಿತ), ೧೯೮೧

೧೯ ಸಬಿಹಾ ಭೂಮಿ ಗೌಡ - ಬಗೆ, ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೦೧

೨೦ ಸಿದ್ದಲಿಂಗಪಟ್ಟಣಶೆಟ್ಟಿ (ಅನು) - ಹೆಣ್ಣಿನ ಸ್ಥಾನಮಾನ, ಸಮಾಜ ಪುಸ್ತಕಾಲಯ, ಧಾರವಾಡ, -

೨೧ ಸುಮಿತ್ರಾಬಾಯಿ ಬಿ.ಎನ್. ಮತ್ತು ಗಾಯತ್ರಿ ಎನ್. - ಸ್ತ್ರೀವಾದಿ, ಪ್ರವೇಶಿಕೆ ಕ.ಲೇ.ಸಂ., ೧೯೯೫

೨೨ ಹರಿಹರ ಪ್ರಿಯ - ಪರ್ಯಾಯ ಸಂಸ್ಕೃತಿ, ಪುಸ್ತಕ ಮನೆ ಬೆಂಗಳೂರು, ೧೯೯೩

೨೩ ಹರಿಹರಪ್ರಿಯ - ಪುನರ್ ಮೌಲ್ಯೀಕರಣ (ವಿಚಾರ, ವಿಮರ್ಶೆ ಸಂಕಲನ), ಪುಸ್ತಕ ಮನೆ ಬೆಂಗಳೂರು, ೧೯೯೮

ಪತ್ರಿಕೆಗಳು

೧ ಅಂಕಣ, ಮಾರ್ಚ್ ೧೯೮೧

೨ ಅಂಕಣ, ಮಾರ್ಚ್ ೧೯೮೫

೩ ಉದಯಭಾರತ, ಏಪ್ರಿಲ್ ೧೯೨೭

೪ ಕನ್ನಡ ಕೋಗಿಲೆ, ಆಗಸ್ಟ್ ೧೯೧೭

೪ ತರಂಗ, ಮೇ ೨೦, ೧೯೮೪

೫ ತರಂಗ, ಡಿ. ೯ ೧೯೮೪

೬ ಪ್ರಜಾವಾಣಿ ಡಿ.೧೭ ೨೦೦೦

೭ ಪ್ರಜಾವಾಣಿ, ಜುಲೈ ೨೨, ೨೦೦೧

೮ ಪ್ರಜಾವಾಣಿ ಅ. ೧೨ ೨೦೦೧

೯ ರುಜುವಾತು, ೨೪, ಅಕ್ಟೋಬರ್ - ಡಿಸೆಂಬರ್ ೧೯೮೬

೧೦ ಶೂದ್ರ ೯-೧೦, ಜೂನ್ - ಜುಲೈ - ೧೯೮೬

೧೧ ಶೂದ್ರ ೧, ನವೆಂಬರ್ ೧೯೯೦, ೧೭

೧೨ ಶೂದ್ರ ೨, ನವೆಂಬರ್ ೧೯೮೫, ೧೧

೧೩ ಸಂಕ್ರಮಣ, ೨೦, ಡಿಸೆಂಬರ್ ೮೪ / ಜ. ೮೫, ೭ - ೮

೧೪ ಸ್ವದೇಶಾಭಿಮಾನಿ, ಮೇ ೧೯೦೭

೧೫ ಸ್ವದೇಶಾಭಿಮಾನಿ, ಜೂನ್ ೧೯೦೯

೧೬ ಸ್ವದೇಶಾಭಿಮಾನಿ, ಜುಲೈ ೧೯೦೯

೧೭ ಸ್ವದೇಶಾಭಿಮಾನಿ, ಆಗಸ್ಟ್ ೧೯೦೯

೧೮ ಸ್ವದೇಶಾಭಿಮಾನಿ, ಜುಲೈ ೧೯೧೦